KPSC Vaani

# ಪ್ರತಿ ದಿನದ ಸ್ಪರ್ಧಾತ್ಮಕ ಮಾಹಿತಿಗಾಗಿ ಕೂಡಲೇ KPSC VAANI APP ಡೌನ್ಲೋಡ್ ಮಾಡಿಕೊಳ್ಳಿ



**ರಿಯಾಯಿತಿ ದರದಲ್ಲಿ ಸ್ಪರ್ಧಾತ್ಮಕ ಪುಸ್ತಕಗಳನ್ನು ಖರೀದಿಸಲು ಖರೀದಿಸಲು ಇಲ್ಲಿ ಕ್ಲಿಕ್ ಮಾಡಿ**

**ಪ್ರತಿದಿನದ ಉದ್ಯೋಗ ಮಾಹಿತಿ, ಪ್ರಚಲಿತ ಘಟನೆಗಳು, ಪ್ರಶ್ನೆ ಪತ್ರಿಕೆಗಳು, ಕಟ್ ಆಫ್ ಅಂಕಗಳು, Daily Quiz ಸೇರಿ ಹತ್ತು ಹಲವು ಸ್ಪರ್ಧಾತ್ಮಕ ಮಾಹಿತಿಗಳು ಒಂದೇ ವೇದಿಕೆಯಲ್ಲಿ ನಿಮಗಾಗಿ**

**ನಮ್ಮ ಗುಂಪುಗಳನ್ನು ಸೇರಿಕೊಳ್ಳಿ**

Click here To Join

To Download Our App

Follow Us on Facebook

Follow Us on Instagram

Scan QR Code To Download KPSC Vaani App

## 01 June 2026

### ಮೇ-31: ವಿಶ್ವ ತಂಬಾಕು ನಿಷೇಧ ದಿನ




➤ ಪ್ರತಿ ವರ್ಷ ಮೇ 31ರಂದು ಜಗತ್ತಿನಾದ್ಯಂತ 'ವಿಶ್ವ ತಂಬಾಕು ನಿಷೇಧ ದಿನ' (World No Tobacco Day) ವನ್ನು ಆಚರಿಸಲಾಗುತ್ತದೆ. ತಂಬಾಕು ಸೇವನೆಯಿಂದ ಮಾನವನ ಆರೋಗ್ಯದ ಮೇಲೆ ಉಂಟಾಗುವ ಭೀಕರ ದುಷ್ಪರಿಣಾಮಗಳು, ಮಾರಕ ರೋಗಗಳು ಮತ್ತು ಸಾವು-ನೋವುಗಳ ಬಗ್ಗೆ ಸಾರ್ವಜನಿಕರಲ್ಲಿ ವ್ಯಾಪಕ ಜಾಗೃತಿ ಮೂಡಿಸುವುದು ಈ ದಿನದ ಮುಖ್ಯ ಉದ್ದೇಶವಾಗಿದೆ.

**➤ ಈ ವರ್ಷದ ಧ್ಯೇಯವಾಕ್ಯ (Theme): "ಆಕರ್ಷಣೆಯ ಮುಖವಾಡ ಕಳಚುವುದು: ನಿಕೋಟಿನ್ ಮತ್ತು ತಂಬಾಕು ವ್ಯಸನವನ್ನು ವಿರೋಧಿಸುವುದು"**

➤ ತಂಬಾಕು ಸೇವನೆಯಿಂದ ಉಂಟಾಗುವ ರೋಗ ಮತ್ತು ಸಾವು-ನೋವುಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ನಿಟ್ಟಿನಲ್ಲಿ ವಿಶ್ವ ಆರೋಗ್ಯ ಸಂಸ್ಥೆಯು (WHO) 1987ರಲ್ಲಿ ಈ ನಿರ್ಣಯವನ್ನು ಅಂಗೀಕರಿಸಿತು. ಜಗತ್ತಿನಾದ್ಯಂತ ಜನರು ಕನಿಷ್ಠ 24 ಗಂಟೆಗಳ ಕಾಲ ತಂಬಾಕು ಉತ್ಪನ್ನಗಳನ್ನು ಬಳಸದೆ ಇರಲು ಪ್ರೇರೇಪಿಸುವುದು ಇದರ ಆರಂಭಿಕ ಉದ್ದೇಶವಾಗಿತ್ತು. ಅಂದಿನಿಂದ ಪ್ರತಿ ವರ್ಷ ಮೇ 31 ಅನ್ನು ಅಧಿಕೃತವಾಗಿ ವಿಶ್ವ ತಂಬಾಕು ನಿಷೇಧ ದಿನವಾಗಿ ಆಚರಿಸಿಕೊಂಡು ಬರಲಾಗುತ್ತಿದೆ.

**➤ ಜಾಗತಿಕ ತಂಬಾಕು ಸೇವನೆ ದತ್ತಾಂಶ:**

- ವಾರ್ಷಿಕ ಸಾವುಗಳು: ತಂಬಾಕು ಬಳಕೆಯಿಂದ ಜಗತ್ತಿನಾದ್ಯಂತ ಪ್ರತಿ ವರ್ಷ ಸುಮಾರು 80 ಲಕ್ಷಕ್ಕೂ ಹೆಚ್ಚು (8 Million) ಜನರು ಜೀವ ಕಳೆದುಕೊಳ್ಳುತ್ತಿದ್ದಾರೆ.
- ಮಕ್ಕಳಲ್ಲಿ ಬಳಕೆ: ಜಾಗತಿಕವಾಗಿ 13 ರಿಂದ 15 ವರ್ಷ ವಯಸ್ಸಿನ ಸುಮಾರು 4 ಕೋಟಿ (40 Million) ಹದಿಹರೆಯದ ಮಕ್ಕಳು ತಂಬಾಕು ಉತ್ಪನ್ನಗಳನ್ನು ಬಳಸುತ್ತಿದ್ದಾರೆ.
- ಇ-ಸಿಗರೇಟ್ (E-Cigarette) ಆತಂಕ: ಆಧುನಿಕ ಜಗತ್ತಿನಲ್ಲಿ ಹದಿಹರೆಯದವರು ವಯಸ್ಕರಿಗಿಂತ 9 ಪಟ್ಟು ಹೆಚ್ಚು ಇ-ಸಿಗರೇಟ್ ಅಥವಾ ವೇಪಿಂಗ್ (Vaping) ಜಾಲಕ್ಕೆ ಸಿಲುಕುತ್ತಿದ್ದಾರೆ. ಇದು ಯುವ ಪೀಳಿಗೆಯನ್ನು ನಿಕೋಟಿನ್ ವ್ಯಸನಕ್ಕೆ ತಳ್ಳುತ್ತಿದೆ.
- ನಮ್ಮ ದೇಶದಲ್ಲಿ ತಂಬಾಕು ಸ್ಥಿತಿ: ಜಾಗತಿಕವಾಗಿ ಭಾರತವು ತಂಬಾಕಿನ ಎರಡನೇ ಅತಿ ದೊಡ್ಡ ಉತ್ಪಾದಕ ಮತ್ತು ಬಳಕೆದಾರ ದೇಶವಾಗಿದೆ. ಭಾರತದ ಒಟ್ಟು ಜನಸಂಖ್ಯೆಯ ಸುಮಾರು 28.6% ರಷ್ಟು (ಸುಮಾರು 267 ಮಿಲಿಯನ್) ಜನರು ಯಾವುದಾದರೂ ಒಂದು ರೂಪದಲ್ಲಿ ತಂಬಾಕನ್ನು ನಿಯಮಿತವಾಗಿ ಬಳಸುತ್ತಿದ್ದಾರೆ.

**➤ ಆರೋಗ್ಯದ ಮೇಲಾಗುವ ಭೀಕರ ದುಷ್ಪರಿಣಾಮಗಳು:**

- **ಕ್ಯಾನ್ಸರ್ ಕಾರಕ:** ಶ್ವಾಸಕೋಶ, ಬಾಯಿ, ಧ್ವನಿಪೆಟ್ಟಿಗೆ (Larynx), ಅನ್ನನಾಳ, ಹೊಟ್ಟೆ, ಮೂತ್ರಪಿಂಡ, ಮೇದೋಜೀರಕ ಗ್ರಂಥಿ (Pancreas), ಮತ್ತು ಸ್ತನ ಕ್ಯಾನ್ಸರ್‌ಗಳಿಗೆ ತಂಬಾಕು ನೇರ ಕಾರಣವಾಗಿದೆ.
- **ಹೃದ್ರೋಗಗಳು:** ರಕ್ತನಾಳಗಳು ಕಿರಿದಾಗುವುದರಿಂದ ಹೃದಯಾಘಾತ (Heart Attack) ಮತ್ತು ಪಾರ್ಶ್ವವಾಯು (Stroke) ಸಂಭವಿಸುವ ಸಾಧ್ಯತೆ ಬಹುವಾಗಿ ಹೆಚ್ಚುತ್ತದೆ.
- **ಶ್ವಾಸಕೋಶದ ಕಾಯಿಲೆಗಳು:** ಬ್ರಾಂಕೈಟಿಸ್ (ಶ್ವಾಸನಾಳಗಳ ಒಳಪೊರೆಯ ಉರಿಯೂತ) ಮತ್ತು ಎಂಫಿಸೆಮಾ (ಶ್ವಾಸಕೋಶದ ವಾಯುಕೋಶಗಳ ಊತ) ದಂತಹ ದೀರ್ಘಕಾಲದ ಶ್ವಾಸಕೋಶದ ಅಡಚಣೆಗಳು (COPD) ಕಾಣಿಸಿಕೊಳ್ಳುತ್ತವೆ.
- **ನೆನಪಿನ ಶಕ್ತಿ ಕುಂದುವಿಕೆ:** ದೀರ್ಘಕಾಲದ ಧೂಮಪಾನವು ಮಿದುಳಿನ ಕಾರ್ಯಕ್ಷಮತೆಯನ್ನು ಕುಗ್ಗಿಸಿ ಅಲ್ಝೈಮರ್ಸ್ ಅಥವಾ ನೆನಪಿನ ಶಕ್ತಿ ನಷ್ಟಕ್ಕೆ ದಾರಿ ಮಾಡಿಕೊಡುತ್ತದೆ.
- **ಗರ್ಭಿಣಿಯರ ಮೇಲೆ ಪರಿಣಾಮ:** ಗರ್ಭಾವಸ್ಥೆಯಲ್ಲಿ ತಂಬಾಕು ಸೇವನೆ ಅಥವಾ ಪರೋಕ್ಷ ಧೂಮಪಾನಕ್ಕೆ (Passive Smoking) ಒಡ್ಡಿಕೊಳ್ಳುವುದರಿಂದ ಕಡಿಮೆ ತೂಕದ ಶಿಶು ಜನಿಸುವ ಸಾಧ್ಯತೆ ಇರುತ್ತದೆ.

➤ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನವನ್ನು ಸಂಪೂರ್ಣವಾಗಿ ನಿಷೇಧಿಸುವ ಮತ್ತು ತಂಬಾಕು ನಿಯಂತ್ರಣಕ್ಕೆ ಕಟ್ಟುನಿಟ್ಟಿನ ದಿಟ್ಟ ಹೆಜ್ಜೆ ಇಟ್ಟ ಜಗತ್ತಿನ ಮೊದಲ ರಾಷ್ಟ್ರ ಐರ್ಲೆಂಡ್ (Ireland). ಅಲ್ಲದೆ, ತಂಬಾಕು ಜಾಹೀರಾತುಗಳನ್ನು ನಿಷೇಧಿಸಿದ ಮೊದಲ ಯುರೋಪಿಯನ್ ದೇಶ ಎಂಬ ಹೆಗ್ಗಳಿಕೆಗೂ ಇದು ಪಾತ್ರವಾಗಿದೆ.

➤ ಭಾರತ ಸರ್ಕಾರವು 2003 ರಲ್ಲಿ COTPA (Cigarettes and Other Tobacco Products Act) ಕಾಯ್ದೆಯನ್ನು ಜಾರಿಗೆ ತಂದಿದೆ. ಇದರ ಅಡಿಯಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡುವುದು ಮತ್ತು ಅಪ್ರಾಪ್ತ ವಯಸ್ಕರಿಗೆ ತಂಬಾಕು ಮಾರಾಟ ಮಾಡುವುದು ಕಾನೂನುಬಾಹಿರವಾಗಿದೆ.

### ಜೂನ್-1 : ವಿಶ್ವ ಕ್ಷೀರ ದಿನ




➤ ವಿಶ್ವ ಕ್ಷೀರ ದಿನ (World Milk Day) ಪ್ರತಿ ವರ್ಷ ಜೂನ್ 1 ರಂದು ಜಗತ್ತಿನಾದ್ಯಂತ ಅತ್ಯಂತ ಮಹತ್ವದ ದಿನವಾಗಿ ಆಚರಿಸಲಾಗುತ್ತದೆ. ಹಾಲನ್ನು ಸಕಲ ರೋಗರುಜಿನಗಳಿಗೆ ರಾಮಬಾಣ ಹಾಗೂ ಸಂಪೂರ್ಣ ಆಹಾರ ಎಂದು ಕರೆಯಲಾಗುತ್ತದೆ. ಹಾಲಿನ ಮಹತ್ವ, ಪೋಷಕಾಂಶಗಳು ಹಾಗೂ ಹೈನುಗಾರಿಕೆ ಉದ್ಯಮವನ್ನು ಉತ್ತೇಜಿಸುವ ಉದ್ದೇಶದಿಂದ ಈ ದಿನವನ್ನು ಆಚರಿಸಿಕೊಂಡು ಬರಲಾಗುತ್ತಿದೆ.

➤ ಜಾಗತಿಕ ಮಟ್ಟದಲ್ಲಿ ಹಾಲನ್ನು ಒಂದು ಪ್ರಮುಖ ಜಾಗತಿಕ ಆಹಾರವಾಗಿ (Global Food) ಗುರುತಿಸಲು ಮತ್ತು ಡೈರಿ ವಲಯವನ್ನು ಉತ್ತೇಜಿಸಲು ವಿಶ್ವ ಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆ (FAO - Food and Agriculture Organization) 2001ರಲ್ಲಿ ವಿಶ್ವ ಕ್ಷೀರ ದಿನಾಚರಣೆಯನ್ನು ಜಾರಿಗೆ ತಂದಿತು. ಅಂದಿನಿಂದ ಪ್ರತಿವರ್ಷ ಜೂನ್ 1ರಂದು ಇದನ್ನು ಆಚರಿಸಲಾಗುತ್ತಿದೆ.

➤ ಭಾರತದಲ್ಲಿ ಕ್ಷೀರ ದಿನ: ರಾಷ್ಟ್ರೀಯ ಕ್ಷೀರ ದಿನ: ಜಾಗತಿಕವಾಗಿ ಜೂನ್ 1ರಂದು ವಿಶ್ವ ಕ್ಷೀರ ದಿನ ಆಚರಿಸಿದರೆ, ಭಾರತದಲ್ಲಿ ಪ್ರತಿ ವರ್ಷ ನವೆಂಬರ್ 26 ರಂದು ರಾಷ್ಟ್ರೀಯ ಕ್ಷೀರ ದಿನವನ್ನು ಆಚರಿಸಲಾಗುತ್ತದೆ. ಭಾರತದ ಶ್ವೇತ ಕ್ರಾಂತಿಯ ಪಿತಾಮಹ (Father of White Revolution) ಎಂದೇ ಪ್ರಖ್ಯಾತರಾದ ಡಾ. ವರ್ಗೀಸ್ ಕುರಿಯನ್ ಅವರ ಜನ್ಮದಿನದ ಸರಣಿ ನೆನಪಿಗಾಗಿ 2014ರಲ್ಲಿ ಭಾರತೀಯ ಡೇರಿ ಸಂಘಟನೆಯು (IDA) ಈ ದಿನವನ್ನು ರಾಷ್ಟ್ರೀಯ ಕ್ಷೀರ ದಿನವನ್ನಾಗಿ ಆಚರಿಸಲು ನಿರ್ಧರಿಸಿತು.

➤ ಭಾರತವನ್ನು ವಿಶ್ವದಲ್ಲೇ ಅತಿ ಹೆಚ್ಚು ಹಾಲು ಉತ್ಪಾದಿಸುವ ದೇಶವನ್ನಾಗಿ ಮಾಡುವಲ್ಲಿ ಡಾ. ವರ್ಗೀಸ್ ಕುರಿಯನ್ ಅವರ ಪಾತ್ರ ಅನನ್ಯವಾದುದು.

ಆಪರೇಷನ್ ಫ್ಲಡ್: 1970ರ ಜನವರಿ 13ರಂದು ಪ್ರಾರಂಭವಾದ 'ಆಪರೇಷನ್ ಫ್ಲಡ್' ವಿಶ್ವದ ಅತಿ ದೊಡ್ಡ ಕೃಷಿ ಮತ್ತು ಡೈರಿ ಅಭಿವೃದ್ಧಿ ಕಾರ್ಯಕ್ರಮವಾಗಿದೆ.

ಅಮುಲ್ (Amul) ಬ್ರ್ಯಾಂಡ್: ಡಾ. ಕುರಿಯನ್ ಅವರ ನೇತೃತ್ವದಲ್ಲಿ ಗುಜರಾತ್‌ನ ಆನಂದ್‌ನಲ್ಲಿ ಸಹಕಾರಿ ಮಾದರಿಯಡಿ 'ಅಮುಲ್' ಸಂಸ್ಥೆ ಜನ್ಮತಾಳಿತು. ಇದು ಕೋಟ್ಯಂತರ ಗ್ರಾಮೀಣ ರೈತರ ಬದುಕನ್ನು ಬದಲಾಯಿಸಿತು.

ಐತಿಹಾಸಿಕ ಮೈಲಿಗಲ್ಲು: ಭಾರತವು ಮೊದಲ ಬಾರಿಗೆ 1998ರಲ್ಲಿ ಅಮೆರಿಕವನ್ನು ಹಿಂದಿಕ್ಕಿ ವಿಶ್ವದ ನಂಬರ್ 1 ಹಾಲು ಉತ್ಪಾದಕ ರಾಷ್ಟ್ರವಾಗಿ ಹೊರಹೊಮ್ಮಿತು.

**➤ ಹಾಲಿನ ಮಹತ್ವ ಮತ್ತು ಪೋಷಕಾಂಶಗಳ ಗುಣಗಳು:**

ಕ್ಯಾಲ್ಸಿಯಂ ಮತ್ತು ಫಾಸ್ಫರಸ್: ಮೂಳೆಗಳು ಮತ್ತು ಹಲ್ಲುಗಳ ಬಲವರ್ಧನೆಗೆ ಸಹಕಾರಿ.

ವಿಟಮಿನ್ ಡಿ (Vitamin D): ಮೂಳೆಗಳ ಬೆಳವಣಿಗೆ ಮತ್ತು ರೋಗನಿರೋಧಕ ಶಕ್ತಿ ಹೆಚ್ಚಿಸಲು ಅಗತ್ಯ.

ವಿಟಮಿನ್ ಬಿ12 (Vitamin B12): ನರಗಳ ಆರೋಗ್ಯ ಮತ್ತು ರಕ್ತ ಕಣಗಳ ಉತ್ಪಾದನೆಗೆ ಅತ್ಯಾವಶ್ಯಕ.
ವಿಟಮಿನ್ ಎ (Vitamin A): ಕಣ್ಣಿನ ದೃಷ್ಟಿ ಮತ್ತು ರೋಗ ನಿರೋಧಕ ಶಕ್ತಿಯನ್ನು ಉತ್ತಮಗೊಳಿಸುತ್ತದೆ.
ರೈಬೋಫ್ಲಾವಿನ್ (Vitamin B2): ಸೇವಿಸಿದ ಆಹಾರವನ್ನು ಶಕ್ತಿಯನ್ನಾಗಿ ಪರಿವರ್ತಿಸಲು ಸಹಾಯ ಮಾಡುತ್ತದೆ.
ನಿಯಾಸಿನ್ನೇ: ಹದಲ್ಲಿ ಸಕ್ಕರೆ ಮತ್ತು ಕೊಬ್ಬಿನ ಜೀರ್ಣಕ್ರಿಯೆಗೆ ನೆರವಾಗುತ್ತದೆ.
ಪೊಟಾಷಿಯಂ: ರಕ್ತದೊತ್ತಡವನ್ನು (Blood Pressure) ಸಮತೋಲನದಲ್ಲಿಡಲು ಸಹಕಾರಿ.

## ಕರ್ನಾಟಕದ 25ನೇ ಸಿಎಂ ಆಗಿ ಡಿ.ಕೆ.ಶಿವಕುಮಾರ್ ಆಯ್ಕೆ: ಜೂನ್ 3ಕ್ಕೆ ಪದಗ್ರಹಣ



➤ ಕರ್ನಾಟಕ ರಾಜಕೀಯದಲ್ಲಿ ಭಾರಿ ಕುತೂಹಲ ಮೂಡಿಸಿದ್ದ ನಾಯಕತ್ವದ ಆಯ್ಕೆಗೆ ಕೊನೆಗೂ ತೆರೆ ಬಿದ್ದಿದೆ. ಕೆಪಿಸಿಸಿ ಅಧ್ಯಕ್ಷ ಹಾಗೂ ಹಿರಿಯ ನಾಯಕ ಡಿ.ಕೆ. ಶಿವಕುಮಾರ್ (D.K. Shivakumar) ಅವರು ಕರ್ನಾಟಕದ ನೂತನ ನಿಯೋಜಿತ ಮುಖ್ಯಮಂತ್ರಿಯಾಗಿ ಒಮ್ಮತದಿಂದ ಆಯ್ಕೆಯಾಗಿದ್ದಾರೆ. ಜೂನ್ 3ರಂದು ನಡೆಯಲಿರುವ ಭವ್ಯ ಸಮಾರಂಭದಲ್ಲಿ ಅವರು ರಾಜ್ಯದ ನೂತನ ಸಿಎಂ ಆಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ.

➤ **ಜೂನ್ 3ರಂದು ಪದಗ್ರಹಣ ಸಮಾರಂಭ:** ವಿಧಾನಸೌಧದಲ್ಲಿ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ (CLP) ಮಹತ್ವದ ಸಭೆಯಲ್ಲಿ ಡಿ.ಕೆ. ಶಿವಕುಮಾರ್ ಅವರನ್ನು ಶಾಸಕಾಂಗ ಪಕ್ಷದ ನಾಯಕರನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಜೂನ್ 3ರ ಬುಧವಾರದಂದು ಅಧಿಕಾರ ಸ್ವೀಕಾರ ಕಾರ್ಯಕ್ರಮ ನಡೆಯಲಿದೆ. ಆರಂಭದಲ್ಲಿ ಲೋಕಭವನ ಅಥವಾ ಮುಕ್ತ ಮೈದಾನದಲ್ಲಿ ಕಾರ್ಯಕ್ರಮ ನಡೆಸಲು ಚರ್ಚಿಸಲಾಗಿದ್ದರೂ, ಸದ್ಯದ ಇಂಧನ ಬಿಕ್ಕಟ್ಟು ಹಾಗೂ ರಾಜಧಾನಿ ಬೆಂಗಳೂರಿನ ಭೀಕರ ಟ್ರಾಫಿಕ್ ಸಮಸ್ಯೆಯನ್ನು ನಿಯಂತ್ರಿಸುವ ಸಲುವಾಗಿ ಬೃಹತ್ ಸಾರ್ವಜನಿಕ ಸಮಾರಂಭದ ಯೋಜನೆಯನ್ನು ಕೈಬಿಡಲಾಗಿದೆ. ಅಂತಿಮವಾಗಿ ರಾಜಭವನದ ಗ್ಲಾಸ್ ಹೌಸ್‌ನಲ್ಲಿ ಸರಳ ಹಾಗೂ ಗಂಭೀರವಾಗಿ ಪ್ರಮಾಣವಚನ ಕಾರ್ಯಕ್ರಮ ಆಯೋಜಿಸಲು ತೀರ್ಮಾನಿಸಲಾಗಿದೆ ಎಂದು ರಾಜ್ಯಸಭಾ ಸದಸ್ಯ ಜಿ.ಸಿ. ಚಂದ್ರಶೇಖರ್ ಪ್ರಕಟಿಸಿದ್ದಾರೆ.
ಗಣ್ಯರ ಉಪಸ್ಥಿತಿ: ಈ ಐತಿಹಾಸಿಕ ಕ್ಷಣಕ್ಕೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಹಿರಿಯ ಪದಾಧಿಕಾರಿಗಳು ಹಾಗೂ ಕಾಂಗ್ರೆಸ್ ಆಡಳಿತವಿರುವ ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳು ಸಾಕ್ಷಿಯಾಗಲಿದ್ದಾರೆ.

➤ **ರಾಜ್ಯದ 25ನೇ ಮುಖ್ಯಮಂತ್ರಿ:** ಡಿ.ಕೆ. ಶಿವಕುಮಾರ್ ರಾಜಕೀಯ ನಡೆ: ದೊಡ್ಡಾಲಹಳ್ಳಿ ಕೆಂಪೇಗೌಡ ಶಿವಕುಮಾರ್ (ಡಿ.ಕೆ.ಶಿವಕುಮಾರ್) ಅವರು ಕರ್ನಾಟಕದ 25ನೇ ಮುಖ್ಯಮಂತ್ರಿಯಾಗಿ ಇತಿಹಾಸದ ಪುಟ ಸೇರಲಿದ್ದಾರೆ. ರಾಜಕೀಯದಲ್ಲಿ "ಸೋಲಿಲ್ಲದ ಸರದಾರ" ಎಂದೇ ಖ್ಯಾತರಾಗಿರುವ ಡಿ.ಕೆ. ಶಿವಕುಮಾರ್ ಅವರ ರಾಜಕೀಯ ಜೀವನದ ಪ್ರಮುಖ ಮೈಲಿಗಲ್ಲುಗಳು ಇಲ್ಲಿವೆ:
ಆರಂಭಿಕ ದಿನಗಳು: ಕೇವಲ 18ನೇ ವಯಸ್ಸಿನಲ್ಲಿ ಎನ್‌ಎಸ್‌ಯುಐ (NSUI) ವಿದ್ಯಾರ್ಥಿ ಸಂಘಟನೆಯ ಮೂಲಕ ರಾಜಕೀಯ ಪ್ರವೇಶ.
ಸೋಲಿಲ್ಲದ ಸರದಾರ: 1989 ರಿಂದ ಇಂದಿನವರೆಗೆ ಸತತವಾಗಿ 8 ಬಾರಿ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಆರಂಭದಲ್ಲಿ ಸಾತನೂರು ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದ ಅವರು, ಕ್ಷೇತ್ರ ಮರುವಿಂಗಡಣೆಯ ನಂತರ ಕನಕಪುರ ಕ್ಷೇತ್ರದ ಶಾಸಕರಾಗಿದ್ದಾರೆ.
ಚಿಕ್ಕ ವಯಸ್ಸಿನಲ್ಲೇ ಸಚಿವ ಸ್ಥಾನ: 1991ರಲ್ಲಿ ಕೇವಲ 30ನೇ ವಯಸ್ಸಿಗೆ ಬಂಗಾರಪ್ಪ ಸಂಪುಟದಲ್ಲಿ ಸಚಿವರಾಗಿ ಆಯ್ಕೆಯಾದ ಹೆಗ್ಗಳಿಕೆ ಇವರದ್ದು.
ನಿಭಾಯಿಸಿದ ಪ್ರಮುಖ ಖಾತೆಗಳು: ಕಾರಾಗೃಹ, ನಗರಾಭಿವೃದ್ಧಿ, ಇಂಧನ, ನೀರಾವರಿ ಹಾಗೂ ವೈದ್ಯಕೀಯ ಶಿಕ್ಷಣ ಸೇರಿದಂತೆ ರಾಜ್ಯದ ಅತ್ಯಂತ ಪ್ರಭಾವಿ ಇಲಾಖೆಗಳನ್ನು ಯಶಸ್ವಿಯಾಗಿ ಮುನ್ನಡೆಸಿದ್ದಾರೆ.
ಸಂಘಟನಾ ಚತುರ: 2018-19ರ ಜೆಡಿಎಸ್-ಕಾಂಗ್ರೆಸ್ ಮೈತ್ರಿ ಸರ್ಕಾರದಲ್ಲಿ ಉಪಮುಖ್ಯಮಂತ್ರಿಯಾಗಿ (DCM) ಕೆಲಸ ಮಾಡಿದ್ದ ಅವರು, ಪ್ರಸ್ತುತ ಕೆಪಿಸಿಸಿ (KPCC) ಅಧ್ಯಕ್ಷರಾಗಿ ಪಕ್ಷವನ್ನು ತಳಮಟ್ಟದಿಂದ ಸಂಘಟಿಸಿ ಅಧಿಕಾರದ ಚುಕ್ಕಾಣಿ ಹಿಡಿಯುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

## ಆಪರೇಷನ್ ಸಿಂದೂರ 2.0ಗೆ ಭಾರತೀಯ ಸೇನೆ ಸಜ್ಜು: ಭೂಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಮಹತ್ವದ ಹೇಳಿಕೆ




➤ ಭಾರತೀಯ ರಕ್ಷಣಾ ವಲಯದಲ್ಲಿ ಹಾಗೂ ಪ್ರಚಲಿತ ವಿದ್ಯಮಾನಗಳಲ್ಲಿ ಪ್ರಸ್ತುತ ಭಾರಿ ಸದ್ದು ಮಾಡುತ್ತಿರುವ ವಿಷಯವೆಂದರೆ 'ಆಪರೇಷನ್ ಸಿಂದೂರ 2.0' (Operation Sindhoor 2.0). ಗಡಿಯಲ್ಲಿ ಸದ್ಯಕ್ಕೆ ಸಂಘರ್ಷಗಳು ತಾತ್ಕಾಲಿಕವಾಗಿ ಶಾಂತವಾಗಿದ್ದರೂ, ಭಾರತೀಯ ರಕ್ಷಣಾ ಪಡೆಗಳು ಯಾವುದೇ ಪರಿಸ್ಥಿತಿಯನ್ನು ಎದುರಿಸಲು ಸಂಪೂರ್ಣ ಸನ್ನದ್ಧವಾಗಿವೆ ಎಂದು ಭೂಸೇನಾ ಮುಖ್ಯಸ್ಥರಾದ ಜನರ್ ಉಪೇಂದ್ರ ದ್ವಿವೇದಿ (General Upendra Dwivedi) ತಿಳಿಸಿದ್ದಾರೆ.

➤ ಪುಣೆಯ ಪ್ರಸಿದ್ಧ ರಾಷ್ಟ್ರೀಯ ರಕ್ಷಣಾ ಅಕಾಡೆಮಿಯ (NDA) 150ನೇ ಬ್ಯಾಚ್‌ನ ಪಾಸಿಂಗ್ ಔಟ್ ಪರೇಡ್‌ನಲ್ಲಿ ಭಾಗವಹಿಸಿದ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ದೇಶದ ಭದ್ರತ ಹಾಗೂ ಭವಿಷ್ಯದ ಯುದ್ಧತಂತ್ರಗಳ ಕುರಿತು ಮಹತ್ವದ ವಿಚಾರಗಳನ್ನು ಹಂಚಿಕೊಂಡಿದ್ದಾರೆ.

➤ ಆಪರೇಷನ್ ಸಿಂದೂರ 2.0: ಗಡಿಯಲ್ಲಿ ದೇಶದ ಸಾರ್ವಭೌಮತ್ವವನ್ನು ಎತ್ತಿಹಿಡಿಯಲು ಮತ್ತು ಶತ್ರು ರಾಷ್ಟ್ರಗಳ ಆಕ್ರಮಣಕಾರಿ ನೀತಿಗೆ ತಕ್ಕ ಪ್ರತ್ಯುತ್ತರ ನೀಡಲು ಭಾರತೀಯ ರಕ್ಷಣಾ ಪಡೆಗಳು ಕೈಗೊಂಡಿರುವ ಕಾರ್ಯತಂತ್ರವೇ 'ಆಪರೇಷನ್ ಸಿಂದೂರ್'. ಪ್ರಸ್ತುತ ಗಡಿ ಪರಿಸ್ಥಿತಿ ನಿಯಂತ್ರಣದಲ್ಲಿದ್ದರೂ ಈ ಕಾರ್ಯಾಚರಣೆ ನಿರಂತರವಾಗಿ ಸಾಗುತ್ತಿದೆ. ಒಂದೊಮ್ಮೆ ಗಡಿಯಲ್ಲಿ ತುರ್ತು ಪರಿಸ್ಥಿತಿ ಅಥವಾ ಸಂಘರ್ಷ ತಲೆದೋರಿದರೆ, ತಕ್ಷಣವೇ 'ಆಪರೇಷನ್ ಸಿಂದೂರ 2.0' ಜಾರಿಗೊಳಿಸಲು ಭಾರತೀಯ ರಕ್ಷಣಾ ಪಡೆಯ ಮೂರೂ ವಿಭಾಗಗಳು (ಭೂಸೇನೆ, ವಾಯುಸೇನೆ ಮತ್ತು ನೌಕಾಸೇನೆ) ಜಂಟಿಯಾಗಿ ಕಾರ್ಯಪ್ರವೃತ್ತವಾಗಿವೆ.

➤ ಜಂಟಿ ಸಹಯೋಗ ಮತ್ತು ಮುಂದಿನ ಪೀಳಿಗೆಯ ಯುದ್ಧತಂತ್ರಪ್ರಸ್ತುತ ಭಾರತೀಯ ರಕ್ಷಣಾ ಪಡೆಗಳು ಕೇವಲ ಸಾಂಪ್ರದಾಯಿಕ ಯುದ್ಧ ಮುನ್ನೆಚ್ಚರಿಕೆ ವಹಿಸುತ್ತಿಲ್ಲ. ಬದಲಿಗೆ:
- ತ್ರಿಸೇವೆಗಳ ಸಮನ್ವಯ: ಮೂರೂ ಪಡೆಗಳ ನಡುವೆ ಪರಸ್ಪರ ಸಹಯೋಗವನ್ನು (Jointness) ಗರಿಷ್ಠ ಮಟ್ಟಕ್ಕೆ ಹೆಚ್ಚಿಸಲಾಗುತ್ತಿದೆ.
- ತಂತ್ರಜ್ಞಾನಕ್ಕೆ ಆದ್ಯತೆ: ಮುಂದಿನ ಪೀಳಿಗೆಯ ಯುದ್ಧತಂತ್ರಗಳಿಗೆ (Next-Generation Warfare) ಸೈನಿಕರನ್ನು ಸಜ್ಜುಗೊಳಿಸಲಾಗುತ್ತಿದೆ.

➤ **ಭವಿಷ್ಯದ ಯುದ್ಧಭೂಮಿ: ಕೇವಲ ಜಲ, ಜಮೀನು, ಆಕಾಶಕ್ಕಷ್ಟೇ ಸೀಮಿತವಲ್ಲ!**
ಭೂಸೇನಾ ಮುಖ್ಯಸ್ಥರ ಪ್ರಕಾರ, ಮುಂಬರುವ ದಿನಗಳಲ್ಲಿ ಯುದ್ಧದ ಸ್ವರೂಪ ಸಂಪೂರ್ಣ ಬದಲಾಗಲಿದೆ. ಸಾಂಪ್ರದಾಯಿಕ ಯುದ್ಧಭೂಮಿಗಳಾದ ಭೂಮಿ, ಆಕಾಶ ಅಥವಾ ಸಮುದ್ರದಾಚೆಗೆ

ಹೊಸ ಮೂರು ವಲಯಗಳು ಅತ್ಯಂತ ಪ್ರಮುಖ ಪಾತ್ರ ವಹಿಸಲಿವೆ:

- ಬಾಹ್ಯಾಕಾಶ ಯುದ್ಧ (Space Warfare): ಉಪಗ್ರಹ ಆಧಾರಿತ ಕಣ್ಗಾವಲು ಮತ್ತು ಸಂವಹನ ನಿಯಂತ್ರಣ.
- ಸೈಬರ್ ಯುದ್ಧ (Cyber Warfare): ಶತ್ರು ರಾಷ್ಟ್ರಗಳ ಡಿಜಿಟಲ್ ಮೂಲಸೌಕರ್ಯ ಹಾಗೂ ರಕ್ಷಣಾ ವ್ಯವಸ್ಥೆಯನ್ನು ಹ್ಯಾಕ್ ಮಾಡುವುದು.
- ಕಾಗ್ನಿಟಿವ್ ಯುದ್ಧ (Cognitive Warfare): ಕಾಗ್ನಿಟಿವ್ ಅಂದರೆ ಜನರ ಮತ್ತು ಸೈನಿಕರ ಆಲೋಚನಾ ಲಹರಿಯನ್ನು ನಿಯಂತ್ರಿಸುವ ಅಥವಾ ದಿಕ್ಕು ತಪ್ಪಿಸುವ ಸೈಕಲಾಜಿಕಲ್ ಯುದ್ಧತಂತ್ರ.

➤ ಪಾರದರ್ಶಕ ಯುದ್ಧಭೂಮಿ (Transparent Battlefield): "ಇಂದಿನ ಆಧುನಿಕ ತಂತ್ರಜ್ಞಾನದ ಬೆಳವಣಿಗೆಯಿಂದಾಗಿ ಯುದ್ಧಭೂಮಿ ಸಂಪೂರ್ಣ ಪಾರದರ್ಶಕವಾಗಿದೆ. ನಮ್ಮ ಸೈನಿಕರ ಪ್ರತಿಯೊಂದು ಚಲನವಲನವೂ ವೈರಿಗಳಿಗೆ ತಕ್ಷಣವೇ ತಿಳಿಯುವ ಸಾಧ್ಯತೆ ಇರುತ್ತದೆ. ಹೀಗಾಗಿ, ಗಡಿಯಲ್ಲಿರುವ ಸೈನಿಕರು ಮತ್ತು ನಾಗರಿಕರ ರಕ್ಷಣೆಯ ವಿಷಯದಲ್ಲಿ ನಾವು ಅತ್ಯಂತ ಜಾಗರೂಕರಾಗಿರಬೇಕಾಗಿದೆ" ಎಂದು ಜನರಲ್ ಉಪೇಂದ್ರ ದ್ವಿವೇದಿ ಎಚ್ಚರಿಸಿದ್ದಾರೆ.

## ಪ್ರಗತಿ 2026: ಮೇಘಾಲಯದಲ್ಲಿ ಮುಕ್ತಾಯಗೊಂಡ 13 ದೇಶಗಳ ಬೃಹತ್ ಜಂಟಿ ಸೇನಾ ಕವಾಯತು




➤ ಹಿಂದೂ ಮಹಾಸಾಗರ ಪ್ರದೇಶದ (Indian Ocean Region - IOR) ದೇಶಗಳ ನಡುವೆ ಪರಸ್ಪರ ನಂಬಿಕೆ ಮೂಡಿಸುವ ಹಾಗೂ ಉಗ್ರಗಾಮಿ ಚಟುವಟಿಕೆಗಳನ್ನು ಜಂಟಿಯಾಗಿ ನಿಗ್ರಹಿಸುವ ಉದ್ದೇಶದಿಂದ ಮೇಘಾಲಯದ ಉಮ್ರೋಯ್ (Umroi) ಮಿಲಿಟರಿ ನಿಲ್ದಾಣದಲ್ಲಿ ಹಮ್ಮಿಕೊಳ್ಳಲಾಗಿದ್ದ 13 ದೇಶಗಳ ಮೊದಲ ಬಹುರಾಷ್ಟ್ರೀಯ ಜಂಟಿ ಸೇನಾ ಕವಾಯತು 'ಪ್ರಗತಿ 2026' (Exercise PRAGATI 2026) ಶನಿವಾರ (ಮೇ 30, 2026) ಯಶಸ್ವಿಯಾಗಿ ಮುಕ್ತಾಯಗೊಂಡಿದೆ. ಕಳೆದ ಎರಡು ವಾರಗಳಿಂದ (ಮೇ 20 ರಿಂದ ಮೇ 30) ನಡೆದ ಈ ಭಾರಿ ಗಾತ್ರದ ಮಿಲಿಟರಿ ಅಭ್ಯಾಸವು ಪ್ರಾದೇಶಿಕ ಭದ್ರತೆ ಮತ್ತು ರಕ್ಷಣಾ ಸಹಕಾರದ ದೃಷ್ಟಿಯಿಂದ ಹೊಸ ಇತಿಹಾಸ ಬರೆದಿದೆ.

➤ PRAGATI ಅಕ್ಷರಶಃ: Partnership of Regional Armies for Growth and Transformation in the Indian Ocean Region (ಹಿಂದೂ ಮಹಾಸಾಗರ ಪ್ರದೇಶದಲ್ಲಿ ಬೆಳವಣಿಗೆ ಮತ್ತು ರೂಪಾಂತರಕ್ಕಾಗಿ ಪ್ರಾದೇಶಿಕ ಸೇನೆಗಳ ಪಾಲುದಾರಿಕೆ).

➤ ಭಾಗವಹಿಸಿದ 13 ದೇಶಗಳು: ಈ ಮೊದಲ ಆವೃತ್ತಿಯ ಜಂಟಿ ಕವಾಯತಿನಲ್ಲಿ ಆತಿಥೇಯ ಭಾರತ ಸೇರಿದಂತೆ ಒಟ್ಟು 13 ಸ್ನೇಹಪರ ದೇಶಗಳ 400ಕ್ಕೂ ಹೆಚ್ಚು ಸೈನಿಕರು ಭಾಗವಹಿಸಿದ್ದರು.

**ಆ ದೇಶಗಳ ಪಟ್ಟಿ ಇಲ್ಲಿದೆ:**

ಭಾರತ (India)
ಭೂತಾನ್ (Bhutan)
ಕಾಂಬೋಡಿಯಾ (Cambodia)
ಇಂಡೋನೇಷ್ಯಾ (Indonesia)
ಲಾವೋಸ್ (Laos)
ಮಲೇಷ್ಯಾ (Malaysia)
ಮಾಲ್ಡೀವ್ಸ್ (Maldives)
ಮ್ಯಾನ್ಮಾರ್ (Myanmar)
ನೇಪಾಳ (Nepal)
ಫಿಲಿಪೀನ್ಸ್ (Philippines)
ಸೀಶೆಲ್ಸ್ (Seychelles)
ಶ್ರೀಲಂಕಾ (Sri Lanka)
ವಿಯೆಟ್ನಾಂ (Vietnam)

➤ ಈ ಜಂಟಿ ಮಿಲಿಟರಿ ಪಡೆಯಲ್ಲಿ ಸುಮಾರು 20 ಮಹಿಳಾ ಸೈನಿಕರು ಸಕ್ರಿಯವಾಗಿ ಭಾಗವಹಿಸುವ ಮೂಲಕ ಲಿಂಗ ಸಮಾನತೆ ಮತ್ತು ಸಶಸ್ತ್ರ ಪಡೆಗಳಲ್ಲಿ ಮಹಿಳೆಯರ ಸಬಲೀಕರಣವನ್ನು ಜಾಗತಿಕ ಮಟ್ಟದಲ್ಲಿ ಪ್ರದರ್ಶಿಸಿದರು.

➤ ಈ ಮಿಲಿಟರಿ ಅಭ್ಯಾಸದ ಪ್ರಮುಖ ಮುಖ್ಯಾಂಶಗಳು:

ಅಭ್ಯಾಸದ ಶೈಲಿ: ಈ ತಾಲೀಮನ್ನು ಪ್ರಮುಖವಾಗಿ ಅರೆ-ಪರ್ವತ ಮತ್ತು ದಟ್ಟವಾದ ಕಾಡುಗಳ ಪ್ರದೇಶದಲ್ಲಿ (Semi-mountainous and jungle terrain) ನಡೆಸಲಾಯಿತು. ಉಗ್ರ ನಿಗ್ರಹ ಕಾರ್ಯಾಚರಣೆಗಳ (Counter-Insurgency & Counter-Terrorism) ಮೇಲೆ ವಿಶೇಷ ಗಮನ ಹರಿಸಲಾಗಿತ್ತು.

ವಿಶೇಷ ತರಬೇತಿಗಳು: ಹೆಲಿಕಾಪ್ಟರ್‌ಗಳಿಂದ ಸ್ಲಿಥರಿಂಗ್ (ಹಗ್ಗದ ಸಹಾಯದಿಂದ ಇಳಿಯುವುದು), ಐಇಡಿ (IED) ಸ್ಫೋಟಕಗಳನ್ನು ಪತ್ತೆಹಚ್ಚುವುದು, ಕಲ್ಲುಬಂಡೆಗಳನ್ನು ಹತ್ತುವ ಕಲೆ (Rock Craft), ಮತ್ತು ಬಸ್ ಹಾಗೂ ರೂಮ್‌ಗಳ ಒಳಗೆ ಅಡಗಿರುವ ಉಗ್ರರನ್ನು ಸೆರೆಹಿಡಿಯುವ ತಂತ್ರಗಳನ್ನು ಜಂಟಿಯಾಗಿ ಅಭ್ಯಾಸ ಮಾಡಲಾಯಿತು.

ತಂತ್ರಜ್ಞಾನದ ಪ್ರದರ್ಶನ (Atmanirbhar Bharat): ಈ ತಾಲೀಮಿನ ಭಾಗವಾಗಿ ಭಾರತೀಯ ಸೇನೆಯು ಫಿಕ್ಕಿ (FICCI) ಮತ್ತು ಆರ್ಮಿ ಡಿಸೈನ್ ಬ್ಯೂರೋ ಸಹಯೋಗದೊಂದಿಗೆ ದೇಶೀಯ ರಕ್ಷಣಾ ತಂತ್ರಜ್ಞಾನಗಳ ಪ್ರದರ್ಶನವನ್ನು ಹಮ್ಮಿಕೊಂಡಿತ್ತು. ಭಾರತದಲ್ಲೇ ತಯಾರಾದ ಆಧುನಿಕ ರಕ್ಷಣಾ ಉಪಕರಣಗಳನ್ನು ವಿದೇಶಿ ಸೇನೆಗಳಿಗೆ ಪರಿಚಯಿಸುವ ಮೂಲಕ ರಕ್ಷಣಾ ರಫ್ತು ಉತ್ತೇಜನಕ್ಕೆ ಒತ್ತು ನೀಡಲಾಯಿತು.

ಸಾಂಸ್ಕೃತಿಕ ಸಮನ್ವಯ: ಕೇವಲ ಯುದ್ಧ ತಂತ್ರಗಳಷ್ಟೇ ಅಲ್ಲದೆ, ವಿವಿಧ ದೇಶಗಳ ಸೈನಿಕರ ನಡುವೆ ಸೌಹಾರ್ದತೆ ಬೆಳೆಸಲು ಕ್ರೀಡಾಕೂಟಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಮಾನಸಿಕ ಶಾಂತಿಗಾಗಿ ಯೋಗ (Yoga) ಶಿಬಿರಗಳನ್ನು ಆಯೋಜಿಸಲಾಗಿತ್ತು.

## ಭಾರತದ ನೂತನ ಚೀಫ್ ಆಫ್ ಡಿಫೆನ್ಸ್ ಸ್ಟಾಫ್ (CDS) ಆಗಿ ಜನರಲ್ ಎನ್.ಎಸ್. ರಾಜಾ ಸುಬ್ರಮಣಿ ಅಧಿಕಾರ ಸ್ವೀಕಾರ!




➤ ಭಾರತೀಯ ಸಶಸ್ತ್ರ ಪಡೆಗಳ ಅತ್ಯುನ್ನತ ಮತ್ತು ಅತ್ಯಂತ ಪ್ರಮುಖ ಹುದ್ದೆಯಾದ ಚೀಫ್ ಆಫ್ ಡಿಫೆನ್ಸ್ ಸ್ಟಾಫ್ (CDS) ಆಗಿ ಜನರಲ್ ಎನ್.ಎಸ್. ರಾಜಾ ಸುಬ್ರಮಣಿ ಅವರು ಭಾನುವಾರ (31-05-2026) ಅಧಿಕಾರ ವಹಿಸಿಕೊಂಡಿದ್ದಾರೆ.

➤ ಅಧಿಕಾರ ಸ್ವೀಕರಿಸಿದ ತಕ್ಷಣ ಸಶಸ್ತ್ರ ಪಡೆಗಳನ್ನು ಉದ್ದೇಶಿಸಿ ಮಾತನಾಡಿದ ಜನರಲ್ ಸುಬ್ರಮಣಿ, "ದೇಶದ ಸಾರ್ವಭೌಮತ್ವ ಮತ್ತು ಪ್ರಾದೇಶಿಕ ಸಮಗ್ರತೆಯನ್ನು ರಕ್ಷಿಸಲು ನಮ್ಮ ಸಶಸ್ತ್ರ ಪಡೆಗಳು ಸಂಪೂರ್ಣವಾಗಿ ಬದ್ಧವಾಗಿವೆ" ಎಂದು ದೇಶದ ಜನತೆಗೆ ಭರವಸೆ ನೀಡಿದರು. ಅಲ್ಲದೆ, ಪ್ರಧಾನಿ ನರೇಂದ್ರ ಮೋದಿ ಅವರ ಮಹತ್ವಾಕಾಂಕ್ಷೆಯ 'JAI' ಪರಿಕಲ್ಪನೆಯನ್ನು ರಕ್ಷಣಾ ಇಲಾಖೆಯಲ್ಲಿ ಸಂಪೂರ್ಣವಾಗಿ ಜಾರಿಗೆ ತರುವುದು ತಮ್ಮ ಮೊದಲ ಆದ್ಯತೆ ಎಂದು ಅವರು ಸ್ಪಷ್ಟಪಡಿಸಿದರು.

➤ **'JAI' ಪರಿಕಲ್ಪನೆ:**

J - Jointness (ಜಾಯಿಂಟ್‌ನೆಸ್): ಭೂಸೇನೆ, ವಾಯುಸೇನೆ ಮತ್ತು ನೌಕಾಸೇನೆಗಳ ನಡುವೆ ಅಭೂತಪೂರ್ವ ಸಮನ್ವಯತೆ ಸಾಧಿಸುವುದು.

A - Atmanirbhartha (ಆತ್ಮನಿರ್ಭರತೆ): ರಕ್ಷಣಾ ವಲಯದಲ್ಲಿ ವಿದೇಶಿ ಅವಲಂಬನೆ ಕಡಿಮೆ ಮಾಡಿ ಸ್ವಾವಲಂಬನೆ ಸಾಧಿಸುವುದು.

**I - Innovation (ಆವಿಷ್ಕಾರ):** ಆಧುನಿಕ ತಂತ್ರಜ್ಞಾನ ಹಾಗೂ ಯುದ್ಧೋಪಕರಣಗಳ ಹೊಸ ಆವಿಷ್ಕಾರಗಳಿಗೆ ಒತ್ತು ನೀಡುವುದು.

➤ ಜನರಲ್ ಎನ್.ಎಸ್. ರಾಜಾ ಸುಬ್ರಮಣಿ: ನಾಲ್ಕು ದಶಕಗಳಿಗೂ (40 ವರ್ಷಗಳಿಗಿಂತ ಹೆಚ್ಚು) ಅಧಿಕ ಕಾಲ ಭಾರತೀಯ ಸೇನೆಯಲ್ಲಿ ಅಪಾರ ಅನುಭವ ಹೊಂದಿರುವ ಜನರಲ್ ಎನ್.ಎಸ್. ರಾಜಾ ಸುಬ್ರಮಣಿ ಅವರು, ಪ್ರತಿಷ್ಠಿತ 'ಗರ್ವಾಲ್ ರೈಫಲ್ಸ್' ಪದಾತಿ ದಳದ ಮೂಲಕ ಸೇನೆಗೆ ಸೇರ್ಪಡೆಯಾಗಿದ್ದರು. ದೇಶದ ಗಡಿ ಭದ್ರತೆ, ಕಾರ್ಯಾಚರಣೆಯ ಯೋಜನೆಗಳು ಹಾಗೂ ರಕ್ಷಣಾ ಕಾರ್ಯತಂತ್ರ ರೂಪಿಸುವುದರಲ್ಲಿ ಅತ್ಯಂತ ಪರಿಣಿತರಾದ ಇವರ ದೇಶಸೇವೆಯನ್ನು ಗುರುತಿಸಿ, ಅತ್ಯುನ್ನತ ಗೌರವಗಳಾದ ಪರಮ ವಿಶಿಷ್ಟ ಸೇವಾ ಪದಕ (PVSM) ಮತ್ತು ಅತಿ ವಿಶಿಷ್ಟ ಸೇವಾ ಪದಕ (AVSM) ಸೇರಿದಂತೆ ಹಲವು ಪ್ರಮುಖ ರಕ್ಷಣಾ ಪ್ರಶಸ್ತಿಗಳನ್ನು ನೀಡಿ ಪುರಸ್ಕರಿಸಲಾಗಿದೆ.

## ಭಾರತೀಯ ನೌಕಾಪಡೆಯ ನೂತನ ಮುಖ್ಯಸ್ಥರಾಗಿ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್ ಅಧಿಕಾರ ಸ್ವೀಕಾರ




➤ ಭಾರತೀಯ ರಕ್ಷಣಾ ವಲಯದಲ್ಲಿ ಮಹತ್ವದ ಬದಲಾವಣೆಯಾಗಿದೆ. ಭಾರತೀಯ ನೌಕಾಪಡೆಯ 27ನೇ ಮುಖ್ಯಸ್ಥರಾಗಿ (Chief of the Naval Staff - CNS) ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್ ಅವರು ಮೇ 31, 2026 ರಂದು ಭಾನುವಾರ ಅಧಿಕಾರ ವಹಿಸಿಕೊಂಡಿದ್ದಾರೆ. ಈ ಹುದ್ದೆಯಲ್ಲಿದ್ದ ಅಡ್ಮಿರಲ್ ದಿನೇಶ್ ಕುಮಾರ್ ತ್ರಿಪಾಠಿ ಅವರು 41 ವರ್ಷಗಳ ಸುದೀರ್ಘ ಸೇವೆ ಮುಗಿಸಿ ನಿವೃತ್ತರಾದ ಹಿನ್ನಲೆಯಲ್ಲಿ, ನೌಕಾಪಡೆಯ ಚುಕ್ಕಾಣಿ ಈಗ ಕೃಷ್ಣ ಸ್ವಾಮಿನಾಥನ್ ಅವರ ಕೈಸೇರಿದೆ.

➤ ವಿಶೇಷವೆಂದರೆ, ನೂತನ ನೌಕಾಪಡೆ ಮುಖ್ಯಸ್ಥರಾದ ಕೃಷ್ಣ ಸ್ವಾಮಿನಾಥನ್ ಅವರು ನಮ್ಮ ಕರ್ನಾಟಕದ ಬೆಂಗಳೂರಿನ ಮೂಲದವರು. ಇದು ಕನ್ನಡಿಗರಿಗೆ ಹೆಮ್ಮೆಯ ವಿಷಯವಾಗಿದ್ದು, ಮುಂಬರುವ KPSC ಪರೀಕ್ಷೆಗಳಲ್ಲಿ ಇದರ ಮೇಲಿನ ಪ್ರಶ್ನೆಗಳನ್ನು ನಿರೀಕ್ಷಿಸಬಹುದಾಗಿದೆ.

➤ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್: ಅವರು ಬೆಂಗಳೂರಿನ ಬಸವನಗುಡಿಯ ಎನ್.ಆರ್ ಕಾಲೋನಿಯಲ್ಲಿ ಜನಿಸಿದರು. ಇವರ ಪೋಷಕರಾದ ಡಿ. ಸ್ವಾಮಿನಾಥನ್ ಮತ್ತು ಶಾಂತಾ ಸ್ವಾಮಿನಾಥನ್ ಇಬ್ಬರೂ ಶಿಕ್ಷಕರಾಗಿದ್ದರು. ಬೆಂಗಳೂರಿನ ಬಿಷಪ್ ಕಾಟನ್ ಬಾಯ್ಸ್ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಪಡೆದ ಇವರು, ನಂತರ ವಿಜಯಪುರದ ಸೈನಿಕ ಶಾಲೆ (Sainik School, Vijayapura) ಸೇರಿದರು. ಪುಣೆಯ ನ್ಯಾಷನಲ್ ಡಿಫೆನ್ಸ್ ಅಕಾಡೆಮಿ (NDA) ಪದವೀಧರರಾದ ಇವರು, ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದಿಂದ ಬಿಎಸ್ಸಿ ಪದವಿ ಪಡೆದಿದ್ದಾರೆ. ಕೊಚ್ಚಿನ್ ವಿವಿಯಿಂದ ಟೆಲಿಕಮ್ಯೂನಿಕೇಶನ್‌ನಲ್ಲಿ ಎಂಎಸ್ಸಿ, ಲಂಡನ್‌ನ ಕಿಂಗ್ಸ್ ಕಾಲೇಜ್‌ನಿಂದ ಡಿಫೆನ್ಸ್ ಸ್ಟಡೀಸ್‌ನಲ್ಲಿ ಎಂಎ ಹಾಗೂ ಮುಂಬೈ ವಿಶ್ವವಿದ್ಯಾಲಯದಿಂದ ಅಂತರರಾಷ್ಟ್ರೀಯ ಅಧ್ಯಯನದಲ್ಲಿ ಪಿಎಚ್‌ಡಿ (PhD) ಪದವಿ ಪಡೆದಿದ್ದಾರೆ.

➤ ನೌಕಾಪಡೆಯಲ್ಲಿನ ಸುದೀರ್ಘ ಸೇವೆ ಮತ್ತು ಸಾಧನೆಗಳು: ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್ ಅವರು ಜುಲೈ 1, 1987 ರಂದು ಭಾರತೀಯ ನೌಕಾಪಡೆಗೆ ಅಧಿಕಾರಿಯಾಗಿ ಸೇರ್ಪಡೆಯಾದರು. ಇವರು ಕಮ್ಯುನಿಕೇಶನ್ ಮತ್ತು ಎಲೆಕ್ಟ್ರಾನಿಕ್ ವಾರ್‌ಫೇರ್ (ಸಂವಹನ ಮತ್ತು ಎಲೆಕ್ಟ್ರಾನಿಕ್ ಯುದ್ಧ ತಂತ್ರಜ್ಞಾನ) ವಿಷಯದಲ್ಲಿ ತಜ್ಞರಾಗಿದ್ದಾರೆ. ತಮ್ಮ 39 ವರ್ಷಗಳ ಸುದೀರ್ಘ ವೃತ್ತಿಜೀವನದಲ್ಲಿ ಇವರು ನೌಕಾಪಡೆಯ ಪ್ರಮುಖ ಯುದ್ಧನೌಕೆಗಳ ಕಮಾಂಡರ್ ಆಗಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿದ್ದಾರೆ:

ಐಎನ್‌ಎಸ್ ವಿಕ್ರಮಾದಿತ್ಯ (INS Vikramaditya): ಭಾರತದ ಹೆಮ್ಮೆಯ ವಿಮಾನವಾಹಕ ಯುದ್ಧನೌಕೆಯಾದ ಐಎನ್‌ಎಸ್ ವಿಕ್ರಮಾದಿತ್ಯದ 2ನೇ ಕಮಾಂಡಿಂಗ್ ಅಧಿಕಾರಿಯಾಗಿ ಸೇವೆ ಸಲ್ಲಿಸಿದ್ದಾರೆ.

ಇತರ ಪ್ರಮುಖ ಯುದ್ಧನೌಕೆಗಳು: ಕ್ಷಿಪಣಿ ನೌಕೆಗಳಾದ ಐಎನ್‌ಎಸ್ ವಿದ್ಯುತ್, ಐಎನ್‌ಎಸ್ ವಿನಾಶ್, ಐಎನ್‌ಎಸ್ ಕುಲಿಶ್ ಮತ್ತು ಗೈಡೆಡ್ ಕ್ಷಿಪಣಿ ವಿಧ್ವಂಸಕ ನೌಕೆ ಐಎನ್‌ಎಸ್ ಮೈಸೂರು (INS Mysore) ಗಳ ನೇತೃತ್ವ ವಹಿಸಿದ್ದರು.

ಪ್ರಮುಖ ಹುದ್ದೆಗಳು: ಈ ನೇಮಕಾತಿಗೂ ಮುನ್ನ ಇವರು ಪಶ್ಚಿಮ ನೌಕಾ ಕಮಾಂಡ್‌ನ (Western Naval Command) ಮುಖ್ಯಸ್ಥರಾಗಿ ಹಾಗೂ ನೌಕಾಪಡೆಯ ಉಪ ಮುಖ್ಯಸ್ಥರಾಗಿ (Vice Chief of Naval Staff) ಸೇವೆ ಸಲ್ಲಿಸಿದ್ದರು.

**➤ ಲಭಿಸಿರುವ ಪ್ರಮುಖ ಮಿಲಿಟರಿ ಗೌರವಗಳು:**

ಪರಮ ವಿಶಿಷ್ಟ ಸೇವಾ ಪದಕ (PVSM)
ಅತಿ ವಿಶಿಷ್ಟ ಸೇವಾ ಪದಕ (AVSM)
ವಿಶಿಷ್ಟ ಸೇವಾ ಪದಕ (VSM)

## ಭಾರತೀಯ ರೈಲ್ವೆಯ 18ನೇ ವಲಯವಾಗಿ 'ದಕ್ಷಿಣ ಕರಾವಳಿ ರೈಲ್ವೆ' ಅಧಿಕೃತ ಆರಂಭ




➤ ವಿಶಾಖಪಟ್ಟಣ: ಆಂಧ್ರಪ್ರದೇಶದ ಜನತೆಯ ದಶಕಗಳ ಕಾಲದ ಬಹುದೊಡ್ಡ ಕನಸು ಕೊನೆಗೂ ಸಾಕಾರಗೊಂಡಿದೆ. ಭಾರತೀಯ ರೈಲ್ವೆ ಜಾಲಕ್ಕೆ ನೂತನವಾಗಿ ಸೇರ್ಪಡೆಯಾಗಿರುವ ದಕ್ಷಿಣ ಕರಾವಳಿ ರೈಲ್ವೆ ವಲಯ ಜೂನ್ 1ರಿಂದ ತನ್ನ ಅಧಿಕೃತ ಕಾರ್ಯಾಚರಣೆಯನ್ನು ಆರಂಭಿಸಿದೆ. ಇದು ಭಾರತೀಯ ರೈಲ್ವೆಯ 18ನೇ ಅಧಿಕೃತ ರೈಲ್ವೆ ವಲಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

➤ ಆಂಧ್ರಪ್ರದೇಶದ ವಿಶಾಖಪಟ್ಟಣವನ್ನು ಪ್ರಧಾನ ಕಚೇರಿಯನ್ನಾಗಿ ಹೊಂದಿರುವ ನೂತನ ದಕ್ಷಿಣ ಕರಾವಳಿ ರೈಲ್ವೆ ವಲಯವು 3,532 ಕಿ.ಮೀ. ಉದ್ದದ ಜಾಲ ಮತ್ತು 385 ನಿಲ್ದಾಣಗಳೊಂದಿಗೆ ಅಧಿಕೃತವಾಗಿ ಆರಂಭವಾಗಿದ್ದು, ಇದರ ನೆನಪಿಗಾಗಿ ಭಾರತೀಯ ರೈಲ್ವೆಯು 18 ನಕ್ಷತ್ರಗಳನ್ನು ಒಳಗೊಂಡ ಹೊಸ ಅಧಿಕೃತ ಲೋಗೋವನ್ನು ಅನಾವರಣಗೊಳಿಸಿದೆ.

**➤ ವಲಯದ ವಿಭಾಗಗಳು ಮತ್ತು ವ್ಯಾಪ್ತಿ:**

| ವಿಭಾಗದ ಹೆಸರು (Divisions) | ಪ್ರಮುಖ ವೈಶಿಷ್ಟ್ಯಗಳು |
|---|---|
| ವಿಜಯವಾಡ ವಿಭಾಗ (Vijayawada) | ಅತ್ಯಂತ ಜನದಟ್ಟಣೆ ಮತ್ತು ಪ್ರಮುಖ ಆರ್ಥಿಕ ಕಾರಿಡಾರ್‌ಗಳನ್ನು ಹೊಂದಿದೆ. |
| ಗುಂಟಕಲ್ ವಿಭಾಗ (Guntakal) | ರಾಯಲಸೀಮಾ ಭಾಗದ ಪ್ರಮುಖ ಕನೆಕ್ಟಿವಿಟಿ ಒದಗಿಸುತ್ತದೆ. |
| ಗುಂಟೂರು ವಿಭಾಗ (Guntur) | ಕೃಷಿ ಮತ್ತು ವಾಣಿಜ್ಯ ಸರಕು ಸಾಗಣೆಗೆ ಪ್ರಸಿದ್ಧಿಯಾಗಿದೆ. |
| ವಿಶಾಖಪಟ್ಟಣಂ (ಹೊಸ ವಿಭಾಗ) | ಈ ಹಿಂದೆ ವಾಲ್ಟೇರ್ (Waltair) ವಿಭಾಗದ ಭಾಗವಾಗಿದ್ದ ಇದನ್ನು ಮರುಸಂಘಟಿಸಿ ಹೊಸದಾಗಿ ಸೇರಿಸಲಾಗಿದೆ. |

## ಭಾರತದ ರಕ್ಷಣಾ ರಫ್ತು ಇತಿಹಾಸದಲ್ಲೇ ಅತಿ ದೊಡ್ಡ ಮೈಲಿಗಲ್ಲು: ವಿಯೆಟ್ನಾಂ ಜೊತೆ ಬ್ರಹ್ಮೋಸ್ ಕ್ಷಿಪಣಿ ಒಪ್ಪಂದ ಪೂರ್ಣ!




➤ ಜಾಗತಿಕ ರಕ್ಷಣಾ ಮಾರುಕಟ್ಟೆಯಲ್ಲಿ ಭಾರತದ 'ಮೇಕ್ ಇನ್ ಇಂಡಿಯಾ' (Make in India) ಉಪಕ್ರಮಕ್ಕೆ ಭಾರಿ ಯಶಸ್ಸು ಸಿಕ್ಕಿದೆ.

ಸಿಂಗಪುರದಲ್ಲಿ ನಡೆದ ಪ್ರತಿಷ್ಠಿತ 'ಶಾಂಗ್ರಿ-ಲಾ ಸಂವಾದ'ದಲ್ಲಿ (Shangri-La Dialogue) ಪಾಲ್ಗೊಂಡಿದ್ದ ಭಾರತದ ರಕ್ಷಣಾ ಕಾರ್ಯದರ್ಶಿ ರಾಜೇಶ್ ಕುಮಾರ್ ಸಿಂಗ್ ಅವರು, ಭಾರತ ಮತ್ತು ವಿಯೆಟ್ನಾಂ ನಡುವೆ ಅತ್ಯಾಧುನಿಕ ಬ್ರಹ್ಮೋಸ್(BrahMos) ಸೂಪರ್‌ಸಾನಿಕ್ ಕ್ರೂಸ್ ಕ್ಷಿಪಣಿ ಖರೀದಿ ಒಪ್ಪಂದ ಅಧಿಕೃತವಾಗಿ ಪೂರ್ಣಗೊಂಡಿದೆ ಎಂದು ತಿಳಿಸಿದ್ದಾರೆ.

➤ ದಕ್ಷಿಣ ಚೀನಾ ಸಮುದ್ರದಲ್ಲಿ ಚೀನಾದ ಆಕ್ರಮಣಕಾರಿ ಧೋರಣೆಗೆ ಪೆಟ್ಟು ನೀಡಲು ಮತ್ತು ತನ್ನ ರಕ್ಷಣಾ ಸಾಮರ್ಥ್ಯವನ್ನು ಬಲಪಡಿಸಿಕೊಳ್ಳಲು ವಿಯೆಟ್ನಾಂ ಈ ನಿರ್ಧಾರಕ್ಕೆ ಬಂದಿದೆ. ಇದರೊಂದಿಗೆ ಇಂಡೊನೇಷ್ಯಾ ದೇಶದೊಂದಿಗೂ ಒಪ್ಪಂದದ ಮಾತುಕತೆಗಳು ಅಂತಿಮ ಹಂತ ತಲುಪಿವೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

**➤ ಬ್ರಹ್ಮೋಸ್‌ಸ್ರಪ್ಪು ಒಪ್ಪಂದಗಳ ಇತಿಹಾಸ ಮತ್ತು ಪ್ರಸ್ತುತ ಸ್ಥಿತಿ:**

ಫಿಲಿಪ್ಪೀನ್ಸ್:2022 (ಸಹಿ ಹಾಕಲಾಗಿದೆ):375 ಮಿಲಿಯನ್ ಡಾಲರ್ (ಸುಮಾರು ₹3,500 ಕೋಟಿ):ಬ್ರಹ್ಮೋಸ್ ಖರೀದಿಸಿದ ವಿಶ್ವದ ಮೊದಲ ವಿದೇಶಿ ರಾಷ್ಟ್ರ.

ವಿಯೆಟ್ನಾಂ:2026 (ಈಗ ಅಧಿಕೃತ ಘೋಷಣೆ):ಮೊತ್ತ ಬಹಿರಂಗಪಡಿಸಿಲ್ಲ:ಆಗ್ನೇಯ ಏಷ್ಯಾದಲ್ಲಿ ಭಾರತದ ವ್ಯೂಹಾತ್ಮಕ ಪಾಲುದಾರಿಕೆ ಬಲವರ್ಧನೆ.

ಇಂಡೊನೇಷ್ಯಾ:ಅಂತಿಮ ಹಂತದಲ್ಲಿದೆ (2026):ಮಾತುಕತೆ ಪ್ರಗತಿಯಲ್ಲಿದೆ:ಕರಾವಳಿ ರಕ್ಷಣಾ ವ್ಯವಸ್ಥೆಗಾಗಿ ಭಾರತದ ತಂತ್ರಜ್ಞಾನ ಬಳಕೆ.

➤ಬ್ರಹ್ಮೋಸ್ ಕ್ಷಿಪಣಿ ಎಂಬುದು ಭಾರತದ ಬ್ರಹ್ಮಪುತ್ರ ಮತ್ತು ರಷ್ಯಾದ ಮೋಸ್ಕ್ವಾ ನದಿಗಳ ಹೆಸರಿನಿಂದ ಕರೆಯಲ್ಪಡುವ, DRDO ಮತ್ತು ರಷ್ಯಾದ NPO ಜಂಟಿಯಾಗಿ ಅಭಿವೃದ್ಧಿಪಡಿಸಿದ ವಿಶ್ವದ ಅತ್ಯಂತ ವೇಗದ ಸೂಪರ್‌ಸಾನಿಕ್ ಕ್ರೂಸ್ ಕ್ಷಿಪಣಿಯಾಗಿದ್ದು, ಇದನ್ನು 'ಫೈರ್ ಅಂಡ್ ಫಾರ್ಗೆಟ್' ತತ್ವದಡಿ ಭೂಮಿ, ಸಮುದ್ರ, ಆಕಾಶ ಮತ್ತು ಸಬ್‌ಮೆರಿನ್‌ಗಳಿಂದಲೂ ಉಡಾವಣೆ ಮಾಡಬಹುದಾಗಿದೆ.

➤ ವಿಯೆಟ್ನಾಂ ಜೊತೆಗಿನ ಬ್ರಹ್ಮೋಸ್ ಒಪ್ಪಂದದಿಂದ ಭಾರತದ 'ಆಕ್ಟ್ ಈಸ್ಟ್ ಪಾಲಿಸಿ' ಬಲಗೊಳ್ಳುವುದಲ್ಲದೆ, ದೇಶದ ರಕ್ಷಣಾ ರಫ್ತು ಗುರಿಗಳಿಗೆ ದೊಡ್ಡ ಉತ್ತೇಜನ ಸಿಗಲಿದ್ದು, ದಕ್ಷಿಣ ಚೀನಾ ಸಮುದ್ರದಲ್ಲಿ ಚೀನಾದ ಏಕಸ್ವಾಮ್ಯವನ್ನು ಎದುರಿಸುತ್ತಿರುವ ರಾಷ್ಟ್ರಗಳಿಗೆ ನೆರವಾಗುವ ಮೂಲಕ ಪ್ರಾದೇಶಿಕ ಸಮತೋಲನ ಕಾಯ್ದುಕೊಳ್ಳಲು ನೆರವಾಗುತ್ತದೆ.

## ಸಿಂಗಪುರ ಓಪನ್ ಬ್ಯಾಡ್ಮಿಂಟನ್ 2026: ಇತಿಹಾಸ ಬರೆದ ಸಾತ್ವಿಕ್-ಚಿರಾಗ್ ಜೋಡಿ!



➤ ಭಾರತದ ಹೆಮ್ಮೆಯ ತಾರಾ ಜೋಡಿಯಾದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಸಿಂಗಪುರ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಪುರುಷರ ಡಬಲ್ಸ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಳ್ಳುವ ಮೂಲಕ ಹೊಸ ಇತಿಹಾಸ ಸೃಷ್ಟಿಸಿದ್ದಾರೆ. ಈ ಭರ್ಜರಿ ಗೆಲುವಿನೊಂದಿಗೆ ಭಾರತದ ಬ್ಯಾಡ್ಮಿಂಟನ್ ಲೋಕದಲ್ಲಿ ಮತ್ತೊಂದು ಸುವರ್ಣ ಅಧ್ಯಾಯ ಬರೆಯಲ್ಪಟ್ಟಿದೆ. ಕಳೆದ ಎರಡು ವರ್ಷಗಳಿಂದ ಪ್ರಶಸ್ತಿಯ ಬರ ಎದುರಿಸುತ್ತಿದ್ದ ಏಷ್ಯನ್ ಹಾಗೂ ಕಾಮನ್‌ವೆಲ್ತ್ ಚಾಂಪಿಯನ್ ಜೋಡಿಯು ಭಾನುವಾರ ನಡೆದ ರೋಚಕ ಫೈನಲ್ ಪಂದ್ಯದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿತು.

➤ **ವಿಶೇಷ ದಾಖಲೆ:** ಸಿಂಗಪುರ ಓಪನ್ ಇತಿಹಾಸದಲ್ಲಿ ಪುರುಷರ ಡಬಲ್ಸ್ ಪ್ರಶಸ್ತಿ ಗೆದ್ದ ಭಾರತದ ಮೊದಲ ಜೋಡಿ ಎಂಬ ಹೆಗ್ಗಳಿಕೆಗೆ ಸಾತ್ವಿಕ್ ಮತ್ತು ಚಿರಾಗ್ ಪಾತ್ರರಾಗಿದ್ದಾರೆ.

➤ ರೋಚಕ ಫೈನಲ್ ಪಂದ್ಯ: ಫೈನಲ್ ಪಂದ್ಯದಲ್ಲಿ ಆರಂಭಿಕ ಹಿನ್ನಡೆಯ ನಡುವೆಯೂ ಅದ್ಭುತವಾಗಿ ಚೇತರಿಸಿಕೊಂಡ ಭಾರತೀಯ ಜೋಡಿ, ಇಂಡೊನೇಷ್ಯಾದ ಬಲಿಷ್ಠ ಜೋಡಿಯಾದ ಫಜರ್ ಅಲ್ಫಿಯಾನ್ ಹಾಗೂ ಮುಹಮ್ಮದ್ ಶೋಹಿಬುಲ್ ಫಿಕ್ರಿ ಅವರನ್ನು 18-21, 21-17, 21-16 ರ ಗೇಮ್‌ಗಳ ಅಂತರದಿಂದ ಮಣಿಸಿ ಜಯಭೇರಿ ಬಾರಿಸಿತು. ಮೊದಲ ಗೇಮ್ ಸೋತರೂ ಧೃತಿಗೆಡದೆ ಆಡಿದ ಸಾತ್ವಿಕ್-ಚಿರಾಗ್, ಮುಂದಿನ ಎರಡೂ ಗೇಮ್‌ಗಳಲ್ಲಿ ಪೂರ್ಣ ಪ್ರಾಬಲ್ಯ ಸಾಧಿಸಿದರು.

**➤ ಪ್ರಮುಖ ಸಾಧನೆಗಳು:**

9ನೇ ವಿಶ್ವ ಪ್ರವಾಸ ಪ್ರಶಸ್ತಿ: ಇದು ಸಾತ್ವಿಕ್-ಚಿರಾಗ್ ಜೋಡಿಯ ಒಟ್ಟಾರೆ 9ನೇ ಬಿಡಬ್ಲ್ಯುಎಫ್ (BWF) ವಿಶ್ವ ಪ್ರವಾಸ ಪ್ರಶಸ್ತಿಯಾಗಿದೆ.

ಸೂಪರ್ 750 ಕಿರೀಟ: ಇದು ಅವರ ವೃತ್ತಿಜೀವನದ ಮೂರನೇ ಬಿಡಬ್ಲ್ಯುಎಫ್ ಸೂಪರ್ 750 (BWF Super 750) ಮಟ್ಟದ ಪ್ರತಿಷ್ಠಿತ ಕಿರೀಟವಾಗಿದೆ.

ಸೇಡಿನ ಗೆಲುವು: ಇದೇ ವರ್ಷದ ಜನವರಿಯಲ್ಲಿ ನಡೆದಿದ್ದ ಮಲೇಷ್ಯಾ ಓಪನ್ ಕ್ವಾರ್ಟರ್ ಫೈನಲ್‌ನಲ್ಲಿ ಇಂಡೊನೇಷ್ಯಾದ ಇದೇ ಜೋಡಿ ವಿರುದ್ಧ ಭಾರತೀಯರು ಸೋಲುಂಡಿದ್ದರು. ಇದೀಗ ಫೈನಲ್‌ನಲ್ಲಿ ಅವರನ್ನು ಸೋಲಿಸುವ ಮೂಲಕ ಮಧುರ ಸೇಡು ತೀರಿಸಿಕೊಂಡಿದ್ದಾರೆ.

ಸೆಮಿಫೈನಲ್ ಜಯ: ಭಾರತದ ಜೋಡಿಯು ಸೆಮಿಫೈನಲ್‌ನಲ್ಲಿ ಹಾಲಿ ವಿಶ್ವ ಚಾಂಪಿಯನ್ ಆಗಿರುವ ದಕ್ಷಿಣ ಕೊರಿಯಾದ ಕಿಮ್ ವಾನ್ ಹೊ ಮತ್ತು ಸಿಯೊ ಸಿಯುಂಗ್ ಜೇ ಅವರಿಗೆ ಆಘಾತ ನೀಡಿ ಫೈನಲ್ ತಲುಪಿತ್ತು.

## IPL 2026 Winner: ಮತ್ತೊಮ್ಮೆ 'ಕಪ್ ನಮ್ಮದೇ' ಎಂದ ಆರ್‌ಸಿಬಿ




➤ ಬೆಂಗಳೂರು: **"ಈ ಸಲನೂ ಕಪ್ ನಮ್ಮದೇ"** ಎಂಬ ಘೋಷವಾಕ್ಯವನ್ನು ರಾಯಲ್ ಚಾಲೆಂಜರ್ಸ್ ಬೆಂಗಳೂರು (RCB) ತಂಡವು ಮತ್ತೊಮ್ಮೆ ನಿಜವಾಗಿಸಿದೆ. ಕ್ರಿಕೆಟ್ ಅಭಿಮಾನಿಗಳ ಬಹುದಿನಗಳ ಕನಸನ್ನು ಸತತವಾಗಿ ನನಸು ಮಾಡುತ್ತಿರುವ ಆರ್‌ಸಿಬಿ, 2026 ರ ಇಂಡಿಯನ್ ಪ್ರೀಮಿಯರ್ ಲೀಗ್ (IPL 2026) ಚಾಂಪಿಯನ್ ಆಗಿ ಹೊರಹೊಮ್ಮಿದೆ. ಆ ಮೂಲಕ ಐಪಿಎಲ್ ಇತಿಹಾಸದಲ್ಲೇ ಅತ್ಯಂತ ಅಪರೂಪದ ದಾಖಲೆಯೊಂದನ್ನು ತನ್ನದಾಗಿಸಿಕೊಂಡಿದೆ.

➤ **ಫೈನಲ್ ಪಂದ್ಯದ ಹೈಲೈಟ್ಸ್:** ಗುಜರಾತ್ ವಿರುದ್ಧ ಭರ್ಜರಿ ಜಯ: ಅಹಮದಾಬಾದ್‌ನ ವಿಶ್ವದ ಅತಿ ದೊಡ್ಡ ಕ್ರಿಕೆಟ್ ಕ್ರೀಡಾಂಗಣವಾದ ನರೇಂದ್ರ ಮೋದಿ ಸ್ಟೇಡಿಯಂನಲ್ಲಿ ನಡೆದ ರೋಚಕ ಫೈನಲ್ ಪಂದ್ಯದಲ್ಲಿ ಶುಭಮನ್ ಗಿಲ್ ನೇತೃತ್ವದ ಗುಜರಾತ್ ಟೈಟಾನ್ಸ್ (GT) ತಂಡವನ್ನು ಆರ್‌ಸಿಬಿ 5 ವಿಕೆಟ್‌ಗಳ ಅಂತರದಿಂದ ಸೋಲಿಸಿತು. ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ್ದ ಗುಜರಾತ್ ತಂಡ ನೀಡಿದ ಸವಾಲಿನ ಗುರಿಯನ್ನು ವಿರಾಟ್ ಕೊಹ್ಲಿ ಸಾರಥ್ಯದ ಆರ್‌ಸಿಬಿ ಪಡೆ ಇನ್ನು ಕೆಲವು ಎಸೆತಗಳು ಬಾಕಿ ಇರುವಂತೆಯೇ ತಲುಪಿ ಜಯಭೇರಿ ಬಾರಿಸಿತು.

➤ ಐಪಿಎಲ್ ಇತಿಹಾಸ ಬರೆದ ರಾಯಲ್ ಚಾಲೆಂಜರ್ಸ್ ಬೆಂಗಳೂರು: ಈ ಗೆಲುವಿನೊಂದಿಗೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಐಪಿಎಲ್ ಇತಿಹಾಸದಲ್ಲಿ ತನ್ನ ಪ್ರಶಸ್ತಿಯನ್ನು ಯಶಸ್ವಿಯಾಗಿ ಉಳಿಸಿಕೊಂಡ (Back-to-Back IPL Titles) ಮೂರನೇ ತಂಡ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

**➤ ಇದಕ್ಕೂ ಮುನ್ನ ಐಪಿಎಲ್‌ನಲ್ಲಿ ಸತತ ಎರಡು ವರ್ಷ ಪ್ರಶಸ್ತಿ ಗೆದ್ದು ಇತಿಹಾಸ ನಿರ್ಮಿಸಿದ ತಂಡಗಳ ಪಟ್ಟಿ :**

1. ಚೆನ್ನೈ ಸೂಪರ್ ಕಿಂಗ್ಸ್ (CSK): ಎಂ.ಎಸ್. ಧೋನಿ : 2010 ಮತ್ತು 2011
2. ಮುಂಬೈ ಇಂಡಿಯನ್ಸ್ (MI): ರೋಹಿತ್ ಶರ್ಮಾ : 2019 ಮತ್ತು 2020
3. ರಾಯಲ್ ಚಾಲೆಂಜರ್ಸ್ ಬೆಂಗಳೂರು (RCB): ವಿರಾಟ್ ಕೊಹ್ಲಿ / ಫಾಫ್ ಡು ಪ್ಲೆಸಿಸ್: 2025 ಮತ್ತು 2026

## 02 June 2026

### ಏರ್ ಮಾರ್ಷಲ್ ತರುಣ್ ಚೌಧರಿ ಸೆಂಟ್ರಲ್ ಏರ್ ಕಮಾಂಡ್ ಮುಖ್ಯಸ್ಥರಾಗಿ ಅಧಿಕಾರ ಸ್ವೀಕಾರ



➤ ಭಾರತೀಯ ವಾಯುಪಡೆಯ (IAF) ಪ್ರಮುಖ ಕಾರ್ಯಾಚರಣಾ ವಿಭಾಗವಾದ ಸೆಂಟ್ರಲ್ ಏರ್ ಕಮಾಂಡ್ (Central Air Command - CAC) ನ ನೂತನ ಏರ್ ಆಫೀಸರ್ ಕಮಾಂಡಿಂಗ್-ಇನ್-ಚೀಫ್ (Air Officer Commanding-in-Chief) ಆಗಿ ಏರ್ ಮಾರ್ಷಲ್ ತರುಣ್ ಚೌಧರಿ (Air Marshal Tarun Chaudhry) ಅವರು ಜೂನ್ 1, 2026 ರಂದು ಅಧಿಕಾರ ವಹಿಸಿಕೊಂಡಿದ್ದಾರೆ. ಕಳೆದ 40 ವರ್ಷಗಳ ಕಾಲ ಭಾರತೀಯ ವಾಯುಪಡೆಯಲ್ಲಿ ಸುದೀರ್ಘ ಸೇವೆ ಸಲ್ಲಿಸಿ, ಮೇ 31, 2026 ರಂದು ನಿವೃತ್ತರಾದ ಏರ್ ಮಾರ್ಷಲ್ ಬಾಲಕೃಷ್ಣನ್ ಮಣಿಕಂಠನ್ ಅವರ ಸ್ಥಾನಕ್ಕೆ ತರುಣ್ ಚೌಧರಿ ಅವರು ನೇಮಕಗೊಂಡಿದ್ದಾರೆ.

➤ ಏರ್ ಮಾರ್ಷಲ್ ತರುಣ್ ಚೌಧರಿ: ತರುಣ್ ಚೌಧರಿ ಅವರು ಡಿಸೆಂಬರ್ 1989 ರಲ್ಲಿ ಭಾರತೀಯ ವಾಯುಪಡೆಯ ಫೈಟರ್ ಸ್ಟ್ರೀಮ್ (Fighter Stream) ಅಂದರೆ ಯುದ್ಧವಿಮಾನ ವಿಭಾಗಕ್ಕೆ ಅಧಿಕಾರಿಯಾಗಿ ಸೇರ್ಪಡೆಗೊಂಡರು. ಪ್ರಸ್ತುತ ಜವಾಬ್ದಾರಿ ವಹಿಸಿಕೊಳ್ಳುವ ಮುನ್ನ ಅವರು ಸದರ್ನ್ ಏರ್ ಕಮಾಂಡ್ (Southern Air Command) ಪ್ರಧಾನ ಕಚೇರಿಯಲ್ಲಿ ಸೀನಿಯರ್ ಏರ್ ಸ್ಟಾಫ್ ಆಫೀಸರ್ ಆಗಿ ಕಾರ್ಯನಿರ್ವಹಿಸುತ್ತಿದ್ದರು. ಇವರು ರಾಷ್ಟ್ರೀಯ ರಕ್ಷಣಾ ಅಕಾಡೆಮಿ (NDA), ಡಿಫೆನ್ಸ್ ಸರ್ವಿಸಸ್ ಸ್ಟಾಫ್ ಕಾಲೇಜ್ (DSSC), ಕಾಲೇಜ್ ಆಫ್ ಏರ್ ವಾರ್‌ಫೇರ್ ಮತ್ತು ನ್ಯಾಷನಲ್ ಡಿಫೆನ್ಸ್ ಕಾಲೇಜ್‌ನ ಹಳೆಯ ವಿದ್ಯಾರ್ಥಿಯಾಗಿದ್ದಾರೆ. ಸ್ವೀಡನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯಲ್ಲಿ ರಕ್ಷಣಾ ಅಟ್ಯಾಚ್ (Defence Attaché) ಆಗಿ ಸೇವೆ ಸಲ್ಲಿಸಿದ ಅನುಭವ ಹೊಂದಿದ್ದಾರೆ. ಇದರೊಂದಿಗೆ ನಾರ್ವೆ, ಫಿನ್ಲೆಂಡ್ ಮತ್ತು ಡೆನ್ಮಾರ್ಕ್ ದೇಶಗಳ ರಕ್ಷಣಾ ವ್ಯವಹಾರಗಳಲ್ಲೂ ಭಾರತವನ್ನು ಪ್ರತಿನಿಧಿಸಿದ್ದರು.

➤ ಸೆಂಟ್ರಲ್ ಏರ್ ಕಮಾಂಡ್ (CAC): ಸೆಂಟ್ರಲ್ ಏರ್ ಕಮಾಂಡ್ ಭಾರತೀಯ ವಾಯುಪಡೆಯ ಅತ್ಯಂತ ಪ್ರಮುಖ ಕಾರ್ಯಾಚರಣಾ ಕಮಾಂಡ್‌ಗಳಲ್ಲಿ ಒಂದಾಗಿದೆ.
- ಪ್ರಧಾನ ಕಚೇರಿ (Headquarters): ಉತ್ತರ ಪ್ರದೇಶದ ಪ್ರಯಾಗ್ ರಾಜ್ (ಹಳೆಯ ಹೆಸರು ಅಲಹಾಬಾದ್) ನಲ್ಲಿದೆ.
- ಕಾರ್ಯವ್ಯಾಪ್ತಿ: ಇದು ಮಧ್ಯ ಭಾರತದ ವಿಶಾಲವಾದ ಪ್ರದೇಶವನ್ನು ಕವರ್ ಮಾಡುವುದಲ್ಲದೆ, ದೇಶದ ಪಶ್ಚಿಮ ಮತ್ತು ಉತ್ತರ ವಲಯಗಳ ರಕ್ಷಣಾ ಕಾರ್ಯಾಚರಣೆಗಳಿಗೆ ಗಣನೀಯ ಬಲವನ್ನು ತುಂಬುತ್ತದೆ.

➤ ಭಾರತೀಯ ವಾಯುಪಡೆಯಲ್ಲಿ ಕಾರ್ಯಾಚರಣಾ ಕಮಾಂಡ್‌ನ ಅತ್ಯುನ್ನತ ಅಧಿಕಾರಿಯನ್ನು 'ಏರ್ ಆಫೀಸರ್ ಕಮಾಂಡಿಂಗ್-ಇನ್-ಚೀಫ್' (AOC-in-C) ಎಂದು ಕರೆಯಲಾಗುತ್ತದೆ.

### ಭಾರತದಲ್ಲಿ ಮೊದಲ ಬಾರಿಗೆ ಪತ್ತೆಯಾಯಿತು ಹೊಸ ಹಲ್ಲಿ ಪ್ರಭೇದ 'ಮೆಸಾಲಿನಾ ಬಿಷ್ನೋಯ್'




➤ ಪರಿಸರ ಮತ್ತು ಜೀವವೈವಿಧ್ಯ (Environment & Biodiversity) ವಿಭಾಗದಿಂದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅತ್ಯಂತ ಪ್ರಮುಖವಾದ ಸುದ್ದಿಯೊಂದು ಹೊರಬಿದ್ದಿದೆ. ಭಾರತದಲ್ಲಿ ಇದೇ ಮೊದಲ ಬಾರಿಗೆ 'ಮೆಸಾಲಿನಾ' (Mesalina) ಕುಲಕ್ಕೆ (Genus) ಸೇರಿದ ಹೊಸ ಹಲ್ಲಿ ಪ್ರಭೇದವೊಂದನ್ನು ವಿಜ್ಞಾನಿಗಳು ಪತ್ತೆಹಚ್ಚಿದ್ದಾರೆ. ಈ ಹೊಸ ಪ್ರಭೇದಕ್ಕೆ 'ಮೆಸಾಲಿನಾ ಬಿಷ್ನೋಯ್' (Mesalina bishnoi) ಎಂದು ಹೆಸರಿಡಲಾಗಿದೆ. ರಾಜಸ್ಥಾನದ ಮರುಭೂಮಿ ಪ್ರದೇಶದಲ್ಲಿ ಜೂನ್ 1, 2026 ರಂದು ಈ ಪ್ರಮುಖ ಸಂಶೋಧನೆಯನ್ನು ಅಧಿಕೃತವಾಗಿ ಪ್ರಕಟಿಸಲಾಗಿದೆ.

➤ ವಿಜ್ಞಾನಿಗಳ ಪ್ರಕಾರ, ಭಾರತದಲ್ಲಿ 'ಮೆಸಾಲಿನಾ' ಕುಲದ ಹಲ್ಲಿಗಳು ಇವೆ ಎಂಬುದಕ್ಕೆ ಇದುವರೆಗೆ ಯಾವುದೇ ಅಧಿಕೃತ ಅಥವಾ ಭೌತಿಕ ಪುರಾವೆಗಳು ಸಿಕ್ಕಿರಲಿಲ್ಲ. ಹಿಂದೆ 1935 ರಲ್ಲಿ ಬ್ರಿಟಿಷ್ ಪ್ರಾಣಿಶಾಸ್ತ್ರಜ್ಞ ಮಾಲ್ಕಮ್ ಎ. ಸ್ಮಿತ್ (Malcolm A. Smith) ಅವರು ರಾಜಸ್ಥಾನದ ಜೈಸಲ್ಮೇರ್‌ನಲ್ಲಿ 'ಮೆಸಾಲಿನಾ ವ್ಯಾಟ್ಸೋನಾನಾ' (Mesalina watsonana) ಪ್ರಭೇದದ ಹಲ್ಲಿ ಇರಬಹುದು ಎಂದು ಉಲ್ಲೇಖಿಸಿದ್ದರು. ಆದರೆ, ಅದಕ್ಕೆ ಯಾವುದೇ ಸ್ಪಷ್ಟ ಮಾದರಿಗಳು (Specimen) ಸಿಕ್ಕಿರಲಿಲ್ಲ. ಆದರೆ, ಆಗಸ್ಟ್ 2025 ರಲ್ಲಿ ನಡೆಸಿದ ಕ್ಷೇತ್ರ ಸಮೀಕ್ಷೆಯ (Field Survey) ವೇಳೆ ಪತ್ತೆಯಾದ ಈ ಹಲ್ಲಿಯನ್ನು ಆನುವಂಶಿಕ (Genetic) ಮತ್ತು ರೂಪವಿಜ್ಞಾನದ (Morphological) ವಿಶ್ಲೇಷಣೆಗೆ ಒಳಪಡಿಸಿದಾಗ, ಇದು ಸಂಪೂರ್ಣವಾಗಿ ಹೊಸ ಪ್ರಭೇದ ಎಂಬುದು ಸಾಬೀತಾಗಿದೆ.

➤ **'ಮೆಸಾಲಿನಾ ಬಿಷ್ನೋಯ್' ಹಲ್ಲಿಯ ವೈಶಿಷ್ಟ್ಯಗಳು:**
- ದೈಹಿಕ ಗಾತ್ರ: ಇದು ಅತ್ಯಂತ ಚಿಕ್ಕ ಗಾತ್ರದ ಹಲ್ಲಿಯಾಗಿದ್ದು, ಇದರ ಮೂತಿ-ಕಿಬ್ಬೊಟ್ಟೆಯ ಉದ್ದ (Snout-vent length) ಕೇವಲ 39.2 ಮಿಲಿಮೀಟರ್ (mm) ನಷ್ಟಿದೆ.
- ಬಣ್ಣ ಮತ್ತು ವಿನ್ಯಾಸ: ಇದರ ದೇಹವು ಬೂದು ಬಣ್ಣದಿಂದ ಆಲಿವ್-ಕಂದು (Greyish to olive-brown) ಬಣ್ಣವನ್ನು ಹೊಂದಿದ್ದು, ಬೆನ್ನಿನ ಮೇಲೆ ವಿಶಿಷ್ಟವಾದ ಗೆರೆಗಳು ಹಾಗೂ ಚುಕ್ಕೆಗಳ ವಿನ್ಯಾಸವನ್ನು ಹೊಂದಿದೆ.
- ವಾಸಸ್ಥಾನ: ಇವು ಒಣ ಹಾಗೂ ಅರೆ-ಮರುಭೂಮಿ (Open semi-desert) ಪ್ರದೇಶಗಳಲ್ಲಿ ವಾಸಿಸುತ್ತವೆ. ಪ್ರಸ್ತುತ ಇವು ರಾಜಸ್ಥಾನದ ಥಾರ್ ಮರುಭೂಮಿ ವಲಯದ ಬಿಕಾನೇರ್ ಜಿಲ್ಲೆಯ ಗಜನೇರ್ ಬಳಿ ಪತ್ತೆಯಾಗಿವೆ.

➤ **'ಬಿಷ್ನೋಯ್' ಎಂದು ಹೆಸರಿಡಲು ಕಾರಣ:** ಈ ಹೊಸ ಪ್ರಭೇದಕ್ಕೆ ರಾಜಸ್ಥಾನದ ಪ್ರಸಿದ್ಧ 'ಬಿಷ್ನೋಯ್' (Bishnoi Community) ಸಮುದಾಯದ ಗೌರವಾರ್ಥವಾಗಿ 'ಮೆಸಾಲಿನಾ ಬಿಷ್ನೋಯ್' ಎಂದು ಹೆಸರಿಸಲಾಗಿದೆ. ಬಿಷ್ನೋಯ್ ಸಮುದಾಯವು ಭಾರತದಲ್ಲಿ ವನ್ಯಜೀವಿಗಳ ರಕ್ಷಣೆ ಮತ್ತು ಪ್ರಕೃತಿ ಸಂರಕ್ಷಣೆಯ ಭೌಗೋಳಿಕ ಹಾಗೂ ಸಾಂಸ್ಕೃತಿಕ ಇತಿಹಾಸಕ್ಕೆ ಜಗತ್ಪ್ರಸಿದ್ಧಿಯಾಗಿದೆ (ಉದಾಹರಣೆಗೆ: ಖೇಜರ್ಲಿ ಚಳವಳಿ ಮತ್ತು ಕೃಷ್ಣಮೃಗಗಳ ಸಂರಕ್ಷಣೆ).

➤ ಝೂಲಾಜಿಕಲ್ ಸರ್ವೆ ಆಫ್ ಇಂಡಿಯಾ (ZSI): ಇದು ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ (MoEFCC) ಅಡಿಯಲ್ಲಿ ಕಾರ್ಯನಿರ್ವಹಿಸುವ ಪ್ರಮುಖ ಸಂಶೋಧನಾ ಸಂಸ್ಥೆಯಾಗಿದೆ.

ಜೂನ್ 1ರ ಪ್ರಚಲಿತ ಘಟನೆಗಳ ಆಧಾರಿತ ಕ್ವಿಜ್‌ನಲ್ಲಿ ಭಾಗವಹಿಸಲು ಇಲ್ಲಿ ಕ್ಲಿಕ್ ಮಾಡಿ

### ಮಲೇಷ್ಯಾದಲ್ಲಿ 16 ವರ್ಷದೊಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣ ನಿಷೇಧ: ಕಠಿಣ ಕಾನೂನು ಜಾರಿ!




➤ ಮಲೇಷ್ಯಾ: ಜಾಗತಿಕ ಮಟ್ಟದಲ್ಲಿ ಮಕ್ಕಳ ಆನ್‌ಲೈನ್ ಸುರಕ್ಷತೆ ಮತ್ತು ಮಾನಸಿಕ ಆರೋಗ್ಯದ ರಕ್ಷಣೆಗಾಗಿ ಮಲೇಷ್ಯಾ ಸರಕಾರ ಭಾರಿ ಮಹತ್ವದ ಹೆಜ್ಜೆಯನ್ನಿಟ್ಟಿದೆ. ದೇಶದಲ್ಲಿ 16 ವರ್ಷದೊಳಗಿನ ಮಕ್ಕಳು ಸಾಮಾಜಿಕ ಜಾಲತಾಣಗಳ (Social Media) ಖಾತೆಗಳನ್ನು ಹೊಂದುವುದನ್ನು ಅಧಿಕೃತವಾಗಿ ನಿಷೇಧಿಸಲಾಗಿದೆ. ದೇಶದ ನೂತನ 'ಆನ್‌ಲೈನ್ ಸುರಕ್ಷತಾ ಕಾಯಿದೆ 2025' (Online Safety

Act 2025) ಅಡಿಯಲ್ಲಿ ಈ ಕಠಿಣ ನಿಯಮವನ್ನು ಜಾರಿಗೆ ತರಲಾಗಿದ್ದು, ಡಿಜಿಟಲ್ ಜಗತ್ತಿನಲ್ಲಿ ಮಕ್ಕಳನ್ನು ಸುರಕ್ಷಿತವಾಗಿಡುವುದು ಇದರ ಮುಖ್ಯ ಉದ್ದೇಶವಾಗಿದೆ.

➤ ಈ ಹೊಸ ಕಾನೂನು ಪ್ರಸ್ತುತ ಜಗತ್ತಿನ ಪ್ರಮುಖ ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್ (Facebook), ಇನ್‌ಸ್ಟಾಗ್ರಾಮ್ (Instagram), ಟಿಕ್‌ಟಾಕ್ (TikTok) ಮತ್ತು ಯೂಟ್ಯೂಬ್ (YouTube) ಸೇರಿದಂತೆ ಎಲ್ಲಾ ಪ್ರಮುಖ ಪ್ಲಾಟ್‌ಫಾರ್ಮ್‌ಗಳಿಗೆ ಅನ್ವಯಿಸಲಿದೆ.

- ಡೇಟಾ ಡೌನ್‌ಲೋಡ್‌ಗೆ ಅವಕಾಶ: ಈಗಾಗಲೇ ಖಾತೆಗಳನ್ನು ಹೊಂದಿರುವ 16 ವರ್ಷದೊಳಗಿನ ಬಳಕೆದಾರರಿಗೆ ತಮ್ಮ ಹಳೆಯ ಡೇಟಾಗಳನ್ನು (ಫೋಟೋ, ವಿಡಿಯೋ ಇತ್ಯಾದಿ) ಸುರಕ್ಷಿತವಾಗಿ ಡೌನ್‌ಲೋಡ್ ಮಾಡಿಕೊಳ್ಳಲು ಒಂದು ತಿಂಗಳ ಕಾಲಾವಕಾಶ ನೀಡಲಾಗಿದೆ.

- ಕಡ್ಡಾಯ ವಯಸ್ಸಿನ ಪರಿಶೀಲನೆ: ಇನ್ನು ಮುಂದೆ ಹೊಸದಾಗಿ ಖಾತೆಗಳನ್ನು ತೆರೆಯಲು ಮಕ್ಕಳಿಗೆ ಅವಕಾಶವಿರುವುದಿಲ್ಲ. ವಯಸ್ಸಿನ ಪರಿಶೀಲನೆಗಾಗಿ (Age Verification) ಸರಕಾರದ ಅಧಿಕೃತ ಗುರುತಿನ ಚೀಟಿ ಅಥವಾ ಪಾಸ್‌ಪೋರ್ಟ್ ಬಳಸುವುದನ್ನು ಕಡ್ಡಾಯಗೊಳಿಸಲಾಗಿದೆ.

- ಭಾರಿ ಪ್ರಮಾಣದ ದಂಡ: ಮಕ್ಕಳ ಸುರಕ್ಷತೆಗಾಗಿ ತಂದಿರುವ ಈ ನಿಯಮವನ್ನು ಉಲ್ಲಂಘಿಸುವ ಅಥವಾ ಸರಿಯಾಗಿ ಪಾಲಿಸದ ಸಾಮಾಜಿಕ ಜಾಲತಾಣ ಕಂಪನಿಗಳಿಗೆ ಸುಮಾರು 23.73 ಕೋಟಿ ರೂ.ಗೂ ಅಧಿಕ ದಂಡ ವಿಧಿಸಲು ಕಾನೂನಿನಲ್ಲಿ ಅವಕಾಶ ಕಲ್ಪಿಸಲಾಗಿದೆ.

➤ ಮಕ್ಕಳ ಮೇಲೆ ಸಾಮಾಜಿಕ ಜಾಲತಾಣಗಳ ಅತಿಯಾದ ಬಳಕೆಯಿಂದಾಗುವ ದುಷ್ಪರಿಣಾಮಗಳನ್ನು ತಡೆಯಲು ಕೇವಲ ಮಲೇಷ್ಯಾ ಮಾತ್ರವಲ್ಲದೆ, ವಿಶ್ವದ ಹಲವು ಪ್ರಮುಖ ದೇಶಗಳು ಈಗಾಗಲೇ ಕಠಿಣ ಕ್ರಮಗಳನ್ನು ಕೈಗೊಂಡಿವೆ ಹಾಗೂ ಹಲವು ದೇಶಗಳು ಹೊಸ ಕಾನೂನು ರೂಪಿಸುವ ಹಾದಿಯಲ್ಲಿವೆ.

**➤ ಈಗಾಗಲೇ ನಿಷೇಧಿಸಿರುವ/ನಿರ್ಬಂಧಿಸಿರುವ ದೇಶಗಳು:**

1. ಆಸ್ಟ್ರೇಲಿಯಾ
2. ಫ್ರಾನ್ಸ್
3. ಚೀನಾ
4. ಇಟಲಿ

**➤ ಶೀಘ್ರದಲ್ಲೇ ಕಾನೂನು ಜಾರಿಗೆ ತರಲಿರುವ ದೇಶಗಳು:**

1. ಸ್ಪೇನ್
2. ಡೆನ್ಮಾರ್ಕ್
3. ನಾರ್ವೆ
4. ಗ್ರೀಸ್
5. ಯುನೈಟೆಡ್ ಕಿಂಗ್‌ಡಮ್ (UK)

## ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿ (ICC) ಇಂದ ಕ್ರಿಕೆಟ್ ಕೆನಡಾ ಅಮಾನತು




➤ ಜಾಗತಿಕ ಕ್ರಿಕೆಟ್ ನಿಯಂತ್ರಣ ಸಂಸ್ಥೆಯಾದ ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿ (ICC), ಜೂನ್ 1, 2026 ರಂದು ಕ್ರಿಕೆಟ್ ಕೆನಡಾ (Cricket Canada) ಸಂಸ್ಥೆಯ ಸದಸ್ಯತ್ವವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತುಗೊಳಿಸಿದೆ. ಭಾರತದ ಅಹಮದಾಬಾದ್‌ನಲ್ಲಿ ನಡೆದ ಐಸಿಸಿ ಮಂಡಳಿಯ ಸಭೆಯಲ್ಲಿ ಈ ಮಹತ್ವದ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ. ಸದಸ್ಯತ್ವದ ಜವಾಬ್ದಾರಿಗಳು ಮತ್ತು ಆಡಳಿತಾತ್ಮಕ ನಿಯಮಗಳನ್ನು ತೀವ್ರವಾಗಿ ಉಲ್ಲಂಘಿಸಿರುವ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ.

➤ ಅಮಾನತಿಗೆ ಮುಖ್ಯ ಕಾರಣ: ಐಸಿಸಿ ನಿಯಮಾವಳಿಗಳ ಪ್ರಕಾರ, ಪ್ರತಿಯೊಂದು ದೇಶದ ಕ್ರಿಕೆಟ್ ಮಂಡಳಿಯು ಆಡಳಿತ, ಹಣಕಾಸು ನಿರ್ವಹಣೆ ಮತ್ತು ಭ್ರಷ್ಟಾಚಾರ ವಿರೋಧಿ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾಗುತ್ತದೆ. ಆದರೆ ಕ್ರಿಕೆಟ್ ಕೆನಡಾ ಈ ಕೆಳಗಿನ ವಿಷಯಗಳಲ್ಲಿ ವಿಫಲವಾಗಿದೆ ಎಂದು ಐಸಿಸಿ ತಿಳಿಸಿದೆ:

ಹಣಕಾಸು ದುರುಪಯೋಗ ಮತ್ತು ಭ್ರಷ್ಟಾಚಾರ: ಮಂಡಳಿಯಲ್ಲಿ ವ್ಯಾಪಕ ಹಣಕಾಸು ಅಕ್ರಮಗಳು ನಡೆದಿರುವುದು ಮತ್ತು ಆಡಿಟ್ ಮಾಡಲಾದ ಹಣಕಾಸು ವರದಿಗಳನ್ನು ಸಲ್ಲಿಕೆ ಮಾಡದಿರುವುದು.

ಪಂದ್ಯದ ಮೇಲಿನ ಅಕ್ರಮಗಳು: ಫೆಬ್ರವರಿ 2026 ರಲ್ಲಿ ಚೆನ್ನೈನಲ್ಲಿ ನಡೆದ ಟಿ20 ವಿಶ್ವಕಪ್ ಪಂದ್ಯಾವಳಿಯಲ್ಲಿ ನ್ಯೂಜಿಲೆಂಡ್ ವಿರುದ್ಧದ ಪಂದ್ಯದ ವೇಳೆ ಕೆನಡಾ ತಂಡದ ನಾಯಕ ದಿಲ್ಪ್ರೀತ್ ಬಾಜ್ವಾ ವಿರುದ್ಧ ಮ್ಯಾಚ್ ಫಿಕ್ಸಿಂಗ್ ಹಾಗೂ ಅಕ್ರಮದ ಆರೋಪಗಳು ಕೇಳಿಬಂದಿದ್ದವು. ಈ ಬಗ್ಗೆ ಐಸಿಸಿಯ ಭ್ರಷ್ಟಾಚಾರ ವಿರೋಧಿ ಘಟಕ (ACU) ತನಿಖೆ ನಡೆಸುತ್ತಿದೆ.

ದೌರ್ಜನ್ಯದ ಆರೋಪ: ಕೆನಡಾದ ಸಿಬಿಸಿ (CBC) ವಾಹಿನಿಯ ಸಾಕ್ಷ್ಯಚಿತ್ರವೊಂದರಲ್ಲಿ ಕ್ರಿಕೆಟ್ ಕೆನಡಾ ಆಡಳಿತ ಮಂಡಳಿಯಲ್ಲಿನ ಬೆದರಿಕೆ, ಹಿಂಸೆ ಮತ್ತು ಭ್ರಷ್ಟಾಚಾರದ ವಿಷಯಗಳು ಬಹಿರಂಗವಾಗಿದ್ದವು.

ಗಮನಿಸಿ: ಈ ಹಿಂದೆಯೇ, ಅಂದರೆ ಮೇ 2026 ರಲ್ಲಿ ಐಸಿಸಿ ಕ್ರಿಕೆಟ್ ಕೆನಡಾ ಸಂಸ್ಥೆಗೆ ನೀಡುತ್ತಿದ್ದ ಧನಸಹಾಯವನ್ನು ಸ್ಥಗಿತಗೊಳಿಸಿತ್ತು ಮತ್ತು ತಪ್ಪುಗಳನ್ನು ಸರಿಪಡಿಸಿಕೊಳ್ಳಲು 6 ತಿಂಗಳ ಕಾಲಾವಕಾಶ ನೀಡಿತ್ತು.

➤ ಕೆನಡಾ ಆಟಗಾರರು ಮತ್ತು ತಂಡದ ಮೇಲಾಗುವ ಪರಿಣಾಮಗಳು: ಸಾಮಾನ್ಯವಾಗಿ ಒಂದು ದೇಶದ ಕ್ರಿಕೆಟ್ ಮಂಡಳಿ ಅಮಾನತಾದರೆ ಆ ದೇಶದ ತಂಡಗಳು ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಆಡುವಂತಿಲ್ಲ. ಆದರೆ ಈ ಬಾರಿ ಐಸಿಸಿ ಆಟಗಾರರ ಹಿತದೃಷ್ಟಿಯಿಂದ ಕೆಲವು ವಿನಾಯಿತಿಗಳನ್ನು ನೀಡಿದೆ:

ಪಂದ್ಯಗಳಲ್ಲಿ ಭಾಗವಹಿಸುವಿಕೆ: ಕೆನಡಾದ ರಾಷ್ಟ್ರೀಯ ಕ್ರಿಕೆಟ್ ತಂಡಗಳು ಐಸಿಸಿ ಆಯೋಜಿಸುವ ಅಧಿಕೃತ ಪಂದ್ಯಾವಳಿಗಳಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ.

ನಿಯಂತ್ರಿತ ಧನಸಹಾಯ: ಐಸಿಸಿ ನೇರವಾಗಿ ಕ್ರಿಕೆಟ್ ಕೆನಡಾ ಖಾತೆಗೆ ಹಣ ಬಿಡುಗಡೆ ಮಾಡುವುದಿಲ್ಲ. ಬದಲಿಗೆ, ಐಸಿಸಿ ಮ್ಯಾನೇಜ್‌ಮೆಂಟ್‌ನ ಉಸ್ತುವಾರಿಯಲ್ಲಿ ಕೇವಲ ರಾಷ್ಟ್ರೀಯ ತಂಡದ ಕಾರ್ಯಕ್ರಮಗಳಿಗೆ ಮತ್ತು ಆಟಗಾರರ ಅಭಿವೃದ್ಧಿಗೆ ಮಾತ್ರ ಸೀಮಿತ ಧನಸಹಾಯವನ್ನು ಒದಗಿಸಲಾಗುತ್ತದೆ.

ನಾರ್ಮಲೈಸೇಶನ್ ಕಮಿಟಿ : ಕೆನಡಾ ಕ್ರಿಕೆಟ್‌ನ ಆಡಳಿತವನ್ನು ಹಳಿಗೆ ತರಲು ಐಸಿಸಿ ಒಂದು ವಿಶೇಷ ಸಮಿತಿಯನ್ನು ನೇಮಿಸಲಿದೆ. ಈ ಸಮಿತಿಯು ನೀಡುವ ಷರತ್ತುಗಳನ್ನು ಪೂರೈಸಿದ ಬಳಿಕವಷ್ಟೇ ಅಮಾನತು ಹಿಂಪಡೆಯಲಾಗುತ್ತದೆ.

## WTT ಪ್ರಿಸ್ಟಿನಾ ಫೀಡರ್ ಟೂರ್ನಿ: ಅವಳಿ ಚಿನ್ನ ಗೆದ್ದು ಇತಿಹಾಸ ಬರೆದ 15 ವರ್ಷದ ದಿವ್ಯಾಂಶಿ ಭೌಮಿಕ್!



➤ ಬೆಂಗಳೂರು: ಭಾರತೀಯ ಟೇಬಲ್ ಟೆನಿಸ್ ಲೋಕದಲ್ಲಿ ಮತ್ತೊಂದು ಸುವರ್ಣ ಅಧ್ಯಾಯ ಬರೆಯಲ್ಪಟ್ಟಿದೆ. ಕೊಸೊವೊದ ಪ್ರಿಸ್ಟಿನಾದಲ್ಲಿ ನಡೆದ ಡಬ್ಲ್ಯುಟಿಟಿ ಪ್ರಿಸ್ಟಿನಾ ಫೀಡರ್ (WTT Pristina Feeder 2026) ಟೇಬಲ್ ಟೆನಿಸ್ ಸರಣಿಯಲ್ಲಿ ಭಾರತದ 15 ವರ್ಷದ ಉದಯೋನ್ಮುಖ ತಾರೆ ದಿವ್ಯಾಂಶಿ ಭೌಮಿಕ್ (Divyanshi Bhowmick) ಸಿಂಗಲ್ಸ್ ಮತ್ತು ಡಬಲ್ಸ್ ಎರಡರಲ್ಲೂ ಚಿನ್ನದ ಪದಕ ಮುಡಿಗೇರಿಸಿಕೊಳ್ಳುವ ಮೂಲಕ ಐತಿಹಾಸಿಕ ದಾಖಲೆ ನಿರ್ಮಿಸಿದ್ದಾರೆ.

➤ ಮಹಿಳಾ ಸಿಂಗಲ್ಸ್: ದಿವ್ಯಾಂಶಿ ಭೌಮಿಕ್ ಅತಿ ಕಿರಿಯ ಚಾಂಪಿಯನ್: ವಿಶ್ವ ಕ್ರಮಾಂಕದಲ್ಲಿ 211ನೇ ಸ್ಥಾನದಲ್ಲಿದ್ದ ದಿವ್ಯಾಂಶಿ ಭೌಮಿಕ್, ಮಹಿಳಾ ಸಿಂಗಲ್ಸ್‌ನ ರೋಚಕ ಫೈನಲ್ ಪಂದ್ಯದಲ್ಲಿ ಜಗತ್ತಿನ 38ನೇ ಶ್ರೇಯಾಂಕದ ಬಲಿಷ್ಠ ಆಟಗಾರ್ತಿ,

ಚೀನಾ ತೈಪೆಯ ಯೆಯಿ ತಿಯಾನ್ (Yeh Yi-Tian) ಅವರನ್ನು 3-2 ಗೇಮ್‌ಗಳ ಅಂತರದಿಂದ ಸೋಲಿಸಿ ಪ್ರಶಸ್ತಿ ಜಯಿಸಿದರು.
ಸ್ಕೋರ್ ವಿವರ: 8-11, 11-8, 11-5, 7-11, 11-7
ದಾಖಲೆ: ಈ ಪ್ರಶಸ್ತಿ ಗೆಲ್ಲುವ ಮೂಲಕ ದಿವ್ಯಾಂಶಿ, ಡಬ್ಲ್ಯುಟಿಟಿ ಫೀಡರ್ ಮಹಿಳಾ ಸಿಂಗಲ್ಸ್ ಪ್ರಶಸ್ತಿ ಮುಡಿಗೇರಿಸಿಕೊಂಡ ಭಾರತದ ಅತಿ ಕಿರಿಯ ಆಟಗಾರ್ತಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.
ಜಾಗತಿಕ ಸಾಧನೆ: ಜಪಾನ್‌ನ ಖ್ಯಾತ ಆಟಗಾರ್ತಿ ಮಿವಾ ಹರಿಮೊಟೊ (Miwa Harimoto) ನಂತರ ಈ ಸರಣಿಯ ಸಿಂಗಲ್ಸ್ ಪ್ರಶಸ್ತಿ ಗೆದ್ದ ವಿಶ್ವದ ಎರಡನೇ ಅತಿ ಕಿರಿಯ ಆಟಗಾರ್ತಿ ದಿವ್ಯಾಂಶಿ ಆಗಿದ್ದಾರೆ.
➤ ಮಹಿಳಾ ಡಬಲ್ಸ್‌ನಲ್ಲೂ ಬಂಗಾರ: ಸಿಂಗಲ್ಸ್‌ನಲ್ಲಿ ಇತಿಹಾಸ ಬರೆದ ಬೆನ್ನಲ್ಲೇ ದಿವ್ಯಾಂಶಿ, ಮಹಿಳಾ ಡಬಲ್ಸ್‌ನಲ್ಲೂ ದೇಶದ ಮತ್ತೊಬ್ಬ ಯುವ ಪ್ರತಿಭೆ ಸಿಂಡ್ರೆಲಾ ದಾಸ್ (Syndrela Das) ಅವರೊಂದಿಗೆ ಜೊತೆಯಾಗಿ ಭಾರತಕ್ಕೆ ಎರಡನೇ ಚಿನ್ನದ ಪದಕ ತಂದುಕೊಟ್ಟರು.
ಫೈನಲ್ ಪಂದ್ಯದಲ್ಲಿ ಭಾರತದ ಈ ಜೋಡಿಯು ಜಪಾನ್‌ನ ಪ್ರಬಲ ಜೋಡಿಯಾದ ಸಾಚಿ ಅಯೋಕಿ ಮತ್ತು ಕೊಕೊನಾ ಮುರಾಮತ್ಸು (Sachi Aoki & Cocona Muramatsu) ಅವರನ್ನು 3-2 (7-11, 14-12, 12-14, 11-8, 11-7) ಗೇಮ್‌ಗಳಿಂದ ರೋಚಕವಾಗಿ ಸೋಲಿಸಿತು.
ಸುಮಾರು 30 ನಿಮಿಷಗಳ ಕಾಲ ನಡೆದ ಈ ತೀವ್ರ ಹಣಾಹಣಿಯಲ್ಲಿ ಒತ್ತಡದ ಸಂದರ್ಭದಲ್ಲೂ ಅದ್ಭುತ ಪ್ರದರ್ಶನ ನೀಡಿದ ಭಾರತೀಯ ಜೋಡಿ ಚಿನ್ನಕ್ಕೆ ಮುತ್ತಿಕ್ಕಿತು.






## ದೆಹಲಿ ಹೈಕೋರ್ಟ್‌ನಿಂದ 'ಮರೆಯುವ ಹಕ್ಕು' (Right to Be Forgotten) ಮಾರ್ಗಸೂಚಿ ಪ್ರಕಟ




➤ ಡಿಜಿಟಲ್ ಯುಗದಲ್ಲಿ ವೈಯಕ್ತಿಕ ಗೌಪ್ಯತೆಯನ್ನು ಕಾಪಾಡುವ ನಿಟ್ಟಿನಲ್ಲಿ ದೆಹಲಿ ಹೈಕೋರ್ಟ್ ಅತ್ಯಂತ ಮಹತ್ವದ ತೀರ್ಪೊಂದನ್ನು ನೀಡಿದೆ. ಇಂಟರ್ನೆಟ್ ಮತ್ತು ಕಾನೂನು ಡೇಟಾಬೇಸ್‌ಗಳಲ್ಲಿ ದಾಖಲಾಗಿರುವ ವೈಯಕ್ತಿಕ ವಿವರಗಳನ್ನು ಮರೆಮಾಚಲು (Masking) ಮತ್ತು ಡಿ-ಇಂಡೆಕ್ಸ್ (De-indexing) ಮಾಡಲು ದೆಹಲಿ ಹೈಕೋರ್ಟ್ ಸಮಗ್ರ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದೆ.
➤ ಮೇ 29, 2026 ರಂದು ದೆಹಲಿ ಹೈಕೋರ್ಟ್‌ನ ನ್ಯಾಯಮೂರ್ತಿ ಸಚಿನ್ ದತ್ತಾ ಅವರಿದ್ದ ಪೀಠವು ಈ ಕುರಿತು 144 ಪುಟಗಳ ಸುದೀರ್ಘ ತೀರ್ಪನ್ನು ಪ್ರಕಟಿಸಿದೆ. 2016 ರಿಂದ ಸಲ್ಲಿಕೆಯಾಗಿದ್ದ ಸುಮಾರು 30 ಕ್ಕೂ ಹೆಚ್ಚು ಅರ್ಜಿಗಳ ಜಂಟಿ ವಿಚಾರಣೆ ನಡೆಸಿದ ನ್ಯಾಯಾಲಯವು ಈ ಐತಿಹಾಸಿಕ ಆದೇಶ ನೀಡಿದೆ. ನ್ಯಾಯಾಲಯದ ಪ್ರಕಾರ, ಇಂಟರ್ನೆಟ್ ಸರ್ಚ್ ಎಂಜಿನ್‌ಗಳಲ್ಲಿ ಒಬ್ಬ ವ್ಯಕ್ತಿಯ ಹಳೆಯ ನ್ಯಾಯಾಂಗ ದಾಖಲೆಗಳು ನಿರಂತರವಾಗಿ ಲಭ್ಯವಿರುವುದು ಆತನ ಗೌಪ್ಯತೆಗೆ ಧಕ್ಕೆ ತರುತ್ತದೆ.
➤ ಸಂವಿಧಾನದ 21ನೇ ವಿಧಿ ಮತ್ತು ಮರೆಯುವ ಹಕ್ಕು: ದೆಹಲಿ ಹೈಕೋರ್ಟ್ ತನ್ನ ತೀರ್ಪಿನಲ್ಲಿ 'ಮರೆಯುವ ಹಕ್ಕು' (Right to be Forgotten) ಎಂಬುದು ಭಾರತೀಯ ಸಂವಿಧಾನದ 21 ನೇ ವಿಧಿಯಡಿ (ವಿಧಿ 21 - ಜೀವಿಸುವ ಮತ್ತು ವೈಯಕ್ತಿಕ ಸ್ವಾತಂತ್ರ್ಯದ ಹಕ್ಕು) ಬರುವ ಮೂಲಭೂತ ಗೌಪ್ಯತೆಯ ಹಕ್ಕಿನ (Right to Privacy) ಒಂದು ಅವಿಭಾಜ್ಯ ಅಂಗವಾಗಿದೆ ಎಂದು ಸ್ಪಷ್ಟಪಡಿಸಿದೆ.
➤ ಡಿ-ಇಂಡೆಕ್ಸಿಂಗ್ (De-indexing): ನ್ಯಾಯಾಲಯದ ಆದೇಶದ ಪ್ರಕಾರ, ಗೂಗಲ್ (Google) ನಂತಹ ಸರ್ಚ್ ಎಂಜಿನ್‌ಗಳು ಮತ್ತು 'ಇಂಡಿಯನ್ ಕಾನೂನು' (Indian Kanoon) ನಂತಹ ಕಾನೂನು ಮಾಹಿತಿ ವೆಬ್‌ಸೈಟ್‌ಗಳು ನಿರ್ದಿಷ್ಟ ಪ್ರಕರಣಗಳಲ್ಲಿ ವ್ಯಕ್ತಿಗಳ ಹೆಸರು ಆಧಾರಿತ ಸರ್ಚ್ ಫಲಿತಾಂಶಗಳನ್ನು ತೆಗೆದುಹಾಕಬೇಕು (De-index).
ಬದಲಾವಣೆ ಏನು?: ಗೂಗಲ್‌ನಲ್ಲಿ ವ್ಯಕ್ತಿಯ ಹೆಸರು ಹುಡುಕಿದಾಗ ಆ ತೀರ್ಪು ಕಾಣಿಸುವುದಿಲ್ಲ. ಆದರೆ, ಪ್ರಕರಣದ ಸಂಖ್ಯೆ ಅಥವಾ ಸೈಟೇಶನ್ (Citation) ಬಳಸಿ ಹುಡುಕಿದರೆ ತೀರ್ಪು ಲಭ್ಯವಿರುತ್ತದೆ. ಅಂದರೆ, ನ್ಯಾಯಾಲಯದ ಮೂಲ ದಾಖಲೆಗಳಿಂದ ತೀರ್ಪನ್ನು ಅಳಿಸುವುದಿಲ್ಲ, ಕೇವಲ ಸಾರ್ವಜನಿಕ ಸರ್ಚ್‌ನಿಂದ ಹೆಸರನ್ನು ಮರೆಮಾಡಲಾಗುತ್ತದೆ.
➤ ಈ ನಿಯಮ ಯಾರಿಗೆ ಅನ್ವಯಿಸುತ್ತದೆ?
ಕ್ರಿಮಿನಲ್ ಆರೋಪಗಳಿಂದ ಮುಕ್ತರಾದವರು (Acquitted) ಅಥವಾ ಖುಲಾಸೆಗೊಂಡವರು.
ಕೌಟುಂಬಿಕ ವಿವಾದಗಳು (Matrimonial Disputes) ಅಥವಾ ಸಂಪೂರ್ಣ ವೈಯಕ್ತಿಕ ಸಿವಿಲ್ ಪ್ರಕರಣಗಳಲ್ಲಿ ಭಾಗಿಯಾದವರು.
ನ್ಯಾಯಾಲಯದ ಆದೇಶಗಳಲ್ಲಿ ಪ್ರಾಸಂಗಿಕವಾಗಿ (Incidental) ಹೆಸರು ಉಲ್ಲೇಖಗೊಂಡಿರುವ ಇತರ ವ್ಯಕ್ತಿಗಳು.

## ವಾರಾಣಸಿಯಲ್ಲಿ 2ನೇ ಬ್ರಿಕ್ಸ್ ಸಾಂಸ್ಕೃತಿಕ ಕಾರ್ಯನಿರತ ಗುಂಪಿನ ಸಭೆ




➤ ಭಾರತದ ಅಧ್ಯಕ್ಷತೆಯಲ್ಲಿ ಉತ್ತರ ಪ್ರದೇಶದ ಪವಿತ್ರ ಮತ್ತು ಐತಿಹಾಸಿಕ ನಗರವಾದ ವಾರಾಣಸಿಯಲ್ಲಿ (ಕಾಶಿ) 2ನೇ ಬ್ರಿಕ್ಸ್ ಸಾಂಸ್ಕೃತಿಕ ಕಾರ್ಯನಿರತ ಗುಂಪಿನ (2nd BRICS Culture

Working Group - CWG) ಸಭೆ ಜೂನ್ 4 ಮತ್ತು 5 ರಂದು ಯಶಸ್ವಿಯಾಗಿ ಆಯೋಜನೆಗೊಳ್ಳುತ್ತಿದೆ. ಕೇಂದ್ರ ಸಾಂಸ್ಕೃತಿಕ ಸಚಿವಾಲಯದ ಕಾರ್ಯದರ್ಶಿ ವಿವೇಕ್ ಅಗರ್ವಾಲ್ ಅವರು ನವದೆಹಲಿಯಲ್ಲಿ ಈ ಮಹತ್ವದ ಸಭೆಯ ಅಧಿಕೃತ ವಿವರಗಳನ್ನು ಹಂಚಿಕೊಂಡಿದ್ದಾರೆ. ಬ್ರಿಕ್ಸ್ ಒಕ್ಕೂಟದ ವಿಸ್ತರಣೆಯ ನಂತರ ಸಾಂಸ್ಕೃತಿಕ ವಲಯದಲ್ಲಿ ನಡೆಯುತ್ತಿರುವ ಅತ್ಯಂತ ಪ್ರಮುಖ ಬಹುಪಕ್ಷೀಯ ಸಂವಾದ ಇದಾಗಿದೆ.

➤ **ಕೇಂದ್ರ ವಿಷಯ (Theme):** "ಸ್ಥಿತಿಸ್ಥಾಪಕತ್ವ, ನಾವೀನ್ಯತೆ, ಸಹಕಾರ ಮತ್ತು ಸುಸ್ಥಿರತೆಗಾಗಿ ನಿರ್ಮಾಣ" (Building for Resilience, Innovation, Cooperation and Sustainability).

➤ **ಭಾಗವಹಿಸುವ ದೇಶಗಳು:** ಬ್ರಿಕ್ಸ್‌ನ ಪ್ರಮುಖ ಸದಸ್ಯ ರಾಷ್ಟ್ರಗಳಾದ ಬ್ರೆಜಿಲ್, ರಷ್ಯಾ, ಭಾರತ, ಚೀನಾ ಮತ್ತು ದಕ್ಷಿಣ ಆಫ್ರಿಕಾ ಸೇರಿದಂತೆ ಇತ್ತೀಚೆಗೆ ಹೊಸದಾಗಿ ಸೇರ್ಪಡೆಯಾಗಿರುವ ಈಜಿಪ್ಟ್, ಇಥಿಯೋಪಿಯಾ, ಇರಾನ್, ಸೌದಿ ಅರೇಬಿಯಾ, ಯುಎಇ ಮತ್ತು ಇಂಡೋನೇಷ್ಯಾ ದೇಶಗಳ ಪ್ರತಿನಿಧಿಗಳು ಹಾಗೂ 10 ಹೊಸ ಪಾಲುದಾರ ದೇಶಗಳು ಭಾಗವಹಿಸುತ್ತಿವೆ.

➤ **ಚರ್ಚೆಯಾಗಲಿರುವ 3 ಪ್ರಮುಖ ಆದ್ಯತಾ ವಲಯಗಳು:**

- ಸೃಜನಾತ್ಮಕ ಆರ್ಥಿಕತೆ ಮತ್ತು ಕೃತಕ ಬುದ್ಧಿಮತ್ತೆ (Creative Economy & AI): ಸಾಂಸ್ಕೃತಿಕ ಮತ್ತು ಸೃಜನಶೀಲ ಉದ್ಯಮಗಳಲ್ಲಿ ತಂತ್ರಜ್ಞಾನ ಹಾಗೂ ಕೃತಕ ಬುದ್ಧಿಮತ್ತೆಯ (Artificial Intelligence) ನೈತಿಕ ಬಳಕೆ ಮತ್ತು ಹಕ್ಕುಸ್ವಾಮ್ಯ (Copyright) ರಕ್ಷಣೆ.
- ಸಾಂಸ್ಕೃತಿಕ ಪರಂಪರೆಯ ರಕ್ಷಣೆ (Heritage Protection): ಪ್ರಾಚೀನ ಸಾಂಸ್ಕೃತಿಕ ಪರಂಪರೆಗಳ ಸಂರಕ್ಷಣೆ ಮತ್ತು ಅಕ್ರಮವಾಗಿ ಸಾಗಿಸಲ್ಪಟ್ಟ ಸಾಂಸ್ಕೃತಿಕ ಆಸ್ತಿಗಳನ್ನು (Cultural Property) ತಮ್ಮ ಮೂಲ ದೇಶಗಳಿಗೆ ಮರಳಿ ತರುವುದು.
- ಸಂಸ್ಕೃತಿ ಮತ್ತು ಸುಸ್ಥಿರ ಅಭಿವೃದ್ಧಿ (Culture & Sustainable Development): ಹವಾಮಾನ ಬದಲಾವಣೆಯ ಸವಾಲುಗಳನ್ನು ಎದುರಿಸುವಲ್ಲಿ ಸಂಸ್ಕೃತಿಯ ಪಾತ್ರ ಮತ್ತು 2030 ರ ನಂತರದ ಜಾಗತಿಕ ಸುಸ್ಥಿರ ಅಭಿವೃದ್ಧಿ ಕಾರ್ಯಸೂಚಿಗೆ ಕೊಡುಗೆ ನೀಡುವುದು.

➤ ಬ್ರಿಕ್ಸ್ ಸಾಂಸ್ಕೃತಿಕ ಕಾರ್ಯನಿರತ ಗುಂಪಿನ (CWG) ಹಿನ್ನೆಲೆ: ಬ್ರಿಕ್ಸ್ ಸದಸ್ಯ ರಾಷ್ಟ್ರಗಳ ನಡುವೆ ಸಾಂಸ್ಕೃತಿಕ ಸಹಕಾರವನ್ನು ಹೆಚ್ಚಿಸುವ ಸಲುವಾಗಿ 2015 ರಲ್ಲಿ ಸಹಿ ಮಾಡಲಾದ ಒಪ್ಪಂದದ ಅಡಿಯಲ್ಲಿ ಈ ಸಾಂಸ್ಕೃತಿಕ ಕಾರ್ಯನಿರತ ಗುಂಪನ್ನು (Culture Working Group) ಸ್ಥಾಪಿಸಲಾಯಿತು. ಇದುವರೆಗೆ ವಸ್ತುಸಂಗ್ರಹಾಲಯಗಳು, ಚಲನಚಿತ್ರಗಳು, ಡಿಜಿಟಲ್ ಸಾಂಸ್ಕೃತಿಕ ಪರಿಸರ ವ್ಯವಸ್ಥೆ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ದೇಶಗಳ ನಡುವೆ ಬಾಂಧವ್ಯವನ್ನು ವೃದ್ಧಿಸಿದೆ.

➤ ಭಾರತವು ಈ ಹಿಂದೆ ತನ್ನ ಅಧ್ಯಕ್ಷತೆಯಲ್ಲಿ 2016 ರಲ್ಲಿ ಗೋವಾದಲ್ಲಿ ಹಾಗೂ 2021 ರಲ್ಲಿ ನವದೆಹಲಿಯಲ್ಲಿ ಬ್ರಿಕ್ಸ್ ಸಾಂಸ್ಕೃತಿಕ ಸಚಿವರ ಸಭೆಯನ್ನು ಯಶಸ್ವಿಯಾಗಿ ಆಯೋಜಿಸಿತ್ತು. ಪ್ರಸ್ತುತ ವರ್ಷದ ಮೊದಲ ಸಭೆಯು ಏಪ್ರಿಲ್ 29-30 ರಂದು ವರ್ಚುವಲ್ (Virtual) ಮಾಧ್ಯಮದ ಮೂಲಕ ನಡೆದಿತ್ತು. ವಾರಾಣಸಿಯ ನಂತರ 3ನೇ ಸಾಂಸ್ಕೃತಿಕ ಸಭೆಯು ಮಧ್ಯಪ್ರದೇಶದ ಭೋಪಾಲ್‌ನಲ್ಲಿ ಆಗಸ್ಟ್ ತಿಂಗಳಲ್ಲಿ ಆಯೋಜನೆಗೊಳ್ಳಲಿದೆ.

## ಭಾರತದ ಸಮುದ್ರ ಉತ್ಪನ್ನಗಳ ರಫ್ತು ಸಾರ್ವಕಾಲಿಕ ದಾಖಲೆ: FY 2025-26 ರಲ್ಲಿ ₹73,890 ಕೋಟಿ ಗಳಿಕೆ!




➤ ಜಾಗತಿಕ ಮಾರುಕಟ್ಟೆಯಲ್ಲಿನ ಕಠಿಣ ಸವಾಲುಗಳ ನಡುವೆಯೂ, ಭಾರತವು ಆರ್ಥಿಕ ವರ್ಷ (FY) 2025-26ರಲ್ಲಿ ಸಮುದ್ರ ಉತ್ಪನ್ನಗಳ (Seafood) ರಫ್ತಿನಲ್ಲಿ ಹಿಂದೆಂದೂ ಕಾಣದ ಸಾರ್ವಕಾಲಿಕ ದಾಖಲೆಯನ್ನು ಬರೆದಿದೆ. ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಅಡಿಯಲ್ಲಿ ಬರುವ ಸಮುದ್ರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ (MPEDA) ಇತ್ತೀಚೆಗೆ ಬಿಡುಗಡೆ ಮಾಡಿದ ಅಧಿಕೃತ ಮಾಹಿತಿಯ ಪ್ರಕಾರ, ಭಾರತವು ಈ ಅವಧಿಯಲ್ಲಿ ಬರೋಬ್ಬರಿ ₹73,890.46 ಕೋಟಿ (8.46 ಬಿಲಿಯನ್ ಯುಎಸ್ ಡಾಲರ್) ಮೌಲ್ಯದ ಸಮುದ್ರ ಉತ್ಪನ್ನಗಳನ್ನು ರಫ್ತು ಮಾಡಿದೆ.

➤ ಒಟ್ಟು ರಫ್ತು ಪ್ರಮಾಣ: ಭಾರತವು ಈ ವರ್ಷ ಒಟ್ಟು 19,72,018 ಮೆಟ್ರಿಕ್ ಟನ್ (MT) ಸಮುದ್ರ ಉತ್ಪನ್ನಗಳನ್ನು ಜಾಗತಿಕ ಮಾರುಕಟ್ಟೆಗೆ ರಫ್ತು ಮಾಡಿದೆ. ಇದು ರಫ್ತು ಪ್ರಮಾಣ (Volume) ಮತ್ತು ಮೌಲ್ಯ (Value) ಎರಡರಲ್ಲೂ ಹೊಸ ದಾಖಲೆಯಾಗಿದೆ.

➤ ಸೀಗಡಿ ರಫ್ತಿನದ್ದೇ ಮೇಲುಗೈ (Frozen Shrimp): ಭಾರತದ ಒಟ್ಟು ಸಮುದ್ರ ಉತ್ಪನ್ನಗಳ ರಫ್ತು ಆದಾಯದಲ್ಲಿ ಹೆಪ್ಪುಗಟ್ಟಿದ ಸೀಗಡಿಗಳು ಸಿಂಹಪಾಲು ಹೊಂದಿವೆ. ಇದು ಒಟ್ಟು ರಫ್ತು ಆದಾಯದ 66.52% ರಷ್ಟನ್ನು ಹಾಗೂ ಒಟ್ಟು ಪ್ರಮಾಣದ 40.19% ರಷ್ಟನ್ನು ಒಳಗೊಂಡಿದೆ. ಈ ರಫ್ತಿನ ಒಟ್ಟು ಮೌಲ್ಯ ₹49,037.93 ಕೋಟಿಗಳಾಗಿದೆ.

➤ ಪ್ರಮುಖ ಮಾರುಕಟ್ಟೆಗಳು: ಭಾರತೀಯ ಸಮುದ್ರ ಉತ್ಪನ್ನಗಳನ್ನು ಅತಿ ಹೆಚ್ಚು ಆಮದು ಮಾಡಿಕೊಳ್ಳುವ ದೇಶಗಳಾಗಿ ಅಮೆರಿಕ (USA) ಮತ್ತು ಚೀನಾ ಮೊದಲ ಎರಡು ಸ್ಥಾನಗಳಲ್ಲಿ ಮುಂದುವರಿದಿವೆ. ಮೌಲ್ಯದ ದೃಷ್ಟಿಯಿಂದ ಅಮೆರಿಕ ಮೊದಲ ಸ್ಥಾನದಲ್ಲಿದ್ದರೆ, ಆಮದು ಮಾಡಿಕೊಳ್ಳುವ ಪ್ರಮಾಣದ (Quantity) ದೃಷ್ಟಿಯಿಂದ ಚೀನಾ ಮೊದಲ ಸ್ಥಾನದಲ್ಲಿದೆ.

➤ ಇತರ ಪ್ರಮುಖ ರಫ್ತು ಉತ್ಪನ್ನಗಳು: ಎರಡನೇ ಸ್ಥಾನದಲ್ಲಿ ಹೆಪ್ಪುಗಟ್ಟಿದ ಮೀನುಗಳು (Frozen Fish - ₹5,658.37 ಕೋಟಿ) ಹಾಗೂ ಮೂರನೇ ಸ್ಥಾನದಲ್ಲಿ ಒಣಗಿಸಿದ ಸಮುದ್ರ ಉತ್ಪನ್ನಗಳು (Dried Seafood - ₹5,079.09 ಕೋಟಿ) ಇವೆ. ಒಣಗಿಸಿದ ಉತ್ಪನ್ನಗಳ ರಫ್ತು ರೂಪಾಯಿ ಮೌಲ್ಯದಲ್ಲಿ 78.05% ಭಾರಿ ಪ್ರಗತಿ ಕಂಡಿದೆ.

➤ **ಭಾರತೀಯ ಸಮುದ್ರ ಉತ್ಪನ್ನಗಳ ಪ್ರಮುಖ ಜಾಗತಿಕ ಮಾರುಕಟ್ಟೆಗಳು:**

1. ಅಮೆರಿಕ (USA) $ 2,328.74 ಮಿಲಿಯನ್
2. ಚೀನಾ (China) $ 1,611.32 ಮಿಲಿಯನ್
3. ಯುರೋಪಿಯನ್ ಯೂನಿಯನ್ (EU) $ 1,592.09 ಮಿಲಿಯನ್
4. ಆಗ್ನೇಯ ಏಷ್ಯಾ (Southeast Asia) $ 1,348.97 ಮಿಲಿಯನ್
5. ಜಪಾನ್ (Japan) $ 452.91 ಮಿಲಿಯನ್

➤ **ಅತಿ ಹೆಚ್ಚು ರಫ್ತು ನಿರ್ವಹಿಸಿದ ಭಾರತದ ಪ್ರಮುಖ ಬಂದರುಗಳು:**

1.ವಿಶಾಖಪಟ್ಟಣಂ ಬಂದರು (Vizag Port) - ಆಂಧ್ರಪ್ರದೇಶ
2.ಜವಾಹರಲಾಲ್ ನೆಹರು ಪೋರ್ಟ್ ಟ್ರಸ್ಟ್ (JNPT) - ಮಹಾರಾಷ್ಟ್ರ
3.ಕೊಚ್ಚಿ ಬಂದರು (Kochi Port) - ಕೇರಳ

## ಸುಪ್ರೀಂ ಕೋರ್ಟ್‌ಗೆ ಐವರು ಹೊಸ ನ್ಯಾಯಮೂರ್ತಿಗಳ ನೇಮಕ: ರಾಷ್ಟ್ರಪತಿ ಅಂಕಿತ!



➤ ಭಾರತೀಯ ಸಂವಿಧಾನದ ವಿಧಿ 124(2)ರ ಅಡಿಯಲ್ಲಿ ಮಾನ್ಯ ಭಾರತದ ರಾಷ್ಟ್ರಪತಿಗಳು ಜೂನ್ 1, 2026 ರಂದು ಅಧಿಕೃತ ಆದೇಶ ಹೊರಡಿಸುವ ಮೂಲಕ ಭಾರತದ ಸರ್ವೋಚ್ಚ ನ್ಯಾಯಾಲಯಕ್ಕೆ (Supreme Court of India) ಐವರು ಹೊಸ ನ್ಯಾಯಮೂರ್ತಿಗಳನ್ನು ನೇಮಕ ಮಾಡಿದ್ದಾರೆ.

➤ **ನೇಮಕಗೊಂಡ ಐವರು ಹೊಸ ನ್ಯಾಯಮೂರ್ತಿಗಳ ವಿವರಗಳು:ರಾಷ್ಟ್ರಪತಿಗಳ ಅನುಮೋದನೆ ಪಡೆದ ಐವರು**

**ನೂತನ ನ್ಯಾಯಮೂರ್ತಿಗಳ ಪಟ್ಟಿ ಮತ್ತು ಅವರು ಈ ಹಿಂದೆ ಸೇವೆ ಸಲ್ಲಿಸುತ್ತಿದ್ದ ಹೈಕೋರ್ಟ್‌ಗಳ ವಿವರ ಇಲ್ಲಿದೆ:**

1. ಶ್ರೀ ಜಸ್ಟಿಸ್ ಶೀಲ್ ನಾಗು: ಮುಖ್ಯ ನ್ಯಾಯಮೂರ್ತಿಗಳು, ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್
2. ಶ್ರೀ ಜಸ್ಟಿಸ್ ಶ್ರೀ ಚಂದ್ರಶೇಖರ್: ಮುಖ್ಯ ನ್ಯಾಯಮೂರ್ತಿಗಳು, ಬಾಂಬೆ ಹೈಕೋರ್ಟ್
3. ಶ್ರೀ ಜಸ್ಟಿಸ್ ಸಂಜೀವ್ ಸಚದೇವ್: ಮುಖ್ಯ ನ್ಯಾಯಮೂರ್ತಿಗಳು, ಮಧ್ಯಪ್ರದೇಶ ಹೈಕೋರ್ಟ್
4. ಶ್ರೀ ಜಸ್ಟಿಸ್ ಅರುಣ್ ಪಲ್ಲಿ: ಮುಖ್ಯ ನ್ಯಾಯಮೂರ್ತಿಗಳು, ಜಮ್ಮು ಮತ್ತು ಕಾಶ್ಮೀರ ಹಾಗೂ ಲಡಾಖ್ ಹೈಕೋರ್ಟ್
5. ಶ್ರೀಮತಿ ವೆಂಕಟ ಸುಬ್ರಮಣಿಯನ್ ಮೋಹನಾ: ಹಿರಿಯ ವಕೀಲರು (Senior Advocate)

➤ ಭಾರತದ ಮುಖ್ಯ ನ್ಯಾಯಮೂರ್ತಿಗಳ (CJI) ನೇತೃತ್ವದ ಕೊಲಿಜಿಯಂ ಸಮಿತಿಯು ನೀಡುವ ಶಿಫಾರಸಿನ ಆಧಾರದ ಮೇಲೆ ಕೇಂದ್ರ ಸರ್ಕಾರವು ಪರಿಶೀಲಿಸಿ, ರಾಷ್ಟ್ರಪತಿಗಳ ಅನುಮೋದನೆಗೆ ಕಳುಹಿಸುತ್ತದೆ.

## ಜೂನ್-2 : ತೆಲಂಗಾಣ ರಚನಾ ದಿನ 2026




➤ ಭಾರತದ ಕಿರಿಯ ರಾಜ್ಯಗಳಲ್ಲಿ ಒಂದಾದ ತೆಲಂಗಾಣವು ಜೂನ್ 2, 2026 ರಂದು ತನ್ನ 12ನೇ ರಾಜ್ಯ ರಚನಾ ದಿನವನ್ನು (12th Telangana Formation Day) ಆಚರಿಸುತ್ತಿದೆ. ಹತ್ತಾರು ವರ್ಷಗಳ ಸುದೀರ್ಘ ಹೋರಾಟ, ನೂರಾರು ಯುವಕರ ಬಲಿದಾನ ಹಾಗೂ ಜನರ ಅದಮ್ಯ ಸಂಕಲ್ಪದ ಫಲವಾಗಿ 2014ರ ಜೂನ್ 2 ರಂದು ತೆಲಂಗಾಣವು ಭಾರತದ 29ನೇ ರಾಜ್ಯವಾಗಿ ಅಧಿಕೃತವಾಗಿ ಅಸ್ತಿತ್ವಕ್ಕೆ ಬಂದಿತು.

➤ ತೆಲಂಗಾಣ ರಾಜ್ಯ ರಚನೆಯ ಇತಿಹಾಸ: ಬ್ರಿಟಿಷರ ಕಾಲದ ಹೈದರಾಬಾದ್ ಸಂಸ್ಥಾನದ ಭಾಗವಾಗಿದ್ದ ತೆಲಂಗಾಣವನ್ನು 1948ರ 'ಆಪರೇಷನ್ ಪೋಲೋ' ಮೂಲಕ ಭಾರತಕ್ಕೆ ಸೇರಿಸಿ, ನಂತರ 1956ರಲ್ಲಿ ಆಂಧ್ರಪ್ರದೇಶದೊಂದಿಗೆ ವಿಲೀನಗೊಳಿಸಲಾಯಿತಾದರೂ, ಸಂಪನ್ಮೂಲ ಮತ್ತು ಉದ್ಯೋಗ ಹಂಚಿಕೆಯಲ್ಲಿನ ತಾರತಮ್ಯದಿಂದಾಗಿ ಪ್ರತ್ಯೇಕ ರಾಜ್ಯದ ಹೋರಾಟ ಆರಂಭವಾಯಿತು.

➤ ಪ್ರತ್ಯೇಕ ರಾಜ್ಯ ಹೋರಾಟ ಮತ್ತು ಪ್ರಮುಖ ಘಟ್ಟಗಳು:

- 1969ರ ಜೈ ತೆಲಂಗಾಣ ಚಳವಳಿ: ತೆಲಂಗಾಣ ಪ್ರಜಾ ಸಮಿತಿ ನೇತೃತ್ವದಲ್ಲಿ ನಡೆದ ಈ ಹೋರಾಟ ತೀವ್ರ ಸ್ವರೂಪ ಪಡೆದುಕೊಂಡಿತ್ತು. ಆದರೆ ರಾಜಕೀಯ ಕಾರಣಗಳಿಂದ ಇದು ತಾತ್ಕಾಲಿಕವಾಗಿ ತಣ್ಣಗಾಗಿತ್ತು.
- 2001ರ ಹೊಸ ಪರ್ವ (KCR ಪ್ರವೇಶ): 2001ರಲ್ಲಿ ಕೆ. ಚಂದ್ರಶೇಖರ್ ರಾವ್ (KCR) ಅವರು ತೆಲಂಗಾಣ ರಾಷ್ಟ್ರ ಸಮಿತಿ (TRS) ಪಕ್ಷವನ್ನು ಸ್ಥಾಪಿಸುವ ಮೂಲಕ ಪ್ರತ್ಯೇಕ ರಾಜ್ಯದ ಬೇಡಿಕೆಯನ್ನು ಮುಖ್ಯ ರಾಜಕೀಯ ಅಜೆಂಡಾವನ್ನಾಗಿ ಮಾಡಿದರು.
- 2011ರ ಸಕಲ ಜನುಲ ಸಮ್ಮೆ (Sakala Janula Samme): ಇದು ತೆಲಂಗಾಣ ಇತಿಹಾಸದ ಅತಿ ದೊಡ್ಡ ಜನಪದ ಮುಷ್ಕರ. ನೌಕರರು, ವಿದ್ಯಾರ್ಥಿಗಳು, ರೈತರು ಮತ್ತು ಕಾರ್ಮಿಕರು ಸೇರಿದಂತೆ ಲಕ್ಷಾಂತರ ಜನರು ರಸ್ತೆಗಿಳಿದು ಹೋರಾಟಕ್ಕೆ ಬೆಂಬಲ ನೀಡಿದರು.

➤ ಸತತ ರಾಜಕೀಯ ಒತ್ತಡ ಹಾಗೂ ಸಾರ್ವಜನಿಕ ಹೋರಾಟಕ್ಕೆ ಮಣಿದ ಕೇಂದ್ರ ಸರ್ಕಾರವು 2014ರ ಫೆಬ್ರವರಿಯಲ್ಲಿ ಸಂಸತ್ತಿನಲ್ಲಿ ಆಂಧ್ರಪ್ರದೇಶ ಮರುಸಂಘಟನೆ ಕಾಯ್ದೆ, 2014 (Andhra Pradesh Reorganisation Act, 2014) ಅನ್ನು ಅಂಗೀಕರಿಸಿತು. ರಾಷ್ಟ್ರಪತಿಗಳ ಅಂಕಿತದ ನಂತರ, ಜೂನ್ 2, 2014 ರಂದು ತೆಲಂಗಾಣ ಅಧಿಕೃತವಾಗಿ ನೂತನ ರಾಜ್ಯವಾಗಿ ಉದಯಿಸಿತು. ಆರಂಭಿಕ 10 ವರ್ಷಗಳ ಅವಧಿಗೆ ಹೈದರಾಬಾದ್ ಅನ್ನು ಉಭಯ ರಾಜ್ಯಗಳ ಜಂಟಿ ರಾಜಧಾನಿಯನ್ನಾಗಿ ಮಾಡಲಾಗಿತ್ತು.

➤ 2026ರ ಜೂನ್ 2 ರಂದು ರಾಜ್ಯದಾದ್ಯಂತ 12ನೇ ವರ್ಷದ ಸಂಭ್ರಮಾಚರಣೆ ಸಡಗರದಿಂದ ನಡೆಯುತ್ತಿದೆ. ಪ್ರಸ್ತುತ ತೆಲಂಗಾಣದ ಮುಖ್ಯಮಂತ್ರಿಯಾಗಿರುವ ಎ. ರೇವಂತ್ ರೆಡ್ಡಿ ಅವರು ಹೈದರಾಬಾದ್‌ನ ಗನ್‌ಫೌಂಡ್ರಿಯಲ್ಲಿರುವ ತೆಲಂಗಾಣ ಹುತಾತ್ಮರ ಸ್ಮಾರಕಕ್ಕೆ (Telangana Martyrs Memorial) ಪುಷ್ಪ ನಮನ ಸಲ್ಲಿಸುವ ಮೂಲಕ ಅಧಿಕೃತ ಕಾರ್ಯಕ್ರಮಗಳಿಗೆ ಚಾಲನೆ ನೀಡಿದ್ದಾರೆ.

# 03 June 2026

## 21 ವರ್ಷಗಳ ಬಳಿಕ ಸರ್ಕಾರಿ ಬಸ್ ಸೇವೆ ಮರುಚಾಲನೆ ನೀಡಿದ ಮಧ್ಯಪ್ರದೇಶ




➤ ಮಧ್ಯಪ್ರದೇಶದ ಮುಖ್ಯಮಂತ್ರಿ ಮೋಹನ್ ಯಾದವ್ ಅವರು ಇತ್ತೀಚೆಗೆ ಘೋಷಿಸಿದಂತೆ, ಬರೋಬ್ಬರಿ 21 ವರ್ಷಗಳ ಸುದೀರ್ಘ ಅವಧಿಯ ನಂತರ ಸಾರ್ವಜನಿಕ-ಖಾಸಗಿ ಸಹಭಾಗಿತ್ವ (PPP) ಮಾದರಿಯಲ್ಲಿ 'ಮಧ್ಯಪ್ರದೇಶ ಪ್ಯಾಸೆಂಜರ್ ಟ್ರಾನ್ಸ್‌ಪೋರ್ಟ್ ಅಂಡ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ (MPPTIL)' ಸಂಸ್ಥೆಯ ಮೂಲಕ ಅನುಷ್ಠಾನಗೊಳ್ಳಲಿರುವ 'ಮುಖ್ಯಮಂತ್ರಿ ಸುಗಮ್ ಪರಿವಹನ್ ಸೇವೆ' ಎಂಬ ಮಹತ್ವಾಕಾಂಕ್ಷೆಯ ರಾಜ್ಯಾದ್ಯಂತದ ಹೊಸ ಸರ್ಕಾರಿ ಬಸ್ ಸೇವೆಗೆ ಮರುಚಾಲನೆ ನೀಡಲು ನಿರ್ಧರಿಸಲಾಗಿದ್ದು, ಇದು ಸ್ಪರ್ಧಾತ್ಮಕ ಪರೀಕ್ಷೆಗಳ ಪ್ರಚಲಿತ ವಿದ್ಯಮಾನಗಳ ದೃಷ್ಟಿಯಿಂದ ಅತ್ಯಂತ ಪ್ರಮುಖ ಬೆಳವಣಿಗೆಯಾಗಿದೆ.

➤ ಹಿಂದೆ ಮಧ್ಯಪ್ರದೇಶದಲ್ಲಿ ಮಧ್ಯಪ್ರದೇಶ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (MPSRTC) ಕಾರ್ಯನಿರ್ವಹಿಸುತ್ತಿತ್ತು. ಆದರೆ, ನಿರಂತರ ಆರ್ಥಿಕ ನಷ್ಟ ಮತ್ತು ಸಂಪನ್ಮೂಲಗಳ ಕೊರತೆಯ ಕಾರಣದಿಂದಾಗಿ, 2005ರಲ್ಲಿ ಅಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ (ಬಾಬುಲಾಲ್ ಗೌರ್ ಮುಖ್ಯಮಂತ್ರಿಯಾಗಿದ್ದಾಗ) ಈ ಸಂಸ್ಥೆಯನ್ನು ಸಂಪೂರ್ಣವಾಗಿ ಮುಚ್ಚಲಾಗಿತ್ತು. ಇದರಿಂದಾಗಿ ಕಳೆದ 21 ವರ್ಷಗಳಿಂದ ಮಧ್ಯಪ್ರದೇಶದ ಜನತೆ ಸಂಪೂರ್ಣವಾಗಿ ಖಾಸಗಿ ಬಸ್‌ಗಳು ಮತ್ತು ಖಾಸಗಿ ವಾಹನಗಳನ್ನೇ ಅವಲಂಬಿಸಬೇಕಾಗಿತ್ತು. ವಿಶೇಷವಾಗಿ ಗ್ರಾಮೀಣ ಮತ್ತು ಬುಡಕಟ್ಟು (Tribal) ಪ್ರದೇಶಗಳಲ್ಲಿ ಸಾರಿಗೆ ಸಂಪರ್ಕವಿಲ್ಲದೆ ಸಾರ್ವಜನಿಕರು ತೀವ್ರ ತೊಂದರೆ ಅನುಭವಿಸುತ್ತಿದ್ದರು.

➤ 'ಮುಖ್ಯಮಂತ್ರಿ ಸುಗಮ್ ಪರಿವಹನ್ ಸೇವೆ'ಯ ವೈಶಿಷ್ಟ್ಯಗಳು:

ಏಳು ಪ್ರಾದೇಶಿಕ ವಿಭಾಗಗಳು: ಇಡೀ ರಾಜ್ಯವನ್ನು ಇಂದೋರ್, ಉಜ್ಜಯಿನಿ, ಭೋಪಾಲ್, ಜಬಲ್ಪುರ್, ಸಾಗರ್, ಗ್ವಾಲಿಯರ್ ಮತ್ತು ರೇವಾ ಎಂಬ 7 ಪ್ರಮುಖ ವಲಯಗಳಾಗಿ ವಿಂಗಡಿಸಲಾಗಿದೆ. ಪ್ರತಿಯೊಂದು ವಲಯಕ್ಕೂ ಒಂದು ಅಂಗಸಂಸ್ಥೆ ಜವಾಬ್ದಾರಿಯಾಗಿರುತ್ತದೆ.

ಬಸ್‌ಗಳ ಸಂಖ್ಯೆ ಮತ್ತು ಮಾರ್ಗಗಳು: ಒಟ್ಟು 1,164 ಮಾರ್ಗಗಳಲ್ಲಿ (ನಗರದ ಒಳಗಿನ, ನಗರಗಳ ನಡುವಿನ ಮತ್ತು ಅಂತರ-ರಾಜ್ಯ) ಸುಮಾರು 5,206 ಬಸ್‌ಗಳನ್ನು ಕಾರ್ಯಾಚರಣೆಗೊಳಿಸಲು ಯೋಜನೆ ರೂಪಿಸಲಾಗಿದೆ.

ಮೊದಲ ಹಂತದ ಆರಂಭ: ಜುಲೈ ತಿಂಗಳಿನಲ್ಲಿ ಇಂದೋರ್ ವಲಯದಿಂದ ಈ ಸೇವೆಗೆ ಚಾಲನೆ ಸಿಗಲಿದೆ. ರಕ್ಷಾಬಂಧನ ಹಬ್ಬದ ವೇಳೆಗೆ ಮಹಿಳೆಯರಿಗೆ ಇದರ ಸಂಪೂರ್ಣ ಪ್ರಯೋಜನ ಸಿಗುವಂತೆ ಹಂತ ಹಂತವಾಗಿ ವಿಸ್ತರಿಸಲಾಗುವುದು.

ಅಂತರ-ರಾಜ್ಯ ಸಂಪರ್ಕ: ಈ ಯೋಜನೆಯಡಿ ಮಧ್ಯಪ್ರದೇಶದ ನೆರೆರಾಜ್ಯಗಳಾದ ಮಹಾರಾಷ್ಟ್ರ, ಗುಜರಾತ್, ರಾಜಸ್ಥಾನ ಮತ್ತು ಉತ್ತರ ಪ್ರದೇಶಗಳಿಗೂ ಬಸ್ ಸಂಪರ್ಕ ಕಲ್ಪಿಸಲಾಗುತ್ತದೆ.

ಪಿಎಂ ಇ-ಬಸ್ ಸೇವೆ (PM e-Bus Sewa): ಇದರೊಂದಿಗೆ ಇಂದೋರ್ ನಗರದಲ್ಲಿ ಪರಿಸರ ಸ್ನೇಹಿ 150 ಎಲೆಕ್ಟ್ರಿಕ್ ಬಸ್‌ಗಳ ಕಾರ್ಯಾಚರಣೆಯೂ ಶೀಘ್ರದಲ್ಲೇ ಆರಂಭವಾಗಲಿದೆ.

## ಆಂಥ್ರೋಪಿಕ್‌ನ 'ಮೈಥೋಸ್' ಸುಧಾರಿತ ಎಐ ಪ್ರೋಗ್ರಾಂಗೆ ಭಾರತ ಸೇರ್ಪಡೆ!




➤ ಜಾಗತಿಕ ಮಟ್ಟದಲ್ಲಿ ಕೃತಕ ಬುದ್ಧಿಮತ್ತೆ (Artificial Intelligence - AI) ತಂತ್ರಜ್ಞಾನ ವೇಗವಾಗಿ ಬೆಳೆಯುತ್ತಿದ್ದು, ಈ ನಿಟ್ಟಿನಲ್ಲಿ ಭಾರತವು ಮತ್ತೊಂದು ಪ್ರಮುಖ ಮೈಲಿಗಲ್ಲು ಸಾಧಿಸಿದೆ. ಪ್ರಸಿದ್ಧ ಜಾಗತಿಕ ಎಐ ಸಂಸ್ಥೆಯಾದ ಆಂಥ್ರೋಪಿಕ್ (Anthropic) ತನ್ನ ಅತ್ಯಂತ ಶಕ್ತಿಶಾಲಿ ಸೈಬರ್ ಭದ್ರತಾ ಎಐ ಮಾಡೆಲ್ ಆದ 'ಕ್ಲೋಡ್ ಮೈಥೋಸ್' (Claude Mythos) ಅನ್ನು ಭಾರತ ಸೇರಿದಂತೆ ವಿಶ್ವದ ಪ್ರಮುಖ 15ಕ್ಕೂ ಹೆಚ್ಚು ದೇಶಗಳಿಗೆ ವಿಸ್ತರಿಸುವುದಾಗಿ ಘೋಷಿಸಿದೆ. 'ಪ್ರಾಜೆಕ್ಟ್ ಗ್ಲಾಸ್‌ವಿಂಗ್' (Project Glasswing) ಅಡಿಯಲ್ಲಿ ಈ ಪ್ರೋಗ್ರಾಂ ಅನ್ನು ವಿಸ್ತರಿಸಲಾಗುತ್ತಿದ್ದು, ಭಾರತದ ಪ್ರಮುಖ ಮೂಲಸೌಕರ್ಯ ವಲಯಗಳ ಸುರಕ್ಷತೆಗೆ ಇದು ದಾರಿದೀಪವಾಗಲಿದೆ.

➤ ಆಂಥ್ರೋಪಿಕ್ ಸಂಸ್ಥೆಯು ಸೈಬರ್ ಭದ್ರತೆಯ ದೋಷಗಳನ್ನು (Cyber Security Vulnerabilities) ಮೊದಲೇ ಪತ್ತೆಹಚ್ಚಿ ಅವುಗಳನ್ನು ಸರಿಪಡಿಸಲು (Patch) ವಿನ್ಯಾಸಗೊಳಿಸಿರುವ ಅತ್ಯಂತ ಸುಧಾರಿತ ಎಐ ಮಾಡೆಲ್ ಇದಾಗಿದೆ. ಈ ಹಿಂದೆ ತಂತ್ರಜ್ಞಾನದ ದುರ್ಬಳಕೆಯಾಗುವ ಅಪಾಯವಿದ್ದದ್ದರಿಂದ ಇದನ್ನು ಸಾರ್ವಜನಿಕ ಮುಕ್ತ ಬಳಕೆಗೆ ನೀಡಿರಲಿಲ್ಲ. ಆದರೆ ಈಗ ಆಯ್ದ ದೇಶಗಳ 150 ಪ್ರಮುಖ ಸಂಸ್ಥೆಗಳಿಗೆ ಮಾತ್ರ ಇದರ ಪ್ರವೇಶಾವಕಾಶ ನೀಡಲಾಗುತ್ತಿದೆ. ಇದನ್ನು ಜಾಗತಿಕವಾಗಿ 'ಪ್ರಾಜೆಕ್ಟ್ ಗ್ಲಾಸ್‌ವಿಂಗ್' (Project Glasswing) ಎಂಬ ಉದ್ಯಮದ ಉಪಕ್ರಮದ ಅಡಿಯಲ್ಲಿ ವಿಸ್ತರಿಸಲಾಗುತ್ತಿದೆ.

**➤ ಯಾವೆಲ್ಲಾ ವಲಯಗಳಿಗೆ ಇದು ಅನ್ವಯಿಸುತ್ತದೆ?**

**ವಿದ್ಯುತ್ ಗ್ರಿಡ್‌ಗಳು (Power Grids)**

ಜಲ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆ (Water Systems)

ಆರೋಗ್ಯ ರಕ್ಷಣೆ (Healthcare)

ದೂರಸಂಪರ್ಕ ಮತ್ತು ತಾಂತ್ರಿಕ ಹಾರ್ಡ್‌ವೇರ್ (Telecommunications & Hardware)

ಹಣಕಾಸು ಸೇವೆಗಳು (Financial Services)

**➤ ಭಾರತ ಮತ್ತು ಆಂಥ್ರೋಪಿಕ್ ಸಂಸ್ಥೆಯ ಸಂಬಂಧ:**

ಭಾರತದಲ್ಲೇ ಮೊದಲ ಕಚೇರಿ: ಆಂಥ್ರೋಪಿಕ್ ಸಂಸ್ಥೆಯು ಅಮೆರಿಕಾದ ಹೊರಗೆ ತನ್ನ ಕಚೇರಿಯನ್ನು ತೆರೆಯಲು ಭಾರತವನ್ನು ಆಯ್ಕೆ ಮಾಡಿಕೊಂಡಿದ್ದು, ತಾಂತ್ರಿಕ ರಾಜಧಾನಿ ಬೆಂಗಳೂರಿನಲ್ಲಿ ತನ್ನ ಕಚೇರಿಯನ್ನು ಆರಂಭಿಸಿದೆ.

ದೊಡ್ಡ ಮಾರುಕಟ್ಟೆ: ಅಮೆರಿಕಾದ ನಂತರ ಭಾರತವೇ ಆಂಥ್ರೋಪಿಕ್‌ನ 'ಕ್ಲೋಡ್ ಎಐ' (Claude AI) ಸೇವೆಗಳನ್ನು ಬಳಸುವ ವಿಶ್ವದ ಎರಡನೇ ಅತಿ ದೊಡ್ಡ ದೇಶವಾಗಿದೆ.

ಕೋಡಿಂಗ್ ಬಳಕೆ: ಭಾರತದಲ್ಲಿ ಕಳೆದ ವರ್ಷಕ್ಕೆ ಹೋಲಿಸಿದರೆ ಕ್ಲೋಡ್ ಕೋಡಿಂಗ್ ಬಳಕೆಯು ಬರೋಬ್ಬರಿ 5 ಪಟ್ಟು ಹೆಚ್ಚಾಗಿದೆ.

➤ ಜಾಗತಿಕವಾಗಿ ಭಾಗವಹಿಸಿರುವ ಇತರ ಪ್ರಮುಖರು:

ಫೈವ್ ಐಸ್ (Five Eyes) ಒಕ್ಕೂಟ: ಕೆನಡಾ, ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್.

ಯುರೋಪಿಯನ್ ರಾಷ್ಟ್ರಗಳು: ಫ್ರಾನ್ಸ್, ಜರ್ಮನಿ, ಇಟಲಿ, ನೆದರ್ಲ್ಯಾಂಡ್ಸ್, ಸ್ಪೇನ್, ಸ್ವೀಡನ್.

ಏಷ್ಯಾದ ದೇಶಗಳು: ಜಪಾನ್ ಮತ್ತು ದಕ್ಷಿಣ ಕೊರಿಯಾ.

ಅಂತರರಾಷ್ಟ್ರೀಯ ಸಂಸ್ಥೆಗಳು: ನ್ಯಾಟೋ (NATO) ಮತ್ತು ಯುರೋಪಿಯನ್ ಯೂನಿಯನ್ ಸೈಬರ್ ಸೆಕ್ಯೂರಿಟಿ ಏಜೆನ್ಸಿ (ENISA).

## ಜೂನ್-3 : ವಿಶ್ವ ಬೈಸಿಕಲ್ ದಿನ




➤ ಪ್ರತಿ ವರ್ಷ ಜೂನ್ 3 ರಂದು ಜಾಗತಿಕವಾಗಿ ವಿಶ್ವ ಬೈಸಿಕಲ್ ದಿನವನ್ನು ಆಚರಿಸಲಾಗುತ್ತದೆ. ಬೈಸಿಕಲ್ ಅತ್ಯಂತ ಕೈಗೆಟುಕುವ, ಪರಿಸರ ಸ್ನೇಹಿ ಮತ್ತು ಆರೋಗ್ಯಕರ ಸಾರಿಗೆ ವ್ಯವಸ್ಥೆಯಾಗಿದೆ. 2026 ರ ವಿಶ್ವ ಬೈಸಿಕಲ್ ದಿನದ ಸಂದರ್ಭದಲ್ಲಿ, ಜಾಗತಿಕವಾಗಿ ನಗರಗಳು ಸೈಕ್ಲಿಂಗ್ ಸಂಸ್ಕೃತಿಯನ್ನು ಅಪ್ಪಿಕೊಳ್ಳುತ್ತಿದ್ದರೂ, ಸೈಕಲ್ ಸವಾರರಿಗೆ ಸುರಕ್ಷಿತ ರಸ್ತೆಗಳು ಮತ್ತು ಮೂಲಸೌಕರ್ಯಗಳ ಕೊರತೆ ಇನ್ನೂ ದೊಡ್ಡ ಸವಾಲಾಗಿ ಉಳಿದಿದೆ.

**➤ 2026 ರ ಘೋಷವಾಕ್ಯ (Theme): "ಹಸಿರು ಭವಿಷ್ಯಕ್ಕಾಗಿ ಸೈಕ್ಲಿಂಗ್" (Cycling for a Greener Future)**

➤ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು (UNGA) 2018 ರ ಏಪ್ರಿಲ್ 12 ರಂದು ಅಧಿಕೃತವಾಗಿ ಪ್ರತಿ ವರ್ಷ ಜೂನ್ 3 ರಂದು 'ಜಾಗತಿಕ ಬೈಸಿಕಲ್ ದಿನ' ಎಂದು ಘೋಷಿಸಿತು. ಅಂದಿನಿಂದ ಸತತವಾಗಿ ಈ ದಿನವನ್ನು ಆಚರಿಸಿಕೊಂಡು ಬರಲಾಗುತ್ತಿದೆ. ಯುಎಸ್‌ಎ ಮೂಲದ ಪ್ರೊಫೆಸರ್ ಲೆಸ್ಜೆಕ್ ಸಿಬಿಲ್ಸ್ಕಿ ಅವರು ವಿಶ್ವಸಂಸ್ಥೆಯಲ್ಲಿ ಬೈಸಿಕಲ್ ದಿನದ ಆಚರಣೆಗಾಗಿ ಜಾಗತಿಕ ಅಭಿಯಾನವನ್ನು ಮುನ್ನಡೆಸಿದರು.

➤ ಇತ್ತೀಚಿನ ವರದಿಗಳ ಪ್ರಕಾರ, ಮುಂಬೈ, ಬೆಂಗಳೂರು, ದೆಹಲಿ ಮತ್ತು ಪುಣೆಯಂತಹ ಭಾರತದ ಪ್ರಮುಖ ಮಹಾನಗರಗಳಲ್ಲಿ ಸೈಕ್ಲಿಂಗ್ ಪ್ರೇಮಿಗಳು ಮತ್ತು ಫಿಟ್‌ನೆಸ್ ಆಸಕ್ತರ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿದೆ. ಆದರೆ, ಸೈಕಲ್ ಓಡಿಸಲು ಸೂಕ್ತ ರಸ್ತೆಗಳಿಲ್ಲದಿರುವುದು ಇಂದಿಗೂ ದೊಡ್ಡ ಸಮಸ್ಯೆಯಾಗಿದೆ.

**➤ ಭಾರತ ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳು:**

ಪ್ರತ್ಯೇಕ ಸೈಕಲ್ ಟ್ರ್ಯಾಕ್‌ಗಳ ಕೊರತೆ: ಭಾರತದ ಬಹುತೇಕ ನಗರಗಳಲ್ಲಿ ಸೈಕಲ್ ಸವಾರರು ವೇಗವಾಗಿ ಚಲಿಸುವ ವಾಹನಗಳ ನಡುವೆಯೇ ಸವಾರಿ ಮಾಡಬೇಕಾದ ಅನಿವಾರ್ಯತೆ ಇದೆ.

ಸುರಕ್ಷತೆಯ ಆತಂಕ: ರಸ್ತೆ ಅಪಘಾತಗಳ ಭಯದಿಂದಾಗಿ ಅನೇಕರು ದಿನನಿತ್ಯದ ಕಚೇರಿ ಕೆಲಸಗಳಿಗೆ ಸೈಕಲ್ ಬಳಸಲು ಹಿಂಜರಿಯುತ್ತಿದ್ದಾರೆ.

ಒತ್ತುವರಿ ಮತ್ತು ಪಾರ್ಕಿಂಗ್ ಸಮಸ್ಯೆ: ಕೆಲವು ಕಡೆ ಇರುವ ಸೈಕಲ್ ಟ್ರ್ಯಾಕ್‌ಗಳು ಒತ್ತುವರಿಯಾಗುತ್ತಿವೆ ಮತ್ತು ಸುರಕ್ಷಿತ ಸೈಕಲ್ ಪಾರ್ಕಿಂಗ್ ವ್ಯವಸ್ಥೆ ಇಲ್ಲದಾಗಿದೆ.

**➤ ವಿಶ್ವದ ಪ್ರಮುಖ ಸೈಕಲ್ ಸ್ನೇಹಿ ನಗರಗಳು:**

ಉಟ್ರೆಕ್ಟ್ (ನೆದರ್ಲ್ಯಾಂಡ್ಸ್): ಇಲ್ಲಿನ ಅರ್ಧಕ್ಕಿಂತ ಹೆಚ್ಚು ನಿವಾಸಿಗಳು ಪ್ರತಿದಿನ ಬೈಸಿಕಲ್ ಬಳಸುತ್ತಾರೆ. ರೈಲ್ವೆ ನಿಲ್ದಾಣಗಳಲ್ಲಿ ಬೃಹತ್ ಸೈಕಲ್ ಪಾರ್ಕಿಂಗ್ ಹಬ್‌ಗಳನ್ನು ನಿರ್ಮಿಸಲಾಗಿದೆ.

ಕೋಪನ್ ಹ್ಯಾಗನ್ (ಡೆನ್ಮಾರ್ಕ್): ಇಲ್ಲಿ ಸೈಕಲ್ ಸವಾರರಿಗಾಗಿಯೇ ವಿಶೇಷ 'ಗ್ರೀನ್ ವೇವ್' ಟ್ರಾಫಿಕ್ ಸಿಗ್ನಲ್ ವ್ಯವಸ್ಥೆ ಇದೆ.

ಆಮ್ಸ್ಟರ್ಡ್ಯಾಮ್ (ನೆದರ್ಲ್ಯಾಂಡ್ಸ್): ಸುಮಾರು 560 ಕಿಲೋಮೀಟರ್ ಉದ್ದದ ಸುರಕ್ಷಿತ ಸೈಕಲ್ ಟ್ರ್ಯಾಕ್‌ಗಳನ್ನು ಹೊಂದಿರುವ ವಿಶ್ವದ ಪ್ರಸಿದ್ಧ ಸೈಕಲ್ ನಗರಿ.

ಪ್ಯಾರಿಸ್ (ಫ್ರಾನ್ಸ್): ಇತ್ತೀಚಿನ ವರ್ಷಗಳಲ್ಲಿ ಪ್ರತ್ಯೇಕ ಸೈಕಲ್ ಲೈನ್‌ಗಳನ್ನು ವೇಗವಾಗಿ ವಿಸ್ತರಿಸುವ ಮೂಲಕ ಸಾರಿಗೆ ಕ್ಷೇತ್ರದಲ್ಲಿ ಕ್ರಾಂತಿ ಸೃಷ್ಟಿಸಿದೆ.

## ಭಾರತ-ಅಮೆರಿಕ ದ್ವಿಪಕ್ಷೀಯ ವ್ಯಾಪಾರ ಒಪ್ಪಂದ 2026: ಅಂತಿಮ ಹಂತದ ಮಾತುಕತೆ ಆರಂಭ!



➤ ಭಾರತ ಮತ್ತು ಅಮೆರಿಕ (India-US) ನಡುವಿನ ಆರ್ಥಿಕ ಮತ್ತು ರಾಜತಾಂತ್ರಿಕ ಸಂಬಂಧಗಳಲ್ಲಿ ಮತ್ತೊಂದು ಐತಿಹಾಸಿಕ ಮೈಲಿಗಲ್ಲು ಸ್ಥಾಪನೆಯಾಗಲು ವೇದಿಕೆ ಸಿದ್ಧವಾಗಿದೆ. ಉಭಯ ದೇಶಗಳ ನಡುವಿನ ಬಹುನಿರೀಕ್ಷಿತ 'ದ್ವಿಪಕ್ಷೀಯ ದ್ವಿಪಕ್ಷೀಯ ಮುಕ್ತ ವ್ಯಾಪಾರ ಒಪ್ಪಂದ'ದ (Bilateral Trade Pact) ಮೊದಲ ಹಂತವನ್ನು ಅಂತಿಮಗೊಳಿಸಲು ಮೂರು ದಿನಗಳ ಉನ್ನತ ಮಟ್ಟದ ಮಾತುಕತೆಗಳು ಮಂಗಳವಾರದಿಂದ (ಜೂನ್ 2) ಆರಂಭವಾಗಿವೆ. ಜೂನ್ 4 ರವರೆಗೆ ಈ ಸಭೆ ನಡೆಯಲಿದೆ.

➤ 99% ಮಾತುಕತೆ ಪೂರ್ಣ: ಸಚಿವ ಪೀಯೂಷ್ ಗೋಯಲ್ ಹೇಳಿಕೆ: ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಅವರು ನೀಡಿರುವ ಮಾಹಿತಿ ಪ್ರಕಾರ, ಈ ಮಹತ್ವದ ಒಪ್ಪಂದದ ಶೇಕಡಾ 99 ರಷ್ಟು ಮಾತುಕತೆಗಳು ಈಗಾಗಲೇ ಯಶಸ್ವಿಯಾಗಿ ಪೂರ್ಣಗೊಂಡಿವೆ. ಪ್ರಸ್ತುತ ನಡೆಯುತ್ತಿರುವ ಸಭೆಯಲ್ಲಿ ಕೇವಲ ಕೆಲವು ತಾಂತ್ರಿಕ ಮತ್ತು ಕಾನೂನಾತ್ಮಕ ವಿಷಯಗಳ ಪರಿಹಾರದ ಕುರಿತು ಚರ್ಚಿಸಲಾಗುತ್ತಿದ್ದು, ಅತಿ ಶೀಘ್ರದಲ್ಲೇ ಮೊದಲ ಹಂತದ ಒಪ್ಪಂದಕ್ಕೆ ಉಭಯ ದೇಶಗಳು ಅಧಿಕೃತವಾಗಿ ಸಹಿ ಹಾಕಲಿವೆ.

**➤ ಸಭೆಯ ಮಾತುಕತೆಯ ನೇತೃತ್ವವನ್ನು ಕೆಳಗಿನ ಪ್ರಮುಖ ಅಧಿಕಾರಿಗಳು ವಹಿಸಿಕೊಂಡಿದ್ದಾರೆ:**

1. ಅಮೆರಿಕ ನಿಯೋಗದ ನೇತೃತ್ವ: ಬ್ರೆಂಡನ್ ಲಿಂಚ್ (Brendan Lynch - ಸಹಾಯಕ ಯುಎಸ್ ವ್ಯಾಪಾರ ಪ್ರತಿನಿಧಿ)
2. ಭಾರತದ ನಿಯೋಗದ ನೇತೃತ್ವ: ದರ್ಪಣ್ ಜೈನ್ (Darpan Jain - ವಾಣಿಜ್ಯ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ)

**➤ ಒಪ್ಪಂದದ ಪ್ರಮುಖ ಆದ್ಯತಾ ಕ್ಷೇತ್ರಗಳು:**

- ಮಾರುಕಟ್ಟೆ ಪ್ರವೇಶ:ಭಾರತೀಯ ಉತ್ಪನ್ನಗಳಿಗೆ ಅಮೆರಿಕದ ಮಾರುಕಟ್ಟೆಯಲ್ಲಿ ಸುಲಭ ಪ್ರವೇಶ ಕಲ್ಪಿಸುವುದು ಮತ್ತು ಸುಂಕಗಳನ್ನು (Tariffs) ಕಡಿತಗೊಳಿಸುವುದು.
- ಹೂಡಿಕೆ ಉತ್ತೇಜನ: ತಂತ್ರಜ್ಞಾನ, ರಕ್ಷಣೆ ಮತ್ತು ನವೀಕರಿಸಬಹುದಾದ ಇಂಧನ ಕ್ಷೇತ್ರಗಳಲ್ಲಿ ಅಮೆರಿಕದ ಹೂಡಿಕೆಯನ್ನು ಭಾರತಕ್ಕೆ ಆಕರ್ಷಿಸುವುದು.
- ಆರ್ಥಿಕ ಭದ್ರತೆ: ಜಾಗತಿಕ ಪೂರೈಕೆ ಸರಪಳಿಯನ್ನು (Supply Chain) ಬಲಪಡಿಸುವುದು ಮತ್ತು ಚೀನಾ ಮೇಲಿನ ಆರ್ಥಿಕ ಅವಲಂಬನೆಯನ್ನು ಕಡಿಮೆ ಮಾಡುವುದು.

**➤ ಭಾರತೀಯ ರಫ್ತುದಾರರಿಗೆ ಮತ್ತು ಆರ್ಥಿಕತೆಗೆ ಆಗುವ ಲಾಭಗಳು:**

- ರಫ್ತು ವಲಯಕ್ಕೆ ಬೂಸ್ಟ್: ಭಾರತೀಯ ಜವಳಿ (Textiles), ಔಷಧೀಯ ಉತ್ಪನ್ನಗಳು (Pharmaceuticals) ಮತ್ತು ಐಟಿ ಸೇವೆಗಳಿಗೆ ಅಮೆರಿಕದಲ್ಲಿ ಹೆಚ್ಚಿನ ಆದ್ಯತೆ ಸಿಗಲಿದೆ.
- ಉದ್ಯೋಗ ಸೃಷ್ಟಿ: ರಫ್ತು ಹೆಚ್ಚಾದಂತೆ ಭಾರತದ ಉತ್ಪಾದನಾ ವಲಯದಲ್ಲಿ (Manufacturing Sector) ಲಕ್ಷಾಂತರ ಹೊಸ ಉದ್ಯೋಗಗಳು ಸೃಷ್ಟಿಯಾಗಲಿವೆ.
- ಕೃಷಿ ರಫ್ತು: ಹೆಚ್ಚಳಭಾರತದ ಪ್ರಮುಖ ಕೃಷಿ ಉತ್ಪನ್ನಗಳು ಮತ್ತು ಸಮುದ್ರ ಆಹಾರಗಳಿಗೆ (Marine Products) ಅಮೆರಿಕದಲ್ಲಿ ಸುಲಭ ಮಾರುಕಟ್ಟೆ ಸಿಗಲಿದೆ.

## ವಿದೇಶಿಯರ ನೋಂದಣಿ ನಿಯಮಗಳಲ್ಲಿ ಮಹತ್ವದ ಬದಲಾವಣೆ: ಕೇಂದ್ರ ಗೃಹ ಸಚಿವಾಲಯದ ಹೊಸ ಆದೇಶದ ಸಮಗ್ರ ವಿಶ್ಲೇಷಣೆ




➤ ಇತ್ತೀಚೆಗೆ ಕೇಂದ್ರ ಗೃಹ ಸಚಿವಾಲಯವು ಭಾರತಕ್ಕೆ ಬರುವ ವಿದೇಶಿ ನಾಗರಿಕರ ನೋಂದಣಿ ಪ್ರಕ್ರಿಯೆಯನ್ನು ಸರಳಗೊಳಿಸುವ ಮತ್ತು ವಲಸೆ ವ್ಯವಸ್ಥೆಯನ್ನು ಮತ್ತಷ್ಟು ಸ್ಪಷ್ಟಪಡಿಸುವ ನಿಟ್ಟಿನಲ್ಲಿ ಒಂದು ಮಹತ್ವದ ಹೆಜ್ಜೆಯನ್ನಿಟ್ಟಿದೆ. ಸರ್ಕಾರವು ಅಧಿಕೃತವಾಗಿ "ವಲಸೆ ಮತ್ತು ವಿದೇಶಿಯರ (ತಿದ್ದುಪಡಿ) ನಿಯಮಗಳು, 2026" (Immigration and Foreigners Rules, 2026) ಅನ್ನು ಪ್ರಕಟಿಸಿದ್ದು, ಈ ಹೊಸ ನಿಯಮಗಳು ತಕ್ಷಣದಿಂದಲೇ ಜಾರಿಗೆ ಬರಲಿವೆ. ಭಾರತದ ಇಮಿಗ್ರೇಷನ್ ವ್ಯವಸ್ಥೆಯನ್ನು ಆಧುನೀಕರಿಸಲು, ಡಿಜಿಟಲೀಕರಣಗೊಳಿಸಲು ಮತ್ತು ಆಡಳಿತದಲ್ಲಿ ಪಾರದರ್ಶಕತೆ ತರಲು ಈ ಬದಲಾವಣೆಗಳನ್ನು ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

**➤ ನೋಂದಣಿ ಅವಧಿ ವಿಸ್ತರಣೆ**:

**➤ ದೇಶದಲ್ಲಿ ಬಾಲ್ಯವಿವಾಹದ ಆತಂಕಕಾರಿ ಸ್ಥಿತಿ:** ಕಾನೂನಾತ್ಮಕವಾಗಿ ಬಾಲ್ಯವಿವಾಹ ನಿಷೇಧವಾಗಿದ್ದರೂ, ದೇಶದಲ್ಲಿ ಇಂದಿಗೂ ಶೇಕಡಾ 2.1% ರಷ್ಟು ಬಾಲಕಿಯರು ಕಾನೂನು ನಿಗದಿಪಡಿಸಿದ ವಯಸ್ಸಿಗಿಂತಲೂ (18 ವರ್ಷ) ಮೊದಲೇ ಮದುವೆಯಾಗುತ್ತಿದ್ದಾರೆ ಎಂದು ಸಮೀಕ್ಷೆ ಬಹಿರಂಗಪಡಿಸಿದೆ.

ಬಾಲ್ಯವಿವಾಹ ಹೆಚ್ಚಿರುವ ಮತ್ತು ಕಡಿಮೆ ಇರುವ ರಾಜ್ಯಗಳು:

- ಗರಿಷ್ಠ ಬಾಲ್ಯವಿವಾಹ: ಜಾರ್ಖಂಡ್ (6.3%) ಮತ್ತು ಪಶ್ಚಿಮ ಬಂಗಾಳ (4.9%).
- ಕನಿಷ್ಠ ಬಾಲ್ಯವಿವಾಹ: ಹರಿಯಾಣ (0.07%) ಮತ್ತು ಹಿಮಾಚಲ ಪ್ರದೇಶ (0.04%).

**➤ ವಯಸ್ಸಿನ ಆಧಾರದಲ್ಲಿ ಯುವತಿಯರ ವಿವಾಹ ಪ್ರಮಾಣ:**

- 18 ಕ್ಕಿಂತ ಕಡಿಮೆ ವಯಸ್ಸು: 2.1%
- 18 ರಿಂದ 20 ನೇ ವಯಸ್ಸು: 24.5%
- 21 ವರ್ಷಗಳ ನಂತರ: 73.5%

**➤ ಯುವತಿಯರ ಮದುವೆಯ ಸರಾಸರಿ ವಯಸ್ಸು:** ದೇಶಾದ್ಯಂತ ಯುವತಿಯರ ವಿವಾಹದ ಸರಾಸರಿ ವಯಸ್ಸಿನಲ್ಲಿ ಗಮನಾರ್ಹ ಪ್ರಗತಿ ಕಂಡುಬಂದಿದ್ದು, ರಾಷ್ಟ್ರೀಯ ಸರಾಸರಿ ವಯಸ್ಸು 23.1 ವರ್ಷಗಳಿಗೆ ತಲುಪಿದೆ.

- ಗ್ರಾಮೀಣ ಭಾಗದ ಸರಾಸರಿ ವಯಸ್ಸು: 22.6 ವರ್ಷ
- ನಗರ ಭಾಗದ ಸರಾಸರಿ ವಯಸ್ಸು: 24.4 ವರ್ಷ

**➤ ಕರ್ನಾಟಕ ಮತ್ತು ಕೇರಳದ ಸ್ಥಿತಿ:** ದಕ್ಷಿಣ ಭಾರತದಲ್ಲಿ ಹೆಣ್ಣುಮಕ್ಕಳ ಉನ್ನತ ಶಿಕ್ಷಣ ಮತ್ತು ವೃತ್ತಿಜೀವನಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿರುವುದರಿಂದ ವಿವಾಹದ ಸರಾಸರಿ ವಯಸ್ಸು ಹೆಚ್ಚಾಗಿದೆ.

- ಕೇರಳ: 25.1 ವರ್ಷ
- ಕರ್ನಾಟಕ: 24.8 ವರ್ಷ

## ಧರತಿ ಅಬಾ ಭಗವಾನ್ ಬಿರ್ಸಾ ಮುಂಡಾ ಪುಣ್ಯಸ್ಮರಣೆ: ಬ್ರಿಟಿಷರ ನಡುಗಿಸಿದ 'ಉಲ್ಗುಲಾನ್' ಮಹಾ ಕ್ರಾಂತಿಯ ಇತಿಹಾಸ



➤ ಭಾರತದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಜೂನ್ 9 ಪ್ರತಿಯೊಬ್ಬ ಭಾರತೀಯನೂ ಹೆಮ್ಮೆಯಿಂದ ನೆನಪಿಸಿಕೊಳ್ಳಬೇಕಾದ ದಿನ. ಕೇವಲ 24 ವರ್ಷದ ಪ್ರಾಯದಲ್ಲೇ ವಸಾಹತುಶಾಹಿ ಬ್ರಿಟಿಷ್ ಸಾಮ್ರಾಜ್ಯದ ಅಡಿಪಾಯವನ್ನೇ ನಡುಗಿಸಿದ ಅಪ್ರತಿಮ ಬುಡಕಟ್ಟು ವೀರ, ಜಾನಪದ ನಾಯಕ ಭಗವಾನ್ ಬಿರ್ಸಾ ಮುಂಡಾ ಅವರು ರಾಂಚಿಯ ಜೈಲಿನಲ್ಲಿ ಹುತಾತ್ಮರಾದ ದಿನವಿದು. ಶೋಷಿತರ, ಬುಡಕಟ್ಟು ಜನಾಂಗದ ಹಕ್ಕುಗಳಿಗಾಗಿ ಮತ್ತು ಧಾರ್ಮಿಕ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಈ ಮಹಾನ್ ಚೇತನವನ್ನು ಅವರ ಸಮುದಾಯದ ಜನ ಪ್ರೀತಿಯಿಂದ 'ಧರತಿ ಅಬಾ' (ಜಗದ ತಂದೆ) ಎಂದೇ ಪೂಜಿಸುತ್ತಾರೆ.

**➤ ಬಾಲ್ಯ ಮತ್ತು ಧಾರ್ಮಿಕ ಸುಧಾರಣೆ (Birsait Faith):** ಬಿರ್ಸಾ ಮುಂಡಾ ಅವರು ನವೆಂಬರ್ 15, 1875 ರಂದು ಇಂದಿನ ಜಾರ್ಖಂಡ್‌ನ ಖುಂಟಿ ಜಿಲ್ಲೆಯ ಉಲಿಹತು ಗ್ರಾಮದಲ್ಲಿ ಜನಿಸಿದರು. ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಆಡಳಿತದಲ್ಲಿ ಬುಡಕಟ್ಟು ಜನರ ಜಮೀನುಗಳನ್ನು ಕಬಳಿಸುವ ಪ್ರಕ್ರಿಯೆ ತೀವ್ರವಾಗಿದ್ದ ಕಾಲವದು. ಆರಂಭದಲ್ಲಿ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರವಾಗಿದ್ದ ಬಿರ್ಸಾ ಮುಂಡಾ, ನಂತರ ಬ್ರಿಟಿಷರ ಸಾಂಸ್ಕೃತಿಕ ನಾಶದ ಕುತಂತ್ರವನ್ನು ಅರಿತು ಮಿಷನರಿ ತೊರೆದು, ಮೂಢನಂಬಿಕೆ ಹಾಗೂ ಮದ್ಯಪಾನ ಮುಕ್ತ ಸಮಾಜಕ್ಕಾಗಿ 'ಬಿರ್ಸಾಯಿತ್' ಎಂಬ ಹೊಸ ಧರ್ಮವನ್ನು ಸ್ಥಾಪಿಸಿ ಇಡೀ ಮುಂಡಾ ಬುಡಕಟ್ಟು ಸಮುದಾಯವನ್ನು ಸಂಘಟಿಸಿದರು.

**➤ ಇತಿಹಾಸ ಪ್ರಸಿದ್ಧ 'ಉಲ್ಗುಲಾನ್' ಮಹಾ ದಂಗೆ:**
19ನೇ ಶತಮಾನದ ಕೊನೆಯಲ್ಲಿ ಬ್ರಿಟಿಷರು ಸಾಂಪ್ರದಾಯಿಕ ಜಂಟಿ ಭೂಹಿಡುವಳಿ ಪದ್ಧತಿಯಾದ 'ಖುಂಟ್‌ಕಟ್ಟಿ' (Khuntkatti System) ವ್ಯವಸ್ಥೆಯನ್ನು ರದ್ದುಗೊಳಿಸಿ, ಜಮೀನ್ದಾರಿ ಪದ್ಧತಿಯನ್ನು ಜಾರಿಗೆ ತಂದರು. ಇದರಿಂದಾಗಿ ಕಾಡಿನ ಮಕ್ಕಳಾದ ಬುಡಕಟ್ಟು ಜನರು ತಮ್ಮದೇ ಭೂಮಿಯಲ್ಲಿ ಜೀತದಾಳುಗಳಾಗಬೇಕಾಯಿತು. ಹೊರಗಿನಿಂದ ಬಂದು ಶೋಷಣೆ ಮಾಡುತ್ತಿದ್ದ ಲೇವಾದೇವಿಗಾರರು ಮತ್ತು ಬ್ರಿಟಿಷರನ್ನು ಬಿರ್ಸಾ ಮುಂಡಾ 'ದಿಕುಗಳು' (Dikus - ಹೊರಗಿನವರು) ಎಂದು ಕರೆದರು. ಈ ಶೋಷಣೆಯ ವಿರುದ್ಧ 1899-1900ರ ಅವಧಿಯಲ್ಲಿ ಬಿರ್ಸಾ ಮುಂಡಾ ಹೂಡಿದ ರಣಕಹಳೆಯೇ ಇತಿಹಾಸ ಪ್ರಸಿದ್ಧ 'ಉಲ್ಗುಲಾನ್' (Ulgulan - ಮಹಾ ದಂಗೆ).

**➤ ಬಿರ್ಸಾ ಮುಂಡಾ ಅವರ ಐತಿಹಾಸಿಕ ಘೋಷಣೆ:** "ಅಬುಆ ರಾಜ್ ಸೆಟರ್ ಜಾನಾ, ಮಹಾರಾಣಿ ರಾಜ್ ತುಂಡು ಜಾನಾ" (ಅಂದರೆ: "ರಾಣಿಯ ಆಡಳಿತ ಕೊನೆಗೊಳ್ಳಲಿ, ನಮ್ಮದೇ ಸ್ವಯಂ ಆಡಳಿತ ಸ್ಥಾಪನೆಯಾಗಲಿ").

➤ ಚಿಕ್ಕ ವಯಸ್ಸಿನಲ್ಲೇ ಬಲಿದಾನ ಮತ್ತು ಅಮರ ಪರಂಪರೆ: ಬಿರ್ಸಾ ಮುಂಡಾ ಅವರ ಹೋರಾಟವನ್ನು ಹತ್ತಿಕ್ಕಲು ಸಾಧ್ಯವಾಗದ ಬ್ರಿಟಿಷ್ ಸರ್ಕಾರ, ಅಂತಿಮವಾಗಿ ಮಾರ್ಚ್ 1900 ರಲ್ಲಿ ಜಮ್‌ಕೋಪೈ ಅರಣ್ಯದಲ್ಲಿ ಅವರು ಮಲಗಿದ್ದಾಗ ಉಪಾಯದಿಂದ ಬಂಧಿಸಿತು. ರಾಂಚಿಯ ಕಾರಾಗೃಹದ ಕತ್ತಲಕೋಣೆಯಲ್ಲಿ ಇಡಲ್ಪಟ್ಟ ಈ 24 ವರ್ಷದ ಯುವ ನಾಯಕ, ಜೂನ್ 9, 1900 ರಂದು ರಹಸ್ಯ ಸಂದರ್ಭದಲ್ಲಿ (ಬ್ರಿಟಿಷರ ಪ್ರಕಾರ ಕಾಲರಾ ರೋಗದಿಂದ, ಆದರೆ ವಿಷ ಉಣಿಸಿ ಕಲ್ಲಲಾಯಿತು ಎಂಬ ಬಲವಾದ ಶಂಕೆಯಿದೆ) ಕೊನೆಯುಸಿರೆಳೆದರು.

➤ ಅವರು ಹಚ್ಚಿದ ಕ್ರಾಂತಿಯ ಜ್ವಾಲೆ ಎಷ್ಟಿತ್ತೆಂದರೆ, ಅವರ ಮರಣದ ನಂತರ ಬ್ರಿಟಿಷ್ ಸರ್ಕಾರವು ಬುಡಕಟ್ಟು ಜನರ ಭೂಮಿಯನ್ನು ರಕ್ಷಿಸಲು 1908ರ ಛೋಟಾನಾಗ್‌ಪುರ್ ಗೇಣಿ ಕಾಯ್ದೆ (Chhotanagpur Tenancy Act - CNT) ಜಾರಿಗೆ ತರಲೇಬೇಕಾಯಿತು. ಈ ಕಾಯ್ದೆಯು ಬುಡಕಟ್ಟು ಜಮೀನನ್ನು ಆ ಕಮ್ಯುನಿಟಿಯಲ್ಲದ ಹೊರಗಿನವರಿಗೆ ವರ್ಗಾವಣೆ ಮಾಡುವುದನ್ನು ಕಡ್ಡಾಯವಾಗಿ ನಿಷೇಧಿಸಿತು.

➤ ಬುಡಕಟ್ಟು ಜನರ ಹಕ್ಕುಗಳ ಹೋರಾಟಕ್ಕೆ ದಾರಿದೀಪವಾದ ಬಿರ್ಸಾ ಮುಂಡಾ ಅವರ ನೆನಪಿನಲ್ಲಿ, ಭಾರತ ಸರ್ಕಾರವು ಅವರ ಜನ್ಮದಿನವಾದ ನವೆಂಬರ್ 15 ಅನ್ನು ದೇಶಾದ್ಯಂತ 'ಜನಜಾತೀಯ ಗೌರವ್ ದಿವಸ್' (ಬುಡಕಟ್ಟು ಹೆಮ್ಮೆಯ ದಿನ) ಎಂದು ಆಚರಿಸುತ್ತಿದೆ.

## ದೇಶಾದ್ಯಂತ 58.15 ಕೋಟಿಗೆ ತಲುಪಿದ ಜನ ಧನ್ ಖಾತೆಗಳ ಸಂಖ್ಯೆ – ಒಟ್ಟು ಠೇವಣಿ ₹3 ಲಕ್ಷ ಕೋಟಿ!




➤ ಕೇಂದ್ರ ಹಣಕಾಸು ಸಚಿವಾಲಯದ ಇತ್ತೀಚಿನ ಅಧಿಕೃತ ವರದಿಯ ಪ್ರಕಾರ, ದೇಶದ ಬಡವರಿಗಾಗಿ ಆರಂಭಿಸಲಾದ ಮಹತ್ವಾಕಾಂಕ್ಷಿ ಪ್ರಧಾನ ಮಂತ್ರಿ ಜನ ಧನ್ ಯೋಜನೆ (PMJDY) ಅಡಿಯಲ್ಲಿ ತೆರೆಯಲಾದ ಒಟ್ಟು ಬ್ಯಾಂಕ್ ಖಾತೆಗಳ ಸಂಖ್ಯೆ 58.15 ಕೋಟಿಯ ಮೈಲಿಗಲ್ಲನ್ನು ತಲುಪಿದೆ. ಇದರೊಂದಿಗೆ ಈ ಖಾತೆಗಳಲ್ಲಿನ ಒಟ್ಟು ಠೇವಣಿ ಮೊತ್ತವು ಬರೋಬ್ಬರಿ 3 ಲಕ್ಷ ಕೋಟಿ ರೂಪಾಯಿಗಳಿಗೆ ಏರಿಕೆಯಾಗಿದೆ ಎಂದು ವರದಿ ತಿಳಿಸಿದೆ.

**➤ ಮಹಿಳಾ ಸಬಲೀಕರಣ ಮತ್ತು ಗ್ರಾಮೀಣ ಪ್ರಗತಿ:**
ಮಹಿಳೆಯರ ಪಾಲುದಾರಿಕೆ: ಒಟ್ಟು ಜನ ಧನ್ ಖಾತೆಗಳ ಪೈಕಿ ಶೇಕಡಾ 56 ರಷ್ಟು ಖಾತೆಗಳು ಮಹಿಳೆಯರ ಹೆಸರಿನಲ್ಲಿವೆ. ಇದು ಆರ್ಥಿಕ ಸಬಲೀಕರಣದಲ್ಲಿ ಮಹಿಳೆಯರ ಮುಂಚೂಣಿಯನ್ನು ತೋರಿಸುತ್ತದೆ.
ಗ್ರಾಮೀಣ ಭಾಗದ ಸಾಧನೆ: ತೆರೆಯಲಾದ ಒಟ್ಟು ಖಾತೆಗಳಲ್ಲಿ ಶೇ. 67 ಕ್ಕೂ ಹೆಚ್ಚು ಖಾತೆಗಳು ಗ್ರಾಮೀಣ ಮತ್ತು ಅರೆ-ಗ್ರಾಮೀಣ ಪ್ರದೇಶಗಳಲ್ಲಿವೆ.

**➤ 'ಜಾಮ್ ತ್ರಿಶಕ್ತಿ' (JAM Trinity) ಮತ್ತು ಸೋರಿಕೆ ರಹಿತ ಆಡಳಿತ:**
ಜನ ಧನ್ ಯೋಜನೆ (Jan Dhan), ಆಧಾರ್ (Aadhaar) ಮತ್ತು ಮೊಬೈಲ್ ಸಂಖ್ಯೆ (Mobile) – ಇವುಗಳನ್ನು ಒಳಗೊಂಡಿರುವ 'ಜಾಮ್ (JAM) ತ್ರಿಶಕ್ತಿ' ವ್ಯವಸ್ಥೆಯು ಕಲ್ಯಾಣ ಯೋಜನೆಗಳ ಹಣವನ್ನು ಯಾವುದೇ ಮಧ್ಯವರ್ತಿಗಳಿಲ್ಲದೆ, ನೇರವಾಗಿ ಫಲಾನುಭವಿಗಳ ಖಾತೆಗೆ ವರ್ಗಾಯಿಸಲು (Direct Benefit Transfer - DBT) ಯಶಸ್ವಿಯಾಗಿದೆ.

**➤ ಆರೋಗ್ಯ ರಕ್ಷಣೆಯಲ್ಲಿ ಕ್ರಾಂತಿ: ಆಯುಷ್ಮಾನ್ ಭಾರತ್:**
ಆಯುಷ್ಮಾನ್ ಕಾರ್ಡ್‌ಗಳ ಸಂಖ್ಯೆ: ದೇಶದಲ್ಲಿ ವಿತರಿಸಲಾದ ಆಯುಷ್ಮಾನ್ ಕಾರ್ಡ್‌ಗಳ ಒಟ್ಟು ಸಂಖ್ಯೆ 44 ಕೋಟಿಗೆ ತಲುಪಿದೆ.
ವಿಮೆ ಸೌಲಭ್ಯ: ಈ ಯೋಜನೆಯು ದೇಶದ ಶೇ. 40 ರಷ್ಟು ಕೆಳಸ್ತರದ ಜನಸಂಖ್ಯೆಯನ್ನು ಒಳಗೊಂಡಿರುವ 12 ಕೋಟಿ ಕುಟುಂಬಗಳಿಗೆ ವಾರ್ಷಿಕ 5 ಲಕ್ಷ ರೂ.ಗಳ ಉಚಿತ ವೈದ್ಯಕೀಯ ವಿಮೆಯನ್ನು ಒದಗಿಸುತ್ತಿದೆ.
ಹೊಸ ಸೇರ್ಪಡೆ: ಇತ್ತೀಚೆಗೆ ಆಶಾ (ASHA) ಮತ್ತು ಅಂಗನವಾಡಿ ಕಾರ್ಯಕರ್ತೆಯರ 37 ಲಕ್ಷ ಕುಟುಂಬಗಳನ್ನು ಹಾಗೂ 70 ವರ್ಷ ಮೇಲ್ಪಟ್ಟ 6 ಕೋಟಿ ಹಿರಿಯ ನಾಗರಿಕರನ್ನು ಈ ಯೋಜನೆಯ ವ್ಯಾಪ್ತಿಗೆ ತರಲಾಗಿದೆ.

**➤ ಮೂಲಸೌಕರ್ಯ ವಲಯದ ಇತರೆ ಪ್ರಮುಖ ಸಾಧನೆಗಳು:**
- ಕುಡಿಯುವ ನೀರು: ಬಡವರಿಗೆ 15.7 ಕೋಟಿ ಮನೆಗಳಿಗೆ ನಳದ (ನಲ್ಲಿ) ನೀರು ಸಂಪರ್ಕ ಕಲ್ಪಿಸಲಾಗಿದೆ.
- ಸ್ವಚ್ಛ ಭಾರತ ಅಭಿಯಾನ: ದೇಶಾದ್ಯಂತ 12 ಕೋಟಿಗೂ ಹೆಚ್ಚು ಶೌಚಾಲಯಗಳ ನಿರ್ಮಾಣ ಮಾಡಲಾಗಿದೆ.
- ಸೌಭಾಗ್ಯ ಯೋಜನೆ: ದೇಶದ 2.9 ಕೋಟಿ ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ.

➤ **ಪ್ರಧಾನ ಮಂತ್ರಿ ಜನ ಧನ್ ಯೋಜನೆ (PMJDY):** ಆಗಸ್ಟ್ 28, 2014 ರಂದು ಪ್ರಾರಂಭವಾದ ಈ ಯೋಜನೆಯು ಶೂನ್ಯ ಬ್ಯಾಲೆನ್ಸ್, ₹2 ಲಕ್ಷದವರೆಗೆ ಅಪಘಾತ ವಿಮೆ ಮತ್ತು ₹10,000 ಓವರ್‌ಡ್ರಾಫ್ಟ್ ಸೌಲಭ್ಯಗಳೊಂದಿಗೆ ದೇಶದ ಶೇ. 94 ರಷ್ಟು ವಯಸ್ಕ ಜನಸಂಖ್ಯೆಯನ್ನು ಬ್ಯಾಂಕಿಂಗ್ ವ್ಯವಸ್ಥೆಯೊಳಗೆ ತಂದು ಭಾರತದ ಜಾಗತಿಕ ಹಣಕಾಸು ಒಳಗೊಳ್ಳುವಿಕೆಯನ್ನು (Financial Inclusion) ಎತ್ತಿಹಿಡಿದಿದೆ.

## ಫಿಲಿಪ್ಪಿನ್ಸ್‌ನಲ್ಲಿ ಭೀಕರ ಭೂಕಂಪ: 35ಕ್ಕೂ ಹೆಚ್ಚು ಸಾವು, ಸುನಾಮಿ ಭೀತಿ ಮತ್ತು ಕಟ್ಟಡಗಳು ನೆಲಸಮ!




➤ ದಕ್ಷಿಣ ಫಿಲಿಪ್ಪಿನ್ಸ್‌ನ ಮಿಂಡನಾವೊ (Mindanao) ಪ್ರಾಂತ್ಯದಲ್ಲಿ ಸೋಮವಾರ (08-06-2026) ಮುಂಜಾನೆ ಸಂಭವಿಸಿದ ಭೀಕರ ಭೂಕಂಪ ಇಡೀ ದೇಶವನ್ನೇ ನಡುಗಿಸಿದೆ. ರಿಕ್ಟರ್ ಮಾಪಕದಲ್ಲಿ 7.8 ತೀವ್ರತೆಯನ್ನು ಹೊಂದಿದ್ದ ಈ ಪ್ರಬಲ ಭೂಕಂಪದಿಂದಾಗಿ ಇದುವರೆಗೆ ಕನಿಷ್ಠ 35 ಜನರು ಸಾವನ್ನಪ್ಪಿದ್ದಾರೆ ಮತ್ತು 200ಕ್ಕೂ ಹೆಚ್ಚು ಮಂದಿ ತೀವ್ರವಾಗಿ ಗಾಯಗೊಂಡಿದ್ದಾರೆ ಎಂದು ಅಲ್ಲಿನ ವಿಪತ್ತು ನಿರ್ವಹಣಾ ಅಧಿಕಾರಿಗಳು ಖಚಿತಪಡಿಸಿದ್ದಾರೆ. ಭೂಕಂಪದ ಬೆನ್ನಲ್ಲೇ ಕರಾವಳಿ ತೀರದಲ್ಲಿ ಸಣ್ಣ ಪ್ರಮಾಣದ ಸುನಾಮಿ ಅಲೆಗಳು ಎದ್ದಿದ್ದು, ನೆರೆಹೊರೆಯ ದೇಶಗಳಾದ ಇಂಡೋನೇಷ್ಯಾ, ಪಲಾವ್ ಮತ್ತು ಜಪಾನ್‌ವರೆಗೂ ಇದರ ಆತಂಕ ಸೃಷ್ಟಿಯಾಗಿತ್ತು.

➤ ಭೂಕುಸಿತಕ್ಕೆ ತತ್ತರಿಸಿದ ಗ್ಲಾನ್ ಪಟ್ಟಣ: ಭೂಕಂಪದ ಕೇಂದ್ರಬಿಂದು ಸರಂಗನಿ ಪ್ರಾಂತ್ಯದ ಮಾಸಿಮ್ ಪಟ್ಟಣದಿಂದ ನೈಋತ್ಯಕ್ಕೆ ಸುಮಾರು 32 ಕಿಲೋಮೀಟರ್ ದೂರದ ಸಮುದ್ರದ ಆಳದಲ್ಲಿ (33 ಕಿ.ಮೀ ಆಳ) ಪತ್ತೆಯಾಗಿದೆ. ಇದರ ತೀವ್ರತೆಗೆ ಗುಡ್ಡಗಾಡು ಪ್ರದೇಶವಾದ ಗ್ಲಾನ್ (Glan) ಪಟ್ಟಣದಲ್ಲಿ ಭೀಕರ ಭೂಕುಸಿತ (Landslide) ಸಂಭವಿಸಿದೆ. ಸರಂಗನಿ ಪ್ರಾಂತ್ಯದ ವಿಪತ್ತು ನಿರ್ವಹಣಾ ಅಧಿಕಾರಿ ರೆನೆ ಪುಂಜಾಲನ್ ನೀಡಿರುವ ಮಾಹಿತಿ ಪ್ರಕಾರ, ಗ್ಲಾನ್ ಪಟ್ಟಣದಲ್ಲಿ ಸಂಭವಿಸಿದ ಭೂಕುಸಿತದಿಂದಾಗಿ ಹಲವಾರು ಮನೆಗಳು ಸಂಪೂರ್ಣವಾಗಿ ಮಣ್ಣಿನಡಿ ಸಿಲುಕಿದ್ದು, ಕೇವಲ ಇದೊಂದೇ ಭಾಗದಲ್ಲಿ 13ಕ್ಕೂ ಹೆಚ್ಚು ಗ್ರಾಮಸ್ಥರು ಜೀವ ಕಳೆದುಕೊಂಡಿದ್ದಾರೆ.

➤ ಜನರಲ್ ಸ್ಯಾಂಟೋಸ್ ನಗರದಲ್ಲಿ ಧರೆಗುರುಳಿದ ಕಟ್ಟಡಗಳು: ಫಿಲಿಪ್ಪಿನ್ಸ್‌ನ ಜನರಲ್ ಸ್ಯಾಂಟೋಸ್ ನಗರದಲ್ಲಿ ಸಂಭವಿಸಿದ ತೀವ್ರ ಭೂಕಂಪದಿಂದಾಗಿ ಪ್ರಸಿದ್ಧ ಜೊಲಿಬೀ ವಾಣಿಜ್ಯ ಸಂಕೀರ್ಣ ಧ್ವಂಸಗೊಂಡಿದೆ, ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ತಾತ್ಕಾಲಿಕವಾಗಿ ಮುಚ್ಚಲಾಗಿದೆ ಮತ್ತು ಸುರಕ್ಷತೆಯ ದೃಷ್ಟಿಯಿಂದ ಅಧ್ಯಕ್ಷ ಫರ್ಡಿನಂಡ್ ಮಾರ್ಕೋಸ್ ಜೂನಿಯರ್ ಅವರು ಮಿಂಡನಾವೊ ಪ್ರಾಂತ್ಯದಾದ್ಯಂತ ಶಾಲೆಗಳಿಗೆ ರಜೆ ಘೋಷಿಸಿದ್ದಾರೆ.

➤ ಜಾಗತಿಕ ಮಟ್ಟದಲ್ಲಿ ಸುನಾಮಿ ಮುನ್ನೆಚ್ಚರಿಕೆ: 7.8 ತೀವ್ರತೆಯ ಈ ಭೂಕಂಪದ ನಂತರ ಸಮುದ್ರದಲ್ಲಿ ಸುಮಾರು 1 ಮೀಟರ್ (3 ಅಡಿ) ಎತ್ತರದ ಸುನಾಮಿ ಅಲೆಗಳು ಕಾಣಿಸಿಕೊಂಡವು. ಪೆಸಿಫಿಕ್ ಸುನಾಮಿ ಎಚ್ಚರಿಕೆ ಕೇಂದ್ರವು ಫಿಲಿಪ್ಪಿನ್ಸ್ ಸೇರಿದಂತೆ ಇಂಡೋನೇಷ್ಯಾ, ತೈವಾನ್ ಮತ್ತು ಪಪುವಾ ನ್ಯೂಗಿನಿಯಾ ದೇಶಗಳಿಗೆ ಸುನಾಮಿ ಅಲರ್ಟ್ ಘೋಷಿಸಿತ್ತು. ಆದರೆ, ಭೂಕಂಪ ಸಂಭವಿಸಿದ 5 ಗಂಟೆಗಳ ನಂತರ ಪರಿಸ್ಥಿತಿ ತಿಳಿಗೊಂಡಿದ್ದರಿಂದ ಸುನಾಮಿ ಮುನ್ನೆಚ್ಚರಿಕೆಯನ್ನು ಹಿಂಪಡೆಯಲಾಗಿದೆ.

## ಕಳೆದ 12 ವರ್ಷಗಳ ಸಾಧನೆ: 25 ಕೋಟಿ ಜನ ಬಹುಆಯಾಮದ ಬಡತನದಿಂದ ಮುಕ್ತ - ಕೇಂದ್ರ ಸರ್ಕಾರದ ಸಮಗ್ರ ವರದಿ




➤ ಕಳೆದ 12 ವರ್ಷಗಳಲ್ಲಿ ಕೇಂದ್ರ ಸರ್ಕಾರ ಕೈಗೊಂಡ ಬಲಿಷ್ಠ ಸಾಮಾಜಿಕ ರಕ್ಷಣಾ ಕ್ರಮಗಳು ಹಾಗೂ ಒಳಗೊಳ್ಳುವ ಅಭಿವೃದ್ಧಿ ಯೋಜನೆಗಳ ಫಲವಾಗಿ ದೇಶದ ಸುಮಾರು 25 ಕೋಟಿ (250 ಮಿಲಿಯನ್) ಜನರು ಬಹುಆಯಾಮದ ಬಡತನದಿಂದ (Multidimensional Poverty) ಯಶಸ್ವಿಯಾಗಿ ಹೊರಬಂದಿದ್ದಾರೆ ಎಂದು ಕೇಂದ್ರ ಸರ್ಕಾರ ಸೋಮವಾರ ಪ್ರಕಟಿಸಿದೆ. ಇದು ದೇಶದ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು (SDG) ಸಾಧಿಸುವ ನಿಟ್ಟಿನಲ್ಲಿ ಒಂದು ಐತಿಹಾಸಿಕ ಮೈಲಿಗಲ್ಲಾಗಿದೆ.

➤ ಬಹುಆಯಾಮದ ಬಡತನದ ಪ್ರಮಾಣದಲ್ಲಿ ತೀವ್ರ ಕುಸಿತ: ಕೇಂದ್ರ ಸರ್ಕಾರದ ಅಧಿಕೃತ ದತ್ತಾಂಶಗಳ ಪ್ರಕಾರ, ಭಾರತದಲ್ಲಿ ಬಹುಆಯಾಮದ ಬಡತನದ ಸೂಚ್ಯಂಕದಲ್ಲಿ ಭಾರಿ ಇಳಿಕೆ ದಾಖಲಾಗಿದೆ:

- 2013-14 ರ ಸ್ಥಿತಿ: ದೇಶದಲ್ಲಿದ್ದ ಬಹುಆಯಾಮದ ಬಡತನದ ಪ್ರಮಾಣ ಶೇ. 29.17 ರಷ್ಟಿತ್ತು.
- 2022-23 ರ ಸ್ಥಿತಿ: ಇದು ಕೇವಲ ಶೇ. 11.28 ಕ್ಕೆ ತೀವ್ರವಾಗಿ ಕುಸಿದಿದೆ.

➤ ಮಾರುಕಟ್ಟೆ ಸ್ಥಿರತೆ ಮತ್ತು ಗ್ರಾಹಕರ ಕೊಳ್ಳುವ ಶಕ್ತಿ (Purchasing Power) ಹೆಚ್ಚಳ: ಬಡತನ ನಿರ್ಮೂಲನೆಯೊಂದಿಗೆ ಸಾಮಾನ್ಯ ಜನರ ಆರ್ಥಿಕ ಶಕ್ತಿಯನ್ನು ರಕ್ಷಿಸುವಲ್ಲಿ ದೇಶದ ಹಣದುಬ್ಬರ (Inflation) ದರವನ್ನು ನಿಯಂತ್ರಿಸಿರುವುದು ಪ್ರಮುಖ ಪಾತ್ರ ವಹಿಸಿದೆ:

- 2004 ರಿಂದ 2014 ರ ಅವಧಿ: ದೇಶದ ಸರಾಸರಿ ಹಣದುಬ್ಬರ (ಬೆಲೆ ಏರಿಕೆ) ದರವು ಶೇ. 8.1 ರಷ್ಟಿತ್ತು.
- 2014 ರಿಂದ 2025 ರ ಅವಧಿ: ವ್ಯವಸ್ಥಿತ ಆರ್ಥಿಕ ಸುಧಾರಣೆಗಳಿಂದಾಗಿ ಸರಾಸರಿ ಹಣದುಬ್ಬರ ದರವು ಶೇ. 5.1 ಕ್ಕೆ ಇಳಿಕೆಯಾಗಿದೆ.
- ಪರಿಣಾಮ: ಬೆಲೆ ಏರಿಕೆಗೆ ಬ್ರೇಕ್ ಬಿದ್ದಿರುವುದರಿಂದ ಸಾಮಾನ್ಯ ಜನರ ಕೊಳ್ಳುವ ಶಕ್ತಿ ಹೆಚ್ಚಿದೆ ಮತ್ತು ಜೀವನ ಸಾಗಿಸುವ ವೆಚ್ಚ ನಿಯಂತ್ರಣದಲ್ಲಿದೆ.

➤ ಗ್ರಾಮೀಣ ಭಾಗದ ಚಿತ್ರಣ ಬದಲಿಸಿದ 'ಜಲ ಜೀವನ್ ಮಿಷನ್': ಗ್ರಾಮೀಣ ಭಾಗದ ಜನಜೀವನವನ್ನು ಸುಧಾರಿಸುವಲ್ಲಿ ಮತ್ತು ಸ್ವಚ್ಛ ಕುಡಿಯುವ ನೀರು ಒದಗಿಸುವಲ್ಲಿ ಕ್ರಾಂತಿಕಾರಿ ಪಾತ್ರ ವಹಿಸಿರುವ 'ಜಲ ಜೀವನ್ ಮಿಷನ್' ಯೋಜನೆಯಡಿ, ಆಗಸ್ಟ್ 2019 ರಲ್ಲಿ ಕೇವಲ 3.23 ಕೋಟಿಯಷ್ಟಿದ್ದ ನಲ್ಲಿ ನೀರು ಸಂಪರ್ಕ ಪಡೆದ ಗ್ರಾಮೀಣ ಮನೆಗಳ ಸಂಖ್ಯೆಯು ಮೇ 2026 ರ ವೇಳೆಗೆ 15.84 ಕೋಟಿಗೆ ವಿಸ್ತರಿಸಿದೆ, ಆರಂಭಿಕ ಹಂತದಲ್ಲಿದ್ದ ಯೋಜನೆ ಇವತ್ತು 2.77 ಲಕ್ಷ ಗ್ರಾಮಗಳಲ್ಲಿ ಶೇ. 100 ರಷ್ಟು ನಲ್ಲಿ ನೀರು ಸಂಪರ್ಕ ಸಾಧಿಸಿದೆ ಮತ್ತು ಸೀಮಿತ ಪ್ರಮಾಣದಲ್ಲಿದ್ದ ಒಟ್ಟಾರೆ ಗ್ರಾಮೀಣ ಮನೆಗಳ ವ್ಯಾಪ್ತಿಯು (Coverage) ಪ್ರಸ್ತುತ ಶೇ. 81.87 ರಷ್ಟು ಪ್ರಗತಿಯನ್ನು ತಲುಪಿದೆ.

➤ **ಬಡತನ ಮುಕ್ತಿಗೆ ಕಾರಣವಾದ ಪ್ರಮುಖ ಕೇಂದ್ರ ಸರ್ಕಾರಿ ಯೋಜನೆಗಳು:**

- ಸ್ವಚ್ಛ ಭಾರತ ಯೋಜನೆ: ಗ್ರಾಮೀಣ ನೈರ್ಮಲ್ಯ ಮತ್ತು ಗೌರವವನ್ನು ಸಂಪೂರ್ಣವಾಗಿ ಸುಧಾರಿಸಲು 12.11 ಕೋಟಿಗೂ ಹೆಚ್ಚು ಶೌಚಾಲಯಗಳನ್ನು ನಿರ್ಮಿಸಲಾಗಿದೆ.
- ಪಿಎಂ ಉಜ್ವಲ ಯೋಜನೆ: ಗ್ರಾಮೀಣ ಮಹಿಳೆಯರನ್ನು ಒಲೆಯ ಹೊಗೆಯಿಂದ ಮುಕ್ತಗೊಳಿಸಲು 10.57 ಕೋಟಿ ಉಚಿತ ಎಲ್‌ಪಿಜಿ (LPG) ಸಂಪರ್ಕಗಳನ್ನು ನೀಡಲಾಗಿದೆ.
- ಆಹಾರ ಮತ್ತು ಆರೋಗ್ಯ ಭದ್ರತೆ: 'ಆಯುಷ್ಮಾನ್ ಭಾರತ್' (ಉಚಿತ ವೈದ್ಯಕೀಯ ವಿಮೆ) ಮತ್ತು 'ಪಿಎಂ ಗರೀಬ್ ಕಲ್ಯಾಣ್

ಅನ್ನ ಯೋಜನೆ' ಮೂಲಕ ದೇಶದ 81 ಕೋಟಿಗೂ ಹೆಚ್ಚು ಜನರಿಗೆ ಉಚಿತ ಆಹಾರ ಧಾನ್ಯ ಹಾಗೂ ಆರೋಗ್ಯ ಭದ್ರತೆ ಒದಗಿಸಲಾಗಿದೆ.

**➤ ಮಹಿಳಾ ಸಬಲೀಕರಣ ಮತ್ತು ಶೈಕ್ಷಣಿಕ ಸುಧಾರಣೆಗಳು:**

- ಡ್ರಾಪ್-ಔಟ್ ದರ ಇಳಿಕೆ: ಹೆಣ್ಣು ಮಕ್ಕಳ ಪ್ರಾಥಮಿಕ ಶಾಲಾ ಡ್ರಾಪ್-ಔಟ್ (ಶಾಲೆಯಿಂದ ಹೊರಗುಳಿಯುವ) ಪ್ರಮಾಣವು ಹಿಂದೆ ಶೇ. 4.6 ರಷ್ಟಿದ್ದು, ಪ್ರಸ್ತುತ ಶೇ. 0.3 ಕ್ಕೆ ಭಾರಿ ಇಳಿಕೆ ಕಂಡಿದೆ.
- ಪ್ರೌಢಶಾಲಾ ದಾಖಲಾತಿ: ಹೆಣ್ಣು ಮಕ್ಕಳ ಪ್ರೌಢಶಾಲಾ ದಾಖಲಾತಿ ಪ್ರಮಾಣವು ಶೇ. 80.26 ಕ್ಕೆ ಏರಿಕೆಯಾಗಿದೆ.
- ಲಿಂಗ ಅನುಪಾತ (Sex Ratio) ಸುಧಾರಣೆ: 'ಬೇಟಿ ಬಚಾವೋ ಬೇಟಿ ಪಢಾವೋ' ಅಭಿಯಾನದ ಯಶಸ್ಸಿನಿಂದಾಗಿ ದೇಶದ ಒಟ್ಟಾರೆ ಲಿಂಗ ಅನುಪಾತವು ಪ್ರತಿ 1,000 ಪುರುಷರಿಗೆ 1,020 ಮಹಿಳೆಯರಿಗೆ ಸುಧಾರಿಸಿದೆ.
- ಡಿಜಿಟಲ್ ಆಡಳಿತ: ಬಯೋಮೆಟ್ರಿಕ್ ಆಧರಿತ ಪಡಿತರ ವಿತರಣೆ (PDS) ವ್ಯವಸ್ಥೆಯಿಂದಾಗಿ ಸೋರಿಕೆ ತಡೆಗಟ್ಟಲಾಗಿದ್ದು, ಹಿಂದುಳಿದ ಹಾಗೂ ಬುಡಕಟ್ಟು ಪ್ರದೇಶಗಳಿಗೂ ಕಲ್ಯಾಣ ಯೋಜನೆಗಳು ಯಶಸ್ವಿಯಾಗಿ ತಲುಪಿವೆ.

## ಇಂಟರ್ನ್ಯಾಷನಲ್ ಬಿಗ್ ಕ್ಯಾಟ್ ಅಲಯನ್ಸ್ (IBCA): ಜಾಗತಿಕ ವನ್ಯಜೀವಿ ಸಂರಕ್ಷಣೆಯ ಭಾರತದ ಮಾದರಿ




➤ ಜಾಗತಿಕ ವನ್ಯಜೀವಿ ಸಂರಕ್ಷಣೆಯ ಇತಿಹಾಸದಲ್ಲಿ ಭಾರತವು ಅತ್ಯಂತ ಪ್ರಮುಖ ಮತ್ತು ಐತಿಹಾಸಿಕ ಹೆಜ್ಜೆಯನ್ನಿಟ್ಟಿದೆ. ಭಾರತದ ನೇತೃತ್ವದಲ್ಲಿ ಆರಂಭವಾದ ಇಂಟರ್ನ್ಯಾಷನಲ್ ಬಿಗ್ ಕ್ಯಾಟ್ ಅಲಯನ್ಸ್ (IBCA) ಯೋಜನೆಗೆ ಜಾಗತಿಕ ಮಟ್ಟದಲ್ಲಿ ವ್ಯಾಪಕ ಬೆಂಬಲ ವ್ಯಕ್ತವಾಗುತ್ತಿದ್ದು, ಪರಿಸರ ಸಮತೋಲನವನ್ನು ಕಾಯ್ದುಕೊಳ್ಳುವಲ್ಲಿ ಇದು ಪ್ರಮುಖ ಪಾತ್ರ ವಹಿಸುತ್ತಿದೆ. ಅಂತರರಾಷ್ಟ್ರೀಯ ಸಹಕಾರ ಮತ್ತು ತಂತ್ರಜ್ಞಾನದ ವಿನಿಮಯಕ್ಕಾಗಿ ಈ ಒಕ್ಕೂಟವನ್ನು ರಚಿಸಲಾಗಿದೆ.

➤ ಬಿಗ್ ಕ್ಯಾಟ್ ಅಲಯನ್ಸ್ (IBCA): ವಿಶ್ವದ ಅತ್ಯಂತ ಪ್ರಮುಖ ಏಳು ಪ್ರಬೇಧಗಳ ದೊಡ್ಡ ಬೆಕ್ಕುಗಳ (Big Cats) ಸಂರಕ್ಷಣೆಗಾಗಿ ವಿಶ್ವದಾದ್ಯಂತ ಒಗ್ಗಟ್ಟಿನ ಹೋರಾಟ ನಡೆಸಲು ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಏಪ್ರಿಲ್ 2023 ರಲ್ಲಿ (ಪ್ರಾಜೆಕ್ಟ್ ಟೈಗರ್‌ನ 50ನೇ ವರ್ಷಾಚರಣೆಯ ಸಂದರ್ಭದಲ್ಲಿ) ಈ ಜಾಗತಿಕ ಒಕ್ಕೂಟವನ್ನು ಅಧಿಕೃತವಾಗಿ ಜಾರಿಗೆ ತಂದರು. ಇದರ ಪ್ರಧಾನ ಕಚೇರಿ ನವದೆಹಲಿಯಲ್ಲಿದೆ.

**➤ ಸಂರಕ್ಷಣೆಗೊಳಪಡುವ 7 ಪ್ರಮುಖ ಪ್ರಬೇಧಗಳು:**

ಹುಲಿ (Tiger)
ಸಿಂಹ (Lion)
ಚಿರತೆ (Leopard)
ಹಿಮಚಿರತೆ (Snow Leopard)
ಚೀತಾ (Cheetah)
ಜಾಗ್ವಾರ್ (Jaguar)
ಪ್ಯೂಮಾ (Puma)

**➤ ಈ ಯೋಜನೆಯ ಪ್ರಮುಖ ಗುರಿಗಳು:**

- ಪರಿಸರ ವ್ಯವಸ್ಥೆಯ ರಕ್ಷಣೆ: ಈ ದೊಡ್ಡ ಬೆಕ್ಕುಗಳು ಪರಿಸರ ವ್ಯವಸ್ಥೆಯ ಆಹಾರ ಸರಪಳಿಯ ಉನ್ನತ ಮಟ್ಟದಲ್ಲಿವೆ (Apex Predators). ಇವುಗಳ ರಕ್ಷಣೆಯಿಂದ ಇಡೀ ಕಾಡಿನ ಜೀವವೈವಿಧ್ಯ ಉಳಿಯುತ್ತದೆ.
- ಹವಾಮಾನ ವೈಪರೀತ್ಯ ನಿಯಂತ್ರಣ: ದಟ್ಟವಾದ ಅರಣ್ಯಗಳನ್ನು ಸಂರಕ್ಷಿಸುವುದರಿಂದ ಇಂಗಾಲದ ಡೈಆಕ್ಸೈಡ್ ಹೀರಿಕೊಳ್ಳುವ ನೈಸರ್ಗಿಕ ವ್ಯವಸ್ಥೆ (Carbon Sinks) ಬಲಗೊಳ್ಳುತ್ತದೆ.
- ಜಲ ಭದ್ರತೆ ಮತ್ತು ಜೀವನೋಪಾಯ: ಕಾಡುಗಳ ರಕ್ಷಣೆಯು ನದಿಗಳ ಉಗಮ ಸ್ಥಾನಗಳನ್ನು ರಕ್ಷಿಸುತ್ತದೆ ಮತ್ತು ಕಾಡಿನ ಸುತ್ತಮುತ್ತಲ ಜನರ ಸುಸ್ಥಿರ ಜೀವನೋಪಾಯಕ್ಕೆ ನೆರವಾಗುತ್ತದೆ.
- ಅಕ್ರಮ ವನ್ಯಜೀವಿ ವ್ಯಾಪಾರಕ್ಕೆ ತಡೆ: ಜಾಗತಿಕ ಮಟ್ಟದಲ್ಲಿ ವನ್ಯಜೀವಿಗಳ ಬೇಟೆಯಾಡುವಿಕೆ ಮತ್ತು ಕಳ್ಳಸಾಗಣೆಯನ್ನು ತಡೆಯಲು ಜಂಟಿ ಕಾರ್ಯಾಚರಣೆ ಮತ್ತು ನೀತಿಗಳನ್ನು ರೂಪಿಸುವುದು.

**➤ ವನ್ಯಜೀವಿ ಸಂರಕ್ಷಣೆಯಲ್ಲಿ ಭಾರತವೇ ಜಾಗತಿಕ ನಾಯಕ:**

- ಹುಲಿಗಳ ರಾಜಧಾನಿ: ಪ್ರಸ್ತುತ ವಿಶ್ವದ ಒಟ್ಟು ಕಾಡು ಹುಲಿಗಳ ಪೈಕಿ ಶೇಕಡಾ 70 ಕ್ಕಿಂತ ಹೆಚ್ಚು ಹುಲಿಗಳು ಭಾರತದಲ್ಲಿವೆ.
- ಏಷ್ಯಾಟಿಕ್ ಸಿಂಹಗಳ ಏಕೈಕ ನೆಲೆ: ವಿಶ್ವದಲ್ಲೇ ಏಷ್ಯಾಟಿಕ್ ಸಿಂಹಗಳು ನೈಸರ್ಗಿಕವಾಗಿ ಬದುಕುಳಿದಿರುವುದು ಗುಜರಾತ್‌ನ ಗಿರ್ ಅರಣ್ಯದಲ್ಲಿ ಮಾತ್ರ.
- ಪ್ರಾಜೆಕ್ಟ್ ಚೀತಾ: ನಶಿಸಿಹೋಗಿದ್ದ ಚೀತಾ ಪ್ರಬೇಧವನ್ನು ಆಫ್ರಿಕಾದಿಂದ ತಂದು ಮಧ್ಯಪ್ರದೇಶದ ಕುನೋ ರಾಷ್ಟ್ರೀಯ ಉದ್ಯಾನವನದಲ್ಲಿ ಮರುಪರಿಚಯಿಸುವ ಮೂಲಕ ಭಾರತ ಜಾಗತಿಕ ಗಮನ ಸೆಳೆದಿದೆ.

**➤ ತರಬೇತಿ ಹಬ್ ಆಗಿ ಮಾರ್ಪಟ್ಟ ಅಭಯಾರಣ್ಯಗಳು:**

- ಅಸ್ಸಾಂನ ಕಾಜಿರಂಗ ರಾಷ್ಟ್ರೀಯ ಉದ್ಯಾನವನ.
- ಕರ್ನಾಟಕದ ಹೆಮ್ಮೆಯ ಬಂಡೀಪುರ ಮತ್ತು ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶಗಳು.
- ವಿಶೇಷ ಕಾರಿಡಾರ್‌ಗಳು: ಅಭಿವೃದ್ಧಿ ಯೋಜನೆಗಳಲ್ಲೂ ವನ್ಯಜೀವಿಗಳ ಸುರಕ್ಷತೆಗೆ ಆದ್ಯತೆ ನೀಡಲಾಗುತ್ತಿದ್ದು, ಇದಕ್ಕೆ ಪ್ರಮುಖ ಉದಾಹರಣೆಯೆಂದರೆ ದಿಲ್ಲಿ-ಡೆಹ್ರಾಡೂನ್ ಎಕ್ಸ್‌ಪ್ರೆಸ್ ವೇನಲ್ಲಿ ವನ್ಯಜೀವಿಗಳ ಮುಕ್ತ ಸಂಚಾರಕ್ಕಾಗಿ ನಿರ್ಮಿಸಲಾಗಿರುವ ಬೃಹತ್ ಅಂಡರ್ ಪಾಸ್ ಮತ್ತು ವಿಶೇಷ ಪರಿಸರ ಕಾರಿಡಾರ್‌ಗಳು.

**➤ ಒಕ್ಕೂಟದ ಜಾಗತಿಕ ವಿಸ್ತರಣೆ (ಸದಸ್ಯತ್ವದ ವಿವರ):** ಪ್ರಸ್ತುತ ಬಿಗ್ ಕ್ಯಾಟ್ ಅಲಯನ್ಸ್ ವಿಶ್ವದ 95 ಶ್ರೇಣಿಯ ದೇಶಗಳೊಂದಿಗೆ (Range Countries) ಸಂಪರ್ಕದಲ್ಲಿದೆ.

- ಇತ್ತೀಚೆಗೆ ಸೌದಿ ಅರೇಬಿಯಾ ಈ ಒಕ್ಕೂಟಕ್ಕೆ ಸೇರ್ಪಡೆಗೊಳ್ಳುವುದಾಗಿ ಅಧಿಕೃತವಾಗಿ ಘೋಷಿಸಿದ್ದು, ಇದರೊಂದಿಗೆ ಒಕ್ಕೂಟದ ಅಧಿಕೃತ ಸದಸ್ಯ ದೇಶಗಳ ಸಂಖ್ಯೆ 26ಕ್ಕೆ ಏರಿಕೆಯಾಗಿದೆ.
- ಈ ಒಕ್ಕೂಟಕ್ಕೆ ಜಾಗತಿಕ ಸಂಸ್ಥೆಗಳಾದ WWF (World Wide Fund for Nature) ಮತ್ತು UNDP (United Nations Development Programme) ನಿಕಟವಾಗಿ ಕೈಜೋಡಿಸಿವೆ.
- ಭಾರತ ಸರ್ಕಾರವು ಈ ಒಕ್ಕೂಟದ ಆರಂಭಿಕ ಐದು ವರ್ಷಗಳ (2023-24 ರಿಂದ 2027-28) ಕಾರ್ಯಚಟುವಟಿಕೆಗಳಿಗಾಗಿ 150 ಕೋಟಿ ರೂ. ಗಳ ಆಯವ್ಯಯದ ಬೆಂಬಲವನ್ನು ನೀಡಿದೆ.

## ಪಿಯೂಷ್ ಗೋಯಲ್ ಅವರಿಂದ 'ಭವ್ಯ' (BHAVYA) ಪೋರ್ಟಲ್ ಚಾಲನೆ: 100 ಕೈಗಾರಿಕಾ ಪಾರ್ಕ್‌ಗಳ ಅಭಿವೃದ್ಧಿಗೆ ಹೊಸ ವೇಗ!




➤ ದೇಶದ ಕೈಗಾರಿಕಾ ವಲಯದಲ್ಲಿ ಮೂಲಸೌಕರ್ಯ ಕ್ರಾಂತಿ ಹಾಗೂ ಉದ್ಯೋಗ ಸೃಷ್ಟಿಗೆ ವೇಗ ನೀಡುವ ನಿಟ್ಟಿನಲ್ಲಿ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಶ್ರೀ ಪಿಯೂಷ್ ಗೋಯಲ್ ಅವರು 'ಭವ್ಯ' (BHAVYA - Bharat Audyogik Vikas Yojana) ಪೋರ್ಟಲ್‌ಗೆ ಅಧಿಕೃತವಾಗಿ ಚಾಲನೆ ನೀಡಿದ್ದಾರೆ. ದೇಶಾದ್ಯಂತ ಹೂಡಿಕೆಗೆ ಸಿದ್ಧವಿರುವ 100 ಸಂಯೋಜಿತ ಕೈಗಾರಿಕಾ ಪಾರ್ಕ್‌ಗಳನ್ನು (Industrial Parks) ತ್ವರಿತವಾಗಿ ಅಭಿವೃದ್ಧಿಪಡಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

**➤ 'ಭವ್ಯ' (BHAVYA) ಯೋಜನೆ:** ಕೇಂದ್ರ ಸಚಿವ ಸಂಪುಟವು ಈ ಯೋಜನೆಗೆ ಒಟ್ಟು 33,660 ಕೋಟಿ ರೂಪಾಯಿಗಳ ಬೃಹತ್

ಅನುದಾನವನ್ನು ಅನುಮೋದಿಸಿದೆ. ಮುಂದಿನ 6 ವರ್ಷಗಳ ಅವಧಿಯಲ್ಲಿ ದೇಶದ ವಿವಿಧ ರಾಜ್ಯಗಳಲ್ಲಿ ಅತ್ಯಾಧುನಿಕ ಸೌಲಭ್ಯಗಳುಳ್ಳ ಕೈಗಾರಿಕಾ ಪಾರ್ಕ್‌ಗಳನ್ನು ನಿರ್ಮಿಸಲು ಈ ಹಣವನ್ನು ಬಳಸಲಾಗುತ್ತದೆ.

➤ ಈ ಯೋಜನೆಯು NICDC ಅನುಷ್ಠಾನ ಸಂಸ್ಥೆಯಾಗಿ, ಕೇಂದ್ರ ಮತ್ತು ರಾಜ್ಯಗಳ 51:49 ಪಾಲುದಾರಿಕೆಯಲ್ಲಿ ರಸ್ತೆ-ರೈಲು ಸಂಪರ್ಕ, ಅಗತ್ಯ ಮೂಲಸೌಕರ್ಯ ಹಾಗೂ ನವೋದ್ಯಮಗಳಿಗೆ ಪ್ರತ್ಯೇಕ ಸ್ಥಳಾವಕಾಶದೊಂದಿಗೆ 100 ಕೈಗಾರಿಕಾ ಪಾರ್ಕ್‌ಗಳನ್ನು ಅಭಿವೃದ್ಧಿಪಡಿಸುವ ಗುರಿ ಹೊಂದಿದೆ.

➤ **ಭವ್ಯ (BHAVYA) ಪೋರ್ಟಲ್‌ನ ಕೆಲಸ:** ಕೇಂದ್ರ ಸಚಿವರು ಬಿಡುಗಡೆ ಮಾಡಿರುವ ಈ ಡಿಜಿಟಲ್ ಪೋರ್ಟಲ್ ಸಂಪೂರ್ಣ ಪಾರದರ್ಶಕತೆಗೆ ಒತ್ತು ನೀಡುತ್ತದೆ. ವಿವಿಧ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ತಮ್ಮ ಯೋಜನಾ ವರದಿಗಳನ್ನು (DPR) ಈ ಪೋರ್ಟಲ್ ಮೂಲಕವೇ ಸಲ್ಲಿಸಬೇಕು. ಪ್ರಸ್ತಾಪಗಳ ಮೌಲ್ಯಮಾಪನ ಮತ್ತು ಯೋಜನೆಗಳ ಪ್ರಗತಿಯನ್ನು ರಿಯಲ್-ಟೈಮ್ (ಮೈಕ್ರೋ ಮಟ್ಟದಲ್ಲಿ ತಕ್ಷಣದ ವೀಕ್ಷಣೆ) ಮಾನಿಟರಿಂಗ್ ಮಾಡಲು ಈ ಪೋರ್ಟಲ್ ಏಕೈಕ ಡಿಜಿಟಲ್ ವೇದಿಕೆಯಾಗಿ ಕಾರ್ಯನಿರ್ವಹಿಸಲಿದೆ.

➤ **ಹಂತ-ಹಂತವಾಗಿ ಜಾರಿ:**

1. ಮೊದಲ ಹಂತ: ಜೂನ್ 1 ರಿಂದ ಜುಲೈ 31 ರವರೆಗೆ ಬರುವ ಅರ್ಜಿಗಳನ್ನು ಪರಿಶೀಲಿಸಿ, ಮೊದಲ ಹಂತದಲ್ಲಿ 20 ಕೈಗಾರಿಕಾ ಪಾರ್ಕ್‌ಗಳನ್ನು ಆಯ್ಕೆ ಮಾಡಲಾಗುತ್ತದೆ.
2. ಎರಡನೇ ಹಂತ: ಸೆಪ್ಟೆಂಬರ್ 30 ರೊಳಗೆ ಬರುವ ಪ್ರಸ್ತಾಪಗಳಿಂದ ಹೆಚ್ಚುವರಿ 30 ಪಾರ್ಕ್‌ಗಳನ್ನು ಆಯ್ಕೆ ಮಾಡಲಾಗುತ್ತದೆ. ಉಳಿದ ಪಾರ್ಕ್‌ಗಳನ್ನು ಮುಂದಿನ ಹಂತಗಳಲ್ಲಿ ಅಭಿವೃದ್ಧಿಪಡಿಸಲಾಗುವುದು.

## ತಮಿಳುನಾಡಿನಲ್ಲಿ 'ಸಿಂಗಪ್ಪೆಣ್' (Singappen Special Force ) ಮಹಿಳಾ ವಿಶೇಷ ಕಾರ್ಯಪಡೆ ಜಾರಿ




➤ ರಾಜ್ಯದಲ್ಲಿ ಮಹಿಳೆಯರ ಮತ್ತು ಮಕ್ಕಳ ಸುರಕ್ಷತೆಯನ್ನು ಮತ್ತಷ್ಟು ಬಲಪಡಿಸಲು ತಮಿಳುನಾಡು ಸರ್ಕಾರವು ಒಂದು ಮಹತ್ವದ ಹೆಜ್ಜೆಯನ್ನಿಟ್ಟಿದೆ. ತಮಿಳುನಾಡಿನ ನೂತನ ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ (CM C. Joseph Vijay) ಅವರು 'ಸಿಂಗಪ್ಪೆಣ್ ವಿಶೇಷ ಕಾರ್ಯಪಡೆ' (Singappen Special Task Force - SSTF) ಎಂಬ ಸಂಪೂರ್ಣ ಮಹಿಳಾ ಪೊಲೀಸ್ ಘಟಕವನ್ನು ಜೂನ್ 9, 2026 ರಂದು ಅಧಿಕೃತವಾಗಿ ಲೋಕಾರ್ಪಣೆಗೊಳಿಸಿದ್ದಾರೆ. ಚೆನ್ನೈನ ಎಗ್ಮೋರ್‌ನಲ್ಲಿರುವ ರಾಜರತ್ನಂ ಕ್ರೀಡಾಂಗಣದಲ್ಲಿ ನಡೆದ ಭವ್ಯ ಸಮಾರಂಭದಲ್ಲಿ ಈ ವಿಶೇಷ ಪಡೆಗೆ ಚಾಲನೆ ನೀಡಲಾಯಿತು.

➤ ಮೇ 10, 2026 ರಂದು ತಮಿಳುನಾಡಿನ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಸಿ. ಜೋಸೆಫ್ ವಿಜಯ್ ಅವರು ಸಹಿ ಮಾಡಿದ ಮೊದಲ ಪ್ರಮುಖ ಆದೇಶಗಳಲ್ಲಿ ಈ ವಿಶೇಷ ಪಡೆಯ ರಚನೆಯೂ ಒಂದಾಗಿದೆ.

ನೇತೃತ್ವ: ಈ ಪ್ರತಿಷ್ಠಿತ ಮಹಿಳಾ ವಿಶೇಷ ಪಡೆಯ ನೇತೃತ್ವವನ್ನು ಹಿರಿಯ ಪೊಲೀಸ್ ಅಧಿಕಾರಿ, ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ (IGP) ಕೆ. ಭವನೀಶ್ವರಿ ಅವರು ವಹಿಸಿಕೊಂಡಿದ್ದಾರೆ.

ಸಿಬ್ಬಂದಿ ಬಲ: ಮೊದಲ ಹಂತದಲ್ಲಿ ಈ ಪಡೆಗೆ ಒಟ್ಟು 36 ಹುದ್ದೆಗಳನ್ನು ಮಂಜೂರು ಮಾಡಲಾಗಿದೆ. ಇದರಲ್ಲಿ ಒಬ್ಬರು ಐಜಿಪಿ (IGP), ಒಬ್ಬರು ಎಸ್‌ಪಿ (SP), ಇಬ್ಬರು ಡಿವೈಎಸ್‌ಪಿ (DySP), ನಾಲ್ಕು ಜನ ಇನ್ಸ್‌ಪೆಕ್ಟರ್‌ಗಳು, ಎಂಟು ಜನ ಸಬ್-ಇನ್ಸ್‌ಪೆಕ್ಟರ್‌ಗಳು ಹಾಗೂ ಇತರ ಶ್ರೇಣಿಯ 20 ಸಿಬ್ಬಂದಿಗಳು ಒಳಗೊಂಡಿದ್ದಾರೆ.

ವಿಶೇಷ ಸಮವಸ್ತ್ರ: ಸಿಂಗಪ್ಪೆಣ್ ಪಡೆಯ ಮಹಿಳಾ ಪೊಲೀಸ್ ಸಿಬ್ಬಂದಿಗೆ ನೇವಿ-ಬ್ಲೂ (Navy-Blue) ಬಣ್ಣದ ಆಕರ್ಷಕ ಮತ್ತು ವಿಶಿಷ್ಟವಾದ ಸಮವಸ್ತ್ರವನ್ನು ಪರಿಚಯಿಸಲಾಗಿದೆ.

➤ ಕಾರ್ಯವಿಧಾನ ಮತ್ತು ಕಾರ್ಯಾಚರಣೆಯ ವ್ಯಾಪ್ತಿ: ಮಹಿಳೆಯರ ಮೇಲಿನ ಅಪರಾಧಗಳನ್ನು ತಡೆಗಟ್ಟುವುದು ಮತ್ತು ಸಂಕಷ್ಟದ ಸಮಯದಲ್ಲಿ ತಕ್ಷಣವೇ ಸ್ಪಂದಿಸುವುದು (Rapid Response) ಈ ಪಡೆಯ ಮುಖ್ಯ ಗುರಿಯಾಗಿದೆ.

ಸೂಕ್ಷ್ಮ ಪ್ರದೇಶಗಳ ಗುರುತಿಸುವಿಕೆ: ಮಹಿಳೆಯರ ಸುರಕ್ಷತೆಗೆ ಧಕ್ಕೆ ಇರುವ ಪ್ರದೇಶಗಳನ್ನು ಗುರುತಿಸಿ ಅಲ್ಲಿ ಹೆಚ್ಚಿನ ನಿಗಾ ಇಡುವುದು.

ಗಸ್ತು ತಿರುಗುವಿಕೆ (Patrolling): ಸಾರ್ವಜನಿಕ ಸ್ಥಳಗಳಾದ ಬಸ್ ನಿಲ್ದಾಣಗಳು, ರೈಲ್ವೆ ನಿಲ್ದಾಣಗಳು, ಶಿಕ್ಷಣ ಸಂಸ್ಥೆಗಳು (ಶಾಲೆ-ಕಾಲೇಜುಗಳು) ಮತ್ತು ಪ್ರಮುಖ ಐಟಿ ಹಬ್‌ಗಳ (IT Hubs) ಸುತ್ತಮುತ್ತ ಈ ಪಡೆ ನಿರಂತರ ಗಸ್ತು ತಿರುಗಲಿದೆ.

ಸೈಬರ್ ಸುರಕ್ಷತೆ: ಇತ್ತೀಚಿನ ದಿನಗಳಲ್ಲಿ ಮಹಿಳೆಯರ ವಿರುದ್ಧ ಹೆಚ್ಚುತ್ತಿರುವ ಆನ್‌ಲೈನ್ ಅಪರಾಧಗಳನ್ನು ತಡೆಯಲು ಈ ಪಡೆಯಲ್ಲಿ ಸೈಬರ್ ಕ್ರೈಮ್ ವಿಭಾಗದ ಸಬ್-ಇನ್ಸ್‌ಪೆಕ್ಟರ್‌ಗಳನ್ನೂ ನಿಯೋಜಿಸಲಾಗಿದೆ.

➤ ಭಾರತೀಯ ಸಂವಿಧಾನದ 7ನೇ ಅನುಸೂಚಿ (Seventh Schedule) ಪ್ರಕಾರ 'ಪೊಲೀಸ್' ಮತ್ತು 'ಸಾರ್ವಜನಿಕ ಸುವ್ಯವಸ್ಥೆ'ಯು ರಾಜ್ಯ ಪಟ್ಟಿಗೆ (State List) ಸೇರಿದ ವಿಷಯವಾಗಿದೆ. ಆದ್ದರಿಂದ ಮಹಿಳಾ ಸುರಕ್ಷತೆಗಾಗಿ ಇಂತಹ ವಿಶೇಷ ಪಡೆಗಳನ್ನು ರಚಿಸುವ ಸಂಪೂರ್ಣ ಹಕ್ಕು ರಾಜ್ಯ ಸರ್ಕಾರಗಳಿಗಿರುತ್ತದೆ.

## ಇಂದ್ರಪ್ರಸ್ಥ ಗ್ಯಾಸ್ ಲಿಮಿಟೆಡ್ (IGL) ನೂತನ ವ್ಯವಸ್ಥಾಪಕ ನಿರ್ದೇಶಕರಾಗಿ ಕುಮಾರ್ ಶಂಕರ್ ನೇಮಕ



➤ ದೇಶದ ಪ್ರಮುಖ ನಗರ ಗ್ಯಾಸ್ ವಿತರಣಾ ಸಂಸ್ಥೆಯಾದ ಇಂದ್ರಪ್ರಸ್ಥ ಗ್ಯಾಸ್ ಲಿಮಿಟೆಡ್ (Indraprastha Gas Limited - IGL) ನೂತನ ವ್ಯವಸ್ಥಾಪಕ ನಿರ್ದೇಶಕರಾಗಿ (Managing Director) ಕುಮಾರ್ ಶಂಕರ್ ಅವರು ಅಧಿಕಾರ ವಹಿಸಿಕೊಂಡಿದ್ದಾರೆ. ಜೂನ್ 5, 2026 ರಿಂದ ಜಾರಿಗೆ ಬರುವಂತೆ ಈ ನೇಮಕಾತಿ ನಡೆದಿದೆ. ಈ ಹಿಂದೆ ಎಂಡಿ ಆಗಿದ್ದ ಕಮಲ್ ಕಿಶೋರ್ ಚಾಟಿವಾಲ್ ಅವರ ಮೂರು ವರ್ಷಗಳ ಅವಧಿ ಮುಕ್ತಾಯಗೊಂಡ ಹಿನ್ನೆಲೆಯಲ್ಲಿ ಅವರ ಸ್ಥಾನಕ್ಕೆ ಕುಮಾರ್ ಶಂಕರ್ ನೇಮಕಗೊಂಡಿದ್ದಾರೆ. (ಕಮಲ್ ಕಿಶೋರ್ ಅವರು ಮರಳಿ ಗೇಲ್ (GAIL) ಸಂಸ್ಥೆಗೆ ನಿಯೋಜನೆಗೊಂಡಿದ್ದಾರೆ).

➤ **ಕುಮಾರ್ ಶಂಕರ್ :** ಅವರು ಇದಕ್ಕೂ ಮುನ್ನ ಪುಣೆಯ 'ಮಹಾರಾಷ್ಟ್ರ ನ್ಯಾಚುರಲ್ ಗ್ಯಾಸ್ ಲಿಮಿಟೆಡ್' (MNGL) ನ ವ್ಯವಸ್ಥಾಪಕ ನಿರ್ದೇಶಕರಾಗಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿದ್ದರು.

**ಶಿಕ್ಷಣ:** ಇವರು ಪ್ರತಿಷ್ಠಿತ ಬಿರ್ಲಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಅಂಡ್ ಸೈನ್ಸ್ (BITS Pilani) ನಿಂದ ಕೆಮಿಕಲ್ ಎಂಜಿನಿಯರಿಂಗ್ ಪದವಿ ಪಡೆದಿದ್ದಾರೆ.

**ಕಾರ್ಯಕ್ಷೇತ್ರ:** ಗ್ಯಾಸ್ ಪ್ರೊಸೆಸಿಂಗ್ ಪ್ಲಾಂಟ್ ಕಾರ್ಯಾಚರಣೆ, ಪೆಟ್ರೋಕೆಮಿಕಲ್ ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್, ಕಾರ್ಪೊರೇಟ್ ಯೋಜನೆ, ಮಾರ್ಕೆಟಿಂಗ್ ಮತ್ತು ನಿಯಂತ್ರಕ ಕಾರ್ಯಗಳಲ್ಲಿ ಅಪಾರ ಪರಿಣತಿ ಹೊಂದಿದ್ದಾರೆ. ಐಜಿಎಲ್ (IGL) ನೇಮಕಾತಿಗೂ ಮುನ್ನ ಇವರು ಪ್ರಮುಖವಾಗಿ ಗೇಲ್ (GAIL India Ltd) ಸಂಸ್ಥೆಯಲ್ಲಿ ವಿವಿಧ ಉನ್ನತ ಹುದ್ದೆಗಳನ್ನು ನಿಭಾಯಿಸಿದ್ದಾರೆ.

➤ **ಇಂದ್ರಪ್ರಸ್ಥ ಗ್ಯಾಸ್ ಲಿಮಿಟೆಡ್ (IGL)**

ಭಾರತದ ಅತಿ ದೊಡ್ಡ ಸಿಟಿ ಗ್ಯಾಸ್ ಡಿಸ್ಟ್ರಿಬ್ಯೂಟರ್: ಐಜಿಎಲ್ ದೇಶದ ಅತಿ ದೊಡ್ಡ ನಗರ ಅನಿಲ ವಿತರಣಾ ಸಂಸ್ಥೆಯಾಗಿದೆ.

ವ್ಯಾಪ್ತಿ: ಇದು ದೆಹಲಿ, ಉತ್ತರ ಪ್ರದೇಶ, ಹರಿಯಾಣ ಮತ್ತು ರಾಜಸ್ಥಾನ ಸೇರಿದಂತೆ 12 ಭೌಗೋಳಿಕ ಪ್ರದೇಶಗಳ ಸುಮಾರು 33 ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದೆ.
ಸೇವೆಗಳು: ವಾಹನಗಳಿಗೆ ಸಿಎನ್‌ಜಿ (CNG - Compressed Natural Gas) ಮತ್ತು ಮನೆ ಹಾಗೂ ಕೈಗಾರಿಕೆಗಳಿಗೆ ಪೈಪ್ಡ್ ನ್ಯಾಚುರಲ್ ಗ್ಯಾಸ್ (PNG) ಪೂರೈಕೆ ಮಾಡುತ್ತದೆ.
ಜಂಟಿ ಉದ್ಯಮ (Joint Venture): IGL ಸಂಸ್ಥೆಯು ಪ್ರಮುಖವಾಗಿ ಗೇಲ್ (GAIL India Limited) ಮತ್ತು ಭಾರತ್ ಪೆಟ್ರೋಲಿಯಂ ಕಾರ್ಪೋರೇಷನ್ ಲಿಮಿಟೆಡ್ (BPCL) ಸಂಸ್ಥೆಗಳ ಜಂಟಿ ಪ್ರವರ್ತಕತ್ವದಲ್ಲಿ (Promoted JV) ಕಾರ್ಯನಿರ್ವಹಿಸುತ್ತದೆ.
ದೆಹಲಿ ಸರ್ಕಾರದ ಪಾಲು: ದೆಹಲಿ ರಾಷ್ಟ್ರೀಯ ರಾಜಧಾನಿ ವಲಯ ಸರ್ಕಾರವು (Government of NCT of Delhi) ಈ ಸಂಸ್ಥೆಯಲ್ಲಿ ಶೇಕಡಾ 5 ರಷ್ಟು ಇಕ್ವಿಟಿ ಪಾಲನ್ನು ಹೊಂದಿದೆ.




## 10 June 2026

### ಸುದೀರ್ಘ ಪ್ರಧಾನಿ : ಭಾರತದ ರಾಜಕೀಯ ಇತಿಹಾಸದಲ್ಲಿ ನವ ದಾಖಲೆ ನಿರ್ಮಿಸಿದ ಮೋದಿಜೀ!



➤ ಭಾರತೀಯ ರಾಜಕೀಯ ಇತಿಹಾಸದಲ್ಲಿ ಜೂನ್ 10, 2026 ರಂದು ಒಂದು ಅಭೂತಪೂರ್ವ ದಾಖಲೆ ಸೃಷ್ಟಿಯಾಗಿದೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಭಾರತದ ಇತಿಹಾಸದಲ್ಲೇ ಅತ್ಯಂತ ಸುದೀರ್ಘ ಅವಧಿಗೆ ನಿರಂತರವಾಗಿ ಸೇವೆ ಸಲ್ಲಿಸಿದ 'ಚುನಾಯಿತ' ಪ್ರಧಾನ ಮಂತ್ರಿ (Longest Continuously Serving Elected Prime Minister) ಎಂಬ ಐತಿಹಾಸಿಕ ಸಾಧನೆಗೆ ಪಾತ್ರರಾಗಿದ್ದಾರೆ. ಈ ಮೂಲಕ ಅವರು ಭಾರತದ ಪ್ರಥಮ ಪ್ರಧಾನಿ ಪಂಡಿತ್ ಜವಾಹರಲಾಲ್ ನೆಹರೂ ಅವರ ಹೆಸರಲ್ಲಿದ್ದ ದಶಕಗಳ ಹಳೆಯ ದಾಖಲೆಯನ್ನು ಮುರಿದಿದ್ದಾರೆ.

➤ **4,399 ದಿನಗಳ ಐತಿಹಾಸಿಕ ಪಯಣ (ದಾಖಲೆಯ ವಿವರಗಳು):** 2014ರ ಮೇ 26ರಂದು ದೇಶದ ಪ್ರಧಾನಿಯಾಗಿ ಮೊದಲ ಬಾರಿಗೆ ಪ್ರಮಾಣ ವಚನ ಸ್ವೀಕರಿಸಿದ ನರೇಂದ್ರ ಮೋದಿ ಅವರು, 2026ರ ಜೂನ್ 10ರ ವೇಳೆಗೆ ಪ್ರಧಾನಿ ಹುದ್ದೆಯಲ್ಲಿ ನಿರಂತರವಾಗಿ 4,399 ದಿನಗಳನ್ನು ಪೂರೈಸಿದ್ದಾರೆ.
ನೆಹರೂ ಅವರ ದಾಖಲೆ ಮುರಿದ ಮೋದಿ: ಭಾರತದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅವರು 1952ರ ಮೇ 13ರಂದು ದೇಶದ ಮೊದಲ ಸಾರ್ವತ್ರಿಕ ಚುನಾವಣೆ ನಡೆದು 'ಚುನಾಯಿತ' ಪ್ರಧಾನಿಯಾದ ನಂತರ 1964ರ ಮೇ 27ರವರೆಗೆ (ಅವರ ನಿಧನದವರೆಗೆ) ನಿರಂತರವಾಗಿ 4,398 ದಿನಗಳ ಕಾಲ ಅಧಿಕಾರದಲ್ಲಿದ್ದರು. ಈಗ ನರೇಂದ್ರ ಮೋದಿ ಅವರು 4,399 ದಿನಗಳನ್ನು ಪೂರೈಸುವ ಮೂಲಕ ನೆಹರೂ ಅವರ ಈ ದಾಖಲೆಯನ್ನು ಹಿಂದಿಕ್ಕಿದ್ದಾರೆ.
**ಗಮನಿಸಬೇಕಾದ ಅಂಶ:** ಒಟ್ಟಾರೆ ಒಟ್ಟು ಅವಧಿಯನ್ನು ಲೆಕ್ಕ ಹಾಕಿದರೆ ಜವಾಹರಲಾಲ್ ನೆಹರೂ ಅವರೇ ಅತಿ ಹೆಚ್ಚು ಕಾಲ (16 ವರ್ಷ 286 ದಿನಗಳು) ಪ್ರಧಾನಿಯಾಗಿದ್ದರು. ಆದರೆ, ಅವರು 1947 ರಿಂದ 1952 ರವರೆಗೆ 'ಮಧ್ಯಂತರ ಸರ್ಕಾರದ' (Interim Government) ಪ್ರಧಾನಿಯಾಗಿದ್ದರು. ಹೀಗಾಗಿ, 'ಸ್ವತಂತ್ರ ಭಾರತದ ಚುನಾಯಿತ ಸರ್ಕಾರದ ನಿರಂತರ ಅವಧಿ'ಯನ್ನು ಪರಿಗಣಿಸಿದಾಗ ನರೇಂದ್ರ ಮೋದಿ ಅವರೇ ಈಗ ಅಗ್ರಸ್ಥಾನದಲ್ಲಿದ್ದಾರೆ.
ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರು ಒಟ್ಟು 14 ವರ್ಷಗಳಿಗೂ ಹೆಚ್ಚು ಕಾಲ ಪ್ರಧಾನಿಯಾಗಿ ಸೇವೆ ಸಲ್ಲಿಸಿದ್ದರೂ, ಅವರ ಅಧಿಕಾರಾವಧಿ ನಿರಂತರವಾಗಿರಲಿಲ್ಲ (ಮಧ್ಯದಲ್ಲಿ ಬ್ರೇಕ್ ಇತ್ತು).

➤ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ರಾಷ್ಟ್ರೀಯ ಪ್ರಜಾಪ್ರಭುತ್ವ ಒಕ್ಕೂಟ (NDA) ಸರ್ಕಾರವು ಕೇಂದ್ರದಲ್ಲಿ 12 ವರ್ಷಗಳ ಯಶಸ್ವಿ ಆಡಳಿತವನ್ನು ಪೂರೈಸಿದೆ. ಈ ಅವಧಿಯಲ್ಲಿ ನಡೆದ ಪ್ರಮುಖ ಘಟನೆಗಳು ಇಲ್ಲಿವೆ:
ಮೂರು ಸಾರ್ವತ್ರಿಕ ಚುನಾವಣೆಗಳ ಜಯ: 2014, 2019 ಮತ್ತು 2024ರ ಲೋಕಸಭಾ ಚುನಾವಣೆಗಳಲ್ಲಿ ಸತತವಾಗಿ ಜಯಗಳಿಸುವ ಮೂಲಕ, ನೆಹರೂ ಅವರ ನಂತರ ಸತತ ಮೂರನೇ ಬಾರಿಗೆ ಪ್ರಧಾನಿಯಾದ ದೇಶದ ಎರಡನೇ ನಾಯಕ ಎಂಬ ಕೀರ್ತಿಗೆ ಮೋದಿ ಪಾತ್ರರಾಗಿದ್ದಾರೆ.
ಜಾಗತಿಕ ನಾಯಕತ್ವ: ಜಾಗತಿಕ ಸಮೀಕ್ಷೆಗಳಲ್ಲಿ ನರೇಂದ್ರ ಮೋದಿ ಅವರು ವಿಶ್ವದ ಅತ್ಯಂತ ಜನಪ್ರಿಯ ಪ್ರಜಾಪ್ರಭುತ್ವ ನಾಯಕರಲ್ಲಿ ಒಬ್ಬರಾಗಿ ಗುರುತಿಸಿಕೊಂಡಿದ್ದಾರೆ. ವಿಶ್ವದ 30 ಕ್ಕೂ ಹೆಚ್ಚು ದೇಶಗಳು ತಮ್ಮ ಅತ್ಯುನ್ನತ ನಾಗರಿಕ ಪ್ರಶಸ್ತಿಯನ್ನು ನೀಡಿ ಗೌರವಿಸಿವೆ.
ಬಡತನ ನಿರ್ಮೂಲನೆ ಮತ್ತು ಡಿಜಿಟಲ್ ಕ್ರಾಂತಿ: ಈ 12 ವರ್ಷಗಳ ಅವಧಿಯಲ್ಲಿ ದೇಶದ ಸುಮಾರು 25 ಕೋಟಿ (250 ಮಿಲಿಯನ್) ಜನರು ಬಹು ಆಯಾಮದ ಬಡತನದಿಂದ (Multidimensional Poverty) ಹೊರಬಂದಿದ್ದಾರೆ. ಯುಪಿಐ (UPI) ಸೇರಿದಂತೆ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯದಲ್ಲಿ ಭಾರತ ಜಗತ್ತಿಗೇ ಮಾದರಿಯಾಗಿದೆ.

### ಭಾರತೀಯ ವಿದ್ಯಾ ಭವನದ ನೂತನ ಅಧ್ಯಕ್ಷರಾಗಿ ಬನ್ವಾರಿಲಾಲ್ ಪುರೋಹಿತ್ ಆಯ್ಕೆ



➤ ದೇಶದ ಪ್ರತಿಷ್ಠಿತ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸಂಸ್ಥೆಯಾದ ಭಾರತೀಯ ವಿದ್ಯಾ ಭವನದ (Bharatiya Vidya Bhavan - BVB) ನೂತನ ಅಧ್ಯಕ್ಷರಾಗಿ ಪಂಜಾಬ್‌ನ ಮಾಜಿ ರಾಜ್ಯಪಾಲರಾದ ಹಿರಿಯ ರಾಜಕಾರಣಿ ಬನ್ವಾರಿಲಾಲ್ ಪುರೋಹಿತ್ (Banwarilal Purohit) ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಇದರೊಂದಿಗೆ, ಭಾರತದ ಹಣಕಾಸು ಕ್ಷೇತ್ರದ ದೈತ್ಯ ಹಾಗೂ ಎಚ್‌ಡಿಎಫ್‌ಸಿ (HDFC) ಸಂಸ್ಥೆಯ ಮಾಜಿ ಮುಖ್ಯಸ್ಥರಾದ ದೀಪಕ್ ಪರೇಖ್ (Deepak Parekh) ಅವರನ್ನು ಉಪಾಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ.

➤ ಜೂನ್ 7, 2026 ರಂದು ನಡೆದ ಭಾರತೀಯ ವಿದ್ಯಾ ಭವನದ ಕಾರ್ಯಕಾರಿ ಸಮಿತಿ ಮತ್ತು ಟ್ರಸ್ಟಿಗಳ ಮಂಡಳಿಯ ಜಂಟಿ ಸಭೆಯಲ್ಲಿ ಈ ಮಹತ್ವದ ನಿರ್ಧಾರವನ್ನು ಸರ್ವಾನುಮತದಿಂದ ತೆಗೆದುಕೊಳ್ಳಲಾಗಿದೆ. ಈ ನೇಮಕಾತಿಯು ಮುಂಬರುವ KPSC KAS, PSI, FDA, SDA, ಮತ್ತು ಇತರೆ ಸ್ಪರ್ಧಾತ್ಮಕ ಪರೀಕ್ಷೆಗಳ 'ರಾಷ್ಟ್ರೀಯ ನೇಮಕಾತಿಗಳು' ಮತ್ತು 'ವ್ಯಕ್ತಿ ವಿಶೇಷ' ವಿಭಾಗಕ್ಕೆ ಅತ್ಯಂತ ಪ್ರಮುಖ ಪ್ರಚಲಿತ ವಿದ್ಯಮಾನವಾಗಿದೆ (Current Affairs).

➤ ಭಾರತೀಯ ವಿದ್ಯಾ ಭವನದ ಅಧ್ಯಕ್ಷರಾಗಿದ್ದ ಸುರೇಂದ್ರಲಾಲ್ ಮೆಹ್ತಾ (Surendralal Mehta) ಅವರು ತಮ್ಮ ಆರೋಗ್ಯದ ಸಮಸ್ಯೆಯ ಕಾರಣದಿಂದಾಗಿ ಹುದ್ದೆಗೆ ರಾಜೀನಾಮೆ ನೀಡಿದ್ದರು. ಕಳೆದ ಎರಡು ದಶಕಗಳಿಂದ (20 ವರ್ಷಗಳು) ಭವನದ ಅಧ್ಯಕ್ಷರಾಗಿ ಮತ್ತು ಐದು ದಶಕಗಳಿಗೂ ಹೆಚ್ಚು ಕಾಲ ಸಂಸ್ಥೆಯ ನಿಸ್ವಾರ್ಥ ಸೇವೆ ಸಲ್ಲಿಸಿದ್ದ ಮೆಹ್ತಾ ಅವರ ರಾಜೀನಾಮೆಯನ್ನು ಅಂಗೀಕರಿಸಿದ ನಂತರ ಈ ಹೊಸ ನೇಮಕಾತಿ ನಡೆದಿದೆ.

➤ **ಬನ್ವಾರಿಲಾಲ್ ಪುರೋಹಿತ್:** ಬನ್ವಾರಿಲಾಲ್ ಪುರೋಹಿತ್ ಅವರು ಪಂಜಾಬ್, ತಮಿಳುನಾಡು ಸೇರಿದಂತೆ ಹಲವು ರಾಜ್ಯಗಳ ಮಾಜಿ ರಾಜ್ಯಪಾಲರಾಗಿ, ನಾಗ್ಪುರದ ಮೂರು ಬಾರಿಯ ಸಂಸದರಾಗಿ, 'ದಿ ಹಿತವಾದ' ಪತ್ರಿಕೆಯ ಮ್ಯಾನೇಜಿಂಗ್ ಎಡಿಟರ್ ಆಗಿ ಹಾಗೂ ಕಳೆದ 22 ವರ್ಷಗಳಿಂದ ಭಾರತೀಯ ವಿದ್ಯಾ ಭವನದ ಟ್ರಸ್ಟಿ ಮತ್ತು ಉಪಾಧ್ಯಕ್ಷರಾಗಿ ಸುದೀರ್ಘ ಸೇವೆ ಸಲ್ಲಿಸಿದ ಅನುಭವ ಹೊಂದಿದ್ದಾರೆ.

➤ **ಉಪಾಧ್ಯಕ್ಷರಾಗಿ ದೀಪಕ್ ಪರೇಖ್ ನೇಮಕ:** ಭಾರತದ ಬ್ಯಾಂಕಿಂಗ್ ಮತ್ತು ವಸತಿ ಹಣಕಾಸು (Housing Finance) ಕ್ಷೇತ್ರದಲ್ಲಿ ಕ್ರಾಂತಿ ಸೃಷ್ಟಿಸಿದ ದೀಪಕ್ ಪರೇಖ್ ಅವರನ್ನು ಸಂಸ್ಥೆಯ ಉಪಾಧ್ಯಕ್ಷರನ್ನಾಗಿ ಮಾಡಲಾಗಿದೆ. ಎಚ್‌ಡಿಎಫ್‌ಸಿ (HDFC Ltd) ಸಂಸ್ಥೆಯ ಮಾಜಿ ಚೇರ್ಮನ್ ಆಗಿರುವ ಇವರು ದೇಶದ ಆರ್ಥಿಕ ಬೆಳವಣಿಗೆಗೆ ಅಪಾರ ಕೊಡುಗೆ ನೀಡಿದ್ದಾರೆ. ಇವರು ಈಗಾಗಲೇ ಭವನದ ಪ್ರತಿಷ್ಠಿತ ಬಿಸಿನೆಸ್ ಸ್ಕೂಲ್ ಆದ 'SPJIMR' ನ ಗೌರವಾನ್ವಿತ ಚೇರ್ಮನ್ ಆಗಿ ಕಳೆದ ಹತ್ತು ವರ್ಷಗಳಿಂದ ಮುನ್ನಡೆಸುತ್ತಿದ್ದಾರೆ.

➤ **ಭಾರತೀಯ ವಿದ್ಯಾ ಭವನ (BVB):** ಭಾರತೀಯ ವಿದ್ಯಾ ಭವನವನ್ನು 1938 ರ ನವೆಂಬರ್ 7 ರಂದು ಸ್ವಾತಂತ್ರ್ಯ ಹೋರಾಟಗಾರ ಹಾಗೂ ಸಾಹಿತಿ ಕುಲಪತಿ ಡಾ. ಕೆ. ಎಂ. ಮುನ್ಷಿ ಅವರು ಮಹಾತ್ಮ ಗಾಂಧೀಜಿಯವರ ಆಶೀರ್ವಾದದೊಂದಿಗೆ ಸ್ಥಾಪಿಸಿದರು; ಇದು ಭಾರತೀಯ ಸನಾತನ ಸಂಸ್ಕೃತಿ, ಶಿಕ್ಷಣ ಮತ್ತು ನೈತಿಕ ಮೌಲ್ಯಗಳನ್ನು ಆಧುನಿಕ ಶಿಕ್ಷಣದೊಂದಿಗೆ ಸಂಯೋಜಿಸಿ ಪ್ರಚಾರ ಮಾಡುವ ಪ್ರಮುಖ ಉದ್ದೇಶವನ್ನು ಹೊಂದಿದ್ದು, ಪ್ರಸ್ತುತ ಭಾರತದಾದ್ಯಂತ ಹಾಗೂ ವಿದೇಶಗಳಲ್ಲಿ ನೂರಾರು ಶೈಕ್ಷಣಿಕ ಸಂಸ್ಥೆಗಳನ್ನು ನಡೆಸುತ್ತಾ, ಕರ್ನಾಟಕದ ಬೆಂಗಳೂರು ಮತ್ತು ಮೈಸೂರು ಸೇರಿದಂತೆ ಹಲವು ಜಿಲ್ಲೆಗಳಲ್ಲಿ ತನ್ನ ಸಕ್ರಿಯ ಕೇಂದ್ರಗಳನ್ನು ಹೊಂದಿದೆ.

## ಭಾರತದ ಅಧ್ಯಕ್ಷತೆಯಲ್ಲಿ ಇಂದೋರ್‌ನಲ್ಲಿ ಭವ್ಯ ಬ್ರಿಕ್ಸ್ (BRICS) ಕೃಷಿ ಸಚಿವರ ಸಮ್ಮೇಳನ 2026 ಆರಂಭ



➤ ಭಾರತದ ಬ್ರಿಕ್ಸ್ (BRICS) ಅಧ್ಯಕ್ಷತೆಯ ಅಡಿಯಲ್ಲಿ ಅತ್ಯಂತ ಪ್ರತಿಷ್ಠಿತ ಕೃಷಿ ಕಾರ್ಯನಿರತ ಗುಂಪು ಮತ್ತು ಕೃಷಿ ಸಚಿವರ ಐದು ದಿನಗಳ ಸುದೀರ್ಘ ಸಭೆಯು ಮಧ್ಯಪ್ರದೇಶದ ಇಂದೋರ್‌ನಲ್ಲಿ ಜೂನ್ 9, 2026 ರಂದು ಅತ್ಯಂತ ಯಶಸ್ವಿಯಾಗಿ ಆರಂಭಗೊಂಡಿದೆ. ಜಾಗತಿಕ ಜನಸಂಖ್ಯೆಯ ಅರ್ಧಕ್ಕಿಂತ ಹೆಚ್ಚು ಭಾಗವನ್ನು ಪ್ರತಿನಿಧಿಸುವ ಬ್ರಿಕ್ಸ್ ಒಕ್ಕೂಟದ ಈ ಕೃಷಿ ಸಭೆಯು ಪ್ರಸ್ತುತ ಜಾಗತಿಕ ಪರಿಸ್ಥಿತಿಯಲ್ಲಿ ಅತ್ಯಂತ ನಿರ್ಣಾಯಕವೆಂದು ಪರಿಗಣಿಸಲಾಗಿದೆ.

➤ ಭಾರತ ಸರಕಾರದ ಕೃಷಿ ಮತ್ತು ರೈತ ಕಲ್ಯಾಣ ಇಲಾಖೆಯ ಕಾರ್ಯದರ್ಶಿಗಳಾದ ಅತಿಶ್ ಚಂದ್ರ ಅವರು ಈ ಉನ್ನತ ಮಟ್ಟದ ಸಭೆಯ ಉದ್ಘಾಟನಾ ಅಧಿವೇಶನದ ನೇತೃತ್ವವನ್ನು ವಹಿಸಿದ್ದರು. ಆರಂಭಿಕ ಮೂರು ದಿನಗಳು (ಜೂನ್ 11ರವರೆಗೆ) ವಿವಿಧ ಸದಸ್ಯ ದೇಶಗಳ ಹಿರಿಯ ಅಧಿಕಾರಿಗಳು ಮತ್ತು ಕೃಷಿ ತಜ್ಞರ ಮಟ್ಟದಲ್ಲಿ ಸುದೀರ್ಘ ಚರ್ಚೆಗಳು ನಡೆಯಲಿದ್ದು, ಕೊನೆಯ ಎರಡು ದಿನಗಳಾದ ಜೂನ್ 12 ಮತ್ತು 13ರಂದು ಬ್ರಿಕ್ಸ್ ದೇಶಗಳ ಕೃಷಿ ಸಚಿವರ ನೇರ ಸಮಾಲೋಚನೆ ಜರುಗಲಿದೆ.

➤ **ಚರ್ಚೆಯಾಗಲಿರುವ ಪ್ರಮುಖ ವಿಷಯಗಳು:**

ಜಾಗತಿಕ ಆಹಾರ ಭದ್ರತೆ (Global Food Security): ಜಗತ್ತಿನಾದ್ಯಂತ ಹೆಚ್ಚುತ್ತಿರುವ ಜನಸಂಖ್ಯೆಗೆ ಪೌಷ್ಟಿಕ ಹಾಗೂ ಸುಸ್ಥಿರ ಆಹಾರ ಪೂರೈಕೆಯನ್ನು ಖಾತರಿಪಡಿಸುವುದು.

ಪರಿಸರಸ್ನೇಹಿ ಸ್ಮಾರ್ಟ್ ಕೃಷಿ (Eco-Friendly Smart Agriculture): ಹವಾಮಾನ ಬದಲಾವಣೆಯ ದುಷ್ಪರಿಣಾಮಗಳನ್ನು ತಗ್ಗಿಸಲು ಪರಿಸರಕ್ಕೆ ಪೂರಕವಾದ ಹಾಗೂ ಆಧುನಿಕ ತಂತ್ರಜ್ಞಾನ ಆಧಾರಿತ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳುವುದು.

ಅಂತರರಾಷ್ಟ್ರೀಯ ಕೃಷಿ ವ್ಯಾಪಾರ ಮತ್ತು ಪೂರೈಕೆ ಸರಪಳಿ: ಬ್ರಿಕ್ಸ್ ರಾಷ್ಟ್ರಗಳ ನಡುವೆ ಕೃಷಿ ಉತ್ಪನ್ನಗಳ ಸುಗಮ ವ್ಯಾಪಾರ ಮತ್ತು ಪೂರೈಕೆ ಸರಪಳಿಯನ್ನು (Supply Chain) ಬಲಪಡಿಸುವುದು.

ರೈತರ ಕಲ್ಯಾಣ ಮತ್ತು ಆದಾಯ ವೃದ್ಧಿ: ಸಣ್ಣ ಮತ್ತು ಮಧ್ಯಮ ವರ್ಗದ ರೈತರ ಅಭಿವೃದ್ಧಿ ಹಾಗೂ ಅವರ ಆರ್ಥಿಕ ಭದ್ರತೆಗೆ ಹೊಸ ಯೋಜನೆಗಳನ್ನು ರೂಪಿಸುವುದು.

ವಿಶೇಷ ತಾಂತ್ರಿಕ ಚರ್ಚೆ: ಕೃಷಿ ಕ್ಷೇತ್ರದಲ್ಲಿ ಆಧುನಿಕ ತಂತ್ರಜ್ಞಾನಗಳಾದ ಕೃತಕ ಬುದ್ಧಿಮತ್ತೆ (Artificial Intelligence - AI) ಮತ್ತು ರೋಬೋಟಿಕ್ಸ್ (Robotics) ಅನ್ನು ಹೇಗೆ ಪರಿಣಾಮಕಾರಿಯಾಗಿ ಬಳಸಿಕೊಳ್ಳಬಹುದು ಮತ್ತು ಇದರಿಂದ ಬೆಳೆ ಉತ್ಪಾದಕತೆಯನ್ನು ಹೇಗೆ ಹೆಚ್ಚಿಸಬಹುದು ಎಂಬುದರ ಕುರಿತು ಜಾಗತಿಕ ತಜ್ಞರು ಈ ಸಭೆಯಲ್ಲಿ ವಿಶೇಷ ನೀಲನಕ್ಷೆಯನ್ನು ಸಿದ್ಧಪಡಿಸುತ್ತಿದ್ದಾರೆ.

➤ **ವಿಸ್ತೃತ ಬ್ರಿಕ್ಸ್ (BRICS) ಒಕ್ಕೂಟದ 11 ಸದಸ್ಯ ರಾಷ್ಟ್ರಗಳು:** ಬ್ರಿಕ್ಸ್ ಒಕ್ಕೂಟವು ಇತ್ತೀಚಿನ ವರ್ಷಗಳಲ್ಲಿ ವಿಸ್ತರಣೆಗೊಂಡಿದ್ದು, ಜಾಗತಿಕ ಆರ್ಥಿಕತೆಯ ಪ್ರಮುಖ ಕೇಂದ್ರವಾಗಿ ಹೊರಹೊಮ್ಮಿದೆ. ಪ್ರಸ್ತುತ ಈ ಸಭೆಯಲ್ಲಿ ಭಾಗವಹಿಸುತ್ತಿರುವ 11 ಪ್ರಮುಖ ಉದಯೋನ್ಮುಖ ಆರ್ಥಿಕತೆ ಹೊಂದಿರುವ ರಾಷ್ಟ್ರಗಳು:

ಮೂಲ ಸದಸ್ಯರು: ಭಾರತ (India - ಆತಿಥೇಯ ರಾಷ್ಟ್ರ), ಬ್ರೆಜಿಲ್ (Brazil), ರಷ್ಯಾ (Russia), ಚೀನಾ (China), ದಕ್ಷಿಣ ಆಫ್ರಿಕಾ (South Africa).

ಹೊಸದಾಗಿ ಸೇರ್ಪಡೆಯಾದ/ಭಾಗವಹಿಸುತ್ತಿರುವ ರಾಷ್ಟ್ರಗಳು: ಈಜಿಪ್ಟ್ (Egypt), ಇಥಿಯೋಪಿಯ (Ethiopia), ಇರಾನ್ (Iran), ಸೌದಿ ಅರೇಬಿಯಾ (Saudi Arabia), ಯುನೈಟೆಡ್ ಅರಬ್ ಎಮಿರೇಟ್ಸ್ (UAE) ಮತ್ತು ಇಂಡೋನೇಷ್ಯಾ (Indonesia).

## ಭಾರತ-ಇಂಡೋನೇಷ್ಯಾ ಬ್ರಹ್ಮೋಸ್ ಕ್ಷಿಪಣಿ ಒಪ್ಪಂದ: ರಕ್ಷಣಾ ವಲಯದಲ್ಲಿ ಹೊಸ ಮೈಲಿಗಲ್ಲು!




➤ ಭಾರತ ಮತ್ತು ಇಂಡೋನೇಷ್ಯಾ ನಡುವಿನ ರಕ್ಷಣಾ ಬಾಂಧವ್ಯವು ಮತ್ತೊಂದು ಐತಿಹಾಸಿಕ ಮೈಲಿಗಲ್ಲಿನತ್ತ ಸಾಗುತ್ತಿದೆ. ಮುಂಬರುವ ಜುಲೈ ಎರಡನೇ ವಾರದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಇಂಡೋನೇಷ್ಯಾದ ರಾಜಧಾನಿ ಜಕಾರ್ತಕ್ಕೆ ಉನ್ನತ ಮಟ್ಟದ ಅಧಿಕೃತ ಭೇಟಿ ನೀಡಲಿದ್ದಾರೆ. ಈ ಪ್ರವಾಸದ

ಪ್ರಮುಖ ಕಾರ್ಯಸೂಚಿಯೆಂದರೆ ಭಾರತದ ಅತ್ಯಾಧುನಿಕ ಸೂಪರ್‌ಸಾನಿಕ್ ಕ್ರೂಸ್ ಕ್ಷಿಪಣಿಯಾದ 'ಬ್ರಹ್ಮೋಸ್' (BrahMos) ಹಸ್ತಾಂತರ ಒಪ್ಪಂದವನ್ನು ಅಂತಿಮಗೊಳಿಸುವುದಾಗಿದೆ.

➤ ಇತ್ತೀಚೆಗೆ ಸಿಂಗಾಪುರದಲ್ಲಿ ನಡೆದ ಪ್ರಸಿದ್ಧ 'ಶಾಂಗ್ರಿಲಾ ಡೈಲಾಗ್' (Shangri-La Dialogue) ರಕ್ಷಣಾ ಶೃಂಗಸಭೆಯಲ್ಲಿ ಭಾಗವಹಿಸಿದ್ದ ಭಾರತದ ರಕ್ಷಣಾ ಕಾರ್ಯದರ್ಶಿ ರಾಜೇಶ್ ಕುಮಾರ್ ಸಿಂಗ್ ಅವರು, ಇಂಡೋನೇಷ್ಯಾ ಜೊತೆಗಿನ ಬ್ರಹ್ಮೋಸ್ ಕ್ಷಿಪಣಿ ಮಾರಾಟದ ಮಾತುಕತೆಗಳು ಅಂತಿಮ ಹಂತ ತಲುಪಿವೆ ಎಂದು ಸ್ಪಷ್ಟಪಡಿಸಿದ್ದರು.

➤ **ಮೂರನೇ ಆಗ್ನೇಯ ಏಷ್ಯಾ ರಾಷ್ಟ್ರ:** ಈ ರಕ್ಷಣಾ ಒಪ್ಪಂದ ಯಶಸ್ವಿಯಾದರೆ, ಆಗ್ನೇಯ ಏಷ್ಯಾ (Southeast Asia) ವಲಯದ ಅತಿ ದೊಡ್ಡ ದೇಶವಾದ ಇಂಡೋನೇಷ್ಯಾವೂ ಭಾರತದಿಂದ ಬ್ರಹ್ಮೋಸ್ ಖರೀದಿಸಲಿರುವ ಮೂರನೇ ರಾಷ್ಟ್ರವಾಗಲಿದೆ. ಇದಕ್ಕೂ ಮುನ್ನ ಫಿಲಿಪ್ಪೀನ್ಸ್ ಮತ್ತು ವಿಯೆಟ್ನಾಂ ದೇಶಗಳು ಭಾರತದೊಂದಿಗೆ ಬ್ರಹ್ಮೋಸ್ ಒಪ್ಪಂದ ಮಾಡಿಕೊಂಡಿವೆ.

➤ ರಾಜತಾಂತ್ರಿಕ ಸಿದ್ಧತೆ: ಇತ್ತೀಚಿನ ಭಾರತದ ಗಣರಾಜ್ಯೋತ್ಸವದ ಮುಖ್ಯ ಅತಿಥಿಯಾಗಿದ್ದ ಇಂಡೋನೇಷ್ಯಾದ ಅಧ್ಯಕ್ಷ ಪ್ರಬೋವೊ ಸುಬ್ಯಾಂಟೊ (Prabowo Subianto) ಹಾಗೂ ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಈಗಾಗಲೇ ಈ ಒಪ್ಪಂದಕ್ಕೆ ಪೂರಕವಾದ ರಾಜತಾಂತ್ರಿಕ ಚೌಕಟ್ಟನ್ನು ಸಿದ್ಧಪಡಿಸಿದ್ದಾರೆ.

➤ **ರಕ್ಷಣಾ ರಫ್ತು ಹೆಚ್ಚಳ:** ಈ ಒಪ್ಪಂದವು ಇಂಡೋ-ಪೆಸಿಫಿಕ್ (Indo-Pacific) ವಲಯದಲ್ಲಿ ಚೀನಾದ ಆಕ್ರಮಣಕಾರಿ ನೀತಿಗೆ ತಡೆ ಒಡ್ಡುವಲ್ಲಿ ಮತ್ತು ಜಾಗತಿಕ ಮಟ್ಟದಲ್ಲಿ ಭಾರತದ ರಕ್ಷಣಾ ರಫ್ತು ಸಾಮರ್ಥ್ಯ ಹಾಗೂ ಪ್ರಭಾವವನ್ನು ಗಣನೀಯವಾಗಿ ಹೆಚ್ಚಿಸಲು ನೆರವಾಗಲಿದೆ.

## ಲಕ್ಷದ್ವೀಪದಲ್ಲಿ 5 ದಶಕದ ಬಳಿಕ ಮದ್ಯ ಮಾರಾಟ ನಿಷೇಧ ತೆರವು: ಪ್ರವಾಸೋದ್ಯಮ ಬೆಳವಣಿಗೆಗೆ ಹೊಸ ದಿಕ್ಸೂಚಿ




➤ ಕೇಂದ್ರಾಡಳಿತ ಪ್ರದೇಶವಾದ ಲಕ್ಷದ್ವೀಪದಲ್ಲಿ ಕಳೆದ 47 ವರ್ಷಗಳಿಂದ (ಸುಮಾರು ಐದು ದಶಕಗಳು) ಜಾರಿಯಲ್ಲಿದ್ದ ಸಂಪೂರ್ಣ ಮದ್ಯಪಾನ ನಿಷೇಧ ಕಾಯ್ದೆಯನ್ನು ಕೇಂದ್ರ ಸರ್ಕಾರವು ಅಧಿಕೃತವಾಗಿ ಹಿಂಪಡೆದಿದೆ. ದ್ವೀಪ ಸಮೂಹದಲ್ಲಿ ಪ್ರವಾಸೋದ್ಯಮವನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ಯುವ ನಿಟ್ಟಿನಲ್ಲಿ ಹೊಸ ಅಬಕಾರಿ ನೀತಿಯನ್ನು ಜಾರಿಗೆ ತರಲು ಸರ್ಕಾರ ನಿರ್ಧರಿಸಿದ್ದು, ಈ ಕುರಿತು ಜೂನ್ 5ರಂದು ಅಧಿಕೃತ ರಾಜ್ಯಪತ್ರದಲ್ಲಿ (Gazette) ಅಧಿಸೂಚನೆ ಹೊರಡಿಸಲಾಗಿದೆ.

➤ ಐತಿಹಾಸಿಕ ಹಿನ್ನೆಲೆ ಮತ್ತು ತೀರ್ಮಾನ: ಲಕ್ಷದ್ವೀಪವು ಭಾರತದ ಅತ್ಯಂತ ಸಣ್ಣ ಹಾಗೂ ಸುಂದರವಾದ ಕೇಂದ್ರಾಡಳಿತ ಪ್ರದೇಶವಾಗಿದೆ. ಈ ದ್ವೀಪ ಸಮೂಹದಲ್ಲಿ ಮುಸ್ಲಿಂ ಸಮುದಾಯದ ಜನಸಂಖ್ಯೆ ಬಹುಸಂಖ್ಯಾತವಾಗಿರುವುದರಿಂದ, ಅವರ ಧಾರ್ಮಿಕ ಮತ್ತು ಸಾಂಪ್ರದಾಯಿಕ ಭಾವನೆಗಳನ್ನು ಗೌರವಿಸಿ ಕಳೆದ 47 ವರ್ಷಗಳಿಂದ ಮದ್ಯ ಮಾರಾಟ ಮತ್ತು ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿತ್ತು (ಕೇವಲ ಬಂಗಾರಂ ದ್ವೀಪದ ರೆಸಾರ್ಟ್‌ಗಳಲ್ಲಿ ಮಾತ್ರ ಸೀಮಿತ ಅನುಮತಿ ಇತ್ತು). ಆದರೆ, ಜಾಗತಿಕ ಪ್ರವಾಸೋದ್ಯಮದ ಪೈಪೋಟಿ ಮತ್ತು ಆರ್ಥಿಕ ಅಭಿವೃದ್ಧಿಯ ದೃಷ್ಟಿಯಿಂದ ಕೇಂದ್ರ ಸರ್ಕಾರ ಈ ಐತಿಹಾಸಿಕ ತೀರ್ಮಾನ ಕೈಗೊಂಡಿದೆ.

➤ **ಹೊಸ ಅಬಕಾರಿ ನೀತಿಯ ಪ್ರಮುಖ ನಿಯಮಗಳು:** ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಹೊಸ ನಿಯಮಾವಳಿಗಳಲ್ಲಿ ಪ್ರವಾಸೋದ್ಯಮದ ಅಭಿವೃದ್ಧಿಯ ಜೊತೆಗೆ ಕಟ್ಟುನಿಟ್ಟಿನ ನಿಯಂತ್ರಣಗಳನ್ನೂ ಅಳವಡಿಸಲಾಗಿದೆ:

- ಪರವಾನಗಿ ವ್ಯವಸ್ಥೆ: ಹೊಸ ನಿಯಮದ ಅಡಿಯಲ್ಲಿ ಮದ್ಯದ ಆಮದು, ರಫ್ತು, ಸಾಗಾಟ ಮತ್ತು ಮಾರಾಟಕ್ಕೆ ಪರವಾನಗಿ (Licence) ನೀಡಲು ಅವಕಾಶ ಕಲ್ಪಿಸಲಾಗಿದೆ.
- ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ ಮುಕ್ತ ಅವಕಾಶ: ಸರ್ಕಾರದ ಅಧಿಕೃತ ನಿಗಮಗಳು ಮತ್ತು ಏಜೆನ್ಸಿಗಳಿಗೆ ಆಲ್ಕೋಹಾಲ್ ಉತ್ಪನ್ನಗಳನ್ನು ಆಮದು ಮಾಡಿಕೊಳ್ಳಲು ಹಾಗೂ ಮಾರಾಟ ಮಾಡಲು ಮುಕ್ತ ಅವಕಾಶ ನೀಡಲಾಗಿದೆ.
- ವಯಸ್ಸಿನ ಮಿತಿ: 21 ವರ್ಷಕ್ಕಿಂತ ಕಡಿಮೆ ವಯಸ್ಸಿನ ವ್ಯಕ್ತಿಗಳು ಮದ್ಯ ಮಾರಾಟ ಮಾಡುವುದನ್ನು ಹಾಗೂ ಮದ್ಯದ ವ್ಯಾಪಾರ ಪ್ರಕ್ರಿಯೆಗಳಲ್ಲಿ ತೊಡಗಿಸಿಕೊಳ್ಳುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ.
- ಆಡಳಿತಾಧಿಕಾರಿಗಳ ವಿಶೇಷ ಅಧಿಕಾರ: ಲಕ್ಷದ್ವೀಪದ ಆಡಳಿತಾಧಿಕಾರಿಗಳು (Administrators) ಸ್ಥಳೀಯ ಕಾನೂನು ಸುವ್ಯವಸ್ಥೆ ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ ಯಾವುದೇ ನಿರ್ದಿಷ್ಟ ಪ್ರದೇಶದಲ್ಲಿ ಮದ್ಯ ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸುವ ಸರ್ವಾಧಿಕಾರವನ್ನು ಹೊಂದಿರುತ್ತಾರೆ.

➤ **ಪ್ರಧಾನಿ ಮೋದಿ ಭೇಟಿ ಮತ್ತು ಪ್ರವಾಸೋದ್ಯಮದ ಕ್ರಾಂತಿ:** 2024ರ ಜನವರಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಲಕ್ಷದ್ವೀಪಕ್ಕೆ ಭೇಟಿ ನೀಡಿ ಅಲ್ಲಿನ ಸೌಂದರ್ಯವನ್ನು ಜಾಗತಿಕ ಮಟ್ಟದಲ್ಲಿ ಪರಿಚಯಿಸಿದ್ದರು. ಈ ಭೇಟಿಯ ನಂತರ ಲಕ್ಷದ್ವೀಪಕ್ಕೆ ಭೇಟಿ ನೀಡುವ ದೇಶೀಯ ಹಾಗೂ ವಿದೇಶಿ ಪ್ರವಾಸಿಗರ ಸಂಖ್ಯೆಯಲ್ಲಿ ಗಣನೀಯ ಹಾಗೂ ದಾಖಲೆ ಮಟ್ಟದ ಏರಿಕೆ ಕಂಡುಬಂದಿದೆ. ಜಾಗತಿಕ ಪ್ರವಾಸಿಗರನ್ನು ಆಕರ್ಷಿಸಲು ಮಾಲ್ಡೀವ್ಸ್ ಮಾದರಿಯ ರೆಸಾರ್ಟ್‌ಗಳು, ಕ್ರೂಸ್ ಪ್ರವಾಸೋದ್ಯಮ ಮತ್ತು ಜಲಕ್ರೀಡೆಗಳಿಗೆ ಉತ್ತೇಜನ ನೀಡಲಾಗುತ್ತಿದೆ. ಅಂತರರಾಷ್ಟ್ರೀಯ ಪ್ರವಾಸಿಗರ ಪ್ರಮುಖ ಬೇಡಿಕೆಗಳಲ್ಲೊಂದಾಗಿದ್ದ ಮದ್ಯದ ಲಭ್ಯತೆಯನ್ನು ಪೂರೈಸಲು ಈ ನೀತಿ ಸಹಕಾರಿಯಾಗಲಿದೆ.

➤ ಸ್ಥಳೀಯ ರಾಜಕೀಯ ಮತ್ತು ಸಮುದಾಯಗಳ ಒಲವು: ಈ ಹಿಂದೆ ಲಕ್ಷದ್ವೀಪದ ಕೆಲವು ಸ್ಥಳೀಯ ರಾಜಕೀಯ ಪಕ್ಷಗಳು ಹಾಗೂ ಸಾಮಾಜಿಕ ಒಕ್ಕೂಟಗಳು ಪ್ರವಾಸೋದ್ಯಮದ ಆರ್ಥಿಕ ಲಾಭವನ್ನು ಪರಿಗಣಿಸಿ, ನಿಯಂತ್ರಿತ ಮದ್ಯ ಮಾರಾಟಕ್ಕೆ ಅವಕಾಶ ನೀಡುವಂತೆ ಆಗಾಗ್ಗೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾಪಗಳನ್ನು ಸಲ್ಲಿಸಿದ್ದವು. ಪ್ರಸ್ತುತ ಹೊಸ ನೀತಿಯು ಪ್ರವಾಸಿ ವಲಯಗಳಿಗೆ ಮಾತ್ರ ಸೀಮಿತವಾಗುವಂತೆ ನಿಯಂತ್ರಿಸುವ ಮೂಲಕ ಸ್ಥಳೀಯ ಸಂಸ್ಕೃತಿ ಮತ್ತು ಆರ್ಥಿಕತೆ ಎರಡನ್ನೂ ಸರಿದೂಗಿಸುವ ಪ್ರಯತ್ನ ಮಾಡಲಾಗಿದೆ.

## ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಂದ 'ವಿನಿಮಯ್' (VINIMAY) ಭೂ ಬಂದರು ನಿರ್ವಹಣಾ ವ್ಯವಸ್ಥೆ ಲೋಕಾರ್ಪಣೆ!



➤ ಭಾರತದ ಗಡಿ ಮೂಲಸೌಕರ್ಯ ಮತ್ತು ವ್ಯಾಪಾರ ವಲಯದಲ್ಲಿ ಇದೊಂದು ಕ್ರಾಂತಿಕಾರಿ ಹೆಜ್ಜೆಯಾಗಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ನವದೆಹಲಿಯಲ್ಲಿ ಜೂನ್ 9, 2026 ರಂದು 'ವಿನಿಮಯ್' (VINIMAY) ಎಂಬ ಅತ್ಯಾಧುನಿಕ ಭೂ ಬಂದರು ನಿರ್ವಹಣಾ ವ್ಯವಸ್ಥೆಯನ್ನು (Land Port Management System - LPMS) ಉದ್ಘಾಟಿಸಿದ್ದಾರೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ 'ಸ್ಮಾರ್ಟ್ ಬಾರ್ಡರ್ಸ್' (Smart Borders) ಮತ್ತು 'ವಿಕಸಿತ್ ಭಾರತ್ 2047' ದೃಷ್ಟಿಕೋನಕ್ಕೆ ಪೂರಕವಾಗಿ ಈ ಡಿಜಿಟಲ್ ಪ್ಲಾಟ್‌ಫಾರ್ಮ್ ಅನ್ನು ವಿನ್ಯಾಸಗೊಳಿಸಲಾಗಿದೆ.

➤ **'ವಿನಿಮಯ್' (VINIMAY) ವ್ಯವಸ್ಥೆ:** 'ವಿನಿಮಯ್' ಎಂಬುದು ಭಾರತದ ಭೂ ಬಂದರುಗಳ (Land Ports) ಮೂಲಕ ನಡೆಯುವ ಸರಕು ಸಾಗಣೆ, ಪ್ರಯಾಣಿಕರ ಸಂಚಾರ ಮತ್ತು ವಾಹನಗಳ ಸಂಸ್ಕರಣೆಯನ್ನು ಒಂದೇ ಸೂರಿನಡಿ ತರುವ ಒಂದು

ಪ್ರಮಾಣೀಕೃತ ಕೇಂದ್ರೀಕೃತ ಡಿಜಿಟಲ್ ಪ್ಲಾಟ್‌ಫಾರ್ಮ್ ಆಗಿದೆ. ವಿಮಾನ ನಿಲ್ದಾಣಗಳು ಮತ್ತು ಸಮುದ್ರ ಬಂದರುಗಳಲ್ಲಿ ಇರುವಂತಹ ಅತ್ಯಾಧುನಿಕ ಡಿಜಿಟಲ್ ತಂತ್ರಜ್ಞಾನವನ್ನು ಈಗ ದೇಶದ ಭೂ ಗಡಿ ಬಂದರುಗಳಿಗೂ ಅನ್ವಯಿಸಲಾಗಿದೆ.

**➤ 'ವಿನಿಮಯ' ಪ್ಲಾಟ್‌ಫಾರ್ಮ್‌ನ ಪ್ರಮುಖ ವೈಶಿಷ್ಟ್ಯಗಳು ಮತ್ತು ಪ್ರಯೋಜನಗಳು:**

ಏಕ ಎಲೆಕ್ಟ್ರಾನಿಕ್ ವಿಂಡೋ (Single Electronic Window): ಕಸ್ಟಮ್ಸ್ (Customs), ವಲಸೆ ವಿಭಾಗ (Immigration), ಗಡಿ ಭದ್ರತಾ ಪಡೆಗಳು (BSF, SSB) ಮತ್ತು ಇತರ ನಿಯಂತ್ರಕ ಸಂಸ್ಥೆಗಳ ನಡುವೆ ನೈಜ-ಸಮಯದ (Real-time) ಮಾಹಿತಿ ವಿನಿಮಯಕ್ಕೆ ಇದು ಸಹಕಾರಿಯಾಗಿದೆ.

ಸಮಯ ಮತ್ತು ವೆಚ್ಚದ ಉಳಿತಾಯ: ಗಡಿಗಳಲ್ಲಿ ಲಾರಿ ಹಾಗೂ ವಾಹನಗಳ ಕಾಯುವ ಅವಧಿಯನ್ನು ಶೇ. 40 ರಿಂದ ಶೇ. 60 ರಷ್ಟು ಕಡಿತಗೊಳಿಸಲಿದೆ. ಹಾಗೆಯೇ ಗೇಟ್ ಪ್ರೊಸೆಸಿಂಗ್ ಸಮಯವನ್ನು ಶೇ. 22 ರಿಂದ 35 ರಷ್ಟು ಕಡಿಮೆ ಮಾಡುತ್ತದೆ.

ಶೇ. 90 ರಷ್ಟು ಕಾಗದ ರಹಿತ ವ್ಯವಸ್ಥೆ: ಭೂ ಬಂದರುಗಳಲ್ಲಿ ಇದುವರೆಗೆ ನಡೆಯುತ್ತಿದ್ದ ಶೇ. 90 ಕ್ಕೂ ಹೆಚ್ಚು ಕಾಗದದ ಕೆಲಸಗಳನ್ನು (Paperwork) ಈ ಡಿಜಿಟಲ್ ವ್ಯವಸ್ಥೆ ಇಲ್ಲವಾಗಿಸಲಿದೆ.

ಸುಧಾರಿತ ತಂತ್ರಜ್ಞಾನದ ಬಳಕೆ: ಸ್ವಯಂಚಾಲಿತ ನಂಬರ್ ಪ್ಲೇಟ್ ಗುರುತಿಸುವಿಕೆ (ANPR) ಆಧಾರಿತ ಗೇಟ್ ಕಾರ್ಯಾಚರಣೆ, ಆನ್‌ಲೈನ್ ಸ್ಲಾಟ್ ಬುಕಿಂಗ್, ಡಿಜಿಟಲ್ ಪಾವತಿ ಮತ್ತು ಸಾಗಣೆ ಟ್ರ್ಯಾಕಿಂಗ್ ವ್ಯವಸ್ಥೆಯನ್ನು ಇದು ಒಳಗೊಂಡಿದೆ.

ಪ್ರಮುಖ ರಾಷ್ಟ್ರೀಯ ಪ್ಲಾಟ್‌ಫಾರ್ಮ್‌ಗಳೊಂದಿಗೆ ಏಕೀಕರಣ: ಇದು ಭಾರತೀಯ ಕಸ್ಟಮ್ಸ್‌ನ ICEGATE, ರಾಷ್ಟ್ರೀಯ ಲಾಜಿಸ್ಟಿಕ್ಸ್‌ನ ULIP ಮತ್ತು ಮೋಟಾರು ವಾಹನ ವ್ಯವಸ್ಥೆಗಳೊಂದಿಗೆ (VAHAN) ಸಂಪೂರ್ಣವಾಗಿ ಸಂಯೋಜಿಸಲ್ಪಟ್ಟಿದೆ.

➤ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಪ್ರಕಾರ, 2014 ಕ್ಕೆ ಹೋಲಿಸಿದರೆ ದೇಶದ ಒಟ್ಟು ಭೂ ಬಂದರುಗಳ ಸಂಖ್ಯೆ 15 ಕ್ಕೆ ಏರಿದ್ದು, ಮುಂಬರುವ ವರ್ಷಗಳಲ್ಲಿ ಇನ್ನು 11 ಬಂದರುಗಳನ್ನು ಸೇರಿಸುವ ಯೋಜನೆಯೊಂದಿಗೆ ಒಟ್ಟು ವ್ಯಾಪಾರದ ಮೌಲ್ಯವು ₹5,000 ಕೋಟಿಯಿಂದ ₹83,000 ಕೋಟಿಗೆ (ಸುಮಾರು 16 ಪಟ್ಟು) ಬೃಹತ್ ಪ್ರಗತಿ ಕಂಡಿದೆ.

➤ 'ವಿನಿಮಯ' ವ್ಯವಸ್ಥೆಯು ಕೇವಲ ಆರ್ಥಿಕ ಪ್ರಗತಿಗೆ ಮಾತ್ರ ಸೀಮಿತವಾಗಿಲ್ಲ. ಇದು ದೇಶದ ಗಡಿ ಭದ್ರತೆಯನ್ನು ಮತ್ತಷ್ಟು ಗಟ್ಟಿಗೊಳಿಸಲಿದೆ. ಅನಧಿಕೃತ ವಲಸೆ, ಅಕ್ರಮ ವ್ಯಾಪಾರ ಮತ್ತು ಕಳ್ಳಸಾಗಣೆಯನ್ನು ತಡೆಗಟ್ಟಲು ಈ ಡಿಜಿಟಲ್ ವ್ಯವಸ್ಥೆಯು ಪ್ರಮುಖ ಪಾತ್ರ ವಹಿಸಲಿದೆ. ಜೊತೆಗೆ ಗಡಿ ಗ್ರಾಮಗಳಿಂದ ಜನರು ವಲಸೆ ಹೋಗುವುದನ್ನು ತಡೆದು, ಸ್ಥಳೀಯ ಆರ್ಥಿಕತೆಯನ್ನು ಬಲಪಡಿಸಲು ಇದು ನೆರವಾಗಲಿದೆ ಎಂದು ಅಮಿತ್ ಶಾ ತಿಳಿಸಿದ್ದಾರೆ.

## ಜಾಗತಿಕ AI ಕ್ರಾಂತಿಗೆ ಭಾರತವೇ ದಿಕ್ಸೂಚಿ: ರಿಲಯನ್ಸ್ ಮತ್ತು ಮೆಟಾ ಸಹಭಾಗಿತ್ವದಲ್ಲಿ ಜಾಂನಗರದಲ್ಲಿ ದೇಶದ ಮೊದಲ ಬೃಹತ್ AI ಡೇಟಾ ಸೆಂಟರ್ ಸ್ಥಾಪನೆ!




➤ ಭಾರತದ ಡಿಜಿಟಲ್ ಇತಿಹಾಸದಲ್ಲೇ ಅತ್ಯಂತ ಪ್ರಮುಖ ಮೈಲಿಗಲ್ಲೊಂದು ದಾಖಲಾಗಿದೆ. ಜಾಗತಿಕ ತಂತ್ರಜ್ಞಾನ ದೈತ್ಯ 'ಮೆಟಾ' (Meta Platforms) ಮತ್ತು ಭಾರತದ ಅತಿ ದೊಡ್ಡ ಖಾಸಗಿ ಸಂಸ್ಥೆ 'ರಿಲಯನ್ಸ್ ಇಂಡಸ್ಟ್ರೀಸ್' (RIL) ಜಂಟಿಯಾಗಿ ಗುಜರಾತ್‌ನ ಜಾಂನಗರದಲ್ಲಿ ಭಾರಿ ಸಾಮರ್ಥ್ಯದ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ (AI) ಆಧಾರಿತ ಡೇಟಾ ಸೆಂಟರ್ ಅನ್ನು ಸ್ಥಾಪಿಸುವುದಾಗಿ ಅಧಿಕೃತವಾಗಿ ಘೋಷಿಸಿವೆ.

➤ ಇದು ಭಾರತದಲ್ಲಿ ಮೆಟಾ ಕಂಪನಿಯು ತನ್ನ ಅಗತ್ಯಕ್ಕೆ ತಕ್ಕಂತೆ ಪ್ರತ್ಯೇಕವಾಗಿ ನಿರ್ಮಿಸಿಕೊಳ್ಳುತ್ತಿರುವ ಮೊದಲ 'ಬಿಲ್ಟ್-ಟು-ಸೂಟ್' (Built-to-suit) ಡೇಟಾ ಸೆಂಟರ್ ಆಗಿದೆ. ಈ ಜಾಗತಿಕ ಒಪ್ಪಂದವು ಭಾರತವನ್ನು ಜಗತ್ತಿನ ಹೈಪರ್‌ಸ್ಕೇಲ್ AI ಕಂಪ್ಯೂಟಿಂಗ್‌ನ ಪ್ರಮುಖ ಕೇಂದ್ರವನ್ನಾಗಿ ಬದಲಾಯಿಸಲಿದೆ.

➤ ಗುಜರಾತ್‌ನ ಜಾಂನಗರದಲ್ಲಿ ರಿಲಯನ್ಸ್ ಸಂಸ್ಥೆಯು 2 ವರ್ಷಗಳಲ್ಲಿ ನಿರ್ಮಿಸಲಿರುವ 168 ಮೆಗಾವ್ಯಾಟ್ ಸಾಮರ್ಥ್ಯದ ದೇಶದ ಮೊದಲ ಬೃಹತ್ AI ಡೇಟಾ ಸೆಂಟರ್ ಅನ್ನು ಮೆಟಾ ಸಂಸ್ಥೆಯು ದೀರ್ಘಾವಧಿ ಬಾಡಿಗೆಗೆ ಪಡೆಯಲಿದ್ದು, ಇದು ಸಮುದ್ರದ ನೀರು ಮತ್ತು ನವೀಕರಿಸಬಹುದಾದ ಇಂಧನ ಬಳಸುವ ಸಂಪೂರ್ಣ ಪರಿಸರ ಸ್ನೇಹಿ ಯೋಜನೆಯಾಗಿದೆ.

**➤ ಮೆಟಾ ಸಂಸ್ಥೆಗೆ ಈ ಡೇಟಾ ಸೆಂಟರ್:** ಭಾರತವು ಫೇಸ್‌ಬುಕ್, ಇನ್‌ಸ್ಟಾಗ್ರಾಮ್ ಮತ್ತು ವಾಟ್ಸಾಪ್ ಬಳಕೆದಾರರ ಅತಿ ದೊಡ್ಡ ಮಾರುಕಟ್ಟೆಯಾಗಿದೆ. ಮೆಟಾ ಸಿಇಒ ಮಾರ್ಕ್ ಜುಕರ್‌ಬರ್ಗ್ ಅವರ ಕನಸಿನ 'ಪರ್ಸನಲ್ ಸೂಪರ್‌ಇಂಟೆಲಿಜೆನ್ಸ್' (Personal Superintelligence) ಮತ್ತು ಮೆಟಾ AI ತಂತ್ರಜ್ಞಾನದ ಸರ್ವರ್‌ಗಳ ವೇಗವನ್ನು ಭಾರತದಲ್ಲೇ ಹೆಚ್ಚಿಸಲು ಇದು ಸಹಕಾರಿಯಾಗಲಿದೆ.

➤ ಇದಕ್ಕಾಗಿ ಮೆಟಾ ಸಂಸ್ಥೆಯು ಕ್ಲೀನ್‌ಮ್ಯಾಕ್ಸ್ (CleanMax) ಮತ್ತು ಫೋರ್ತ್ ಪಾರ್ಟ್ನರ್ ಎನರ್ಜಿ ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಂಡು ರಾಜಸ್ಥಾನ, ಕರ್ನಾಟಕ, ತಮಿಳುನಾಡು ಹಾಗೂ ಮಹಾರಾಷ್ಟ್ರಗಳಲ್ಲಿ ಸುಮಾರು 1 ಗಿಗಾವ್ಯಾಟ್ (GW) ಹಸಿರು ಇಂಧನ ಉತ್ಪಾದನೆಗೆ ಹೂಡಿಕೆ ಮಾಡಿದೆ. ಈ ಸಂಪೂರ್ಣ ವೆಚ್ಚವನ್ನು ಮೆಟಾ ಸಂಸ್ಥೆಯು ಭರಿಸಲಿದೆ.

**➤ ರಿಲಯನ್ಸ್-ಮೆಟಾ ಹಳೆಯ ಸಾರಥ್ಯ:**

2020: ಮೆಟಾ ಸಂಸ್ಥೆಯಿಂದ ಜಿಯೋ ಪ್ಲಾಟ್‌ಫಾರ್ಮ್ಸ್‌ನಲ್ಲಿ 5.7 ಬಿಲಿಯನ್ ಡಾಲರ್ ಹೂಡಿಕೆ.

2025: ₹855 ಕೋಟಿ ವೆಚ್ಚದ ಜಂಟಿ ಉದ್ಯಮ (Joint Venture) ಸ್ಥಾಪನೆ.

2026: ಜಾಂನಗರದ 168 MW AI ಡೇಟಾ ಸೆಂಟರ್ ಒಪ್ಪಂದ.

➤ ಭಾರತ ಸರ್ಕಾರವು ಇತ್ತೀಚೆಗೆ 'ಡೇಟಾ ಸೆಂಟರ್' ವಲಯಕ್ಕೆ 'ಕೇಂದ್ರ ಕಾರ್ಯತಂತ್ರದ ರಾಷ್ಟ್ರೀಯ ಮೂಲಸೌಕರ್ಯ' (Strategic National Infrastructure) ಸ್ಥಾನಮಾನ ನೀಡಿದೆ. ಇದರಿಂದಾಗಿ ಜಾಗತಿಕ ಹೂಡಿಕೆದಾರರಿಗೆ ದೀರ್ಘಾವಧಿ ಸಾಲ ಸೌಲಭ್ಯ ಮತ್ತು ಸುಲಭ ಪರವಾನಗಿ ಸಿಗಲಿದ್ದು, ಈ ಯೋಜನೆಗೆ ಇದು ದೊಡ್ಡ ಬಲ ತಂದಿದೆ.

## ಎರಡು ಸೂರ್ಯರಿರುವ ಅನ್ಯಗ್ರಹಗಳಲ್ಲಿ 'ಕಪ್ಪು ಕಾಡುಗಳು'! ವಿಜ್ಞಾನ ಲೋಕದ ರೋಚಕ ಸಂಶೋಧನೆ



➤ ಬ್ರಹ್ಮಾಂಡದ ರಹಸ್ಯಗಳನ್ನು ಭೇದಿಸುವಲ್ಲಿ ನಿರತರಾಗಿರುವ ಖಗೋಳವಿಜ್ಞಾನಿಗಳು (Astronomers) ಇತ್ತೀಚೆಗೆ ಅತ್ಯಂತ ವಿಸ್ಮಯಕಾರಿ ಸಂಗತಿಯೊಂದನ್ನು ಪತ್ತೆಹಚ್ಚಿದ್ದಾರೆ. ಭೂಮಿಯ ಮೇಲಿನ ಕಾಡುಗಳು ಮತ್ತು ಸಸ್ಯಗಳು ಹಸಿರಾಗಿರುವುದನ್ನು ನಾವು ನೋಡಿದ್ದೇವೆ. ಆದರೆ ಎರಡು ಸೂರ್ಯರನ್ನು ಸುತ್ತುವ ಅನ್ಯಗ್ರಹಗಳಲ್ಲಿ (Exoplanets) ಸಸ್ಯಗಳು ಹಸಿರಾಗಿರದೆ, 'ಕಪ್ಪು' ಅಥವಾ 'ಬೂದು' (Black or Grey) ಬಣ್ಣದಲ್ಲಿರಬಹುದು ಎಂದು ವಿಜ್ಞಾನಿಗಳು ಅಂದಾಜಿಸಿದ್ದಾರೆ!

➤ ಕಾರ್ನೆಲ್ ವಿಶ್ವವಿದ್ಯಾಲಯದ ಖಗೋಳವಿಜ್ಞಾನಿ ಡಾ. ಜಾಕ್ ಒ'ಮ್ಯಾಲಿ-ಜೇಮ್ಸ್ ನೇತೃತ್ವದ ತಂಡವು ನಡೆಸಿರುವ ಈ ಹೊಸ ಅಧ್ಯಯನವು ಜಾಗತಿಕ ಮಟ್ಟದಲ್ಲಿ ಭಾರೀ ಕುತೂಹಲ ಮೂಡಿಸಿದೆ.

**➤ ಭೂಮಿಯ ಮೇಲಿನ ಸಸ್ಯಗಳು ಹಸಿರು, ಅನ್ಯಗ್ರಹಗಳಲ್ಲಿ ಕಪ್ಪು ಏಕೆ?**

ಭೂಮಿಯ ಮೇಲಿನ ಸಸ್ಯಗಳು ಸೂರ್ಯನ ಬೆಳಕನ್ನು ಬಳಸಿಕೊಂಡು ಆಹಾರ ತಯಾರಿಸಲು 'ದ್ಯುತಿಸಂಶ್ಲೇಷಣೆ' (Photosynthesis) ಪ್ರಕ್ರಿಯೆಯನ್ನು ನಡೆಸುತ್ತವೆ. ಇದಕ್ಕಾಗಿ ಅವುಗಳಲ್ಲಿ 'ಪತ್ರಹರಿತ್ತು' (Chlorophyll) ಎಂಬ ವರ್ಣದ್ರವ್ಯವಿರುತ್ತದೆ. ಈ ಪತ್ರಹರಿತ್ತು ಸೂರ್ಯನ ಬೆಳಕಿನಲ್ಲಿರುವ ಕೆಂಪು ಮತ್ತು ನೀಲಿ ತರಂಗಾಂತರಗಳನ್ನು (Wavelengths) ಹೀರಿಕೊಂಡು, ಹಸಿರು ಬೆಳಕನ್ನು ಪ್ರತಿಫಲಿಸುತ್ತದೆ. ಹೀಗಾಗಿಯೇ ನಮಗೆ ಭೂಮಿಯ ಮೇಲಿನ ಕಾಡುಗಳು ಹಸಿರಾಗಿ ಕಾಣುತ್ತವೆ.

➤ **ಎರಡು ಸೂರ್ಯರಿರುವ ಗ್ರಹಗಳಲ್ಲಿ ಪರಿಸ್ಥಿತಿ ಸಂಪೂರ್ಣ ವಿಭಿನ್ನವಾಗಿರುತ್ತದೆ:**

ವಿಭಿನ್ನ ಬೆಳಕಿನ ಸಂಯೋಜನೆ: ಎರಡು ನಕ್ಷತ್ರಗಳನ್ನು ಹೊಂದಿರುವ ಸೌರಮಂಡಲಗಳಲ್ಲಿ ಹೆಚ್ಚಾಗಿ 'ರೆಡ್ ಡ್ವಾರ್ಫ್' (ಕೆಂಪು ಕುಬ್ಜ ನಕ್ಷತ್ರಗಳು) ಇರುತ್ತವೆ. ಇವುಗಳಿಂದ ಹೊರಬರುವ ಬೆಳಕು ಕಡಿಮೆ ತಾಪಮಾನ ಮತ್ತು ವಿಭಿನ್ನ ಶಕ್ತಿಯನ್ನು ಹೊಂದಿರುತ್ತದೆ.

ಗರಿಷ್ಠ ಬೆಳಕಿನ ಹೀರಿಕೊಳ್ಳುವಿಕೆ: ಇಂತಹ ಪರಿಸರದಲ್ಲಿ ಬೆಳೆಯುವ ಸಸ್ಯಗಳು ಲಭ್ಯವಿರುವ ಅತ್ಯಲ್ಪ ಬೆಳಕು ಮತ್ತು ಶಕ್ತಿಯನ್ನು ಪೂರ್ಣವಾಗಿ ಬಳಸಿಕೊಳ್ಳಲು ವಿಕಸನಗೊಳ್ಳುತ್ತವೆ.

ಕಪ್ಪು ವರ್ಣದ್ರವ್ಯದ ರಹಸ್ಯ: ಎಲ್ಲಾ ರೀತಿಯ ತರಂಗಾಂತರದ ಬೆಳಕನ್ನು (ಮುಖ್ಯವಾಗಿ ಅತಿಗೆಂಪು ಅಥವಾ Infrared ವಿಕಿರಣಗಳನ್ನು) ಹೀರಿಕೊಳ್ಳುವ ಪ್ರಕ್ರಿಯೆಯಲ್ಲಿ ಸಸ್ಯಗಳ ಎಲೆಗಳು ಕಪ್ಪು ಅಥವಾ ಗಾಢ ಬೂದು ಬಣ್ಣಕ್ಕೆ ತಿರುಗುತ್ತವೆ. ಅಂದರೆ, ವಿಜ್ಞಾನಿಗಳ ಪ್ರಕಾರ ಈ ಗ್ರಹಗಳಲ್ಲಿನ ಸಸ್ಯಗಳು ಬೆಳಕನ್ನು ವ್ಯರ್ಥ ಮಾಡದೆ ಸಂಪೂರ್ಣವಾಗಿ ಹೀರಿಕೊಳ್ಳಲು ಕಪ್ಪು ಬಣ್ಣವನ್ನು ಪಡೆದುಕೊಳ್ಳುತ್ತವೆ.

➤ **ದ್ವಿ-ನಕ್ಷತ್ರ ವ್ಯವಸ್ಥೆ (Binary Star Systems):** ಬ್ರಹ್ಮಾಂಡದಲ್ಲಿ ನಮ್ಮ ಸೌರಮಂಡಲದಂತೆ ಒಂದೇ ಸೂರ್ಯನಿರುವ ವ್ಯವಸ್ಥೆಗಳಿಗಿಂತ, ಎರಡು ಅಥವಾ ಅದಕ್ಕಿಂತ ಹೆಚ್ಚು ನಕ್ಷತ್ರಗಳು ಒಂದನ್ನೊಂದು ಸುತ್ತುವ ವ್ಯವಸ್ಥೆಗಳೇ ಹೆಚ್ಚಾಗಿವೆ. ಇದನ್ನು 'ದ್ವಿ-ನಕ್ಷತ್ರ ವ್ಯವಸ್ಥೆ' (Binary Star System) ಎನ್ನಲಾಗುತ್ತದೆ.

ಇಂತಹ ಎರಡು ಸೂರ್ಯರ ಪ್ರಭಾವ ಇರುವ ಗ್ರಹಗಳನ್ನು 'ಸರ್ಕಂಬೈನರಿ ಪ್ಲಾನೆಟ್ಸ್' (Circumbinary Planets) ಎಂದು ಕರೆಯಲಾಗುತ್ತದೆ.

ಹಾಲಿವುಡ್‌ನ ಪ್ರಸಿದ್ಧ ವೈಜ್ಞಾನಿಕ ಚಲನಚಿತ್ರ 'ಸ್ಟಾರ್ ವಾರ್ಸ್' (Star Wars) ನಲ್ಲಿ ಬರುವ ಕಾಲ್ಪನಿಕ ಗ್ರಹ 'ಟಾಟೂಯಿನ್' (Tatooine) ಗೆ ಎರಡು ಸೂರ್ಯರಿರುತ್ತಾರೆ. ಈಗ

ವಿಜ್ಞಾನಿಗಳು ಇಂತಹ ಗ್ರಹಗಳು ಕೇವಲ ಸಿನಿಮಾಗಳಲ್ಲಷ್ಟೇ ಅಲ್ಲ, ನಿಜವಾಗಿಯೂ ಬ್ರಹ್ಮಾಂಡದಲ್ಲಿ ಅಸ್ತಿತ್ವದಲ್ಲಿವೆ ಎಂಬುದನ್ನು ಸಾಬೀತುಪಡಿಸಿದ್ದಾರೆ.

ನಾಸಾದ ಕೆಪ್ಲರ್ ಬಾಹ್ಯಾಕಾಶ ದೂರದರ್ಶಕವು (NASA Kepler Telescope) ಈಗಾಗಲೇ Kepler-16b ಮತ್ತು Kepler-47c ನಂತಹ ಎರಡು ಸೂರ್ಯರಿರುವ ಗ್ರಹಗಳನ್ನು ಪತ್ತೆಹಚ್ಚಿದೆ.

## 11 June 2026

## ರಕ್ಷಣಾ ಸಚಿವಾಲಯದಿಂದ ಸೀತಾಪುರದಲ್ಲಿ 250 ಮೆಗಾವ್ಯಾಟ್ ಸೋಲಾರ್ ಯೋಜನೆಗೆ ಅನುಮೋದನೆ



➤ ಭಾರತೀಯ ರಕ್ಷಣಾ ಸಚಿವಾಲಯವು ಪರಿಸರ ಸ್ನೇಹಿ ಮತ್ತು ನವೀಕರಿಸಬಹುದಾದ ಇಂಧನ ಉತ್ಪಾದನೆಗೆ ಸಂಬಂಧಿಸಿದಂತೆ ಒಂದು ಐತಿಹಾಸಿಕ ನಿರ್ಧಾರವನ್ನು ಕೈಗೊಂಡಿದೆ. ಉತ್ತರ ಪ್ರದೇಶದ ಸೀತಾಪುರದಲ್ಲಿ ಬ್ಯಾಟರಿ ಎನರ್ಜಿ ಸ್ಟೋರೇಜ್ ಸಿಸ್ಟಮ್ (BESS) ಒಳಗೊಂಡ 250 ಮೆಗಾವ್ಯಾಟ್ (MW) ಸಾಮರ್ಥ್ಯದ ಬೃಹತ್ ಸೌರ ವಿದ್ಯುತ್ ಯೋಜನೆಗೆ ರಕ್ಷಣಾ ಸಚಿವಾಲಯವು ಅಧಿಕೃತ ಅನುಮೋದನೆ ನೀಡಿದೆ. ರಕ್ಷಣಾ ಇಲಾಖೆಯ ಇತಿಹಾಸದಲ್ಲೇ ಇಷ್ಟೊಂದು ದೊಡ್ಡ ಪ್ರಮಾಣದ ಜಮೀನನ್ನು ನವೀಕರಿಸಬಹುದಾದ ಇಂಧನ ಯೋಜನೆಗೆ ಬಳಸಿಕೊಳ್ಳುತ್ತಿರುವುದು ಇದೇ ಮೊದಲ ಬಾರಿಯಾಗಿದೆ.

➤ ಉತ್ತರ ಪ್ರದೇಶದ ಸೀತಾಪುರದ ಹಳೆಯ ಕಂಟೋನ್ಮೆಂಟ್ ಪ್ರದೇಶದಲ್ಲಿನ 850 ಎಕರೆ ರಕ್ಷಣಾ ಭೂಮಿಯಲ್ಲಿ, ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಅನುಮೋದಿಸಿರುವ ಎನ್‌ಟಿಪಿಸಿ ಲಿಮಿಟೆಡ್ (NTPC) ಅನುಷ್ಠಾನಗೊಳಿಸಲಿರುವ 250 ಮೆಗಾವ್ಯಾಟ್ ಸಾಮರ್ಥ್ಯದ ಬ್ಯಾಟರಿ ಸ್ಟೋರೇಜ್ ಒಳಗೊಂಡ ಸೌರ ವಿದ್ಯುತ್ ಯೋಜನೆ ಇದಾಗಿದೆ.

➤ ಬ್ಯಾಟರಿ ಎನರ್ಜಿ ಸ್ಟೋರೇಜ್ ಸಿಸ್ಟಮ್ (BESS): ಸೌರಶಕ್ತಿಯು ಕೇವಲ ಹಗಲಿನ ವೇಳೆಯಲ್ಲಿ ಮಾತ್ರ ಲಭ್ಯವಿರುತ್ತದೆ. ಆದರೆ ಈ ಯೋಜನೆಯಲ್ಲಿ ಬ್ಯಾಟರಿ ಎನರ್ಜಿ ಸ್ಟೋರೇಜ್ ಸಿಸ್ಟಮ್ (BESS) ಅಳವಡಿಸುತ್ತಿರುವುದರಿಂದ, ಹಗಲಿನಲ್ಲಿ ಉತ್ಪತ್ತಿಯಾಗುವ ಹೆಚ್ಚುವರಿ ವಿದ್ಯುತ್ ಅನ್ನು ಬ್ಯಾಟರಿಗಳಲ್ಲಿ ಸಂಗ್ರಹಿಸಿಡಬಹುದು. ರಾತ್ರಿಯ ಸಮಯದಲ್ಲಿ ಅಥವಾ ಮೋಡ ಕವಿದ ವಾತಾವರಣವಿದ್ದಾಗ ಈ ಸಂಗ್ರಹಿತ ವಿದ್ಯುತ್ ಅನ್ನು ಬಳಸಿಕೊಳ್ಳಲು ಇದು ನೆರವಾಗುತ್ತದೆ. ಇದು ವಿದ್ಯುತ್ ಜಾಲದ (Grid) ಸಮತೋಲನವನ್ನು ಕಾಯ್ದುಕೊಳ್ಳಲು ಸಹಕಾರಿಯಾಗಿದೆ.

➤ ಯೋಜನೆಯ ಉದ್ದೇಶ ಮತ್ತು ಪ್ರಯೋಜನಗಳು:

ರಕ್ಷಣಾ ಇಲಾಖೆಯ ಇಂಧನ ಭದ್ರತೆ: ಮಿಲಿಟರಿ ತರಬೇತಿ ಕೇಂದ್ರಗಳು, ವಸತಿ ಮತ್ತು ಆಡಳಿತ ಕಚೇರಿಗಳಿಗೆ ಯಾವುದೇ ಅಡಚಣೆಯಿಲ್ಲದೆ ನಿರಂತರ ವಿದ್ಯುತ್ ಪೂರೈಕೆ ಮಾಡಲು ಇದು ಸಹಕಾರಿಯಾಗಲಿದೆ.

ವೆಚ್ಚ ಕಡಿತ: ಸಾಂಪ್ರದಾಯಿಕ ವಿದ್ಯುತ್ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವ ಮೂಲಕ ಸರ್ಕಾರದ ಕೋಟ್ಯಂತರ ರೂಪಾಯಿಗಳ ವಿದ್ಯುತ್ ವೆಚ್ಚವನ್ನು ಈ ಯೋಜನೆ ಉಳಿಸಲಿದೆ.

ಬಳಕೆಯಾಗದ ಭೂಮಿಯ ಸದ್ಬಳಕೆ: ಸೀತಾಪುರದ ಹಳೆಯ ಮಿಲಿಟರಿ ಕಂಟೋನ್ಮೆಂಟ್ ಪ್ರದೇಶದಲ್ಲಿ ಖಾಲಿ ಬಿದ್ದಿದ್ದ 850 ಎಕರೆ ಜಮೀನನ್ನು ಈ ಪರಿಸರ ಸ್ನೇಹಿ ಯೋಜನೆಗೆ ಬಳಸಲಾಗುತ್ತಿದೆ.

ಹಸಿರು ಇಂಧನ ಗುರಿ: ಭಾರತ ಸರ್ಕಾರವು ಹವಾಮಾನ ವೈಪರೀತ್ಯದ ವಿರುದ್ಧ ಹಮ್ಮಿಕೊಂಡಿರುವ 'ನೆಟ್ ಝೀರೋ ಕಾರ್ಬನ್' (Net-Zero Carbon) ಗುರಿಯನ್ನು ತಲುಪಲು ಈ ಯೋಜನೆ ವೇಗ ನೀಡಲಿದೆ.

➤ **ಸಮನ್ವಯ ಮತ್ತು ಅನುಷ್ಠಾನ ಸಂಸ್ಥೆಗಳು:** ಈ ಬೃಹತ್ ಯೋಜನೆಯನ್ನು ಅತ್ಯಂತ ಪಾರದರ್ಶಕವಾಗಿ ಮತ್ತು ಕಡಿಮೆ ವೆಚ್ಚದಲ್ಲಿ ನಿರ್ಮಿಸಲು ಸ್ಪರ್ಧಾತ್ಮಕ ಬಿಡ್ಡಿಂಗ್ (Competitive Bidding) ಪ್ರಕ್ರಿಯೆಯ ಮೂಲಕ ಡೆವಲಪರ್ ಅನ್ನು ಆಯ್ಕೆ ಮಾಡಲಾಗುತ್ತದೆ. ಯೋಜನೆಯ ಯಶಸ್ವಿ ಅನುಷ್ಠಾನಕ್ಕಾಗಿ ಕೆಳಗಿನ ಪ್ರಮುಖ ಸಂಸ್ಥೆಗಳು ಒಟ್ಟಾಗಿ ಕಾರ್ಯನಿರ್ವಹಿಸಲಿವೆ:

ರಕ್ಷಣಾ ಸಚಿವಾಲಯ (MoD)

ಎನ್‌ಟಿಪಿಸಿ ಲಿಮಿಟೆಡ್ (NTPC)

ಇಂಟಿಗ್ರೇಟೆಡ್ ಹೆಡ್‌ಕ್ವಾರ್ಟರ್ಸ್ ಆಫ್ ರಕ್ಷಣಾ ಸಚಿವಾಲಯ (ಆರ್ಮಿ)

ಡೈರೆಕ್ಟರೇಟ್ ಜನರಲ್ ಡಿಫೆನ್ಸ್ ಎಸ್ಟೇಟ್ಸ್ (DGDE)

## ಭಾರತದ ಮೊದಲ ಕ್ವಾಂಟಮ್-ಸುರಕ್ಷಿತ ಆಲ್ಗಾರಿದಮ್‌ಗೆ C-SAFE ಮಾನ್ಯತೆ



➤ ರಾಷ್ಟ್ರೀಯ ಭದ್ರತೆ ಮತ್ತು ಡಿಜಿಟಲ್ ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತವು ಹೈಟೆಕ್ ಸಾಧನೆ ಮಾಡಿದೆ. ಭಾರತದ ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ, ದೇಶೀಯವಾಗಿ ಅಭಿವೃದ್ಧಿಪಡಿಸಲಾದ

'ಕ್ವಾಂಟಮ್-ಸುರಕ್ಷಿತ ಆಲ್ಗಾರಿದಮ್' (Quantum-Safe Algorithm) ಒಂದಕ್ಕೆ ಅಧಿಕೃತ ರಾಷ್ಟ್ರೀಯ ಮಾನ್ಯತೆ ದೊರೆತಿದೆ. ಪುಣೆ ಮೂಲದ ಡೀಪ್-ಟೆಕ್ ಸೈಬರ್ ಸೆಕ್ಯುರಿಟಿ ಸಂಸ್ಥೆಯಾದ 'ಫಾರ್ಟಿಟೂ ಲ್ಯಾಬ್ಸ್' (Fortytwo Labs) ಅಭಿವೃದ್ಧಿಪಡಿಸಿರುವ Ci2 ಆಲ್ಗಾರಿದಮ್‌ಗೆ, ಭಾರತೀಯ ದತ್ತಾಂಶ ಭದ್ರತಾ ಮಂಡಳಿಯು (DSCI) ತನ್ನ ಪ್ರತಿಷ್ಠಿತ C-SAFE ಪ್ರಮಾಣೀಕರಣವನ್ನು ನೀಡಿದೆ.

➤ C-SAFE: Cryptographic Security Assessment and Functional Evaluation (ಕ್ರಿಪ್ಟೋಗ್ರಾಫಿಕ್ ಸೆಕ್ಯುರಿಟಿ ಅಸೆಸ್‌ಮೆಂಟ್ ಅಂಡ್ ಫಂಕ್ಷನಲ್ ಇವ್ಯಾಲ್ಯುಯೇಷನ್). ಇದನ್ನು ಭಾರತೀಯ ದತ್ತಾಂಶ ಭದ್ರತಾ ಮಂಡಳಿ (DSCI) ರೂಪಿಸಿದೆ. ಇದು ಭಾರತದ ಮೊದಲ ಸ್ವತಂತ್ರ ಕ್ರಿಪ್ಟೋಗ್ರಾಫಿಕ್ ಮೌಲ್ಯಮಾಪನ ಕಾರ್ಯಕ್ರಮವಾಗಿದೆ. ಹೊಸದಾಗಿ ಅಭಿವೃದ್ಧಿಪಡಿಸಲಾಗುವ ಡಿಜಿಟಲ್ ಭದ್ರತಾ ಕೋಡ್‌ಗಳ (ಆಲ್ಗಾರಿದಮ್‌ಗಳ) ಗಣಿತದ ನಿಖರತೆ, ಕ್ವಾಂಟಮ್ ಕಂಪ್ಯೂಟರ್‌ಗಳ ದಾಳಿಯನ್ನು ತಡೆಯುವ ಸಾಮರ್ಥ್ಯ (Quantum Resilience) ಮತ್ತು ಭದ್ರತಾ ವ್ಯವಸ್ಥೆಯನ್ನು ತಜ್ಞರ ಸಮಿತಿಯ ಮೂಲಕ ಕಠಿಣವಾಗಿ ಮೌಲ್ಯಮಾಪನ ಮಾಡಿ ಈ ಪ್ರಮಾಣಪತ್ರ ನೀಡಲಾಗುತ್ತದೆ.

**➤ ಕ್ವಾಂಟಮ್-ಸುರಕ್ಷಿತ ಆಲ್ಗಾರಿದಮ್ ಏಕೆ ಮುಖ್ಯ?**

ಪ್ರಸ್ತುತ ನಾವು ಬಳಸುವ ಇಂಟರ್ನೆಟ್ ಬ್ಯಾಂಕಿಂಗ್, ಡಿಫೆನ್ಸ್ ಕಮ್ಯುನಿಕೇಷನ್ ಮತ್ತು ಆಧಾರ್‌ನಂತಹ ಡಿಜಿಟಲ್ ವ್ಯವಸ್ಥೆಗಳು ಸಾಂಪ್ರದಾಯಿಕ ಗೂಢಲಿಪಿ ಶಾಸ್ತ್ರದ (Cryptography) ಸುರಕ್ಷತೆಯನ್ನು ಹೊಂದಿವೆ. ಆದರೆ, ಭವಿಷ್ಯದಲ್ಲಿ ಬರಲಿರುವ ಅತ್ಯಂತ ಶಕ್ತಿಶಾಲಿ ಕ್ವಾಂಟಮ್ ಕಂಪ್ಯೂಟರ್‌ಗಳು ಇಂದಿನ ಅತ್ಯಾಧುನಿಕ ಭದ್ರತಾ ಕೋಡ್‌ಗಳನ್ನು ಕೆಲವೇ ಸೆಕೆಂಡುಗಳಲ್ಲಿ ಬ್ರೇಕ್ ಮಾಡುವ ಸಾಮರ್ಥ್ಯ ಹೊಂದಿರುತ್ತವೆ. ಇದಕ್ಕೆ ಪರಿಹಾರವೇ 'ಪೋಸ್ಟ್-ಕ್ವಾಂಟಮ್ ಕ್ರಿಪ್ಟೋಗ್ರಫಿ' (Post-Quantum Cryptography). ಫಾರ್ಟಿಟೂ ಲ್ಯಾಬ್ಸ್ ಅಭಿವೃದ್ಧಿಪಡಿಸಿರುವ ಈ Ci2 ಆಲ್ಗಾರಿದಮ್ ಭವಿಷ್ಯದ ಕ್ವಾಂಟಮ್ ಕಂಪ್ಯೂಟರ್‌ಗಳ ಸೈಬರ್ ದಾಳಿಯನ್ನೂ ಸಮರ್ಥವಾಗಿ ತಡೆಯಬಲ್ಲದು.

**➤ ಈ ಸಾಧನೆಯ ಪ್ರಮುಖ ಹೈಲೈಟ್ಸ್ (Exam Points):**

ಕ್ರಿಪ್ಟೋಗ್ರಾಫಿಕ್ ಸಾರ್ವಭೌಮತ್ವ (Cryptographic Sovereignty): ಭಾರತವು ಇದುವರೆಗೆ ಸೈಬರ್ ಭದ್ರತೆಗಾಗಿ ವಿದೇಶಿ ಆಲ್ಗಾರಿದಮ್ ಮತ್ತು ಗುಣಮಟ್ಟವನ್ನು ಅವಲಂಬಿಸಿತ್ತು. ಆದರೆ ಈ ಆವಿಷ್ಕಾರದಿಂದ ಭಾರತವು ಡಿಜಿಟಲ್ ಭದ್ರತೆಯಲ್ಲಿ 'ಆತ್ಮನಿರ್ಭರತೆ' ಸಾಧಿಸಿದೆ.

ಬ್ಯಾಂಕಿಂಗ್ ಕ್ಷೇತ್ರಕ್ಕೆ ರಕ್ಷಣೆ: ಆರ್‌ಬಿಐ (RBI) ನಿಯಮಾವಳಿಗಳಿಗೆ ತಕ್ಕಂತೆ ಬ್ಯಾಂಕಿಂಗ್ ವಹಿವಾಟುಗಳು ಮತ್ತು ಆನ್‌ಲೈನ್ ಬ್ಯಾಂಕಿಂಗ್ ಎಪಿಐ (API) ಗಳಿಗೆ ಇದು ಗರಿಷ್ಠ ಭದ್ರತೆ ಒದಗಿಸುತ್ತದೆ.

ರಕ್ಷಣಾ ಕ್ಷೇತ್ರಕ್ಕೆ ಬಲ (Defence sector): ಮಿಲಿಟರಿ ಮತ್ತು ರಕ್ಷಣಾ ಇಲಾಖೆಯ ರಹಸ್ಯ ಮಾಹಿತಿಗಳ ವರ್ಗಾವಣೆಗೆ ವಿದೇಶಿ ಸಾಫ್ಟ್‌ವೇರ್‌ಗಳ ಮೇಲಿನ ಅವಲಂಬನೆ ತಪ್ಪುತ್ತದೆ. (ಗಮನಿಸಿ: ಫಾರ್ಟಿಟೂ ಲ್ಯಾಬ್ಸ್ ಸಂಸ್ಥೆಗೆ ಈಗಾಗಲೇ 'SIDM ಡಿಫೆನ್ಸ್ ಚಾಂಪಿಯನ್ ಪ್ರಶಸ್ತಿ' ದೊರೆತಿದೆ).

π-Control ಪ್ಲಾಟ್‌ಫಾರ್ಮ್: ಈ ಆಲ್ಗಾರಿದಮ್ ಆಧಾರದ ಮೇಲೆ ಫಾರ್ಟಿಟೂ ಲ್ಯಾಬ್ಸ್ ಸಂಸ್ಥೆಯು ವೆಬ್ ಅಪ್ಲಿಕೇಶನ್‌ಗಳು, ಮೊಬೈಲ್ ಆಪ್‌ಗಳು ಮತ್ತು ಡಿಜಿಟಲ್ ಸೇವೆಗಳಿಗೆ ಒಂದೇ ಸೂರಿನಡಿ ಕ್ವಾಂಟಮ್-ಸುರಕ್ಷಿತ ಭದ್ರತೆ ನೀಡಲು ಈ ಪ್ಲಾಟ್ ಫಾರ್ಮ್ ಬಳಸುತ್ತದೆ.

➤ ಭಾರತೀಯ ದತ್ತಾಂಶ ಭದ್ರತಾ ಮಂಡಳಿ (DSCI): ಭಾರತೀಯ ದತ್ತಾಂಶ ಭದ್ರತಾ ಮಂಡಳಿ (DSCI) ಎಂಬುದು ಸೈಬರ್ ಭದ್ರತೆ ಮತ್ತು ದತ್ತಾಂಶ ಸಂರಕ್ಷಣೆಗಾಗಿ ನಾಸ್ಕಾಮ್ (NASSCOM) ಸ್ಥಾಪಿಸಿರುವ, ಪ್ರಸ್ತುತ ವಿನಾಯಕ್ ಗೋಡ್ಸೆ ಅವರ ನೇತೃತ್ವದ (CEO) ಭಾರತದ ಪ್ರಮುಖ ಲಾಭರಹಿತ ಉದ್ಯಮ ಸಂಸ್ಥೆಯಾಗಿದೆ. ಪ್ರಸ್ತುತ ಸಿಇಒ (CEO): ವಿನಾಯಕ್ ಗೋಡ್ಸೆ.

## ನಾಸಾದ ಆರ್ಟೆಮಿಸ್ III ಚಂದ್ರಯಾನ ಮಿಷನ್ 2027: ಗಗನಯಾತ್ರಿಗಳ ಹೆಸರು ಪ್ರಕಟ!



➤ ವಿಶ್ವದ ಪ್ರಖ್ಯಾತ ಬಾಹ್ಯಾಕಾಶ ಸಂಸ್ಥೆಯಾದ ನಾಸಾ (NASA - National Aeronautics and Space Administration) ತನ್ನ ಮಹತ್ವಾಕಾಂಕ್ಷೆಯ ಆರ್ಟೆಮಿಸ್ III (Artemis III) ಮಿಷನ್‌ಗಾಗಿ ಅಧಿಕೃತವಾಗಿ ನಾಲ್ಕು ಪ್ರಮುಖ ಗಗನಯಾತ್ರಿಗಳ (Astronauts) ಹೆಸರನ್ನು ಪ್ರಕಟಿಸಿದೆ. ಮಾನವನನ್ನು ಮರಳಿ ಚಂದ್ರನ ಅಂಗಳಕ್ಕೆ ಕಳುಹಿಸುವ ಈ ಐತಿಹಾಸಿಕ ಯೋಜನೆಯು 2027 ರಲ್ಲಿ ಉಡಾವಣೆಯಾಗಲಿದೆ.

➤ ಆರ್ಟೆಮಿಸ್ III ಮಿಷನ್: ಆರ್ಟೆಮಿಸ್ ಯೋಜನೆಯು ನಾಸಾದ ನೇತೃತ್ವದಲ್ಲಿ ಜಾಗತಿಕ ಸಹಭಾಗಿತ್ವದೊಂದಿಗೆ ನಡೆಯುತ್ತಿರುವ ಚಂದ್ರನ ಪರಿಶೋಧನಾ ಕಾರ್ಯಕ್ರಮವಾಗಿದೆ. ಇತ್ತೀಚೆಗೆ ಯಶಸ್ವಿಯಾಗಿ ಮುಕ್ತಾಯಗೊಂಡ ಆರ್ಟೆಮಿಸ್ II ಮಿಷನ್ ಬೆನ್ನಲ್ಲೇ, ನಾಸಾ ಈಗ ಆರ್ಟೆಮಿಸ್ III ಪರೀಕ್ಷಾರ್ಥ ಪ್ರಯೋಗಕ್ಕೆ ಸಜ್ಜಾಗುತ್ತಿದೆ. ನಾಸಾದ ಆರ್ಟೆಮಿಸ್ III ಮಿಷನ್ 2027 ರಲ್ಲಿ ಭೂಮಿಯ ಕಕ್ಷೆಯಲ್ಲಿ ಸ್ಪೇಸ್‌ಎಕ್ಸ್ ಮತ್ತು ಬ್ಲೂ ಒರಿಜಿನ್ ಸಂಸ್ಥೆಗಳ ಹ್ಯೂಮನ್ ಲ್ಯಾಂಡಿಂಗ್ ಸಿಸ್ಟಮ್ (HLS) ತಂತ್ರಜ್ಞಾನಗಳನ್ನು ಯಶಸ್ವಿಯಾಗಿ ಪರೀಕ್ಷಿಸುವ ಮೂಲಕ, 2028 ರ ಆರ್ಟೆಮಿಸ್ IV ಮಿಷನ್‌ನಲ್ಲಿ ಚಂದ್ರನ ದಕ್ಷಿಣ ಧ್ರುವಕ್ಕೆ ಮಾನವರನ್ನು ಇಳಿಸಲು ದಾರಿ ಮಾಡಿಕೊಡುವ ಮುಖ್ಯ ಉದ್ದೇಶ ಹೊಂದಿದೆ.

**➤ ಆರ್ಟೆಮಿಸ್ III ಗಗನಯಾತ್ರಿಗಳ ತಂಡ (Artemis III Crew Members):**

**1. ರಾಂಡಿ ಬ್ರೆಸ್ನಿಕ್ (Randy Bresnik) – ಕಮಾಂಡರ್:** ಇವರು ನಾಸಾದ ಹಿರಿಯ ಗಗನಯಾತ್ರಿಯಾಗಿದ್ದು, ಈ ಹಿಂದೆ ಎರಡು ಬಾರಿ ಬಾಹ್ಯಾಕಾಶ ಯಾನ ಮಾಡಿದ್ದಾರೆ ಹಾಗೂ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದ (ISS) ಕಮಾಂಡರ್ ಆಗಿ ಸೇವೆ ಸಲ್ಲಿಸಿದ್ದಾರೆ.

**2. ಲುಕಾ ಪರ್ಮಿಟಾನೊ (Luca Parmitano) – ಪೈಲಟ್:** ಇವರು ಯುರೋಪಿಯನ್ ಬಾಹ್ಯಾಕಾಶ ಸಂಸ್ಥೆಯ (ESA) ಗಗನಯಾತ್ರಿಯಾಗಿದ್ದಾರೆ. ವಿಶೇಷವೆಂದರೆ, ಆರ್ಟೆಮಿಸ್ ಮಿಷನ್‌ಗೆ ಆಯ್ಕೆಯಾದ ಮೊದಲ ಯುರೋಪಿಯನ್ ಗಗನಯಾತ್ರಿ ಇವರಾಗಿದ್ದಾರೆ.

3. ಆಂಡ್ರೆ ಡೌಗ್ಲಾಸ್ (Andre Douglas) – ಮಿಷನ್ ಸ್ಪೆಷಲಿಸ್ಟ್: ಇವರು ಯುಎಸ್ ಕೋಸ್ಟ್ ಗಾರ್ಡ್ ಹಾಗೂ ಜಾನ್ಸ್ ಹಾಪ್ಕಿನ್ಸ್ ವಿಶ್ವವಿದ್ಯಾಲಯದಲ್ಲಿ ಪ್ರಮುಖ ಸಂಶೋಧಕರಾಗಿ ಕಾರ್ಯನಿರ್ವಹಿಸಿದ ಅನುಭವ ಹೊಂದಿದ್ದಾರೆ.

**4. ಫ್ರಾಂಕ್ ರುಬಿಯೋ (Frank Rubio) – ಮಿಷನ್ ಸ್ಪೆಷಲಿಸ್ಟ್:** ಇವರು ಅಮೆರಿಕಾದ ಗಗನಯಾತ್ರಿಯಾಗಿದ್ದು, ಬಾಹ್ಯಾಕಾಶದಲ್ಲಿ ಸತತ 371 ದಿನಗಳ ಕಾಲ ಕಳೆದು "ಅತಿ ದೀರ್ಘಾವಧಿ ಬಾಹ್ಯಾಕಾಶ ಪ್ರಯಾಣ ಬೆಳೆಸಿದ ಅಮೆರಿಕನ್" ಎಂಬ ದಾಖಲೆ ಬರೆದಿದ್ದಾರೆ.

ಬ್ಯಾಕಪ್ ಗಗನಯಾತ್ರಿ: ಇವರೊಂದಿಗೆ ನಾಸಾದ ಬಾಬ್ ಹೈನ್ಸ್ (Bob Hines) ಅವರನ್ನು ಬ್ಯಾಕಪ್ ಸಿಬ್ಬಂದಿಯಾಗಿ ನೇಮಿಸಲಾಗಿದೆ.

**➤ ಆರ್ಟೆಮಿಸ್ III ಮಿಷನ್ ಹೇಗೆ ಕಾರ್ಯನಿರ್ವಹಿಸುತ್ತದೆ?**

ನಾಸಾದ ಸ್ಪೇಸ್ ಲಾಂಚ್ ಸಿಸ್ಟಮ್ (SLS) ರಾಕೆಟ್ ಮೂಲಕ ಗಗನಯಾತ್ರಿಗಳನ್ನು ಹೊತ್ತ ಒರಿಯನ್ (Orion) ನೌಕೆಯು ಭೂಮಿಯ ಕಕ್ಷೆಯನ್ನು ತಲುಪಲಿದೆ.

ಭೂಮಿಯ ಕಕ್ಷೆಯಲ್ಲಿ, ಒರಿಯನ್ ನೌಕೆಯು ಕಮರ್ಷಿಯಲ್ ಕಂಪನಿಗಳಾದ ಬ್ಲೂ ಒರಿಜಿನ್‌ನ 'ಬ್ಲೂ ಮೂನ್' (Blue Moon) ಮತ್ತು ಸ್ಪೇಸ್‌ಎಕ್ಸ್‌ನ 'ಸ್ಟಾರ್‌ಶಿಪ್' (Starship) ಲ್ಯಾಂಡರ್‌ಗಳ ಪರೀಕ್ಷಾರ್ಥ ಮಾದರಿಗಳೊಂದಿಗೆ ಜೋಡಣೆಗೊಳ್ಳಲಿದೆ (Rendezvous and Docking).

ಗಗನಯಾತ್ರಿಗಳು ಕಕ್ಷೆಯಲ್ಲೇ ಸುಮಾರು ಎರಡು ವಾರಗಳ ಕಾಲ ಇದ್ದು ವಿವಿಧ ತಾಂತ್ರಿಕ ಪರೀಕ್ಷೆಗಳನ್ನು ನಡೆಸಲಿದ್ದಾರೆ. ತದನಂತರ ಪೆಸಿಫಿಕ್ ಮಹಾಸಾಗರದಲ್ಲಿ ಸುರಕ್ಷಿತವಾಗಿ ಇಳಿಯಲಿದ್ದಾರೆ (Splashdown).

## ಹಳ್ಳಿ ಹಳ್ಳಿಗಳಿಗೂ ಹೈ-ಸ್ಪೀಡ್ ಇಂಟರ್ನೆಟ್: ಉತ್ತರ ಪ್ರದೇಶದಲ್ಲಿ ಜಾರಿಯಾದ 'ಪ್ರಾಜೆಕ್ಟ್ ಗಂಗಾ' ಕ್ರಾಂತಿ!



➤ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಲಕ್ನೋದಲ್ಲಿ ಅಧಿಕೃತವಾಗಿ 'ಪ್ರಾಜೆಕ್ಟ್ ಗಂಗಾ' (Project GANGA) ಯೋಜನೆಗೆ ಚಾಲನೆ ನೀಡಿದ್ದಾರೆ. ರಾಜ್ಯದ ಗ್ರಾಮೀಣ ಭಾಗದ ಪ್ರತಿಯೊಂದು ಮನೆಗೂ ಹೈ-ಸ್ಪೀಡ್ ಇಂಟರ್ನೆಟ್ ತಲುಪಿಸುವ ಮೂಲಕ ಡಿಜಿಟಲ್ ಆರ್ಥಿಕತೆಯನ್ನು ಬಲಪಡಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

GANGA: Government Assisted Network for Growth and Advancement (ಬೆಳವಣಿಗೆ ಮತ್ತು ಪ್ರಗತಿಗಾಗಿ ಸರ್ಕಾರಿ ಪ್ರಾಯೋಜಿತ ನೆಟ್‌ವರ್ಕ್)

**➤ ಯೋಜನೆಯ ಪ್ರಮುಖ ಮುಖ್ಯಾಂಶಗಳು:**

ಗುರಿ ಮತ್ತು ತಲುಪುವಿಕೆ: ಈ ಯೋಜನೆಯು ಪ್ರಾಥಮಿಕವಾಗಿ ಉತ್ತರ ಪ್ರದೇಶದ ಸುಮಾರು 20 ಲಕ್ಷ ಗ್ರಾಮೀಣ ಕುಟುಂಬಗಳಿಗೆ ಫೈಬರ್ ಆಧಾರಿತ ಹೈ-ಸ್ಪೀಡ್ ಬ್ರಾಡ್‌ಬ್ಯಾಂಡ್ ಸಂಪರ್ಕವನ್ನು ಕಲ್ಪಿಸುವ ಗುರಿಯನ್ನು ಹೊಂದಿದೆ.

ಹಂತ-ಹಂತವಾಗಿ ಜಾರಿ: ಮೊದಲ ಹಂತದಲ್ಲಿ ರಾಜ್ಯದ 21 ಜಿಲ್ಲೆಗಳಲ್ಲಿ ಈ ಯೋಜನೆಯನ್ನು ಜಾರಿಗೊಳಿಸಲಾಗುವುದು. ತದನಂತರ ಇದನ್ನು ರಾಜ್ಯದ ಎಲ್ಲಾ 57,000 ಗ್ರಾಮ ಪಂಚಾಯಿತಿಗಳು ಹಾಗೂ 8,000 ನ್ಯಾಯ ಪಂಚಾಯಿತಿಗಳಿಗೆ ವಿಸ್ತರಿಸಲಾಗುವುದು.

ಉದ್ಯೋಗ ಸೃಷ್ಟಿ: ಈ ಬೃಹತ್ ಡಿಜಿಟಲ್ ಮೂಲಸೌಕರ್ಯ ಯೋಜನೆಯಿಂದ ಗ್ರಾಮೀಣ ಭಾಗದಲ್ಲಿ 1 ಲಕ್ಷಕ್ಕೂ ಅಧಿಕ ನೇರ ಮತ್ತು ಪರೋಕ್ಷ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ. ಜೊತೆಗೆ 8,000 ದಿಂದ 10,000 ದಷ್ಟು 'ಡಿಜಿಟಲ್ ಸೇವಾ ಪೂರೈಕೆದಾರರನ್ನು' (Digital Service Providers) ಸಿದ್ಧಪಡಿಸಲಾಗುವುದು.

ಮಹಿಳಾ ಸಬಲೀಕರಣ: ಯೋಜನೆಯ ಒಟ್ಟು ಫಲಾನುಭವಿಗಳಲ್ಲಿ ಶೇಕಡಾ 50 ರಷ್ಟು (50%) ಮಹಿಳೆಯರೇ ಇರಲಿದ್ದಾರೆ ಎನ್ನುವುದು ವಿಶೇಷ. ಇದು ಗ್ರಾಮೀಣ ಮಹಿಳೆಯರ ಡಿಜಿಟಲ್ ಸಾಕ್ಷರತೆ ಮತ್ತು ಸ್ವಾವಲಂಬನೆಗೆ ಸಹಕಾರಿಯಾಗಲಿದೆ.

➤ ಅನುಷ್ಠಾನದ ಪಾಲುದಾರರು: ಹಿಂದೂಜಾ ಗ್ರೂಪ್‌ನ ಬ್ರಾಡ್ ಬ್ಯಾಂಡ್ ವಿಭಾಗವಾದ 'ಒನ್ ಒಟಿಟಿ ಇಂಟರ್‌ಟೈನ್‌ಮೆಂಟ್ ಲಿಮಿಟೆಡ್' (OneOTT Intertainment Limited) ಈ ಯೋಜನೆಯಲ್ಲಿ 'ನಾಲೆಡ್ಜ್ ಪಾರ್ಟ್ನರ್' (Knowledge Partner) ಮತ್ತು ಅನುಷ್ಠಾನದ ಸಕ್ರಿಯ ಪಾಲುದಾರನಾಗಿ ಕಾರ್ಯನಿರ್ವಹಿಸುತ್ತಿದೆ. ವಿಶೇಷವೆಂದರೆ, ಈ ಸಂಸ್ಥೆಯು 'ಲಾಭವೂ ಇಲ್ಲ, ನಷ್ಟವೂ ಇಲ್ಲ' (No Profit, No Loss) ತತ್ವದ ಆಧಾರದ ಮೇಲೆ ಸರ್ಕಾರದೊಂದಿಗೆ ಕೈಜೋಡಿಸಿದೆ

**➤ ಯೋಜನೆಯಡಿ ಸಿಗಲಿರುವ ಡಿಜಿಟಲ್ ಸೇವೆಗಳು:**

ಡಿಜಿಟಲ್ ಶಿಕ್ಷಣ (E-Education): ಗ್ರಾಮೀಣ ವಿದ್ಯಾರ್ಥಿಗಳಿಗೆ ಆನ್‌ಲೈನ್ ಶಿಕ್ಷಣ ಮತ್ತು ಇ-ಲರ್ನಿಂಗ್ ಸೌಲಭ್ಯ.

ಟೆಲಿಮೆಡಿಸಿನ್ (Telemedicine): ಹಳ್ಳಿಗಳಲ್ಲೇ ಇದ್ದುಕೊಂಡು ದೂರದ ನಗರಗಳ ತಜ್ಞ ವೈದ್ಯರಿಂದ ಆನ್‌ಲೈನ್ ಮೂಲಕ ಆರೋಗ್ಯ ಸಲಹೆ ಪಡೆಯುವುದು.

ಸ್ಮಾರ್ಟ್ ಕೃಷಿ (Smart Agriculture): ರೈತರಿಗೆ ಹವಾಮಾನ ವರದಿ, ಮಾರುಕಟ್ಟೆ ದರ ಹಾಗೂ ಆಧುನಿಕ ಕೃಷಿ ಪದ್ಧತಿಗಳ ಮಾಹಿತಿ.

ಇ-ಗವರ್ನೆನ್ಸ್ (E-Governance): ಸರ್ಕಾರದ ಯೋಜನೆಗಳು ಮತ್ತು ಸೌಲಭ್ಯಗಳನ್ನು ನೇರವಾಗಿ ಆನ್‌ಲೈನ್ ಮೂಲಕ ಜನರಿಗೆ ತಲುಪಿಸುವುದು.

ಸಾರ್ವಜನಿಕ ವೈ-ಫೈ (Public Wi-Fi): ಗ್ರಾಮಗಳ ಪ್ರಮುಖ ಕೇಂದ್ರಗಳಲ್ಲಿ ಸಾರ್ವಜನಿಕರಿಗೆ ಉಚಿತ/ಕಡಿಮೆ ದರದ ವೈ-ಫೈ ಸೌಲಭ್ಯ.

## ಇಸ್ರೇಲ್‌ನಲ್ಲಿ ಛತ್ರಪತಿ ಶಿವಾಜಿ ಮಹಾರಾಜ್ ಪ್ರತಿಮೆ ಸ್ಥಾಪನೆ: ಭಾರತ-ಇಸ್ರೇಲ್ ಬಾಂಧವ್ಯಕ್ಕೆ ಹೊಸ ಮೈಲಿಗಲ್ಲು!



➤ ಭಾರತ ಹಾಗೂ ಇಸ್ರೇಲ್ ದೇಶಗಳ ನಡುವಿನ ರಾಜತಾಂತ್ರಿಕ ಹಾಗೂ ಸಾಂಸ್ಕೃತಿಕ ಸಂಬಂಧವನ್ನು ಮತ್ತಷ್ಟು ಗಟ್ಟಿಗೊಳಿಸುವ ನಿಟ್ಟಿನಲ್ಲಿ ಇಸ್ರೇಲ್ ಸರ್ಕಾರ ಮಹತ್ವದ ನಿರ್ಧಾರ ಕೈಗೊಂಡಿದೆ. ಇಸ್ರೇಲ್‌ನ ಪ್ರಮುಖ ಮಹಾನಗರವೊಂದರಲ್ಲಿ ಛತ್ರಪತಿ ಶಿವಾಜಿ ಮಹಾರಾಜ್ ಅವರ ಭವ್ಯ ಪ್ರತಿಮೆಯನ್ನು (Chhatrapati Shivaji Maharaj Statue in Israel) ಅನಾವರಣಗೊಳಿಸಲು ಯೋಜನೆ ರೂಪಿಸಲಾಗಿದೆ.

➤ ಜೂನ್ 6 ರಂದು ನಡೆದ ಶಿವಾಜಿ ಮಹಾರಾಜರ 'ಶಿವರಾಜ್ಯಾಭಿಷೇಕ ದಿನ'ದ (Shivrajyabhishek Din) ಸವಿನೆನಪಿನಲ್ಲಿ ಮುಂಬೈನ ಇಸ್ರೇಲ್ ಕಾನ್ಸುಲ್ ಜನರಲ್ ಯಾನಿವ್ ರೆವಾಚ್ (Yaniv Revach) ಅವರು ಈ ಅಧಿಕೃತ ಘೋಷಣೆ ಮಾಡಿದ್ದಾರೆ. ಈ ಯೋಜನೆಗೆ ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್ ಅವರು ಸಂಪೂರ್ಣ ಬೆಂಬಲ ಹಾಗೂ ಅನುಮೋದನೆ ನೀಡಿದ್ದಾರೆ.

➤ ಪ್ರತಿಮೆ ಸ್ಥಾಪನೆಯ ಜೊತೆಗೆ, ಶಿವಾಜಿ ಮಹಾರಾಜರ ಜೀವನ ಚರಿತ್ರೆ ಮತ್ತು ಆಡಳಿತ ವೈಖರಿಯ ಕುರಿತಾದ ಪುಸ್ತಕಗಳನ್ನು ಇಸ್ರೇಲ್‌ನ ಅಧಿಕೃತ ಭಾಷೆಯಾದ 'ಹೀಬ್ರೂ' (Hebrew) ಗೆ ಭಾಷಾಂತರಿಸಲು ಇಸ್ರೇಲ್ ನಿರ್ಧರಿಸಿದೆ.

**➤ ಇಸ್ರೇಲ್ ಮತ್ತು ಶಿವಾಜಿ ಮಹಾರಾಜರ ನಡುವಿನ ಐತಿಹಾಸಿಕ ನಂಟು:**

ಬೆನೆ ಇಸ್ರೇಲಿ (Bene Israeli) ಸಮುದಾಯದ ನಂಟು: ಶತಮಾನಗಳ ಹಿಂದೆ ರೋಮನ್ ಮತ್ತು ಇತರ ಸಾಮ್ರಾಜ್ಯಗಳ ದಬ್ಬಾಳಿಕೆಗೆ ಹೆದರಿ ಪಲಾಯನಗೈದ ಯಹೂದಿಗಳ ಒಂದು ಗುಂಪು ಮಹಾರಾಷ್ಟ್ರದ ಕೊಂಕಣ ತೀರಕ್ಕೆ ಬಂದು ಆಶ್ರಯ ಪಡೆಯಿತು. ಇವರನ್ನು ಭಾರತದಲ್ಲಿ 'ಬೆನೆ ಇಸ್ರೇಲಿ' ಸಮುದಾಯ ಎಂದು ಕರೆಯಲಾಗುತ್ತದೆ. ಜಗತ್ತಿನಾದ್ಯಂತ ಯಹೂದಿಗಳು ಹಿಂಸೆ ಎದುರಿಸುತ್ತಿದ್ದಾಗ, ಭಾರತ ಮಾತ್ರ ಅವರಿಗೆ ಯಾವುದೇ ತಾರತಮ್ಯವಿಲ್ಲದೆ ಆಶ್ರಯ ನೀಡಿದ ಏಕೈಕ ದೇಶವಾಗಿತ್ತು.

ಮರಾಠಾ ಸೈನ್ಯ ಮತ್ತು ನೌಕಾಪಡೆಯಲ್ಲಿ ಯಹೂದಿಗಳು: 17ನೇ ಶತಮಾನದಲ್ಲಿ ಛತ್ರಪತಿ ಶಿವಾಜಿ ಮಹಾರಾಜರು ಬೆನೆ ಇಸ್ರೇಲಿ ಸಮುದಾಯದ ಯಹೂದಿಗಳ ಯುದ್ಧ ಕೌಶಲ್ಯ ಮತ್ತು ನಿಷ್ಠೆಯನ್ನು ಗುರುತಿಸಿ, ಅವರನ್ನು ತಮ್ಮ ಸೈನ್ಯ ಹಾಗೂ ನೌಕಾಪಡೆಗೆ (Maratha Army and Navy) ಸೇರಿಸಿಕೊಂಡಿದ್ದರು. ಮೊಘಲರು ಹಾಗೂ ಆದಿಲ್‌ಶಾಹಿಗಳ ವಿರುದ್ಧದ 'ಸ್ವರಾಜ್ಯ' ಹೋರಾಟದಲ್ಲಿ ಯಹೂದಿ ಸೈನಿಕರು ಪ್ರಮುಖ ಪಾತ್ರ ವಹಿಸಿದ್ದರು.

➤ ಭಾರತೀಯ ಸಶಸ್ತ್ರ ಪಡೆಗಳ ಇತಿಹಾಸದಲ್ಲೇ ಅತ್ಯಂತ ಮಹತ್ವದ ಹಾಗೂ ಐತಿಹಾಸಿಕ ದಿನವೊಂದಕ್ಕೆ ಸಾಕ್ಷಿಯಾಗಿದೆ. ದೇಶದ ಅತ್ಯುನ್ನತ ಸೇನಾ ತರಬೇತಿ ಸಂಸ್ಥೆಯಾದ ಮಹಾರಾಷ್ಟ್ರದ ಖಡಕ್ವಾಸ್ಲಾದಲ್ಲಿರುವ 'ರಾಷ್ಟ್ರೀಯ ರಕ್ಷಣಾ ಅಕಾಡೆಮಿ'ಯಿಂದ (NDA) ತೇರ್ಗಡೆಯಾದ ದೇಶದ ಮೊದಲ ಮಹಿಳಾ ಕೆಡೆಟ್‌ಗಳ ಬ್ಯಾಚ್, ತಮ್ಮ ಅಂತಿಮ ಹಂತದ ಪ್ರೀ-ಕಮಿಷನಿಂಗ್ ತರಬೇತಿಗಾಗಿ ಡೆಹ್ರಾಡೂನ್‌ನಲ್ಲಿರುವ ಭಾರತೀಯ ಮಿಲಿಟರಿ ಅಕಾಡೆಮಿ (IMA) ಗೆ ಯಶಸ್ವಿಯಾಗಿ ಸೇರ್ಪಡೆಗೊಂಡಿದೆ.

➤ ಭಾರತೀಯ ಮಿಲಿಟರಿ ಅಕಾಡೆಮಿ (IMA) ತನ್ನ 92 ವರ್ಷಗಳ ಸುದೀರ್ಘ ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ ಮಹಿಳಾ ಕೆಡೆಟ್‌ಗಳನ್ನು ತರಬೇತಿಗಾಗಿ ಮುಕ್ತವಾಗಿ ಬರಮಾಡಿಕೊಂಡಿದೆ.

➤ ಒಟ್ಟು ಕೆಡೆಟ್‌ಗಳು: ಎನ್‌ಡಿಎ (NDA) ನ 148 ನೇ ಕೋರ್ಸ್‌ನಿಂದ ಯಶಸ್ವಿಯಾಗಿ ತೇರ್ಗಡೆಯಾದ ಒಟ್ಟು 17 ಮಹಿಳಾ ಕೆಡೆಟ್‌ಗಳ ಪೈಕಿ 9 ಮಹಿಳಾ ಕೆಡೆಟ್‌ಗಳು ಭಾರತೀಯ ಭೂಸೇನೆಯನ್ನು (Indian Army) ಆಯ್ಕೆ ಮಾಡಿಕೊಂಡು ಐಎಂಎ (IMA) ಸೇರಿದ್ದಾರೆ.

➤ ಇವರು ಈಗಾಗಲೇ NDA ನಲ್ಲಿ 3 ವರ್ಷಗಳ ಕಠಿಣ ಜಂಟಿ-ಸೇನಾ ತರಬೇತಿಯನ್ನು ಮುಗಿಸಿದ್ದು, ಇನ್ನುಳಿದ 1 ವರ್ಷದ ವಿಶೇಷ ತರಬೇತಿಯನ್ನು ಐಎಂಎನಲ್ಲಿ ಪಡೆದು ಭಾರತೀಯ ಸೇನೆಯಲ್ಲಿ ಖಾಯಂ ಕಮಿಷನ್ಡ್ ಅಧಿಕಾರಿಗಳಾಗಿ (Permanent Commissioned Officers) ಅಧಿಕಾರ ಸ್ವೀಕರಿಸಲಿದ್ದಾರೆ.

➤ **ಸುಪ್ರೀಂ ಕೋರ್ಟ್‌ನ ಐತಿಹಾಸಿಕ ತೀರ್ಪು:** ಹಿಂದೆ ಮಹಿಳೆಯರಿಗೆ ಎನ್‌ಡಿಎ (NDA) ಪ್ರವೇಶಕ್ಕೆ ಅವಕಾಶವಿರಲಿಲ್ಲ. ಮಹಿಳೆಯರು ಶಾರ್ಟ್ ಸರ್ವಿಸ್ ಕಮಿಷನ್ (SSC) ಮೂಲಕ ಚೆನ್ನೈನ ಆಫೀಸರ್ಸ್ ಟ್ರೈನಿಂಗ್ ಅಕಾಡೆಮಿ (OTA) ಮೂಲಕ ಮಾತ್ರ ಸೇನೆಗೆ ಸೇರಬಹುದಿತ್ತು. ಆದರೆ, ಆಗಸ್ಟ್ 2021 ರಲ್ಲಿ ಸುಪ್ರೀಂ ಕೋರ್ಟ್ ನೀಡಿದ ಐತಿಹಾಸಿಕ ಆದೇಶದ ಅನ್ವಯ, ಮಹಿಳೆಯರಿಗೂ ಎನ್‌ಡಿಎ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಲಾಯಿತು. ತದನಂತರ ಆಗಸ್ಟ್ 2022 ರಲ್ಲಿ ಮೊದಲ ಬ್ಯಾಚ್‌ನ ಮಹಿಳಾ ಕೆಡೆಟ್‌ಗಳು ಎನ್‌ಡಿಎಗೆ ದಾಖಲಾಗಿದ್ದರು.

# 15 June 2026

## ಜೂನ್-14 : ವಿಶ್ವ ರಕ್ತದಾನಿಗಳ ದಿನಾಚರಣೆ 2026




➤ ಪ್ರತಿ ವರ್ಷದಂತೆ ಈ ವರ್ಷವೂ ಜೂನ್ 14 ರಂದು ಜಾಗತಿಕವಾಗಿ ವಿಶ್ವ ರಕ್ತದಾನಿಗಳ ದಿನ (World Blood Donor Day - WBDD) ವನ್ನು ಆಚರಿಸಲಾಗುತ್ತಿದೆ. ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ರಕ್ತದಾನ ಮಾಡಿ ಲಕ್ಷಾಂತರ ಜೀವಗಳನ್ನು ಉಳಿಸುವ ಸ್ವಯಂಪ್ರೇರಿತ ರಕ್ತದಾನಿಗಳಿಗೆ ಕೃತಜ್ಞತೆ ಸಲ್ಲಿಸಲು ಈ ದಿನವನ್ನು ಮೀಸಲಿಡಲಾಗಿದೆ.

➤ ವಿಶ್ವ ರಕ್ತದಾನಿಗಳ ದಿನ 2026 ರ ಘೋಷವಾಕ್ಯ (Theme): ವಿಶ್ವ ಆರೋಗ್ಯ ಸಂಸ್ಥೆ (WHO) ಪ್ರತಿ ವರ್ಷ ರಕ್ತದಾನದ ಮಹತ್ವವನ್ನು ಸಾರಲು ಒಂದು ವಿಶೇಷ ಥೀಮ್ ಅನ್ನು ಪ್ರಕಟಿಸುತ್ತದೆ. 2026 ರ ಸಾಲಿನ ಅಧಿಕೃತ ಘೋಷವಾಕ್ಯ ಹೀಗಿದೆ: "ಮಾನವೀಯತೆಯ ಒಂದು ಹನಿ. ರಕ್ತ ನೀಡಿ. ಜೀವ ಉಳಿಸಿ." ("One Drop of Humanity. Give Blood. Save Lives.")

➤ ವಿಶ್ವ ಆರೋಗ್ಯ ಸಂಸ್ಥೆಯು (WHO) ಮೊದಲ ಬಾರಿಗೆ 2004 ರಲ್ಲಿ ಈ ದಿನಾಚರಣೆಯನ್ನು ಅಧಿಕೃತವಾಗಿ ಪ್ರಾರಂಭಿಸಿತು. 2005 ರ ವಿಶ್ವ ಆರೋಗ್ಯ ಅಸೆಂಬ್ಲಿಯಲ್ಲಿ ಇದನ್ನು ವಾರ್ಷಿಕ ಜಾಗತಿಕ ಕಾರ್ಯಕ್ರಮವಾಗಿ ಘೋಷಿಸಲಾಯಿತು.

➤ ರಕ್ತದ ಪ್ರಮುಖ ಗುಂಪುಗಳಾದ A, B, ಮತ್ತು O ಗ್ರೂಪ್‌ಗಳನ್ನು ಪತ್ತೆಹಚ್ಚಿದ ಪ್ರಸಿದ್ಧ ನೊಬೆಲ್ ಪ್ರಶಸ್ತಿ ವಿಜೇತ ವಿಜ್ಞಾನಿ ಕಾರ್ಲ್ ಲ್ಯಾಂಡ್‌ಸ್ಟೈನರ್ (Karl Landsteiner) ಅವರ ಜನ್ಮದಿನದ

ಸವಿನೆನಪಿಗಾಗಿ ಜೂನ್ 14 ರಂದು ಈ ದಿನವನ್ನು ಆಚರಿಸಲಾಗುತ್ತದೆ.

➤ **ರಕ್ತದಾನದ ಜಾಗತಿಕ ಅಗತ್ಯತೆ ಮತ್ತು ಸವಾಲುಗಳು:** ವಿಶ್ವ ಆರೋಗ್ಯ ಸಂಸ್ಥೆಯ ವರದಿಯ ಪ್ರಕಾರ, ಪ್ರಸ್ತುತ ಜಗತ್ತಿನಲ್ಲಿ ಸುರಕ್ಷಿತ ರಕ್ತದ ಲಭ್ಯತೆ ಎಲ್ಲರಿಗೂ ಸಮಾನವಾಗಿ ಸಿಗುತ್ತಿಲ್ಲ. ವಿಶೇಷವಾಗಿ ಕಡಿಮೆ ಮತ್ತು ಮಧ್ಯಮ ಆದಾಯ ಹೊಂದಿರುವ ದೇಶಗಳಲ್ಲಿ ರಕ್ತದ ತೀವ್ರ ಕೊರತೆಯಿದೆ.

ಥಲಸ್ಸೇಮಿಯಾ (Thalassaemia), ಸಿಕಲ್ ಸೆಲ್ ಅನಿಮಿಯಾ ಮುಂತಾದ ಆನುವಂಶಿಕ ರಕ್ತದ ಕಾಯಿಲೆಗಳಿಂದ ಬಳಲುತ್ತಿರುವ ರೋಗಿಗಳಿಗೆ ನಿಯಮಿತವಾಗಿ ರಕ್ತದ ಅವಶ್ಯಕತೆ ಇರುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಸ್ವಯಂಪ್ರೇರಿತ ಮತ್ತು ಹಣರಹಿತ ರಕ್ತದಾನ ವ್ಯವಸ್ಥೆಯನ್ನು ಬಲಪಡಿಸುವುದು ಅತ್ಯಗತ್ಯವಾಗಿದೆ ಎಂದು WHO ತಿಳಿಸಿದೆ.

➤ **ಯಾರೆಲ್ಲಾ ರಕ್ತದಾನ ಮಾಡಬಹುದು?**

ರಕ್ತದಾನ ಮಾಡಲು 18 ರಿಂದ 65 ವರ್ಷದ ವಯೋಮಿತಿ, ಕನಿಷ್ಠ 45-50 ಕೆಜಿ ತೂಕ, ಕನಿಷ್ಠ 12.5 g/dL ಹಿಮೋಗ್ಲೋಬಿನ್ ಮಟ್ಟ ಹೊಂದಿರಬೇಕು ಮತ್ತು ಒಮ್ಮೆ ರಕ್ತದಾನ ಮಾಡಿದ ನಂತರ ಮತ್ತೊಮ್ಮೆ ಮಾಡಲು ಕನಿಷ್ಠ 3 ತಿಂಗಳ ಅಂತರವಿರಬೇಕು.

## ಜೂನ್-15 : ಜಾಗತಿಕ ಪವನ ದಿನ 2026

GLOBAL WIND DAY 15 JUNE

➤ ಪ್ರತಿವರ್ಷ ಜೂನ್ 15 ರಂದು ಜಾಗತಿಕವಾಗಿ 'ಜಾಗತಿಕ ಪವನ ದಿನ' ಅಥವಾ ವಿಶ್ವ ಪವನ ದಿನವನ್ನು ಆಚರಿಸಲಾಗುತ್ತದೆ. ಪವನ ಶಕ್ತಿಯ (ಗಾಳಿ ಆಧಾರಿತ ವಿದ್ಯುತ್) ಮಹತ್ವ, ಅದರ ನವೀಕರಿಸಬಹುದಾದ ಸಾಮರ್ಥ್ಯ ಮತ್ತು ಜಾಗತಿಕ ಹವಾಮಾನ ಬದಲಾವಣೆಯನ್ನು ಎದುರಿಸುವಲ್ಲಿ ಅದರ ಪಾತ್ರದ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು ಈ ದಿನದ ಮುಖ್ಯ ಉದ್ದೇಶವಾಗಿದೆ. 2026 ರ ಈ ದಿನದಂದು, ಭಾರತವು ತನ್ನ ನವೀಕರಿಸಬಹುದಾದ ಇಂಧನ ವಲಯದಲ್ಲಿ ಹೊಸ ಮೈಲಿಗಲ್ಲುಗಳನ್ನು ಸಾಧಿಸಲು ಸಿದ್ಧವಾಗಿರುವ ಮಹತ್ವದ ರೋಡ್‌ಮ್ಯಾಪ್ ಅನ್ನು ಪ್ರಕಟಿಸಿದೆ.

➤ **ಜಾಗತಿಕ ಪವನ ದಿನ 2026 ರ ಪ್ರಮುಖ ಥೀಮ್ (Theme): "Wind Energy: From Ambition to Acceleration" (ಪವನ ಶಕ್ತಿ: ಮಹತ್ವಾಕಾಂಕ್ಷೆಯಿಂದ ವೇಗವರ್ಧನೆಯವರೆಗೆ)**

➤ ಜಾಗತಿಕ ಪವನ ದಿನದ ಇತಿಹಾಸ (History & Significance): ಇದನ್ನು ಮೊದಲ ಬಾರಿಗೆ 2007 ರಲ್ಲಿ 'ಯುರೋಪಿಯನ್ ವಿಂಡ್ ಎನರ್ಜಿ ಅಸೋಸಿಯೇಷನ್' (EWEA) ನಿಂದ 'ವಿಂಡ್ ಡೇ' (Wind Day) ಆಗಿ ಆಚರಿಸಲಾಯಿತು. ನಂತರ 2009 ರಲ್ಲಿ, ಯುರೋಪಿಯನ್ ವಿಂಡ್ ಎನರ್ಜಿ ಅಸೋಸಿಯೇಷನ್ (ಈಗಿನ WindEurope) ಮತ್ತು ಜಾಗತಿಕ ಪವನ ಇಂಧನ ಮಂಡಳಿ (GWEC - Global Wind Energy Council) ಜಂಟಿಯಾಗಿ ಇದನ್ನು ಜಾಗತಿಕ ಮಟ್ಟದ ಆಚರಣೆಯಾಗಿ ವಿಸ್ತರಿಸಿದವು.

➤ ಭಾರತದ ಪವನ ಶಕ್ತಿ ಸಾಧನೆ ಮತ್ತು 100 GW ರೋಡ್‌ಮ್ಯಾಪ್: ಭಾರತವು ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಜಾಗತಿಕವಾಗಿ ಮುಂಚೂಣಿಯಲ್ಲಿದೆ. ಪವನ ಶಕ್ತಿ ವಲಯದಲ್ಲಿ ಭಾರತದ ಪ್ರಸ್ತುತ ಸ್ಥಿತಿ ಮತ್ತು ಭವಿಷ್ಯದ ಗುರಿಗಳು ಕೆಳಗಿನಂತಿವೆ:

ಜಾಗತಿಕ ಸ್ಥಾನ: ಪವನ ಶಕ್ತಿ ಸ್ಥಾಪಿತ ಸಾಮರ್ಥ್ಯದಲ್ಲಿ (Installed Capacity) ಭಾರತವು ವಿಶ್ವದಲ್ಲೇ 4 ನೇ ಸ್ಥಾನದಲ್ಲಿದೆ (ಚೀನಾ, ಅಮೆರಿಕ ಮತ್ತು ಜರ್ಮನಿ ಮೊದಲ ಮೂರು ಸ್ಥಾನಗಳಲ್ಲಿವೆ).

ದಾಖಲೆಯ ಸಾಧನೆ (FY26): ಕಳೆದ ಆರ್ಥಿಕ ವರ್ಷದಲ್ಲಿ (2025-26) ಭಾರತವು ದಾಖಲೆಯ 6.1 ಗಿಗಾವ್ಯಾಟ್ (GW) ಹೊಸ ಪವನ ಶಕ್ತಿ ಸಾಮರ್ಥ್ಯವನ್ನು ದೇಶದ ಗ್ರಿಡ್‌ಗೆ ಸೇರಿಸಿದೆ.

ಪ್ರಸ್ತುತ ಒಟ್ಟು ಸಾಮರ್ಥ್ಯ: ಭಾರತದ ಒಟ್ಟು ಸ್ಥಾಪಿತ ಪವನ ಶಕ್ತಿ ಸಾಮರ್ಥ್ಯವು ಸದ್ಯ 56.09 ಗಿಗಾವ್ಯಾಟ್ (GW) ದಾಟಿದೆ.

ಭವಿಷ್ಯದ ಮಹತ್ವಾಕಾಂಕ್ಷಿ ಗುರಿಗಳು:

2030 ರ ವೇಳೆಗೆ: 100 GW ಪವನ ಶಕ್ತಿ ಸಾಮರ್ಥ್ಯ ಸಾಧಿಸುವುದು.

2035 ರ ವೇಳೆಗೆ: 155 GW ಸಾಮರ್ಥ್ಯ ತಲುಪುವುದು.

ಇದು 2070 ರ ವೇಳೆಗೆ ಭಾರತದ 'ನೆಟ್-ಝೀರೋ' (Net-Zero) ಇಂಗಾಲದ ಹೊರಸೂಸುವಿಕೆ ಗುರಿಯನ್ನು ತಲುಪಲು ಸಹಾಯ ಮಾಡುತ್ತದೆ.

➤ ಕೇಂದ್ರ ಸಚಿವರು: ಪ್ರಸ್ತುತ ಕೇಂದ್ರ ನವೀನ ಮತ್ತು ನವೀಕರಿಸಬಹುದಾದ ಇಂಧನ ಹಾಗೂ ಗ್ರಾಹಕ ವ್ಯವಹಾರಗಳ ಸಚಿವರು ಶ್ರೀ ಪ್ರಲ್ಹಾದ್ ಜೋಶಿ ಆಗಿದ್ದಾರೆ.

## ಜಗತ್ತಿನ ಮೊದಲ 'ಟ್ರಿಲಿಯನೇರ್' ಆದ ಎಲೋನ್ ಮಸ್ಕ್: ಸ್ಪೇಸ್‌ಎಕ್ಸ್ ಐಪಿಒ ಸಾಧಿಸಿದ ಐತಿಹಾಸಿಕ ಮೈಲಿಗಲ್ಲು!




➤ ಜಗತ್ತಿನ ಪ್ರಸಿದ್ಧ ಉದ್ಯಮಿ ಹಾಗೂ ತಂತ್ರಜ್ಞಾನ ಲೋಕದ ಧ್ರುವತಾರೆ ಎಲೋನ್ ಮಸ್ಕ್ (Elon Musk) ಪ್ರಪಂಚದ ಅತ್ಯಂತ ಶ್ರೀಮಂತ ವ್ಯಕ್ತಿ ಎಂಬ ಹೆಗ್ಗಳಿಕೆಗೆ ಹೊಸ ಆಯಾಮ ನೀಡಿದ್ದಾರೆ. ತಮ್ಮ ಪ್ರಮುಖ ಬಾಹ್ಯಾಕಾಶ ಮತ್ತು ಕೃತಕ ಬುದ್ಧಿಮತ್ತೆ (AI) ಸಂಸ್ಥೆಯಾದ ಸ್ಪೇಸ್‌ಎಕ್ಸ್ (SpaceX) ಜೂನ್ 2026 ರಲ್ಲಿ ಶೇರು ಮಾರುಕಟ್ಟೆಗೆ ಪ್ರವೇಶಿಸಿದ (IPO) ಬೆನ್ನಲ್ಲೇ, ಎಲೋನ್ ಮಸ್ಕ್ ಅಧಿಕೃತವಾಗಿ ಜಗತ್ತಿನ ಮೊದಲ ಟ್ರಿಲಿಯನೇರ್ (Trillionaire) ಆಗಿ ಹೊರಹೊಮ್ಮಿದ್ದಾರೆ.

➤ ಐತಿಹಾಸಿಕ ಸ್ಪೇಸ್‌ಎಕ್ಸ್ ಐಪಿಒ (SpaceX IPO) ಮುಖ್ಯಾಂಶಗಳು: ಷೇರು ಮಾರುಕಟ್ಟೆಯಲ್ಲಿ ಲಿಸ್ಟ್ ಆದ ಮೊದಲ ದಿನವೇ ಸ್ಪೇಸ್‌ಎಕ್ಸ್ ಹೂಡಿಕೆದಾರರಿಂದ ಅಭೂತಪೂರ್ವ ಬೆಂಬಲವನ್ನು ಪಡೆಯಿತು.

**ಈ ಐಪಿಒಗೆ ಸಂಬಂಧಿಸಿದ ಪ್ರಮುಖ ಆರ್ಥಿಕ ಅಂಕಿ-ಅಂಶಗಳು ಈ ಕೆಳಗಿನಂತಿವೆ:**

ಆರಂಭಿಕ ಷೇರು ಬೆಲೆ: ಪ್ರತಿ ಷೇರಿಗೆ $135 (ಡಾಲರ್) ನಿಗದಿಪಡಿಸಲಾಗಿತ್ತು.

ಮೊದಲ ದಿನದ ಮುಕ್ತಾಯ: ಮಾರುಕಟ್ಟೆ ಆರಂಭದಲ್ಲೇ $150 ತಲುಪಿದ ಷೇರು ಬೆಲೆ, ದಿನದ ಅಂತ್ಯಕ್ಕೆ $161.11 ಕ್ಕೆ ತಲುಪಿ ದಾಖಲೆ ಬರೆಯಿತು.

ಕಂಪನಿಯ ಒಟ್ಟು ಮೌಲ್ಯ (Valuation): ಈ ಭಾರಿ ಜಿಗಿತದಿಂದಾಗಿ ಸ್ಪೇಸ್‌ಎಕ್ಸ್ ಸಂಸ್ಥೆಯ ಒಟ್ಟು ಮಾರುಕಟ್ಟೆ ಮೌಲ್ಯ $2 ಟ್ರಿಲಿಯನ್ (ರೂ. 166 ಲಕ್ಷ ಕೋಟಿಗೂ ಹೆಚ್ಚು) ದಾಟಿದೆ.

ಸಂಗ್ರಹಿಸಿದ ಬಂಡವಾಳ: ಈ ಐಪಿಒ ಮೂಲಕ ಸ್ಪೇಸ್‌ಎಕ್ಸ್ ಬರೋಬ್ಬರಿ $75 ಬಿಲಿಯನ್ ಬಂಡವಾಳವನ್ನು ಸಂಗ್ರಹಿಸಿದೆ. ಇದು ಜಾಗತಿಕ ಇತಿಹಾಸದಲ್ಲೇ ಅತಿ ದೊಡ್ಡ ಪಬ್ಲಿಕ್ ಆಫರಿಂಗ್ (Largest IPO) ಆಗಿದೆ.

ಜಾಗತಿಕ ದಾಖಲೆ ಬದಿಗೆ: ಈ ಹಿಂದೆ 2019 ರಲ್ಲಿ ಸೌದಿ ಅರೇಬಿಯಾದ ತೈಲ ಸಂಸ್ಥೆ 'ಸೌದಿ ಅರಾಮ್ಕೋ' (Saudi Aramco) ನಿರ್ಮಿಸಿದ್ದ ಅತಿ ದೊಡ್ಡ ಐಪಿಒ ದಾಖಲೆಯನ್ನು ಸ್ಪೇಸ್‌ಎಕ್ಸ್ ಈಗ ಅಧಿಕೃತವಾಗಿ ಹಿಂದಿಕ್ಕಿದೆ.

➤ ಸ್ಪೇಸ್‌ಎಕ್ಸ್ ಸಂಸ್ಥೆಯ ಸಿಂಹಪಾಲು (ಅತಿ ಹೆಚ್ಚು ಷೇರುಗಳು) ಎಲೋನ್ ಮಸ್ಕ್ ಅವರ ಬಳಿಯೇ ಇದೆ. ಕಂಪನಿಯ ಮೌಲ್ಯ $2 ಟ್ರಿಲಿಯನ್ ದಾಟುತ್ತಿದ್ದಂತೆ, ಮಸ್ಕ್ ಅವರ ವೈಯಕ್ತಿಕ ಆಸ್ತಿ ಮೌಲ್ಯವೂ $1 ಟ್ರಿಲಿಯನ್ (ಸುಮಾರು 83 ಲಕ್ಷ ಕೋಟಿ ರೂಪಾಯಿಗಳು) ಗಡಿಯನ್ನು ದಾಟಿತು. ಈ ಮೂಲಕ ಮಾನವ ಇತಿಹಾಸದಲ್ಲೇ ವೈಯಕ್ತಿಕ ಸಂಪತ್ತಿನಲ್ಲಿ ಈ ಮೈಲಿಗಲ್ಲು ತಲುಪಿದ ಮೊದಲ ವ್ಯಕ್ತಿ ಎಂಬ ಹೆಗ್ಗಳಿಕೆಗೆ ಅವರು ಪಾತ್ರರಾಗಿದ್ದಾರೆ.

➤ **ಎಲೋನ್ ಮಸ್ಕ್ ಒಡೆತನದ ಪ್ರಮುಖ ಸಂಸ್ಥೆಗಳು:**

SpaceX: ಬಾಹ್ಯಾಕಾಶ ತಂತ್ರಜ್ಞಾನ (Space Technology)

Tesla: ಎಲೆಕ್ಟ್ರಿಕ್ ವಾಹನಗಳು (Electric Vehicles)

xAI: ಕೃತಕ ಬುದ್ಧಿಮತ್ತೆ (Artificial Intelligence)
X (ಹಳೆಯ ಟ್ವಿಟರ್): ಸಾಮಾಜಿಕ ಮಾಧ್ಯಮ (Social Media)
Starlink: ಸ್ಯಾಟಲೈಟ್ ಇಂಟರ್ನೆಟ್ (Satellite Communications)

## ಭಾರತೀಯ ಸೇನೆಯಲ್ಲಿ 'ದೇಶಿ' ಕ್ರಾಂತಿ: ವಸಾಹತುಶಾಹಿ ಪದ್ಧತಿಗಳಿಗೆ ಬ್ರೇಕ್, 'ಬಂದಿ ಜಾಕೆಟ್' ಪರಿಚಯ!




➤ ದೇಶದ ಸಾರ್ವಭೌಮ ಗುರುತು ಮತ್ತು ರಾಷ್ಟ್ರೀಯ ಭಾವನೆಗಳಿಗೆ ಅನುಗುಣವಾಗಿ ಭಾರತೀಯ ಸೇನೆಯು ತನ್ನ ಡ್ರೆಸ್ ಕೋಡ್‌ನಲ್ಲಿ ಭಾರಿ ಬದಲಾವಣೆಗಳನ್ನು ತಂದಿದೆ. ಬ್ರಿಟಿಷರ ಕಾಲದಿಂದಲೂ ನಡೆದುಕೊಂಡು ಬಂದಿದ್ದ ಹಲವು ಹಳೇ ಪದ್ಧತಿಗಳನ್ನು ಕೈಬಿಟ್ಟು, ಭಾರತೀಯ ಮೂಲದ ಉಡುಗೆ-ತೊಡುಗೆಗಳಿಗೆ ಮನ್ನಣೆ ನೀಡಲಾಗಿದೆ. ಜೂನ್ 2026ರಲ್ಲಿ ಬಿಡುಗಡೆಯಾಗಿರುವ ಹೊಸ 'ಆರ್ಮಿ ಯೂನಿಫಾರ್ಮ್ಸ್-2026' (Army Uniforms-2026) ಕೈಪಿಡಿಯಲ್ಲಿ ಈ ಎಲ್ಲಾ ಸುಧಾರಣೆಗಳನ್ನು ವಿವರವಾಗಿ ಉಲ್ಲೇಖಿಸಲಾಗಿದೆ. 174 ಪುಟಗಳ ಈ ಐತಿಹಾಸಿಕ ದಸ್ತಾವೇಜು ಸೇನಾ ಸಮವಸ್ತ್ರಗಳು, ಅಲಂಕಾರ ಮತ್ತು ಔಪಚಾರಿಕ ನಿಯಮಗಳ ಕುರಿತು ಹೊಸ ಮಾರ್ಗಸೂಚಿಗಳನ್ನು ಒಳಗೊಂಡಿದೆ.

**➤ ಹೊಸ ನೀತಿಯಲ್ಲಿ ಪ್ರಮುಖ ಬದಲಾವಣೆಗಳು:**

'ಬಂದಿ ಜಾಕೆಟ್' ಪರಿಚಯ: ಅಧಿಕೃತ ಮತ್ತು ನಾಗರಿಕ ಔಪಚಾರಿಕ ಕಾರ್ಯಕ್ರಮಗಳಲ್ಲಿ (Civil Formal Dress) ಅಧಿಕಾರಿಗಳು ಇನ್ನು ಮುಂದೆ ಮುಚ್ಚಿದ ಕೊರಳಿನ (Closed-neck) ಸಾಂಪ್ರದಾಯಿಕ 'ಬಂದಿ ಜಾಕೆಟ್' ಧರಿಸಲು ಅವಕಾಶ ನೀಡಲಾಗಿದೆ. ಇದನ್ನು ಪುರುಷ ಅಧಿಕಾರಿಗಳು ಪೂರ್ಣ ತೋಳಿನ ಶರ್ಟ್ ಮತ್ತು ಫಾರ್ಮಲ್ ಪ್ಯಾಂಟ್ ಮೇಲೆ ಧರಿಸಬಹುದು.

ಪೌಚ್ ಬೆಲ್ಟ್ (Pouch Belts) ಮುಕ್ತಿ: ಮೆಸ್ ಡ್ರೆಸ್ ಸಂಖ್ಯೆ 5 ಮತ್ತು 6ರಿಂದ ಸಾಂಪ್ರದಾಯಿಕ ಪೌಚ್ ಬೆಲ್ಟ್‌ಗಳನ್ನು ಸಂಪೂರ್ಣವಾಗಿ ತೆಗೆದುಹಾಕಲಾಗಿದೆ. (ಆದರೆ ಆರ್ಮ್ಡ್ ಕಾರ್ಪ್ಸ್, ಆರ್ಟಿಲರಿ, ಇನ್‌ಫಾಂಟ್ರಿ ಮುಂತಾದ ಕೆಲವು ನಿರ್ದಿಷ್ಟ ರೆಜಿಮೆಂಟಲ್ ಕಾರ್ಯಕ್ರಮಗಳಲ್ಲಿ ಕರ್ನಲ್ ಹುದ್ದೆಯವರೆಗಿನ ಅಧಿಕಾರಿಗಳಿಗೆ ಮಾತ್ರ ಇದಕ್ಕೆ ವಿನಾಯಿತಿ ಇದೆ).

ಕತ್ತಿ (Sword) ಹಿಡಿಯುವುದು ಐಚ್ಛಿಕ: ಪರೇಡ್‌ಗಳ ಸಮಯದಲ್ಲಿ ಪರಿಶೀಲನೆ ನಡೆಸುವ ಮುಖ್ಯ ಅಧಿಕಾರಿಗಳು (Reviewing Officers) ಕತ್ತಿ ಹಿಡಿಯುವುದನ್ನು ಕಡ್ಡಾಯಗೊಳಿಸದೆ ಐಚ್ಛಿಕಗೊಳಿಸಲಾಗಿದೆ. ಇನ್ನು ಮುಂದೆ ಕತ್ತಿಗಳನ್ನು ಕೇವಲ ಪರೇಡ್ ಕಮಾಂಡರ್‌ಗಳು ಮತ್ತು ಗಾರ್ಡ್ ಆಫ್ ಆನರ್ ನೀಡುವ ನಿರ್ದಿಷ್ಟ ಅಧಿಕಾರಿಗಳು ಮಾತ್ರ ಬಳಸಲಿದ್ದಾರೆ.

'ರಾಯಲ್' ಪದಕ್ಕೆ ವಿದಾಯ: ಬ್ರಿಟಿಷ್ ಆಡಳಿತದ ನೆನಪಿಸುವ 'ರಾಯಲ್' ನಂತಹ ಹಳೆಯ ಪದಗಳನ್ನು ಸೇನಾ ಕೈಪಿಡಿಯಿಂದ ಶಾಶ್ವತವಾಗಿ ಕೈಬಿಡಲಾಗಿದೆ.

**➤ ಮಹಿಳಾ ಅಧಿಕಾರಿಗಳ ಉಡುಗೆಗೆ ಹೊಸ ನಿಯಮ:** ಹೊಸ ಮಾರ್ಗಸೂಚಿಯ ಪ್ರಕಾರ, ಮಹಿಳಾ ಅಧಿಕಾರಿಗಳು ಅಧಿಕೃತ ಕಾರ್ಯಕ್ರಮಗಳ ಸಂದರ್ಭದಲ್ಲಿ ಸಭ್ಯವಾದ ಒಂದೇ ಬಣ್ಣದ ಸೀರೆ ಅಥವಾ ಕುರ್ತಾ-ಸಲ್ವಾರ್ ಜೊತೆಗೆ ಆಂಕಲ್-ಲೆಂತ್ ಸ್ಟ್ರೇಟ್ ಪ್ಯಾಂಟ್ ಮತ್ತು ದುಪಟ್ಟಾ ಧರಿಸಬಹುದು. ಆದರೆ ಸ್ಲೀವ್‌ಲೆಸ್ ಕುರ್ತಾಗಳು, ಪಲಾಜೊ ಮತ್ತು ಸಿಗರೇಟ್ ಪ್ಯಾಂಟ್‌ಗಳ ಬಳಕೆಯನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ.

**➤ ಹೊಸ ಚಳಿಗಾಲದ ಯೂನಿಫಾರ್ಮ್ (Winter Apparel):** ಸೇನೆಯ ಎಲ್ಲಾ ಶ್ರೇಣಿಯ ಸಿಬ್ಬಂದಿಗಳಿಗೆ 'ವಿಂಟರ್ ಡ್ರೆಸ್ ನಂ. 3B' ಎಂಬ ಹೊಸ ಚಳಿಗಾಲದ ಉಡುಪನ್ನು ಪರಿಚಯಿಸಿದೆ. ಇದು ಅಂಗೋಲಾ ಶರ್ಟ್, ಹೊಸ ವಿನ್ಯಾಸದ 'ಬ್ಯಾಟಲ್ ಜಾಕೆಟ್' (Battle Jacket) ಮತ್ತು ಬೆರೆಟ್ (ಟೋಪಿ) ಒಳಗೊಂಡಿರುತ್ತದೆ. ಸದ್ಯ ಚಾಲ್ತಿಯಲ್ಲಿರುವ ಜರ್ಸಿ ಆಧಾರಿತ ಚಳಿಗಾಲದ ಉಡುಪನ್ನು ಇದು ಹಂತ-ಹಂತವಾಗಿ ಬದಲಾಯಿಸಲಿದ್ದು, ಜೂನ್ 2029ರ ವೇಳೆಗೆ ಸಂಪೂರ್ಣವಾಗಿ ಜಾರಿಗೆ ಬರಲಿದೆ.

**➤ ಶಿಸ್ತು ಮತ್ತು ಅಲಂಕಾರಕ್ಕೆ ಕಠಿಣ ನಿಯಮಗಳು:**

ಯೂನಿಫಾರ್ಮ್ ಧರಿಸಿದ್ದಾಗ ಯಾವುದೇ ರೀತಿಯ ವಿಲಕ್ಷಣ ಕೇಶವಿನ್ಯಾಸ (Radical Hairstyles), ಅನುಮತಿ ಇಲ್ಲದ ಗಡ್ಡ, ಹಚ್ಚೆ (Tattoos), ಮತ್ತು ಬಾಡಿ ಪಿಯರ್ಸಿಂಗ್ (ಕಿವಿ-ಮೂಗು ಚುಚ್ಚಿಸುವುದು) ನಿಷೇಧಿಸಲಾಗಿದೆ.

ಮಹಿಳಾ ಸಿಬ್ಬಂದಿಗೆ ಲಿಪ್‌ಸ್ಟಿಕ್, ನೇಲ್ ಪಾಲಿಷ್, ಎದ್ದುಕಾಣುವ ಬಿಂದಿ ಅಥವಾ ಮೂಗುತಿ ಧರಿಸುವುದನ್ನು ನಿರ್ಬಂಧಿಸಲಾಗಿದೆ. (ಬೆರೆಟ್ ಟೋಪಿ ಧರಿಸಿದಾಗ ಕಾಣಿಸದಂತೆ ಸಣ್ಣದಾಗಿ ಸಿಂಧೂರ ಇಡಲು ಮಾತ್ರ ಅವಕಾಶವಿದೆ).

ಪೂಜೆಯ ದಿನದಂದು ಮಣಿಕಟ್ಟಿಗೆ ಕಟ್ಟುವ ಒಂದೇ ಒಂದು ಪವಿತ್ರ ದಾರವನ್ನು (ರಕ್ಷಾಸೂತ್ರ) ಹೊರತುಪಡಿಸಿ, ಯೂನಿಫಾರ್ಮ್ ಮೇಲೆ ಯಾವುದೇ ರೀತಿಯ ಬ್ರೇಸ್ಲೆಟ್ ಅಥವಾ ಧಾರ್ಮಿಕ ಚಿಹ್ನೆಗಳನ್ನು ಪ್ರದರ್ಶಿಸುವಂತಿಲ್ಲ (ಸಿಖ್ ಸೈನಿಕರಿಗೆ ಸಾಂಪ್ರದಾಯಿಕ ವಿನಾಯಿತಿ ಮುಂದುವರಿಯಲಿದೆ).

ಯೂನಿಫಾರ್ಮ್ ಧರಿಸಿ ರಾಜಕೀಯ, ಧಾರ್ಮಿಕ ರ್‍ಯಾಲಿಗಳು, ಪ್ರತಿಭಟನೆಗಳು ಅಥವಾ ಪೂರ್ವಾನುಮತಿ ಇಲ್ಲದ ಖಾಸಗಿ ಪಾರ್ಟಿ ಹಾಗೂ ಪೇಡ್ ಮೀಡಿಯಾ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತಿಲ್ಲ.

## ಅಸ್ಸಾಂನಲ್ಲಿ ಭಾರತೀಯ ವಾಯುಪಡೆಯ AN-32 ವಿಮಾನ ಪತನ; ಐವರು ಯೋಧರು ಹುತಾತ್ಮ!



➤ ದೇಶದ ರಕ್ಷಣಾ ಕ್ಷೇತ್ರದಲ್ಲಿ ತೀವ್ರ ಕ್ರಾಂತಿ ಮತ್ತು ಆಧುನೀಕರಣ ನಡೆಯುತ್ತಿರುವ ನಡುವೆಯೂ ಭಾರತೀಯ ವಾಯುಪಡೆ (IAF)ಯಲ್ಲಿ ಮತ್ತೊಂದು ಸಾರಿಗೆ ವಿಮಾನ ದುರಂತ ಸಂಭವಿಸಿದೆ. ಅಸ್ಸಾಂನ ಜೋರ್ಹತ್ (Jorhat) ಬಳಿ ವಾಯುಪಡೆಯ ಪ್ರಮುಖ ಮಿಲಿಟರಿ ಸಾರಿಗೆ ವಿಮಾನವಾದ ಎಎನ್-32 (AN-32) ಲ್ಯಾಂಡಿಂಗ್ ವೇಳೆ ನಿಯಂತ್ರಣ ತಪ್ಪಿ ಪತನಗೊಂಡಿದೆ. ಈ ಭೀಕರ ಅಪಘಾತದಲ್ಲಿ ಪೈಲಟ್ ಸೇರಿದಂತೆ ಭಾರತೀಯ ವಾಯುಪಡೆಯ ಐವರು ವೀರ ಯೋಧರು ಹುತಾತ್ಮರಾಗಿದ್ದಾರೆ.

➤ ಶನಿವಾರ (13-06-2026) ಬೆಳಗ್ಗೆ ಅಸ್ಸಾಂನ ಜೋರ್ಹತ್‌ನಲ್ಲಿರುವ ರೌರಿಯಾ ವಾಯುನೆಲೆಯಿಂದ (Rowriah Air Base) ಎಂದಿನಂತೆ ಹಾರಾಟ ನಡೆಸಿದ್ದ ಎಎನ್-32 ವಿಮಾನವು ಮರಳಿ ಲ್ಯಾಂಡಿಂಗ್ ಆಗುವ ವೇಳೆ ಈ ದುರಂತ ಸಂಭವಿಸಿದೆ. ರನ್‌ವೇನಲ್ಲಿ ಇಳಿಯುತ್ತಿದ್ದಾಗ ತಾಂತ್ರಿಕ ದೋಷದಿಂದಾಗಿ ವಿಮಾನ ನಿಯಂತ್ರಣ ತಪ್ಪಿ ಪತನಗೊಂಡಿದೆ. ಬಿದ್ದ ರಭಸಕ್ಕೆ ಕ್ಷಣಾರ್ಧದಲ್ಲಿ ವಿಮಾನಕ್ಕೆ ಬೆಂಕಿ ಹೊತ್ತಿಕೊಂಡಿದ್ದು, ಸಂಪೂರ್ಣವಾಗಿ ಭಸ್ಮವಾಗಿದೆ. ತಕ್ಷಣವೇ ಅಗ್ನಿಶಾಮಕ ಮತ್ತು ತುರ್ತು ರಕ್ಷಣಾ ಸಿಬ್ಬಂದಿ ಧಾವಿಸಿದರಾದರೂ, ಭೀಕರ ಬೆಂಕಿಯ ಜ್ವಾಲೆಯಿಂದಾಗಿ ಐವರು ಸಿಬ್ಬಂದಿಯನ್ನು ರಕ್ಷಿಸಲು ಸಾಧ್ಯವಾಗಲಿಲ್ಲ.

**➤ ದೇಶಕ್ಕಾಗಿ ಪ್ರಾಣ ಮುಡಿಪಾಗಿಟ್ಟ ಹುತಾತ್ಮ ಯೋಧರು:**

1. ವಿಮಾನದ ಪೈಲಟ್ ಹಾಗೂ ಸಹ-ಸಿಬ್ಬಂದಿ
2. ಖೇಮಾರಾಮ್ ಕುಮಾವತ್ (ಅಗ್ನಿವೀರ್ ವಾಯು)
3. ಡ್ಯಾನಿಶ್ ಆಲಂ (ಅಗ್ನಿವೀರ್ ವಾಯು)
4. ಶುಭಮ್ ಕುಮಾರ್
5. ಜಿತೇಂದ್ರ ಕುಮಾರ್

➤ ಎಎನ್-32 (AN-32) ವಿಮಾನ: AN-32 ಮೂಲತಃ ಉಕ್ರೇನ್ (ಹಳೆಯ ಸೋವಿಯತ್ ಒಕ್ಕೂಟ) ದೇಶದ ಸಾರಿಗೆ ವಿಮಾನವಾಗಿದೆ. ಇದನ್ನು ಆಂಟೊನೊವ್ (Antonov) ಕಂಪನಿ ವಿನ್ಯಾಸಗೊಳಿಸಿದೆ. ಇದು ಅವಳಿ ಎಂಜಿನ್ (Twin-Engine) ಹೊಂದಿರುವ ಪ್ರೊಪೆಲ್ಲರ್

ಚಾಲಿತ ಮಿಲಿಟರಿ ಸಾರಿಗೆ ವಿಮಾನವಾಗಿದೆ. ಭಾರತೀಯ ವಾಯುಪಡೆಯು ಇದನ್ನು ಕಠಿಣ ಭೂಪ್ರದೇಶಗಳಲ್ಲಿ, ಎತ್ತರದ ಪ್ರದೇಶಗಳಿಗೆ ರಕ್ಷಣಾ ಸಾಮಗ್ರಿ, ಸರಕು ಮತ್ತು ಮಿಲಿಟರಿ ಸಿಬ್ಬಂದಿಯನ್ನು ಸಾಗಿಸಲು ವ್ಯಾಪಕವಾಗಿ ಬಳಸುತ್ತದೆ.

➤ ಭಾರತದಲ್ಲಿ AN-32 ವಿಮಾನಗಳ ಅಪಘಾತದ ಕರಾಳ ಇತಿಹಾಸ:ಭಾರತೀಯ ವಾಯುಪಡೆಯಲ್ಲಿ 1980 ರ ದಶಕದಿಂದಲೂ ಈ ವಿಮಾನಗಳನ್ನು ಬಳಸಲಾಗುತ್ತಿದೆ. ಆದರೆ, ಕಾಲಕಾಲಕ್ಕೆ ಸಂಭವಿಸಿದ ತಾಂತ್ರಿಕ ದೋಷಗಳಿಂದಾಗಿ ಇದುವರೆಗೆ ದೇಶದಲ್ಲಿ ಸುಮಾರು 22 ಕ್ಕೂ ಹೆಚ್ಚು AN-32 ವಿಮಾನಗಳು ಪತನಗೊಂಡಿವೆ.

ಇತ್ತೀಚಿನ ಪ್ರಮುಖ ಅಪಘಾತ (ಜೂನ್ 3, 2019): ಅಸ್ಸಾಂನಿಂದ ಹೊರಟಿದ್ದ ವಿಮಾನ ಅರುಣಾಚಲ ಪ್ರದೇಶದ ದಟ್ಟ ಅರಣ್ಯದಲ್ಲಿ ಪತನಗೊಂಡು 13 ಯೋಧರು ಪ್ರಾಣ ಕಳೆದುಕೊಂಡರು.

## ರಕ್ಷಣಾ ರಂಗದಲ್ಲಿ ಐತಿಹಾಸಿಕ ಮೈಲಿಗಲ್ಲು: 24 ಗಂಟೆಯಲ್ಲಿ 3 ಪ್ರತಿಬಂಧಕ ಕ್ಷಿಪಣಿಗಳನ್ನು ಯಶಸ್ವಿಯಾಗಿ ಪರೀಕ್ಷಿಸಿದ DRDO!




➤ ಭಾರತದ ರಕ್ಷಣಾ ಕ್ಷೇತ್ರದಲ್ಲಿ ಮತ್ತೊಂದು ಐತಿಹಾಸಿಕ ಮೈಲಿಗಲ್ಲು ಸ್ಥಾಪನೆಯಾಗಿದೆ. ಭಾರತೀಯ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (DRDO) ಅಭಿವೃದ್ಧಿಪಡಿಸಿರುವ ಸುಧಾರಿತ ಬ್ಯಾಲಿಸ್ಟಿಕ್ ಕ್ಷಿಪಣಿ ರಕ್ಷಣಾ (BMD - Ballistic Missile Defence) ವ್ಯವಸ್ಥೆಯ ಮೂರು ಸರಣಿ ಉಡಾವಣಾ ಪರೀಕ್ಷೆಗಳು ಯಶಸ್ವಿಯಾಗಿವೆ. ಜೂನ್ 10 ಮತ್ತು 11 ರಂದು ನಡೆದ ಈ ಪರೀಕ್ಷೆಗಳು ವಾಯು ಹಾಗೂ ಸಮುದ್ರ ಮಾರ್ಗದಿಂದ ಬರುವ ಶತ್ರುಗಳ ಯಾವುದೇ ಪ್ರಬಲ ಬೆದರಿಕೆಗಳನ್ನು ಆಕಾಶದಲ್ಲೇ ಹೊಡೆದುರುಳಿಸುವ ಭಾರತದ ಸಾಮರ್ಥ್ಯವನ್ನು ಜಗತ್ತಿಗೆ ಸಾರಿವೆ.

➤ ಈ ಯಶಸ್ಸಿನೊಂದಿಗೆ, ಖಂಡಾಂತರ ಕ್ಷಿಪಣಿಗಳನ್ನು (ICBMs) ತಡೆಯಬಲ್ಲ ಅತ್ಯಾಧುನಿಕ ರಕ್ಷಣಾ ಕವಚ ಹೊಂದಿರುವ ವಿಶ್ವದ ಕೆಲವೇ ಕೆಲವು ಗಣ್ಯ (Elite) ರಾಷ್ಟ್ರಗಳ ಸಾಲಿಗೆ ಭಾರತ ಅಧಿಕೃತವಾಗಿ ಸೇರ್ಪಡೆಯಾಗಿದೆ.

ಎರಡು ದಿನ, ಮೂರು ಪರೀಕ್ಷೆ: ಕೇವಲ 24 ಗಂಟೆಗಳ ಅವಧಿಯಲ್ಲಿ ಡಿಆರ್‌ಡಿಒ ಸರಣಿ ಮೂರು ಕ್ಷಿಪಣಿ ಪರೀಕ್ಷೆಗಳನ್ನು ಯಶಸ್ವಿಯಾಗಿ ನಡೆಸಿದೆ.

ಬಹುಪದರದ ರಕ್ಷಣೆ (Multi-layered Defence): ಈ ಇಂಟರ್‌ಸೆಪ್ಟರ್ ಕ್ಷಿಪಣಿಗಳು ಭೂಮಿಯ ವಾತಾವರಣದ ಒಳಗಿನ (Endo-atmospheric) ಮತ್ತು ಬಾಹ್ಯಾಕಾಶದ ವಾತಾವರಣದ ಹೊರಗಿನ (Exo-atmospheric) ಎರಡೂ ವಲಯಗಳಲ್ಲಿ ಶತ್ರು ಕ್ಷಿಪಣಿಗಳನ್ನು ಯಶಸ್ವಿಯಾಗಿ ಪತ್ತೆಹಚ್ಚಿ ನಾಶಪಡಿಸಿವೆ.

ನೌಕಾ ನಿರೋಧಕ ಕ್ಷಿಪಣಿ (NASM-MR): ಇದೇ ವೇಳೆ ಮಧ್ಯಮ ಶ್ರೇಣಿಯ ನೌಕಾ ವಿರೋಧಿ ಕ್ಷಿಪಣಿಯ (Naval Anti-Ship Missile-Medium Range) ಚೊಚ್ಚಲ ಪರೀಕ್ಷೆಯೂ ಯಶಸ್ವಿಯಾಗಿದ್ದು, ಸಮುದ್ರದಲ್ಲಿನ ಶತ್ರುಗಳ ಯುದ್ಧನೌಕೆಗಳ ಬೆದರಿಕೆಗಳನ್ನು ಹತ್ತಿಕ್ಕಲು ಇದು ನೆರವಾಗಲಿದೆ.

➤ ಇಂಟರ್‌ಸೆಪ್ಟರ್ ಕ್ಷಿಪಣಿ: ಶತ್ರು ದೇಶಗಳು ಭಾರತದ ಮೇಲೆ ದಾಳಿ ಮಾಡಲು ದೂರಗಾಮಿ ಖಂಡಾಂತರ ಕ್ಷಿಪಣಿಗಳನ್ನು (Ballistic Missiles) ಉಡಾವಣೆ ಮಾಡಿದರೆ, ನಮ್ಮ ಅತ್ಯಾಧುನಿಕ ರೇಡಾರ್‌ಗಳು ಅದನ್ನು ತಕ್ಷಣವೇ ಪತ್ತೆಹಚ್ಚುತ್ತವೆ. ಆ ಶತ್ರು ಕ್ಷಿಪಣಿಗಳು ಭಾರತದ ಭೂಭಾಗವನ್ನು ತಲುಪುವ ಮೊದಲೇ, ಭಾರತದ ಕಡೆಯಿಂದ ಇಂಟರ್‌ಸೆಪ್ಟರ್ (ಪ್ರತಿಬಂಧಕ) ಕ್ಷಿಪಣಿ ಜಿಗಿದು ಹೋಗಿ, ಆಕಾಶದಲ್ಲೇ ಅಥವಾ ಬಾಹ್ಯಾಕಾಶದಲ್ಲೇ ಅದನ್ನು ಡಿಕ್ಕಿ ಹೊಡೆದು ಸಂಪೂರ್ಣವಾಗಿ ಧ್ವಂಸಗೊಳಿಸುತ್ತದೆ. ಇದನ್ನು "ಬುಲೆಟ್‌ನಿಂದ ಮತ್ತೊಂದು ಬುಲೆಟ್ ಅನ್ನು ಹೊಡೆಯುವ ತಂತ್ರಜ್ಞಾನ" ಎನ್ನಲಾಗುತ್ತದೆ.

➤ **ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರ ಪ್ರತಿಕ್ರಿಯೆ:** ಕೇವಲ ಎರಡು ದಿನಗಳಲ್ಲಿ ಮೂರು ಕ್ಷಿಪಣಿಗಳ ಯಶಸ್ವಿ ಸಾಧನೆ ಮಾಡಿರುವುದು ದೇಶದ ರಕ್ಷಣಾ ಸನ್ನದ್ಧತೆಗೆ ಸಿಕ್ಕ ದೊಡ್ಡ ಉತ್ತೇಜನವಾಗಿದೆ. ಈ ಇಂಟರ್‌ಸೆಪ್ಟರ್ ಕ್ಷಿಪಣಿಗಳು ನಿಗದಿತ ಗುರಿಗಳನ್ನು ಯಶಸ್ವಿಯಾಗಿ ತಲುಪುವ ಮೂಲಕ ದೇಶದ ರಕ್ಷಣಾ ಕೋಟೆಯನ್ನು ಮತ್ತಷ್ಟು ಭದ್ರಪಡಿಸಿವೆ.

➤ ಜಾಗತಿಕ ಮಟ್ಟದಲ್ಲಿ ಭಾರತದ ಸ್ಥಾನಮಾನವೇನು?
ವಿಶ್ವದಲ್ಲೇ ಅತ್ಯಂತ ಕಠಿಣ ಎನ್ನಲಾಗುವ ಈ ಬ್ಯಾಲಿಸ್ಟಿಕ್ ಕ್ಷಿಪಣಿ ರಕ್ಷಣೆ (BMD) ತಂತ್ರಜ್ಞಾನ ಕೇವಲ ಬೆರಳಣಿಕೆಯಷ್ಟು ದೇಶಗಳ ಬಳಿ ಮಾತ್ರ ಇದೆ. ಭಾರತದ ಸೇರ್ಪಡೆಯೊಂದಿಗೆ ಈಗ ಈ ಶಕ್ತಿ ಹೊಂದಿರುವ ಪ್ರಮುಖ ದೇಶಗಳು:
ಅಮೆರಿಕ (USA)
ರಷ್ಯಾ (Russia)
ಚೀನಾ (China)
ಇಸ್ರೇಲ್ (Israel)
ಭಾರತ (India)

## ಪ್ರಧಾನಿ ಮೋದಿ ಐದು ದಿನಗಳ ವಿದೇಶ ಪ್ರವಾಸ: ಫ್ರಾನ್ಸ್, ಸ್ಲೋವಾಕಿಯಾಗೆ ಭೇಟಿ; ಜಿ7 ಶೃಂಗಸಭೆಯಲ್ಲಿ ಭಾಗಿ!



➤ ಭಾರತದ ವಿದೇಶಾಂಗ ನೀತಿಯಲ್ಲಿ ಮತ್ತೊಂದು ಮಹತ್ವದ ಮೈಲಿಗಲ್ಲಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಐದು ದಿನಗಳ ಅಧಿಕೃತ ಪ್ರವಾಸದ ಅಂಗವಾಗಿ ಫ್ರಾನ್ಸ್ ಮತ್ತು ಸ್ಲೋವಾಕಿಯಾ ದೇಶಗಳಿಗೆ ಭೇಟಿ ನೀಡಿದ್ದಾರೆ. ಶನಿವಾರದಂದು ಫ್ರಾನ್ಸ್‌ನ ಪ್ರಸಿದ್ಧ ಬಂದರು ನಗರಿ ನೈಸ್ (Nice) ತಲುಪಿರುವ ಪ್ರಧಾನಿಯವರ ಈ ಪ್ರವಾಸವು ರಕ್ಷಣೆ, ಭದ್ರತೆ, ಜಾಗತಿಕ ಆರ್ಥಿಕತೆ ಮತ್ತು ನಾವೀನ್ಯತೆ (Innovation) ಕ್ಷೇತ್ರದಲ್ಲಿ ಭಾರತದ ಪಾತ್ರವನ್ನು ಜಾಗತಿಕ ಮಟ್ಟದಲ್ಲಿ ಮತ್ತಷ್ಟು ಬಲಪಡಿಸಲಿದೆ.

➤ **ಫ್ರಾನ್ಸ್ ಭೇಟಿ ಮತ್ತು ದ್ವಿಪಕ್ಷೀಯ ಮಾತುಕತೆ:** ಪ್ರಧಾನಿ ಮೋದಿ ಅವರು ಭಾನುವಾರ (ಜೂನ್ 14) ಫ್ರಾನ್ಸ್ ಅಧ್ಯಕ್ಷ ಇಮ್ಯಾನ್ಯುಯಲ್ ಮ್ಯಾಕ್ರನ್ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ.

**ಜಾಗತಿಕ ಕಾರ್ಯತಂತ್ರ ಪಾಲುದಾರಿಕೆ:** ಉಭಯ ದೇಶಗಳ ನಡುವಿನ ವಿಶೇಷ ಜಾಗತಿಕ ಕಾರ್ಯತಂತ್ರ ಪಾಲುದಾರಿಕೆ ನೀತಿಯ ಪ್ರಗತಿಯನ್ನು ಉಭಯ ನಾಯಕರು ಪರಿಶೀಲಿಸಲಿದ್ದಾರೆ.

**ಭಾರತ್ ಇನೋವೇಟ್ಸ್ (Bharat Innovates):** ನೈಸ್ ನಗರದಲ್ಲಿ ಆಯೋಜಿಸಲಾಗಿರುವ 'ಭಾರತ್ ಇನೋವೇಟ್ಸ್' ಕಾರ್ಯಕ್ರಮಕ್ಕೆ ಪ್ರಧಾನಿ ಚಾಲನೆ ನೀಡಲಿದ್ದಾರೆ. ಭಾರತದ ಸ್ಟಾರ್ಟ್-ಅಪ್‌ಗಳಲ್ಲಿ ಜಾಗತಿಕ ಹೂಡಿಕೆಯನ್ನು ಉತ್ತೇಜಿಸುವುದು ಮತ್ತು ಉನ್ನತ ಶಿಕ್ಷಣ ವ್ಯವಸ್ಥೆಯಲ್ಲಿ ನಾವೀನ್ಯ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ.

➤ **ಸ್ಲೋವಾಕಿಯಾ ಪ್ರವಾಸದ ಪ್ರಮುಖಾಂಶಗಳು:** ಫ್ರಾನ್ಸ್ ಪ್ರವಾಸದ ಬೆನ್ನಲ್ಲೇ ಜೂನ್ 14 ರಂದು ಪ್ರಧಾನಿ ಮೋದಿ ಅವರು ಎರಡು ದಿನಗಳ ಅಧಿಕೃತ ಪ್ರವಾಸಕ್ಕಾಗಿ ಸ್ಲೋವಾಕಿಯಾಗೆ ತೆರಳಲಿದ್ದಾರೆ.

ಪ್ರಮುಖ ನಾಯಕರ ಭೇಟಿ: ಸ್ಲೋವಾಕಿಯಾ ಅಧ್ಯಕ್ಷ ಪೀಟರ್ ಪೆಲ್ಲೆಗ್ರಿನಿ ಮತ್ತು ಪ್ರಧಾನಿ ರಾಬರ್ಟ್ ಫಿಕೊ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ.

ಚರ್ಚೆಯ ವಿಷಯಗಳು: ರಕ್ಷಣಾ ಸಹಕಾರ, ಮುಕ್ತ ವ್ಯಾಪಾರ ಒಪ್ಪಂದ (FTA) ಮತ್ತು ಕಾರ್ಯತಂತ್ರ ಪಾಲುದಾರಿಕೆಯನ್ನು ವೃದ್ಧಿಸುವ ಕುರಿತು ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಾಧ್ಯತೆಯಿದೆ.

➤ ಜಿ7 (G7) ಶೃಂಗಸಭೆಯಲ್ಲಿ ಭಾರತದ ಪಾತ್ರ: ಜೂನ್ 16 ರಂದು ಪ್ರಧಾನಿ ಮೋದಿ ಅವರು ಮರಳಿ ಫ್ರಾನ್ಸ್‌ನ ನೈಸ್ ನಗರಕ್ಕೆ ಆಗಮಿಸಿ, ಪ್ರತಿಷ್ಠಿತ ಜಿ7 ಶೃಂಗಸಭೆಯಲ್ಲಿ ಭಾಗಿಯಾಗಲಿದ್ದಾರೆ. ಭಾರತವು ಜಿ7 ಸಮೂಹದ ಖಾಯಂ ಸದಸ್ಯ ದೇಶವಲ್ಲದಿದ್ದರೂ, ಜಾಗತಿಕ ಮಟ್ಟದಲ್ಲಿ ಭಾರತದ ಪ್ರಭಾವದ ಹಿನ್ನೆಲೆಯಲ್ಲಿ ವಿಶೇಷ ಆಹ್ವಾನಿತ ದೇಶವಾಗಿ ಭಾಗವಹಿಸುತ್ತಿದೆ. ಪ್ರಧಾನಿ ಮೋದಿ ಅವರು ಇಲ್ಲಿ 'ಜಾಗತಿಕ ದಕ್ಷಿಣದ ದೇಶಗಳ' (Global South) ಆಕಾಂಕ್ಷೆಗಳ ಧ್ವನಿಯಾಗಿ ಮಾತನಾಡಲಿದ್ದಾರೆ.

➤ **ಈ ಬಾರಿಯ ಜಿ7 ಶೃಂಗಸಭೆಯ ಪ್ರಮುಖ ಕಾರ್ಯಸೂಚಿಗಳು (Agenda):**

ಅಂತಾರಾಷ್ಟ್ರೀಯ ಸಂಬಂಧಗಳ ನವೀಕರಣ: ಜಾಗತಿಕ ರಾಜತಾಂತ್ರಿಕ ಸಂಬಂಧಗಳನ್ನು ಪ್ರಸ್ತುತ ಸ್ಥಿತಿಗೆ ತಕ್ಕಂತೆ ಬಲಪಡಿಸುವುದು.

ಆರ್ಥಿಕ ಅಸಮತೋಲನ ನಿವಾರಣೆ: ಜಾಗತಿಕ ಮಟ್ಟದಲ್ಲಿ ಕಂಡುಬರುತ್ತಿರುವ ಆರ್ಥಿಕ ಏರುಪೇರುಗಳನ್ನು ನಿಯಂತ್ರಿಸುವುದು.

ಖನಿಜ ಪೂರೈಕೆ ಸರಪಳಿ (Critical Minerals Supply Chain): ಭವಿಷ್ಯದ ತಂತ್ರಜ್ಞಾನಕ್ಕೆ ಅಗತ್ಯವಿರುವ ನಿರ್ಣಾಯಕ ಖನಿಜಗಳ ಪೂರೈಕೆಯನ್ನು ಸುರಕ್ಷಿತಗೊಳಿಸುವುದು.

ಭಯೋತ್ಪಾದನೆ ನಿಗ್ರಹ: ಉಗ್ರ ಸಂಘಟನೆಗಳಿಗೆ ಅಂತಾರಾಷ್ಟ್ರೀಯ ಮಟ್ಟದಿಂದ ಹರಿಯುವ ಹಣದ ಮೂಲಗಳನ್ನು (Terror Funding) ಸಂಪೂರ್ಣವಾಗಿ ನಿಗ್ರಹಿಸುವುದು.

ಅಪ್ರಾಪ್ತರ ರಕ್ಷಣೆ: ಡ್ರಗ್ಸ್ ಮಾಫಿಯಾ, ಸಂಘಟಿತ ಅಪರಾಧಗಳು ಮತ್ತು ಆನ್‌ಲೈನ್ ಗೀಳಿನಿಂದ (Online Addiction) ಅಪ್ರಾಪ್ತ ವಯಸ್ಕರನ್ನು ರಕ್ಷಿಸಲು ಜಾಗತಿಕ ನೀತಿ ರೂಪಿಸುವುದು.

## ಭಾರತೀಯ ಭೂಸೇನೆಯ ನೂತನ ಮುಖ್ಯಸ್ಥರಾಗಿ ಲೆಫ್ಟಿನೆಂಟ್ ಜನರಲ್ ಧೀರಜ್ ಸೇಠ್ ನೇಮಕ



➤ ಭಾರತ ಸರ್ಕಾರದ ರಕ್ಷಣಾ ಸಚಿವಾಲಯವು ಭಾರತೀಯ ಭೂಸೇನೆಯ ನೂತನ ಮುಖ್ಯಸ್ಥರಾಗಿ (Chief of the Army Staff - COAS) ಲೆಫ್ಟಿನೆಂಟ್ ಜನರಲ್ ಧೀರಜ್ ಸೇಠ್ (Lt Gen Dhiraj Seth) ಅವರನ್ನು ನೇಮಕ ಮಾಡಿದೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಈ ನೇಮಕಾತಿಗೆ ಅಧಿಕೃತ ಅಂಕಿತ ಹಾಕಿದ್ದಾರೆ. ಸದ್ಯ ಭೂಸೇನೆಯ ವೈಸ್ ಚೀಫ್ (ಉಪ ಮುಖ್ಯಸ್ಥ) ಆಗಿ ಕಾರ್ಯನಿರ್ವಹಿಸುತ್ತಿರುವ ಧೀರಜ್ ಸೇಠ್ ಅವರು 2026ರ ಜೂನ್ 30ರಂದು ಅಧಿಕಾರ ಸ್ವೀಕರಿಸಲಿದ್ದಾರೆ.

➤ ಹಾಲಿ ಸೇನಾ ಮುಖ್ಯಸ್ಥರಾಗಿರುವ ಜನರಲ್ ಉಪೇಂದ್ರ ದ್ವಿವೇದಿ ಅವರು ಜೂನ್ 30 ರಂದು ನಿವೃತ್ತಿ ಹೊಂದಲಿದ್ದು, ಅವರ ಉತ್ತರಾಧಿಕಾರಿಯಾಗಿ ಧೀರಜ್ ಸೇಠ್ ದೇಶದ ರಕ್ಷಣಾ ಪಡೆಯ ಅತ್ಯುನ್ನತ ಜವಾಬ್ದಾರಿಯನ್ನು ಹೊರಲಿದ್ದಾರೆ. ಇವರ ಅಧಿಕಾರಾವಧಿ 2028ರ ಆಗಸ್ಟ್ 31ರವರೆಗೆ ಇರಲಿದೆ.

➤ ಲೆಫ್ಟಿನೆಂಟ್ ಜನರಲ್ ಧೀರಜ್ ಸೇಠ್ ಅವರ ಹಿನ್ನೆಲೆ ಮತ್ತು ಸಾಧನೆಗಳು:

ಆರಂಭಿಕ ಜೀವನ ಮತ್ತು ಶಿಕ್ಷಣ: ಖಡಕ್ವಾಸ್ಲಾದ ನ್ಯಾಷನಲ್ ಡಿಫೆನ್ಸ್ ಅಕಾಡೆಮಿ (NDA) ಮತ್ತು ಡೆಹ್ರಾಡೂನ್‌ನ ಇಂಡಿಯನ್ ಮಿಲಿಟರಿ ಅಕಾಡೆಮಿ (IMA) ಯ ಹಳೆಯ ವಿದ್ಯಾರ್ಥಿಯಾಗಿರುವ ಧೀರಜ್ ಸೇಠ್ ಅವರು, ಡಿಸೆಂಬರ್ 1986 ರಲ್ಲಿ ಭಾರತೀಯ ಸೇನೆಯ ಆರ್ಮರ್ ಕಾರ್ಪ್ಸ್ (ಕವಚ ಪಡೆ - 2nd Lancers) ವಿಭಾಗದ ಅಧಿಕಾರಿಯಾಗಿ ನಿಯುಕ್ತಿಗೊಂಡರು.

ಸುದೀರ್ಘ ಸೇವೆ: ಕಳೆದ ಸುಮಾರು 40 ವರ್ಷಗಳಿಂದ ಭಾರತೀಯ ಸೇನೆಯಲ್ಲಿ ವಿವಿಧ ಹಂತಗಳಲ್ಲಿ ಶ್ಲಾಘನೀಯ ಸೇವೆ ಸಲ್ಲಿಸಿದ್ದಾರೆ.

ಕಾರ್ಯಾಚರಣೆಗಳ ನೇತೃತ್ವ: ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದನಾ ನಿಗ್ರಹ ಕಾರ್ಯಾಚರಣೆಯ ನೇತೃತ್ವ ವಹಿಸಿದ ಅಪಾರ ಅನುಭವ ಇವರಿಗಿದೆ. ಅಲ್ಲದೆ ಮರುಭೂಮಿ ವಲಯದಲ್ಲಿ ಆರ್ಮರ್ಡ್ ರೆಜಿಮೆಂಟ್ ಮತ್ತು ಪಶ್ಚಿಮ ಗಡಿಯಲ್ಲಿ ಆರ್ಮರ್ಡ್ ಬ್ರಿಗೇಡ್ ಅನ್ನು ಮುನ್ನಡೆಸಿದ್ದಾರೆ.

'ಆಪರೇಷನ್ ಸಿಂದೂರ' ಮತ್ತು ಜಂಟಿ ಸಮರಾಭ್ಯಾಸ: ಭಾರತೀಯ ಸೇನೆಯ ಅತ್ಯಂತ ಪ್ರಮುಖ ಕಾರ್ಯಾಚರಣೆಯಾದ 'ಆಪರೇಷನ್ ಸಿಂದೂರ'ದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ದೇಶದ ಪಶ್ಚಿಮ ಗಡಿಯಲ್ಲಿ ನಡೆದ ಭೂಸೇನೆ, ವಾಯುಸೇನೆ ಮತ್ತು ನೌಕಾಸೇನೆಗಳ ಮೂರು ಜಂಟಿ ಸಮರಾಭ್ಯಾಸಗಳ ಉಸ್ತುವಾರಿಯನ್ನು ಯಶಸ್ವಿಯಾಗಿ ನಿಭಾಯಿಸಿದ ಕೀರ್ತಿ ಇವರದ್ದಾಗಿದೆ.

ಪ್ರಮುಖ ಕಮಾಂಡ್ ನೇತೃತ್ವ: ಲೆಫ್ಟಿನೆಂಟ್ ಜನರಲ್ ಆಗಿ ಬಡ್ತಿ ಪಡೆದ ನಂತರ ಅವರು ಭಾರತೀಯ ಸೇನೆಯ ಪ್ರಮುಖ ಸ್ಟ್ರೈಕ್ ಫೋರ್ಸ್ ಆದ 'ಸುದರ್ಶನ ಚಕ್ರ ಕೋರ್ಸ್' ಕಮಾಂಡರ್ ಆಗಿ, ದೆಹಲಿ ಏರಿಯಾದ ಜಿಒಸಿ (GOC) ಆಗಿ ಕಾರ್ಯನಿರ್ವಹಿಸಿದ್ದರು. ತದನಂತರ ಅತ್ಯಂತ ಪ್ರಮುಖ ವಿಭಾಗಗಳಾದ 'ಸೌತ್ ವೆಸ್ಟರ್ನ್ ಕಮಾಂಡ್' ಮತ್ತು 'ಸದರ್ನ್ ಕಮಾಂಡ್' (ದಕ್ಷಿಣ ಕಮಾಂಡ್) ಎರಡರ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದ ಅಪರೂಪದ ಹೆಗ್ಗಳಿಕೆ ಇವರದ್ದಾಗಿದೆ.

ಅಂತರರಾಷ್ಟ್ರೀಯ ಅನುಭವ: ಅಂಗೋಲಾದಲ್ಲಿ ನಡೆದ ವಿಶ್ವಸಂಸ್ಥೆಯ ಶಾಂತಿಪಾಲನಾ ಕಾರ್ಯಾಚರಣೆಯಲ್ಲಿ (United Nations Mission in Angola) ಆಪರೇಷನ್ ಆಫೀಸರ್ ಆಗಿ ಸೇವೆ ಸಲ್ಲಿಸಿದ್ದಾರೆ. ಪ್ಯಾರಿಸ್‌ನಲ್ಲಿ ಕಮಾಂಡ್ ಮತ್ತು ಸ್ಟಾಫ್ ಕೋರ್ಸ್ ಹಾಗೂ ಅಮೆರಿಕದಲ್ಲಿ ಇಂಟರ್ನ್ಯಾಷನಲ್ ಡಿಫೆನ್ಸ್ ಅಕ್ವಿಸಿಷನ್ ಮ್ಯಾನೇಜ್ಮೆಂಟ್ ಕೋರ್ಸ್ ಮುಗಿಸಿದ್ದಾರೆ.

ಸೇನಾ ಗೌರವಗಳು: ದೇಶಕ್ಕೆ ಸಲ್ಲಿಸಿದ ಅತ್ಯುನ್ನತ ಸೇವೆಯನ್ನು ಪರಿಗಣಿಸಿ ಇವರಿಗೆ ಪರಮ ವಿಶಿಷ್ಟ ಸೇವಾ ಪದಕ (PVSM), ಉತ್ತಮ ಯುದ್ಧ ಸೇವಾ ಪದಕ (UYSM) ಮತ್ತು ಅತಿ ವಿಶಿಷ್ಟ ಸೇವಾ ಪದಕ (AVSM) ನೀಡಿ ಗೌರವಿಸಲಾಗಿದೆ.

## ಗುಜರಾತ್ ಕೈಗಾರಿಕಾ ನೀತಿ 2026 ಬಿಡುಗಡೆ: 'ಅಲ್ಟ್ರಾ ಮೆಗಾ' ಯೋಜನೆ ಮತ್ತು ಪ್ರಾಜೆಕ್ಟ್ ಡ್ರೈವ್ (THRIVE)




➤ ರಾಷ್ಟ್ರದ ಪ್ರಮುಖ ಕೈಗಾರಿಕಾ ಹಬ್‌ಗಳಲ್ಲಿ ಒಂದಾದ ಗುಜರಾತ್, ಕೈಗಾರಿಕಾ ಹೂಡಿಕೆ, ಉದ್ಯೋಗ ಸೃಷ್ಟಿ ಹಾಗೂ ನಾವೀನ್ಯತೆಗೆ (Innovation) ಹೊಸ ವೇಗ ನೀಡಲು 'ನೂತನ ಕೈಗಾರಿಕಾ ನೀತಿ-2026' (Gujarat Industrial Policy 2026) ಅನ್ನು ಅಧಿಕೃತವಾಗಿ ಬಿಡುಗಡೆ ಮಾಡಿದೆ. ಗಾಂಧಿನಗರದ ಮಹಾತ್ಮಾ ಮಂದಿರದಲ್ಲಿ ನಡೆದ ವಿಶೇಷ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಮತ್ತು ಉಪಮುಖ್ಯಮಂತ್ರಿ ಹರ್ಷ್ ಸಂಘವಿ ಅವರು ಈ ನೂತನ ನೀತಿಯನ್ನು ಅನಾವರಣಗೊಳಿಸಿದರು.

➤ **'ಅಲ್ಟ್ರಾ ಮೆಗಾ' (Ultra Mega) ಕೈಗಾರಿಕಾ ವಲಯದ ಪರಿಚಯ**: ಈ ಹೊಸ ನೀತಿಯಲ್ಲಿ ಸರಕಾರವು ಬೃಹತ್ ಹೂಡಿಕೆದಾರರನ್ನು ಆಕರ್ಷಿಸಲು ಹೊಸದಾಗಿ 'ಅಲ್ಟ್ರಾ ಮೆಗಾ ಇಂಡಸ್ಟ್ರಿಯಲ್ ಯೂನಿಟ್' ಎಂಬ ವಿಶೇಷ ವರ್ಗವನ್ನು ಸೃಷ್ಟಿಸಿದೆ.

ಹೂಡಿಕೆ ಮತ್ತು ಉದ್ಯೋಗದ ಮಿತಿ: ಕನಿಷ್ಠ ₹10,000 ಕೋಟಿಗೂ ಅಧಿಕ ಹೂಡಿಕೆ ಹಾಗೂ ಕನಿಷ್ಠ 3,000 ನೇರ ಉದ್ಯೋಗ ಸೃಷ್ಟಿಸುವ ಬೃಹತ್ ಕೈಗಾರಿಕೆಗಳು ಈ ವರ್ಗಕ್ಕೆ ಸೇರುತ್ತವೆ.
ಹೆಚ್ಚುವರಿ ನಿಯಮ: ಪ್ರತಿ ಹೆಚ್ಚುವರಿ ₹5,000 ಕೋಟಿ ಹೂಡಿಕೆಗೆ ಕನಿಷ್ಠ 500 ಹೆಚ್ಚುವರಿ ಉದ್ಯೋಗ ಒದಗಿಸುವುದನ್ನು ಕಡ್ಡಾಯಗೊಳಿಸಲಾಗಿದೆ.
ಶೇ. 40 ರಷ್ಟು ಭಾರಿ ಸಬ್ಸಿಡಿ:
ಈ ವರ್ಗದ ಕೈಗಾರಿಕೆಗಳಿಗೆ ಬಂಡವಾಳ ಸಬ್ಸಿಡಿ (Capital Subsidy), ಬಡ್ಡಿ ಸಬ್ಸಿಡಿ ಮತ್ತು ವಿದ್ಯುತ್ ದರ ರಿಯಾಯಿತಿಗಳ ರೂಪದಲ್ಲಿ ಒಟ್ಟು ಹೂಡಿಕೆಯ ಶೇ. 40 ರಷ್ಟು ಪ್ರೋತ್ಸಾಹಕ ಧನ (Incentives) ಸಿಗಲಿದೆ.

➤ **ಆದ್ಯತಾ ವಲಯಗಳ (Thrust Sectors) ವಿಸ್ತರಣೆ:** ಗುಜರಾತ್ ಸರಕಾರವು ಈ ಹಿಂದೆ ಇದ್ದ 9 ಪ್ರಮುಖ ಆದ್ಯತಾ ಕ್ಷೇತ್ರಗಳ ಪಟ್ಟಿಯನ್ನು 16 ವಲಯಗಳಿಗೆ ವಿಸ್ತರಿಸಿದೆ. ಭವಿಷ್ಯದ ತಂತ್ರಜ್ಞಾನ ಆಧಾರಿತ ಉತ್ಪಾದನೆಗೆ ಈ ನೀತಿಯಲ್ಲಿ ಹೆಚ್ಚಿನ ಒತ್ತು ನೀಡಲಾಗಿದೆ.
ಪ್ರಮುಖ ಹೊಸ ಕ್ಷೇತ್ರಗಳು: ಸೆಮಿಕಂಡಕ್ಟರ್ ಪೂರಕ ಉದ್ಯಮಗಳು (Ancillary units), ಡ್ರೋನ್ ತಯಾರಿಕೆ, ರೋಬೋಟಿಕ್ಸ್, ಪರಮಾಣು ಶಕ್ತಿ ಉಪಕರಣಗಳ ತಯಾರಿಕೆ (Nuclear Power Equipment), ಮತ್ತು ಟೆಕ್ಸ್‌ಟೈಲ್ ಹಾಗೂ ಇ-ತ್ಯಾಜ್ಯ ಮರುಬಳಕೆ (Recycling) ಉದ್ಯಮಗಳು.
ಇತರ ಕ್ಷೇತ್ರಗಳು: ಹಸಿರು ಇಂಧನ ಪರಿಸರ ವ್ಯವಸ್ಥೆ (Green Energy), ಮೊಬಿಲಿಟಿ (ವಾಹನ ವಲಯ), ಕ್ರಿಟಿಕಲ್ ಮಿನರಲ್ ಪ್ರೊಸೆಸಿಂಗ್, ಮತ್ತು ಹೆಲ್ತ್‌ಕೇರ್.

➤ **ಪ್ರಾಜೆಕ್ಟ್ ಥ್ರೈವ್ (Project THRIVE):** ನಗರೀಕರಣದ ಒತ್ತಡ ಮತ್ತು ಮಾಲಿನ್ಯವನ್ನು ನಿಯಂತ್ರಿಸಲು ಈ ಕೈಗಾರಿಕಾ ನೀತಿಯಲ್ಲಿ ಅತ್ಯಂತ ನಾವೀನ್ಯತಾ ಯೋಜನೆಯೊಂದನ್ನು ತರಲಾಗಿದೆ. ಅದರ ಹೆಸರೇ Project THRIVE (Transition for Harmonized Relocation and Inclusive Vibrant Economy).
ಯೋಜನೆಯ ಉದ್ದೇಶ: ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ (ನಗರ ಪ್ರದೇಶಗಳಲ್ಲಿ) ಕಾರ್ಯಾಚರಿಸುತ್ತಿರುವ ಕೈಗಾರಿಕೆಗಳನ್ನು ನಗರದ ಹೊರವಲಯಕ್ಕೆ ಯಶಸ್ವಿಯಾಗಿ ಸ್ಥಳಾಂತರಿಸುವುದು.

➤ **ಪ್ರಾಜೆಕ್ಟ್ ಥ್ರೈವ್‌ನ ಪ್ರಮುಖ ಪ್ರಯೋಜನಗಳು:**
ಖಾಸಗಿ ಕೈಗಾರಿಕಾ ಎಸ್ಟೇಟ್: ನಗರ ಪ್ರದೇಶದ ಕನಿಷ್ಠ 10 ಉದ್ಯಮಗಳು ಒಟ್ಟಾಗಿ ನಗರದ ಹೊರವಲಯದಲ್ಲಿ ಖಾಸಗಿ ಕೈಗಾರಿಕಾ ಎಸ್ಟೇಟ್ ಸ್ಥಾಪಿಸಬಹುದು ಅಥವಾ ಸ್ವತಂತ್ರವಾಗಿಯೂ ಸ್ಥಳಾಂತರಗೊಳ್ಳಬಹುದು.
'ಹೊಸ ಘಟಕ' ಸ್ಥಾನಮಾನ: ಸ್ಥಳಾಂತರಗೊಳ್ಳುವ ಉದ್ಯಮಗಳನ್ನು 'ಹೊಸ ಘಟಕಗಳು' (New Units) ಎಂದು ಪರಿಗಣಿಸಿ, ಸರಕಾರದ ಎಲ್ಲಾ ಹೊಸ ಸಬ್ಸಿಡಿ ಹಾಗೂ ಸೌಲಭ್ಯಗಳನ್ನು ನೀಡಲಾಗುತ್ತದೆ.
**ವೇತನ ಪ್ರೋತ್ಸಾಹಕ (Wage Support):** ಸ್ಥಳಾಂತರಗೊಂಡ ನಂತರದ ಮೊದಲ 6 ತಿಂಗಳವರೆಗೆ ಪ್ರತಿ ಉದ್ಯೋಗಿಗೆ ತಿಂಗಳಿಗೆ ₹5,000 ರಂತೆ ವೇತನ ಸಹಾಯಧನವನ್ನು ಸರಕಾರ ನೀಡಲಿದೆ.
ಪರಿಸರ ಮಂಜೂರಾತಿ ಸರಳೀಕರಣ: GIDC (ಗುಜರಾತ್ ಕೈಗಾರಿಕಾ ಅಭಿವೃದ್ಧಿ ನಿಗಮ) ಈ ಎಸ್ಟೇಟ್‌ಗಳಿಗೆ ಒಟ್ಟಾರೆ ಪರಿಸರ ಮಂಜೂರಾತಿಯನ್ನು (Blanket Environmental Clearance) ಪಡೆಯುವುದರಿಂದ, ವೈಯಕ್ತಿಕ ಉದ್ಯಮಗಳು ಪ್ರತ್ಯೇಕವಾಗಿ ಅನುಮತಿ ಪಡೆಯುವ ಅಗತ್ಯವಿರುವುದಿಲ್ಲ.
ಅಂತರರಾಷ್ಟ್ರೀಯ ಮಾದರಿ: ಚೀನಾದ ಬೀಜಿಂಗ್, ಗುವಾಂಗ್‌ಡಾಂಗ್ ಮತ್ತು ವಿಯೆಟ್ನಾಂನ ಹೋ ಚಿ ಮಿನ್ ಸಿಟಿಗಳ ಯಶಸ್ವಿ ಕೈಗಾರಿಕಾ ಸ್ಥಳಾಂತರ ಮಾದರಿಗಳನ್ನು ಆಧರಿಸಿ ಈ ಯೋಜನೆಯನ್ನು ರೂಪಿಸಲಾಗಿದೆ.

## ಜಾಗತಿಕ ಶಾಂತಿ ಸೂಚ್ಯಂಕ 2026: ಭಾರತಕ್ಕೆ 127ನೇ ಸ್ಥಾನ




➤ ಇತ್ತೀಚೆಗೆ ಸಿಡ್ನಿ ಮೂಲದ ಪ್ರಮುಖ ಥಿಂಕ್-ಟ್ಯಾಂಕ್ ಆದ 'ಇನ್‌ಸ್ಟಿಟ್ಯೂಟ್ ಫಾರ್ ಎಕನಾಮಿಕ್ಸ್ ಅಂಡ್ ಪೀಸ್' (Institute for Economics and Peace - IEP) ಸಂಸ್ಥೆಯು 2026ರ ಸಾಲಿನ ಜಾಗತಿಕ ಶಾಂತಿ ಸೂಚ್ಯಂಕವನ್ನು (Global Peace Index - GPI) ಬಿಡುಗಡೆ ಮಾಡಿದೆ. ಇದು ಜಾಗತಿಕ ಶಾಂತಿಯನ್ನು ಅಳೆಯುವ ವಿಶ್ವದ ಅತ್ಯಂತ ವಿಶ್ವಾಸಾರ್ಹ ಸೂಚ್ಯಂಕವಾಗಿದ್ದು, ಈ ವರ್ಷ ಇದರ 20ನೇ ಆವೃತ್ತಿಯನ್ನು ಪ್ರಕಟಿಸಲಾಗಿದೆ.

➤ ಭಾರತದ ಸ್ಥಾನಮಾನ : 2026ರ ಜಾಗತಿಕ ಶಾಂತಿ ಸೂಚ್ಯಂಕದಲ್ಲಿ ಭಾರತವು 163 ದೇಶಗಳ ಪೈಕಿ 127ನೇ ಸ್ಥಾನವನ್ನು ಪಡೆದುಕೊಂಡಿದೆ. 2025ರ ಸೂಚ್ಯಂಕದಲ್ಲಿ ಭಾರತವು 115ನೇ ಸ್ಥಾನದಲ್ಲಿತ್ತು. ಅಂದರೆ, ಕಳೆದ ವರ್ಷಕ್ಕೆ ಹೋಲಿಸಿದರೆ ಭಾರತದ ಒಟ್ಟಾರೆ ಶಾಂತಿ ಸೂಚ್ಯಂಕದ ಸ್ಕೋರ್ ಶೇ. 2.9 ರಷ್ಟು ಕುಸಿದಿದ್ದು, ಶ್ರೇಯಾಂಕದಲ್ಲಿ ಭಾರಿ ಹಿನ್ನಡೆಯಾಗಿದೆ.
ಭಾರತದ ಶ್ರೇಯಾಂಕ ಕುಸಿಯಲು ಪ್ರಮುಖ ಕಾರಣಗಳು:
ಆಂತರಿಕ ಭದ್ರತಾ ಸವಾಲುಗಳು ಮತ್ತು ಪ್ರಾದೇಶಿಕ ಉದ್ವಿಗ್ನತೆ.
ಕೋಮು ಮತ್ತು ಜನಾಂಗೀಯ ಸಂಘರ್ಷಗಳು.
ಗಡಿ ಭದ್ರತೆಯ ಆತಂಕಗಳು.
ದಕ್ಷಿಣ ಏಷ್ಯಾ ವಲಯದಲ್ಲಿ ಒಟ್ಟಾರೆಯಾಗಿ ಕಂಡುಬರುತ್ತಿರುವ ಜಿಯೋಪೊಲಿಟಿಕಲ್ (ಭೌಗೋಳಿಕ ರಾಜಕೀಯ) ಅಸ್ಥಿರತೆ.

➤ **ವಿಶ್ವದ ಟಾಪ್ 5 ಅತ್ಯಂತ ಶಾಂತಿಯುತ ದೇಶಗಳು:**
1. ಐಸ್‌ಲ್ಯಾಂಡ್ (Iceland)
2. ನ್ಯೂಜಿಲೆಂಡ್ (New Zealand)
3. ಸ್ವಿಟ್ಜರ್ಲೆಂಡ್ (Switzerland)
4. ಸ್ಲೋವೇನಿಯಾ (Slovenia)
5. ಐರ್ಲೆಂಡ್ (Ireland)

➤ **ವಿಶ್ವದ ಕೊನೆಯ 5 ದೇಶಗಳು (ಕಡಿಮೆ ಶಾಂತಿ ಹೊಂದಿರುವ ದೇಶಗಳು):**
ರಷ್ಯಾ (ಪಟ್ಟಿಯ ಅತ್ಯಂತ ಕೊನೆಯ ಸ್ಥಾನದಲ್ಲಿದೆ)
ಸುಡಾನ್
ಡೆಮಾಕ್ರಟಿಕ್ ರಿಪಬ್ಲಿಕ್ ಆಫ್ ಕಾಂಗೋ
ಉಕ್ರೇನ್
ಇಸ್ರೇಲ್

➤ **ದಕ್ಷಿಣ ಏಷ್ಯಾ ವಲಯದಲ್ಲಿ ನೆರೆಹೊರೆಯ ದೇಶಗಳ ಸ್ಥಾನಮಾನ:**
ಭೂತಾನ್: 16ನೇ ಸ್ಥಾನ (ದಕ್ಷಿಣ ಏಷ್ಯಾದಲ್ಲೇ ಅತ್ಯಂತ ಶಾಂತಿಯುತ ದೇಶ)
ಶ್ರೀಲಂಕಾ: 67ನೇ ಸ್ಥಾನ
ನೇಪಾಳ: 111ನೇ ಸ್ಥಾನ
ಬಾಂಗ್ಲಾದೇಶ: 117ನೇ ಸ್ಥಾನ
ಭಾರತ: 127ನೇ ಸ್ಥಾನ
ಪಾಕಿಸ್ತಾನ: 152ನೇ ಸ್ಥಾನ
ಅಫ್ಘಾನಿಸ್ತಾನ: 157ನೇ ಸ್ಥಾನ

➤ ಜಾಗತಿಕ ಶಾಂತಿ ಸೂಚ್ಯಂಕವನ್ನು (GPI) ಸಿಡ್ನಿಯ 'ಇನ್‌ಸ್ಟಿಟ್ಯೂಟ್ ಫಾರ್ ಎಕನಾಮಿಕ್ಸ್ ಅಂಡ್ ಪೀಸ್' ಸಂಸ್ಥೆಯು 163 ದೇಶಗಳ ಸಾಮಾಜಿಕ ಭದ್ರತೆ, ನಡೆಯುತ್ತಿರುವ ಸಂಘರ್ಷಗಳು ಮತ್ತು ಸೈನಿಕೀಕರಣದ ಮಟ್ಟ ಎಂಬ 3 ಪ್ರಮುಖ ವಿಭಾಗಗಳ ಅಡಿಯಲ್ಲಿ ಬರುವ 23 ಗುಣಾತ್ಮಕ ಹಾಗೂ ಪರಿಮಾಣಾತ್ಮಕ ಸೂಚಕಗಳನ್ನು ಆಧರಿಸಿ ಅಳೆಯುತ್ತದೆ.




## 16 June 2026

### ಪ್ರಧಾನಿ ಮೋದಿಗೆ ಸ್ಲೋವಾಕಿಯಾದ ಅತ್ಯುನ್ನತ ರಾಷ್ಟ್ರೀಯ ಪ್ರಶಸ್ತಿ 'ದಿ ಆರ್ಡರ್ ಆಫ್ ದಿ ವೈಟ್ ಡಬಲ್ ಕ್ರಾಸ್' ಗೌರವ



➤ ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತದ ರಾಜತಾಂತ್ರಿಕ ಪ್ರಭಾವವನ್ನು ಮತ್ತಷ್ಟು ವಿಸ್ತರಿಸುವ ನಿಟ್ಟಿನಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ ಮತ್ತೊಂದು ಜಾಗತಿಕ ಗರಿ ಸಂದಿದೆ. ಜೂನ್ 15, 2026 ರಂದು ಸ್ಲೋವಾಕಿಯಾ ದೇಶಕ್ಕೆ ತಮ್ಮ ಪ್ರಪ್ರಥಮ ಐತಿಹಾಸಿಕ ಅಧಿಕೃತ ಭೇಟಿ ನೀಡಿದ ಪ್ರಧಾನಿ ಮೋದಿ ಅವರಿಗೆ, ಆ ದೇಶದ ಅತ್ಯುನ್ನತ ರಾಷ್ಟ್ರೀಯ ಗೌರವವಾದ 'ದಿ ಆರ್ಡರ್ ಆಫ್ ದಿ ವೈಟ್ ಡಬಲ್ ಕ್ರಾಸ್ (ಫಸ್ಟ್ ಕ್ಲಾಸ್)' (The Order of the White Double Cross - 1st Class) ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

➤ ಸ್ಲೋವಾಕಿಯಾದ ರಾಜಧಾನಿ ಬ್ರಟಿಸ್ಲಾವಾದಲ್ಲಿ ನಡೆದ ಭವ್ಯ ಸಮಾರಂಭದಲ್ಲಿ ಆ ದೇಶದ ಅಧ್ಯಕ್ಷರಾದ ಪೀಟರ್ ಪೆಲ್ಲೆಗ್ರಿನಿ (Peter Pellegrini) ಅವರು ಪ್ರಧಾನಿ ಮೋದಿಯವರಿಗೆ ಈ ಪ್ರಶಸ್ತಿಯನ್ನು ಪ್ರದಾನ ಮಾಡಿದರು. ಭಾರತ ಮತ್ತು ಸ್ಲೋವಾಕಿಯಾ ನಡುವಿನ ದ್ವಿಪಕ್ಷೀಯ ಬಾಂಧವ್ಯವನ್ನು ಬಲಪಡಿಸುವಲ್ಲಿ ಮತ್ತು ಅಂತರರಾಷ್ಟ್ರೀಯ ಸಹಕಾರವನ್ನು ಉತ್ತೇಜಿಸುವಲ್ಲಿ ಪ್ರಧಾನಿ ಮೋದಿ ಅವರು ನೀಡಿದ ಅಸಾಧಾರಣ ಕೊಡುಗೆಯನ್ನು ಶ್ಲಾಘಿಸಿ ಈ ಗೌರವ ಸಮರ್ಪಿಸಲಾಗಿದೆ.

ಐತಿಹಾಸಿಕ ಭೇಟಿ: ಸ್ಲೋವಾಕಿಯಾ ದೇಶವು ಸ್ವಾತಂತ್ರ್ಯ ಪಡೆದ ನಂತರ ಭಾರತದ ಪ್ರಧಾನಮಂತ್ರಿಯೊಬ್ಬರು ಆ ದೇಶಕ್ಕೆ ನೀಡಿದ ಮೊಟ್ಟಮೊದಲ ಅಧಿಕೃತ ಭೇಟಿ ಇದಾಗಿದೆ.

33ನೇ ಅಂತರರಾಷ್ಟ್ರೀಯ ಗೌರವ: ಇದು ವಿವಿಧ ವಿದೇಶಿ ರಾಷ್ಟ್ರಗಳು ಪ್ರಧಾನಿ ನರೇಂದ್ರ ಮೋದಿ ಅವರಿಗೆ ನೀಡಿ ಗೌರವಿಸಿದ 33ನೇ ಅತ್ಯುನ್ನತ ಜಾಗತಿಕ ಪ್ರಶಸ್ತಿಯಾಗಿದೆ.

ಸಮಗ್ರ ಪಾಲುದಾರಿಕೆ (Comprehensive Partnership): ಈ ಐತಿಹಾಸಿಕ ಭೇಟಿಯ ಸಂದರ್ಭದಲ್ಲಿ ಉಭಯ ದೇಶಗಳ ಸಂಬಂಧವನ್ನು 'ಸಮಗ್ರ ಪಾಲುದಾರಿಕೆ' ಮಟ್ಟಕ್ಕೆ ಏರಿಸಲಾಗಿದ್ದು, ರಕ್ಷಣೆ, ಡಿಜಿಟಲ್ ತಂತ್ರಜ್ಞಾನ, ಕಾರ್ಮಿಕ ವಲಸೆ, ಉನ್ನತ ಶಿಕ್ಷಣ ಮತ್ತು ಸಂಶೋಧನೆ ಸೇರಿದಂತೆ ಪ್ರಮುಖ ಕ್ಷೇತ್ರಗಳಲ್ಲಿ 11 ಪ್ರಮುಖ ಒಪ್ಪಂದಗಳಿಗೆ (MoUs) ಸಹಿ ಹಾಕಲಾಗಿದೆ.

➤ **ಪ್ರಧಾನಿ ಮೋದಿಯವರ ಹೇಳಿಕೆ:** "ಈ ಗೌರವವನ್ನು ನಾನು ಭಾರತದ 140 ಕೋಟಿ ಜನರಿಗೆ ಮತ್ತು ಭಾರತ ಹಾಗೂ ಸ್ಲೋವಾಕಿಯಾ ದೇಶಗಳ ನಡುವಿನ ಸುದೀರ್ಘ ಸ್ನೇಹಕ್ಕೆ ಸಮರ್ಪಿಸುತ್ತೇನೆ."

### ಬಾಹ್ಯಾಕಾಶಕ್ಕೆ ಪಯಣಿಸಿದ ಜಗತ್ತಿನ ಮೊದಲ ಸಸ್ತನಿ 'ಆಲ್ಬರ್ಟ್ 2'



➤ ಮನುಷ್ಯರು ಬಾಹ್ಯಾಕಾಶಕ್ಕೆ ಕಾಲಿಡುವ ಮುನ್ನ, ಅಲ್ಲಿನ ಶೂನ್ಯ ಗುರುತ್ವಾಕರ್ಷಣೆ ಮತ್ತು ವಿಕಿರಣಗಳು ಜೀವಿಗಳ ಮೇಲೆ ಬೀರುವ ಪರಿಣಾಮಗಳನ್ನು ಅಧ್ಯಯನ ಮಾಡಲು ವಿಜ್ಞಾನಿಗಳು ಪ್ರಾಣಿಗಳನ್ನು ಬಳಸಿಕೊಂಡಿದ್ದರು. ಬಾಹ್ಯಾಕಾಶ ಸಂಶೋಧನಾ ಇತಿಹಾಸದಲ್ಲಿ ಜೂನ್ 14, 1949 ರಂದು ನಡೆದ ಘಟನೆ ಅತ್ಯಂತ ಮಹತ್ವದ್ದಾಗಿದೆ. ಅಂದು 'ಆಲ್ಬರ್ಟ್ II' (Albert II) ಹೆಸರಿನ ರೀಸಸ್ ಮಂಗ (Rhesus monkey) ಅಂತರಿಕ್ಷವನ್ನು ತಲುಪಿದ ಜಗತ್ತಿನ ಮೊದಲ ಸಸ್ತನಿ (First Mammal in Space) ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು.

➤ **ವಿ-2 ರಾಕೆಟ್ ಮೂಲಕ ಇತಿಹಾಸ ಸೃಷ್ಟಿ:** ಅಮೆರಿಕದ ವಿಜ್ಞಾನಿಗಳು ದ್ವಿತೀಯ ಜಾಗತಿಕ ಯುದ್ಧದ ನಂತರ ಅಭಿವೃದ್ಧಿಪಡಿಸಲಾದ ಅತ್ಯಾಧುನಿಕ ವಿ-2 (V-2 Rocket) ರಾಕೆಟ್ ಮೂಲಕ ಈ ಪುಟ್ಟ ಜೀವಿಯನ್ನು ಯಶಸ್ವಿಯಾಗಿ ಬಾಹ್ಯಾಕಾಶಕ್ಕೆ ರವಾನಿಸಿದ್ದರು. ಈ ರಾಕೆಟ್ ಭೂಮಿಯಿಂದ ಬರೋಬ್ಬರಿ 134 ಕಿಲೋಮೀಟರ್ (83 ಮೈಲಿ) ಎತ್ತರಕ್ಕೆ ಜಿಗಿಯುವ ಮೂಲಕ ಅಧಿಕೃತವಾಗಿ ಅಂತರಿಕ್ಷದ ಗಡಿಯಾದ 'ಕಾರ್ಮನ್ ಲೈನ್' (Karman Line - 100 ಕಿಮೀ ಎತ್ತರ) ದಾಟಿತು. ಈ ಮೂಲಕ ಆಲ್ಬರ್ಟ್ II ಬಾಹ್ಯಾಕಾಶ ತಲುಪಿದ ಮೊದಲ ಕೋತಿ ಹಾಗೂ ಮೊದಲ ಸಸ್ತನಿಯಾಗಿ ಇತಿಹಾಸದ ಪುಟ ಸೇರಿತು.

➤ ಈ ಪ್ರಯಾಣದ ಉದ್ದಕ್ಕೂ ಆಲ್ಬರ್ಟ್ II ರಾಕೆಟ್‌ನ ತೀವ್ರ ಆಘಾತ, ಕಂಪನಗಳು ಮತ್ತು ಗುರುತ್ವಾಕರ್ಷಣೆಯ ತೀವ್ರ ಏರುಪೇರುಗಳನ್ನು ಯಶಸ್ವಿಯಾಗಿ ತಡೆದುಕೊಂಡಿತು. ವಿಜ್ಞಾನಿಗಳು ಅಳವಡಿಸಿದ್ದ ತಾಂತ್ರಿಕ ಉಪಕರಣಗಳ ಪ್ರಕಾರ, ಆಲ್ಬರ್ಟ್ ಬಾಹ್ಯಾಕಾಶದ ಗಡಿಯನ್ನು ತಲುಪುವವರೆಗೂ ಜೀವಂತವಾಗಿತ್ತು ಮತ್ತು ಅದರ ಹೃದಯ ಬಡಿತ ಸ್ಥಿರವಾಗಿತ್ತು. ಈ ಯಶಸ್ಸು ವಿಜ್ಞಾನಿಗಳಲ್ಲಿ ಜೀವಿಗಳು ಬಾಹ್ಯಾಕಾಶದಲ್ಲಿ ಬದುಕಬಲ್ಲವು ಎಂಬ ದೊಡ್ಡ ಭರವಸೆಯನ್ನು ಮೂಡಿಸಿತು.

➤ **ಇತಿಹಾಸ ಸೃಷ್ಟಿಸಿದ ಸಾಧನೆಗೆ ದುರಂತ ಅಂತ್ಯ:** ಬಾಹ್ಯಾಕಾಶ ತಲುಪಿ ಇತಿಹಾಸ ಬರೆದ ಈ ಜೀವಿ ಭೂಮಿಗೆ ಮರಳುವಾಗ ವಿಜ್ಞಾನಿಗಳಿಗೆ ದೊಡ್ಡ ಆಘಾತ ಕಾಯುತ್ತಿತ್ತು. ರಾಕೆಟ್ ತನ್ನ ಯಾನವನ್ನು ಮುಗಿಸಿ ಭೂಮಿಗೆ ಮರಳುವಾಗ, ಅದಕ್ಕೆ ಅಳವಡಿಸಲಾಗಿದ್ದ ಪ್ಯಾರಾಚೂಟ್ (Parachute system) ವ್ಯವಸ್ಥೆಯು ತಾಂತ್ರಿಕ ದೋಷದಿಂದಾಗಿ ತೆರೆದುಕೊಳ್ಳಲು ವಿಫಲವಾಯಿತು. ಇದರ ಪರಿಣಾಮವಾಗಿ, ಆಲ್ಬರ್ಟ್ II ಇದ್ದ ಕ್ಯಾಪ್ಸುಲ್ ಅತ್ಯಂತ ವೇಗವಾಗಿ ಬಂದು ನ್ಯೂ ಮೆಕ್ಸಿಕೋದ ಮರುಭೂಮಿಗೆ ಅಪ್ಪಳಿಸಿತು. ಈ ಭೀಕರ ಅಪಘಾತದಲ್ಲಿ ಆಲ್ಬರ್ಟ್ II ಸ್ಥಳದಲ್ಲೇ ಮೃತಪಟ್ಟಿತು.

➤ **ಮಾನವನ ಬಾಹ್ಯಾಕಾಶ ಯಾನಕ್ಕೆ ದಾರಿದೀಪ:** ಆಲ್ಬರ್ಟ್ II ಸಾಹಸವು ದುರಂತದಲ್ಲಿ ಕೊನೆಗೊಂಡರೂ, ಅದು ವ್ಯರ್ಥವಾಗಲಿಲ್ಲ. ಆ ಪುಟ್ಟ ಜೀವಿಯ ದೇಹದಲ್ಲಿದ್ದ ಸಂವೇದಕಗಳು (Sensors) ನೀಡಿದ ಪ್ರಮುಖ ವೈದ್ಯಕೀಯ ಮತ್ತು ತಾಂತ್ರಿಕ ದತ್ತಾಂಶಗಳು (Data) ಮುಂದೆ ಮಾನವನನ್ನು ಸುರಕ್ಷಿತವಾಗಿ ಬಾಹ್ಯಾಕಾಶಕ್ಕೆ ಕಳುಹಿಸುವ ಯೋಜನೆಗಳಿಗೆ ಬಲವಾದ ಮುನ್ನುಡಿ ಬರೆದವು. ಇದರ ನಂತರವೇ ರಷ್ಯಾದ 'ಲೈಕಾ' (Laika dog) ನಾಯಿ ಹಾಗೂ ಅಮೆರಿಕದ 'ಹ್ಯಾಮ್' (Ham the Chimp) ಚಿಂಪಾಂಜಿಗಳು ಬಾಹ್ಯಾಕಾಶಕ್ಕೆ ಯಶಸ್ವಿ ಯಾನ ಬೆಳೆಸಲು ಸಾಧ್ಯವಾಯಿತು.

## ಗ್ರೇಟರ್ ನಿಕೋಬಾರ್ ಯೋಜನೆ: ₹13,000 ಕೋಟಿಯ ನಾಗರಿಕ ಮತ್ತು ಮಿಲಿಟರಿ ವಿಮಾನ ನಿಲ್ದಾಣಕ್ಕೆ ಕೇಂದ್ರ ಅಸ್ತು!




➤ ದೇಶದ ಭದ್ರತೆ ಮತ್ತು ಆರ್ಥಿಕತೆಯ ದೃಷ್ಟಿಯಿಂದ ಅತ್ಯಂತ ಆಯಕಟ್ಟಿನ ಪ್ರದೇಶವಾಗಿರುವ ಜಾಗತಿಕ ಸಾಗರ ಮಾರ್ಗದಲ್ಲಿ ಭಾರತ ತನ್ನ ಹಿಡಿತವನ್ನು ಮತ್ತಷ್ಟು ಬಲಪಡಿಸಲು ಮುಂದಾಗಿದೆ. ವಿರೋಧ ಪಕ್ಷಗಳ ತೀವ್ರ ರಾಜಕೀಯ ಆಕ್ಷೇಪಣೆ ಹಾಗೂ ಪರಿಸರವಾದಿಗಳ ಕಳವಳದ ನಡುವೆಯೂ, ಕೇಂದ್ರ ಸರ್ಕಾರವು ಅಂಡಮಾನ್ ಮತ್ತು ನಿಕೋಬಾರ್ ದ್ವೀಪಸಮೂಹದ ಗ್ರೇಟರ್ ನಿಕೋಬಾರ್‌ನಲ್ಲಿ ಬರೋಬ್ಬರಿ ₹13,000 ಕೋಟಿ ವೆಚ್ಚದ ಹೊಸ ಹಸಿರು ವಲಯ (Greenfield) ನಾಗರಿಕ ಹಾಗೂ ಮಿಲಿಟರಿ ಜಂಟಿ ವಿಮಾನ ನಿಲ್ದಾಣದ ನಿರ್ಮಾಣಕ್ಕೆ ಹಸಿರು ನಿಶಾನೆ ತೋರಿದೆ.

➤ ಇದು ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ₹81,000 ಕೋಟಿ (ಕೆಲವೆಡೆ ₹72,000 ಕೋಟಿ) ವೆಚ್ಚದ ಒಟ್ಟಾರೆ 'ವಿಶಾಲ ಮಹಾ ಲಾಕೋಬಾರ್ ಯೋಜನೆ'ಯ (Great Nicobar Island Development Project) ಪ್ರಮುಖ ಭಾಗವಾಗಿದೆ.

➤ **ಯೋಜನೆಯ ಪ್ರಮುಖ ಮುಖ್ಯಾಂಶಗಳು:**

ವೆಚ್ಚ ಮತ್ತು ಗಡುವು: ವಿಮಾನ ನಿಲ್ದಾಣದ ಯೋಜನೆಗೆ ಅಂದಾಜು ₹13,000 ಕೋಟಿ ವೆಚ್ಚ ನಿಗದಿಪಡಿಸಲಾಗಿದ್ದು, ಮುಂದಿನ 5 ವರ್ಷಗಳಲ್ಲಿ ಇದನ್ನು ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ.

ಸ್ಥಳ: ನಿಕೋಬಾರ್ ದ್ವೀಪದ ಆಗ್ನೇಯ ಕರಾವಳಿ ತೀರದ ಗಲಾಥಿಯಾ ಕೊಲ್ಲಿಯ (Galathea Bay) ಸಮೀಪವಿರುವ ಚಿಂಗನ್ (Chingen) ಎಂಬಲ್ಲಿ ಈ ಉಭಯ ಉದ್ದೇಶದ (Dual-use) ವಿಮಾನ ನಿಲ್ದಾಣ ನಿರ್ಮಾಣವಾಗಲಿದೆ.

ನಿಯಂತ್ರಣ: ಈ ನೂತನ ವಾಯುನೆಲೆಯು ಸಂಪೂರ್ಣವಾಗಿ ಭಾರತೀಯ ನೌಕಾಪಡೆಯ (Indian Navy) ಅಧೀನದಲ್ಲಿ ಕಾರ್ಯಾಚರಣೆ ನಡೆಸಲಿದ್ದು, ವಾಣಿಜ್ಯ ಹಾಗೂ ನಾಗರಿಕ ವಿಮಾನಯಾನಕ್ಕೂ ಮುಕ್ತ ಅವಕಾಶ ಕಲ್ಪಿಸಲಿದೆ.

ಬದಲಾದ ನಿರ್ಧಾರ: ಈ ಮೊದಲು ಪ್ರಸ್ತುತ ದ್ವೀಪದಲ್ಲಿರುವ ನೌಕಾಪಡೆಯ 'ಐಎನ್‌ಎಸ್ ಬಾಜ್' (INS Baaz) ವಾಯುನೆಲೆಯ ರನ್‌ವೇಯನ್ನು ವಿಸ್ತರಿಸಲು ಯೋಜಿಸಲಾಗಿತ್ತು. ಆದರೆ ಭೌಗೋಳಿಕ ಸವಾಲುಗಳು ಹಾಗೂ ಪರಿಸರ ಹಾನಿಯ ಪ್ರಮಾಣ ಹೆಚ್ಚಾಗುವ ಕಾರಣದಿಂದ ಆ ಪ್ರಸ್ತಾಪವನ್ನು ಕೈಬಿಟ್ಟು, ಈಗ ಹೊಸದಾಗಿ ಗ್ರೀನ್‌ಫೀಲ್ಡ್ ವಿಮಾನ ನಿಲ್ದಾಣ ನಿರ್ಮಿಸಲು ತೀರ್ಮಾನಿಸಲಾಗಿದೆ.

➤ **ಕಾರ್ಯತಂತ್ರದ ದೃಷ್ಟಿಯಿಂದ ಇದರ ಮಹತ್ವ:**

ಮಲಕ್ಕಾ ಜಲಸಂಧಿಯ ಸಾಮೀಪ್ಯ: ಈ ವಾಯುನೆಲೆಯು ಜಾಗತಿಕ ವ್ಯಾಪಾರದ ಜೀವನಾಡಿಯಾಗಿರುವ ಮತ್ತು ಹಿಂದೂ ಮಹಾಸಾಗರ ಹಾಗೂ ದಕ್ಷಿಣ ಚೀನಾ ಸಮುದ್ರವನ್ನು ಸಂಪರ್ಕಿಸುವ ಮಲಕ್ಕಾ ಜಲಸಂಧಿಗೆ (Strait of Malacca) ಅತ್ಯಂತ ಸಮೀಪದಲ್ಲಿದೆ. ಇದು ಚೀನಾದ ಸಾಗರ ವಿಸ್ತರಣಾ ನೀತಿಗೆ ಬ್ರೇಕ್ ಹಾಕಲು ಭಾರತಕ್ಕೆ ನೆರವಾಗಲಿದೆ.

**ಕಣ್ಗಾವಲು ವಿಸ್ತರಣೆ:** ಈ ರನ್‌ವೇ ನಿರ್ಮಾಣದಿಂದಾಗಿ ಭಾರತೀಯ ರಕ್ಷಣಾ ಪಡೆಗಳಿಗೆ ಹಿಂದೂ ಮಹಾಸಾಗರ ವಲಯದಲ್ಲಿ ಶತ್ರು ದೇಶಗಳ ನೌಕೆ ಹಾಗೂ ಜಲಾಂತರ್ಗಾಮಿ ನೌಕೆಗಳ (Submarines) ಮೇಲೆ ನಿರಂತರ ನಿಗಾ ಇಡಲು (Surveillance) ಮತ್ತು ತುರ್ತು ಸಂದರ್ಭಗಳಲ್ಲಿ ಕ್ಷಿಪ್ರ ಕಾರ್ಯಾಚರಣೆ ನಡೆಸಲು ಅನುಕೂಲವಾಗುತ್ತದೆ.

ಆಕ್ಟ್ ಈಸ್ಟ್ ಪಾಲಿಸಿ: ಇದು ಭಾರತದ 'ಆಕ್ಟ್ ಈಸ್ಟ್' (Act East Policy) ನೀತಿ ಮತ್ತು 'ಮಹಾಸಾಗರ್' (MAHASAGAR - Security and Growth for All in the Region) ಸಿದ್ಧಾಂತಕ್ಕೆ ಮತ್ತಷ್ಟು ಬಲ ತುಂಬಲಿದೆ.

➤ **ಆರ್ಥಿಕ ದೃಷ್ಟಿಕೋನ ಮತ್ತು ಇತರ ಯೋಜನೆಗಳು:**

ಗಲಾಥಿಯಾ ಕೊಲ್ಲಿಯಲ್ಲಿ ಅಂತಾರಾಷ್ಟ್ರೀಯ ಕಂಟೈನರ್ ಸಾಗಣೆ ಹಬ್ (ICTT): 20 ಮೀಟರ್‌ಗಿಂತಲೂ ಹೆಚ್ಚು ನೈಸರ್ಗಿಕ ಆಳ ಹೊಂದಿರುವ ಈ ಬಂದರು, ಜಾಗತಿಕ ಬೃಹತ್ ಸರಕು ಹಡಗುಗಳಿಗೆ ಆಶ್ರಯ ನೀಡಲಿದೆ. ಇದರಿಂದಾಗಿ ಭಾರತವು ಸಿಂಗಾಪುರ, ಕೊಲಂಬೊ ಮತ್ತು ದುಬೈ ಬಂದರುಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಿಕೊಳ್ಳಬಹುದು.

ಹೈಬ್ರಿಡ್ ವಿದ್ಯುತ್ ಸ್ಥಾವರ: ಪ್ರಸ್ತುತ ದ್ವೀಪದಲ್ಲಿ ಬಳಸಲಾಗುತ್ತಿರುವ ಮಾಲಿನ್ಯಕಾರಕ ಡೀಸೆಲ್ ಜನರೇಟರ್‌ಗಳ ಬದಲಿಗೆ 450 MVA ಸಾಮರ್ಥ್ಯದ ಸ್ವಚ್ಛ ಇಂಧನ ಆಧಾರಿತ ಹೈಬ್ರಿಡ್ ವಿದ್ಯುತ್ ಯೋಜನೆಯನ್ನು ತರಲಾಗುತ್ತಿದೆ.

ಸಂಯೋಜಿತ ಟೌನ್‌ಶಿಪ್: ವಾಣಿಜ್ಯ ಮತ್ತು ಆರ್ಥಿಕ ವೃದ್ಧಿಗೆ ಪೂರಕವಾಗಿ 16,610 ಹೆಕ್ಟೇರ್ ಪ್ರದೇಶದಲ್ಲಿ ಆಧುನಿಕ ನಗರ ಪ್ರದೇಶವನ್ನು ಅಭಿವೃದ್ಧಿಪಡಿಸಲಾಗುತ್ತಿದೆ.

➤ ಯೋಜನೆಗೆ ಎದುರಾಗಿರುವ ವಿರೋಧ ಮತ್ತು ರಾಜಕೀಯ ಬಿರುಗಾಳಿ: ಗ್ರೇಟರ್ ನಿಕೋಬಾರ್ ಯೋಜನೆಗೆ ಲಕ್ಷಾಂತರ ಅಪರೂಪದ ಮರಗಳು ಮತ್ತು ಹವಳದ ದಿಬ್ಬಗಳ ನಾಶದ ಪರಿಸರ ಆತಂಕ ಹಾಗೂ ಸ್ಥಳೀಯ 'ಶೋಂಪೆನ್' ಮತ್ತು 'ನಿಕೋಬಾರೀಸ್' ಬುಡಕಟ್ಟು ಜನಾಂಗದವರ ನೈಸರ್ಗಿಕ ವಾಸಸ್ಥಾನಕ್ಕೆ ಧಕ್ಕೆಯಾಗಲಿದೆ ಎಂಬ ಕಾರಣಗಳಿಗಾಗಿ ದೇಶದಾದ್ಯಂತ ತೀವ್ರ ವಿರೋಧ ಮತ್ತು ರಾಜಕೀಯ ಆಕ್ಷೇಪಣೆಗಳು ವ್ಯಕ್ತವಾಗುತ್ತಿವೆ.

➤ ಸರ್ಕಾರದ ಸಮರ್ಥನೆ: ಈ ಎಲ್ಲಾ ಆಕ್ಷೇಪಣೆಗಳಿಗೆ ಪ್ರತಿಕ್ರಿಯಿಸಿರುವ ಕೇಂದ್ರ ಸರ್ಕಾರ ಮತ್ತು ರಕ್ಷಣಾ ಇಲಾಖೆಯ ಮೂಲಗಳು, "ಪರಿಸರ ಇಲಾಖೆಯ ಅನುಮತಿಯನ್ನು ಕಟ್ಟುನಿಟ್ಟಾದ 42 ನಿಯಮಗಳ ಅಡಿಯಲ್ಲಿ ಪಡೆಯಲಾಗಿದೆ. ಆದಿವಾಸಿಗಳ ಮೀಸಲು ಪ್ರದೇಶಗಳಿಗೆ ಯಾವುದೇ ಧಕ್ಕೆ ಬರದಂತೆ ರಿಂಗ್-ಫೆನ್ಸಿಂಗ್ (ಸುರಕ್ಷತಾ ವಲಯ) ಮಾಡಲಾಗಿದೆ. ದೇಶದ ಸಾರ್ವಭೌಮತ್ವ ಮತ್ತು ರಾಷ್ಟ್ರೀಯ ಭದ್ರತೆಯ ದೃಷ್ಟಿಯಿಂದ ಈ ಯೋಜನೆ ಅತ್ಯಂತ ಅನಿವಾರ್ಯವಾಗಿದೆ" ಎಂದು ಸ್ಪಷ್ಟಪಡಿಸಿವೆ.

## ವಿಶ್ವಬ್ಯಾಂಕ್ ವರದಿ: ಜಾಗತಿಕ ಆರ್ಥಿಕ ಬೆಳವಣಿಗೆಯಲ್ಲಿ ಭಾರತಕ್ಕೇ ಅಗ್ರಸ್ಥಾನ!




➤ ಜಾಗತಿಕ ಮಟ್ಟದಲ್ಲಿ ಆರ್ಥಿಕ ಅನಿಶ್ಚಿತತೆ ಹಾಗೂ ವಿವಿಧ ಭೌಗೋಳಿಕ ರಾಜಕೀಯ ಸವಾಲುಗಳಿದ್ದರೂ, ಭಾರತವು ವಿಶ್ವದಲ್ಲೇ ಅತಿ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಾಗಿ ಮುಂದುವರಿಯಲಿದೆ ಎಂದು ವಿಶ್ವಬ್ಯಾಂಕ್ ತನ್ನ ಇತ್ತೀಚಿನ ವರದಿಯಲ್ಲಿ ಆಶಾವಾದ ವ್ಯಕ್ತಪಡಿಸಿದೆ. ವಿಶ್ವಬ್ಯಾಂಕ್ ಬಿಡುಗಡೆ ಮಾಡಿರುವ 'ಜಾಗತಿಕ ಆರ್ಥಿಕ ನಿರೀಕ್ಷೆಗಳು' ವರದಿಯ ಪ್ರಕಾರ, ಪ್ರಸಕ್ತ ಹಣಕಾಸು ವರ್ಷದಲ್ಲಿ ಭಾರತದ ಆರ್ಥಿಕತೆಯು ಅತ್ಯುತ್ತಮ ಸ್ಥಿತಿಸ್ಥಾಪಕತ್ವವನ್ನು ಪ್ರದರ್ಶಿಸಲಿದೆ.

KPSCVaani

**➤ ಭಾರತದ ಜಿಡಿಪಿ (GDP) ಬೆಳವಣಿಗೆಯ ಮುನ್ಸೂಚನೆ:**
2025-26 (ಕಳೆದ ವರ್ಷ) 7.7% (ಸಾಧಿಸಿದ ಪ್ರಗತಿ)
2026-27 (ಪ್ರಸಕ್ತ ವರ್ಷ) 6.6%
2027-28 (ಮುಂದಿನ ವರ್ಷ) 6.8%

**➤ ಆರ್ಥಿಕ ಬೆಳವಣಿಗೆಗೆ ಪ್ರಮುಖ ಕಾರಣಗಳು:**
ಬಲವಾದ ಗ್ರಾಮೀಣ ಅನುಭೋಗ : ದೇಶದೊಳಗಿನ ಆರ್ಥಿಕ ಚಟುವಟಿಕೆಗಳು ಉತ್ತಮವಾಗಿವೆ. ವಿಶೇಷವಾಗಿ ಗ್ರಾಮೀಣ ಭಾಗಗಳಲ್ಲಿ ಜನರ ಖರೀದಿ ಸಾಮರ್ಥ್ಯ ಮತ್ತು ಬಳಕೆ ಹೆಚ್ಚಾಗಿದೆ.
ನಗರ ಪ್ರದೇಶಗಳಲ್ಲಿ ಹೆಚ್ಚಿದ ಬೇಡಿಕೆ: ನಗರ ವಲಯಗಳಲ್ಲೂ ಗ್ರಾಹಕರ ಬೇಡಿಕೆ ಚೇತರಿಸಿಕೊಳ್ಳುತ್ತಿದ್ದು, ಇದು ಆರ್ಥಿಕತೆಗೆ ಬೂಸ್ಟರ್ ಡೋಸ್ ನೀಡಿದೆ.
ತೆರಿಗೆ ಕಡಿತ ಮತ್ತು ಹಣದುಬ್ಬರ ನಿಯಂತ್ರಣ: ಸರಕು ಮತ್ತು ಸೇವಾ ತೆರಿಗೆ (GST) ದರಗಳಲ್ಲಿನ ಕಡಿತ ಹಾಗೂ ಪೆಟ್ರೋಲ್-ಡೀಸೆಲ್ ಮೇಲಿನ ಅಬಕಾರಿ ಸುಂಕದ (Excise Duty) ಕಡಿತವು ಹಣದುಬ್ಬರವನ್ನು ನಿಯಂತ್ರಣದಲ್ಲಿಡಲು ಸಹಾಯ ಮಾಡಿದೆ.
ರಫ್ತು ವಲಯದ ಚೇತರಿಕೆ: ಐರೋಪ್ಯ ಒಕ್ಕೂಟ (EU) ಸೇರಿದಂತೆ ಜಗತ್ತಿನ ಪ್ರಮುಖ ದೇಶಗಳೊಂದಿಗೆ ಭಾರತ ಮಾಡಿಕೊಂಡಿರುವ ಮುಕ್ತ ವ್ಯಾಪಾರ ಒಪ್ಪಂದಗಳು (FTAs) ರಫ್ತು ವಲಯಕ್ಕೆ ಹೊಸ ಚೇತರಿಕೆ ತಂದಿವೆ.
➤ ಪ್ರಸ್ತುತ ಮಧ್ಯಪ್ರಾಚ್ಯ ಬಿಕ್ಕಟ್ಟು ಜಾಗತಿಕ ತೈಲ ಪೂರೈಕೆಗೆ ದೊಡ್ಡ ಸವಾಲಾಗಿದೆ. ಆದರೆ ಭಾರತವು ಇಲ್ಲಿಯೂ ರಾಜತಾಂತ್ರಿಕ ಯಶಸ್ಸು ಸಾಧಿಸಿದೆ. ಇರಾನ್‌ನೊಂದಿಗಿನ ಯಶಸ್ವಿ ಮಾತುಕತೆಯ ಮೂಲಕ, ಆರ್ಥಿಕವಾಗಿ ಅತ್ಯಂತ ಸೂಕ್ಷ್ಮವಾಗಿರುವ 'ಹರ್ಮುಜ್ ಜಲಸಂಧಿ'ಯಲ್ಲಿ ಭಾರತೀಯ ಹಡಗುಗಳ ಮುಕ್ತ ಸಂಚಾರಕ್ಕೆ ಅನುಮತಿ ಪಡೆದಿದೆ. ಇದರಿಂದಾಗಿ ದೇಶಕ್ಕೆ ತೈಲ ಮತ್ತು ರಸಗೊಬ್ಬರ ಪೂರೈಕೆಯಲ್ಲಿ ಎದುರಾಗಬಹುದಾಗಿದ್ದ ತೊಂದರೆ ತಪ್ಪಿದಂತಾಗಿದೆ.

## ಭಾರತದಲ್ಲೇ ಅತ್ಯಂತ ಕಡಿಮೆ ಜನನ ಪ್ರಮಾಣ ದಾಖಲಿಸಿದ ಅಂಡಮಾನ್ ನಿಕೋಬಾರ್! (NFHS-6 ವರದಿ)




➤ ದೇಶದ ಜನಸಂಖ್ಯಾ ಬೆಳವಣಿಗೆಯ ಇತಿಹಾಸದಲ್ಲೇ ಅತ್ಯಂತ ಮಹತ್ವದ ಹಾಗೂ ಆತಂಕಕಾರಿ ಬದಲಾವಣೆಯೊಂದು ಬೆಳಕಿಗೆ ಬಂದಿದೆ. ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ಇತ್ತೀಚೆಗೆ ಬಿಡುಗಡೆ ಮಾಡಿರುವ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ-6 (NFHS-6) ವರದಿಯ ಪ್ರಕಾರ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಭಾರತದಲ್ಲೇ ಅತ್ಯಂತ ಕಡಿಮೆ ಒಟ್ಟು ಜನನ ಪ್ರಮಾಣವನ್ನು (Total Fertility Rate - TFR) ದಾಖಲಿಸಿವೆ. ದ್ವೀಪಸಮೂಹದ ಒಟ್ಟು ಜನನ ಪ್ರಮಾಣವು (TFR) ಕೇವಲ 0.9 ಕ್ಕೆ ಕುಸಿದಿದ್ದು, ದೇಶದಲ್ಲೇ 1 ಕ್ಕಿಂತ ಕಡಿಮೆ ಜನನ ಪ್ರಮಾಣ ಹೊಂದಿರುವ ಏಕೈಕ ಪ್ರದೇಶವಾಗಿ ಅಂಡಮಾನ್ ಗುರುತಿಸಿಕೊಂಡಿದೆ.
➤ ಒಟ್ಟು ಜನನ ಪ್ರಮಾಣ (TFR) ಮತ್ತು ರೀಪ್ಲೇಸ್‌ಮೆಂಟ್ ಮಟ್ಟ:ಯಾವುದೇ ಒಂದು ದೇಶ ಅಥವಾ ಪ್ರದೇಶದ ಜನಸಂಖ್ಯೆಯು ಮುಂದಿನ ಪೀಳಿಗೆಯಲ್ಲೂ ಸ್ಥಿರವಾಗಿ (ಸ್ಥಿರ ಜನಸಂಖ್ಯೆ) ಮುಂದುವರಿಯಬೇಕಾದರೆ ಅಲ್ಲಿನ ಕನಿಷ್ಠ ಜನನ ಪ್ರಮಾಣ 2.1 ಇರಬೇಕು. ಇದನ್ನು ಜನಸಂಖ್ಯಾ ಶಾಸ್ತ್ರದಲ್ಲಿ 'ರೀಪ್ಲೇಸ್‌ಮೆಂಟ್ ಮಟ್ಟ' (Replacement Level) ಎನ್ನಲಾಗುತ್ತದೆ. ಅಂದರೆ, ಸರಾಸರಿ ಒಬ್ಬ ಮಹಿಳೆ ತನ್ನ ಜೀವಿತಾವಧಿಯಲ್ಲಿ ಕನಿಷ್ಠ ಇಬ್ಬರು ಮಕ್ಕಳಿಗೆ ಜನ್ಮ ನೀಡಬೇಕಾಗುತ್ತದೆ. ಆದರೆ ಪ್ರಸ್ತುತ ಅಂಡಮಾನ್‌ನ ದರವು (0.9) ಈ ಕನಿಷ್ಠ ಪ್ರಮಾಣದ ಅರ್ಧಕ್ಕಿಂತಲೂ ಕಡಿಮೆಯಾಗಿದೆ. ಇದು ಮುಂಬರುವ ದಿನಗಳಲ್ಲಿ ಇಲ್ಲಿನ ಜನಸಂಖ್ಯೆಯಲ್ಲಿ ಭಾರಿ ಇಳಿತ ಉಂಟಾಗುವುದರ ಸ್ಪಷ್ಟ ಮುನ್ಸೂಚನೆಯಾಗಿದೆ.

**➤ ಜನಸಂಖ್ಯಾ ಬದಲಾವಣೆಯ ಪ್ರಮುಖ ಅಂಕಿ-ಅಂಶಗಳು (NFHS-5 vs NFHS-6):**
ಒಟ್ಟು ಜನನ ಪ್ರಮಾಣ (TFR): 1.30.95
ವರ್ಷದೊಳಗಿನ ಮಕ್ಕಳ ಜನಸಂಖ್ಯೆ: 5.3%3.7%60
ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು: 11%12.6%
2 ರಿಂದ 4 ವರ್ಷದ ಮಕ್ಕಳ ಪ್ರಿ-ಸ್ಕೂಲ್ ದಾಖಲಾತಿ: 88.5%66.2%

**➤ ಜನನ ಪ್ರಮಾಣ ಭಾರಿ ಕುಸಿತಕ್ಕೆ ಪ್ರಮುಖ ಕಾರಣಗಳು:**
ಮಹಿಳಾ ಸಾಕ್ಷರತೆ ಮತ್ತು ಆರ್ಥಿಕ ಸ್ವಾವಲಂಬನೆ: ದ್ವೀಪದಲ್ಲಿ ಮಹಿಳಾ ಸಾಕ್ಷರತೆ ಗಣನೀಯವಾಗಿ ಹೆಚ್ಚಾಗಿದ್ದು, ಬಹುತೇಕ ಮಹಿಳೆಯರು ಉನ್ನತ ಶಿಕ್ಷಣ ಹಾಗೂ ಉದ್ಯೋಗದ ಮೂಲಕ ಆರ್ಥಿಕ ಸ್ವಾವಲಂಬನೆ ಸಾಧಿಸಿದ್ದಾರೆ.
ಕಡಿಮೆ ನಿರುದ್ಯೋಗ ದರ: ಇದೊಂದು ಮಧ್ಯಮ ವರ್ಗದ ಸಮಾಜವಾಗಿದ್ದು, ನಿರುದ್ಯೋಗ ದರ ತೀರಾ ಕಡಿಮೆಯಿದೆ. ಇದು ಜೀವನಮಟ್ಟದ ಸುಧಾರಣೆಗೆ ಕಾರಣವಾಗಿದೆ.
ಆಧುನಿಕ ಕುಟುಂಬ ಯೋಜನೆ: ಆಧುನಿಕ ಕುಟುಂಬ ಯೋಜನಾ ಪದ್ಧತಿಗಳು ಮತ್ತು ಗರ್ಭನಿರೋಧಕಗಳು ಸುಲಭವಾಗಿ ಲಭ್ಯವಿರುವುದು ಜನನ ಪ್ರಮಾಣ ನಿಯಂತ್ರಣಕ್ಕೆ ನೆರವಾಗಿದೆ.
ಒಂದೇ ಮಗುವಿನ ನೀತಿ (Single Child Preference): ಇಂದಿನ ಯುವ ದಂಪತಿಗಳು ಆರ್ಥಿಕ ಹೊರೆ ಹಾಗೂ ಮಕ್ಕಳ ಉತ್ತಮ ಭವಿಷ್ಯದ ದೃಷ್ಟಿಯಿಂದ ಕೇವಲ ಒಂದೇ ಮಗುವನ್ನು ಹೊಂದಲು ಬಯಸುತ್ತಿದ್ದಾರೆ.

## ಕೇರಳದಲ್ಲಿ 'ಪ್ರಿಯದರ್ಶಿನಿ' ಯೋಜನೆ ಜಾರಿ: ಮಹಿಳೆಯರು ಮತ್ತು ಲಿಂಗತ್ವ ಅಲ್ಪಸಂಖ್ಯಾತರಿಗೆ ಉಚಿತ ಬಸ್ ಪ್ರಯಾಣ ಭಾಗ್ಯ!




➤ ತಿರುವನಂತಪುರಂ: ನೆರೆರಾಜ್ಯ ಕೇರಳದಲ್ಲಿ ಮಹಿಳಾ ಸಬಲೀಕರಣ ಹಾಗೂ ಆರ್ಥಿಕ ಸ್ವಾವಲಂಬನೆಗೆ ದಾರಿದೀಪವಾಗಬಲ್ಲ ಮಹತ್ವಾಕಾಂಕ್ಷೆಯ 'ಪ್ರಿಯದರ್ಶಿನಿ' (Priyadarshini Free Bus Travel Scheme) ಉಚಿತ ಬಸ್ ಪ್ರಯಾಣ ಯೋಜನೆಗೆ ಅದ್ದೂರಿ ಚಾಲನೆ ಸಿಕ್ಕಿದೆ. ಮೇ 2026 ರಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ನೇತೃತ್ವದ ಯುನೈಟೆಡ್ ಡೆಮೋಕ್ರಟಿಕ್ ಫ್ರಂಟ್ (UDF) ಸರಕಾರವು ತನ್ನ ಪ್ರಮುಖ ಚುನಾವಣಾ ಗ್ಯಾರಂಟಿಯನ್ನು ಈಡೇರಿಸಿದೆ.
➤ ಕೇರಳದ ನೂತನ ಮುಖ್ಯಮಂತ್ರಿ ವಿ. ಡಿ. ಸತೀಶನ್ (V. D. Satheesan) ಅವರು ತಿರುವನಂತಪುರಂನ ತಂಪನೂರು ಸೆಂಟ್ರಲ್ ಬಸ್ ನಿಲ್ದಾಣದಲ್ಲಿ ನಡೆದ ಅದ್ದೂರಿ ಸಮಾರಂಭದಲ್ಲಿ ಸಾಂಪ್ರದಾಯಿಕ ದೀಪ ಬೆಳಗಿಸುವ ಮೂಲಕ ಈ ಐತಿಹಾಸಿಕ ಯೋಜನೆಗೆ ಚಾಲನೆ ನೀಡಿದರು. ಉದ್ಘಾಟನಾ ಸಮಾರಂಭದ ವಿಶೇಷವಾಗಿ, ಸಂಪೂರ್ಣವಾಗಿ ಮಹಿಳಾ ಚಾಲಕಿ ಮತ್ತು ಮಹಿಳಾ ನಿರ್ವಾಹಕರನ್ನು (All-Women Crew) ಒಳಗೊಂಡ ವಿಶೇಷ ಬಸ್‌ನಲ್ಲಿ ಮುಖ್ಯಮಂತ್ರಿಗಳು ಸಚಿವಾಲಯದವರೆಗೆ ಪ್ರಯಾಣ ಬೆಳೆಸಿದರು.

**➤ 'ಪ್ರಿಯದರ್ಶಿನಿ' ಯೋಜನೆಯ ಪ್ರಮುಖ ನಿಯಮಗಳು ಮತ್ತು ವಿಶೇಷತೆಗಳು:**
ಯಾವುದೇ ತಾರತಮ್ಯವಿಲ್ಲ: ವಯಸ್ಸು, ಆದಾಯ, ಸಾಮಾಜಿಕ ಸ್ಥಾನಮಾನ ಅಥವಾ ಮೂಲ ರಾಜ್ಯದ ಭೇದವಿಲ್ಲದೆ ಎಲ್ಲಾ ಮಹಿಳೆಯರು ಉಚಿತವಾಗಿ ಪ್ರಯಾಣಿಸಬಹುದು. ಅಂದರೆ, ಕೇರಳಕ್ಕೆ ಭೇಟಿ ನೀಡುವ ಪ್ರವಾಸಿಗರು ಮತ್ತು ಹೊರರಾಜ್ಯದ ಮಹಿಳೆಯರಿಗೂ ಇದು ಅನ್ವಯಿಸುತ್ತದೆ.

KPSCVaani

ಝೀರೋ ಟಿಕೆಟ್ (Zero-Fare Ticket): ಉಚಿತ ಪ್ರಯಾಣಕ್ಕಾಗಿ ಯಾವುದೇ ಗುರುತಿನ ಚೀಟಿ (ID Card) ಅಥವಾ ಪ್ರಮಾಣಪತ್ರವನ್ನು ತೋರಿಸುವ ಅಗತ್ಯವಿಲ್ಲ. ಆದರೆ, ಪ್ರಯಾಣಿಕರು ನಿರ್ವಾಹಕರಿಂದ (Conductor) ಇವಿಎಂ ಮೆಷಿನ್ ಮೂಲಕ ನೀಡಲಾಗುವ 'ಶೂನ್ಯ ಮುಖಬೆಲೆಯ' (Zero Ticket) ಟಿಕೆಟ್ ಪಡೆಯುವುದು ಕಡ್ಡಾಯವಾಗಿದೆ. ಇದು ಸರಕಾರಕ್ಕೆ ಪ್ರಯಾಣಿಕರ ಸಂಖ್ಯೆಯನ್ನು ಟ್ರ್ಯಾಕ್ ಮಾಡಲು ಮತ್ತು ಕೆಎಸ್ಆರ್‌ಟಿಸಿಗೆ ಹಣ ಮರುಪಾವತಿ ಮಾಡಲು ನೆರವಾಗುತ್ತದೆ.

7 ವರ್ಗದ ಸಾಮಾನ್ಯ ಬಸ್‌ಗಳಲ್ಲಿ ಲಭ್ಯ: ಆರಂಭಿಕ 100 ದಿನಗಳ ಪ್ರಾಯೋಗಿಕ ಅವಧಿಯಲ್ಲಿ ಸಾಮಾನ್ಯ (Ordinary), ಸಿಟಿ ಆರ್ಡಿನರಿ, ಲಿಮಿಟೆಡ್ ಸ್ಟಾಪ್ ಆರ್ಡಿನರಿ, ಫೇರ್-ಸ್ಟೇಜ್ ಆರ್ಡಿನರಿ, ಟೌನ್-ಟು-ಟೌನ್, ಪಾಯಿಂಟ್-ಟು-ಪಾಯಿಂಟ್ ಮತ್ತು ಹಳ್ಳಿಗಳಲ್ಲಿ ಚಲಿಸುವ 'ಗ್ರಾಮವಂಡಿ' ಸೇವೆಗಳು ಸೇರಿದಂತೆ ಒಟ್ಟು 7 ವರ್ಗದ ಸಾಮಾನ್ಯ ಬಸ್‌ಗಳಲ್ಲಿ ಮಾತ್ರ ಈ ಸೌಲಭ್ಯ ಸಿಗಲಿದೆ. 100 ದಿನಗಳ ನಂತರ ಫಾಸ್ಟ್ ಹಾಗೂ ಸೂಪರ್ ಫಾಸ್ಟ್ ಬಸ್‌ಗಳಿಗೂ ವಿಸ್ತರಿಸುವ ಬಗ್ಗೆ ಸರಕಾರ ಪರಿಶೀಲಿಸಲಿದೆ ಎಂದು ಸಾರಿಗೆ ಸಚಿವ ಸಿ.ಪಿ. ಜಾನ್ ತಿಳಿಸಿದ್ದಾರೆ.

ಲಗೇಜ್ ಮತ್ತು ಮಕ್ಕಳ ನಿಯಮ: ಮಹಿಳೆಯರು ಗರಿಷ್ಠ 15 ಕೆಜಿವರೆಗಿನ ಲಗೇಜ್ ಅನ್ನು ಉಚಿತವಾಗಿ ಕೊಂಡೊಯ್ಯಬಹುದು. ಮಹಿಳೆಯರ ಜೊತೆ ಪ್ರಯಾಣಿಸುವ 5 ರಿಂದ 11 ವರ್ಷದೊಳಗಿನ ಗಂಡು ಮಕ್ಕಳಿಗೆ ಅರ್ಧ ಟಿಕೆಟ್ ಹಾಗೂ 11 ವರ್ಷ ಮೇಲ್ಪಟ್ಟ ಪುರುಷರಿಗೆ ಪೂರ್ಣ ಟಿಕೆಟ್ ದರ ಕಡ್ಡಾಯವಾಗಿರುತ್ತದೆ.

➤ **ಮುಖ್ಯಮಂತ್ರಿ ವಿ. ಡಿ. ಸತೀಶನ್ ಅವರ ಮಾತು**: "ಇದು ಮಹಿಳೆಯರಿಗೆ ನೀಡುತ್ತಿರುವ ಭಿಕ್ಷೆಯಲ್ಲ, ಬದಲಿಗೆ ಅವರ ಸಾಮಾಜಿಕ ಮತ್ತು ಆರ್ಥಿಕ ಸ್ವಾವಲಂಬನೆಗಾಗಿ ರೂಪಿಸಲಾದ ವ್ಯವಸ್ಥಿತ ಕಲ್ಯಾಣ ಯೋಜನೆ. ಮನೆಗೆಲಸದವರು, ಕೂಲಿ ಕಾರ್ಮಿಕರು ಸೇರಿದಂತೆ ದಿನನಿತ್ಯ ಸಾರ್ವಜನಿಕ ಸಾರಿಗೆಯನ್ನೇ ನಂಬಿಕೊಂಡಿರುವ ಲಕ್ಷಾಂತರ ಮಹಿಳೆಯರ ಆರ್ಥಿಕ ಹೊರೆಯನ್ನು ಇದು ಗಣನೀಯವಾಗಿ ತಗ್ಗಿಸಲಿದೆ. ಈ ಯೋಜನೆಯಿಂದ ಮಹಿಳೆಯರ ಮಾಸಿಕ ಆದಾಯದಲ್ಲಿ ಶೇಕಡಾ 15 ರಿಂದ 25 ರಷ್ಟು ಉಳಿತಾಯವಾಗಲಿದೆ."

➤ **ಭಾರತದಲ್ಲಿ ಉಚಿತ ಬಸ್ ಪ್ರಯಾಣದ ಸರಣಿ:**

ಕರ್ನಾಟಕ: ಶಕ್ತಿ ಯೋಜನೆ (Shakti Scheme)
ತೆಲಂಗಾಣ: ಮಹಾಲಕ್ಷ್ಮಿ ಯೋಜನೆ (Mahalakshmi Scheme)
ತಮಿಳುನಾಡು: ವಿಡಿಯಾಲ್ ಪಯಣಂ (Vidiyal Payanam)
ಆಂಧ್ರಪ್ರದೇಶ: ಸ್ತ್ರೀ ಶಕ್ತಿ (Stree Shakti)
ದೆಹಲಿ: ಪಿಂಕ್ ಟಿಕೆಟ್ (Pink Ticket)
ಮಾಡಿ

## ಅಮೆರಿಕ-ಇರಾನ್ ಐತಿಹಾಸಿಕ ಶಾಂತಿ ಒಪ್ಪಂದ: ಜಾಗತಿಕ ರಾಜಕಾರಣ ಮತ್ತು ಆರ್ಥಿಕತೆಯ ಮೇಲಿನ ಪ್ರಭಾವ



➤ ಪಶ್ಚಿಮ ಏಷ್ಯಾ (ಮಧ್ಯಪ್ರಾಚ್ಯ) ಭಾಗದಲ್ಲಿ ದೀರ್ಘಕಾಲದಿಂದ ಜಾಗತಿಕ ಆತಂಕಕ್ಕೆ ಕಾರಣವಾಗಿದ್ದ ಅಮೆರಿಕ ಮತ್ತು ಇರಾನ್ ನಡುವಣ 107 ದಿನಗಳ ಭೀಕರ ಯುದ್ಧ ಕೊನೆಗೂ ಅಂತ್ಯವಾಗುವ ಕಾಲ ಸನ್ನಿಹಿತವಾಗಿದೆ. ಉಭಯ ರಾಷ್ಟ್ರಗಳು ಐತಿಹಾಸಿಕ ಶಾಂತಿ ಒಪ್ಪಂದವನ್ನು (Peace Deal) ಅಂತಿಮಗೊಳಿಸಿರುವುದಾಗಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅಧಿಕೃತವಾಗಿ ಘೋಷಿಸಿದ್ದಾರೆ. ಈ ಒಪ್ಪಂದಕ್ಕೆ ಜೂನ್ 19ರಂದು (ಶುಕ್ರವಾರ) ಸ್ವಿಟ್ಜರ್ಲೆಂಡ್‌ನ ಜಿನೀವಾದಲ್ಲಿ ಉಭಯ ದೇಶಗಳ ಪ್ರತಿನಿಧಿಗಳು ಅಧಿಕೃತವಾಗಿ ಸಹಿ ಹಾಕಲಿದ್ದಾರೆ. ಈ ಮಹತ್ವದ ಬೆಳವಣಿಗೆಯು ಜಾಗತಿಕ ರಾಜಕೀಯ ಮತ್ತು ಕಚ್ಚಾ ತೈಲ ಮಾರುಕಟ್ಟೆಯಲ್ಲಿ ಭಾರಿ ಸಂಚಲನ ಸೃಷ್ಟಿಸಿದೆ.

➤ **ಒಪ್ಪಂದದ ಪ್ರಮುಖ ಮುಖ್ಯಾಂಶಗಳು:**

ಹರ್ಮುಜ್ ಜಲಸಂಧಿ ಮುಕ್ತ (Strait of Hormuz Reopening): ಯುದ್ಧದ ಹಿನ್ನೆಲೆಯಲ್ಲಿ ಮುಚ್ಚಲ್ಪಟ್ಟಿದ್ದ ವಿಶ್ವದ ಅತ್ಯಂತ ಪ್ರಮುಖ ತೈಲ ಸಾರಿಗೆ ಮಾರ್ಗವಾದ 'ಹರ್ಮುಜ್ ಜಲಸಂಧಿ'ಯು ಜೂನ್ 19ರಿಂದ ಸಂಪೂರ್ಣವಾಗಿ ಮುಕ್ತವಾಗಲಿದೆ. ಇದರಿಂದಾಗಿ ಜಾಗತಿಕ ತೈಲ ಪೂರೈಕೆ ಸುಗಮಗೊಳ್ಳಲಿದೆ.

ನೌಕಾ ದಿಗ್ಬಂಧನ ತೆರವು: ಇರಾನ್ ಬಂದರುಗಳ ಮೇಲಿನ ಅಮೆರಿಕ ನೌಕಾಪಡೆಯ ದಿಗ್ಬಂಧನವನ್ನು (Naval Blockade) ಈ ಒಪ್ಪಂದದ ಮೂಲಕ ಹಿಂಪಡೆಯಲಾಗುತ್ತಿದೆ.

ಪರಮಾಣು ಅಸ್ತ್ರಕ್ಕೆ ಬ್ರೇಕ್: ಇರಾನ್ ಯಾವುದೇ ಕಾರಣಕ್ಕೂ ಪರಮಾಣು ಆಯುಧಗಳನ್ನು ಹೊಂದುವುದಿಲ್ಲ ಎಂದು ಒಪ್ಪಿಕೊಂಡಿದ್ದು, ಇದಕ್ಕೆ ಪ್ರತಿಯಾಗಿ ಅಮೆರಿಕ ಇರಾನ್ ಮೇಲಿನ ನಿರ್ಬಂಧಗಳನ್ನು ಹಂತಹಂತವಾಗಿ ಸಡಿಲಗೊಳಿಸಲಿದೆ.

➤ **ಡೊನಾಲ್ಡ್ ಟ್ರಂಪ್ ಅವರ ಹೇಳಿಕೆ:** "ಇರಾನ್ ಇಸ್ಲಾಮಿಕ್ ಗಣರಾಜ್ಯದೊಂದಿಗಿನ ಒಪ್ಪಂದವು ಈಗ ಪೂರ್ಣಗೊಂಡಿದೆ. ಹರ್ಮುಜ್ ಜಲಸಂಧಿ ಯಾವುದೇ ಶುಲ್ಕವಿಲ್ಲದ (Toll-Free) ಮುಕ್ತವಾಗಲಿದೆ. ಜಗತ್ತಿನ ಹಡಗುಗಳೇ, ನಿಮ್ಮ ಎಂಜಿನ್‌ಗಳನ್ನು ಸ್ಟಾರ್ಟ್ ಮಾಡಿಕೊಳ್ಳಿ" ಎಂದು ಟ್ರಂಪ್ ತಮ್ಮ 'ಟ್ರೂತ್ ಸೋಶಿಯಲ್' (Truth Social) ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ.

➤ **ಒಪ್ಪಂದವನ್ನು ಮುಕ್ತವಾಗಿ ಸ್ವಾಗತಿಸಿದ ಪ್ರಧಾನಿ ನರೇಂದ್ರ ಮೋದಿ:** ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಈ ಐತಿಹಾಸಿಕ ಒಪ್ಪಂದವನ್ನು ಮುಕ್ತವಾಗಿ ಸ್ವಾಗತಿಸಿದ್ದಾರೆ. ಈ ಕುರಿತು ಮಾತನಾಡಿದ ಅವರು, ಈ ಮಹತ್ವದ ನಿರ್ಧಾರವು ಪಶ್ಚಿಮ ಏಷ್ಯಾ ಭಾಗದಲ್ಲಿ ಶಾಂತಿ ಮತ್ತು ಸ್ಥಿರತೆಯನ್ನು ಮರುಸ್ಥಾಪಿಸಲು ಸಹಕಾರಿಯಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಯುದ್ಧದಿಂದಾಗಿ ಇಡೀ ಜಗತ್ತಿನಾದ್ಯಂತ ತೀವ್ರ ಆರ್ಥಿಕ ಅಡಚಣೆಗಳು ಉಂಟಾಗಿದ್ದವು ಹಾಗೂ ಹಲವು ದೇಶಗಳಲ್ಲಿ ಅಮೂಲ್ಯ ಜೀವಹಾನಿಯಾಗಿತ್ತು ಎಂದು ಅವರು ವಿಷಾದಿಸಿದ್ದಾರೆ. ಒಪ್ಪಂದದ ಯಶಸ್ವಿ ಅನುಷ್ಠಾನವು ಪ್ರಾದೇಶಿಕ ಸ್ಥಿರತೆಗೆ ಕೊಡುಗೆ ನೀಡುತ್ತದೆ ಮತ್ತು ಜಾಗತಿಕ ವಾಣಿಜ್ಯ ಜಲಮಾರ್ಗಗಳನ್ನು ಸುರಕ್ಷಿತವಾಗಿಡಲು ಸಹಾಯ ಮಾಡುತ್ತದೆ ಎಂದು ಭಾರತ ಆಶಿಸುತ್ತಿರುವುದಾಗಿ ಪ್ರಧಾನಿ ತಿಳಿಸಿದ್ದಾರೆ.

➤ **ಜಾಗತಿಕ ನಾಯಕರ ಪ್ರತಿಕ್ರಿಯೆಗಳು:**

ವಿಶ್ವಸಂಸ್ಥೆ (UN): ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಅಂಟೋನಿಯೊ ಗುಟೆರೆಸ್ ಮಾತನಾಡಿ, "ಕಾಯಂ ಕದನ ವಿರಾಮ ಹಾಗೂ ಮುಂದಿನ ಮಾತುಕತೆಗಳಿಗೆ ಈ ಒಪ್ಪಂದವು ಭದ್ರವಾದ ಬುನಾದಿ ಹಾಕಿದೆ. ಇದು ಮಧ್ಯಪ್ರಾಚ್ಯದಲ್ಲಿ ಶಾಂತಿ ಸ್ಥಾಪಿಸಲು ಜಗತ್ತು ಇಟ್ಟ ಅತ್ಯಂತ ಪ್ರಮುಖ ಹೆಜ್ಜೆ" ಎಂದು ಬಣ್ಣಿಸಿದ್ದಾರೆ.

ಐರೋಪ್ಯ ಒಕ್ಕೂಟ (EU): ಐರೋಪ್ಯ ಒಕ್ಕೂಟದ ಕೌನ್ಸಿಲ್ ಅಧ್ಯಕ್ಷ ಆಂಟೋನಿಯೊ ಕೋಸ್ಟಾ ಮತ್ತು ಆಸ್ಟ್ರಿಯಾದ ಚಾನ್ಸಲರ್ ಕ್ರಿಸ್ಟಿಯನ್ ಸ್ಟಾಕರ್ ಅವರು ಯುದ್ಧದ ಅಂತ್ಯವು ಅಂತಾರಾಷ್ಟ್ರೀಯ ಕಾನೂನಿನಡಿ ಮುಕ್ತ ವ್ಯಾಪಾರಕ್ಕೆ ಸಹಕಾರಿ ಎಂದು ಆಶಿಸಿದ್ದಾರೆ. ಆದಾಗ್ಯೂ, ಲೆಬನಾನ್‌ನಲ್ಲಿ ಸಂಪೂರ್ಣ ಶಾಂತಿ ನೆಲೆಸುವವರೆಗೆ ಈ ಒಪ್ಪಂದದ ಯಶಸ್ಸು ಸವಾಲಿನದ್ದು ಎಂದು ಯೂರೋಪಿಯನ್ ಕಮಿಷನ್ ಅಧ್ಯಕ್ಷೆ ಉರ್ಸುಲಾ ವಾನ್ ಡೆರ್ ಲೇಯನ್ ಎಚ್ಚರಿಸಿದ್ದಾರೆ.

## ಬ್ರಿಟನ್‌ನಲ್ಲಿ 16 ವರ್ಷದೊಳಗಿನ ಮಕ್ಕಳಿಗೆ ಸಾಮಾಜಿಕ ಮಾಧ್ಯಮ ನಿಷೇಧ: ಪ್ರಧಾನಿ ಕೀರ್ ಸ್ಟಾರ್ಮರ್ ಮಹತ್ವದ ನಿರ್ಧಾರ!



➤ ಇಂದಿನ ಡಿಜಿಟಲ್ ಯುಗದಲ್ಲಿ ತಂತ್ರಜ್ಞಾನದ ಅತಿಯಾದ ಬಳಕೆ ಮತ್ತು ಸಾಮಾಜಿಕ ಮಾಧ್ಯಮಗಳು ಮಕ್ಕಳ ಮಾನಸಿಕ

ಆರೋಗ್ಯದ ಮೇಲೆ ಬೀರುತ್ತಿರುವ ದುಷ್ಪರಿಣಾಮಗಳನ್ನು ತಡೆಯಲು ಬ್ರಿಟನ್ ಸರ್ಕಾರವು ಅತ್ಯಂತ ಕಠಿಣ ನಿರ್ಧಾರವೊಂದನ್ನು ಕೈಗೊಳ್ಳಲು ಸಜ್ಜಾಗಿದೆ. ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್ ಅವರು ಶೀಘ್ರದಲ್ಲೇ ಯುವ ಹದಿಹರೆಯದವರಿಗೆ (Teens) ಸಾಮಾಜಿಕ ಮಾಧ್ಯಮಗಳನ್ನು ಸಂಪೂರ್ಣವಾಗಿ ನಿಷೇಧಿಸುವ ಮಹತ್ವದ ಘೋಷಣೆ ಮಾಡಲಿದ್ದಾರೆ. ಮಕ್ಕಳನ್ನು ಆನ್‌ಲೈನ್‌ನ ಹಾನಿಕಾರಕ ಅಂಶಗಳು ಹಾಗೂ ಅತಿಯಾದ ಸ್ಕ್ರೀನ್ ಸಮಯದಿಂದ (Screen Time) ರಕ್ಷಿಸುವುದು ಈ ಕಾನೂನಿನ ಮುಖ್ಯ ಉದ್ದೇಶವಾಗಿದೆ.

**➤ ಹೊಸ ನಿಯಮಗಳೇನು?**

ಪ್ರಮುಖ ಆಪ್‌ಗಳ ನಿಷೇಧ: ಹೊಸ ನಿಯಮ ಜಾರಿಗೆ ಬಂದರೆ 16 ವರ್ಷದೊಳಗಿನ ಮಕ್ಕಳು ಟಿಕ್‌ಟಾಕ್ (TikTok), ಇನ್‌ಸ್ಟಾಗ್ರಾಮ್ (Instagram), ಫೇಸ್‌ಬುಕ್ (Facebook) ಮತ್ತು ಯೂಟ್ಯೂಬ್ (YouTube) ನಂತಹ ಪ್ರಮುಖ ಸಾಮಾಜಿಕ ಜಾಲತಾಣಗಳನ್ನು ಬಳಸುವಂತಿಲ್ಲ.

ಲೈಟ್ಸ್ ಔಟ್/ನೈಟ್ ಕರ್ಫ್ಯೂ: ತಡರಾತ್ರಿಯವರೆಗೆ ಮಕ್ಕಳು ಮೊಬೈಲ್ ಫೋನ್ ಬಳಸುವುದನ್ನು ತಡೆಯಲು ಡಿಜಿಟಲ್ ಕರ್ಫ್ಯೂ ವಿಧಿಸುವ ಹಾಗೂ ಗೇಮಿಂಗ್ ಆಪ್‌ಗಳ ಕೆಲವು ವ್ಯಸನಕಾರಿ ವೈಶಿಷ್ಟ್ಯಗಳನ್ನು (Features) ನಿರ್ಬಂಧಿಸುವ ಯೋಜನೆಯೂ ಸರ್ಕಾರದ ಮುಂದಿದೆ.

ಜಾಗತಿಕ ಸಾಲಿನಲ್ಲಿ ಬ್ರಿಟನ್: ಮಕ್ಕಳ ಆನ್‌ಲೈನ್ ಸುರಕ್ಷತೆಯನ್ನು ಬಿಗಿಗೊಳಿಸಲು ಈಗಾಗಲೇ ಆಸ್ಟ್ರೇಲಿಯಾ, ಕೆನಡಾ ಮತ್ತು ಬ್ರೆಜಿಲ್ ನಂತಹ ದೇಶಗಳು ಕಠಿಣ ಕಾನೂನುಗಳನ್ನು ಜಾರಿಗೆ ತಂದಿವೆ. ಈಗ ಬ್ರಿಟನ್ ಕೂಡ ಈ ಪ್ರಮುಖ ದೇಶಗಳ ಸಾಲಿಗೆ ಸೇರಲಿದೆ.

➤ ಜಾಗತಿಕ ಮಟ್ಟದಲ್ಲಿ ಪರ-ವಿರೋಧ ಚರ್ಚೆ

ಅಮೆರಿಕದ ಕಳವಳ: ಇಂತಹ ಕಠಿಣ ನಿಯಮಗಳು ಜನರ 'ಮುಕ್ತ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ' (Freedom of Speech) ಧಕ್ಕೆ ಉಂಟುಮಾಡಬಹುದು ಮತ್ತು ತಂತ್ರಜ್ಞಾನ ಕಂಪನಿಗಳ (Tech Giants) ಮೇಲೆ ಹೆಚ್ಚಿನ ಆರ್ಥಿಕ ಹಾಗೂ ತಾಂತ್ರಿಕ ಹೊರೆಯನ್ನು ಉಂಟುಮಾಡಬಹುದು ಎಂದು ಅಮೆರಿಕ ಆತಂಕ ವ್ಯಕ್ತಪಡಿಸಿದೆ.

ತಜ್ಞರ ಎಚ್ಚರಿಕೆ: ಸೈಬರ್ ಸುರಕ್ಷತಾ ತಜ್ಞರ ಪ್ರಕಾರ, ಇಂತಹ ಬಹಿರಂಗ ನಿಷೇಧಗಳಿಂದಾಗಿ ಮಕ್ಕಳು ಪರ್ಯಾಯ ಮಾರ್ಗಗಳ ಮೂಲಕ ಇನ್ನೂ ಹೆಚ್ಚು ಅಪಾಯಕಾರಿ ಹಾಗೂ ನಿಯಂತ್ರಣವಿಲ್ಲದ ವೆಬ್‌ಸೈಟ್‌ಗಳತ್ತ (Dark Web/Unregulated Sites) ಮುಖ ಮಾಡುವ ಸಾಧ್ಯತೆಯಿದೆ.

➤ ವಿರೋಧಗಳ ನಡುವೆಯೂ ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್ ತಮ್ಮ ನಿರ್ಧಾರವನ್ನು ಸಮರ್ಥಿಸಿಕೊಂಡಿದ್ದು, "ಇದು ಮಕ್ಕಳ ಸುರಕ್ಷತೆಗಾಗಿ ಜಗತ್ತಿಗೆ ಮಾದರಿಯಾಗುವಂತಹ ಹೆಜ್ಜೆ" ಎಂದು ಹೇಳಿದ್ದಾರೆ.

## ಭಾರತೀಯ ರೈಲ್ವೆಯಿಂದ 'ಕವಚ್ 4.0' ಸುರಕ್ಷತಾ ವ್ಯವಸ್ಥೆ ವಿಸ್ತರಣೆ




➤ ಭಾರತೀಯ ರೈಲ್ವೆಯು ತನ್ನದೇ ಆದ ಸ್ವದೇಶಿ ರೈಲು ಅಪಘಾತ ತಡೆಗಟ್ಟುವ ವ್ಯವಸ್ಥೆಯಾದ 'ಕವಚ್ 4.0' (Kavach 4.0) ಅನ್ನು ದೇಶದ ವಿವಿಧ ರೈಲ್ವೆ ವಲಯಗಳಲ್ಲಿ ವಿಸ್ತರಿಸಲು ಜೂನ್ 15, 2026 ರಂದು ₹1,200 ಕೋಟಿಗೂ ಅಧಿಕ ಮೊತ್ತದ ಯೋಜನೆಗಳಿಗೆ ಅನುಮೋದನೆ ನೀಡಿದೆ.

**➤ ಕವಚ್ (KAVACH) ವ್ಯವಸ್ಥೆ:** ಕವಚ್ ಎಂಬುದು ಭಾರತೀಯ ರೈಲ್ವೆಯು ಸಂಪೂರ್ಣವಾಗಿ ಭಾರತದಲ್ಲೇ ಅಭಿವೃದ್ಧಿಪಡಿಸಿರುವ ಸ್ವಯಂಚಾಲಿತ ರೈಲು ರಕ್ಷಣೆ (Automatic Train Protection - ATP) ವ್ಯವಸ್ಥೆಯಾಗಿದೆ. ಇದನ್ನು ಮೊದಲು 'ಟ್ರೈನ್ ಕೊಲಿಷನ್ ಅವಾಯ್ಡೆನ್ಸ್ ಸಿಸ್ಟಮ್' (TCAS) ಎಂದು ಕರೆಯಲಾಗುತ್ತಿತ್ತು, ನಂತರ ಇದಕ್ಕೆ 'ಕವಚ್' (ಅಂದರೆ ರಕ್ಷಾ ಕವಚ) ಎಂದು ಮರುನಾಮಕರಣ ಮಾಡಲಾಯಿತು.

➤ ಭಾರತೀಯ ರೈಲ್ವೆಯ ಅಡಿಯಲ್ಲಿ ಬರುವ ಲಕ್ನೋದ ಸಂಶೋಧನಾ ವಿನ್ಯಾಸಗಳು ಮತ್ತು ಮಾನದಂಡಗಳ ಸಂಸ್ಥೆ (RDSO - Research Designs and Standards Organisation) ಈ ತಂತ್ರಜ್ಞಾನವನ್ನು ಸ್ವದೇಶಿ ಉದ್ಯಮಗಳ ಸಹಯೋಗದೊಂದಿಗೆ ಅಭಿವೃದ್ಧಿಪಡಿಸಿದೆ. ಇದು ಜಾಗತಿಕ ಸುರಕ್ಷತಾ ಮಾನದಂಡವಾದ SIL-4 (Safety Integrity Level-4) ಪ್ರಮಾಣೀಕರಣವನ್ನು ಹೊಂದಿದೆ.

**➤ ಪ್ರಸ್ತುತ ವಿಸ್ತರಣೆಯ ಪ್ರಮುಖ ವಿವರಗಳು (ಜೂನ್ 2026 ರ ಅಪ್ಡೇಟ್):**

ಅಹಮದಾಬಾದ್ ವಿಭಾಗ (ಪಶ್ಚಿಮ ರೈಲ್ವೆ): ಪಶ್ಚಿಮ ರೈಲ್ವೆಯ ಅಹಮದಾಬಾದ್ ವಿಭಾಗದ ವ್ಯಾಪ್ತಿಯಲ್ಲಿ 48 ಬ್ಲಾಕ್ ಸೆಕ್ಷನ್ ಗಳನ್ನು ಒಳಗೊಂಡ 598 ಕಿಲೋಮೀಟರ್ ರೈಲು ಮಾರ್ಗದಲ್ಲಿ ₹140 ಕೋಟಿ ವೆಚ್ಚದಲ್ಲಿ ಕವಚ್ ವ್ಯವಸ್ಥೆಯನ್ನು ವಿಸ್ತರಿಸಲಾಗುತ್ತಿದ್ದು, ಇದು ಗುಜರಾತ್‌ನ ಉಳಿದ ಭಾಗಗಳಿಗೆ ಸುರಕ್ಷತೆ ಒದಗಿಸಲಿದೆ.

ಅಂಬಾಲಾ ವಿಭಾಗ (ಉತ್ತರ ರೈಲ್ವೆ): ಉತ್ತರ ರೈಲ್ವೆಯ ಅಂಬಾಲಾ ವಿಭಾಗದಲ್ಲಿ ಹರಿಯಾಣ, ಪಂಜಾಬ್ ಮತ್ತು ಹಿಮಾಚಲ ಪ್ರದೇಶ ರಾಜ್ಯಗಳ ವ್ಯಾಪ್ತಿಗೆ ಬರುವ 811 ಕಿಲೋಮೀಟರ್ ಉದ್ದದ ರೈಲು ಮಾರ್ಗಕ್ಕೆ ₹201 ಕೋಟಿ ವೆಚ್ಚದಲ್ಲಿ ಈ ಸುಧಾರಿತ ಸುರಕ್ಷತಾ ತಂತ್ರಜ್ಞಾನವನ್ನು ಅಳವಡಿಸಲಾಗುತ್ತಿದೆ.

ದಕ್ಷಿಣ ವಲಯ: ದಕ್ಷಿಣ ವಲಯದ ಅತಿ ಹೆಚ್ಚು ದಟ್ಟಣೆಯ ಮಾರ್ಗಗಳಾಗಿರುವ ಕರ್ನಾಟಕ, ತಮಿಳುನಾಡು ಮತ್ತು ಕೇರಳ ರಾಜ್ಯಗಳ ಒಟ್ಟು 548 ಕಿಲೋಮೀಟರ್ ರೈಲು ಮಾರ್ಗದಲ್ಲಿ ಕವಚ್ ವ್ಯವಸ್ಥೆಯನ್ನು ಅಳವಡಿಸಲು ₹300 ಕೋಟಿಗೂ ಅಧಿಕ ಬೃಹತ್ ಮೊತ್ತವನ್ನು ಮೀಸಲಿಡಲಾಗಿದೆ.

**➤ ಕವಚ್ 4.0 ನ ಪ್ರಮುಖ ತಾಂತ್ರಿಕ ವೈಶಿಷ್ಟ್ಯಗಳು ಮತ್ತು ಸುಧಾರಣೆಗಳು:**

**ಮೈಕ್ರೋಪ್ರೊಸೆಸರ್ ಮತ್ತು ಜಿಪಿಎಸ್ ಬಳಕೆ**: ಇದು ರೈಲಿನ ನಿಖರವಾದ ಸ್ಥಾನ (Location Accuracy), ವೇಗ ಮತ್ತು ಸಿಗ್ನಲ್ ಸ್ಥಿತಿಯನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡಲು ಜಿಪಿಎಸ್ ಮತ್ತು ರೇಡಿಯೋ ಸಂವಹನವನ್ನು ಬಳಸುತ್ತದೆ.

**SPAD ತಡೆಗಟ್ಟುವಿಕೆ:** ಲೋಕೋ ಪೈಲಟ್ (ರೈಲು ಚಾಲಕ) ಯಾವುದೇ ಕಾರಣದಿಂದ ಕೆಂಪು ಸಿಗ್ನಲ್ ಅನ್ನು ಗಮನಿಸದೆ ದಾಟಿದರೆ (Signal Passing at Danger - SPAD), ಕವಚ್ ವ್ಯವಸ್ಥೆಯು ಸ್ವಯಂಚಾಲಿತವಾಗಿ ಬ್ರೇಕ್ ಅನ್ವಯಿಸಿ ರೈಲನ್ನು ನಿಲ್ಲಿಸುತ್ತದೆ.

**ಮುಖಾಮುಖಿ ಢಿಕ್ಕಿ ತಡೆ (Collision Avoidance):** ಒಂದೇ ಹಳಿ (Track) ಮೇಲೆ ಎದುರೆದುರಾಗಿ ಅಥವಾ ಹಿಂದಿನಿಂದ ಎರಡು ರೈಲುಗಳು ಬಂದರೆ, ಕವಚ್ ತಕ್ಷಣವೇ ಕಾರ್ಯಪ್ರವೃತ್ತವಾಗಿ ಅಪಘಾತವನ್ನು ತಪ್ಪಿಸುತ್ತದೆ.

**ಪ್ರತಿಕೂಲ ಹವಾಮಾನದಲ್ಲಿ ಸಹಕಾರಿ:** ಚಳಿಗಾಲದಲ್ಲಿ ದಟ್ಟವಾದ ಮಂಜು (Fog) ಕವಿದಾಗ ಸಿಗ್ನಲ್‌ಗಳು ಕಾಣಿಸದಿದ್ದರೂ, ಇದು ಲೋಕೋ ಪೈಲಟ್‌ಗಳಿಗೆ ಇನ್-ಕ್ಯಾಬ್ ಡಿಸ್ಪ್ಲೇ (In-cab display) ಮೂಲಕ ಸಿಗ್ನಲ್ ಮಾಹಿತಿಯನ್ನು ನಿಖರವಾಗಿ ತೋರಿಸುತ್ತದೆ.

**ಸ್ವಯಂಚಾಲಿತ ವಿಸ್ಲಿಂಗ್ (Automatic Whistling):** ರೈಲ್ವೆ ಕ್ರಾಸಿಂಗ್ ಗೇಟ್‌ಗಳು ಬಂದಾಗ ರೈಲು ಸ್ವಯಂಚಾಲಿತವಾಗಿ ಹಾರ್ನ್ ಮಾಡುತ್ತದೆ. ಜೊತೆಗೆ ತುರ್ತು ಸಂದರ್ಭಗಳಿಗಾಗಿ SOS ಸೌಲಭ್ಯವನ್ನು ಹೊಂದಿದೆ.

## NEET UG ಮರುಪರೀಕ್ಷೆ ಹಿನ್ನೆಲೆ: ದೇಶಾದ್ಯಂತ ಟೆಲಿಗ್ರಾಮ್ (Telegram) ಆಕ್ಸೆಸ್ ತಾತ್ಕಾಲಿಕ ಬ್ಲಾಕ್!




➤ ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆ (NEET-UG 2026) ಮರುಪರೀಕ್ಷೆಯ ಹಿನ್ನೆಲೆಯಲ್ಲಿ, ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು (MeitY) ದೇಶಾದ್ಯಂತ ಪ್ರಮುಖ ಸಾಮಾಜಿಕ ಮಾಧ್ಯಮ ಮತ್ತು ಮೆಸೇಜಿಂಗ್ ಆ್ಯಪ್ ಆದ ಟೆಲಿಗ್ರಾಮ್ (Telegram) ಬಳಕೆಯನ್ನು ತಾತ್ಕಾಲಿಕವಾಗಿ ನಿರ್ಬಂಧಿಸಿದೆ. ಜೂನ್ 21 ರಂದು ನಿಗದಿಯಾಗಿರುವ NEET UG ಮರುಪರೀಕ್ಷೆಯ ಪಾರದರ್ಶಕತೆ ಮತ್ತು ಭದ್ರತೆಯನ್ನು ಕಾಯ್ದುಕೊಳ್ಳಲು ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯ (NTA) ಶಿಫಾರಸಿನ ಮೇರೆಗೆ ಈ ಕಠಿಣ ಕ್ರಮ ಕೈಗೊಳ್ಳಲಾಗಿದೆ.

ನಿರ್ಬಂಧದ ಅವಧಿ: 2026ರ ಜೂನ್ 22ರ ವರೆಗೆ ಭಾರತದಾದ್ಯಂತ ಟೆಲಿಗ್ರಾಮ್ ಆ್ಯಪ್ ಆಕ್ಸೆಸ್ ಅನ್ನು ಸಂಪೂರ್ಣವಾಗಿ ನಿರ್ಬಂಧಿಸಲಾಗಿರುತ್ತದೆ.

ಮೆಸೇಜ್ ಎಡಿಟಿಂಗ್ ಫೀಚರ್ ಬ್ಯಾನ್: ಕೇವಲ ಆ್ಯಪ್ ನಿರ್ಬಂಧ ಮಾತ್ರವಲ್ಲದೆ, ಈಗಾಗಲೇ ಪೋಸ್ಟ್ ಮಾಡಲಾದ ಸಂದೇಶಗಳನ್ನು ಎಡಿಟ್ ಮಾಡುವ (Message Editing Option) ಫೀಚರ್ ಅನ್ನು ಸಹ ಜೂನ್ 30, 2026 ರವರೆಗೆ ಭಾರತದಲ್ಲಿ ಸ್ಥಗಿತಗೊಳಿಸಲು ಸೂಚಿಸಲಾಗಿದೆ.

ಉದ್ದೇಶ: ಪರೀಕ್ಷಾ ಪ್ರಶ್ನೆಪತ್ರಿಕೆ ಸೋರಿಕೆ, ನಕಲಿ ಕೀ ಉತ್ತರಗಳ ಹರಡುವಿಕೆ ಮತ್ತು ಸಾಮಾಜಿಕ ಜಾಲತಾಣಗಳ ಮೂಲಕ ನಡೆಯುವ ದುಷ್ಕೃತ್ಯಗಳನ್ನು ತಡೆಯುವುದು.

➤ **ಟೆಲಿಗ್ರಾಮ್ ನಿರ್ಬಂಧಕ್ಕೆ ಕಾರಣ:** ಕಳೆದ ಕೆಲವು ಪರೀಕ್ಷೆಗಳ ಸಂದರ್ಭದಲ್ಲಿ ಟೆಲಿಗ್ರಾಮ್ ಚಾನೆಲ್‌ಗಳು ಮತ್ತು ಗ್ರೂಪ್‌ಗಳ ಮೂಲಕ ಪ್ರಶ್ನೆಪತ್ರಿಕೆಗಳು ಹಾಗೂ ಸುಳ್ಳು ಸುದ್ದಿಗಳನ್ನು ವ್ಯಾಪಕವಾಗಿ ಹಂಚಿಕೊಳ್ಳಲಾಗಿತ್ತು ಎಂಬ ಆರೋಪ ಕೇಳಿಬಂದಿತ್ತು. ಮರುಪರೀಕ್ಷೆಯ ಸಂದರ್ಭದಲ್ಲಿ ಯಾವುದೇ ಅಕ್ರಮಗಳಿಗೆ ಅವಕಾಶ ನೀಡಬಾರದು ಮತ್ತು ಪರೀಕ್ಷಾ ಪ್ರಕ್ರಿಯೆಯ ಮೇಲಿನ ಸಾರ್ವಜನಿಕರ ವಿಶ್ವಾಸವನ್ನು ಉಳಿಸಬೇಕು ಎಂಬ ಮುನ್ನೆಚ್ಚರಿಕಾ ಕ್ರಮವಾಗಿ ಕೇಂದ್ರ ಸರ್ಕಾರ ಈ ಮಹತ್ವದ ನಿರ್ಧಾರ ತಳೆದಿದೆ. ಟೆಲಿಗ್ರಾಮ್‌ನ ಈ ತಾತ್ಕಾಲಿಕ ನಿರ್ಬಂಧವು ಪರೀಕ್ಷೆಯನ್ನು ಹೆಚ್ಚು ಸುರಕ್ಷಿತ ವಾತಾವರಣದಲ್ಲಿ ನಡೆಸಲು ಸಹಕಾರಿಯಾಗಲಿದೆ ಎಂದು NTA ಪ್ರಕಟಣೆಯಲ್ಲಿ ತಿಳಿಸಿದೆ.

# 17 June 2026

## ಜಗತ್ತಿನ 5ನೇ ಅತ್ಯಂತ ಮೌಲ್ಯಯುತ ಸಂಸ್ಥೆಯಾಗಿ ಹೊರಹೊಮ್ಮಿದ ಸ್ಪೇಸ್‌ಎಕ್ಸ್ (SpaceX)



➤ ಪ್ರಸಿದ್ಧ ಉದ್ಯಮಿ ಇಲಾನ್ ಮಸ್ಕ್ (Elon Musk) ಅವರ ಮಾಲೀಕತ್ವದ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯಾದ ಸ್ಪೇಸ್ ಎಕ್ಸ್ (SpaceX), ಜಗತ್ತಿನ 5ನೇ ಅತ್ಯಂತ ಮೌಲ್ಯಯುತ ಕಂಪನಿಯಾಗಿ ಹೊರಹೊಮ್ಮಿದೆ. ಜೂನ್ 16, 2026 ರಂದು ನಡೆದ ಷೇರು ಮಾರುಕಟ್ಟೆಯ ವಹಿವಾಟಿನಲ್ಲಿ ಸ್ಪೇಸ್‌ಎಕ್ಸ್ ಸಂಸ್ಥೆಯು ಇ-ಕಾಮರ್ಸ್ ದೈತ್ಯ ಅಮೆಜಾನ್ (Amazon) ಕಂಪನಿಯನ್ನು ಹಿಂದಿಕ್ಕಿ ಈ ಐತಿಹಾಸಿಕ ಸಾಧನೆ ಮಾಡಿದೆ.

➤ ಇತ್ತೀಚೆಗಷ್ಟೇ ಅಂದರೆ ಜೂನ್ 12, 2026 ರಂದು ಅಮೆರಿಕದ ಪ್ರಸಿದ್ಧ ತಂತ್ರಜ್ಞಾನ ವಿನಿಮಯ ಕೇಂದ್ರವಾದ ನಾಸ್ಡಾಕ್ (Nasdaq) ಶೇರು ಮಾರುಕಟ್ಟೆಯಲ್ಲಿ ಸ್ಪೇಸ್‌ಎಕ್ಸ್ ತನ್ನ ಐಪಿಒ (IPO) ಮೂಲಕ ಪಟ್ಟಿ ಮಾಡಲ್ಪಟ್ಟಿತು. ಈ ಕಂಪನಿಯ ಷೇರು ಮಾರುಕಟ್ಟೆಯ ಸಂಕೇತ (Ticker Symbol) SPCX ಆಗಿದೆ.

➤ **ಪ್ರಮುಖ ಹೂಡಿಕೆ ಮತ್ತು ಮಾರುಕಟ್ಟೆ ಮೌಲ್ಯೀಕರಣ:**

ಮಾರುಕಟ್ಟೆ ಮೌಲ್ಯ (Market Valuation): ಜೂನ್ 16 ರಂದು ಸ್ಪೇಸ್‌ಎಕ್ಸ್ ಸಂಸ್ಥೆಯ ಮಾರುಕಟ್ಟೆ ಮೌಲ್ಯವು ಬರೋಬ್ಬರಿ 2.97 ಟ್ರಿಲಿಯನ್ ಡಾಲರ್ ತಲುಪಿತ್ತು. ವಹಿವಾಟಿನ ಅಂತ್ಯಕ್ಕೆ ಇದು 2.66 ಟ್ರಿಲಿಯನ್ ಡಾಲರ್‌ಗೆ ಬಂದು ನಿಂತಿತು. ಇದೇ ಸಮಯದಲ್ಲಿ ಅಮೆಜಾನ್ ಕಂಪನಿಯ ಮೌಲ್ಯವು 2.65 ಟ್ರಿಲಿಯನ್ ಡಾಲರ್ ಆಗಿತ್ತು.

ಐತಿಹಾಸಿಕ ಐಪಿಒ (IPO): ಜೂನ್ 12 ರಂದು ಪ್ರತಿ ಷೇರಿಗೆ 135 ಡಾಲರ್ ಆರಂಭಿಕ ಬೆಲೆಯೊಂದಿಗೆ ಸ್ಪೇಸ್‌ಎಕ್ಸ್ ಮಾರುಕಟ್ಟೆ ಪ್ರವೇಶಿಸಿತು. ಇದರ ಒಟ್ಟು ಐಪಿಒ ಮೊತ್ತವು 85.7 ಬಿಲಿಯನ್ ಡಾಲರ್ ತಲುಪುವ ಮೂಲಕ ಇತಿಹಾಸದಲ್ಲೇ ಅತಿ ದೊಡ್ಡ ಐಪಿಒ ಆಗಿ ದಾಖಲಾಗಿದೆ.

ಹೊಸ ಸ್ವಾಧೀನ ಪ್ರಕ್ರಿಯೆ: ಇದೇ ಸಂದರ್ಭದಲ್ಲಿ ಸ್ಪೇಸ್‌ಎಕ್ಸ್ ಸಂಸ್ಥೆಯು ಕೃತಕ ಬುದ್ಧಿಮತ್ತೆ (AI) ಕೋಡಿಂಗ್ ಸ್ಟಾರ್ಟ್‌ಅಪ್ ಆದ 'ಕರ್ಸರ್' (Cursor) ಕಂಪನಿಯನ್ನು 60 ಬಿಲಿಯನ್ ಡಾಲರ್ ಮೊತ್ತಕ್ಕೆ ಸ್ವಾಧೀನಪಡಿಸಿಕೊಳ್ಳಲು ಒಪ್ಪಂದ ಮಾಡಿಕೊಂಡಿದೆ.

➤ ಸ್ಪೇಸ್‌ಎಕ್ಸ್ ಸಂಸ್ಥೆಯು ಕೇವಲ ಬಾಹ್ಯಾಕಾಶ ಕ್ಷೇತ್ರಕ್ಕೆ ಸೀಮಿತವಾಗಿರದೆ ಸ್ಟಾರ್‌ಲಿಂಕ್ (Starlink) ಸ್ಯಾಟಲೈಟ್ ಇಂಟರ್ನೆಟ್ ಮತ್ತು ಇತ್ತೀಚಿನ ಎಐ (AI) ತಂತ್ರಜ್ಞಾನಗಳ ಮೇಲಿನ ಹೂಡಿಕೆಯಿಂದಾಗಿ ಜಾಗತಿಕ ಮಾರುಕಟ್ಟೆಯಲ್ಲಿ ಅತ್ಯಂತ ವೇಗವಾಗಿ ಬೆಳೆಯುತ್ತಿದೆ.

## G7 ಶೃಂಗಸಭೆ 2026: ಕೆನಡಾ, ಯುಕೆ ಮತ್ತು ಯುಎಇ ನಾಯಕರೊಂದಿಗೆ ಪ್ರಧಾನಿ ಮೋದಿ ದ್ವಿಪಕ್ಷೀಯ ಮಾತುಕತೆ




➤ ಫ್ರಾನ್ಸ್‌ನ ಇವಿಯನ್ (Evian) ನಗರದಲ್ಲಿ ನಡೆಯುತ್ತಿರುವ ಪ್ರತಿಷ್ಠಿತ ಜಿ7 (G7 Summit) ಶೃಂಗಸಭೆಯ ಸಂದರ್ಭದಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಜಾಗತಿಕ ನಾಯಕರೊಂದಿಗೆ ಮಹತ್ವದ ದ್ವಿಪಕ್ಷೀಯ ಮಾತುಕತೆಗಳನ್ನು ನಡೆಸಿದ್ದಾರೆ. ಜೂನ್ 16, 2026 ರಂದು ನಡೆದ ಈ ಸರಣಿ ಸಭೆಗಳಲ್ಲಿ ಕೆನಡಾ, ಯುನೈಟೆಡ್ ಕಿಂಗ್‌ಡಮ್ (UK) ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್ (UAE) ದೇಶಗಳ ಮುಖ್ಯಸ್ಥರೊಂದಿಗೆ ವ್ಯಾಪಾರ, ಇಂಧನ ಭದ್ರತೆ, ತಂತ್ರಜ್ಞಾನ ಮತ್ತು ಪ್ರಾದೇಶಿಕ ರಕ್ಷಣೆಯ ಕುರಿತು ವ್ಯಾಪಕ ಚರ್ಚೆಗಳು ನಡೆದಿವೆ.

➤ **ಭಾರತ - ಯುಕೆ (India-UK) ದ್ವಿಪಕ್ಷೀಯ ಮಾತುಕತೆ:** ಪ್ರಧಾನಿ ನರೇಂದ್ರ ಮೋದಿ ಅವರು ಬ್ರಿಟನ್ ಪ್ರಧಾನಿ ಕೈರ್ ಸ್ಟಾರ್ಮರ್ (Keir Starmer) ಅವರೊಂದಿಗೆ ಮಹತ್ವದ ಸಭೆ ನಡೆಸಿದರು.

ಮುಕ್ತ ವ್ಯಾಪಾರ ಒಪ್ಪಂದ (FTA): ಭಾರತ ಮತ್ತು ಯುಕೆ ನಡುವೆ ಜುಲೈ 2025 ರಲ್ಲಿ ಸಹಿ ಮಾಡಲಾದ ಮುಕ್ತ ವ್ಯಾಪಾರ ಒಪ್ಪಂದವನ್ನು ಶೀಘ್ರದಲ್ಲೇ ಕಾರ್ಯಗತಗೊಳಿಸುವ ಕುರಿತು ಉಭಯ ನಾಯಕರು ಚರ್ಚಿಸಿದರು.

ಜಾಗತಿಕ ಶಾಂತಿ: ಇತ್ತೀಚೆಗೆ ಅಮೆರಿಕ ಮತ್ತು ಇರಾನ್ ನಡುವೆ ಏರ್ಪಟ್ಟ ಶಾಂತಿ ಒಪ್ಪಂದವನ್ನು ನಾಯಕರು ಸ್ವಾಗತಿಸಿದರು. ಹಾರ್ಮುಜ್ ಜಲಸಂಧಿಯಲ್ಲಿ (Strait of Hormuz) ಯಾವುದೇ ಸುಂಕವಿಲ್ಲದೆ ಮುಕ್ತ ಹಡಗು ಸಂಚಾರಕ್ಕೆ ಅವಕಾಶ ಇರಬೇಕು ಎಂದು ಸಹಮತ ವ್ಯಕ್ತಪಡಿಸಿದರು.

➤ **ಭಾರತ - ಕೆನಡಾ (India-Canada) ಬಾಂಧವ್ಯಕ್ಕೆ ಹೊಸ ವೇಗ:** ಪ್ರಧಾನಿ ಮೋದಿ ಅವರು ಕೆನಡಾದ ಪ್ರಧಾನಿ ಮಾರ್ಕ್ ಕಾರ್ನಿ (Mark Carney) ಅವರೊಂದಿಗೆ ದ್ವಿಪಕ್ಷೀಯ ಸಭೆ ನಡೆಸಿದರು.

ಚರ್ಚೆಯ ವಿಷಯಗಳು: ಉಭಯ ದೇಶಗಳ ನಡುವಿನ ವ್ಯಾಪಾರ, ಇಂಧನ, ನಾವೀನ್ಯತೆ (Innovation), ಶಿಕ್ಷಣ ಮತ್ತು ಉಭಯ ದೇಶಗಳ ಜನರ ನಡುವಿನ ಬಾಂಧವ್ಯ ವೃದ್ಧಿಯ ಬಗ್ಗೆ ಮಾತುಕತೆ ನಡೆಸಲಾಯಿತು.

ಮುಂದಿನ ಯೋಜನೆ: ಈ ವರ್ಷದ ಅಂತ್ಯದೊಳಗೆ ಪ್ರಧಾನಿ ಮೋದಿ ಅವರು ಕೆನಡಾಕ್ಕೆ ಭೇಟಿ ನೀಡುವ ಗುರಿ ಹೊಂದಿದ್ದು, ಶೀಘ್ರದಲ್ಲೇ ದ್ವಿಪಕ್ಷೀಯ ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕುವ ಸಾಧ್ಯತೆ ಇದೆ.

➤ **ಭಾರತ - ಯುಎಇ (India-UAE) ವ್ಯೂಹಾತ್ಮಕ ಪಾಲುದಾರಿಕೆ:** ಯುಎಇ ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಜಾಯೆದ್ ಅಲ್ ನಹ್ಯಾನ್ (MbZ) ಅವರೊಂದಿಗೆ ಪ್ರಧಾನಿ ಮೋದಿ ಮಾತುಕತೆ ನಡೆಸಿದರು.

ಪಶ್ಚಿಮ ಏಷ್ಯಾ ರಕ್ಷಣೆ: ಪಶ್ಚಿಮ ಏಷ್ಯಾದಲ್ಲಿ ಶಾಂತಿ ಮತ್ತು ಸ್ಥಿರತೆಯನ್ನು ಕಾಪಾಡುವ ಕುರಿತು ಚರ್ಚಿಸಲಾಯಿತು.

ವಲಸಿಗರ ರಕ್ಷಣೆ: ಯುಎಇ ನಲ್ಲಿರುವ ಭಾರತೀಯ ಸಮುದಾಯದ ರಕ್ಷಣೆಗಾಗಿ ಮೋದಿ ಅವರು ಯುಎಇ ಅಧ್ಯಕ್ಷರಿಗೆ ಧನ್ಯವಾದ ಅರ್ಪಿಸಿದರು.

ಇಂಧನ ಮತ್ತು ರಕ್ಷಣೆ: ಭಾರತದ ಆಯಕಟ್ಟಿನ ತೈಲ ಸಂಗ್ರಹಾಗಾರಗಳು (Strategic Petroleum Reserves), ಎಲ್ಎನ್‌ಜಿ (LNG) ಮತ್ತು ಎಲ್‌ಪಿಜಿ (LPG) ಅಭಿವೃದ್ಧಿಯಲ್ಲಿ ಯುಎಇ ಭಾಗಿಯಾಗಲು ಒಪ್ಪಿಕೊಂಡಿದೆ.

## ದೇಶದ ಎಲ್ಲಾ 28 ರಾಜ್ಯಗಳಲ್ಲಿ ಭೀಕರ ವಿತ್ತೀಯ ಕೊರತೆ! ಸಾರ್ವಜನಿಕ ಸಾಲದ ಹೊರೆ ₹90.51 ಲಕ್ಷ ಕೋಟಿಗೆ ಏರಿಕೆ




➤ ದೇಶದ ಒಕ್ಕೂಟ ವ್ಯವಸ್ಥೆಯಲ್ಲಿನ ಎಲ್ಲಾ 28 ರಾಜ್ಯಗಳು ಪ್ರಸ್ತುತ ತೀವ್ರ ಆರ್ಥಿಕ ಒತ್ತಡವನ್ನು ಎದುರಿಸುತ್ತಿದ್ದು, ಭಾರೀ ವಿತ್ತೀಯ ಕೊರತೆಯ (Fiscal Deficit) ಸುಳಿಗೆ ಸಿಲುಕಿವೆ. ಭಾರತದ ಮಹಾಲೇಖಪಾಲರ (CAG) 'ರಾಜ್ಯಗಳ ಹಣಕಾಸು ಸ್ಥಿತಿಗತಿ 2024-25' ವರದಿಯು ಈ ಆಘಾತಕಾರಿ ಸತ್ಯವನ್ನು ಬಹಿರಂಗಪಡಿಸಿದೆ.ಭಾರತದ ಸಿಎಜಿ (CAG) ಕೆ. ಸಂಜಯ್ ಮೂರ್ತಿ ಅವರು ಬಿಡುಗಡೆ ಮಾಡಿರುವ ಈ ವರದಿಯು, ರಾಜ್ಯ ಸರ್ಕಾರಗಳ ಆರ್ಥಿಕ ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ಸುಧಾರಿಸಲು ನೀತಿ ನಿರೂಪಕರು ಹಾಗೂ ಸಂಶೋಧಕರಿಗೆ ದಿಕ್ಸೂಚಿಯಾಗಲಿದೆ.

➤ ಸಾಲದ ಸುಳಿಯಲ್ಲಿ ರಾಜ್ಯಗಳು: ವರದಿಯ ಪ್ರಕಾರ, ರಾಜ್ಯಗಳ ತೆರಿಗೆ ಮತ್ತು ತೆರಿಗೆಯೇತರ ಆದಾಯ ಸಂಗ್ರಹಣೆ ಉತ್ತಮಗೊಂಡಿದ್ದರೂ ಸಹ, ದಿನೇದಿನೇ ಹೆಚ್ಚುತ್ತಿರುವ ಖರ್ಚುಗಳು ರಾಜ್ಯಗಳ ಬಜೆಟ್ ಸಮತೋಲನವನ್ನು ಕಸಿದುಕೊಳ್ಳುತ್ತಿವೆ.

ಒಟ್ಟು ಸಾಲದ ಹೊರೆ: 2025ರ ಮಾರ್ಚ್ 31ರ ವೇಳೆಗೆ ದೇಶದ ಎಲ್ಲಾ ರಾಜ್ಯಗಳ ಒಟ್ಟು ಸಾಲದ ಹೊರೆ ಬರೋಬ್ಬರಿ 90.51 ಲಕ್ಷ ಕೋಟಿ ರೂಪಾಯಿಗಳಿಗೆ ಏರಿಕೆಯಾಗಿದೆ.

ಒಟ್ಟು ಬಜೆಟ್ ವೆಚ್ಚ: 2024-25ರ ಆರ್ಥಿಕ ವರ್ಷದಲ್ಲಿ ಎಲ್ಲಾ ರಾಜ್ಯಗಳ ಒಟ್ಟು ಬಜೆಟ್ ವೆಚ್ಚ 51.20 ಲಕ್ಷ ಕೋಟಿ ರೂ. ಗಳಾಗಿದೆ.

ದೈನಂದಿನ ಆಡಳಿತಾತ್ಮಕ ವೆಚ್ಚ: ಒಟ್ಟು ಬಜೆಟ್ ವೆಚ್ಚದಲ್ಲಿ ಸುಮಾರು ಶೇಕಡಾ 80ರಷ್ಟು ಪಾಲು ಕೇವಲ ದೈನಂದಿನ ಆಡಳಿತಾತ್ಮಕ ವೆಚ್ಚಗಳಿಗೆ (Revenue Expenditure) ಬಳಕೆಯಾಗುತ್ತಿದೆ.

ಅನಿವಾರ್ಯ ವೆಚ್ಚಗಳು: ರಾಜ್ಯಗಳ ಕೈಯಲ್ಲಿರುವ ಬಹುಪಾಲು ಹಣವು ನೌಕರರ ಸಂಬಳ, ನಿವೃತ್ತಿ ವೇತನ (Pension) ಮತ್ತು ಹಳೆ ಸಾಲಗಳ ಬಡ್ಡಿ ಪಾವತಿಯಂತಹ (Interest Payments) ಅನಿವಾರ್ಯ ವೆಚ್ಚಗಳಿಗೇ ಸೀಮಿತವಾಗಿದೆ.

ಸಬ್ಸಿಡಿ ಮತ್ತು ಉಚಿತ ಯೋಜನೆಗಳು: ಇವುಗಳ ಜೊತೆಗೆ ಸಬ್ಸಿಡಿಗಳು ಮತ್ತು ವಿವಿಧ ಜನಪ್ರಿಯ ಯೋಜನೆಗಳ ಅನುದಾನಗಳಿಗೆ ಶೇ. 61ಕ್ಕಿಂತ ಅಧಿಕ ಖರ್ಚಾಗುತ್ತಿದೆ.

➤ **ಆರ್‌ಬಿಐ ತುರ್ತು ಸಾಲದ ಮೊರೆ ಹೋದ ರಾಜ್ಯಗಳು:** ರಾಜ್ಯಗಳ ಆಂತರಿಕ ನಗದು ಹರಿವಿನ ಬಿಕ್ಕಟ್ಟು (Cash Flow Crisis) ಎಷ್ಟರಮಟ್ಟಿಗೆ ತಲುಪಿದೆ ಎಂದರೆ, ಹಲವು ರಾಜ್ಯಗಳು ದಿನನಿತ್ಯದ ನಗದು ನಿರ್ವಹಣೆ ಮತ್ತು ಸಂಬಳ ನೀಡಲು ಭಾರತೀಯ ರಿಸರ್ವ್ ಬ್ಯಾಂಕ್‌ನ (RBI) ತುರ್ತು ಸಾಲದ ವ್ಯವಸ್ಥೆಯಾದ ವೇಸ್ ಅಂಡ್ ಮೀನ್ಸ್ ಅಡ್ವಾನ್ಸ್ (WMA - Ways and Means Advances) ಮತ್ತು ಓವರ್‌ಡ್ರಾಫ್ಟ್ (Overdraft) ಸೌಲಭ್ಯದ ಮೊರೆ ಹೋಗುತ್ತಿರುವುದನ್ನು ಸಿಎಜಿ ವರದಿ ಎತ್ತಿ ತೋರಿಸಿದೆ.

➤ **ರಾಜ್ಯಗಳ ವಿತ್ತೀಯ ಸ್ಥಿತಿಗತಿಯ ಒಂದು ನೋಟ (2024-25):**

ಎಲ್ಲಾ 28 ರಾಜ್ಯಗಳ ಒಟ್ಟು ಸಾಲ (ಮಾರ್ಚ್ 2025 ರಂತೆ): ₹90.51 ಲಕ್ಷ ಕೋಟಿ

ಒಟ್ಟು ವಾರ್ಷಿಕ ಬಜೆಟ್ ವೆಚ್ಚ (FY25): ₹51.20 ಲಕ್ಷ ಕೋಟಿ

ದೈನಂದಿನ/ಆಡಳಿತಾತ್ಮಕ ವೆಚ್ಚದ ಪಾಲು: ಶೇಕಡಾ 80%

ಸಬ್ಸಿಡಿ ಹಾಗೂ ಯೋಜನೆಗಳ ವೆಚ್ಚ: ಶೇಕಡಾ 61% ಕ್ಕಿಂತ ಹೆಚ್ಚು

ವಿತ್ತೀಯ ಕೊರತೆಯ ಸ್ಥಿತಿ: ಎಲ್ಲಾ 28 ರಾಜ್ಯಗಳೂ ಕೊರತೆ ದಾಖಲಿಸಿವೆ

➤ **ಅಭಿವೃದ್ಧಿ ಕೆಲಸಗಳಿಗೆ ಹಣ ಎಲ್ಲಿದೆ?**

ಬಜೆಟ್‌ನ ಶೇ. 80ರಷ್ಟು ಭಾಗ ಅನುತ್ಪಾದಕ ಅಥವಾ ದೈನಂದಿನ ವೆಚ್ಚಗಳಿಗೆ ಬಳಕೆಯಾಗುತ್ತಿರುವುದರಿಂದ, ಮೂಲಸೌಕರ್ಯ ಅಭಿವೃದ್ಧಿ, ರಸ್ತೆ, ನೀರಾವರಿ, ಶಿಕ್ಷಣ ಮತ್ತು ಆರೋಗ್ಯದಂತಹ ಆಸ್ತಿ ಸೃಜನೆಗೆ (Capital Expenditure) ರಾಜ್ಯಗಳ ಬಳಿ ಹಣದ ಕೊರತೆ ಎದುರಾಗಿದೆ. ಇದು ದೀರ್ಘಾವಧಿಯಲ್ಲಿ ದೇಶದ ಒಟ್ಟಾರೆ ಆರ್ಥಿಕ ಪ್ರಗತಿಯ (GDP Growth) ವೇಗವನ್ನು ಕುಂಠಿತಗೊಳಿಸುವ ಸಾಧ್ಯತೆ ಇದೆ.

## ಸುಪ್ರೀಂ ಕೋರ್ಟ್ ನೋಟಿಸ್: ಆಧಾರ್ ಕಾರ್ಡ್ ಕೇವಲ ಗುರುತಿನ ಚೀಟಿಯೇ? ಪೌರತ್ವದ ಪುರಾವೆಯೇ?




➤ ಆಧಾರ್ ಕಾರ್ಡ್‌ಗಳನ್ನು ದೇಶದ ಪೌರತ್ವ, ಮೂಲ ನಿವಾಸಿ ಮತ್ತು ವಾಸಸ್ಥಳದ ಪುರಾವೆಯಾಗಿ ದುರುಪಯೋಗಪಡಿಸಿಕೊಳ್ಳಲಾಗುತ್ತಿದೆ ಎಂಬ ಗಂಭೀರ ಆರೋಪದ ಹಿನ್ನೆಲೆಯಲ್ಲಿ ಸುಪ್ರೀಂ ಕೋರ್ಟ್ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಹಾಗೂ ಭಾರತೀಯ ಚುನಾವಣಾ ಆಯೋಗಕ್ಕೆ (ECI) ಮಂಗಳವಾರ (16-06-2026) ತುರ್ತು ನೋಟಿಸ್ ಜಾರಿ ಮಾಡಿದೆ. ಆಧಾರ್ ಕಾಯ್ದೆಯ ಮೂಲ ಆಶಯಗಳು ಉಲ್ಲಂಘನೆಯಾಗುತ್ತಿವೆ ಎಂದು ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ (PIL) ವಿಚಾರಣೆ ನಡೆಸಿದ ನ್ಯಾಯಾಲಯವು ಈ ಮಹತ್ವದ ಆದೇಶ ನೀಡಿದೆ.

➤ **ನ್ಯಾಯಪೀಠದ ಆದೇಶ ಮತ್ತು ಅರ್ಜಿಯ ಹಿನ್ನೆಲೆ:** ಭಾರತದ ಮುಖ್ಯ ನ್ಯಾಯಮೂರ್ತಿ (CJI) ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿ ವಿ. ಮೋಹನಾ ಅವರನ್ನೊಳಗೊಂಡ ರಜಾಕಾಲದ ನ್ಯಾಯಪೀಠವು ಹಿರಿಯ ವಕೀಲ ಅಶ್ವಿನಿ ಕುಮಾರ್ ಉಪಾಧ್ಯಾಯ ಅವರು ಸಲ್ಲಿಸಿದ್ದ ಅರ್ಜಿಯನ್ನು ಸ್ವೀಕರಿಸಿ ಈ ಆದೇಶ ನೀಡಿದೆ. ನ್ಯಾಯಾಲಯದಲ್ಲಿ ಈಗಾಗಲೇ ಬಾಕಿ ಇರುವ ಇದೇ ರೀತಿಯ ಇತರ ಪ್ರಕರಣಗಳ ಜೊತೆಗೆ ಈ ಹೊಸ

ಅರ್ಜಿಯನ್ನೂ ಸೇರಿಸಿ ಸಮಗ್ರ ವಿಚಾರಣೆ ನಡೆಸಲು ಪೀಠ ನಿರ್ಧರಿಸಿದೆ. ಅರ್ಜಿದಾರರ ಪರ ವಕೀಲ ಅಶ್ವನಿ ದುಬೆ ಅವರ ಮೂಲಕ ಸಲ್ಲಿಕೆಯಾಗಿರುವ ಈ ಅರ್ಜಿಯಲ್ಲಿ, ಹೊಸ ಮತದಾರರ ನೋಂದಣಿ ಅರ್ಜಿಯಲ್ಲಿ (Form-6) ಜನ್ಮ ದಿನಾಂಕ ಮತ್ತು ವಾಸಸ್ಥಳದ ಪುರಾವೆಯಾಗಿ ಆಧಾರ್ ಕಾರ್ಡ್ ಅನ್ನು ಕಡ್ಡಾಯವಾಗಿ ಬಳಸುವುದು ಕಾನೂನುಬಾಹಿರ ಎಂದು ವಾದಿಸಲಾಗಿದೆ.

**➤ ಆಧಾರ್ ಕಾಯ್ದೆಯ ನಿಯಮಗಳು ಹೇಳುವುದೇನು?**

ಅರ್ಜಿಯಲ್ಲಿ ಪ್ರಮುಖವಾಗಿ ಮೂರು ಪ್ರಮುಖ ಕಾನೂನು ಮತ್ತು ಸಾಂವಿಧಾನಿಕ ವಿಧಿಗಳನ್ನು ಉಲ್ಲೇಖಿಸಿ ವಾದ ಮಂಡಿಸಲಾಗಿದೆ:

ಆಧಾರ್ ಕಾಯ್ದೆ 2016ರ ಸೆಕ್ಷನ್ 9: ಈ ನಿಯಮದ ಪ್ರಕಾರ, ಆಧಾರ್ ಸಂಖ್ಯೆಯು ಯಾವುದೇ ವ್ಯಕ್ತಿಗೆ ಭಾರತದ ಪೌರತ್ವ ಅಥವಾ ಮೂಲ ನಿವಾಸದ ಹಕ್ಕನ್ನು ನೀಡುವುದಿಲ್ಲ ಮತ್ತು ಅದನ್ನು ಪೌರತ್ವದ ಪುರಾವೆಯಾಗಿ ಬಳಸುವಂತಿಲ್ಲ.

ಜನಪ್ರತಿನಿಧಿ ಕಾಯ್ದೆ, 1950ರ ಸೆಕ್ಷನ್ 23(4): ಮತದಾರರ ಪಟ್ಟಿ ನೋಂದಣಿ ಪ್ರಕ್ರಿಯೆಯಲ್ಲಿ ಆಧಾರ್ ಅನ್ನು ವಾಸಸ್ಥಳ ಅಥವಾ ವಯಸ್ಸಿನ ನಿರ್ಣಾಯಕ ಪುರಾವೆಯಾಗಿ ಕಡ್ಡಾಯಗೊಳಿಸುವುದು ಈ ಕಾಯ್ದೆಯ ಆಶಯಕ್ಕೆ ತದ್ವಿರುದ್ಧವಾಗಿದೆ.

ಸಂವಿಧಾನದ ವಿಧಿ 14 (ಸಮಾನತೆಯ ಹಕ್ಕು): ದುರ್ಬಲ ಪರಿಶೀಲನಾ ವ್ಯವಸ್ಥೆಯಿಂದಾಗಿ ಇದು ಸಂವಿಧಾನದ 14ನೇ ವಿಧಿಯ ಆಶಯಗಳನ್ನು ಉಲ್ಲಂಘಿಸುತ್ತದೆ ಎಂದು ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ.

UIDAI ಅಧಿಸೂಚನೆ: ಭಾರತೀಯ ವಿಶಿಷ್ಟ ಗುರುತಿನ ಪ್ರಾಧಿಕಾರವು (UIDAI) ತನ್ನ ಆಗಸ್ಟ್ 22, 2023 ರ ಅಧಿಸೂಚನೆಯಲ್ಲಿ "ಆಧಾರ್ ಕಾರ್ಡ್ ಕೇವಲ ಗುರುತಿನ ದೃಢೀಕರಣಕ್ಕೆ (Proof of Identity) ಮಾತ್ರ ಸೀಮಿತವಾಗಿದ್ದು, ಅದನ್ನು ಜನ್ಮ ದಿನಾಂಕ, ವಾಸಸ್ಥಳ ಅಥವಾ ಪೌರತ್ವದ ಪುರಾವೆಯಾಗಿ ಪರಿಗಣಿಸಬಾರದು" ಎಂದು ಸ್ಪಷ್ಟಪಡಿಸಿರುವುದನ್ನು ಅರ್ಜಿಯಲ್ಲಿ ನೆನಪಿಸಲಾಗಿದೆ.

➤ ಅರ್ಜಿದಾರರ ಮುಖ್ಯ ಆತಂಕವೆಂದರೆ, ವಿದೇಶಿ ನುಸುಳುಕೋರರು ಸುಲಭವಾಗಿ ಆಧಾರ್ ಕಾರ್ಡ್ ಪಡೆದು ಅದರ ಮೂಲಕ ವೋಟರ್ ಐಡಿ, ಬ್ಯಾಂಕ್ ಖಾತೆ ಮತ್ತು ರೇಷನ್ ಕಾರ್ಡ್‌ಗಳನ್ನು ಸೃಷ್ಟಿಸಿಕೊಳ್ಳುತ್ತಿರುವುದರಿಂದ ದೇಶದ ಭದ್ರತೆ ಹಾಗೂ ಚುನಾವಣಾ ಪ್ರಕ್ರಿಯೆಯ ಪವಿತ್ರತೆಗೆ ಗಂಭೀರ ಧಕ್ಕೆ ಉಂಟಾಗುತ್ತಿದೆ ಎಂಬುದಾಗಿದೆ.

## ರಕ್ಷಣಾ ವಲಯದಲ್ಲಿ ಭಾರತದ ಹೊಸ ಮೈಲಿಗಲ್ಲು: 'ಸಿಂಹ 4x4' ಶಸ್ತ್ರಸಜ್ಜಿತ ವಾಹನ ಅನಾವರಣ!




➤ ಭಾರತದ ರಕ್ಷಣಾ ಉತ್ಪಾದನಾ ವಲಯವು ಜಾಗತಿಕ ಮಟ್ಟದಲ್ಲಿ ಮತ್ತೊಂದು ಐತಿಹಾಸಿಕ ಸಾಧನೆ ಮಾಡಿದೆ. ಪ್ರಮುಖ ರಕ್ಷಣಾ ಕಂಪನಿಯಾದ ಭಾರತ್ ಫೋರ್ಜ್ (Bharat Forge) ಲಿಮಿಟೆಡ್‌ನ ಅಂಗಸಂಸ್ಥೆಯಾದ ಕಲ್ಯಾಣಿ ಸ್ಟ್ರಾಟೆಜಿಕ್ ಸಿಸ್ಟಮ್ಸ್ ಲಿಮಿಟೆಡ್ (KSSL), ಪ್ಯಾರಾಮೌಂಟ್ (Paramount) ಕಂಪನಿಯೊಂದಿಗೆ ಜಂಟಿಯಾಗಿ ಅತ್ಯಾಧುನಿಕ ಯುದ್ಧ ವಾಹನವಾದ 'ಸಿಂಹ 4x4' (Simha 4x4) ಅನ್ನು ಜಾಗತಿಕ ವೇದಿಕೆಯಲ್ಲಿ ಅನಾವರಣಗೊಳಿಸಿದೆ.

➤ ಫ್ರಾನ್ಸ್‌ನ ಪ್ಯಾರಿಸ್‌ನಲ್ಲಿ ನಡೆದ ಪ್ರತಿಷ್ಠಿತ 'ಯೂರೋಸೇಟರಿ 2026' (Eurosatory 2026) ಅಂತರರಾಷ್ಟ್ರೀಯ ಭೂ ಮತ್ತು ವಾಯು ರಕ್ಷಣಾ ಪ್ರದರ್ಶನದಲ್ಲಿ ಈ ನೆಕ್ಸ್ಟ್-ಜನರೇಷನ್ ಲೈಟ್ ಆರ್ಮರ್ಡ್ ಮಲ್ಟಿ-ಪರ್ಪಸ್ ವೆಹಿಕಲ್ (LAMV) ಅನ್ನು ಪ್ರದರ್ಶಿಸಲಾಯಿತು.

➤ **'ಸಿಂಹ 4x4' ಯುದ್ಧ ವಾಹನ:** 'ಸಿಂಹ 4x4' ಎಂಬುದು ಆಧುನಿಕ ಸೇನೆಗಳ ಅಗತ್ಯತೆಗಳನ್ನು ಪೂರೈಸಲು ಸಂಪೂರ್ಣವಾಗಿ ಹೊಸ ವಿನ್ಯಾಸದೊಂದಿಗೆ (Ab Initio Design) ಅಭಿವೃದ್ಧಿಪಡಿಸಲಾದ ಲಘು ಶಸ್ತ್ರಸಜ್ಜಿತ ಬಹು-ಉದ್ದೇಶದ ವಾಹನವಾಗಿದೆ. ಹಳೆಯ ವಾಹನಗಳನ್ನು ನವೀಕರಿಸುವ ಬದಲಾಗಿ, ಮೊದಲಿನಿಂದಲೂ ಹೊಸ ತಂತ್ರಜ್ಞಾನ ಬಳಸಿ ಇದನ್ನು ವಿನ್ಯಾಸಗೊಳಿಸಲಾಗಿದೆ. ಭಾರತ, ಆಫ್ರಿಕಾ ಮತ್ತು ದಕ್ಷಿಣ ಏಷ್ಯಾದ ಸಶಸ್ತ್ರ ಪಡೆಗಳ ಕಠಿಣ ಕಾರ್ಯಾಚರಣೆಗಳನ್ನು ಗಮನದಲ್ಲಿಟ್ಟುಕೊಂಡು ಇದನ್ನು ಸಿದ್ಧಪಡಿಸಲಾಗಿದೆ.

**➤ 'ಸಿಂಹ 4x4' ವಾಹನದ ಪ್ರಮುಖ ವೈಶಿಷ್ಟ್ಯಗಳು:**

ಬಹು-ಉದ್ದೇಶದ ಶಸ್ತ್ರಸಜ್ಜಿತ ವಾಹನ (Multi-Role Capability): ಈ ವಾಹನವು ನಗರ ಪ್ರದೇಶದ ಯುದ್ಧಗಳು (Urban Warfare), ಶತ್ರುಗಳ ಬಗ್ಗೆ ಮಾಹಿತಿ ಕಲೆಹಾಕುವಿಕೆ (Reconnaissance), ಮತ್ತು ಆನ್-ರೋಡ್ ಹಾಗೂ ಆಫ್-ರೋಡ್ ಕಾರ್ಯಾಚರಣೆಗಳಿಗೆ ಅತ್ಯಂತ ಸೂಕ್ತವಾಗಿದೆ.

ಮಾಡ್ಯುಲರ್ ಆರ್ಕಿಟೆಕ್ಚರ್ (Modular Design): ಇದರ ವಿನ್ಯಾಸವು ಬದಲಾಗುತ್ತಿರುವ ಯುದ್ಧ ತಂತ್ರಜ್ಞಾನಕ್ಕೆ ತಕ್ಕಂತೆ ಸುಲಭವಾಗಿ ಅಪ್‌ಗ್ರೇಡ್ ಮಾಡಲು ಅಥವಾ ಮಾರ್ಪಾಡು ಮಾಡಲು ಮುಕ್ತ ಅವಕಾಶ ನೀಡುತ್ತದೆ.

ನ್ಯಾಟೋ ಗುಣಮಟ್ಟದ ಬಿಡಿಭಾಗಗಳು (NATO-Qualified Aggregates): ಈ ವಾಹನವನ್ನು ಅಂತರರಾಷ್ಟ್ರೀಯ ರಕ್ಷಣಾ ಒಕ್ಕೂಟವಾದ NATO ನಿಗದಿಪಡಿಸಿದ ತಾಂತ್ರಿಕ ಗುಣಮಟ್ಟದ ಬಿಡಿಭಾಗಗಳನ್ನು ಬಳಸಿ ನಿರ್ಮಿಸಲಾಗಿದೆ. ಇದು ಜಾಗತಿಕ ರಕ್ಷಣಾ ಮಾರುಕಟ್ಟೆಯಲ್ಲಿ ಭಾರತದ ಇಂಜಿನಿಯರಿಂಗ್ ಸಾಮರ್ಥ್ಯವನ್ನು ಸಾಬೀತುಪಡಿಸುತ್ತದೆ.

ಸುಧಾರಿತ ಚಲನಶೀಲತೆ ಮತ್ತು ರಕ್ಷಣೆ (Enhanced Mobility & Protection): ಕಠಿಣ ಭೂಪ್ರದೇಶಗಳಲ್ಲೂ ವೇಗವಾಗಿ ಚಲಿಸುವ ಸಾಮರ್ಥ್ಯದೊಂದಿಗೆ, ಗರಿಷ್ಠ ಸುರಕ್ಷತೆ ಮತ್ತು ಯುದ್ಧ ಭೂಮಿಯಲ್ಲಿ ಬದುಕುಳಿಯುವ (Survivability) ಸಾಮರ್ಥ್ಯವನ್ನು ಇದು ಹೊಂದಿದೆ.

ವೇಗದ ಅಭಿವೃದ್ಧಿ ಮತ್ತು ಡಿಜಿಟಲ್ ಇಂಜಿನಿಯರಿಂಗ್: ಈ ಯುದ್ಧ ವಾಹನವನ್ನು ಅತ್ಯಾಧುನಿಕ ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳನ್ನು ಬಳಸಿ ಅತ್ಯಂತ ಕಡಿಮೆ ಅವಧಿಯಲ್ಲಿ ವಿನ್ಯಾಸಗೊಳಿಸಿ, ಕಠಿಣ ಪರೀಕ್ಷೆಗಳಿಗೆ ಒಳಪಡಿಸಿ ಸಿದ್ಧಪಡಿಸಲಾಗಿದೆ.

**➤ ಯಾವೆಲ್ಲಾ ಕಾರ್ಯಾಚರಣೆಗಳಿಗೆ ಇದು ಉಪಯುಕ್ತ?**

ಗಡಿ ರಕ್ಷಣೆ (Border Protection) ಮತ್ತು ಆಂತರಿಕ ಭದ್ರತೆ (Internal Security)

ವಿಶೇಷ ಪಡೆಗಳ ಕಾರ್ಯಾಚರಣೆಗಳು (Special Operations)

ಕಮಾಂಡ್-ಅಂಡ್-ಕಂಟ್ರೋಲ್ (Command and Control) ಜವಾಬ್ದಾರಿಗಳು

ಸೈನಿಕರ ಸುರಕ್ಷಿತ ಸಾಗಣಿಕೆ (Troop Transport)

## ಏಷ್ಯಾದ 'ಎಐ-ನೇಟಿವ್ ಸ್ಟಾರ್ಟ್‌ಅಪ್ ಕ್ಲಸ್ಟರ್': ಬೆಂಗಳೂರಿಗೆ ಎರಡನೇ ಸ್ಥಾನ, ಜಾಗತಿಕವಾಗಿ 15ನೇ ರ್‍ಯಾಂಕ್!




➤ ತಂತ್ರಜ್ಞಾನ ಮತ್ತು ನಾವೀನ್ಯತೆಯ ಜಾಗತಿಕ ಹಬ್ ಆಗಿ ಹೊರಹೊಮ್ಮುತ್ತಿರುವ ಕರ್ನಾಟಕದ ರಾಜಧಾನಿ ಬೆಂಗಳೂರು ಮತ್ತೊಂದು ಜಾಗತಿಕ ಮನ್ನಣೆಗೆ ಪಾತ್ರವಾಗಿದೆ. ಇತ್ತೀಚೆಗೆ ಪ್ಯಾರಿಸ್‌ನಲ್ಲಿ ನಡೆದ 'ವಿವಾಟೆಕ್' (VivaTech) ಸಮಾವೇಶದಲ್ಲಿ ಬಿಡುಗಡೆಯಾದ ಜಾಗತಿಕ ಸ್ಟಾರ್ಟ್‌ಅಪ್ ಪರಿಸರ ವ್ಯವಸ್ಥೆ ವರದಿ (GSER) 2026 ರ ಪ್ರಕಾರ, ಬೆಂಗಳೂರು ಏಷ್ಯಾ ಖಂಡದಲ್ಲೇ ಎರಡನೇ ಅತ್ಯುತ್ತಮ 'ಎಐ-ನೇಟಿವ್' (AI-Native) ಸ್ಟಾರ್ಟ್‌ಅಪ್ ಕ್ಲಸ್ಟರ್ ಆಗಿ ಹೊರಹೊಮ್ಮಿದೆ.

➢ ಚೀನಾದ ಬೀಜಿಂಗ್ ನಗರವು ಮೊದಲ ಸ್ಥಾನದಲ್ಲಿದ್ದರೆ, ನಮ್ಮ ಬೆಂಗಳೂರು ಎರಡನೇ ಸ್ಥಾನವನ್ನು ಅಲಂಕರಿಸುವ ಮೂಲಕ ಕೃತಕ ಬುದ್ಧಿಮತ್ತೆ (Artificial Intelligence) ತಂತ್ರಜ್ಞಾನದಲ್ಲಿ ತನ್ನ ಪ್ರಾಬಲ್ಯವನ್ನು ಸಾಬೀತುಪಡಿಸಿದೆ. ಜಾಗತಿಕ ಮಟ್ಟದ ಟಾಪ್ 40 ಸ್ಟಾರ್ಟ್‌ಅಪ್ ಪರಿಸರ ವ್ಯವಸ್ಥೆಗಳ ಪಟ್ಟಿಯಲ್ಲಿ ಬೆಂಗಳೂರು 15ನೇ ಸ್ಥಾನ ಪಡೆದಿದೆ.

➢ **ಪ್ರಮುಖ ರ್‍ಯಾಂಕಿಂಗ್ ಅಂಶಗಳು (Success Factors):** ವರದಿಯು ಸ್ಟಾರ್ಟ್‌ಅಪ್‌ಗಳ ಯಶಸ್ಸನ್ನು ಅಳೆಯಲು ಪ್ರಮುಖ 6 ಮಾನದಂಡಗಳನ್ನು ಪರಿಗಣಿಸಿದ್ದು, 1 ರಿಂದ 10 ರವರೆಗಿನ ಅಂಕಗಳನ್ನು ನೀಡಿದೆ. ಬೆಂಗಳೂರಿನ ಸಾಧನೆ ಈ ಕೆಳಗಿನಂತಿದೆ:

ಕಾರ್ಯಕ್ಷಮತೆ (Performance): 9/10

ಸಂಶೋಧನೆ ಮತ್ತು ಅಭಿವೃದ್ಧಿ (R&D Engine): 9/10 (ಈ ವಿಭಾಗದಲ್ಲಿ ಬೆಂಗಳೂರು ಅಮೆರಿಕದ ಪ್ರಸಿದ್ಧ 'ಸಿಲಿಕಾನ್ ವ್ಯಾಲಿ'ಗಿಂತಲೂ ಮುಂದಿದೆ!)

ಎಐ-ನೇಟಿವ್ ಕ್ಲಸ್ಟರ್ (AI-Native Cluster): 8/10

ಹಣಕಾಸು ನೆರವು (Funding): 7/10

ಮಾರುಕಟ್ಟೆ ತಲುಪುವಿಕೆ (Market Reach): 7/10

ಪ್ರತಿಭೆ ಮತ್ತು ಅನುಭವ (Talent & Experience): 4/10

➢ **ಬೆಂಗಳೂರು ಸ್ಟಾರ್ಟ್‌ಅಪ್ ಪರಿಸರ ವ್ಯವಸ್ಥೆಯ ಪ್ರಮುಖ ಹೈಲೈಟ್ಸ್:**

ಆರ್ಥಿಕ ಮೌಲ್ಯ (Ecosystem Value): ಬೆಂಗಳೂರಿನ ಸ್ಟಾರ್ಟ್‌ಅಪ್ ಪರಿಸರ ವ್ಯವಸ್ಥೆಯ ಒಟ್ಟು ಮೌಲ್ಯ ಬರೋಬ್ಬರಿ 153 ಬಿಲಿಯನ್ ಡಾಲರ್ ದಾಟಿದೆ.

ವೆಂಚರ್ ಕ್ಯಾಪಿಟಲ್ (VC) ಫಂಡಿಂಗ್: 2021 ರಿಂದ 2025ರ ಅವಧಿಯಲ್ಲಿ ನಗರದ ಸ್ಟಾರ್ಟ್‌ಅಪ್‌ಗಳಿಗೆ 39 ಬಿಲಿಯನ್ ಡಾಲರ್ ಹೂಡಿಕೆ ಹರಿದುಬಂದಿದೆ. ಇದು ಜಾಗತಿಕ ಸರಾಸರಿಗಿಂತ (5 ಬಿಲಿಯನ್ ಡಾಲರ್) ಗಣನೀಯವಾಗಿ ಹೆಚ್ಚಾಗಿದೆ. ಜೆಪ್ಟೋ (Zepto), ಮೀಶೋ (Meesho) ಮತ್ತು ಉಡಾನ್ (Udaan) ಪ್ರಮುಖ ಧನಸಹಾಯ ಪಡೆದ ಸ್ಟಾರ್ಟ್‌ಅಪ್‌ಗಳಾಗಿವೆ.

ಯುನಿಕಾರ್ನ್‌ಗಳ ಸಂಖ್ಯೆ: ಬೆಂಗಳೂರಿನಲ್ಲಿ ಪ್ರಸ್ತುತ 30 ಸಕ್ರಿಯ ಯುನಿಕಾರ್ನ್‌ಗಳು (1 ಬಿಲಿಯನ್ ಡಾಲರ್‌ಗಿಂತ ಹೆಚ್ಚು ಮೌಲ್ಯದ ಸ್ಟಾರ್ಟ್‌ಅಪ್) ಕಾರ್ಯನಿರ್ವಹಿಸುತ್ತಿವೆ. ಜಾಗತಿಕ ಸರಾಸರಿ ಕೇವಲ 11 ಆಗಿದೆ.

ಕರ್ನಾಟಕದ ಪಾಲು: ಭಾರತದ ಒಟ್ಟು ಸ್ಟಾರ್ಟ್‌ಅಪ್ ಹೂಡಿಕೆಯಲ್ಲಿ ಕರ್ನಾಟಕ ಒಂದೇ ಬರೋಬ್ಬರಿ 46% ರಷ್ಟು ಪಾಲನ್ನು ತನ್ನದಾಗಿಸಿಕೊಂಡಿದೆ. 2010 ರಿಂದ ಈವರೆಗೆ ಬೆಂಗಳೂರು ಮೂಲದ ಸ್ಟಾರ್ಟ್‌ಅಪ್‌ಗಳು ಒಟ್ಟು 79 ಬಿಲಿಯನ್ ಡಾಲರ್ ಹೂಡಿಕೆ ಆಕರ್ಷಿಸಿವೆ.

➢ **ಕರ್ನಾಟಕ ಸರ್ಕಾರದ ಕೊಡುಗೆ:** ರಾಜ್ಯದಲ್ಲಿ ಸ್ಟಾರ್ಟ್‌ಅಪ್‌ಗಳ ಬೆಳವಣಿಗೆಗೆ ಕರ್ನಾಟಕ ಸರ್ಕಾರದ ಸ್ಟಾರ್ಟ್‌ಅಪ್ ನೀತಿ 2.0 (Startup Policy 2.0), ಕ್ಯಾಟಲಿಸ್ಟ್ (KATALYST), ಲೀಪ್ (LEAP) ಪ್ರೋಗ್ರಾಂಗಳು ಮತ್ತು ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ (KDEM) ಪ್ರಮುಖ ಪ್ರೇರಕ ಶಕ್ತಿಯಾಗಿವೆ ಎಂದು ಜಾಗತಿಕ ವರದಿ ಪ್ರಶಂಸಿಸಿದೆ.

## ರಾಷ್ಟ್ರೀಯ ತನಿಖಾ ಸಂಸ್ಥೆ (NIA) ಐಜಿಯಾಗಿ ಐಪಿಎಸ್ ಅಧಿಕಾರಿ ಸುಂದರರಾಜ್ ಪಟ್ಟಿಲಿಂಗಂ ನೇಮಕ: ಬಸ್ತಾರ್ ನಕ್ಸಲ್ ವಿರೋಧಿ ಕಾರ್ಯಾಚರಣೆಯ ನಾಯಕನಿಗೆ ಹೊಸ ಜವಾಬ್ದಾರಿ



➢ ನವದೆಹಲಿ: ಭಾರತ ಸರ್ಕಾರವು ದೇಶದ ಪ್ರಮುಖ ಭಯೋತ್ಪಾದನಾ ನಿಗ್ರಹ ತನಿಖಾ ಸಂಸ್ಥೆಯಾದ ರಾಷ್ಟ್ರೀಯ ತನಿಖಾ ಸಂಸ್ಥೆ (National Investigation Agency - NIA)ಯ ನೂತನ ಇನ್ಸ್‌ಪೆಕ್ಟರ್ ಜನರಲ್ (IG) ಆಗಿ ಹಿರಿಯ ಐಪಿಎಸ್ ಅಧಿಕಾರಿ ಸುಂದರರಾಜ್ ಪಟ್ಟಿಲಿಂಗಂ (Sundarraj Pattilingam) ಅವರನ್ನು ನೇಮಕ ಮಾಡಿ ಆದೇಶ ಹೊರಡಿಸಿದೆ.

➢ ಕೇಂದ್ರ ಗೃಹ ಸಚಿವಾಲಯವು ಜೂನ್ 16, 2026 ರಂದು ಈ ಮಹತ್ವದ ಆದೇಶವನ್ನು ಜಾರಿಗೊಳಿಸಿದ್ದು, ಛತ್ತೀಸ್‌ಗಢ ಸರ್ಕಾರವು ಇವರನ್ನು ಬಿಡುಗಡೆಗೊಳಿಸಿದ ತಕ್ಷಣವೇ ಅವರು ಹೊಸ ಜವಾಬ್ದಾರಿಯನ್ನು ವಹಿಸಿಕೊಳ್ಳಲಿದ್ದಾರೆ. ಇದು ಸುಂದರರಾಜ್ ಅವರ ವೃತ್ತಿಜೀವನದ ಮೊದಲ ಕೇಂದ್ರ ಸರ್ಕಾರಿ ನಿಯೋಜನೆ (Central Deputation) ಆಗಿದೆ.

➢ ಸುಂದರರಾಜ್ ಪಟ್ಟಿಲಿಂಗಂ ಅವರು 2003ರ ಬ್ಯಾಚ್‌ನ ಛತ್ತೀಸ್‌ಗಢ ಕೇಡರ್‌ನ ಐಪಿಎಸ್ ಅಧಿಕಾರಿಯಾಗಿದ್ದಾರೆ. ಪ್ರಸ್ತುತ ಅವರಿಗೆ 46 ವರ್ಷ ವಯಸ್ಸು. ತಮಿಳುನಾಡಿನ ಕೊಯಮತ್ತೂರಿನಲ್ಲಿರುವ 'ತಮಿಳುನಾಡು ಕೃಷಿ ವಿಶ್ವವಿದ್ಯಾಲಯ'ದ (Tamil Nadu Agricultural University) ಹಳೆಯ ವಿದ್ಯಾರ್ಥಿಯಾಗಿದ್ದಾರೆ. 2005ರಲ್ಲಿ ಬಸ್ತಾರ್‌ನ ಕಾಂಕೇರ್‌ನಲ್ಲಿ ಆರಂಭವಾದ 'ಕೌಂಟರ್-ಇನ್ಸರ್ಜೆನ್ಸಿ ಅಂಡ್ ಜಂಗಲ್ ವಾರ್‌ಫೇರ್ ಸ್ಕೂಲ್'ನಲ್ಲಿ (Counter-Insurgency and Jungle Warfare School) ಸುಧಾರಿತ ಕಮಾಂಡೋ ತರಬೇತಿ ಪಡೆದ ಮೊದಲ ಬ್ಯಾಚ್‌ನ ಅಧಿಕಾರಿಗಳಲ್ಲಿ ಇವರೂ ಒಬ್ಬರು.

➢ ಬಸ್ತಾರ್‌ನಲ್ಲಿ ನಕ್ಸಲ್ ನಿಗ್ರಹದ ಮಹಾನಾಯಕ: ಛತ್ತೀಸ್‌ಗಢದ ಬಸ್ತಾರ್ (Bastar) ವಲಯವು ಒಂದು ಕಾಲದಲ್ಲಿ ನಿಷೇಧಿತ ಸಿಪಿಐ (ಮಾವೋವಾದಿ) ಸಂಘಟನೆಯ ಪ್ರಮುಖ ಕೇಂದ್ರ ಕಚೇರಿಯಾಗಿತ್ತು. ಸುಂದರರಾಜ್ ಅವರು ಈ ಸೂಕ್ಷ್ಮ ಪ್ರದೇಶದಲ್ಲಿ ಸುದೀರ್ಘ 12 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಇದರಲ್ಲಿ 7 ವರ್ಷಗಳ ಕಾಲ ಅವರು ಇಡೀ ಬಸ್ತಾರ್ ವಲಯದ ಪೊಲೀಸ್ ಮುಖ್ಯಸ್ಥರಾಗಿ (IG) ಯಶಸ್ವಿಯಾಗಿ ಕಾರ್ಯನಿರ್ವಹಿಸಿದ್ದಾರೆ.

➢ ಮಾವೋವಾದಿ ಪೀಡಿತ ಜಿಲ್ಲೆಗಳಾದ ಕಾಂಕೇರ್, ಸುಕ್ಮಾ, ಬಿಜಾಪುರ, ದಂತೇವಾಡ, ನಾರಾಯಣಪುರ ಮತ್ತು ಕೊಂಡಗಾಂವ್‌ಗಳಲ್ಲಿ ನಕ್ಸಲ್ ವಿರೋಧಿ ಕಾರ್ಯಾಚರಣೆಯನ್ನು ಮುಂಚೂಣಿಯಲ್ಲಿ ನಿಂತು ಮುನ್ನಡೆಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಇತ್ತೀಚೆಗಷ್ಟೇ ಸರ್ಕಾರವು ಭಾರತವನ್ನು "ಮಾವೋವಾದಿ ಮುಕ್ತ ದೇಶ" ಎಂದು ಘೋಷಿಸಿದ ಬೆನ್ನಲ್ಲೇ ಇವರಿಗೆ ಈ ದೊಡ್ಡ ಜವಾಬ್ದಾರಿ ಸಿಕ್ಕಿರುವುದು ಗಮನಾರ್ಹ.




## ಕೇಂದ್ರ ಆಯುಷ್ ಸಚಿವಾಲಯದಿಂದ 'ಯೋಗ ಪಾರ್ಕ್ ಪೋರ್ಟಲ್' ಚಾಲನೆ:

## ಸಾರ್ವಜನಿಕ ಉದ್ಯಾನವನಗಳು ಇನ್ಮುಂದೆ ವೆಲ್ನೆಸ್ ಹಬ್ಸ್!



➤ ದೇಶಾದ್ಯಂತ ರೋಗನಿರೋಧಕ ಮತ್ತು ಮುನ್ನೆಚ್ಚರಿಕೆ ಆರೋಗ್ಯ ರಕ್ಷಣೆಯನ್ನು (Preventive Healthcare) ಉತ್ತೇಜಿಸುವ ನಿಟ್ಟಿನಲ್ಲಿ ಕೇಂದ್ರ ಆಯುಷ್ ಸಚಿವಾಲಯವು ಒಂದು ಮಹತ್ವದ ಹೆಜ್ಜೆ ಇಟ್ಟಿದೆ. ದೇಶದ ಮೂಲೆ ಮೂಲೆಗಳಲ್ಲಿರುವ ಸಾರ್ವಜನಿಕ ಉದ್ಯಾನವನಗಳನ್ನು ಯೋಗ ಮತ್ತು ಧ್ಯಾನದ ಕೇಂದ್ರಗಳನ್ನಾಗಿ ಪರಿವರ್ತಿಸಲು ಆಯುಷ್ ಸಚಿವಾಲಯವು 'ಯೋಗ ಪಾರ್ಕ್ ಪೋರ್ಟಲ್' (Yoga Park Portal) ಅನ್ನು ಅಧಿಕೃತವಾಗಿ ಪ್ರಾರಂಭಿಸಿದೆ.

➤ 2026ರ ಅಂತರರಾಷ್ಟ್ರೀಯ ಯೋಗ ದಿನಾಚರಣೆಯ (International Day of Yoga 2026) 25 ದಿನಗಳ ಕೌಂಟ್‌ಡೌನ್ ಕಾರ್ಯಕ್ರಮದ ಅಂಗವಾಗಿ ಮಧ್ಯಪ್ರದೇಶದ ಖಜುರಾಹೊದಲ್ಲಿ ನಡೆದ ಸಮಾರಂಭದಲ್ಲಿ ಕೇಂದ್ರ ಆಯುಷ್ ಮತ್ತು ಆರೋಗ್ಯ ಸಚಿವ ಪ್ರತಾಪ್‌ರಾವ್ ಜಾಧವ್ ಅವರು ಈ ಡಿಜಿಟಲ್ ಪೋರ್ಟಲ್‌ಗೆ ಚಾಲನೆ ನೀಡಿದರು.

**➤ ಯೋಗ ಪಾರ್ಕ್ ಪೋರ್ಟಲ್:** ಈ ಯೋಜನೆಯ ಪ್ರಮುಖ ಉದ್ದೇಶ ದೇಶಾದ್ಯಂತ ಪ್ರಸ್ತುತ ಇರುವ ಸಾರ್ವಜನಿಕ ಉದ್ಯಾನವನಗಳು ಮತ್ತು ಮುಕ್ತ ಸ್ಥಳಗಳನ್ನು ಸಮುದಾಯದ ಸ್ವಾಸ್ಥ್ಯ ಕೇಂದ್ರಗಳಾಗಿ (Community Wellness Hubs) ಬದಲಾಯಿಸುವುದಾಗಿದೆ. ಈ ಪೋರ್ಟಲ್ ಮೂಲಕ ಸ್ಥಳೀಯ ಸಂಸ್ಥೆಗಳು, ಎನ್‌ಜಿಒಗಳು ಮತ್ತು ಕಾರ್ಪೊರೇಟ್ ಸಂಸ್ಥೆಗಳು ಒಟ್ಟಾಗಿ ಯೋಗ ಪಾರ್ಕ್‌ಗಳನ್ನು ಅಭಿವೃದ್ಧಿಪಡಿಸಲು ಮಾರ್ಗಸೂಚಿಗಳು ಮತ್ತು ಸಂಪನ್ಮೂಲಗಳನ್ನು ಪಡೆಯಬಹುದು.

## ಅಸ್ಸಾಂನ 4 ಸಾಂಪ್ರದಾಯಿಕ ಉತ್ಪನ್ನಗಳಿಗೆ ಜಿಐ ಟ್ಯಾಗ್ (GI Tag) ಮಾನ್ಯತೆ




➤ ಕೇಂದ್ರ ಸರ್ಕಾರದ ಭೌಗೋಳಿಕ ಸೂಚಕ (Geographical Indication - GI) ನೋಂದಣಾಧಿಕಾರಿಯು ಇತ್ತೀಚೆಗೆ ಅಸ್ಸಾಂ ರಾಜ್ಯದ ನಾಲ್ಕು ವಿಶಿಷ್ಟ ಮತ್ತು ಸಾಂಪ್ರದಾಯಿಕ ಉತ್ಪನ್ನಗಳಿಗೆ ಪ್ರತಿಷ್ಠಿತ 'ಜಿಐ ಟ್ಯಾಗ್' ಮಾನ್ಯತೆಯನ್ನು ನೀಡಿದ್ದಾರೆ. ಈ ಬೆಳವಣಿಗೆಯು ಅಸ್ಸಾಂನ ಸಾಂಸ್ಕೃತಿಕ ಪರಂಪರೆಯನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ಯುವುದಲ್ಲದೆ, ಈಶಾನ್ಯ ಭಾರತದ ಗ್ರಾಮೀಣ ಆರ್ಥಿಕತೆಗೆ ಭಾರಿ ಉತ್ತೇಜನ ನೀಡಲಿದೆ ಎಂದು ಕೇಂದ್ರ ಈಶಾನ್ಯ ವಲಯ ಅಭಿವೃದ್ಧಿ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ತಿಳಿಸಿದ್ದಾರೆ.

**➤ ಜಿಐ ಟ್ಯಾಗ್ ಪಡೆದ ಅಸ್ಸಾಂನ ಆ 4 ಉತ್ಪನ್ನಗಳು:**

ಬಾಹ್ ಶಿಲ್ಪ (Bah Silpa - ಅಸ್ಸಾಂನ ಬಿದಿರಿನ ಕರಕುಶಲ ಕಲೆ): ಅಸ್ಸಾಂನ ಗ್ರಾಮೀಣ ಭಾಗದಲ್ಲಿ ಸ್ಥಳೀಯ ಬಿದಿರಿನಿಂದ ತಯಾರಿಸಲಾಗುವ ಅತ್ಯಂತ ಆಕರ್ಷಕ ಮನೆ ಅಲಂಕಾರಿಕ ವಸ್ತುಗಳು, ಬುಟ್ಟಿಗಳು ಮತ್ತು ದಿನಬಳಕೆಯ ವಿಶಿಷ್ಟ ಕರಕುಶಲ ಉತ್ಪನ್ನಗಳು ಜಿಐ ಮಾನ್ಯತೆ ಪಡೆದುಕೊಂಡಿವೆ.

ಬಿಹು ಪೆಪಾ (Bihu Pepa): ಇದು ಅಸ್ಸಾಂನ ಪ್ರಸಿದ್ಧ 'ಬಿಹು' ನೃತ್ಯ ಮತ್ತು ಹಬ್ಬದ ಸಂದರ್ಭದಲ್ಲಿ ಬಳಸಲಾಗುವ ಸಾಂಪ್ರದಾಯಿಕ ಸಂಗೀತ ವಾದ್ಯವಾಗಿದೆ. ಇದನ್ನು ಸಾಮಾನ್ಯವಾಗಿ ಎಮ್ಮೆಯ ಕೊಂಬಿನಿಂದ (Buffalo Horn) ತಯಾರಿಸಲಾಗುತ್ತದೆ.

ಕರ್ಬಿ ಆಂಗ್ಲಾಂಗ್ ಹ್ಯಾಂಡ್ಲೂಮ್ (Karbi Anglong Handloom): ಕರ್ಬಿ ಆಂಗ್ಲಾಂಗ್ ಜಿಲ್ಲೆಯ ಬುಡಕಟ್ಟು ಸಮುದಾಯದ ನೇಕಾರರು ಸಾಂಪ್ರದಾಯಿಕ ಶೈಲಿಯಲ್ಲಿ ನೇಯುವ ಅತ್ಯಂತ ವರ್ಣರಂಜಿತ ಮತ್ತು ವಿಶಿಷ್ಟ ವಿನ್ಯಾಸದ ಕೈಮಗ್ಗದ ಬಟ್ಟೆಗಳು ಇದಾಗಿವೆ.

ದೇವರಿ ಹ್ಯಾಂಡ್ಲೂಮ್ ಉತ್ಪನ್ನಗಳು (Deori Handloom Products): ಅಸ್ಸಾಂನ ದೇವರಿ ಬುಡಕಟ್ಟು ಸಮುದಾಯಕ್ಕೆ ಸೇರಿದ ಸಾಂಪ್ರದಾಯಿಕ ಕೈಮಗ್ಗ ಉಡುಪುಗಳು ಮತ್ತು ಜವಳಿ ಉತ್ಪನ್ನಗಳಾಗಿದ್ದು, ಇವು ತಮ್ಮ ವಿಶಿಷ್ಟ ಜ್ಯಾಮಿತೀಯ ವಿನ್ಯಾಸಗಳಿಗೆ ಹೆಸರುವಾಸಿಯಾಗಿವೆ.

**➤ ಜಿಐ ಟ್ಯಾಗ್ (Geographical Indication):** ಒಂದು ನಿರ್ದಿಷ್ಟ ಭೌಗೋಳಿಕ ಪ್ರದೇಶಕ್ಕೆ ಸೀಮಿತವಾದ, ಅಲ್ಲಿನ ವಿಶಿಷ್ಟ ಗುಣಮಟ್ಟ ಮತ್ತು ಸಾಂಪ್ರದಾಯಿಕ ಶೈಲಿಯನ್ನು ಹೊಂದಿರುವ ಉತ್ಪನ್ನಗಳಿಗೆ ನೀಡಲಾಗುವ ಕಾನೂನಾತ್ಮಕ ಮಾನ್ಯತೆ.ಭಾರತದಲ್ಲಿ ಈ ಮಾನ್ಯತೆಯನ್ನು 'ಭೌಗೋಳಿಕ ಸೂಚಕಗಳ (ನೋಂದಣಿ ಮತ್ತು ರಕ್ಷಣೆ) ಕಾಯ್ದೆ, 1999' ರ ಅಡಿಯಲ್ಲಿ ನೀಡಲಾಗುತ್ತದೆ. ಒಮ್ಮೆ ಜಿಐ ಟ್ಯಾಗ್ ನೀಡಿದರೆ ಅದು 10 ವರ್ಷಗಳವರೆಗೆ ಮಾನ್ಯತೆ ಹೊಂದಿರುತ್ತದೆ. ಆನಂತರ ಅದನ್ನು ನವೀಕರಿಸಬೇಕಾಗುತ್ತದೆ. ಭಾರತದ ಜಿಐ ರಿಜಿಸ್ಟ್ರಿ (GI Registry) ಕಚೇರಿಯು ತಮಿಳುನಾಡಿನ ಚೆನ್ನೈನಲ್ಲಿದೆ.

➤ ಭಾರತದಲ್ಲಿ ಜಿಐ ಟ್ಯಾಗ್ ಪಡೆದ ಅತ್ಯಂತ ಮೊದಲ ಉತ್ಪನ್ನ 'ಡಾರ್ಜಿಲಿಂಗ್ ಚಹಾ' (Darjeeling Tea - 2004).

➤ ಕರ್ನಾಟಕವು ಭಾರತದಲ್ಲೇ ಅತಿ ಹೆಚ್ಚು ಜಿಐ ಟ್ಯಾಗ್ ಹೊಂದಿರುವ ರಾಜ್ಯಗಳಲ್ಲಿ ಮುಂಚೂಣಿಯಲ್ಲಿದೆ (ಉದಾಹರಣೆಗೆ: ಮೈಸೂರು ಸಿಲ್ಕ್, ಕೊಡಗು ಕಿತ್ತಳೆ, ನವಲಗುಂದ ರತ್ನಗಂಬಳಿ ಇತ್ಯಾದಿ).

## ಟೈಮ್ಸ್ ಪ್ರಭಾವಶಾಲಿ ಕ್ರೀಡಾಪಟುಗಳ ಪಟ್ಟಿಯಲ್ಲಿ ಸ್ಥಾನ ಪಡೆದ ಏಕೈಕ ಭಾರತೀಯ ಆಟಗಾರ್ತಿ ಸ್ಮೃತಿ ಮಂಧಾನ!



➤ ಭಾರತೀಯ ಮಹಿಳಾ ಕ್ರಿಕೆಟ್ ತಂಡದ ಉಪನಾಯಕಿ, ರಾಯಲ್ ಚಾಲೆಂಜರ್ಸ್ ಬೆಂಗಳೂರು (RCB) ತಂಡದ ಯಶಸ್ವಿ ನಾಯಕಿ ಸ್ಮೃತಿ ಮಂಧಾನ (Smriti Mandhana) ಅವರ ಕೀರ್ತಿ ಕಿರೀಟಕ್ಕೆ ಮತ್ತೊಂದು ಜಾಗತಿಕ ಗರಿ ಲಭಿಸಿದೆ. ಪ್ರತಿಷ್ಠಿತ 'ಟೈಮ್' (TIME) ನಿಯತಕಾಲಿಕೆ ಬಿಡುಗಡೆ ಮಾಡಿರುವ '2026ರ ಜಗತ್ತಿನ 100 ಅತ್ಯಂತ ಪ್ರಭಾವಶಾಲಿ ಕ್ರೀಡಾಪಟುಗಳ' ಪಟ್ಟಿಯಲ್ಲಿ ಸ್ಮೃತಿ ಮಂಧಾನ ಸ್ಥಾನ ಪಡೆದಿದ್ದಾರೆ. ಈ ಗೌರವಕ್ಕೆ ಪಾತ್ರರಾದ ಏಕೈಕ ಭಾರತೀಯ ಕ್ರೀಡಾಪಟು ಎಂಬ ಹೆಗ್ಗಳಿಕೆ ಇವರದ್ದಾಗಿದೆ.

➤ ವಿಶ್ವದ ಕ್ರೀಡಾ ರಂಗದಲ್ಲಿ ಪ್ರಸ್ತುತ ದಿನಗಳಲ್ಲಿ ದೊಡ್ಡ ಮಟ್ಟದ ಬದಲಾವಣೆ ಮತ್ತು ಪ್ರಭಾವ ಬೀರುತ್ತಿರುವ ಕ್ರೀಡಾಪಟುಗಳು, ತರಬೇತುದಾರರು ಮತ್ತು ಹೂಡಿಕೆದಾರರನ್ನು ಗುರುತಿಸಿ ಟೈಮ್ ನಿಯತಕಾಲಿಕೆಯು ಈ ಪಟ್ಟಿಯನ್ನು ಸಿದ್ಧಪಡಿಸುತ್ತದೆ.

➤ ಜಾಗತಿಕ ದಿಗ್ಗಜರ ಸಾಲಿನಲ್ಲಿ ಮಂಧಾನ: ಈ ಸಾಲಿನ ಟೈಮ್ಸ್ ಪಟ್ಟಿಯಲ್ಲಿ ಜಾಗತಿಕ ಕ್ರೀಡಾ ಲೋಕದ ಅತಿರಥ ಮಹಾರಥರಾದ ಬ್ಯಾಸ್ಕೆಟ್‌ಬಾಲ್ ದಂತಕಥೆ ಲೆಬ್ರಾನ್ ಜೇಮ್ಸ್, ಫುಟ್‌ಬಾಲ್ ತಾರೆಗಳಾದ ಲಿಯೋನೆಲ್ ಮೆಸ್ಸಿ, ಕ್ರಿಸ್ಟಿಯಾನೋ ರೊನಾಲ್ಡೊ, ಟೆನ್ನಿಸ್ ಆಟಗಾರ ಕಾರ್ಲೋಸ್ ಅಲ್ಕರಾಜ್ ಮತ್ತು ಫಿಫಾ ಅಧ್ಯಕ್ಷ ಜಿಯಾನಿ ಇನ್ಫಾಂಟಿನೊ ಅವರಂತಹ ಪ್ರಮುಖರಿದ್ದಾರೆ. ಇಷ್ಟೊಂದು ಪ್ರಭಾವಿ ಜಾಗತಿಕ ಕ್ರೀಡಾಪಟುಗಳ ನಡುವೆ ಭಾರತದಿಂದ ಕೇವಲ ಸ್ಮೃತಿ ಮಂಧಾನ ಮಾತ್ರ

ಆಯ್ಕೆಯಾಗಿರುವುದು ಇಡೀ ದೇಶವೇ ಹೆಮ್ಮೆ ಪಡುವಂತಹ ವಿಷಯವಾಗಿದೆ.

➤ **ಸ್ಮೃತಿ ಮಂಧಾನ ಸಾಧನೆಯ ಮೈಲಿಗಲ್ಲುಗಳು:** ಟೈಮ್ಸ್ ನಿಯತಕಾಲಿಕೆಯು ಸ್ಮೃತಿ ಮಂಧಾನ ಅವರ ವೃತ್ತಿಜೀವನದ ಅದ್ಭುತ ದಾಖಲೆಗಳನ್ನು ಮುಕ್ತಕಂಠದಿಂದ ಶ್ಲಾಘಿಸಿದೆ. ಎಡಗೈ ಬ್ಯಾಟರ್ ಆಗಿರುವ ಮಂಧಾನ ಅವರ ಕೆಲವು ಪ್ರಮುಖ ಸಾಧನೆಗಳು ಇಲ್ಲಿವೆ:

**ದಾಖಲೆಯ ಶತಕಗಳು:** ಅಂತರರಾಷ್ಟ್ರೀಯ ಮಹಿಳಾ ಕ್ರಿಕೆಟ್‌ನಲ್ಲಿ ಒಟ್ಟು 17 ಶತಕಗಳನ್ನು ಸಿಡಿಸುವ ಮೂಲಕ ಜಂಟಿ ಅಗ್ರಸ್ಥಾನದಲ್ಲಿದ್ದಾರೆ. ಜೊತೆಗೆ ಮೂರೂ ಮಾದರಿಯ ಕ್ರಿಕೆಟ್‌ನಲ್ಲಿ (Test, ODI, T20) ಶತಕ ಬಾರಿಸಿದ ಭಾರತದ ಮೊದಲ ಮಹಿಳಾ ಬ್ಯಾಟರ್ ಆಗಿದ್ದಾರೆ.

**ದ್ವಿಶತಕದ ಸಾಧನೆ:** ದೇಶೀಯ ಏಕದಿನ ಕ್ರಿಕೆಟ್‌ನಲ್ಲಿ ದ್ವಿಶತಕ (Double Century) ಬಾರಿಸಿದ ಮೊದಲ ಭಾರತೀಯ ಮಹಿಳೆ ಎಂಬ ಹೆಗ್ಗಳಿಕೆ ಇವರದ್ದಾಗಿದೆ.

ಕ್ಯಾಲೆಂಡರ್ ವರ್ಷದ ದಾಖಲೆ: ಒಂದು ಕ್ಯಾಲೆಂಡರ್ ವರ್ಷದಲ್ಲಿ 1,000ಕ್ಕೂ ಹೆಚ್ಚು ರನ್ ಗಳಿಸಿದ ಮೊದಲ ಭಾರತೀಯ ಮಹಿಳಾ ಆಟಗಾರ್ತಿ.

**ಆರ್‌ಸಿಬಿ ಸಾರಥಿ:** ಇವರ ಅದ್ಭುತ ನಾಯಕತ್ವದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು (RCB) ತಂಡವು 2024 ಮತ್ತು 2026ರ ಮಹಿಳಾ ಪ್ರೀಮಿಯರ್ ಲೀಗ್ (WPL) ಟ್ರೋಫಿಗಳನ್ನು ಮುಡಿಗೇರಿಸಿಕೊಂಡಿದೆ.

**ವಿಶ್ವಕಪ್ ಯಶಸ್ಸು:** ಕಳೆದ ವರ್ಷ ನಡೆದ ಐಸಿಸಿ ಮಹಿಳಾ ಏಕದಿನ ವಿಶ್ವಕಪ್‌ನಲ್ಲಿ ಭಾರತ ತಂಡದ ಉಪನಾಯಕಿಯಾಗಿ ಜವಾಬ್ದಾರಿ ನಿಭಾಯಿಸಿದ್ದ ಮಂಧಾನ, ಟೂರ್ನಿಯಲ್ಲಿ ಅತಿ ಹೆಚ್ಚು ರನ್ ಗಳಿಸಿದ ಎರಡನೇ ಬ್ಯಾಟರ್ ಆಗಿದ್ದರು.

➤ **ತಂಡದ ಯಶಸ್ಸೇ ಮುಖ್ಯ ಎಂದ ಆಟಗಾರ್ತಿ:** ಸ್ಮೃತಿ ಮಂಧಾನ ಅವರ ವೈಯಕ್ತಿಕ ದಾಖಲೆಗಳಿಗಿಂತ ಹೆಚ್ಚಾಗಿ, ಅವರು ತಂಡಕ್ಕೆ ತಂದುಕೊಡುವ ಯಶಸ್ಸನ್ನು ಟೈಮ್ಸ್ ನಿಯತಕಾಲಿಕೆ ಪ್ರಶಂಸಿಸಿದೆ. ಸತತ ಸ್ಥಿರ ಪ್ರದರ್ಶನದ ಹಿನ್ನೆಲೆಯಲ್ಲಿ ಇತ್ತೀಚೆಗೆ ಅವರಿಗೆ ಪ್ರತಿಷ್ಠಿತ 'ಬಿಬಿಸಿ ಇಂಡಿಯನ್ ಸ್ಪೋರ್ಟ್ಸ್‌ವುಮನ್ ಆಫ್ ದಿ ಇಯರ್' (BBC Indian Sportswoman of the Year) ಪ್ರಶಸ್ತಿ ಕೂಡ ಲಭಿಸಿತ್ತು.

➤ ಪ್ರಸ್ತುತ ವಿಶ್ವ ಕ್ರಿಕೆಟ್‌ನಲ್ಲಿ ಭಾರತೀಯ ಮಹಿಳಾ ಕ್ರಿಕೆಟ್‌ನ ಪ್ರಮುಖ ಮುಖವಾಗಿ ಗುರುತಿಸಿಕೊಂಡಿರುವ ಸ್ಮೃತಿ ಮಂಧಾನ, ಟೈಮ್ಸ್‌ನ ಈ ಗೌರವದೊಂದಿಗೆ ಜಾಗತಿಕ ಕ್ರೀಡಾ ನಕಾಶೆಯಲ್ಲಿ ಭಾರತದ ಹೆಸರನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ದಿದ್ದಾರೆ.

## 18 June 2026

## ಜಾಗತಿಕ ಮರುಭೂಮೀಕರಣ ಮತ್ತು ಬರಗಾಲ ವಿರೋಧಿ ದಿನ 2026: ಭಾರತದಲ್ಲಿ ವಿಶೇಷ ಆಚರಣೆ



➤ ಪ್ರತಿವರ್ಷ ಜೂನ್ 17 ರಂದು ಜಾಗತಿಕವಾಗಿ 'ಜಾಗತಿಕ ಮರುಭೂಮೀಕರಣ ಮತ್ತು ಬರಗಾಲ ವಿರೋಧಿ ದಿನ' (World Day to Combat Desertification and Drought) ವನ್ನು ಆಚರಿಸಲಾಗುತ್ತದೆ. ಭೂಕುಸಿತ, ಮಣ್ಣಿನ ಸವೆತ ಮತ್ತು ಬರಗಾಲದ ಭೀತಿಯ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು ಈ ದಿನದ ಮುಖ್ಯ ಉದ್ದೇಶವಾಗಿದೆ. 2026 ರ ಜೂನ್ 17 ರಂದು ಭಾರತದಾದ್ಯಂತ ಈ ದಿನವನ್ನು ಅತ್ಯಂತ ಯಶಸ್ವಿಯಾಗಿ ಆಚರಿಸಲಾಯಿತು.

➤ **2026 ರ ಜಾಗತಿಕ ಘೋಷವಾಕ್ಯ (Global Theme):** ಈ ವರ್ಷದ ಅಂತರರಾಷ್ಟ್ರೀಯ ಥೀಮ್ "ಮಾಳಭೂಮಿಗಳು: ಗುರುತಿಸಿ. ಗೌರವಿಸಿ. ಪುನಃಸ್ಥಾಪಿಸಿ." (Rangelands: Recognize. Respect. Restore.) ಎಂಬುದಾಗಿದೆ. ಜಾಗತಿಕ ಮಟ್ಟದ ಮುಖ್ಯ ಕಾರ್ಯಕ್ರಮವನ್ನು ಈ ಬಾರಿ ಆಫ್ರಿಕಾದ ಕೀನ್ಯಾ (Kenya) ದೇಶದಲ್ಲಿ ಆಯೋಜಿಸಲಾಗಿತ್ತು. (ಗಮನಿಸಿ: ಹುಲ್ಲುಗಾವಲುಗಳು, ಪೊದೆಗಳು ಮತ್ತು ಸವನ್ನಾಗಳನ್ನು ಒಳಗೊಂಡ ಪರಿಸರ ವ್ಯವಸ್ಥೆಯನ್ನು ಮಾಳಭೂಮಿ ಅಥವಾ ರೇಂಜ್‌ಲ್ಯಾಂಡ್ಸ್ ಎಂದು ಕರೆಯಲಾಗುತ್ತದೆ).

➤ **ಭಾರತದಲ್ಲಿ WDC-PMKSY 2.0 ಅಡಿಯಲ್ಲಿ ಆಚರಣೆ:** ಭಾರತದಲ್ಲಿ ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯದ ಅಡಿಯಲ್ಲಿ ಬರುವ ಭೂಸಂಪನ್ಮೂಲ ಇಲಾಖೆಯು ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿತು. ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ 2.0 ರ ಜಲಾನಯನ ಅಭಿವೃದ್ಧಿ ಘಟಕದ (WDC-PMKSY 2.0) ಅಡಿಯಲ್ಲಿ ದೇಶದ 813 ಜಲಾನಯನ ಯೋಜನಾ ಪ್ರದೇಶಗಳಲ್ಲಿ ಈ ದಿನವನ್ನು ವಿಶೇಷವಾಗಿ ಆಚರಿಸಲಾಯಿತು.

➤ **ಭಾರತದಲ್ಲಿ ನಡೆದ ಪ್ರಮುಖ ಚಟುವಟಿಕೆಗಳು:**

ಭೂಮಿ ಪೂಜೆ ಮತ್ತು ಲೋಕಾರ್ಪಣೆ: ದೇಶಾದ್ಯಂತ 1,444 ಹೊಸ ಜಲಾನಯನ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಲಾಯಿತು ಹಾಗೂ ಈಗಾಗಲೇ ಪೂರ್ಣಗೊಂಡಿದ್ದ 8,341 ಜಲಾನಯನ ಆಸ್ತಿಗಳನ್ನು ಸಾರ್ವಜನಿಕರಿಗೆ ಲೋಕಾರ್ಪಣೆ ಮಾಡಲಾಯಿತು.

**ಏಕ್ ಪೇಡ್ ಮಾ ಕೆ ನಾಮ್ (Ek Ped Maa Ke Naam):** ಈ ಅಭಿಯಾನದ ಭಾಗವಾಗಿ ದೇಶಾದ್ಯಂತ ಒಟ್ಟು 51,299 ಸಸಿಗಳನ್ನು ನೆಡಲಾಯಿತು.

**ಸಾರ್ವಜನಿಕ ಪ್ರತಿಜ್ಞೆ:** "ಅಭಿವೃದ್ಧಿ ಹೊಂದಿದ ಭಾರತಕ್ಕಾಗಿ, ಬರಮುಕ್ತ ಭಾರತವನ್ನು ನಿರ್ಮಿಸೋಣ" ಎಂಬ ಧ್ಯೇಯದೊಂದಿಗೆ ಸಾರ್ವಜನಿಕರಿಗೆ ಮತ್ತು ಗ್ರಾಮೀಣ ಜನರಿಗೆ ಪ್ರತಿಜ್ಞಾವಿಧಿ ಬೋಧಿಸಲಾಯಿತು.

➤ **ಅಂತರರಾಷ್ಟ್ರೀಯ ಒಪ್ಪಂದ:** ಈ ದಿನವನ್ನು ವಿಶ್ವಸಂಸ್ಥೆಯ ಮರುಭೂಮೀಕರಣ ತಡೆಗಟ್ಟುವ ಒಪ್ಪಂದದ (UNCCD - United Nations Convention to Combat Desertification) ಅಡಿಯಲ್ಲಿ ಆಚರಿಸಲಾಗುತ್ತದೆ. ಇದು ಐತಿಹಾಸಿಕ 'ರಿಯೋ ಒಪ್ಪಂದಗಳ' (Rio Conventions) ಮೂರು ಪ್ರಮುಖ ಒಪ್ಪಂದಗಳಲ್ಲಿ ಒಂದಾಗಿದೆ.

## ಭಾರತ ಮತ್ತು ಥೈಲ್ಯಾಂಡ್ ನಡುವೆ 10ನೇ ರಕ್ಷಣಾ ಸಂವಾದ



➤ ಜೂನ್ 16, 2026 ರಂದು ಥೈಲ್ಯಾಂಡ್‌ನ ಬ್ಯಾಂಕಾಕ್‌ನಲ್ಲಿ ಭಾರತ ಮತ್ತು ಥೈಲ್ಯಾಂಡ್ ನಡುವೆ 10ನೇ ರಕ್ಷಣಾ ಸಂವಾದ (10th Defence Dialogue) ಯಶಸ್ವಿಯಾಗಿ ಜರುಗಿತು. ಭಾರತದ ರಕ್ಷಣಾ ಸಚಿವಾಲಯದ ಜಂಟಿ ಕಾರ್ಯದರ್ಶಿ ಸತ್ಯಜಿತ್ ಮೊಹಾಂತಿ ಮತ್ತು ಥೈಲ್ಯಾಂಡ್‌ನ ರಕ್ಷಣಾ ಉಪ ಖಾಯಂ ಕಾರ್ಯದರ್ಶಿ ಅಡ್ಮಿರಲ್ ನುಟ್ಟಾಪೋಲ್ ದೀವ್ಹಾನಿಚ್ ಈ ಉನ್ನತ ಮಟ್ಟದ ಸಭೆಯ ಸಹ-ಅಧ್ಯಕ್ಷತೆ ವಹಿಸಿದ್ದರು. ಇಂಡೋ-ಪೆಸಿಫಿಕ್ ವಲಯದಲ್ಲಿ ದ್ವಿಪಕ್ಷೀಯ ರಕ್ಷಣಾ ಸಹಕಾರವನ್ನು ಬಲಪಡಿಸುವುದು, ಜಂಟಿ ಮಿಲಿಟರಿ ತರಬೇತಿಗಳನ್ನು ಹೆಚ್ಚಿಸುವುದು ಮತ್ತು ಕಡಲ ಭದ್ರತೆಯನ್ನು ಉತ್ತೇಜಿಸುವುದು ಈ ಸಂವಾದದ ಮುಖ್ಯ ಉದ್ದೇಶವಾಗಿದ್ದು, ಕೆಪಿಎಸ್‌ಸಿ (KPSC) ಪರೀಕ್ಷೆಗಳ ದೃಷ್ಟಿಯಿಂದ ಇದು ಅತ್ಯಂತ ಪ್ರಮುಖ ಪ್ರಚಲಿತ ವಿದ್ಯಮಾನವಾಗಿದೆ.

➤ **ರಕ್ಷಣಾ ಸಂವಾದದ ಪ್ರಮುಖ ಚರ್ಚಾ ವಿಷಯಗಳು:**

ರಕ್ಷಣಾ ಉತ್ಪಾದನೆ ಮತ್ತು ನಾವೀನ್ಯತೆ (Defence Manufacturing & Innovation): ಮೇಕ್ ಇನ್ ಇಂಡಿಯಾ ಯೋಜನೆಯಡಿ ರಕ್ಷಣಾ ಸಲಕರಣೆಗಳ ಜಂಟಿ ಉತ್ಪಾದನೆ, ಸಂಶೋಧನೆ ಮತ್ತು ತಾಂತ್ರಿಕ

ನಾವೀನ್ಯತೆಗಳಿಗೆ ಹೆಚ್ಚಿನ ಆದ್ಯತೆ ನೀಡಲು ಉಭಯ ದೇಶಗಳು ಒಪ್ಪಿಕೊಂಡಿವೆ.

ಸೇನಾ ತರಬೇತಿ ಮತ್ತು ಸಾಮರ್ಥ್ಯ ವೃದ್ಧಿ: ಉಭಯ ದೇಶಗಳ ಸಶಸ್ತ್ರ ಪಡೆಗಳ ನಡುವೆ ಜಂಟಿ ಮಿಲಿಟರಿ ಸಮರಾಭ್ಯಾಸಗಳು ಮತ್ತು ತರಬೇತಿ ವಿನಿಮಯ ಕಾರ್ಯಕ್ರಮಗಳನ್ನು ಹೆಚ್ಚಿಸುವುದು.

ಕಡಲ ಸಹಕಾರ (Maritime Cooperation): ಇಂಡೋ-ಪೆಸಿಫಿಕ್ (Indo-Pacific) ವಲಯದಲ್ಲಿ ಸಮುದ್ರ ಮಾರ್ಗಗಳ ಸುರಕ್ಷತೆ, ನೌಕಾಪಡೆಗಳ ನಡುವಿನ ಸಮನ್ವಯತೆ ಮತ್ತು ಕಡಲ್ಗಳ್ಳತನ ತಡೆಗೆ ಜಂಟಿ ಕಾರ್ಯಾಚರಣೆ ನಡೆಸುವುದು.

ವ್ಯೂಹಾತ್ಮಕ ಪಾಲುದಾರಿಕೆ (Strategic Partnership): ಗಮನಾರ್ಹ ವಿಷಯವೆಂದರೆ, ಭಾರತ ಮತ್ತು ಥೈಲ್ಯಾಂಡ್ ದೇಶಗಳು 2025 ರಲ್ಲಿ ತಮ್ಮ ದ್ವಿಪಕ್ಷೀಯ ಬಾಂಧವ್ಯವನ್ನು ಅಧಿಕೃತವಾಗಿ 'ವ್ಯೂಹಾತ್ಮಕ ಪಾಲುದಾರಿಕೆ' ಮಟ್ಟಕ್ಕೆ ಏರಿಸಿದ್ದವು. ಈ ಬಾಂಧವ್ಯದ ಮುಂದುವರಿದ ಭಾಗವಾಗಿ ಈ ಸಭೆ ನಡೆದಿದೆ.

## ಭಾರತ-ಯುಕೆ ಮುಕ್ತ ವ್ಯಾಪಾರ ಒಪ್ಪಂದ (CETA): ಜುಲೈ 15 ರಿಂದ ಜಾರಿಗೆ




➤ ಭಾರತ ಮತ್ತು ಯುನೈಟೆಡ್ ಕಿಂಗ್‌ಡಮ್ (UK) ನಡುವಿನ ಐತಿಹಾಸಿಕ 'ಸಮಗ್ರ ಆರ್ಥಿಕ ಮತ್ತು ವ್ಯಾಪಾರ ಒಪ್ಪಂದ' (Comprehensive Economic and Trade Agreement - CETA) ಅಧಿಕೃತವಾಗಿ ಜುಲೈ 15, 2026 ರಿಂದ ಜಾರಿಗೆ ಬರಲಿದೆ. ಬ್ರಿಟಿಷ್ ಇತಿಹಾಸದಲ್ಲಿಯೇ ಸಹಿ ಹಾಕಿದ ನಂತರ ಅತ್ಯಂತ ವೇಗವಾಗಿ ಜಾರಿಗೆ ಬರುತ್ತಿರುವ ವ್ಯಾಪಾರ ಒಪ್ಪಂದ ಇದಾಗಿದೆ ಎಂದು ಲಂಡನ್ ತಿಳಿಸಿದೆ.

➤ **ಒಪ್ಪಂದದ ವ್ಯಾಪ್ತಿ**: ಈ ಒಪ್ಪಂದವು ಭಾರತದ ಇದುವರೆಗಿನ ಅತ್ಯಂತ ಸಮಗ್ರ ವ್ಯಾಪಾರ ಒಪ್ಪಂದವಾಗಿದೆ. ಇದು ಯುಕೆ ಸುಂಕಗಳಲ್ಲಿ 99% ಮತ್ತು ಭಾರತೀಯ ಸುಂಕಗಳಲ್ಲಿ 90% ರಷ್ಟು ಉದಾರೀಕರಣವನ್ನು (liberalisation) ಒಳಗೊಂಡಿದೆ. ಈ ಒಪ್ಪಂದವು ದೀರ್ಘಾವಧಿಯಲ್ಲಿ ದ್ವಿಪಕ್ಷೀಯ ವ್ಯಾಪಾರವನ್ನು ವಾರ್ಷಿಕವಾಗಿ £25.5 ಬಿಲಿಯನ್ (ಸುಮಾರು 2.7 ಲಕ್ಷ ಕೋಟಿ ರೂ.ಗೂ ಹೆಚ್ಚು) ವಿಸ್ತರಿಸುವ ನಿರೀಕ್ಷೆಯಿದೆ. ಇದು ಯುಕೆಯ ಜಿಡಿಪಿಯನ್ನು £4.8 ಬಿಲಿಯನ್ ಮತ್ತು ಭಾರತದ ಜಿಡಿಪಿಯನ್ನು £5.1 ಬಿಲಿಯನ್‌ನಷ್ಟು ಹೆಚ್ಚಿಸಲಿದೆ.

➤ **ಪ್ರಮುಖ ವಲಯಗಳಲ್ಲಿನ ಸುಂಕ ಕಡಿತ:**

ಸ್ಕಾಚ್ ವಿಸ್ಕಿ (Scotch whisky): ಸುಂಕವನ್ನು ಶೇ. 150 ರಿಂದ ಶೇ. 40ಕ್ಕೆ ಇಳಿಸಲಾಗುತ್ತದೆ.

ಆಟೋಮೊಬೈಲ್: ಸುಂಕವು ಶೇ. 100 ರಿಂದ ಶೇ. 10ಕ್ಕೆ (ಕೋಟಾದ ಆಧಾರದ ಮೇಲೆ) ಇಳಿಯಲಿದೆ.

ಸೌಂದರ್ಯವರ್ಧಕಗಳು (Cosmetics): ಶೇ. 22 ರವರೆಗಿನ ಸುಂಕವನ್ನು ಹಂತ ಹಂತವಾಗಿ ತೆಗೆದುಹಾಕಲಾಗುತ್ತದೆ.

ಉಕ್ಕು (Steel): ಉಕ್ಕಿನ ವಾಣಿಜ್ಯದ ಮೇಲಿನ ಆತಂಕಗಳನ್ನು ಪರಿಹರಿಸಲಾಗಿದೆ. ಭಾರತದ ರಫ್ತಿನ ಶೇ. 85 ರಷ್ಟು ಉಕ್ಕಿನ ಉತ್ಪನ್ನಗಳನ್ನು ನಿರ್ದಿಷ್ಟ ಕೋಟಾ ಮತ್ತು 'ಅಧಿಕೃತ ಬಳಕೆ ಯೋಜನೆಯ' (Authorised Use Scheme) ಅಡಿಯಲ್ಲಿ ರಕ್ಷಿಸಲಾಗಿದೆ.

ಸಾಮಾಜಿಕ ಭದ್ರತಾ ಒಪ್ಪಂದ (DCC): CETA ಜೊತೆಗೆ, 'ಡಬಲ್ ಕಾಂಟ್ರಿಬ್ಯೂಷನ್ ಕನ್ವೆನ್ಷನ್' (DCC) ಅಂದರೆ ಸಾಮಾಜಿಕ ಭದ್ರತಾ ಒಪ್ಪಂದವೂ ಜಾರಿಗೆ ಬರಲಿದೆ. ಯುಕೆಯಲ್ಲಿ ಕೆಲಸ ಮಾಡುವ ಭಾರತೀಯ ವೃತ್ತಿಪರರು ಮತ್ತು ಭಾರತದಲ್ಲಿ ಕೆಲಸ ಮಾಡುವ ಯುಕೆ ಪ್ರಜೆಗಳು ತಮ್ಮ ದೇಶದ ಸಾಮಾಜಿಕ ಭದ್ರತಾ ವ್ಯವಸ್ಥೆಗೆ ಕೊಡುಗೆ ನೀಡುವ ಅವಧಿಯನ್ನು 36 ತಿಂಗಳಿಂದ 60 ತಿಂಗಳಿಗೆ ವಿಸ್ತರಿಸಲಾಗಿದೆ. ಇದರಿಂದ ದ್ವಿಪಕ್ಷೀಯ ಕೊಡುಗೆಗಳ ಹೊರೆ ತಪ್ಪಲಿದೆ.

➤ **ಪರೀಕ್ಷಾ ದೃಷ್ಟಿಕೋನದಿಂದ ಮುಖ್ಯ ಅಂಶಗಳು:**

ಒಪ್ಪಂದದ ಹೆಸರು: ಸಮಗ್ರ ಆರ್ಥಿಕ ಮತ್ತು ವ್ಯಾಪಾರ ಒಪ್ಪಂದ (CETA).

ಜಾರಿಗೆ ಬರುವ ದಿನಾಂಕ: ಜುಲೈ 15, 2026.

ಒಪ್ಪಂದಕ್ಕೆ ಸಹಿ ಹಾಕಿದ್ದು: ಜುಲೈ 24, 2025.

ಪ್ರಮುಖ ಲಾಭ: ವ್ಯಾಪಾರ ಉದಾರೀಕರಣ (99% ಯುಕೆ ಸುಂಕ, 90% ಭಾರತೀಯ ಸುಂಕ).

ಸಾಮಾಜಿಕ ಭದ್ರತಾ ಒಪ್ಪಂದ (DCC): ಉನ್ನತ ಕೌಶಲ್ಯ ಹೊಂದಿರುವ ವೃತ್ತಿಪರರಿಗೆ 60 ತಿಂಗಳವರೆಗೆ ಸಾಮಾಜಿಕ ಭದ್ರತಾ ಕೊಡುಗೆಯಿಂದ ವಿನಾಯಿತಿ/ಸರಳೀಕರಣ.

## ವಿಶ್ವಸಂಸ್ಥೆ ಚಾರ್ಟರ್ ದಿನ: 140 ಕೋಟಿ ಭಾರತೀಯರ ಭರವಸೆಯ ಸಂಕೇತ ಎಂದ ರಾಯಭಾರಿ ಪರ್ವತನೇನಿ ಹರೀಶ್



➤ ಜೂನ್ 26ರಂದು ಜಾಗತಿಕವಾಗಿ ಆಚರಿಸಲಾಗುವ ವಿಶ್ವಸಂಸ್ಥೆಯ ಚಾರ್ಟರ್ ದಿನಾಚರಣೆ (UN Charter Day) ಮುನ್ನ ವಿಶ್ವಸಂಸ್ಥೆಯಲ್ಲಿನ ಭಾರತದ ಖಾಯಂ ಪ್ರತಿನಿಧಿಯಾದ ರಾಯಭಾರಿ ಪರ್ವತನೇನಿ ಹರೀಶ್ ಅವರು ಮಹತ್ವದ ಹೇಳಿಕೆ ನೀಡಿದ್ದಾರೆ. "ವಿಶ್ವಸಂಸ್ಥೆಯ ಚಾರ್ಟರ್ (ಸಂವಿಧಾನ) ಕೇವಲ ಒಂದು ದಾಖಲೆಯಲ್ಲ, ಅದು 140 ಕೋಟಿ ಭಾರತೀಯರ ದೊಡ್ಡ ಭರವಸೆಯಾಗಿದೆ" ಎಂದು ಅವರು ಪುನರುಚ್ಚರಿಸಿದ್ದಾರೆ.

➤ ಈ ಐತಿಹಾಸಿಕ ದಿನದ ನೆನಪಿಗಾಗಿ ಮತ್ತು ಬಹುಪಕ್ಷೀಯ ಜಾಗತಿಕ ಸಹಕಾರಕ್ಕೆ ಭಾರತದ ಬದ್ಧತೆಯನ್ನು ಸಾರಲು ರಾಯಭಾರಿ ಪರ್ವತನೇನಿ ಹರೀಶ್ ಅವರು ವಿಶ್ವಸಂಸ್ಥೆಯ ಚಾರ್ಟರ್‌ನ ಪೀಠಿಕೆಗೆ ಸಾಂಕೇತಿಕವಾಗಿ ಸಹಿ ಹಾಕಿದರು.

➤ **ಜಾಗತಿಕ ಬಿಕ್ಕಟ್ಟಿನ ಸಮಯದಲ್ಲಿ ಚಾರ್ಟರ್ ಮಹತ್ವ:** ಪ್ರಸ್ತುತ ಜಗತ್ತು ಎದುರಿಸುತ್ತಿರುವ ರಾಜಕೀಯ, ಆರ್ಥಿಕ ಬಿಕ್ಕಟ್ಟುಗಳು ಹಾಗೂ ಪ್ರಾದೇಶಿಕ ಸಂಘರ್ಷಗಳ ಹಿನ್ನೆಲೆಯಲ್ಲಿ ವಿಶ್ವಸಂಸ್ಥೆಯ ಮಹಾಸಭೆಯ (UNGA) ಅಧ್ಯಕ್ಷರಾದ ಅನ್ನಾಲೇನಾ ಬೇಲರ್ಬಾಕ್ ಅವರು ಕೂಡ ಮಾತನಾಡಿದ್ದಾರೆ. "ವಿಶ್ವಸಂಸ್ಥೆಯು ತೀವ್ರ ಒತ್ತಡಗಳನ್ನು ಎದುರಿಸುತ್ತಿರುವ ಈ ಸಮಯದಲ್ಲಿ, ಚಾರ್ಟರ್ ದಿನಾಚರಣೆಯು ಕೇವಲ ಒಂದು ಔಪಚಾರಿಕ ನೆನಪಲ್ಲ. ಬದಲಿಗೆ ಜಾಗತಿಕ ಶಾಂತಿಗಾಗಿ ನಾವೆಲ್ಲರೂ ಒಟ್ಟಾಗಿ ಕೆಲಸ ಮಾಡಲು ಕರೆ ನೀಡುವ ಮಹತ್ವದ ಸಮಯವಾಗಿದೆ" ಎಂದು ಅವರು ಎಚ್ಚರಿಸಿದ್ದಾರೆ.

➤ 1945ರ ಜೂನ್ 25ರಂದು ಅಮೆರಿಕದ ಸ್ಯಾನ್ ಫ್ರಾನ್ಸಿಸ್ಕೋದಲ್ಲಿ ನಡೆದ ಸಮ್ಮೇಳನದಲ್ಲಿ ಭಾರತದ ಪರವಾಗಿ ಸರ್ ಎ.ರಾಮಸ್ವಾಮಿ ಮೊದಲಿಯಾರ್ ಅವರು ಮೂಲ ಚಾರ್ಟರ್ ಆಫ್ ಯುನೈಟೆಡ್ ನೇಷನ್ಸ್‌ಗೆ ಸಹಿ ಮಾಡಿದ್ದರು.

➤ 1945ರಲ್ಲಿ ಭಾರತವಿನ್ನೂ ಬ್ರಿಟಿಷರ ಆಡಳಿತದಲ್ಲಿದ್ದರೂ ಸಹ, ಸ್ವಾತಂತ್ರ್ಯದ ಹೊಸ್ತಿಲಲ್ಲಿ ನಿಂತು ವಿಶ್ವಸಂಸ್ಥೆಯನ್ನು ಸ್ಥಾಪಿಸಿದ ಮೂಲ 50 ಸದಸ್ಯ ರಾಷ್ಟ್ರಗಳಲ್ಲಿ (Founding Members) ಒಂದಾಗಿ ಗುರುತಿಸಿಕೊಂಡಿತ್ತು ಎಂಬುದು ಭಾರತೀಯರಾದ ನಮಗೆ ಹೆಮ್ಮೆಯ ವಿಷಯ.

KAS, PSI, PC, FDA, SDA, RRB, PDO ಸೇರಿದಂತೆ ಇನ್ನಿತರ ಪರೀಕ್ಷೆಗಳ ಹಳೆ ಪ್ರಶ್ನೆ ಪತ್ರಿಕೆಗಳನ್ನು ಅಭ್ಯಾಸ ಮಾಡಲು ಇಲ್ಲಿ ಕ್ಲಿಕ್ ಮಾಡಿ

## ರಷ್ಯಾದಲ್ಲಿ ಆಸಿಯಾನ್ (ASEAN) ಶೃಂಗಸಭೆ: ಪುಟಿನ್ ನೇತೃತ್ವದಲ್ಲಿ ಜಾಗತಿಕ ನಾಯಕರ ಮಹತ್ವದ ಸಭೆ!



➤ ಪಾಶ್ಚಿಮಾತ್ಯ ದೇಶಗಳು ರಷ್ಯಾ ಮೇಲೆ ತೀವ್ರ ಆರ್ಥಿಕ ನಿರ್ಬಂಧಗಳನ್ನು ಹೇರುತ್ತಿರುವ ಹಾಗೂ ಉಕ್ರೇನ್ ಯುದ್ಧವನ್ನು ನಿಲ್ಲಿಸುವಂತೆ ಒತ್ತಡ ಹೆಚ್ಚಿಸುತ್ತಿರುವ ಬೆನ್ನಲ್ಲೇ, ಜಾಗತಿಕ ರಾಜತಾಂತ್ರಿಕತೆಯಲ್ಲಿ ಮಹತ್ವದ ಬೆಳವಣಿಗೆಯೊಂದು ನಡೆದಿದೆ. ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ನೇತೃತ್ವದಲ್ಲಿ ಮಧ್ಯ ರಷ್ಯಾದ ಐತಿಹಾಸಿಕ ಕಜಾನ್ (Kazan) ನಗರದಲ್ಲಿ 'ರಷ್ಯಾ-ಆಸಿಯಾನ್ ಶೃಂಗಸಭೆ' (Russia-ASEAN Summit) ಆರಂಭವಾಗಿದೆ.

➤ ರಷ್ಯಾ ಮತ್ತು ಆಸಿಯಾನ್ (ಆಗ್ನೇಯ ಏಷ್ಯಾ ರಾಷ್ಟ್ರಗಳ ಒಕ್ಕೂಟ) ನಡುವಿನ 35 ವರ್ಷಗಳ ಸಹಭಾಗಿತ್ವದ ನೆನಪಿಗಾಗಿ ಈ ಉನ್ನತ ಮಟ್ಟದ ಶೃಂಗಸಭೆಯನ್ನು ಆಯೋಜಿಸಲಾಗಿದೆ.

ಪಾಲ್ಗೊಂಡ ನಾಯಕರು: ಥಾಯ್ಲೆಂಡ್, ವಿಯೆಟ್ನಾಂ, ಮಲೇಷ್ಯಾ, ಬ್ರುನೈ ಮತ್ತು ಫಿಲಿಪೀನ್ಸ್ ಸೇರಿದಂತೆ ಆಸಿಯಾನ್ ಒಕ್ಕೂಟದ 11 ದೇಶಗಳ ಪ್ರಮುಖ ನಾಯಕರು ಮತ್ತು ಹಿರಿಯ ರಾಜತಾಂತ್ರಿಕರು ಈ ಸಭೆಯಲ್ಲಿ ಭಾಗವಹಿಸಿದ್ದಾರೆ. ಫಿಲಿಪೀನ್ಸ್ ಅಧ್ಯಕ್ಷ ಫರ್ಡಿನೆಂಡ್ ಮಾರ್ಕೋಸ್ ಜೂನಿಯರ್ ಹಾಗೂ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಜಂಟಿಯಾಗಿ ಈ ಸಭೆಯ ಸಹ-ಅಧ್ಯಕ್ಷತೆ ವಹಿಸಿದ್ದಾರೆ.

ಚರ್ಚೆಯ ಪ್ರಮುಖ ವಿಷಯಗಳು: ಜಾಗತಿಕ ಭದ್ರತೆ, ಮುಕ್ತ ವ್ಯಾಪಾರ, ಹೂಡಿಕೆ, ಡಿಜಿಟಲ್ ರೂಪಾಂತರ ಮತ್ತು ಪ್ರಸ್ತುತ ಜಗತ್ತನ್ನು ಕಾಡುತ್ತಿರುವ ಇಂಧನ ಬಿಕ್ಕಟ್ಟಿನ (Energy Crisis) ಕುರಿತು ಈ ಸಭೆಯಲ್ಲಿ ಸುದೀರ್ಘ ಚರ್ಚೆ ನಡೆಸಲಾಗುತ್ತಿದೆ.

ಪ್ರಮುಖ ಒಪ್ಪಂದಗಳು: ಈ ಶೃಂಗಸಭೆಯಲ್ಲಿ ಜಾಗತಿಕ ರಾಜತಾಂತ್ರಿಕತೆಗೆ ದಿಕ್ಸೂಚಿಯಾಗಲಿರುವ 'ಕಜಾನ್ ಪ್ರಕಟಣೆ' (Kazan Declaration) ಮತ್ತು 'ರಷ್ಯಾ-ಆಸಿಯಾನ್ ಸಮಗ್ರ ಕ್ರಿಯಾ ಯೋಜನೆ'ಗೆ ನಾಯಕರು ಸಹಿ ಹಾಕಲಿದ್ದಾರೆ.

➤ **ಏಷ್ಯಾದತ್ತ ಮುಖ ಮಾಡಿದ ರಷ್ಯಾ - ತೈಲ ರಾಜತಾಂತ್ರಿಕತೆ:** ಪಾಶ್ಚಿಮಾತ್ಯ ನಿರ್ಬಂಧಗಳು ಮತ್ತು ಇರಾನ್ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಯುರೋಪ್ ಮಾರುಕಟ್ಟೆ ಕಳೆದುಕೊಂಡಿರುವ ರಷ್ಯಾ, ಮಲೇಷ್ಯಾ ಸೇರಿದಂತೆ ಏಷ್ಯಾ ರಾಷ್ಟ್ರಗಳ ಇಂಧನ ಕೊರತೆ ನೀಗಿಸಲು ಮತ್ತು ತನ್ನ ಆರ್ಥಿಕತೆಯನ್ನು ಬಲಪಡಿಸಲು ಏಷ್ಯಾದತ್ತ ತೈಲ ರಫ್ತನ್ನು ಮರುಹೊಂದಿಸುತ್ತಿದೆ.

➤ **ವ್ಲಾಡಿಮಿರ್ ಪುಟಿನ್ ಹೇಳಿಕೆ:** "ರಷ್ಯಾ ಮತ್ತು ಆಸಿಯಾನ್ ದೇಶಗಳು ಜಗತ್ತಿನಲ್ಲಿ ಸಮಾನ ಹಾಗೂ ನ್ಯಾಯಯುತವಾದ ಬಹುಧ್ರುವೀಯ ವಿಶ್ವ ವ್ಯವಸ್ಥೆಯನ್ನು (Multipolar World Order) ಬೆಂಬಲಿಸುತ್ತವೆ. ಯಾವುದೇ ದೇಶ ಮತ್ತೊಂದು ದೇಶದ ಆಂತರಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡಬಾರದು ಎನ್ನುವುದನ್ನು ನಾವು ನಂಬುತ್ತೇವೆ" ಎಂದು ಪುಟಿನ್ ಜಾಗತಿಕ ನಾಯಕರಿಗೆ ತಿಳಿಸಿದ್ದಾರೆ.

➤ **ಜಿ-7 ಸಭೆಯಲ್ಲಿ ಟ್ರಂಪ್ ಆಕ್ರೋಶ - ಮತ್ತಷ್ಟು ನಿರ್ಬಂಧಗಳ ಎಚ್ಚರಿಕೆ:** ಇದೇ ಸಮಯದಲ್ಲಿ ಫ್ರಾನ್ಸ್‌ನಲ್ಲಿ ನಡೆಯುತ್ತಿರುವ ಜಿ-7 (G7) ಶೃಂಗಸಭೆಯಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಮಹತ್ವದ ಭೇಟಿ ನಡೆಸಿದ್ದಾರೆ. ರಷ್ಯಾ ತಕ್ಷಣವೇ ಉಕ್ರೇನ್ ಯುದ್ಧವನ್ನು ಕೊನೆಗೊಳಿಸಲು ಶಾಂತಿ ಒಪ್ಪಂದಕ್ಕೆ ಬರಬೇಕು ಎಂದು ಟ್ರಂಪ್ ಒತ್ತಾಯಿಸಿದ್ದಾರೆ. ಇಲ್ಲದಿದ್ದರೆ ರಷ್ಯಾದ ತೈಲ ರಫ್ತಿನ ಮೇಲೆ ಶೀಘ್ರದಲ್ಲೇ ವಾಷಿಂಗ್ಟನ್ ಮತ್ತಷ್ಟು ಕಠಿಣ ಮತ್ತು ಕರಾಳ ಆರ್ಥಿಕ ನಿರ್ಬಂಧಗಳನ್ನು ಹೇರಲಿದೆ ಎಂದು ಅಮೆರಿಕ ಎಚ್ಚರಿಕೆ ನೀಡಿದೆ.

ಉದ್ಯೋಗದ ಹೊಸ ಅಧಿಸೂಚನೆಗಳು ಈಗ ನಿಮ್ಮ ಮೊಬೈಲ್ ನಲ್ಲಿ! ಇಂದೇ 'KPSCVaani' ಆಪ್ ಡೌನ್‌ಲೋಡ್ ಮಾಡಿ.

## ಓಪನ್ ಎಐ ಜೊತೆ ದಕ್ಷಿಣ ಕೊರಿಯಾ ಐತಿಹಾಸಿಕ ಒಪ್ಪಂದ: ಎಐ ಸುರಕ್ಷತಾ ಪಾಲುದಾರಿಕೆ ಮಾಡಿಕೊಂಡ ವಿಶ್ವದ 4ನೇ ರಾಷ್ಟ್ರ!




➤ ಜಾಗತಿಕ ತಂತ್ರಜ್ಞಾನ ಲೋಕದಲ್ಲಿ ಕೃತಕ ಬುದ್ಧಿಮತ್ತೆ (Artificial Intelligence - AI) ತಂತ್ರಜ್ಞಾನವು ಅತ್ಯಂತ ವೇಗವಾಗಿ ಬೆಳೆಯುತ್ತಿದ್ದು, ಅದರ ಸುರಕ್ಷತೆಗೆ ಜಾಗತಿಕ ಮಟ್ಟದಲ್ಲಿ ದೊಡ್ಡ ಆದ್ಯತೆ ನೀಡಲಾಗುತ್ತಿದೆ. ಇದೀಗ ಚಾಟ್‌ಜಿಪಿಟಿ (ChatGPT) ಖ್ಯಾತಿಯ ಪ್ರಮುಖ ತಂತ್ರಜ್ಞಾನ ಸಂಸ್ಥೆಯಾದ 'ಓಪನ್ ಎಐ' (OpenAI) ನೊಂದಿಗೆ ಕೃತಕ ಬುದ್ಧಿಮತ್ತೆ (AI) ಸುರಕ್ಷತಾ ಪಾಲುದಾರಿಕೆ ಒಪ್ಪಂದಕ್ಕೆ ಸಹಿ ಹಾಕಿದ ವಿಶ್ವದ ನಾಲ್ಕನೇ ದೇಶವಾಗಿ ದಕ್ಷಿಣ ಕೊರಿಯಾ (South Korea) ಹೊರಹೊಮ್ಮಿದೆ. ದಕ್ಷಿಣ ಕೊರಿಯಾದ ವಿಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು (Ministry of Science and ICT) ಈ ಅಧಿಕೃತ ಪ್ರಕಟಣೆಯನ್ನು ಹೊರಡಿಸಿದೆ.

➤ **ಒಪ್ಪಂದದ ಪ್ರಮುಖ ಮುಖ್ಯಾಂಶಗಳು (Key Highlights of the MoU):**

4ನೇ ಜಾಗತಿಕ ಪಾಲುದಾರ: ಅಮೆರಿಕ (USA), ಬ್ರಿಟನ್ (UK) ಮತ್ತು ಜಪಾನ್ (Japan) ದೇಶಗಳ ನಂತರ ಓಪನ್ ಎಐ ಜೊತೆ ಈ ಪ್ರಮುಖ ಸುರಕ್ಷತಾ ಒಪ್ಪಂದ ಮಾಡಿಕೊಂಡ ಜಾಗತಿಕ ಮಟ್ಟದ ನಾಲ್ಕನೇ ದೇಶ ಎಂಬ ಹೆಗ್ಗಳಿಕೆಗೆ ದಕ್ಷಿಣ ಕೊರಿಯಾ ಪಾತ್ರವಾಗಿದೆ.

ಜಂಟಿ ಕಾರ್ಯಾಚರಣೆ: ದಕ್ಷಿಣ ಕೊರಿಯಾದ ಅಧಿಕೃತ ಎಐ ಸುರಕ್ಷತಾ ಸಂಸ್ಥೆ (Korea AI Safety Institute - AISI) ಮತ್ತು ಓಪನ್ ಎಐ ಸಂಸ್ಥೆಗಳು ಜಂಟಿಯಾಗಿ ಕಾರ್ಯನಿರ್ವಹಿಸಲಿವೆ.

ಸ್ಥಳೀಯ ಭಾಷೆ ಮತ್ತು ಸಾಮಾಜಿಕ ಹಿನ್ನೆಲೆಗೆ ಆದ್ಯತೆ: ಕೊರಿಯನ್ ಭಾಷೆ ಮತ್ತು ಅಲ್ಲಿನ ಸಾಮಾಜಿಕ ಪರಿಸರಕ್ಕೆ ತಕ್ಕಂತೆ ಎಐ ತಂತ್ರಜ್ಞಾನದಿಂದ ಎದುರಾಗಬಹುದಾದ ಅಪಾಯಗಳನ್ನು ಮೊದಲೇ ಗುರುತಿಸುವುದು, ಮೌಲ್ಯಮಾಪನ ಮಾಡುವುದು ಮತ್ತು ಸುರಕ್ಷತಾ ನಿಯಮಗಳನ್ನು ರೂಪಿಸುವುದು ಈ ಒಪ್ಪಂದದ ಮುಖ್ಯ ಉದ್ದೇಶವಾಗಿದೆ.

➤ **ಸ್ಯಾಮ್ ಆಲ್ಟ್‌ಮನ್ ಪ್ರವಾಸ ಮುಂದೂಡಿಕೆ:** ಮತ್ತೊಂದೆಡೆ, ಸ್ಯಾಮ್ಸಂಗ್ (Samsung) ಮತ್ತು ಎಸ್‌ಕೆ ಹೈನಿಕ್ಸ್ (SK Hynix) ಸೇರಿದಂತೆ ದಕ್ಷಿಣ ಕೊರಿಯಾದ ಪ್ರಮುಖ ಜಾಗತಿಕ ತಂತ್ರಜ್ಞಾನ ಸಂಸ್ಥೆಗಳೊಂದಿಗೆ ಪ್ರಮುಖ ಮಾತುಕತೆ ನಡೆಸಲು ದಕ್ಷಿಣ ಕೊರಿಯಾಕ್ಕೆ ಬರಬೇಕಿದ್ದ ಓಪನ್ ಎಐ ಸಿಇಒ (CEO) ಸ್ಯಾಮ್ ಆಲ್ಟ್‌ಮನ್ (Sam Altman) ಅವರ ಪ್ರವಾಸವು ವೈಯಕ್ತಿಕ ಕಾರಣಗಳಿಂದಾಗಿ ಸದ್ಯಕ್ಕೆ ಮುಂದೂಡಲ್ಪಟ್ಟಿದೆ. ಆದಾಗ್ಯೂ, ದಕ್ಷಿಣ ಕೊರಿಯಾ ತಮಗೆ ಅತ್ಯಂತ ಪ್ರಮುಖ ಹಾಗೂ ಆಯಕಟ್ಟಿನ (Strategic) ಪಾಲುದಾರ ದೇಶವಾಗಿದ್ದು, ಅತ್ಯಂತ ಶೀಘ್ರದಲ್ಲೇ ಅಲ್ಲಿಗೆ ಭೇಟಿ ನೀಡುವುದಾಗಿ ಓಪನ್ ಎಐ ಸಂಸ್ಥೆ ತಿಳಿಸಿದೆ.

➤ **ಓಪನ್ ಎಐ ಜೊತೆ ಈ ಒಪ್ಪಂದ ಮಾಡಿಕೊಂಡ ಮೊದಲ 3 ದೇಶಗಳು:**

ಅಮೆರಿಕ (United States of America - USA)
ಬ್ರಿಟನ್ / ಯುನೈಟೆಡ್ ಕಿಂಗ್ಡಮ್ (United Kingdom - UK)
ಜಪಾನ್ (Japan)

## ಭಾರತದ ರಕ್ಷಣಾ ಉತ್ಪಾದನೆಯಲ್ಲಿ ಸಾರ್ವಕಾಲಿಕ ದಾಖಲೆ: 1.78 ಲಕ್ಷ ಕೋಟಿ ರೂ.ಗೆ ಏರಿಕೆ! 'ಆತ್ಮನಿರ್ಭರ ಭಾರತ'ಕ್ಕೆ ದಕ್ಕಿದ ಬಹುದೊಡ್ಡ ಯಶಸ್ಸು




➤ ಭಾರತವು ರಕ್ಷಣಾ ವಲಯದಲ್ಲಿ ಜಾಗತಿಕ ಮಟ್ಟದ ಬಲಿಷ್ಠ ದೇಶಗಳ ಮಾದರಿಯಲ್ಲೇ ತನ್ನದೇ ಆದ ಸ್ವಾವಲಂಬಿ ರಕ್ಷಣಾ ಕೈಗಾರಿಕಾ ಪರಿಸರವನ್ನು (Defence Industrial Ecosystem) ಯಶಸ್ವಿಯಾಗಿ ನಿರ್ಮಿಸುತ್ತಿದೆ. ಕೇಂದ್ರ ರಕ್ಷಣಾ ಇಲಾಖೆಯ ಇತ್ತೀಚಿನ ಪ್ರಕಟಣೆಯ ಪ್ರಕಾರ, ದೇಶದ ಒಟ್ಟು ರಕ್ಷಣಾ ಉತ್ಪಾದನೆಯು ಕಳೆದ ಹಣಕಾಸು ವರ್ಷದಲ್ಲಿ 1.78 ಲಕ್ಷ ಕೋಟಿ ರೂಪಾಯಿಗಳ ಸಾರ್ವಕಾಲಿಕ ದಾಖಲೆಯ ಎತ್ತರಕ್ಕೆ ತಲುಪಿದೆ.

**➤ ರಕ್ಷಣಾ ಉತ್ಪಾದನೆ: ಪ್ರಮುಖ ಅಂಕಿ-ಅಂಶಗಳು:**

ಪ್ರಸಕ್ತ ಸಾಲಿನ ಉತ್ಪಾದನೆ: 1.78 ಲಕ್ಷ ಕೋಟಿ ರೂ.

ಕಳೆದ ವರ್ಷದ ಉತ್ಪಾದನೆ (2024-25): 1.54 ಲಕ್ಷ ಕೋಟಿ ರೂ.

ವಾರ್ಷಿಕ ಬೆಳವಣಿಗೆ ದರ: ಶೇಕಡಾ 15.6% ರಷ್ಟು ಪ್ರಗತಿ.

ಕಳೆದ 10 ವರ್ಷಗಳ ಪ್ರಗತಿ: 2013-14ರಲ್ಲಿ ಕೇವಲ 43,746 ಕೋಟಿ ರೂ. ಇದ್ದ ದೇಶೀಯ ರಕ್ಷಣಾ ಉತ್ಪಾದನೆಯು ಈಗ ಸುಮಾರು ನಾಲ್ಕು ಪಟ್ಟು (4 Times) ಹೆಚ್ಚಾಗಿದೆ.

ಕಳೆದ 5 ವರ್ಷಗಳ ಪ್ರಗತಿ: 2020-21ರ ಸಾಲಿನ 84,642 ಕೋಟಿ ರೂ. ಲೆಕ್ಕಾಚಾರಕ್ಕೆ ಹೋಲಿಸಿದರೆ ಪ್ರಸ್ತುತ ಉತ್ಪಾದನೆ ಬರೋಬ್ಬರಿ ದುಪ್ಪಟ್ಟಾಗಿದೆ (Double).

**➤ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಶ್ಲಾಘನೆ:** "ರಕ್ಷಣಾ ಉತ್ಪಾದನೆಯ ಇತಿಹಾಸದಲ್ಲೇ ಇದು ಅತ್ಯಂತ ಮಹತ್ವದ ಮೈಲಿಗಲ್ಲು ಹಾಗೂ ಕೇಂದ್ರ ಸರ್ಕಾರದ 'ಆತ್ಮನಿರ್ಭರ ಭಾರತ' (Self-Reliant India) ಅಭಿಯಾನಕ್ಕೆ ಸಿಕ್ಕ ಬಹುದೊಡ್ಡ ಯಶಸ್ಸು" ಎಂದು ರಕ್ಷಣಾ ಸಚಿವರು ಹರ್ಷ ವ್ಯಕ್ತಪಡಿಸಿದ್ದಾರೆ.

**➤ ಬೃಹತ್ ರಕ್ಷಣಾ ಬಜೆಟ್ ಮತ್ತು ಆಧುನೀಕರಣ:** ಪ್ರಸಕ್ತ ಸಾಲಿನಲ್ಲಿ ಕೇಂದ್ರ ಸರ್ಕಾರವು ರಕ್ಷಣಾ ವಲಯಕ್ಕಾಗಿ 7.85 ಲಕ್ಷ ಕೋಟಿ ರೂಪಾಯಿಗಳ ಬೃಹತ್ ರಕ್ಷಣಾ ಬಜೆಟ್ ಅನ್ನು ಘೋಷಿಸಿದೆ. ಇದರಲ್ಲಿ ಸೇನೆಯ ಆಧುನೀಕರಣ (Modernisation) ಮತ್ತು ಹೊಸ ತಂತ್ರಜ್ಞಾನದ ಶಸ್ತ್ರಾಸ್ತ್ರಗಳ ಖರೀದಿಗಾಗಿ ಬರೋಬ್ಬರಿ 2.19 ಲಕ್ಷ ಕೋಟಿ ರೂಪಾಯಿಗಳನ್ನು ಪ್ರತ್ಯೇಕವಾಗಿ ಮೀಸಲಿಡಲಾಗಿದೆ.

**➤ ರಕ್ಷಣಾ ವಲಯದಲ್ಲಿ ಖಾಸಗಿ ಕಂಪನಿಗಳ ವೇಗದ ಬೆಳವಣಿಗೆ:** 2025-26ನೇ ಸಾಲಿನಲ್ಲಿ ಖಾಸಗಿ ಕಂಪನಿಗಳು ಬರೋಬ್ಬರಿ 42,000 ಕೋಟಿ ರೂಪಾಯಿ ಮೌಲ್ಯದ ರಕ್ಷಣಾ ಸಾಮಗ್ರಿಗಳನ್ನು ಉತ್ಪಾದಿಸುವ ಮೂಲಕ ತಮ್ಮ ಒಟ್ಟು ಪಾಲನ್ನು ಶೇಕಡಾ 24ಕ್ಕೆ ಹೆಚ್ಚಿಸಿಕೊಂಡಿವೆ.

➤ ಭಾರತದ ಅತ್ಯಂತ ಮಹತ್ವಾಕಾಂಕ್ಷೆಯ 5ನೇ ಪೀಳಿಗೆಯ (5th Generation) ಯುದ್ಧ ವಿಮಾನ ಯೋಜನೆಯಾದ 'ಅಡ್ವಾನ್ಸ್ ಮಲ್ಟಿರೋಲ್ ಕಾಂಬ್ಯಾಟ್ ಏರ್‌ಕ್ರಾಫ್ಟ್' (AMCA - Advanced Medium Combat Aircraft) ಕಾರ್ಯಕ್ರಮದಲ್ಲಿ ದೇಶದ ಪ್ರತಿಷ್ಠಿತ ಖಾಸಗಿ ಸಂಸ್ಥೆಗಳು ಜಂಟಿಯಾಗಿ ಭಾಗವಹಿಸುತ್ತಿವೆ:

ಟಾಟಾ ಅಡ್ವಾನ್ಸ್‌ಡ್ ಸಿಸ್ಟಮ್ಸ್ (Tata Advanced Systems): ಯುದ್ಧ ವಿಮಾನಗಳ ಜೋಡಣೆ (Assembly) ಮತ್ತು ಶಸ್ತ್ರಾಸ್ತ್ರಗಳ ರಫ್ತಿನಲ್ಲಿ ಮುಂಚೂಣಿಯಲ್ಲಿದೆ.

ಲಾರ್ಸೆನ್ ಅಂಡ್ ಟೂಬ್ರೊ (L&T): ಜಲಾಂತರ್ಗಾಮಿ (Submarines) ಮತ್ತು ಅತ್ಯಾಧುನಿಕ ಕ್ಷಿಪಣಿ ಉಡಾವಣಾ ವ್ಯವಸ್ಥೆಗಳನ್ನು (Missile Launch Systems) ಸಿದ್ಧಪಡಿಸುವಲ್ಲಿ ಪರಿಣತಿ ಪಡೆದಿದೆ.

ಭಾರತ್ ಫೋರ್ಜ್ (Bharat Forge): ಲೋಹಶಾಸ್ತ್ರದಲ್ಲಿ (Metallurgy) ಹೆಸರಾದ ಈ ಸಂಸ್ಥೆಯು ಬೃಹತ್ ಫಿರಂಗಿ (Artillery) ಹಾಗೂ ಯುದ್ಧವಾಹನಗಳನ್ನು ಸಿದ್ಧಪಡಿಸುತ್ತಿದೆ.

ಅದಾನಿ ಮತ್ತು ಮಹೀಂದ್ರಾ ಡಿಫೆನ್ಸ್: ಈ ಸಂಸ್ಥೆಗಳು ಕ್ಷಿಪಣಿ ಹಾಗೂ ರಕ್ಷಣಾ ವಲಯದಲ್ಲಿ ಹೆಚ್ಚು ಬಳಕೆಯಾಗುತ್ತಿರುವ ಡ್ರೋನ್ (Drone Technology) ತಯಾರಿಕೆಯಲ್ಲಿ ವೇಗವಾಗಿ ಮುನ್ನುಗ್ಗುತ್ತಿವೆ.

## ಆಟಿಸ್ಟಿಕ್ ಪ್ರೈಡ್ ಡೇ 2026: ನರವೈವಿಧ್ಯತೆ ಮತ್ತು ಒಳಗೊಳ್ಳುವಿಕೆಯ ಜಾಗತಿಕ ಆಚರಣೆ



➤ ಪ್ರತಿ ವರ್ಷ ಜೂನ್ 18 ರಂದು ಜಗತ್ತಿನಾದ್ಯಂತ 'ವಿಶ್ವ ಆಟಿಸ್ಟಿಕ್ ಪ್ರೈಡ್ ಡೇ' (Autistic Pride Day) ಅನ್ನು ಆಚರಿಸಲಾಗುತ್ತದೆ. ಇದು ಕೇವಲ ಒಂದು ಕಾಯಿಲೆಯ ಬಗೆಗಿನ ಜಾಗೃತಿ ದಿನವಲ್ಲ; ಬದಲಿಗೆ ಆಟಿಸಂ (Autism) ಹೊಂದಿರುವ ವ್ಯಕ್ತಿಗಳ ಅನನ್ಯತೆ, ಅವರ ಹಕ್ಕುಗಳು ಮತ್ತು ಸಮಾಜದಲ್ಲಿ ಅವರ ಒಳಗೊಳ್ಳುವಿಕೆಯನ್ನು ಹೆಮ್ಮೆಯಿಂದ ಆಚರಿಸುವ ದಿನವಾಗಿದೆ.

➤ ಆಟಿಸಂ ಅಥವಾ ಆಟಿಸಂ ಸ್ಪೆಕ್ಟ್ರಮ್ ಡಿಸಾರ್ಡರ್ (ASD) ಎಂಬುದು ಮಿದುಳಿನ ಬೆಳವಣಿಗೆಗೆ ಸಂಬಂಧಿಸಿದ ಒಂದು ನರರೋಗ ಸ್ಥಿತಿಯಾಗಿದೆ (Neurodevelopmental condition). ಇದು ಯಾವುದೇ ಕಾಯಿಲೆಯಲ್ಲ, ಬದಲಿಗೆ ಮಿದುಳು ಕಾರ್ಯನಿರ್ವಹಿಸುವ ಒಂದು ಭಿನ್ನ ವಿಧಾನವಾಗಿದೆ.

➤ ಇದನ್ನು ಮೊದಲ ಬಾರಿಗೆ 2005 ರಲ್ಲಿ 'ಆಸ್ಪೀಸ್ ಫಾರ್ ಫ್ರೀಡಮ್' (Aspies for Freedom - AFF) ಎಂಬ ಸಂಸ್ಥೆಯು ಪ್ರಾರಂಭಿಸಿತು. ಈ ದಿನದ ದೊಡ್ಡ ವಿಶೇಷತೆಯೆಂದರೆ, ಇದನ್ನು ಯಾವುದೇ ಹೊರಗಿನ ದತ್ತಿ ಸಂಸ್ಥೆಗಳು ಆರಂಭಿಸಿದ್ದಲ್ಲ. ಬದಲಿಗೆ ಆಟಿಸಂ ಬಾಧಿತ ವ್ಯಕ್ತಿಗಳೇ ಸ್ವತಃ ಒಗ್ಗೂಡಿ ತಮಗಾಗಿ ರೂಪಿಸಿಕೊಂಡ ದಿನವಾಗಿದೆ. ಧ್ಯೇಯ: ಆಟಿಸಂ ಎಂಬುದು ಗುಣಪಡಿಸಬೇಕಾದ ಕಾಯಿಲೆಯಲ್ಲ, ಅದು ಮನುಷ್ಯನ ಸಹಜ ಅಸ್ತಿತ್ವದ ಒಂದು ಭಾಗ ಎಂಬುದನ್ನು ಜಗತ್ತಿಗೆ ಸಾರುವುದು ಇದರ ಮುಖ್ಯ ಉದ್ದೇಶವಾಗಿದೆ.

**➤ ಆಟಿಸ್ಟಿಕ್ ಪ್ರೈಡ್ ಡೇ 2026 ರ ಪ್ರಮುಖ ಆದ್ಯತೆಗಳು:**

ಸಮಗ್ರ ಶಿಕ್ಷಣ ಸಂಸ್ಥೆಗಳು (Inclusive Schools): ಶಾಲೆಗಳಲ್ಲಿ ಆಟಿಸ್ಟಿಕ್ ಮಕ್ಕಳನ್ನು ಪ್ರತ್ಯೇಕವಾಗಿ ನೋಡದೆ, ಅವರ ಕಲಿಕಾ ಶೈಲಿಗೆ ತಕ್ಕಂತೆ ಪಠ್ಯಕ್ರಮ ಮತ್ತು ಪೂರಕ ವಾತಾವರಣವನ್ನು ನಿರ್ಮಿಸುವುದು.

ಸಮಾನ ಉದ್ಯೋಗಾವಕಾಶ (Inclusive Workplaces): ಕಾರ್ಪೊರೇಟ್ ಮತ್ತು ಸರ್ಕಾರಿ ವಲಯಗಳಲ್ಲಿ ಆಟಿಸ್ಟಿಕ್ ವ್ಯಕ್ತಿಗಳ ತಾರ್ಕಿಕ ಮತ್ತು ದೃಶ್ಯ ಗ್ರಹಿಕಾ ಸಾಮರ್ಥ್ಯವನ್ನು ಗುರುತಿಸಿ ಸೂಕ್ತ ಕೆಲಸ ನೀಡುವುದು.

ಸಾಮಾಜಿಕ ಸ್ವೀಕೃತಿ (Social Acceptance): ಸಮಾಜದಲ್ಲಿ ಅವರ ಮೇಲಿನ ಕೀಳರಿಮೆಯನ್ನು ಹೋಗಲಾಡಿಸಿ ಗೌರವಯುತ ಜೀವನಕ್ಕೆ ದಾರಿ ಮಾಡಿಕೊಡುವುದು.

## ಮಹಿಳಾ ಟಿ20 ವಿಶ್ವಕಪ್‌ನಲ್ಲಿ ಐತಿಹಾಸಿಕ ವಿಶ್ವ ದಾಖಲೆ ಬರೆದ ಫಾತಿಮಾ ಸನಾ!




➤ ಪ್ರಸ್ತುತ ಇಂಗ್ಲೆಂಡ್‌ನ ಬರ್ಮಿಂಗ್ಹ್ಯಾಮ್‌ನ ಎಡ್ಜ್‌ಬಾಸ್ಟನ್ ಕ್ರಿಕೆಟ್ ಮೈದಾನದಲ್ಲಿ ನಡೆಯುತ್ತಿರುವ 2026ರ ಐಸಿಸಿ ಮಹಿಳಾ ಟಿ20 ವಿಶ್ವಕಪ್ (ICC Women's T20 World Cup 2026) ಜಾಗತಿಕವಾಗಿ ಸುದ್ದಿಯಲ್ಲಿದೆ. ದಕ್ಷಿಣ ಆಫ್ರಿಕಾ ವಿರುದ್ಧದ

ಪಂದ್ಯದಲ್ಲಿ ಪಾಕಿಸ್ತಾನ ಮಹಿಳಾ ಕ್ರಿಕೆಟ್ ತಂಡದ ನಾಯಕಿ ಫಾತಿಮಾ ಸನಾ (Fatima Sana) ಅವರು ಅದ್ಭುತ ಆಲ್ ರೌಂಡ್ ಪ್ರದರ್ಶನ ನೀಡುವ ಮೂಲಕ ಕ್ರಿಕೆಟ್ ಇತಿಹಾಸದಲ್ಲೇ ಹಿಂದೆಂದೂ ಕಾಣದ ಅಪರೂಪದ ತ್ರಿವಳಿ ವಿಶ್ವ ದಾಖಲೆಗಳನ್ನು ಬರೆದಿದ್ದಾರೆ.

➤ **ಫಾತಿಮಾ ಸನಾ ನಿರ್ಮಿಸಿದ ಐತಿಹಾಸಿಕ ವಿಶ್ವ ದಾಖಲೆಗಳು:**

1. ಅರ್ಧಶತಕ ಮತ್ತು 3 ವಿಕೆಟ್ ಪಡೆದ ವಿಶ್ವದ ಮೊದಲ ನಾಯಕಿ (First Captain to achieve Double Feat): ಐಸಿಸಿ ಮಹಿಳಾ ಟಿ20 ವಿಶ್ವಕಪ್ ಇತಿಹಾಸದಲ್ಲೇ (ಎಲ್ಲಾ 10 ಆವೃತ್ತಿಗಳನ್ನು ಒಳಗೊಂಡು) ಪಂದ್ಯವೊಂದರಲ್ಲಿ ಅರ್ಧಶತಕ (ಬ್ಯಾಟಿಂಗ್‌ನಲ್ಲಿ 55 ರನ್) ಹಾಗೂ 3 ವಿಕೆಟ್ (ಬೌಲಿಂಗ್‌ನಲ್ಲಿ 3/16)* ಪಡೆದ ವಿಶ್ವದ ಮೊದಲ ಮಹಿಳಾ ತಂಡದ ನಾಯಕಿ (Captain) ಎಂಬ ಐತಿಹಾಸಿಕ ಕೀರ್ತಿಗೆ ಫಾತಿಮಾ ಸನಾ ಪಾತ್ರರಾಗಿದ್ದಾರೆ. ಮಹಿಳಾ ಟಿ20 ವಿಶ್ವಕಪ್‌ನಲ್ಲಿ ಈ ಅಪರೂಪದ ಸಾಧನೆ ಮಾಡಿದ ಒಟ್ಟಾರೆ 4ನೇ ಆಟಗಾರ್ತಿ ಇವರಾಗಿದ್ದಾರೆ.

**2. 9ನೇ ವಿಕೆಟ್‌ಗೆ ಸಾರ್ವಕಾಲಿಕ ಗರಿಷ್ಠ ಜೊತೆಯಾಟ (Highest 9th Wicket Partnership):** ದಕ್ಷಿಣ ಆಫ್ರಿಕಾ ವಿರುದ್ಧದ ಪಂದ್ಯದಲ್ಲಿ ಪಾಕಿಸ್ತಾನ ತಂಡ ಕೇವಲ 50 ರನ್‌ಗಳಿಗೆ 8 ವಿಕೆಟ್ ಕಳೆದುಕೊಂಡು ತೀವ್ರ ಸಂಕಷ್ಟದಲ್ಲಿದ್ದಾಗ, ನಾಯಕಿ ಫಾತಿಮಾ ಸನಾ ಮತ್ತು ಟೂಬಾ ಹಸನ್ (Tuba Hassan) ಜೋಡಿ ಭರ್ಜರಿ ಬ್ಯಾಟಿಂಗ್ ನಡೆಸಿತು. ಇವರಿಬ್ಬರು 9ನೇ ವಿಕೆಟ್‌ಗೆ ದಾಖಲೆಯ 71 ರನ್‌ಗಳ ಜೊತೆಯಾಟ ಆಡಿದರು. ಇದು ಮಹಿಳಾ ಟಿ20 ವಿಶ್ವಕಪ್ ಇತಿಹಾಸದಲ್ಲೇ 9ನೇ ವಿಕೆಟ್‌ಗೆ ದಾಖಲಾದ ಅತ್ಯುನ್ನತ ರನ್‌ಗಳ ಜೊತೆಯಾಟವಾಗಿದೆ.

**3. 8ನೇ ಕ್ರಮಾಂಕದಲ್ಲಿ ಗರಿಷ್ಠ ವೈಯಕ್ತಿಕ ಸ್ಕೋರ್ (Highest Score at No. 8 or lower):** ಫಾತಿಮಾ ಸನಾ ಅವರು ಈ ಪಂದ್ಯದಲ್ಲಿ 8ನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಲು ಕಣಕ್ಕಿಳಿದು 38 ಎಸೆತಗಳಲ್ಲಿ ಅಜೇಯ 55 ರನ್ (6 ಬೌಂಡರಿ, 2 ಸಿಕ್ಸರ್) ಚಚ್ಚಿದರು. ಇದರೊಂದಿಗೆ ಮಹಿಳಾ ಟಿ20 ವಿಶ್ವಕಪ್ ಇತಿಹಾಸದಲ್ಲೇ 8ನೇ ಅಥವಾ ಅದಕ್ಕಿಂತ ಕೆಳಗಿನ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಬಂದು ಅತ್ಯಧಿಕ ವೈಯಕ್ತಿಕ ರನ್ ಗಳಿಸಿದ ಆಟಗಾರ್ತಿ ಎಂಬ ಹೊಸ ದಾಖಲೆಯನ್ನು ತಮ್ಮ ಹೆಸರಿಗೆ ಬರೆದುಕೊಂಡಿದ್ದಾರೆ.

➤ ಫಾತಿಮಾ ಸನಾ (ವಯಸ್ಸು 24 ವರ್ಷ) ಕೇವಲ ಟಿ20 ವಿಶ್ವಕಪ್ ಮಾತ್ರವಲ್ಲದೆ, ಇತ್ತೀಚೆಗಷ್ಟೇ (ಮೇ 2026 ರಲ್ಲಿ) ಜಿಂಬಾಬ್ವೆ ವಿರುದ್ಧದ ಪಂದ್ಯದಲ್ಲಿ ಕೇವಲ 15 ಎಸೆತಗಳಲ್ಲಿ ಅರ್ಧಶತಕ ಸಿಡಿಸುವ ಮೂಲಕ ಮಹಿಳಾ ಟಿ20 ಅಂತರರಾಷ್ಟ್ರೀಯ (WT20I) ಕ್ರಿಕೆಟ್ ಇತಿಹಾಸದಲ್ಲೇ 'ಅತ್ಯಂತ ವೇಗದ ಅರ್ಧಶತಕ' ಬಾರಿಸಿದ ಜಾಗತಿಕ ದಾಖಲೆಯನ್ನು ಸಹ ನಿರ್ಮಿಸಿದ್ದರು. ಈ ಮೂಲಕ ಅವರು ಭಾರತದ ರಿಚಾ ಘೋಷ್ ಹಾಗೂ ನ್ಯೂಜಿಲೆಂಡ್‌ನ ಸೋಫಿ ಡಿವೈನ್ ಅವರ ದಾಖಲೆಯನ್ನು ಮುರಿದಿದ್ದರು.

## ಒಡಿಶಾ ಕೈಗಾರಿಕಾ ಕ್ರಾಂತಿ: ₹76,612 ಕೋಟಿ ಮೌಲ್ಯದ ಯೋಜನೆಗಳಿಗೆ ಅನುಮೋದನೆ, 50,500+ ಉದ್ಯೋಗ ಸೃಷ್ಟಿ!




➤ ದೇಶದ ಆರ್ಥಿಕತೆ ಮತ್ತು ಕೈಗಾರಿಕಾ ವಲಯದಲ್ಲಿ ಪ್ರಮುಖ ಬೆಳವಣಿಗೆಯೊಂದರಲ್ಲಿ, ಒಡಿಶಾ ಸರ್ಕಾರವು ಜೂನ್ 17, 2026 ರಂದು ಬರೋಬ್ಬರಿ ₹76,611.86 ಕೋಟಿ (ಅಂದಾಜು 76,612 ಕೋಟಿ) ಮೌಲ್ಯದ 20 ಬೃಹತ್ ಕೈಗಾರಿಕಾ ಯೋಜನೆಗಳಿಗೆ ಅನುಮೋದನೆ ನೀಡಿದೆ. ಒಡಿಶಾ ಮುಖ್ಯಮಂತ್ರಿಗಳ ಅಧ್ಯಕ್ಷತೆಯ ಉನ್ನತ ಮಟ್ಟದ ಪ್ರಾಧಿಕಾರವು ಈ ಹಸಿರು ನಿಶಾನೆ ತೋರಿಸಿದ್ದು, ಈ ಯೋಜನೆಗಳ ಮೂಲಕ ರಾಜ್ಯದ 9 ಜಿಲ್ಲೆಗಳಲ್ಲಿ ಒಟ್ಟು 50,517 ಉದ್ಯೋಗಗಳು ಸೃಷ್ಟಿಯಾಗಲಿವೆ.

➤ **ಯಾವೆಲ್ಲಾ ವಲಯಗಳಲ್ಲಿ ಹೂಡಿಕೆ ಮಾಡಲಾಗುತ್ತಿದೆ? (Sector-wise Investment):**

ಏರೋಸ್ಪೇಸ್ ಮತ್ತು ಡಿಫೆನ್ಸ್ (Aerospace & Defence)
ನವೀಕರಿಸಬಹುದಾದ ಇಂಧನ (Renewable Energy & Power)
ಲ್ಯಾಂಬ್-ಗ್ರೋನ್ ಡೈಮಂಡ್ಸ್ (Lab-Grown Diamonds - ಕೃತಕ ವಜ್ರ ತಯಾರಿಕೆ)
ರಾಸಾಯನಿಕಗಳು ಮತ್ತು ಫಾರ್ಮಾಸ್ಯುಟಿಕಲ್ಸ್ (Chemicals & Pharmaceuticals)
ಉಕ್ಕು ಮತ್ತು ಕಬ್ಬಿಣ (Steel, Iron & Ferro Alloys)

➤ **ಮೂರು ಪ್ರಮುಖ ಬೃಹತ್ ಯೋಜನೆಗಳು (Major Projects Highlighted):**

ಟಾಟಾ ಪವರ್ ರಿನ್ಯೂವಬಲ್ ಎನರ್ಜಿ ಲಿಮಿಟೆಡ್ (Tata Power): ಗಂಜಾಂ ಜಿಲ್ಲೆಯಲ್ಲಿ ಸೋಲಾರ್ ಇಂಗುಗಳು, ವೇಫರ್‌ಗಳು ಮತ್ತು ಸೋಲಾರ್ ಪಿವಿ ಸೆಲ್‌ಗಳ (Solar PV Cells) ತಯಾರಿಕಾ ಘಟಕಕ್ಕಾಗಿ ₹10,000 ಕೋಟಿ ಹೂಡಿಕೆ ಮಾಡಲಿದೆ. ಇದರಿಂದ ಸುಮಾರು 5,000 ಉದ್ಯೋಗಗಳು ಸೃಷ್ಟಿಯಾಗಲಿವೆ.

ರಶ್ಮಿ ಮೆಟಲರ್ಜಿಕಲ್ (Rashmi Metallurgical): ಜಜ್‌ಪುರದಲ್ಲಿ ವರ್ಷಕ್ಕೆ 4 ಮಿಲಿಯನ್ ಟನ್ (4 MTPA) ಸಾಮರ್ಥ್ಯದ ಸಂಯೋಜಿತ ಉಕ್ಕು ಸ್ಥಾವರವನ್ನು (Integrated Steel Plant) ಸ್ಥಾಪಿಸಲು ₹15,000 ಕೋಟಿ ಹೂಡಿಕೆ ಮಾಡಲಿದೆ. ಇದು ಬರೋಬ್ಬರಿ 11,000 ಉದ್ಯೋಗಗಳನ್ನು ತರಲಿದೆ.

ಶ್ಯಾಮ್ ಮೆಟಾಲಿಕ್ಸ್ (Shyam Metalics): ಸಂಬಲ್‌ಪುರದಲ್ಲಿ ಉಕ್ಕು ಘಟಕ ಸ್ಥಾಪನೆಗಾಗಿ ₹7,580 ಕೋಟಿ ಹೂಡಿಕೆ ಮಾಡಲಿದೆ.

ಲ್ಯಾಬ್-ಗ್ರೋನ್ ಡೈಮಂಡ್ಸ್ (ಕೃತಕ ವಜ್ರ): ಖೋರ್ಧಾ ಜಿಲ್ಲೆಯಲ್ಲಿ ಮೂರು ಕೃತಕ ವಜ್ರ ತಯಾರಿಕಾ ಘಟಕಗಳು ಬರಲಿದ್ದು, ಇದಕ್ಕಾಗಿ ₹9,817.50 ಕೋಟಿ ಹೂಡಿಕೆ ಮಾಡಲಾಗುತ್ತಿದೆ. ಇದು 8,100 ಜನರಿಗೆ ಉದ್ಯೋಗ ನೀಡಲಿದೆ.



## 19 June 2026

### QS ವಿಶ್ವ ವಿಶ್ವವಿದ್ಯಾಲಯ ಶ್ರೇಯಾಂಕಗಳು 2027: ಜಾಗತಿಕವಾಗಿ ಭಾರತ 5 ನೇ ಸ್ಥಾನಕ್ಕೆ ಏರಿದೆ.




➤ 2027 ರ ಕ್ಯೂಎಸ್ ವಿಶ್ವ ವಿಶ್ವವಿದ್ಯಾಲಯ ಶ್ರೇಯಾಂಕದಲ್ಲಿ ಭಾರತವು ವಿಶ್ವಾದ್ಯಂತ ಐದನೇ ಸ್ಥಾನವನ್ನು ಪಡೆದುಕೊಂಡಿದೆ ಮತ್ತು ಪಟ್ಟಿಯಲ್ಲಿ ಸುಮಾರು 52 ಸ್ಥಾನ ಪಡೆದಿದೆ. ಇದು ದೇಶದ ಬೆಳೆಯುತ್ತಿರುವ ಶೈಕ್ಷಣಿಕ ಪ್ರಭಾವವನ್ನು ಪ್ರದರ್ಶಿಸುತ್ತದೆ, ಸಂಶೋಧನಾ ಸಾಮರ್ಥ್ಯಗಳನ್ನು ವಿಸ್ತರಿಸುತ್ತದೆ ಮತ್ತು ಇದು ಜಾಗತಿಕ ಖ್ಯಾತಿಯನ್ನು ಸುಧಾರಿಸುತ್ತದೆ.

➤ ದೆಹಲಿಯ ಭಾರತೀಯ ತಂತ್ರಜ್ಞಾನ ಸಂಸ್ಥೆ (ಐಐಟಿ) ವಿಶ್ವದಾದ್ಯಂತ 118 ನೇ ಸ್ಥಾನದಲ್ಲಿ ಅತ್ಯುನ್ನತ ಶ್ರೇಯಾಂಕಿತ ಭಾರತೀಯ ಸಂಸ್ಥೆಯಾಗಿ ಹೊರಹೊಮ್ಮುವ ಮೂಲಕ ಭಾರತೀಯ ತಂಡವನ್ನು ಮುನ್ನಡೆಸುತ್ತದೆ.

**➤ ಕ್ಯೂಎಸ್ ವಿಶ್ವ ವಿಶ್ವವಿದ್ಯಾಲಯ ಶ್ರೇಯಾಂಕ : ಈ ಸಾಧನೆಯು ಭಾರತವನ್ನು ಈ ಕೆಳಗಿನ ದೇಶಗಳಿಗಿಂತ ಮಾತ್ರ ಹಿಂದಕ್ಕೆ ಇರಿಸುತ್ತದೆ,**

ಯುನೈಟೆಡ್ ಸ್ಟೇಟ್ಸ್ (184 ಸಂಸ್ಥೆಗಳು)
ಯುನೈಟೆಡ್ ಕಿಂಗ್‌ಡಮ್ (93 ಸಂಸ್ಥೆಗಳು)
ಚೀನಾ (85 ಸಂಸ್ಥೆಗಳು)
ಜರ್ಮನಿ (60 ಸಂಸ್ಥೆಗಳು)
ಭಾರತ (52 ಸಂಸ್ಥೆಗಳು)

**➤ 2027 ರ QS ಶ್ರೇಯಾಂಕಗಳಲ್ಲಿ ಉನ್ನತ ಜಾಗತಿಕ ವಿಶ್ವವಿದ್ಯಾಲಯಗಳು : ಪ್ರಪಂಚದಾದ್ಯಂತದ ಟಾಪ್ 10 ವಿಶ್ವವಿದ್ಯಾಲಯಗಳು**

1 ಮ್ಯಾಸಚೂಸೆಟ್ಸ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (MIT) - ಅಮೇರಿಕ ಸಂಯುಕ್ತ ಸಂಸ್ಥಾನ
2 ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯ - ಅಮೇರಿಕ ಸಂಯುಕ್ತ ಸಂಸ್ಥಾನ
3 ಇಂಪೀರಿಯಲ್ ಕಾಲೇಜು ಲಂಡನ್ - ಯುನೈಟೆಡ್ ಕಿಂಗ್‌ಡಮ್
4 ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ - ಯುನೈಟೆಡ್ ಕಿಂಗ್‌ಡಮ್
5 ಹಾರ್ವರ್ಡ್ ವಿಶ್ವವಿದ್ಯಾಲಯ - ಅಮೇರಿಕ ಸಂಯುಕ್ತ ಸಂಸ್ಥಾನ
6 ಕೇಂಬ್ರಿಡ್ಜ್ ವಿಶ್ವವಿದ್ಯಾಲಯ - ಯುನೈಟೆಡ್ ಕಿಂಗ್‌ಡಮ್
7 ಕ್ಯಾಲಿಫೋರ್ನಿಯಾ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಕ್ಯಾಲ್ಟೆಕ್) - ಅಮೇರಿಕ ಸಂಯುಕ್ತ ಸಂಸ್ಥಾನ
8 ಯುಸಿಎಲ್ - ಯುನೈಟೆಡ್ ಕಿಂಗ್‌ಡಮ್
9 ಇಟಿಎಚ್ - ಜ್ಯೂರಿಚ್, ETH
10 ಸಿಂಗಾಪುರದ ರಾಷ್ಟ್ರೀಯ ವಿಶ್ವವಿದ್ಯಾಲಯ (NUS) - ಸಿಂಗಾಪುರ್

➤ QS ಪ್ರಕಾರ, ಭಾರತವು ಈಗ ವಿಶ್ವದ ಮೂರನೇ ಅತಿದೊಡ್ಡ ಸಂಶೋಧನಾ ಉತ್ಪಾದನಾ ನೆಲೆಯನ್ನು ಹೊಂದಿದೆ, ಇದು ವೈಜ್ಞಾನಿಕ ಪ್ರಕಟಣೆಗಳು ಮತ್ತು ಶೈಕ್ಷಣಿಕ ಕೊಡುಗೆಗಳಲ್ಲಿನ ಗಮನಾರ್ಹ ಬೆಳವಣಿಗೆಯನ್ನು ಪ್ರತಿಬಿಂಬಿಸುತ್ತದೆ.

- ಪ್ರತಿ ಅಧ್ಯಾಪಕರಿಗೆ ಉಲ್ಲೇಖಗಳ ವಿಷಯದಲ್ಲಿ ಹನ್ನೊಂದು ಭಾರತೀಯ ವಿಶ್ವವಿದ್ಯಾಲಯಗಳು ವಿಶ್ವದ ಅಗ್ರ 100 ವಿಶ್ವವಿದ್ಯಾಲಯಗಳಲ್ಲಿ ಸ್ಥಾನ ಪಡೆದಿವೆ.
- ಭಾರತವು ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಮತ್ತು ಆರೋಗ್ಯ ರಕ್ಷಣಾ ವಿಭಾಗಗಳಲ್ಲಿ ತನ್ನ ಜಾಗತಿಕ ಸಂಶೋಧನಾ ಹೆಜ್ಜೆಗುರುತನ್ನು ವಿಸ್ತರಿಸುವುದನ್ನು ಮುಂದುವರೆಸಿದೆ.
- ಶೈಕ್ಷಣಿಕ, ಕೈಗಾರಿಕೆ ಮತ್ತು ಸರ್ಕಾರದ ನಡುವಿನ ಹೆಚ್ಚಿದ ಸಹಯೋಗವು ನಾವೀನ್ಯತೆಗೆ ಚಾಲನೆ ನೀಡುತ್ತಿದೆ.

### ಜೂನ್ 19: ವಿಶ್ವ ಸಿಕಲ್ ಸೆಲ್ ದಿನ




➤ ಪ್ರತಿ ವರ್ಷ ಜೂನ್ 19 ರಂದು ಜಾಗತಿಕವಾಗಿ "ವಿಶ್ವ ಸಿಕಲ್ ಸೆಲ್ ದಿನ" (World Sickle Cell Day) ವನ್ನು ಆಚರಿಸಲಾಗುತ್ತದೆ. ವಿಶ್ವಸಂಸ್ಥೆಯು 2008 ರಲ್ಲಿ ಅಂಗೀಕರಿಸಿದ ನಿರ್ಣಯದ ಅನ್ವಯ 2009 ರಿಂದ ಮೊದಲ ಬಾರಿಗೆ "ವಿಶ್ವ ಸಿಕಲ್ ಸೆಲ್ ದಿನ"ವನ್ನು ಆಚರಿಸಲಾಗುತ್ತಿದ್ದು, ಭಾರತ ಸರ್ಕಾರವು 2047ರ ವೇಳೆಗೆ ದೇಶದಿಂದ ಈ ಕಾಯಿಲೆಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವ ಮಹತ್ತರ ಗುರಿಯನ್ನು ಹೊಂದಿದೆ.

**➤ 2026ರ ಘೋಷವಾಕ್ಯ (Theme): ಬದುಕುಳಿಯುವಿಕೆಯ ಅಂತರವನ್ನು ಕಡಿಮೆ ಮಾಡುವುದು: ಸಿಕಲ್ ಸೆಲ್ ಕಾಯಿಲೆಯಲ್ಲಿ ಸಮಾನತೆ. (Closing the Survival Gap: Equity in Sickle Cell Disease)**

➤ ಸಿಕಲ್ ಸೆಲ್ ಕಾಯಿಲೆ ಎಂದರೆ ಪೋಷಕರಿಂದ ಮಕ್ಕಳಿಗೆ ಹರಡುವ ಒಂದು ಅನುವಂಶಿಕ ರಕ್ತದ ಸಮಸ್ಯೆಯಾಗಿದ್ದು, ಇದರಲ್ಲಿ ಕೆಂಪು ರಕ್ತಕಣಗಳು ಕುಡುಗೋಲಿನ ಆಕಾರಕ್ಕೆ ತಿರುಗಿ ರಕ್ತನಾಳಗಳಲ್ಲಿ ಆಮ್ಲಜನಕದ ಸುಗಮ ಹರಿವನ್ನು ತಡೆಯುತ್ತವೆ.

**➤ ಪ್ರಮುಖ ಲಕ್ಷಣಗಳು (Symptoms):**

ತೀವ್ರ ರಕ್ತಹೀನತೆ (Chronic Anemia): ಸಾಮಾನ್ಯ ರಕ್ತಕಣಗಳು 120 ದಿನ ಬದುಕಿದರೆ, ಕುಡುಗೋಲು ಕಣಗಳು ಕೇವಲ 10 ರಿಂದ 20 ದಿನಗಳಲ್ಲಿ ನಾಶವಾಗುತ್ತವೆ. ಇದರಿಂದ ದೇಹದಲ್ಲಿ ರಕ್ತದ ಕೊರತೆ ಉಂಟಾಗುತ್ತದೆ.

ಅತಿಯಾದ ಆಯಾಸ ಮತ್ತು ನಿಶ್ಯಕ್ತಿ: ಆಮ್ಲಜನಕದ ಪೂರೈಕೆ ಕಡಿಮೆಯಾಗುವುದರಿಂದ ದೇಹ ಸದಾ ಸುಸ್ತಾಗಿರುತ್ತದೆ.

ದೇಹದ ಭಾಗಗಳಲ್ಲಿ ತೀವ್ರ ನೋವು (Pain Crises): ರಕ್ತನಾಳಗಳು ಬ್ಲಾಕ್ ಆಗುವುದರಿಂದ ಕೈಕಾಲುಗಳು, ಎದೆ ಮತ್ತು ಕೀಲುಗಳಲ್ಲಿ ಅಸಹನೀಯ ನೋವು ಕಾಣಿಸಿಕೊಳ್ಳುತ್ತದೆ.

ಕಾಮಾಲೆ (Jaundice): ಕೆಂಪು ರಕ್ತಕಣಗಳು ವೇಗವಾಗಿ ನಾಶವಾಗುವುದರಿಂದ ಕಣ್ಣು ಮತ್ತು ಚರ್ಮ ಹಳದಿ ಬಣ್ಣಕ್ಕೆ ತಿರುಗುತ್ತವೆ.

ಸೋಂಕಿನ ಅಪಾಯ: ಪ್ಲೀಹ (Spleen) ಅಂಗಕ್ಕೆ ಹಾನಿಯಾಗುವುದರಿಂದ ರೋಗನಿರೋಧಕ ಶಕ್ತಿ ಕಡಿಮೆಯಾಗಿ ಪದೇ ಪದೇ ಸೋಂಕುಗಳು ತಗುಲುತ್ತವೆ.

**➤ ಭಾರತದಲ್ಲಿ ಸಿಕಲ್ ಸೆಲ್ ಕಾಯಿಲೆಯ ಸ್ಥಿತಿ:** ವಿಶ್ವದಲ್ಲೇ ಸಿಕಲ್ ಸೆಲ್ ಕಾಯಿಲೆಯ ಅತಿ ಹೆಚ್ಚು ಹೊರೆ ಹೊಂದಿರುವ ದೇಶಗಳಲ್ಲಿ ಭಾರತ ಎರಡನೇ ಸ್ಥಾನದಲ್ಲಿದೆ. ಭಾರತದಲ್ಲಿ ವಿಶೇಷವಾಗಿ ಈ ಕೆಳಗಿನ ರಾಜ್ಯಗಳ ಬುಡಕಟ್ಟು (Tribal) ಮತ್ತು ಸಾಮಾಜಿಕವಾಗಿ ಹಿಂದುಳಿದ ಸಮುದಾಯಗಳಲ್ಲಿ ಈ ಕಾಯಿಲೆ ಹೆಚ್ಚಾಗಿ ಕಂಡುಬರುತ್ತದೆ: ಮಧ್ಯಪ್ರದೇಶ, ಗುಜರಾತ್, ಮಹಾರಾಷ್ಟ್ರ, ಛತ್ತೀಸ್‌ಗಢ, ಒಡಿಶಾ, ರಾಜಸ್ಥಾನ, ಜಾರ್ಖಂಡ್, ಆಂಧ್ರಪ್ರದೇಶ ಮತ್ತು ತೆಲಂಗಾಣ.

**➤ ಭಾರತ ಸರ್ಕಾರದ ಪ್ರಮುಖ ಕ್ರಮಗಳು ಮತ್ತು ಉಪಕ್ರಮಗಳು:**

ರಾಷ್ಟ್ರೀಯ ಸಿಕಲ್ ಸೆಲ್ ಅನಿಮಿಯಾ ನಿರ್ಮೂಲನಾ ಮಿಷನ್ (National Sickle Cell Anaemia Elimination Mission):ಇದನ್ನು ಪ್ರಧಾನಮಂತ್ರಿ ನರೇಂದ್ರ ಮೋದಿಯವರು 2023 ರಲ್ಲಿ ಚಾಲನೆಗೊಳಿಸಿದರು. ಇದರ ಪ್ರಮುಖ ಗುರಿ 2047 ರ ವೇಳೆಗೆ ಭಾರತದಿಂದ ಸಿಕಲ್ ಸೆಲ್ ಕಾಯಿಲೆಯನ್ನು ಸಂಪೂರ್ಣವಾಗಿ ಮುಕ್ತಗೊಳಿಸುವುದಾಗಿದೆ.

ಬೃಹತ್ ಸ್ಕ್ರೀನಿಂಗ್ ಕಾರ್ಯಕ್ರಮ (Mass Screening): ದೇಶದ ಬುಡಕಟ್ಟು ಜನಸಂಖ್ಯೆ ಹೆಚ್ಚಿರುವ ಜಿಲ್ಲೆಗಳಲ್ಲಿ 0 ಯಿಂದ 40 ವರ್ಷದೊಳಗಿನ ಸುಮಾರು 7 ಕೋಟಿ ಜನರನ್ನು ಪರೀಕ್ಷಿಸುವ ಗುರಿ ಹೊಂದಲಾಗಿದೆ.

ಸಿಕಲ್ ಸೆಲ್ ಹೆಲ್ತ್ ಕಾರ್ಡ್ಸ್ (Sickle Cell Health Cards): ತಪಾಸಣೆಯ ನಂತರ ಬಾಧಿತರಿಗೆ ಮತ್ತು ವಾಹಕರಿಗೆ (Carriers) ವಿಶೇಷ ಹೆಲ್ತ್ ಕಾರ್ಡ್‌ಗಳನ್ನು ನೀಡಲಾಗುತ್ತದೆ. ಇದು ಮದುವೆಯ ಮುನ್ನ ಜೆನೆಟಿಕ್ ಕೌನ್ಸಿಲಿಂಗ್ ಪಡೆಯಲು ಮತ್ತು ಮುಂದಿನ ಪೀಳಿಗೆಗೆ ಕಾಯಿಲೆ ಹರಡುವುದನ್ನು ತಡೆಯಲು ಸಹಾಯ ಮಾಡುತ್ತದೆ.
ಆರೋಗ್ಯ ಮೂಲಸೌಕರ್ಯ ಬಲವರ್ಧನೆ: ಜಿಲ್ಲಾ ಆಸ್ಪತ್ರೆಗಳು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ (PHCs) ಉಚಿತ ರಕ್ತ ತಪಾಸಣೆ (HPLC ಟೆಸ್ಟ್) ಮತ್ತು ಉಚಿತ ಔಷಧಿಗಳ ವಿತರಣೆಗೆ ಕ್ರಮ ಕೈಗೊಳ್ಳಲಾಗಿದೆ.

## ದೀಪ್ತಿ ಶರ್ಮಾ ಭಾರತದ ಜಂಟಿ ಗರಿಷ್ಠ ವಿಕೆಟ್ ಪಡೆದ ಸಾಧಕಿ: ಮಹಿಳಾ ಕ್ರಿಕೆಟ್‌ನಲ್ಲಿ ಹೊಸ ಇತಿಹಾಸ!



➤ ಭಾರತೀಯ ಮಹಿಳಾ ಕ್ರಿಕೆಟ್‌ನ ಸ್ಟಾರ್ ಆಲ್‌ರೌಂಡರ್ ದೀಪ್ತಿ ಶರ್ಮಾ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಅಭೂತಪೂರ್ವ ಮೈಲಿಗಲ್ಲು ಸಾಧಿಸಿದ್ದಾರೆ. ಲೀಡ್ಸ್‌ನ ಹೆಡಿಂಗ್ಲಿಯಲ್ಲಿ ನಡೆದ ನೆದರ್‌ಲ್ಯಾಂಡ್ಸ್ ವಿರುದ್ಧದ ಮಹಿಳಾ ಟಿ20 ವಿಶ್ವಕಪ್ 2026 ರ ಪಂದ್ಯದಲ್ಲಿ ದೀಪ್ತಿ ಈ ಐತಿಹಾಸಿಕ ಸಾಧನೆ ಮಾಡಿದರು. ನೆದರ್ ಲ್ಯಾಂಡ್ಸ್ ತಂಡದ ಆರಂಭಿಕ ಆಟಗಾರ್ತಿ ಫೀಬೆ ಮೊಲ್ಕೆನ್ ಬೋಯರ್ ಅವರ ವಿಕೆಟ್ ಪಡೆಯುವ ಮೂಲಕ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ತಮ್ಮ 355ನೇ ವಿಕೆಟ್ ಪೂರೈಸಿದರು.
➤ ಈ ಮೂಲಕ ಭಾರತದ ಮಹಿಳಾ ಕ್ರಿಕೆಟ್‌ನ ದಂತಕಥೆ ಮತ್ತು ಮಾಜಿ ನಾಯಕಿ ಝುಲಾನ್ ಗೋಸ್ವಾಮಿ ಅವರ ಸಾರ್ವಕಾಲಿಕ ದಾಖಲೆಯನ್ನು ದೀಪ್ತಿ ಶರ್ಮಾ ಸಮಗಟ್ಟಿದ್ದಾರೆ. ಪ್ರಸ್ತುತ ಅವರು ಭಾರತದ ಪರ ಜಂಟಿ ಗರಿಷ್ಠ ವಿಕೆಟ್ ಪಡೆದ ಸಾಧಕಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.
**➤ ಮಹಿಳಾ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಗರಿಷ್ಠ ವಿಕೆಟ್ ಪಡೆದವರು:**

| ಆಟಗಾರ್ತಿ | ದೇಶ | ಒಟ್ಟು ವಿಕೆಟ್‌ಗಳು |
|---|---|---|
| ದೀಪ್ತಿ ಶರ್ಮಾ | ಭಾರತ | 355 |
| ಝುಲಾನ್ ಗೋಸ್ವಾಮಿ | ಭಾರತ | 355 |
| ಕ್ಯಾಥರಿನ್ ಸಿವರ್-ಬ್ರಂಟ್ | ಇಂಗ್ಲೆಂಡ್ | |

## GIC Re ನೂತನ ಅಧ್ಯಕ್ಷರಾಗಿ ಹಿತೇಶ್ ಜೋಶಿ ನೇಮಕ




➤ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರಮುಖ ನೇಮಕಾತಿಗಳ ವಿಭಾಗದಲ್ಲಿ ಭಾರತ ಸರ್ಕಾರದ ಮಹತ್ವದ ನಿರ್ಧಾರವೊಂದರಲ್ಲಿ, ಹಿತೇಶ್ ಜೋಶಿ ಅವರನ್ನು ಭಾರತೀಯ ಸಾಮಾನ್ಯ ವಿಮಾ ನಿಗಮದ (GIC Re - General Insurance Corporation of India) ನೂತನ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರನ್ನಾಗಿ (CMD) ಕೇಂದ್ರ ಸರ್ಕಾರ ಅಧಿಕೃತವಾಗಿ ನೇಮಕ ಮಾಡಿದೆ.
➤ ಕ್ಯಾಬಿನೆಟ್‌ನ ನೇಮಕಾತಿ ಸಮಿತಿಯು (ACC) ಜೂನ್ 12, 2026 ರಂದು ಈ ನೇಮಕಾತಿಗೆ ಅನುಮೋದನೆ ನೀಡಿದ್ದು, ಜಿಐಸಿ ರಿ ಈ ಕುರಿತು ಶೇರ್ ಮಾರುಕಟ್ಟೆಗಳಿಗೆ ಅಧಿಕೃತ ಮಾಹಿತಿ ನೀಡಿದೆ.
➤ ಹಿತೇಶ್ ಜೋಶಿ ಅವರು ಕಳೆದ ಅಕ್ಟೋಬರ್ 1, 2025 ರಿಂದಲೇ ಜಿಐಸಿ ರಿ ಸಂಸ್ಥೆಯ ಹಂಗಾಮಿ ಸಿಎಂಡಿ (Acting CMD) ಆಗಿ ಕಾರ್ಯನಿರ್ವಹಿಸುತ್ತಿದ್ದರು. ಇವರ ಪೂರ್ವಾಧಿಕಾರಿಯಾಗಿದ್ದ ಎನ್. ರಾಮಸ್ವಾಮಿ ಅವರು ಸೆಪ್ಟೆಂಬರ್ 30, 2025 ರಂದು ನಿವೃತ್ತರಾದ ನಂತರ ಈ ಹುದ್ದೆ ಖಾಲಿ ಇತ್ತು. ಈಗ ಹಿತೇಶ್ ಜೋಶಿ ಅವರಿಗೆ ಪೂರ್ಣಾವಧಿ ಜವಾಬ್ದಾರಿ ವಹಿಸಲಾಗಿದೆ.
➤ ಹಿತೇಶ್ ಜೋಶಿ: ವಿಮಾ ವಲಯದಲ್ಲಿ ದಶಕಗಳ ಕಾಲದ ಅನುಭವ ಹೊಂದಿರುವ ಜೋಶಿ ಅವರು ಈ ಹಿಂದೆ ಜಿಐಸಿ ರಿಯ ಕಾರ್ಯನಿರ್ವಾಹಕ ನಿರ್ದೇಶಕರಾಗಿ (Executive Director) ಸೇವೆ ಸಲ್ಲಿಸಿದ್ದರು. ಈ ವೇಳೆ ಅವರು ಮಾನವ ಸಂಪನ್ಮೂಲ, ಅಂತರರಾಷ್ಟ್ರೀಯ ವ್ಯವಹಾರಗಳು, ಐಟಿ, ಆಕ್ಚುರಿಯಲ್ ಕಾರ್ಯಗಳು ಮತ್ತು ಡಿಜಿಟಲ್ ರೂಪಾಂತರದಂತಹ ಪ್ರಮುಖ ವಿಭಾಗಗಳನ್ನು ಯಶಸ್ವಿಯಾಗಿ ಮುನ್ನಡೆಸಿದ್ದಾರೆ.
ಶೈಕ್ಷಣಿಕ ಅರ್ಹತೆ:
ಮುಂಬೈ ವಿಶ್ವವಿದ್ಯಾಲಯದಿಂದ ಅಕೌಂಟೆನ್ಸಿಯಲ್ಲಿ ಸ್ನಾತಕೋತ್ತರ ಪದವಿ (Postgraduate).
ಜಮ್ನಾಲಾಲ್ ಬಜಾಜ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ (JBIMS) ನಿಂದ ಫೈನಾನ್ಶಿಯಲ್ ಮ್ಯಾನೇಜ್‌ಮೆಂಟ್‌ನಲ್ಲಿ ಮಾಸ್ಟರ್ಸ್ ಪದವಿ.
ಇನ್ಶೂರೆನ್ಸ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದ ಫೆಲೋ (Fellow) ಗೌರವ.
➤ ಜಿಐಸಿ ರಿ (GIC Re): ಇದು ಭಾರತದ ಏಕೈಕ ಮತ್ತು ಅಧಿಕೃತ ರಾಷ್ಟ್ರೀಯ ಮರುವಿಮಾ ಸಂಸ್ಥೆಯಾಗಿದೆ (National Reinsurer). ಸರಳವಾಗಿ ಹೇಳುವುದಾದರೆ ಇದು "ವಿಮಾ ಕಂಪನಿಗಳಿಗೆ ನೀಡುವ ವಿಮೆ". ಸಾಮಾನ್ಯ ವಿಮಾ ಕಂಪನಿಗಳು ಎದುರಿಸುವ ದೊಡ್ಡ ಮಟ್ಟದ ನಷ್ಟ ಅಥವಾ ಅಪಾಯಗಳನ್ನು ಹಂಚಿಕೊಳ್ಳಲು ಜಿಐಸಿ ರಿ ಸಹಾಯ ಮಾಡುತ್ತದೆ. ಇದನ್ನು ನವೆಂಬರ್ 22, 1972 ರಂದು ಕಂಪನಿಗಳ ಕಾಯ್ದೆಯಡಿ ಸ್ಥಾಪಿಸಲಾಯಿತು.
ಕೇಂದ್ರ ಕಚೇರಿ: ಮುಂಬೈ, ಮಹಾರಾಷ್ಟ್ರ.
ಸ್ಥಾನಮಾನ: ಇದು ಏಷ್ಯಾದಲ್ಲೇ ಅತಿ ದೊಡ್ಡ ಮರುವಿಮಾ ಕಂಪನಿಗಳಲ್ಲಿ ಒಂದಾಗಿದ್ದು, ಜಾಗತಿಕವಾಗಿಯೂ ಪ್ರಮುಖ ಸ್ಥಾನ ಪಡೆದಿದೆ.

## ಕಾಳಿ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಹೊಸ ಪತಂಗ ಪ್ರಭೇದ ಪತ್ತೆ: 'ಮೈಮೂಸೆಮಿಯಾ ಕಾಳಿ'



➤ ಕರ್ನಾಟಕದ ಪಶ್ಚಿಮ ಘಟ್ಟಗಳ ಜೀವವೈವಿಧ್ಯತೆಯ ಕಿರೀಟಕ್ಕೆ ಮತ್ತೊಂದು ಗರಿ ಸೇರ್ಪಡೆಯಾಗಿದೆ. ರಾಜ್ಯದ ಪ್ರಸಿದ್ಧ ಕಾಳಿ ಹುಲಿ ಸಂರಕ್ಷಿತ ಪ್ರದೇಶದಲ್ಲಿ (Kali Tiger Reserve - KTR) ವಿಜ್ಞಾನಿಗಳ ತಂಡವೊಂದು ಸಂಪೂರ್ಣವಾಗಿ ಹೊಸದಾದ 'ಫಾರೆಸ್ಟರ್ ಪತಂಗ' (Forester Moth) ಪ್ರಭೇದವನ್ನು ಪತ್ತೆಹಚ್ಚಿದೆ. ಈ ಮಹತ್ವದ ಆವಿಷ್ಕಾರದ ವಿವರಗಳು ಜೂನ್ 17ರಂದು ಅಧಿಕೃತವಾಗಿ ಪ್ರಕಟಗೊಂಡಿವೆ.
**➤ ಪ್ರಮುಖ ಮುಖ್ಯಾಂಶಗಳು:**
ಹೊಸ ಪ್ರಭೇದದ ಹೆಸರು: ಈ ಹೊಸ ಪತಂಗಕ್ಕೆ ಸಂಶೋಧಕರು ಅದರ ಮೂಲ ಸ್ಥಾನವಾದ ಕಾಳಿ ಅರಣ್ಯದ ನೆನಪಿಗಾಗಿ 'ಮೈಮೂಸೆಮಿಯಾ ಕಾಳಿ' (Maimusemia kali) ಎಂದು ಹೆಸರಿಟ್ಟಿದ್ದಾರೆ.
ಸಂಶೋಧನೆಯ ನೇತೃತ್ವ: ಪುಣೆಯ ಜೂಲಾಜಿಕಲ್ ಸರ್ವೆ ಆಫ್ ಇಂಡಿಯಾ (ZSI - Zoological Survey of India) ಸಂಸ್ಥೆಯ ಪ್ರಸಿದ್ಧ

ವಿಜ್ಞಾನಿ ಡಾ. ಅಪರ್ಣಾ ಸುರೇಶ್ಚಂದ್ರ ಕಲಾವಟೆ ಅವರ ನೇತೃತ್ವದ ಜಂಟಿ ಸಂಶೋಧನಾ ತಂಡ ಈ ಸಾಧನೆ ಮಾಡಿದೆ.
30 ವರ್ಷಗಳ ನಂತರದ ಪ್ರಥಮ ಆವಿಷ್ಕಾರ: ಜಾಗತಿಕವಾಗಿ 'ಮೈಮೂಸೆಮಿಯಾ' (Maimusemia) ವಂಶಕ್ಕೆ (Genus) ಸೇರಿದ ಹೊಸ ಪ್ರಭೇದವೊಂದು ಪತ್ತೆಯಾಗುತ್ತಿರುವುದು ಕಳೆದ 30 ವರ್ಷಗಳಲ್ಲಿ ಇದೇ ಮೊದಲು ಎಂಬುದು ಅತ್ಯಂತ ಗಮನಾರ್ಹ ಸಂಗತಿಯಾಗಿದೆ.
ಅಂತಾರಾಷ್ಟ್ರೀಯ ಮನ್ನಣೆ: ಈ ಹೊಸ ಕೀಟ ಪ್ರಭೇದದ ವಿಶಿಷ್ಟ ದೈಹಿಕ (Morphological) ಮತ್ತು ತಳಿಶಾಸ್ತ್ರದ (DNA Barcoding/Genetic) ವೈಶಿಷ್ಟ್ಯಗಳ ವಿವರವಾದ ವರದಿಯು ಪ್ರತಿಷ್ಠಿತ ಅಂತಾರಾಷ್ಟ್ರೀಯ ವಿಜ್ಞಾನ ನಿಯತಕಾಲಿಕೆಯಾದ 'ಝೂಟಾಕ್ಸಾ' (Zootaxa) ದಲ್ಲಿ ಪ್ರಕಟವಾಗಿದೆ.

➤ **ಸಂಶೋಧನೆಯ ಹಿನ್ನೆಲೆ ಮತ್ತು ವಿಶೇಷತೆ:** ವಿಜ್ಞಾನಿಗಳ ಪ್ರಕಾರ, ಈ 'ಮೈಮೂಸೆಮಿಯಾ' ವಂಶಕ್ಕೆ ಸೇರಿದ ಪತಂಗಗಳು ಅತ್ಯಂತ ಅಪರೂಪವಾಗಿವೆ. ಈ ಹೊಸ ಪ್ರಭೇದದ ಪತ್ತೆಯು ಪಶ್ಚಿಮ ಘಟ್ಟಗಳ ಪರಿಸರ ವ್ಯವಸ್ಥೆಯು ಎಷ್ಟು ಶ್ರೀಮಂತವಾಗಿದೆ ಮತ್ತು ಅಲ್ಲಿ ಇನ್ನೂ ಅನ್ವೇಷಿಸದ ಎಷ್ಟು ಜೀವಸಂಕುಲಗಳಿವೆ ಎಂಬುದಕ್ಕೆ ಜೀವಂತ ಸಾಕ್ಷಿಯಾಗಿದೆ. ತಳಿಶಾಸ್ತ್ರದ ವಿಶ್ಲೇಷಣೆಗಳ ಮೂಲಕ ಇದು ಈವರೆಗೆ ಜಗತ್ತಿಗೆ ಪರಿಚಯವಿಲ್ಲದ ಹೊಸ ಪ್ರಭೇದ ಹೌದು ಎಂಬುದನ್ನು ವಿಜ್ಞಾನಿಗಳು ಸಾಬೀತುಪಡಿಸಿದ್ದಾರೆ.

## ಮೇಘಾಲಯದಲ್ಲಿ ಈಶಾನ್ಯ ಭಾರತದ ಅತಿ ದೊಡ್ಡ ಸಾವಯವ ಸಾಂಬಾರ ಪದಾರ್ಥಗಳ ಸಂಸ್ಕರಣಾ ಘಟಕ ಉದ್ಘಾಟನೆ!




➤ ಈಶಾನ್ಯ ಭಾರತದ ರಾಜ್ಯಗಳು ಇತ್ತೀಚೆಗೆ ಪರಿಸರಸ್ನೇಹಿ ಮತ್ತು ಕೃಷಿ ಆಧಾರಿತ ಅಭಿವೃದ್ಧಿ ಯೋಜನೆಗಳಿಂದಾಗಿ ಸುದ್ದಿಯಲ್ಲಿವೆ. ಇದರ ಮುಂದುವರಿದ ಭಾಗವಾಗಿ, ಮೇಘಾಲಯ ರಾಜ್ಯದಲ್ಲಿ ಈಶಾನ್ಯ ಭಾರತದ ಅತ್ಯಂತ ದೊಡ್ಡ ಸಾವಯವ ಸಾಂಬಾರ ಪದಾರ್ಥಗಳ ಸಂಸ್ಕರಣಾ ಘಟಕವನ್ನು (Northeast's Largest Organic Spice Processing Plant) ಉದ್ಘಾಟಿಸಲಾಗಿದೆ. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮೇಘಾಲಯದ ರಿ-ಭೋಯ್ ಜಿಲ್ಲೆಯ ಭೋಯಿರಿಂಬೊಂಗ್‌ನಲ್ಲಿ ಈ ಅತ್ಯಾಧುನಿಕ ಘಟಕಕ್ಕೆ ಚಾಲನೆ ನೀಡಿದ್ದಾರೆ.

➤ ಈ ಘಟಕವನ್ನು 'ಈಸ್ಟರ್ನ್ ರಿ-ಭೋಯ್ ಆರ್ಗಾನಿಕ್ ಫಾರ್ಮರ್ ಪ್ರೊಡ್ಯೂಸರ್ ಕಂಪನಿ' (Eastern Ri Bhoi Organic Farmer Producer Company) ಮುನ್ನಡೆಸುತ್ತಿದೆ.ವರ್ಷಕ್ಕೆ ಬರೋಬ್ಬರಿ 10,346 ಮೆಟ್ರಿಕ್ ಟನ್ (MT) ಸಾವಯವ ಸಾಂಬಾರ ಪದಾರ್ಥಗಳನ್ನು ಸಂಸ್ಕರಿಸುವ ಬೃಹತ್ ಸಾಮರ್ಥ್ಯವನ್ನು ಇದು ಹೊಂದಿದೆ.

➤ **ಈ ಯೋಜನೆಯ ಉದ್ದೇಶ ಮತ್ತು ಮಹತ್ವ:**
ಮೌಲ್ಯವರ್ಧನೆ (Value Addition): ಮೇಘಾಲಯದಲ್ಲಿ ಸಾವಯವ ಕೃಷಿ ಅತ್ಯಂತ ಪ್ರಮುಖ ವಲಯವಾಗಿದೆ. ಈ ಘಟಕವು ಕೃಷಿ ಉತ್ಪನ್ನಗಳಿಗೆ ಸೂಕ್ತ ಸಂಸ್ಕರಣೆಯ ಮೂಲಕ ಅಂತಾರಾಷ್ಟ್ರೀಯ ಮಟ್ಟದ ಮೌಲ್ಯವರ್ಧನೆ ನೀಡಲು ಸಹಾಯ ಮಾಡುತ್ತದೆ.
ಮಾರುಕಟ್ಟೆ ಸಂಪರ್ಕ: ರೈತರ ಹೊಲ ಹಾಗೂ ವಾಣಿಜ್ಯ ಮಾರುಕಟ್ಟೆಗಳ ನಡುವೆ ಇದ್ದ ದೀರ್ಘಾವಧಿಯ ಅಂತರವನ್ನು (Gap) ಕಡಿಮೆ ಮಾಡಿ, ರೈತರಿಗೆ ನೇರ ಆದಾಯ ತಂದುಕೊಡುವುದು ಇದರ ಮುಖ್ಯ ಗುರಿಯಾಗಿದೆ.
ಈಶಾನ್ಯ ಭಾರತದ ಕೃಷಿ ಕ್ರಾಂತಿ: ಸಿಕ್ಕಿಂ ಮಾದರಿಯಲ್ಲಿಯೇ ಮೇಘಾಲಯ ಸೇರಿದಂತೆ ಇಡೀ ಈಶಾನ್ಯ ಭಾರತವನ್ನು ಸಾವಯವ ಕೃಷಿಯ ಹಬ್ (Organic Hub) ಮಾಡಲು ಈ ಯೋಜನೆ ನೈಲಿಗಲ್ಲಾಗಲಿದೆ.

➤ **ಮೇಘಾಲಯದ ಇತರ ಪ್ರಮುಖ ಅಭಿವೃದ್ಧಿ ಯೋಜನೆಗಳು:** ಹಣಕಾಸು ಸಚಿವರ ಭೇಟಿಯ ವೇಳೆ ಮೇಘಾಲಯ ಮುಖ್ಯಮಂತ್ರಿ ಕಾನ್ರಾಡ್ ಕೆ. ಸಂಗ್ಮಾ ಅವರ ಸಮ್ಮುಖದಲ್ಲಿ 1,200 ಕೋಟಿ ರೂ.ಗಿಂತಲೂ ಹೆಚ್ಚಿನ ಮೌಲ್ಯದ 4 ಪ್ರಮುಖ ಬಾಹ್ಯ ನೆರವು ಯೋಜನೆಗಳಿಗೆ (Externally Aided Projects - EAPs) ಶಂಕುಸ್ಥಾಪನೆ ನೆರವೇರಿಸಲಾಯಿತು:
ಮೇಘಾಲಯ ಲಾಜಿಸ್ಟಿಕ್ಸ್ ಮತ್ತು ಕನೆಕ್ಟಿವಿಟಿ ಇಂಪ್ರೂವ್ಮೆಂಟ್ ಪ್ರಾಜೆಕ್ಟ್ (MLCIP)
ಮೇಘಾಲಯ ಪರಿಸರ ಪ್ರವಾಸೋದ್ಯಮ ಮೂಲಸೌಕರ್ಯ ಅಭಿವೃದ್ಧಿ ಯೋಜನೆ
ಸಮಗ್ರ ಪರಿಸರ ಪ್ರವಾಸೋದ್ಯಮ ಮತ್ತು ಸುಸ್ಥಿರ ಕೃಷಿ ಆಧಾರಿತ ಜೀವನೋಪಾಯ ಅಭಿವೃದ್ಧಿ ಯೋಜನೆ
ಮೇಘಾಲಯದಲ್ಲಿ ಮಾನವ ಬಂಡವಾಳ ಅಭಿವೃದ್ಧಿ ಬೆಂಬಲದ 2ನೇ ಹಂತ (Phase II of Supporting Human Capital Development)
ಇನ್ನು ಹೆಚ್ಚಿನ ಪ್ರಚಲಿತ ಘಟನೆಗಳನ್ನು ವೀಕ್ಷಿಸಲು ಇಲ್ಲಿ ಕ್ಲಿಕ್ ಮಾಡಿ

## ಭಾರತದ AI ಡೇಟಾ ಸೆಂಟರ್ ವಿಸ್ತರಣೆಗೆ ಎದುರಾದ 'ಬಿಸಿಲು ಮತ್ತು ನೀರಿನ' ಸವಾಲು:



➤ ಭಾರತವು ಜಾಗತಿಕ ಮಟ್ಟದಲ್ಲಿ ಕೃತಕ ಬುದ್ಧಿಮತ್ತೆ (Artificial Intelligence - AI) ತಂತ್ರಜ್ಞಾನದ ಸೂಪರ್ ಪವರ್ ಆಗಲು ವೇಗವಾಗಿ ಹೆಜ್ಜೆ ಇಡುತ್ತಿದೆ. ಆದರೆ, ದೇಶದ ಈ ತಾಂತ್ರಿಕ ಮಹತ್ವಾಕಾಂಕ್ಷೆಗೆ ಪ್ರಕೃತಿಯ ತೀವ್ರ ತಾಪಮಾನ (Extreme Heat) ಮತ್ತು ನೀರಿನ ಅಭಾವದ ದೊಡ್ಡ ಸವಾಲು ಎದುರಾಗಿದೆ. ಇತ್ತೀಚಿನ ವರದಿಗಳ ಪ್ರಕಾರ, ಭಾರತದ AI ಡೇಟಾ ಸೆಂಟರ್‌ಗಳ (Data Centres) ಕ್ಷಿಪ್ರ ವಿಸ್ತರಣೆಯು ಪರಿಸರದ ಮೇಲಿನ ಒತ್ತಡವನ್ನು ಹೆಚ್ಚಿಸುತ್ತಿದೆ.

➤ **ಡೇಟಾ ಸೆಂಟರ್ ಎಂದರೇನು? AI ಗೆ ಇವು ಏಕೆ ಬೇಕು?**
ಡೇಟಾ ಸೆಂಟರ್‌ಗಳು ಎಂಬುದು ಸಾವಿರಾರು ಕಂಪ್ಯೂಟರ್ ಸರ್ವರ್‌ಗಳು ಮತ್ತು ಸ್ಟೋರೇಜ್ ಸಾಧನಗಳನ್ನು ಒಳಗೊಂಡಿರುವ ಬೃಹತ್ ಕಟ್ಟಡಗಳಾಗಿವೆ. ನಾವು ಬಳಸುವ ಪ್ರತಿಯೊಂದು AI ಪ್ರಾಂಪ್ಟ್ (ಉದಾಹರಣೆಗೆ ChatGPT ಅಥವಾ ಇಮೇಜ್ ಜನರೇಟರ್‌ಗಳು) ಪ್ರಕ್ರಿಯೆಯಾಗುವುದು ಇದೇ ಡೇಟಾ ಸೆಂಟರ್‌ಗಳಲ್ಲಿ. ಸಾಮಾನ್ಯ ಕ್ಲೌಡ್ ಸ್ಟೋರೇಜ್‌ಗೆ ಹೋಲಿಸಿದರೆ AI ತರಬೇತಿ ಮತ್ತು ಸಂಸ್ಕರಣೆಗೆ ಅತ್ಯಂತ ಶಕ್ತಿಶಾಲಿ ಗ್ರಾಫಿಕ್ಸ್ ಪ್ರೊಸೆಸಿಂಗ್ ಯುನಿಟ್ (GPU) ಚಿಪ್‌ಗಳ ಅಗತ್ಯವಿರುತ್ತದೆ. ಇವು ಸಾಂಪ್ರದಾಯಿಕ ಸರ್ವರ್‌ಗಳಿಗಿಂತ 8 ರಿಂದ 40 ಪಟ್ಟು ಹೆಚ್ಚು ವಿದ್ಯುತ್ ಬಳಸುತ್ತವೆ ಮತ್ತು ಭಾರಿ ಪ್ರಮಾಣದ ಶಾಖವನ್ನು (Heat) ಬಿಡುಗಡೆ ಮಾಡುತ್ತವೆ.

➤ **ಎದುರಾಗಿರುವ ಪ್ರಮುಖ ಸವಾಲುಗಳು:**
ಮೆಟ್ರೋ ನಗರಗಳಲ್ಲಿ ತಾಪಮಾನ ಏರಿಕೆಗೆ ಕಾರಣವಾಗುತ್ತಿರುವ ಡೇಟಾ ಸೆಂಟರ್‌ಗಳ ಬಿಸಿ ಗಾಳಿ: ಡೇಟಾ ಸೆಂಟರ್‌ಗಳು ನಿರಂತರವಾಗಿ ಬಿಡುಗಡೆ ಮಾಡುವ ಅಪಾರ ಪ್ರಮಾಣದ ಬಿಸಿ ಗಾಳಿಯಿಂದಾಗಿ ಬೆಂಗಳೂರು, ಮುಂಬೈ ನಂತಹ ಮಹಾನಗರಗಳಲ್ಲಿ ತಾಪಮಾನವು ಗ್ರಾಮೀಣ ಪ್ರದೇಶಗಳಿಗಿಂತ ತೀವ್ರವಾಗಿ ಏರಿಕೆಯಾಗುತ್ತಿದೆ.
AI ಸರ್ವರ್‌ಗಳ ತಂಪಾಗಿಸುವಿಕೆಗೆ ಬಳಕೆಯಾಗುತ್ತಿದೆ ಕೋಟ್ಯಂತರ ಲೀಟರ್ ಕುಡಿಯುವ ನೀರು: ಸಾಂಪ್ರದಾಯಿಕ ಎವಾಪರೇಟಿವ್ ಕೂಲಿಂಗ್ ವ್ಯವಸ್ಥೆಯಿಂದಾಗಿ ಭಾರತದ ಡೇಟಾ ಸೆಂಟರ್‌ಗಳ ನೀರಿನ ಬಳಕೆ 2030ರ ವೇಳೆಗೆ 358 ಬಿಲಿಯನ್ ಲೀಟರ್‌ಗೆ

ದ್ವಿಗುಣಗೊಳ್ಳುವ ಆತಂಕವಿದ್ದು, ಇದು ನಗರಗಳ ನೀರಿನ ಅಭಾವವನ್ನು ಮತ್ತಷ್ಟು ಹೆಚ್ಚಿಸಲಿದೆ.

2030ರ ವೇಳೆಗೆ 5 ಪಟ್ಟು ಹೆಚ್ಚಾಗಲಿರುವ ಡೇಟಾ ಸೆಂಟರ್‌ಗಳ ವಿದ್ಯುತ್ ಬೇಡಿಕೆ: ಕೃತಕ ಬುದ್ಧಿಮತ್ತೆಯ (AI) ತರಬೇತಿಗಾಗಿ ಶಕ್ತಿಶಾಲಿ ಚಿಪ್‌ಗಳ ಅಗತ್ಯವಿರುವುದರಿಂದ ಭಾರತದಲ್ಲಿ ಡೇಟಾ ಸೆಂಟರ್‌ಗಳ ವಿದ್ಯುತ್ ಬಳಕೆ 13 TWh ನಿಂದ 57 TWh ಗೆ ಏರಿಕೆಯಾಗಿ ದೇಶದ ಒಟ್ಟಾರೆ ವಿದ್ಯುತ್ ಗ್ರಿಡ್ ಮೇಲೆ ಒತ್ತಡ ಹೇರಲಿದೆ.

➤ **ಪರಿಹಾರೋಪಾಯಗಳು ಮತ್ತು ಮುಂದಿನ ಹಾದಿ:**

ಸ್ಥಳ ವೈವಿಧ್ಯೀಕರಣ (Geographic Diversification): ಕೇವಲ ಬೆಂಗಳೂರು, ಮುಂಬೈ ನಂತಹ ಮೆಟ್ರೋ ನಗರಗಳಲ್ಲಿ ಮಾತ್ರ ಡೇಟಾ ಸೆಂಟರ್ ಸ್ಥಾಪಿಸದೆ, ರಾಜಸ್ಥಾನ, ತಮಿಳುನಾಡು ಅಥವಾ ಇತರ ಎರಡನೇ ಹಂತದ (Tier-II) ನಗರಗಳಿಗೆ ವಿಸ್ತರಿಸುವುದು.

ಲಿಕ್ವಿಡ್ ಕೂಲಿಂಗ್ ತಂತ್ರಜ್ಞಾನ (Liquid Cooling): ಸಾಂಪ್ರದಾಯಿಕ ನೀರಿನ ಆವಿಕಾರಕಗಳ ಬದಲಿಗೆ 'ಕ್ಲೋಸ್ಡ್-ಲೂಪ್ ಡೈರೆಕ್ಟ್ ಲಿಕ್ವಿಡ್ ಕೂಲಿಂಗ್' (Closed-loop Liquid Cooling) ತಂತ್ರಜ್ಞಾನ ಅಳವಡಿಸುವುದು. ಇದರಲ್ಲಿ ನೀರು ವ್ಯರ್ಥವಾಗದೆ ಮರುಬಳಕೆಯಾಗುತ್ತದೆ.

ಹಸಿರು ಇಂಧನ ಬಳಕೆ (Renewable Energy): ಸೌರಶಕ್ತಿ ಮತ್ತು ಪವನಶಕ್ತಿಯಂತಹ ನವೀಕರಿಸಬಹುದಾದ ಇಂಧನ ಮೂಲಗಳ ಬಳಿ ಡೇಟಾ ಸೆಂಟರ್‌ಗಳನ್ನು ಸ್ಥಾಪಿಸುವುದು.

ತ್ಯಾಜ್ಯ ನೀರಿನ ಬಳಕೆ: ಕುಡಿಯುವ ನೀರಿನ ಬದಲಿಗೆ ಸಂಸ್ಕರಿಸಿದ ಕೈಗಾರಿಕಾ ತ್ಯಾಜ್ಯ ನೀರನ್ನು ತಂಪಾಗಿಸಲು ಬಳಸುವುದು.

➤ ಕರ್ನಾಟಕ ಸರ್ಕಾರದ ಕ್ರಮ: ಕರ್ನಾಟಕ ಸರ್ಕಾರದ ಐಟಿ-ಬಿಟಿ ಇಲಾಖೆಯು ಮುಂಬರುವ ಹೊಸ 'ಡೇಟಾ ಸೆಂಟರ್ ನೀತಿ'ಯಲ್ಲಿ ಕಂಪನಿಗಳು ನೀರು ಮತ್ತು ವಿದ್ಯುತ್ ಅನ್ನು ಕಡ್ಡಾಯವಾಗಿ ದಕ್ಷತೆಯಿಂದ ಬಳಸುವಂತೆ ಮತ್ತು ಪರಿಸರಕ್ಕೆ ಹಾನಿಯಾಗದಂತೆ ನಿಯಮಗಳನ್ನು ರೂಪಿಸಲು ಸಜ್ಜಾಗಿದೆ.

## ಭಾರತೀಯ ಕೋಸ್ಟ್ ಗಾರ್ಡ್‌ಗೆ ಮೊದಲ ಸ್ವದೇಶಿ ಹೊವರ್‌ಕ್ರಾಫ್ಟ್ ಸೇರ್ಪಡೆ



➤ ಭಾರತದ ಕರಾವಳಿ ಭದ್ರತೆಯನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಜೂನ್ 18, 2026 ರಂದು ಭಾರತೀಯ ಕೋಸ್ಟ್ ಗಾರ್ಡ್ (ICG) ತನ್ನ ಮೊದಲ ಸ್ವದೇಶಿ ನಿರ್ಮಿತ ಏರ್ ಕುಶನ್ ವೆಹಿಕಲ್ (Air Cushion Vehicle - ACV) ಅಥವಾ ಹೊವರ್‌ಕ್ರಾಫ್ಟ್ 'H-561' ಅನ್ನು ಅಧಿಕೃತವಾಗಿ ತನ್ನ ಸೇವೆಗೆ ಸೇರಿಸಿಕೊಂಡಿದೆ. ಕೇಂದ್ರ ಸರ್ಕಾರದ 'ಮೇಕ್ ಇನ್ ಇಂಡಿಯಾ' (Make in India) ಮತ್ತು 'ಆತ್ಮನಿರ್ಭರ ಭಾರತ' (Aatmanirbhar Bharat) ಉಪಕ್ರಮದ ಅಡಿಯಲ್ಲಿ ಈ ಅತ್ಯಾಧುನಿಕ ಹಡಗನ್ನು ದೇಶೀಯವಾಗಿ ಅಭಿವೃದ್ಧಿಪಡಿಸಲಾಗಿದೆ.

➤ ರಕ್ಷಣಾ ಸಚಿವಾಲಯವು ಒಟ್ಟು 6 ಸ್ವದೇಶಿ ಹೊವರ್‌ಕ್ರಾಫ್ಟ್‌ಗಳ ನಿರ್ಮಾಣಕ್ಕಾಗಿ ಚೌಗುಲೆ ಆಂಡ್ ಕಂಪನಿ ಪ್ರೈವೇಟ್ ಲಿಮಿಟೆಡ್ (ಗೋವಾ ಶಿಪ್‌ಯಾರ್ಡ್) ಜೊತೆಗೆ ಮಾಡಿಕೊಂಡ ಒಪ್ಪಂದದ ಅಡಿಯಲ್ಲಿ ಈ ಮೊದಲ ಹೊವರ್‌ಕ್ರಾಫ್ಟ್ ಅನ್ನು ತಯಾರಿಸಲಾಗಿದೆ.

➤ ಹೊವರ್‌ಕ್ರಾಫ್ಟ್ ಅಥವಾ ಏರ್ ಕುಶನ್ ವೆಹಿಕಲ್ (ACV): ಹೊವರ್‌ಕ್ರಾಫ್ಟ್ ಎಂಬುದು ಶಕ್ತಿಯುತ ಫ್ಯಾನ್‌ಗಳು ಅಥವಾ ಲಿಫ್ಟ್ ಸಿಸ್ಟಮ್‌ಗಳ ಸಹಾಯದಿಂದ ಗಾಳಿಯ ಒತ್ತಡದ ಪದರವನ್ನು (Cushion of Air) ಸೃಷ್ಟಿಸಿಕೊಂಡು ಚಲಿಸುವ ವಿಶೇಷ ವಾಹನವಾಗಿದೆ. ಇದು ನೀರಿನ ಮೇಲ್ಮೈಗೆ ನೇರವಾಗಿ ತಾಗದೆ, ಗಾಳಿಯ ಕುಶನ್ ಮೇಲೆ ತೇಲುತ್ತಾ ಸಾಗುತ್ತದೆ.

ಇದರ ವಿಶೇಷತೆ ಏನೆಂದರೆ: ಸಾಮಾನ್ಯ ಹಡಗುಗಳು ಚಲಿಸಲು ಸಾಧ್ಯವಾಗದ ಆಳವಿಲ್ಲದ ನೀರು (Shallow Water), ಕೆಸರು ಗದ್ದೆಗಳು (Mudflats), ಮರಳು ತೀರಗಳು (Sandy Beaches) ಮತ್ತು ಜೌಗು ಪ್ರದೇಶಗಳಲ್ಲಿಯೂ (Marshy Terrain) ಇದು ಅತ್ಯಂತ ವೇಗವಾಗಿ ಕಾರ್ಯಾಚರಣೆ ನಡೆಸಬಲ್ಲದು.

➤ **ಕರಾವಳಿ ರಕ್ಷಣೆಯಲ್ಲಿ ಹೊವರ್‌ಕ್ರಾಫ್ಟ್ ಪ್ರಾಮುಖ್ಯತೆ:** ಭಾರತವು ಸುಮಾರು 7,516.6 ಕಿಲೋಮೀಟರ್ ಉದ್ದದ ಸುದೀರ್ಘ ಕರಾವಳಿ ತೀರವನ್ನು ಹೊಂದಿದೆ. ಇಂತಹ ಪರಿಸ್ಥಿತಿಯಲ್ಲಿ ಈ ಸ್ವದೇಶಿ ಹೊವರ್‌ಕ್ರಾಫ್ಟ್ ರಕ್ಷಣಾ ಪಡೆಗೆ ಪ್ರಮುಖ ಶಕ್ತಿಯಾಗಲಿದೆ.

ತ್ವರಿತ ಪ್ರತಿಕ್ರಿಯೆ (Rapid Response): ತುರ್ತು ಸಂದರ್ಭಗಳಲ್ಲಿ ಸಾಂಪ್ರದಾಯಿಕ ಹಡಗುಗಳಿಗಿಂತ ವೇಗವಾಗಿ ಘಟನಾ ಸ್ಥಳಕ್ಕೆ ತಲುಪಬಲ್ಲದು.

ಗಸ್ತು ಮತ್ತು ಕಣ್ಗಾವಲು: ಆಳವಿಲ್ಲದ ಸಮುದ್ರ ತೀರಗಳು ಮತ್ತು ನದೀಮುಖಗಳಲ್ಲಿ ನಿರಂತರ ಕಣ್ಗಾವಲು ಇಡಲು ಸಹಕಾರಿ.

ಅಕ್ರಮ ಚಟುವಟಿಕೆಗಳ ತಡೆ: ಸಮುದ್ರ ಮಾರ್ಗದ ಮೂಲಕ ನಡೆಯುವ ಕಳ್ಳಸಾಗಣೆ (Smuggling) ಮತ್ತು ಕಾನೂನುಬಾಹಿರ ಮೀನುಗಾರಿಕೆಯನ್ನು ತಡೆಯಲು ನೆರವಾಗುತ್ತದೆ.

ಶೋಧನೆ ಮತ್ತು ರಕ್ಷಣೆ (Search & Rescue): ಕರಾವಳಿ ಭಾಗದಲ್ಲಿ ನೈಸರ್ಗಿಕ ವಿಕೋಪಗಳು ಅಥವಾ ಅಪಘಾತಗಳು ಸಂಭವಿಸಿದಾಗ ತ್ವರಿತವಾಗಿ ಜನರನ್ನು ರಕ್ಷಿಸಲು ಇದು ಉತ್ತಮ ಆಯ್ಕೆಯಾಗಿದೆ.

➤ ಭಾರತೀಯ ಕೋಸ್ಟ್ ಗಾರ್ಡ್ (ICG): ಇದನ್ನು 1978 ರಲ್ಲಿ ಸ್ಥಾಪಿಸಲಾಯಿತು. ಇದು ಕೇಂದ್ರ ರಕ್ಷಣಾ ಸಚಿವಾಲಯದ (Ministry of Defence) ಅಡಿಯಲ್ಲಿ ಕಾರ್ಯನಿರ್ವಹಿಸುತ್ತದೆ. ಭಾರತೀಯ ಕೋಸ್ಟ್ ಗಾರ್ಡ್ ಭಾರತದ ಕಡಲ ಗಡಿ ಮತ್ತು ಎಕ್ಸ್‌ಕ್ಲೂಸಿವ್ ಎಕನಾಮಿಕ್ ಝೋನ್ (Exclusive Economic Zone) ವ್ಯಾಪ್ತಿಯಲ್ಲಿ ಕಾನೂನು ಜಾರಿ ಮತ್ತು ಭದ್ರತೆಯ ಜವಾಬ್ದಾರಿಯನ್ನು ಹೊಂದಿದೆ.

## ಕೇಂದ್ರ ಸರ್ಕಾರಕ್ಕೆ ₹8,813 ಕೋಟಿ ಲಾಭಾಂಶ ಪಾವತಿಸಿದ ಎಸ್‌ಬಿಐ(SBI)




➤ ಭಾರತದ ಅತಿ ದೊಡ್ಡ ಸಾರ್ವಜನಿಕ ವಲಯದ ಬ್ಯಾಂಕ್ ಆದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (SBI), 2025-26ರ ಆರ್ಥಿಕ ವರ್ಷಕ್ಕೆ (FY26) ಸಂಬಂಧಿಸಿದಂತೆ ಕೇಂದ್ರ ಸರ್ಕಾರಕ್ಕೆ ಭಾರಿ ಮೊತ್ತದ ಲಾಭಾಂಶವನ್ನು (Dividend) ಪಾವತಿಸಿದೆ.

➤ ನವದೆಹಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಎಸ್‌ಬಿಐ ಅಧ್ಯಕ್ಷರಾದ ಸಿ.ಎಸ್. ಶೆಟ್ಟಿ ಅವರು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ₹8,813 ಕೋಟಿ ಹಣದ ಲಾಭಾಂಶದ ಚೆಕ್ ಅನ್ನು ಹಸ್ತಾಂತರಿಸಿದ್ದು, ಮಾರ್ಚ್ 31, 2026 ಕ್ಕೆ ಕೊನೆಗೊಂಡ ಆರ್ಥಿಕ ವರ್ಷಕ್ಕೆ ಪ್ರತಿ ಈಕ್ವಿಟಿ ಷೇರಿಗೆ ₹17.35 ಲಾಭಾಂಶ ಘೋಷಿಸಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಭಾರತ ಸರ್ಕಾರವು ಸುಮಾರು 55% ರಷ್ಟು ಈಕ್ವಿಟಿ ಷೇರು ಹೂಡಿಕೆ ಹೊಂದುವ ಮೂಲಕ ಅತಿ ದೊಡ್ಡ ಷೇರುದಾರನಾಗಿರುವುದರಿಂದ ಈ ಲಾಭಾಂಶದ ಸಿಂಹಪಾಲು ಸರ್ಕಾರಕ್ಕೆ ಸೇರಿದೆ.

➤ **2025-26ರಲ್ಲಿ ಎಸ್‌ಬಿಐ ಆರ್ಥಿಕ ಸಾಧನೆ (Financial Performance)**:

ನಿವ್ವಳ ಲಾಭ (Net Profit): 2025-26ರ ಆರ್ಥಿಕ ವರ್ಷದಲ್ಲಿ ಎಸ್‌ಬಿಐ ₹80,032 ಕೋಟಿ ನಿವ್ವಳ ಲಾಭ ಗಳಿಸಿದೆ. ಇದು ಹಿಂದಿನ ವರ್ಷಕ್ಕೆ ಹೋಲಿಸಿದರೆ 12.88% ರಷ್ಟು ಹೆಚ್ಚಳವಾಗಿದೆ.

ಕಾರ್ಯಾಚರಣೆಯ ಲಾಭ (Operating Profit): ಬ್ಯಾಂಕಿನ ಕಾರ್ಯಾಚರಣೆಯ ಲಾಭವು ವರ್ಷದಿಂದ ವರ್ಷಕ್ಕೆ 11.25% ಹೆಚ್ಚಾಗಿದ್ದು, ₹1,23,015 ಕೋಟಿ ತಲುಪಿದೆ.

ಹಿಂದಿನ ವರ್ಷದ ಲಾಭಾಂಶ: 2024-25ರ ಆರ್ಥಿಕ ವರ್ಷದಲ್ಲಿ ಎಸ್‌ಬಿಐ ಸರ್ಕಾರಕ್ಕೆ ₹8,076.84 ಕೋಟಿ ಲಾಭಾಂಶ ನೀಡಿತ್ತು. ಆದರೆ ಈ ಬಾರಿ ದಾಖಲೆಯ ₹8,813 ಕೋಟಿ ಪಾವತಿಸಿದೆ.
ಪ್ರಚಲಿತ ಘಟನೆಗಳ ಆಧಾರಿತ ಪ್ರತಿದಿನದ ಹಾಗೂ ವಾರಾಂತ್ಯದ

## 20 June 2026

### ಜೂನ್-20 : ವಿಶ್ವ ನಿರಾಶ್ರಿತರ ದಿನ




➤ ಯುದ್ಧ, ಹಿಂಸಾಚಾರ, ಕಿರುಕುಳ ಮತ್ತು ಮಾನವ ಹಕ್ಕುಗಳ ಉಲ್ಲಂಘನೆಯಿಂದಾಗಿ ತಮ್ಮ ಸ್ವಂತ ದೇಶ ಮತ್ತು ಮನೆಗಳನ್ನು ತೊರೆದು ಅನಿವಾರ್ಯವಾಗಿ ಬೇರೆಡೆ ಆಶ್ರಯ ಪಡೆದಿರುವ ಲಕ್ಷಾಂತರ ಜನರ ಧೈರ್ಯ, ಸ್ಥಿತಿಸ್ಥಾಪಕತ್ವ ಮತ್ತು ಹೋರಾಟವನ್ನು ಗೌರವಿಸಲು ಪ್ರತಿ ವರ್ಷ ಜೂನ್ 20 ರಂದು ಜಾಗತಿಕವಾಗಿ "ವಿಶ್ವ ನಿರಾಶ್ರಿತರ ದಿನ" (World Refugee Day) ವನ್ನು ಆಚರಿಸಲಾಗುತ್ತದೆ.

**ವಿಶ್ವ ನಿರಾಶ್ರಿತರ ದಿನ 2026 ರ ಘೋಷವಾಕ್ಯ (Theme): "ಪ್ರತಿಯೊಬ್ಬರೂ ಸುರಕ್ಷಿತವಾಗಿರುವವರೆಗೆ" (Until Everyone is Safe)**

➤ ಆರಂಭದಲ್ಲಿ ಈ ದಿನವನ್ನು ಆಫ್ರಿಕಾ ಖಂಡದಲ್ಲಿ ಜಾಗೃತಿ ಮೂಡಿಸಲು 'ಆಫ್ರಿಕಾ ನಿರಾಶ್ರಿತರ ದಿನ' ಎಂದು ಆಚರಿಸಲಾಗುತ್ತಿತ್ತು. 2000 ನೇ ಇಸವಿಯ ಡಿಸೆಂಬರ್‌ನಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು (UNGA) ಜೂನ್ 20 ಅನ್ನು ಅಂತರರಾಷ್ಟ್ರೀಯ ನಿರಾಶ್ರಿತರ ದಿನವೆಂದು ಅಧಿಕೃತವಾಗಿ ಘೋಷಿಸಿತು. 2001 ಜೂನ್ 20 ರಂದು ಮೊದಲ ಬಾರಿಗೆ ಜಾಗತಿಕವಾಗಿ ವಿಶ್ವ ನಿರಾಶ್ರಿತರ ದಿನವನ್ನು ಆಚರಿಸಲಾಯಿತು. ಇದು 1951 ರ ನಿರಾಶ್ರಿತರ ಸ್ಥಿತಿಗತಿಗೆ ಸಂಬಂಧಿಸಿದ ಸಮಾವೇಶದ (1951 Refugee Convention) 50ನೇ ವರ್ಷದ ನೆನಪಿಗಾಗಿ ಆಚರಣೆಗೆ ಬಂದಿತು.

➤ ನಿರಾಶ್ರಿತರು (Refugees): ವಿಶ್ವಸಂಸ್ಥೆಯ ವ್ಯಾಖ್ಯಾನದ ಪ್ರಕಾರ, ತಮ್ಮ ಜನಾಂಗ, ಧರ್ಮ, ರಾಷ್ಟ್ರೀಯತೆ, ನಿರ್ದಿಷ್ಟ ಸಾಮಾಜಿಕ ಗುಂಪಿನ ಸದಸ್ಯತ್ವ ಅಥವಾ ರಾಜಕೀಯ ಸಿದ್ಧಾಂತಗಳ ಕಾರಣದಿಂದಾಗಿ ಕಿರುಕುಳ, ಯುದ್ಧ ಅಥವಾ ವ್ಯಾಪಕ ಹಿಂಸಾಚಾರದ ಭೀತಿಯಿಂದಾಗಿ ತಮ್ಮ ತಾಯ್ನಾಡನ್ನು ತೊರೆದು ಬೇರೆ ದೇಶಗಳಲ್ಲಿ ಆಶ್ರಯ ಪಡೆಯುವ ವ್ಯಕ್ತಿಗಳನ್ನು 'ನಿರಾಶ್ರಿತರು' ಎಂದು ಕರೆಯಲಾಗುತ್ತದೆ. ಇವರು ಸ್ವಯಂಪ್ರೇರಿತ ವಲಸಿಗರಲ್ಲ (Voluntary Migrants), ಜೀವಭಯದಿಂದ ಓಡಿಬಂದವರಾಗಿರುತ್ತಾರೆ.

### ಫ್ರಾನ್ಸ್‌ನಲ್ಲಿ ಮೊದಲ ಸಾಂಪ್ರದಾಯಿಕ ಹಿಂದೂ ದೇವಾಲಯ ನಿರ್ಮಾಣ! ಭಾರತೀಯ ಕಲ್ಲುಗಳ ಬಳಕೆ



➤ ಜಾಗತಿಕ ಮಟ್ಟದಲ್ಲಿ ಭಾರತೀಯ ಸಂಸ್ಕೃತಿ ಮತ್ತು ವಾಸ್ತುಶಿಲ್ಪದ ಹೆಜ್ಜೆಗುರುತುಗಳು ಮತ್ತಷ್ಟು ವಿಸ್ತರಿಸುತ್ತಿವೆ. ಇತ್ತೀಚೆಗಷ್ಟೇ ಯುಎಇ (UAE) ಯಲ್ಲಿ ಭವ್ಯ ಬಿಎಪಿಎಸ್ (BAPS) ಹಿಂದೂ ಮಂದಿರ ಲೋಕಾರ್ಪಣೆಯಾದ ಬೆನ್ನಲ್ಲೇ, ಇದೀಗ ಐರೋಪ್ಯ ರಾಷ್ಟ್ರವಾದ ಫ್ರಾನ್ಸ್‌ನಲ್ಲಿ ಮೊದಲ ಸಾಂಪ್ರದಾಯಿಕ ಹಿಂದೂ ದೇವಾಲಯ ನಿರ್ಮಾಣವಾಗುತ್ತಿರುವುದು ಜಾಗತಿಕ ಗಮನ ಸೆಳೆದಿದೆ.

➤ ಇದು ಫ್ರಾನ್ಸ್ ದೇಶದಲ್ಲಿ ನಿರ್ಮಾಣವಾಗುತ್ತಿರುವ ಮೊದಲ ಸಾಂಪ್ರದಾಯಿಕ ಹಿಂದೂ ಮಂದಿರವಾಗಿದೆ. ಈ ದೇವಾಲಯದ ಸಂಪೂರ್ಣ ವಿನ್ಯಾಸ ಹಾಗೂ ಕೆತ್ತನೆ ಕೆಲಸಗಳನ್ನು ಭಾರತದಲ್ಲೇ ಮಾಡಲಾಗಿದ್ದು, ಸಿದ್ಧಪಡಿಸಿದ ಕಲ್ಲುಗಳನ್ನು ಫ್ರಾನ್ಸ್‌ಗೆ ಕೊಂಡೊಯ್ದು ಅಲ್ಲಿ ಜೋಡಿಸಲಾಗುತ್ತಿದೆ (Assembled).

➤ ಉದ್ಘಾಟನೆ: ಫ್ರಾನ್ಸ್‌ನಲ್ಲಿರುವ ಭಾರತೀಯ ಸಮುದಾಯದ ಮೂಲಗಳ ಪ್ರಕಾರ, ಈ ಭವ್ಯ ಮಂದಿರದ ಉದ್ಘಾಟನಾ ಸಮಾರಂಭವು 2026ರ ಸೆಪ್ಟೆಂಬರ್ ತಿಂಗಳಿನಲ್ಲಿ ಒಟ್ಟು 15 ದಿನಗಳ ವೈವಿಧ್ಯಮಯ ಕಾರ್ಯಕ್ರಮಗಳೊಂದಿಗೆ ನೆರವೇರಲಿದೆ. ಈ ಮಂದಿರ ನಿರ್ಮಾಣದ ಉಸ್ತುವಾರಿಯನ್ನು ಪ್ರಮುಖ ಆಧ್ಯಾತ್ಮಿಕ ಸಂಸ್ಥೆಯಾದ ಬಿಎಪಿಎಸ್ (BAPS - Bochasanwasi Akshar Purushottam Swaminarayan Sanstha) ವಹಿಸಿಕೊಂಡಿದೆ.

➤ ಭಾರತ - ಫ್ರಾನ್ಸ್ ರಾಜತಾಂತ್ರಿಕ ಮಹತ್ವ: ಇತ್ತೀಚೆಗೆ ಫ್ರಾನ್ಸ್‌ನ ಇವಿಯಾನ್ (Evian) ನಗರದಲ್ಲಿ ನಡೆದ ಜಿ-7 (G7) ಶೃಂಗಸಭೆಯಲ್ಲಿ ಭಾಗವಹಿಸಿದ ನಂತರ ಪ್ರಧಾನಿ ನರೇಂದ್ರ ಮೋದಿ ಅವರು ಪ್ಯಾರಿಸ್‌ಗೆ ಭೇಟಿ ನೀಡಿದ್ದರು. ಈ ಸಂದರ್ಭದಲ್ಲಿ ಫ್ರಾನ್ಸ್‌ನಲ್ಲಿರುವ ಭಾರತೀಯ ಸಮುದಾಯವನ್ನು ಉದ್ದೇಶಿಸಿ ಮಾತನಾಡಿದ ಅವರು, ಈ ಸಾಂಪ್ರದಾಯಿಕ ದೇವಾಲಯದ ನಿರ್ಮಾಣವು ಭಾರತ ಮತ್ತು ಫ್ರಾನ್ಸ್ ನಡುವಿನ ಸಾಂಸ್ಕೃತಿಕ ಸಂಬಂಧವನ್ನು ಮತ್ತಷ್ಟು ಗಟ್ಟಿಗೊಳಿಸಲಿದೆ ಎಂದು ಹರ್ಷ ವ್ಯಕ್ತಪಡಿಸಿದ್ದಾರೆ.

➤ "ಭಾರತ ಹಾಗೂ ಫ್ರಾನ್ಸ್ ನಡುವಿನ ಪಾಲುದಾರಿಕೆಯು ಕೇವಲ ದ್ವಿಪಕ್ಷೀಯ ಸಂಬಂಧವಲ್ಲ, ಇದು ಇಡೀ ಜಗತ್ತಿನ ಪ್ರಗತಿಗೆ ಅತ್ಯಂತ ನಿರ್ಣಾಯಕವಾಗಿದೆ." — ಪ್ರಧಾನಿ ನರೇಂದ್ರ ಮೋದಿ

### ಜೂನ್-21: ಅಂತರರಾಷ್ಟ್ರೀಯ ಯೋಗ ದಿನ




➤ ಪ್ರಾಚೀನ ಭಾರತೀಯ ಋಷಿ-ಮುನಿಗಳು ಜಗತ್ತಿಗೆ ನೀಡಿದ ಅತ್ಯಮೂಲ್ಯವಾದ ಕೊಡುಗೆಯಾದ 'ಯೋಗ' ಇಂದು ಕೇವಲ ದೈಹಿಕ ಕಸರತ್ತಾಗಿ ಉಳಿದಿಲ್ಲ. ಅದು ಜಾಗತಿಕ ಸ್ವಾಸ್ಥ್ಯದ ಪರಮೋಚ್ಚ ಸೂತ್ರವಾಗಿ ಹೊರಹೊಮ್ಮಿದೆ. ಪ್ರತಿ ವರ್ಷ ಜೂನ್ 21ರಂದು ಆಚರಿಸಲಾಗುವ ಅಂತರರಾಷ್ಟ್ರೀಯ ಯೋಗ ದಿನವು (International Yoga Day 2026) ಈ ವರ್ಷ ತನ್ನ 12ನೇ ಆವೃತ್ತಿಯನ್ನು ಅತ್ಯಂತ ಸಂಭ್ರಮದಿಂದ ಆಚರಿಸುತ್ತಿದೆ.
2026ರ ಥೀಮ್: 'ಆರೋಗ್ಯಕರ ವಯಸ್ಸಾಗುವಿಕೆಗಾಗಿ ಯೋಗ' (Yoga for Healthy Ageing)

**➤ 2026ರ ಯೋಗ ದಿನದ ಕೇಂದ್ರ ಬಿಂದು: 'ಆರೋಗ್ಯಕರ ವಯಸ್ಸಾಗುವಿಕೆಗಾಗಿ ಯೋಗ'**

ಮುಖ್ಯ ಕಾರ್ಯಕ್ರಮದ ಸ್ಥಳ: ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಈ ಬಾರಿ ಕೋಲ್ಕತ್ತಾದಲ್ಲಿ ನಡೆಯಲಿರುವ ಮುಖ್ಯ ಕಾರ್ಯಕ್ರಮದ ನೇತೃತ್ವ ವಹಿಸಲಿದ್ದಾರೆ. ಜಗತ್ತಿನಾದ್ಯಂತ ಅಂದಾಜು 2,500ಕ್ಕೂ ಹೆಚ್ಚು ಸ್ಥಳಗಳಲ್ಲಿ ಈ ಯೋಗ ಮಹೋತ್ಸವ ಏಕಕಾಲದಲ್ಲಿ ಜರುಗುತ್ತಿದೆ.

➤ **ವೈಜ್ಞಾನಿಕ ದೃಷ್ಟಿಕೋನ:** ಯೋಗದಿಂದ ವಯಸ್ಸಾಗುವಿಕೆ ನಿಧಾನ: ನಿಯಮಿತ ಯೋಗಾಭ್ಯಾಸವು ಕೇವಲ ಮನಸ್ಸಿಗೆ ಶಾಂತಿ ನೀಡುವುದಲ್ಲದೆ, ದೇಹದ ಜೀವಕೋಶಗಳ ಮಟ್ಟದಲ್ಲಿ ಅದ್ಭುತ ಬದಲಾವಣೆ ತರುತ್ತದೆ ಎಂದು ವಿಜ್ಞಾನಿಗಳು ಸಾಬೀತುಪಡಿಸಿದ್ದಾರೆ.
ರೋಗನಿರೋಧಕ ಶಕ್ತಿ ಹೆಚ್ಚಳ: ಪ್ರಾಣಾಯಾಮ ಮತ್ತು ಸುದರ್ಶನ ಕ್ರಿಯೆಯಂತಹ ಶ್ವಾಸಕೋಶದ ವ್ಯಾಯಾಮಗಳು ಬಿಳಿ ರಕ್ತಕಣಗಳ (WBC) ದಕ್ಷತೆಯನ್ನು ಹೆಚ್ಚಿಸಿ, ವೈರಸ್ ಸೋಂಕುಗಳ ವಿರುದ್ಧ ಹೋರಾಡುವ ಶಕ್ತಿ ನೀಡುತ್ತವೆ.

ಹೃದಯಾಘಾತದ ಅಪಾಯ 30% ಕಡಿತ: ನಿಯಮಿತ ಯೋಗವು ರಕ್ತನಾಳಗಳ ಸ್ಥಿತಿಸ್ಥಾಪಕತ್ವವನ್ನು ಹೆಚ್ಚಿಸುವ ಮೂಲಕ ರಕ್ತದೊತ್ತಡವನ್ನು (Blood Pressure) ನಿಯಂತ್ರಣದಲ್ಲಿಡುತ್ತದೆ. ಇದು ಹೃದಯಾಘಾತದ ಅಪಾಯವನ್ನು ಶೇಕಡಾ 30 ರಷ್ಟು ಕಡಿಮೆ ಮಾಡುತ್ತದೆ.
ಆಂಟಿ-ಏಜಿಂಗ್ (Anti-Ageing): ಯೋಗವು ಸೆಲ್ಯುಲಾರ್ ಮಟ್ಟದಲ್ಲಿ ಮುಖದ ಸುಕ್ಕುಗಳು ಮತ್ತು ವಯಸ್ಸಾಗುವ ಪ್ರಕ್ರಿಯೆಯನ್ನು ನಿಧಾನಗೊಳಿಸುತ್ತದೆ ಎಂದು ಸಂಶೋಧನೆಗಳು ತಿಳಿಸಿವೆ.

➤ ಗಿನ್ನೆಸ್ ವಿಶ್ವ ದಾಖಲೆಯ ಪ್ರಯತ್ನ: 'ಯೋಗ 365' ಅಭಿಯಾನ: ಈ ವರ್ಷದ ಯೋಗ ದಿನದ ಮತ್ತೊಂದು ಪ್ರಮುಖ ವಿಶೇಷತೆಯೆಂದರೆ ಆಯುಷ್ ಸಚಿವಾಲಯವು ಚಾಲನೆ ನೀಡಿರುವ 'ಯೋಗ 365' (Yoga 365) ಅಭಿಯಾನ. ಅಭಿಯಾನದ ಮುಖ್ಯ ಉದ್ದೇಶ: ಯೋಗವು ಜೂನ್ 21ರ ಒಂದು ದಿನದ ಪ್ರದರ್ಶನವಾಗಬಾರದು. ವರ್ಷದ 365 ದಿನಗಳೂ ಪ್ರತಿಯೊಬ್ಬರ ದೈನಂದಿನ ಜೀವನದ ಭಾಗವಾಗಬೇಕು.ಇದಕ್ಕಾಗಿ ದೇಶಾದ್ಯಂತ ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳ ಮೂಲಕ ಲಕ್ಷಾಂತರ ಜನರನ್ನು ಏಕಕಾಲದಲ್ಲಿ ಸಂಪರ್ಕಿಸಿ 'ದೊಡ್ಡ ಪ್ರಮಾಣದ ಜಂಟಿ ಯೋಗಾಭ್ಯಾಸ'ದ (Mass Joint Yoga Session) ಗಿನ್ನೆಸ್ ವಿಶ್ವ ದಾಖಲೆಯ ಪ್ರಯತ್ನವನ್ನು ನಡೆಸಲಾಗುತ್ತಿದೆ.

**➤ ವಿಶ್ವಸಂಸ್ಥೆ (UN) ಮತ್ತು ಟೈಮ್ಸ್ ಸ್ಕ್ವೇರ್‌ನಲ್ಲಿ ಭಾರತದ ಯೋಗದ ಛಾಪು:**
ನ್ಯೂಯಾರ್ಕ್‌ನಲ್ಲಿರುವ ವಿಶ್ವಸಂಸ್ಥೆಯ ಕೇಂದ್ರ ಕಚೇರಿಯಲ್ಲಿ ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ಅತ್ಯಂತ ಯಶಸ್ವಿಯಾಗಿ ಆಯೋಜಿಸಲಾಯಿತು. ವಿಶ್ವಸಂಸ್ಥೆಗೆ ಭಾರತದ ಕಾಯಂ ರಾಯಭಾರ ಕಚೇರಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ವಿವಿಧ ದೇಶಗಳ ಸುಮಾರು 800ಕ್ಕೂ ಹೆಚ್ಚು ಮಂದಿ ಪಾಲ್ಗೊಂಡಿದ್ದರು. ವಿಶ್ವಸಂಸ್ಥೆಯ ಮಹಾಪ್ರಧಾನ ಕಾರ್ಯದರ್ಶಿ ಅಂಟೋನಿಯೋ ಗುಟೆರೆಸ್ ಅವರು ಈ ಸಂದರ್ಭದಲ್ಲಿ ವಿಶೇಷ ಸಂದೇಶವನ್ನು ಹಮ್ಮಿಕೊಂಡಿದ್ದಾರೆ.

**➤ ಟೈಮ್ಸ್ ಸ್ಕ್ವೇರ್‌ನಲ್ಲಿ ಬೃಹತ್ ಯೋಗ ಸಂಗಮ:** ಜೂನ್ 21ರಂದು ನ್ಯೂಯಾರ್ಕ್‌ನ ವಿಶ್ವಪ್ರಸಿದ್ಧ ಟೈಮ್ಸ್ ಸ್ಕ್ವೇರ್‌ನಲ್ಲಿ (Times Square) ಬೃಹತ್ ಯೋಗ ಸಂಗಮ ನಡೆಯಲಿದ್ದು, ಪ್ರಧಾನಿ ನರೇಂದ್ರ ಮೋದಿ ಅವರ ಯೋಗ ಗುರುಗಳಾದ ಎಚ್.ಆರ್. ನಾಗೇಂದ್ರ ಅವರು ಇದರ ನೇತೃತ್ವ ವಹಿಸಲಿದ್ದಾರೆ.

## 2047ರ ಮುನ್ನವೇ ಸಿಕಲ್ ಸೆಲ್ ಮುಕ್ತ ಭಾರತ ಸಾಧ್ಯ: ರಾಷ್ಟ್ರಪತಿ ದ್ರೌಪದಿ ಮುರ್ಮು ವಿಶ್ವಾಸ



➤ ಭಾರತ ಸರ್ಕಾರದ ಮಹತ್ವಾಕಾಂಕ್ಷಿ ರಾಷ್ಟ್ರೀಯ ಗುರಿಯಾದ 2047ಕ್ಕಿಂತ ಮುಂಚಿತವಾಗಿಯೇ ದೇಶದಿಂದ ಸಿಕಲ್ ಸೆಲ್ (Sickle Cell Anemia) ರೋಗವನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಬಹುದು ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ದೃಢ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

➤ ವಿಶ್ವ ಸಿಕಲ್ ಸೆಲ್ ದಿನದ ಅಂಗವಾಗಿ ಮಧ್ಯಪ್ರದೇಶದ ಓಂಕಾರೇಶ್ವರದಲ್ಲಿ ನಡೆದ ವಿಶೇಷ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಒಟ್ಟಾಗಿ, ಸಮನ್ವಯತೆಯಿಂದ ಶ್ರಮಿಸಿದರೆ ಈ ಮಾರಕ ಕಾಯಿಲೆಯನ್ನು ನಿಗದಿತ ಸಮಯಕ್ಕಿಂತ ಮೊದಲೇ ಓಡಿಸಲು ಸಾಧ್ಯವಿದೆ ಎಂದು ಅವರು ಕರೆ ನೀಡಿದರು.

➤ ಬುಡಕಟ್ಟು ಸಮುದಾಯಗಳಲ್ಲಿ ಹೆಚ್ಚುತ್ತಿರುವ ಆತಂಕ: ಸಿಕಲ್ ಸೆಲ್ ಎಂಬುದು ಕೇವಲ ಸಾಮಾನ್ಯ ಕಾಯಿಲೆಯಲ್ಲ, ಇದು ವಂಶಪಾರಂಪರ್ಯವಾಗಿ (Genetically) ಹರಡುವ ಗಂಭೀರ ರಕ್ತದ ಕಾಯಿಲೆಯಾಗಿದೆ. ಸಂಶೋಧನೆಗಳ ಪ್ರಕಾರ, ದೇಶದ ಸಾಮಾನ್ಯ ಜನರಿಗಿಂತ ಬುಡಕಟ್ಟು (ಗಿರಿಜನ) ಸಮುದಾಯದವರಲ್ಲಿ ಈ ಕಾಯಿಲೆಯ ಪ್ರಮಾಣ ಹಲವು ಪಟ್ಟು ಹೆಚ್ಚಾಗಿದೆ. ಭಾರತದಲ್ಲಿ ವಿಶೇಷವಾಗಿ ಮಧ್ಯಪ್ರದೇಶ ಮತ್ತು ಒಡಿಶಾ ರಾಜ್ಯಗಳ ಬುಡಕಟ್ಟು ಜನಸಂಖ್ಯೆಯಲ್ಲಿ ಈ ಕಾಯಿಲೆ ಅತಿ ಹೆಚ್ಚು ಕಂಡುಬರುತ್ತಿದ್ದು, ಈ ಬಗ್ಗೆ ತಕ್ಷಣದ ಜಾಗೃತಿ ಮತ್ತು ಚಿಕಿತ್ಸೆಯ ಅಗತ್ಯವಿದೆ ಎಂದು ರಾಷ್ಟ್ರಪತಿಗಳು ಕಳವಳ ವ್ಯಕ್ತಪಡಿಸಿದ್ದಾರೆ.

**➤ ಸಿಕಲ್ ಸೆಲ್ ಅನಿಮಿಯಾ:** ಸಾಮಾನ್ಯವಾಗಿ ಮಾನವನ ದೇಹದಲ್ಲಿರುವ ಕೆಂಪು ರಕ್ತಕಣಗಳು (Red Blood Cells) ದುಂಡಗಿನ ಮತ್ತು ಮೃದುವಾದ ಆಕಾರವನ್ನು ಹೊಂದಿರುತ್ತವೆ. ಇವು ದೇಹದಾದ್ಯಂತ ಆಮ್ಲಜನಕವನ್ನು ಸುಲಭವಾಗಿ ಸಾಗಿಸುತ್ತವೆ. ಆದರೆ ಸಿಕಲ್ ಸೆಲ್ ಕಾಯಿಲೆಗೆ ತುತ್ತಾದವರಲ್ಲಿ:
ಕೆಂಪು ರಕ್ತಕಣಗಳು ತಮ್ಮ ಸಹಜ ದುಂಡಗಿನ ಆಕಾರವನ್ನು ಕಳೆದುಕೊಂಡು ಕುಡುಗೋಲಿನ (Sickle Shape) ಆಕಾರಕ್ಕೆ ತಿರುಗುತ್ತವೆ.
ಇವು ಗಟ್ಟಿಯಾಗುವುದರಿಂದ ರಕ್ತನಾಳಗಳಲ್ಲಿ ಸುಲಭವಾಗಿ ಚಲಿಸದೆ ರಕ್ತದ ಹರಿವನ್ನು ನಿರ್ಬಂಧಿಸುತ್ತವೆ.
ಇದರಿಂದ ದೇಹದಲ್ಲಿ ಆಮ್ಲಜನಕದ (Oxygen) ಸಂಚಾರಕ್ಕೆ ತೀವ್ರ ತೊಂದರೆಯಾಗುತ್ತದೆ.
ಪರಿಣಾಮವಾಗಿ ರೋಗಿಗಳಲ್ಲಿ ತೀವ್ರ ರಕ್ತಹೀನತೆ (Anemia), ಅತಿಯಾದ ಮೈಕೈ ನೋವು, ಆಯಾಸ ಮತ್ತು ಪದೇ ಪದೇ ಸೋಂಕುಗಳು (Infections) ಕಾಣಿಸಿಕೊಳ್ಳುತ್ತವೆ.

## ಆರ್‌ಬಿಐ ನಿಂದ ಕರ್ನಾಟಕದ ಶ್ರೀ ಮಹಾಲಕ್ಷ್ಮಿ ಕೋ-ಆಪರೇಟಿವ್ ಬ್ಯಾಂಕ್ ಲೈಸೆನ್ಸ್ ರದ್ದು




➤ ಭಾರತೀಯ ರಿಸರ್ವ್ ಬ್ಯಾಂಕ್ (RBI) ಕರ್ನಾಟಕ ಮೂಲದ ಶ್ರೀ ಮಹಾಲಕ್ಷ್ಮಿ ಅರ್ಬನ್ ಕೋ-ಆಪರೇಟಿವ್ ಕ್ರೆಡಿಟ್ ಬ್ಯಾಂಕ್ ಲಿಮಿಟೆಡ್, ಗೋಕಾಕ್ (ಬೆಳಗಾವಿ) ಇದರ ಬ್ಯಾಂಕಿಂಗ್ ಪರವಾನಗಿಯನ್ನು (Licence) ರದ್ದುಗೊಳಿಸಿದೆ. ಬ್ಯಾಂಕಿನ ಆರ್ಥಿಕ ಪರಿಸ್ಥಿತಿ ತೀವ್ರವಾಗಿ ಹದಗೆಟ್ಟ ಹಿನ್ನೆಲೆಯಲ್ಲಿ ಕೇಂದ್ರ ಬ್ಯಾಂಕ್ ಈ ಕಠಿಣ ನಿರ್ಧಾರ ಕೈಗೊಂಡಿದ್ದು, ಜೂನ್ 18, 2026 ರಿಂದಲೇ ಜಾರಿಗೆ ಬರುವಂತೆ ಬ್ಯಾಂಕಿನ ಎಲ್ಲಾ ವಹಿವಾಟುಗಳನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಲು ಆದೇಶಿಸಿದೆ.

**➤ ಲೈಸೆನ್ಸ್ ರದ್ದುಗೊಳಿಸಲು ಮುಖ್ಯ ಕಾರಣಗಳೇನು?**
ಬಂಡವಾಳದ ಕೊರತೆ: ಬ್ಯಾಂಕ್ ತನ್ನ ವ್ಯವಹಾರವನ್ನು ಮುಂದುವರಿಸಲು ಅಗತ್ಯವಿರುವಷ್ಟು ಕನಿಷ್ಠ ಬಂಡವಾಳ ಮತ್ತು ಭವಿಷ್ಯದ ಗಳಿಕೆಯ ಆಶಾಭಾವನೆಯನ್ನು ಹೊಂದಿಲ್ಲ.
ಕಾಯ್ದೆಗಳ ಉಲ್ಲಂಘನೆ: ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ, 1949 ರ (Banking Regulation Act, 1949) ಸೆಕ್ಷನ್ 11(1) ಮತ್ತು ಸೆಕ್ಷನ್ 22(3) ರ ನಿಯಮಗಳನ್ನು ಪಾಲಿಸುವಲ್ಲಿ ಬ್ಯಾಂಕ್ ಸಂಪೂರ್ಣವಾಗಿ ವಿಫಲವಾಗಿದೆ.
ಠೇವಣಿದಾರರ ಹಿತರಕ್ಷಣೆ: ಬ್ಯಾಂಕಿನ ಪ್ರಸ್ತುತ ಆರ್ಥಿಕ ಸ್ಥಿತಿಯಿಂದಾಗಿ ಗ್ರಾಹಕರ ಠೇವಣಿ ಹಣವನ್ನು ಪೂರ್ಣವಾಗಿ ಮರುಪಾವತಿಸಲು ಸಾಧ್ಯವಿಲ್ಲ. ಹೀಗಾಗಿ ಬ್ಯಾಂಕ್ ವಹಿವಾಟು ಮುಂದುವರಿಸಿದರೆ ಸಾರ್ವಜನಿಕ ಹಿತಾಸಕ್ತಿಗೆ ಧಕ್ಕೆ ಉಂಟಾಗುತ್ತದೆ ಎಂದು ಆರ್‌ಬಿಐ ಸ್ಪಷ್ಟಪಡಿಸಿದೆ.

➤ ಆರ್‌ಬಿಐ ಆದೇಶದ ಬೆನ್ನಲ್ಲೇ, ಕರ್ನಾಟಕ ಸಹಕಾರ ಸಂಘಗಳ ರಿಜಿಸ್ಟ್ರಾರ್ ಅವರಿಗೆ ಬ್ಯಾಂಕಿನ ವ್ಯವಹಾರವನ್ನು ಮುಕ್ತಾಯಗೊಳಿಸಲು (Winding up) ಮತ್ತು ಲಿಕ್ವಿಡೇಟರ್ (Liquidator) ಅನ್ನು ನೇಮಿಸಲು ಸೂಚಿಸಲಾಗಿದೆ.

➤ **ಗ್ರಾಹಕರ ಠೇವಣಿ ಹಣದ ಕಥೆ (DICGC ನಿಯಮಗಳು):** ಬ್ಯಾಂಕ್ ದಿವಾಳಿಯಾದರೂ ಅಥವಾ ಲೈಸೆನ್ಸ್ ರದ್ದಾದರೂ ಗ್ರಾಹಕರ ಠೇವಣಿ ಹಣಕ್ಕೆ ಸುರಕ್ಷತೆ ಇರುತ್ತದೆ. ಡೆಪಾಸಿಟ್ ಇನ್ಶೂರೆನ್ಸ್ ಅಂಡ್ ಕ್ರೆಡಿಟ್ ಗ್ಯಾರಂಟಿ ಕಾರ್ಪೊರೇಷನ್ (DICGC) ಕಾಯ್ದೆ 1961 ರ ಅನ್ವಯ, ಪ್ರತಿಯೊಬ್ಬ ಠೇವಣಿದಾರರು ತಮ್ಮ ಒಟ್ಟು ಠೇವಣಿಯ ಮೇಲೆ ಗರಿಷ್ಠ ₹5,00,000 (5 ಲಕ್ಷ ರೂಪಾಯಿ) ವರೆಗಿನ ವಿಮಾ ಮೊತ್ತವನ್ನು ಪಡೆಯಲು ಅರ್ಹರಾಗಿರುತ್ತಾರೆ.
ಆರ್‌ಬಿಐ ಮಾಹಿತಿ ಪ್ರಕಾರ, ಶ್ರೀ ಮಹಾಲಕ್ಷ್ಮಿ ಬ್ಯಾಂಕಿನ ಶೇಕಡಾ 97.90% ರಷ್ಟು ಠೇವಣಿದಾರರು ತಮ್ಮ ಸಂಪೂರ್ಣ ಹಣವನ್ನು DICGC ಯಿಂದ ಮರುಪಾವತಿ ಪಡೆಯಲು ಅರ್ಹರಾಗಿದ್ದಾರೆ.
ಈಗಾಗಲೇ ಜೂನ್ 9, 2026 ರ ಹೊತ್ತಿಗೆ DICGC ಸಂಸ್ಥೆಯು ಬ್ಯಾಂಕಿನ ಅರ್ಹ ಗ್ರಾಹಕರಿಗೆ ಒಟ್ಟು ₹88.21 ಕೋಟಿ ವಿಮಾ ಮೊತ್ತವನ್ನು ಪಾವತಿಸಿದೆ.

## FATF ಉಪಾಧ್ಯಕ್ಷರಾಗಿ ವಿವೇಕ್ ಅಗರ್ವಾಲ್ ನೇಮಕ: ಈ ಹುದ್ದೆಗೇರಿದ ಮೊದಲ ಭಾರತೀಯ ಐಎಎಸ್ ಅಧಿಕಾರಿ!




➤ ಜಾಗತಿಕ ಹಣಕಾಸು ಜಗತ್ತಿನಲ್ಲಿ ಭಾರತದ ಪ್ರಭಾವ ಮತ್ತಷ್ಟು ಹೆಚ್ಚಾಗಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಹಣದ ಅಕ್ರಮ ವರ್ಗಾವಣೆ (Money Laundering) ಮತ್ತು ಭಯೋತ್ಪಾದನೆಗೆ ಹಣಕಾಸು ನೆರವು ನೀಡುವುದನ್ನು ತಡೆಯುವ ಜಾಗತಿಕ ಸಂಸ್ಥೆಯಾದ ಫೈನಾನ್ಶಿಯಲ್ ಆಕ್ಷನ್ ಟಾಸ್ಕ್ ಫೋರ್ಸ್ (FATF) ನ ನೂತನ ಉಪಾಧ್ಯಕ್ಷರಾಗಿ ಭಾರತದ ಹಿರಿಯ ಐಎಎಸ್ ಅಧಿಕಾರಿ ವಿವೇಕ್ ಅಗರ್ವಾಲ್ ಅವರು ಆಯ್ಕೆಯಾಗಿದ್ದಾರೆ.
➤ ಈ ಪ್ರಭಾವಿ ಜಾಗತಿಕ ಸಂಸ್ಥೆಯ ಇತಿಹಾಸದಲ್ಲೇ ಇಂತಹ ಉನ್ನತ ನಾಯಕತ್ವದ ಹುದ್ದೆಗೆ ಆಯ್ಕೆಯಾದ ಮೊದಲ ಭಾರತೀಯ ಎಂಬ ಹೆಗ್ಗಳಿಕೆಗೆ ವಿವೇಕ್ ಅಗರ್ವಾಲ್ ಪಾತ್ರರಾಗಿದ್ದಾರೆ. ಪ್ಯಾರಿಸ್‌ನಲ್ಲಿ ನಡೆದ FATF ಪ್ಲೀನರಿ (ಪೂರ್ಣ ಪೀಠ) ಸಭೆಯಲ್ಲಿ ಈ ಮಹತ್ವದ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ.
➤ ವಿವೇಕ್ ಅಗರ್ವಾಲ್ ಅವರು ಆಡಳಿತ ರಂಗದಲ್ಲಿ ಹಾಗೂ ಹಣಕಾಸು ವಲಯದಲ್ಲಿ ದೀರ್ಘಾವಧಿಯ ಅನುಭವ ಹೊಂದಿರುವ ದಕ್ಷ ಅಧಿಕಾರಿಯಾಗಿದ್ದಾರೆ. ಪ್ರಸ್ತುತ ಭಾರತ ಸರ್ಕಾರದ ಕೇಂದ್ರ ಸಾಂಸ್ಕೃತಿಕ ಸಚಿವಾಲಯದ ಕಾರ್ಯದರ್ಶಿಯಾಗಿ (Union Culture Secretary) ಸೇವೆ ಸಲ್ಲಿಸುತ್ತಿದ್ದಾರೆ. ಇದಕ್ಕೂ ಮುನ್ನ ಅವರು ದೇಶದ ಆರ್ಥಿಕ ಭದ್ರತೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು:
FIU-IND ನಿರ್ದೇಶಕರು: ಭಾರತದ ಹಣಕಾಸು ಗುಪ್ತಚರ ಘಟಕದ (Financial Intelligence Unit-India) ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದಾರೆ.
ಕೇಂದ್ರ ಹಣಕಾಸು ಸಚಿವಾಲಯ: ಹೆಚ್ಚುವರಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿ, ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆಗಳ ಅನುಷ್ಠಾನದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.
FATF ನಿಯೋಗದ ಮುಖ್ಯಸ್ಥ: FATF ಸಂಸ್ಥೆಯಲ್ಲಿ ಭಾರತದ ನಿಯೋಗವನ್ನು ಮುನ್ನಡೆಸಿದ ಅನುಭವ ಇವರಿಗಿದೆ.
➤ FATF (ಫೈನಾನ್ಶಿಯಲ್ ಆಕ್ಷನ್ ಟಾಸ್ಕ್ ಫೋರ್ಸ್) ಎಂಬುದು 1989ರಲ್ಲಿ ಜಿ-7 ಶೃಂಗಸಭೆಯ ಮೂಲಕ ಫ್ರಾನ್ಸ್‌ನ ಪ್ಯಾರಿಸ್‌ನಲ್ಲಿ ಸ್ಥಾಪಿತವಾದ ಜಾಗತಿಕ ಸಂಸ್ಥೆಯಾಗಿದ್ದು, ಇದು ಅಕ್ರಮ ಹಣ ವರ್ಗಾವಣೆ (Money Laundering) ಮತ್ತು ಭಯೋತ್ಪಾದನೆಗೆ ಹಣಕಾಸು ನೆರವು ನೀಡುವುದನ್ನು ತಡೆಯಲು ನಿಯಮಗಳನ್ನು ರೂಪಿಸುತ್ತದೆ ಹಾಗೂ ನಿಯಮ ಪಾಲಿಸದ ದೇಶಗಳನ್ನು ಗ್ರೇ ಮತ್ತು ಬ್ಲಾಕ್ ಲಿಸ್ಟ್‌ಗಳಲ್ಲಿ ಇರಿಸುತ್ತದೆ.

## ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು: ಫುಟ್‌ಪಾತ್‌ಗಳಲ್ಲಿ ಸುರಕ್ಷಿತವಾಗಿ ನಡೆಯುವುದು ನಾಗರಿಕರ ಮೂಲಭೂತ ಹಕ್ಕು!




➤ ದೇಶದ ನಾಗರಿಕರ ಸುರಕ್ಷತೆಗೆ ಸಂಬಂಧಿಸಿದಂತೆ ಭಾರತದ ಸರ್ವೋಚ್ಚ ನ್ಯಾಯಾಲಯ (Supreme Court) ಇತ್ತೀಚೆಗೆ ಐತಿಹಾಸಿಕ ತೀರ್ಪೊಂದನ್ನು ನೀಡಿದೆ. ರಸ್ತೆ ಬದಿಯ ಫುಟ್‌ಪಾತ್‌ಗಳಲ್ಲಿ (ಕಾಲುದಾರಿ) ಯಾವುದೇ ಆತಂಕವಿಲ್ಲದೆ ಸುರಕ್ಷಿತವಾಗಿ ನಡೆಯುವುದು ನಾಗರಿಕರ ಮೂಲಭೂತ ಹಕ್ಕು (Fundamental Right) ಎಂದು ಸುಪ್ರೀಂ ಕೋರ್ಟ್ ಘೋಷಿಸಿದೆ. ವಾಹನ ಸವಾರರ ದಬ್ಬಾಳಿಕೆ ಅಥವಾ ರಸ್ತೆಗಳ ಏಕಸ್ವಾಮ್ಯದಿಂದ ಪಾದಚಾರಿಗಳ ಹಕ್ಕನ್ನು ಕಸಿದುಕೊಳ್ಳಲು ಸಾಧ್ಯವಿಲ್ಲ ಎಂದು ನ್ಯಾಯಾಲಯ ಸ್ಪಷ್ಟಪಡಿಸಿದೆ.
➤ ನ್ಯಾಯಮೂರ್ತಿಗಳಾದ ಪಿ. ಎಸ್. ನರಸಿಂಹ ಮತ್ತು ಅತುಲ್ ಎಸ್. ಚಂದೂರ್ಕರ್ ಅವರನ್ನೊಳಗೊಂಡ ದ್ವಿಸದಸ್ಯ ಪೀಠವು ಈ ಮಹತ್ವದ ತೀರ್ಪನ್ನು ಪ್ರಕಟಿಸಿದೆ. ಶಾಲಾ ಆವರಣದ ಬಳಿ ಫುಟ್‌ಪಾತ್ ಅಥವಾ ಪಾದಚಾರಿ ರಸ್ತೆ ಇಲ್ಲದ ಕಾರಣ, ಟ್ಯಾಂಕರ್ ಡಿಕ್ಕಿಯಾಗಿ ಐದು ವರ್ಷದ ಮಗು ಮೃತಪಟ್ಟ ದುರದೃಷ್ಟಕರ ರಸ್ತೆ ಅಪಘಾತದ ಪರಿಹಾರ ಪ್ರಕರಣದ ವಿಚಾರಣೆ ನಡೆಸುವಾಗ ನ್ಯಾಯಾಲಯ ಈ ಆದೇಶ ನೀಡಿದೆ. ವಾಹನಗಳ ಚಲನೆಗಿಂತ ಫುಟ್‌ಪಾತ್‌ಗಳಲ್ಲಿ ಪಾದಚಾರಿಗಳು ಸುರಕ್ಷಿತವಾಗಿ ನಡೆಯುವ ಹಕ್ಕಿಗೆ ಮೊದಲ ಆದ್ಯತೆ ನೀಡಬೇಕು ಎಂದು ನ್ಯಾಯಾಲಯ ಪ್ರತಿಪಾದಿಸಿದೆ.
➤ ಸಂವಿಧಾನದ ಯಾವ ವಿಧಿಗಳ ಅಡಿಯಲ್ಲಿ ಈ ಹಕ್ಕು ಬರುತ್ತದೆ?
ವಿಧಿ 19(1)(d) - ಮುಕ್ತ ಸಂಚಾರದ ಹಕ್ಕು: ಭಾರತದಾದ್ಯಂತ ಮುಕ್ತವಾಗಿ ಸಂಚರಿಸುವ ಹಕ್ಕನ್ನು ಇದು ಒಳಗೊಂಡಿದೆ. ಸುಪ್ರೀಂ ಕೋರ್ಟ್ ಪ್ರಕಾರ, ಚಕ್ರಗಳು (ವಾಹನಗಳು) ಕಂಡುಹಿಡಿಯುವುದಕ್ಕಿಂತ ಮುಂಚೆಯೇ ಮಾನವ ನಡೆಯಲು ಪ್ರಾರಂಭಿಸಿದ್ದನು. ಆದ್ದರಿಂದ ಮುಕ್ತ ಸಂಚಾರದ ಹಕ್ಕಿನಲ್ಲಿ ಮೊದಲ ಆದ್ಯತೆ 'ನಡೆಯುವ ಹಕ್ಕಿಗೆ' (Right to Walk) ಸೇರಿದ್ದಾಗಿದೆ.
ವಿಧಿ 21 - ಜೀವಿಸುವ ಮತ್ತು ವೈಯಕ್ತಿಕ ಸ್ವಾತಂತ್ರ್ಯದ ಹಕ್ಕು: ಸುರಕ್ಷಿತವಾದ ಪರಿಸರದಲ್ಲಿ ಜೀವಿಸುವುದು ಪ್ರತಿಯೊಬ್ಬ ನಾಗರಿಕನ ಹಕ್ಕಾಗಿದೆ. ಫುಟ್‌ಪಾತ್‌ಗಳ ಕೊರತೆಯಿಂದಾಗಿ ಪಾದಚಾರಿಗಳು ರಸ್ತೆಯಲ್ಲೇ ನಡೆದು ಪ್ರಾಣ ಕಳೆದುಕೊಳ್ಳುವುದು ಈ ವಿಧಿಯ ಉಲ್ಲಂಘನೆಯಾಗಿದೆ.
➤ ಇದಲ್ಲದೆ, ಪಾದಚಾರಿ ಹಕ್ಕುಗಳು ಸಂವಿಧಾನದ ವಿಧಿ 19(1)(a) (ಅಭಿವ್ಯಕ್ತಿ ಸ್ವಾತಂತ್ರ್ಯ), 19(1)(b) (ಸಭೆ ಸೇರುವ ಹಕ್ಕು) ಮತ್ತು 19(1)(c) (ಸಂಘಟನೆಗಳನ್ನು ರಚಿಸುವ ಹಕ್ಕು) ಗಳೊಂದಿಗೂ ನಿಕಟ ಸಂಪರ್ಕ ಹೊಂದಿವೆ ಎಂದು ನ್ಯಾಯಾಲಯ ಉಲ್ಲೇಖಿಸಿದೆ.

## ಯುಎಇ ಹೊಸ ನಿಯಮ: ಸಾಮಾಜಿಕ ಜಾಲತಾಣ ಬಳಕೆಗೆ ಕನಿಷ್ಠ 15 ವರ್ಷ ಕಡ್ಡಾಯ, AI ಆಧಾರಿತ ಪರಿಶೀಲನೆ ಜಾರಿ!



➤ ಜಾಗತಿಕವಾಗಿ ಮಕ್ಕಳಲ್ಲಿ ಹೆಚ್ಚಾಗುತ್ತಿರುವ ಸಾಮಾಜಿಕ ಜಾಲತಾಣಗಳ (Social Media) ಅತಿಯಾದ ಬಳಕೆ ಮತ್ತು

ಅದರಿಂದ ಉಂಟಾಗುತ್ತಿರುವ ಮಾನಸಿಕ ಒತ್ತಡವನ್ನು ತಡೆಯಲು ಯುನೈಟೆಡ್ ಅರಬ್ ಎಮಿರೇಟ್ಸ್ (UAE) ಸರ್ಕಾರವು ಅತ್ಯಂತ ಕಠಿಣ ಹಾಗೂ ಐತಿಹಾಸಿಕ ಕಾನೂನನ್ನು ಜಾರಿಗೆ ತಂದಿದೆ. ಯುಎಇನಲ್ಲಿ ಸಾಮಾಜಿಕ ಜಾಲತಾಣಗಳನ್ನು ಬಳಸಲು ಈಗ ಕನಿಷ್ಠ 15 ವರ್ಷ ವಯಸ್ಸನ್ನು ಕಡ್ಡಾಯಗೊಳಿಸಲಾಗಿದೆ. ಈ ರೀತಿಯ ಕಟ್ಟುನಿಟ್ಟಿನ ನಿಯಮವನ್ನು ತಂದ ಮೊದಲ ಅರಬ್ ರಾಷ್ಟ್ರ ಎಂಬ ಹೆಗ್ಗಳಿಕೆಗೆ ಯುಎಇ ಪಾತ್ರವಾಗಿದೆ.

➤ **ಪ್ರಮುಖ ಅಂಶಗಳು**:

ಕನಿಷ್ಠ ವಯೋಮಿತಿ: 15 ವರ್ಷ ತುಂಬದ ಮಕ್ಕಳು ಯುಎಇನಲ್ಲಿ ಯಾವುದೇ ವೈಯಕ್ತಿಕ ಸಾಮಾಜಿಕ ಮಾಧ್ಯಮ ಖಾತೆಗಳನ್ನು (Personal Social Media Accounts) ಹೊಂದುವಂತಿಲ್ಲ.

ನಿರ್ಬಂಧಗಳು: 15 ವರ್ಷದೊಳಗಿನ ಮಕ್ಕಳು ಯಾವುದೇ ಪೋಸ್ಟ್‌ಗಳನ್ನು ಹಾಕುವಂತಿಲ್ಲ, ಕಮೆಂಟ್ ಮಾಡುವಂತಿಲ್ಲ, ಶೇರ್ ಮಾಡುವಂತಿಲ್ಲ ಅಥವಾ ಯಾವುದೇ ಸಾರ್ವಜನಿಕ ಗ್ರೂಪ್‌ಗಳನ್ನು ಸೇರುವಂತಿಲ್ಲ.

ಕೃತಕ ಬುದ್ಧಿಮತ್ತೆ (AI) ತಂತ್ರಜ್ಞಾನ: ಕೇವಲ ಹುಟ್ಟಿದ ದಿನಾಂಕವನ್ನು ನಮೂದಿಸುವುದನ್ನು (Self-declaration) ಯುಎಇ ಸರ್ಕಾರ ತಿರಸ್ಕರಿಸಿದೆ. ಬದಲಾಗಿ, ತಂತ್ರಜ್ಞಾನ ಕಂಪನಿಗಳು ಕಡ್ಡಾಯವಾಗಿ AI ಆಧಾರಿತ ವಯಸ್ಸು ಪರಿಶೀಲನಾ ವ್ಯವಸ್ಥೆ (AI-Based Age Verification) ಮತ್ತು ಡಿಜಿಟಲ್ ಐಡೆಂಟಿಟಿ ಚೆಕ್‌ಗಳನ್ನು ಬಳಸಬೇಕಾಗುತ್ತದೆ.

ಅವಕಾಶದ ಅವಧಿ: ಯುಎಇನಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಾಮಾಜಿಕ ಜಾಲತಾಣ ಕಂಪನಿಗಳಿಗೆ (ಉದಾಹರಣೆಗೆ: Instagram, TikTok, Facebook ಇತ್ಯಾದಿ) ಈ ನಿಯಮಗಳನ್ನು ಅಳವಡಿಸಿಕೊಳ್ಳಲು 12 ತಿಂಗಳ ಕಾಲಾವಕಾಶ ನೀಡಲಾಗಿದೆ.

➤ **15 ಮತ್ತು 16 ವರ್ಷದ ಹದಿಹರೆಯದವರಿಗೆ ನಿಯಮಗಳೇನು?**

15 ರಿಂದ 16 ವರ್ಷದೊಳಗಿನ ಹದಿಹರೆಯದವರಿಗೆ ಸಾಮಾಜಿಕ ಜಾಲತಾಣ ಬಳಸಲು ಅನುಮತಿ ಇದೆಯಾದರೂ, ಅದಕ್ಕೆ ಕಟ್ಟುನಿಟ್ಟಾದ ಸುರಕ್ಷತಾ ನಿಯಮಗಳನ್ನು ಅನ್ವಯಿಸಲಾಗಿದೆ:

ಅಪರಿಚಿತ ಬಳಕೆದಾರರೊಂದಿಗೆ ಸಂವಹನ ನಡೆಸಲು ನಿರ್ಬಂಧ.

ವಯಸ್ಸಿಗೆ ಸೂಕ್ತವಾದ ಕಂಟೆಂಟ್ ನಿಯಂತ್ರಣಗಳು (Age-appropriate content controls).

ಸ್ಕ್ರೀನ್-ಟೈಮ್ ಮ್ಯಾನೇಜ್‌ಮೆಂಟ್ ಪರಿಕರಗಳು.

ಪೋಷಕರ ಕಡ್ಡಾಯ ಮೇಲ್ವಿಚಾರಣೆ (Parental Supervision).

➤ **ಯುಎಇ ಸರ್ಕಾರದ ಈ ನಿರ್ಧಾರಕ್ಕೆ ಕಾರಣ:** ಇಂಟರ್ನೆಟ್ ಜಗತ್ತಿನಲ್ಲಿ ಮಕ್ಕಳು ಸೂಕ್ತವಲ್ಲದ ಕಂಟೆಂಟ್‌ಗಳಿಗೆ (Inappropriate Content) ಬಲಿಯಾಗುತ್ತಿರುವುದು, ಸೈಬರ್ ವಂಚನೆಗಳು, ಅತಿಯಾದ ಸ್ಕ್ರೀನ್ ಟೈಮ್ ಮತ್ತು ಮಕ್ಕಳ ವೈಯಕ್ತಿಕ ಡೇಟಾವನ್ನು ಜಾಹೀರಾತುಗಳಿಗಾಗಿ ದುರ್ಬಳಕೆ ಮಾಡಿಕೊಳ್ಳುವುದನ್ನು ತಡೆಯಲು ಯುಎಇ ಸರ್ಕಾರ ಈ ದಿಟ್ಟ ಹೆಜ್ಜೆಯನ್ನಿಟ್ಟಿದೆ. ಇನ್ನುಂದೆ ಮಕ್ಕಳ ವೈಯಕ್ತಿಕ ಡೇಟಾವನ್ನು ಬಳಸಿಕೊಂಡು 'ಟಾರ್ಗೆಟೆಡ್ ಅಡ್ವರ್ಟೈಸಿಂಗ್' (Targeted Advertising) ಮಾಡುವುದನ್ನು ಕಂಪನಿಗಳಿಗೆ ನಿಷೇಧಿಸಲಾಗಿದೆ.

ಇನ್ನು ಹೆಚ್ಚಿನ ಪ್ರಚಲಿತ ಘಟನೆಗಳನ್ನು ವೀಕ್ಷಿಸಲು ಇಲ್ಲಿ ಕ್ಲಿಕ್ ಮಾಡಿ

## ಒಡಿಶಾದಲ್ಲಿ ₹47,600 ಕೋಟಿ ಮೌಲ್ಯದ ಬೃಹತ್ ಯೋಜನೆಗಳಿಗೆ ಪ್ರಧಾನಿ ಮೋದಿ ಮತ್ತು ರಾಷ್ಟ್ರಪತಿ ಮುರ್ಮು ಚಾಲನೆ!



➤ ಭಾರತದ ಮೂಲಸೌಕರ್ಯ ಮತ್ತು ಅಭಿವೃದ್ಧಿ ರಂಗದಲ್ಲಿ ಇಂದು ಮತ್ತೊಂದು ಐತಿಹಾಸಿಕ ಮೈಲಿಗಲ್ಲು ಸ್ಥಾಪನೆಯಾಗಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಮತ್ತು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಜಂಟಿಯಾಗಿ ಒಡಿಶಾದಲ್ಲಿ ಬರೋಬ್ಬರಿ ₹47,600 ಕೋಟಿಗೂ ಅಧಿಕ ಮೌಲ್ಯದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಶಂಕುಸ್ಥಾಪನೆ ಹಾಗೂ ಉದ್ಘಾಟನೆಯನ್ನು ನೆರವೇರಿಸಿದ್ದಾರೆ.

➤ ಒಡಿಶಾದ ಮಯೂರ್‌ಭಂಜ್ ಜಿಲ್ಲೆಯ ರಾಯರಂಗ್‌ಪುರದಲ್ಲಿ ನಡೆದ ಭವ್ಯ ಸಮಾರಂಭದಲ್ಲಿ ಈ ಯೋಜನೆಗಳನ್ನು ರಾಷ್ಟ್ರಕ್ಕೆ ಸಮರ್ಪಿಸಲಾಯಿತು. ಇಂಧನ, ಸಾರಿಗೆ, ಆರೋಗ್ಯ, ನೀರಾವರಿ, ಶಿಕ್ಷಣ, ಪ್ರವಾಸೋದ್ಯಮ ಮತ್ತು ಕೈಗಾರಿಕಾ ಮೂಲಸೌಕರ್ಯ ಸೇರಿದಂತೆ ಹಲವು ಪ್ರಮುಖ ವಲಯಗಳು ಈ ಯೋಜನೆಗಳ ವ್ಯಾಪ್ತಿಯಲ್ಲಿ ಬರಲಿವೆ. ಕಾರ್ಯಕ್ರಮದ ಥೀಮ್ (Theme): "ವಿಕಾಸ್ ರಾ ಧಾರಾ, ಒಡಿಶಾ ಸಾರಾ" (Vikas ra Dhara, Odisha Sara).

➤ **ಪ್ರಮುಖ ಯೋಜನೆಗಳ ವಿವರಗಳು:**

ಇಂಧನ ಮತ್ತು ಕೈಗಾರಿಕಾ ವಲಯ (Energy & Industrial Sector): ಅಪ್ಪರ್ ಇಂದ್ರಾವತಿ ಪಂಪ್ಡ್ ಸ್ಟೋರೇಜ್ ಪ್ರಾಜೆಕ್ಟ್: 600 ಮೆಗಾವ್ಯಾಟ್ (MW) ಸಾಮರ್ಥ್ಯದ ಈ ಯೋಜನೆಗೆ ಶಂಕುಸ್ಥಾಪನೆ ಮಾಡಲಾಗಿದೆ.

**1. ಐಬಿ ಥರ್ಮಲ್ ಪವರ್ ಸ್ಟೇಷನ್ (IB Thermal Power Station):** ಇದರ ಹಂತ-2ರ ವಿಸ್ತರಣೆಗೆ ಚಾಲನೆ ನೀಡಲಾಗಿದ್ದು, ತಲಾ 660 ಮೆಗಾವ್ಯಾಟ್ ಸಾಮರ್ಥ್ಯದ ಎರಡು ಹೊಸ ಘಟಕಗಳನ್ನು ಸ್ಥಾಪಿಸಲಾಗುವುದು.

ಕೋಲ್ ಗ್ಯಾಸಿಫಿಕೇಶನ್ ಪ್ರಾಜೆಕ್ಟ್: ಜಾರ್ಸುಗುಡ ಜಿಲ್ಲೆಯ ಲಖನ್‌ಪುರದಲ್ಲಿ ಸುಮಾರು ₹25,000 ಕೋಟಿ ಹೂಡಿಕೆಯ 'ಭಾರತ್ ಕೋಲ್ ಗ್ಯಾಸಿಫಿಕೇಶನ್ ಅಂಡ್ ಕೆಮಿಕಲ್ಸ್ ಲಿಮಿಟೆಡ್' ಯೋಜನೆಗೆ ಅಡಿಪಾಯ ಹಾಕಲಾಗಿದೆ. ಇದು ಕಲ್ಲಿದ್ದಲನ್ನು ಅನಿಲ ಇಂಧನ ಮತ್ತು ರಾಸಾಯನಿಕಗಳಾಗಿ ಪರಿವರ್ತಿಸುವ ಅತ್ಯಾಧುನಿಕ ತಂತ್ರಜ್ಞಾನವಾಗಿದೆ.

**2. ರೈಲ್ವೆ ಮತ್ತು ಸಂಪರ್ಕ ಕ್ರಾಂತಿ (Railway & Connectivity):** ಸರಕು ಸಾಗಣೆ ಮತ್ತು ರೈಲ್ವೆ ಜಾಲದ ಸಾಮರ್ಥ್ಯ ಹೆಚ್ಚಿಸಲು ₹732 ಕೋಟಿಗೂ ಅಧಿಕ ಮೌಲ್ಯದ ಎರಡು ಮಲ್ಟಿ-ಟ್ರ್ಯಾಕಿಂಗ್ ರೈಲ್ವೆ ಯೋಜನೆಗಳನ್ನು ಪ್ರಧಾನಿ ದೇಶಕ್ಕೆ ಸಮರ್ಪಿಸಿದರು. ಇವುಗಳಲ್ಲಿ ಜಖಾಪುರ-ಜಾಜ್‌ಪುರ ಕೇಂಝರ್ ರೋಡ್-ಬೈತರಣಿ ರೋಡ್ ವಿಭಾಗ ಮತ್ತು ಹಿಂದೋಲ್ ರೋಡ್-ಮೇರಾಮಂಡಲಿ ವಿಭಾಗಗಳು ಸೇರಿವೆ.

3. **ಪಹಾಡ್‌ಪುರ 'ಸೌರ ಗ್ರಾಮ' (Pahadpur Solar Village):** ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ತವರು ಜಿಲ್ಲೆಯಾದ ಮಯೂರ್‌ಭಂಜ್‌ನ 'ಪಹಾಡ್‌ಪುರ' ಗ್ರಾಮವನ್ನು ಅಧಿಕೃತವಾಗಿ 'ಸೌರ ಗ್ರಾಮ' (Solar Village) ಎಂದು ಘೋಷಿಸಲಾಯಿತು. ಈ ಗ್ರಾಮದ ಪ್ರತಿ ಮನೆಗೂ ಸೌರಶಕ್ತಿಯ ಸಂಪರ್ಕ ಕಲ್ಪಿಸಲಾಗುವುದು. ಇದೇ ಸಂದರ್ಭದಲ್ಲಿ ನಾಯಕರು ಅಲ್ಲಿನ ಕೌಶಲ್ಯ ಕೇಂದ್ರ ಮತ್ತು ಶಾಲೆಯನ್ನೂ ಸಂದರ್ಶಿಸಿದರು.

➤ ವಿಶೇಷ ಸಂದರ್ಭ: ಜೂನ್ 20 ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ 68ನೇ ಜನ್ಮದಿನವಾಗಿದ್ದು, ಅದೇ ದಿನ ಅವರ ಸ್ವಗ್ರಾಮದ ಜಿಲ್ಲೆಯಲ್ಲೇ ಈ ಯೋಜನೆಗಳಿಗೆ ಚಾಲನೆ ನೀಡಲಾಗಿದೆ. ಜೊತೆಗೆ ಇದು ಒಡಿಶಾದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದು 2 ವರ್ಷ ಪೂರೈಸಿದ ಸಂದರ್ಭವಾಗಿದೆ.

ಪ್ರಚಲಿತ ಘಟನೆಗಳ ಆಧಾರಿತ ಪ್ರತಿದಿನದ ಹಾಗೂ ವಾರಾಂತ್ಯದ ಕ್ವಿಜ್ ನಲ್ಲಿ ಭಾಗವಹಿಸಲು ಇಲ್ಲಿ ಕ್ಲಿಕ್ ಮಾಡಿ

## ದೇಶದ 166 ಪ್ರಮುಖ ಜಲಾಶಯಗಳಲ್ಲಿ ಶೇ. 28ಕ್ಕೆ ಕುಸಿದ ಜಲಮಟ್ಟ: ಕರ್ನಾಟಕ ಸೇರಿದಂತೆ ದಕ್ಷಿಣ ಭಾರತಕ್ಕೆ ಎದುರಾಯಿತೇ ಜಲಗಂಡಾಂತರ!



➤ ದೇಶದಾದ್ಯಂತ ಮುಂಗಾರು ಮಾರುತಗಳ (Monsoon) ವಿಳಂಬ ಮತ್ತು ದುರ್ಬಲ ಪ್ರಗತಿಯಿಂದಾಗಿ ಭಾರತದ ಪ್ರಮುಖ ಜಲಾಶಯಗಳಲ್ಲಿ ನೀರಿನ ಸಂಗ್ರಹ ಪ್ರಮಾಣವು ತೀವ್ರವಾಗಿ ಕುಸಿದಿದೆ. ಕೇಂದ್ರ ಜಲ ಆಯೋಗ (Central Water Commission - CWC) ಬಿಡುಗಡೆ ಮಾಡಿರುವ ಇತ್ತೀಚಿನ ಅಂಕಿ-ಅಂಶಗಳ ಪ್ರಕಾರ, ದೇಶದ ಒಟ್ಟು 166 ಪ್ರಮುಖ ಜಲಾಶಯಗಳ ಜಲಸಂಗ್ರಹ ಸಾಮರ್ಥ್ಯವು ಶೇಕಡಾ 28.28ಕ್ಕೆ (ಸುಮಾರು 27.5% ರಿಂದ 28%) ಕುಸಿದಿದೆ.

➤ ಸಾಮಾನ್ಯವಾಗಿ ಜೂನ್ ತಿಂಗಳಲ್ಲಿ ಆರಂಭವಾಗಬೇಕಾದ ಮುಂಗಾರು ಮಳೆಯ ಕೊರತೆಯು ಈ ಜಲಕ್ಷಾಮಕ್ಕೆ ಮುಖ್ಯ ಕಾರಣ ಎಂದು ವಿಶ್ಲೇಷಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ಒಟ್ಟಾರೆ ಮುಂಗಾರು ಮಳೆಯಲ್ಲಿ ಶೇಕಡಾ 40 ರಷ್ಟು ಕೊರತೆ ಕಂಡುಬಂದಿದ್ದು, ಇದು ನೇರವಾಗಿ ಜಲಾಶಯಗಳ ನೀರಿನ ಮಟ್ಟದ ಮೇಲೆ ತೀವ್ರ ಪರಿಣಾಮ ಬೀರಿದೆ.

➤ **ಪ್ರಾದೇಶಿಕ ಜಲಮಟ್ಟದ ಸ್ಥಿತಿಗತಿ**: ದಕ್ಷಿಣ ಭಾರತಕ್ಕೆ ತಟ್ಟಿದ ಭೀಕರ ಬಿಸಿ: ಕೇಂದ್ರ ಜಲ ಆಯೋಗದ ವರದಿಯ ಪ್ರಕಾರ, ದೇಶದ ಎಲ್ಲಾ ಭಾಗಗಳಲ್ಲಿ ನೀರಿನ ಪರಿಸ್ಥಿತಿ ಒಂದೇ ರೀತಿ ಇಲ್ಲ. ಉತ್ತರ ಮತ್ತು ಮಧ್ಯ ಭಾರತಕ್ಕೆ ಹೋಲಿಸಿದರೆ ದಕ್ಷಿಣ ಮತ್ತು ಪಶ್ಚಿಮ ಭಾರತದ ಪರಿಸ್ಥಿತಿ ಅತ್ಯಂತ ಕಳವಳಕಾರಿಯಾಗಿದೆ.

ಉತ್ತರ ಮತ್ತು ಮಧ್ಯ ಭಾರತ: ಹಿಮಾಚಲ ಪ್ರದೇಶ, ಪಂಜಾಬ್, ಉತ್ತರ ಪ್ರದೇಶ ಮತ್ತು ಮಧ್ಯಪ್ರದೇಶದ ಜಲಾಶಯಗಳಲ್ಲಿ ಕಳೆದ ವರ್ಷಕ್ಕೆ ಹೋಲಿಸಿದರೆ ಉತ್ತಮ ನೀರಿನ ಸಂಗ್ರಹವಿದೆ.

ದಕ್ಷಿಣ ಮತ್ತು ಪಶ್ಚಿಮ ಭಾರತ (ಕರ್ನಾಟಕ ಸೇರಿದಂತೆ): ದಕ್ಷಿಣದ 47 ಜಲಾಶಯಗಳು ಹಾಗೂ ಪಶ್ಚಿಮದ 53 ಜಲಾಶಯಗಳಲ್ಲಿ ನೀರಿನ ಮಟ್ಟ ಗಣನೀಯವಾಗಿ ಕುಸಿದಿದೆ.

ಕಳೆದ ವರ್ಷಕ್ಕಿಂತ ಕಡಿಮೆ ನೀರಿನ ಸಂಗ್ರಹ ಹೊಂದಿರುವ ರಾಜ್ಯಗಳು: ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು, ಕೇರಳ, ತೆಲಂಗಾಣ, ಮಹಾರಾಷ್ಟ್ರ, ರಾಜಸ್ಥಾನ ಮತ್ತು ಪಶ್ಚಿಮ ಬಂಗಾಳ.

ಮುಖ್ಯ ಕಾರಣ: ಕಳೆದ ವರ್ಷ (2025) ಮುಂಗಾರು ಮಾರುತಗಳು ಕೇರಳಕ್ಕೆ ನಿಗದಿತ ಸಮಯಕ್ಕಿಂತ 8 ದಿನ ಮುಂಚಿತವಾಗಿಯೇ ಪ್ರವೇಶಿಸಿದ್ದವು. ಆದರೆ ಈ ವರ್ಷ ಮುಂಗಾರು ಪ್ರವೇಶ 3 ದಿನ ತಡವಾಗಿದ್ದಲ್ಲದೆ, ಎಲ್‌ನಿನೋ (El Nino) ಪ್ರಭಾವದಿಂದಾಗಿ ಮಳೆಯ ತೀವ್ರತೆ ತೀರಾ ದುರ್ಬಲವಾಗಿದೆ.

➤ **ಜಲಮಟ್ಟ ಕುಸಿತದಿಂದ ಉಂಟಾಗುವ ಪ್ರಮುಖ ಸವಾಲುಗಳು:** ಜಲಾಶಯಗಳಲ್ಲಿ ನೀರು ಖಾಲಿಯಾಗುತ್ತಿರುವುದು ಕೇವಲ ಕುಡಿಯುವ ನೀರಿಗೆ ಮಾತ್ರವಲ್ಲದೆ ದೇಶದ ಆರ್ಥಿಕತೆಯ ಮೇಲೂ ಗಂಭೀರ ಪರಿಣಾಮ ಬೀರಲಿದೆ:

ಕೃಷಿ ವಲಯಕ್ಕೆ ಹೊಡೆತ: ಭಾರತದ ಶೇ. 60ಕ್ಕೂ ಹೆಚ್ಚು ಕೃಷಿ ಭೂಮಿ ಮುಂಗಾರು ಮತ್ತು ಜಲಾಶಯಗಳ ನೀರಾವರಿಯನ್ನೇ ನಂಬಿಕೊಂಡಿದೆ. ನೀರಿನ ಕೊರತೆಯಿಂದಾಗಿ ಮುಂಗಾರು ಹಂಗಾಮಿನ ಬಿತ್ತನೆ ಕಾರ್ಯ ಕುಂಠಿತಗೊಳ್ಳುವ ಸಾಧ್ಯತೆ ಇದೆ.

ಜಲವಿದ್ಯುತ್ ಉತ್ಪಾದನೆಗೆ ಅಡ್ಡಿ: ದೇಶದ 166 ಪ್ರಮುಖ ಜಲಾಶಯಗಳಲ್ಲಿ 20 ಜಲಾಶಯಗಳು ಪ್ರಮುಖ ಜಲವಿದ್ಯುತ್ ಯೋಜನೆಗಳಿಗೆ (Hydro-electric projects) ಸೇರಿವೆ. ಉದಾಹರಣೆಗೆ: ಹಿಮಾಚಲ ಪ್ರದೇಶದ ಗೋಬಿಂದ್ ಸಾಗರ್, ಒಡಿಶಾದ ಹಿರಕುಡ್, ಗುಜರಾತ್‌ನ ಸರ್ದಾರ್ ಸರೋವರ್ ಮತ್ತು ಉಕೈ ಡ್ಯಾಂ. ನೀರಿನ ಕೊರತೆಯಿಂದ ವಿದ್ಯುತ್ ಉತ್ಪಾದನೆ ಕುಂಠಿತಗೊಂಡು ವಿದ್ಯುತ್ ಕ್ಷಾಮ ಎದುರಾಗಬಹುದು.

ಕೈಗಾರಿಕೆ ಹಾಗೂ ಕುಡಿಯುವ ನೀರಿನ ಅಭಾವ: ಪ್ರಮುಖ ನಗರಗಳಲ್ಲಿ ಜಲಕ್ಷಾಮ ತಲೆದೋರಲಿದ್ದು, ಕೈಗಾರಿಕೆಗಳ ಕಾರ್ಯನಿರ್ವಹಣೆಗೆ ಅಡ್ಡಿಯಾಗಲಿದೆ.

# 22 June 2026

## ಭಾರತೀಯ ನೌಕಾಪಡೆಗೆ 3 ಹೊಸ ಯುದ್ಧನೌಕೆಗಳ ಸೇರ್ಪಡೆ: ಐಎನ್‌ಎಸ್ ಅಗ್ರಯ್, ದುನಾಗಿರಿ ಮತ್ತು ಸಂಶೋಧಕ್ ಲೋಕಾರ್ಪಣೆ ಮಾಡಿದ ಪಿಎಂ ಮೋದಿ!




➤ ಭಾರತೀಯ ರಕ್ಷಣಾ ವಲಯದಲ್ಲಿ ಮತ್ತೊಂದು ಐತಿಹಾಸಿಕ ಮೈಲಿಗಲ್ಲು ಸ್ಥಾಪನೆಯಾಗಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಕೋಲ್ಕತ್ತಾದ ಶ್ಯಾಮಾ ಪ್ರಸಾದ್ ಮುಖರ್ಜಿ ಬಂದರಿನಲ್ಲಿ ಜೂನ್ 21, 2026 ರಂದು ಸಂಪೂರ್ಣ ಸ್ವದೇಶಿ ತಂತ್ರಜ್ಞಾನದಿಂದ ನಿರ್ಮಿಸಲಾದ ಮೂರು ಅತ್ಯಾಧುನಿಕ ಯುದ್ಧನೌಕೆಗಳನ್ನು ಭಾರತೀಯ ನೌಕಾಪಡೆಗೆ (Indian Navy) ದೇಶಾರ್ಪಣೆ ಮಾಡಿದ್ದಾರೆ.

➤ ನೌಕಾಪಡೆಗೆ ಜಂಟಿಯಾಗಿ ಸೇರ್ಪಡೆಗೊಂಡ ಈ ಮೂರು ನೌಕೆಗಳೆಂದರೆ — ಐಎನ್‌ಎಸ್ ದುನಾಗಿರಿ (INS Dunagiri), ಐಎನ್ ಎಸ್ ಸಂಶೋಧಕ್ (INS Sanshodhak), ಮತ್ತು ಐಎನ್‌ಎಸ್ ಅಗ್ರಯ್ (INS Agray). ಈ ಐತಿಹಾಸಿಕ ಕಾರ್ಯಕ್ರಮವು ಭಾರತದ 'ಆತ್ಮನಿರ್ಭರ ಭಾರತ' (Aatmanirbhar Bharat) ಕನಸಿಗೆ ಮತ್ತಷ್ಟು ಬಲ ನೀಡಿದೆ.

➤ **ಈ ಮೂರು ಯುದ್ಧನೌಕೆಗಳ ವಿಶೇಷತೆ ಹಾಗೂ ಸಾಮರ್ಥ್ಯ:**

**1. ಐಎನ್‌ಎಸ್ ದುನಾಗಿರಿ (INS Dunagiri) - ಸುಧಾರಿತ ಸ್ಟೆಲ್ತ್ ಫ್ರಿಗೇಟ್:**

ವಿಶೇಷತೆ: ಇದು ಅತ್ಯಾಧುನಿಕ ರಹಸ್ಯ ತಂತ್ರಜ್ಞಾನ (Stealth Technology) ಹೊಂದಿರುವ ಪ್ರಬಲ ಯುದ್ಧನೌಕೆಯಾಗಿದೆ. ಶತ್ರುಗಳ ರಾಡಾರ್‌ಗಳಿಗೆ ಸುಲಭವಾಗಿ ಸಿಗದಂತೆ ಇದನ್ನು ವಿನ್ಯಾಸಗೊಳಿಸಲಾಗಿದೆ.

ಶಸ್ತ್ರಾಸ್ತ್ರಗಳು: ಇದು ಜಗತ್ತಿನ ಅತ್ಯಂತ ವೇಗದ ಸೂಪರ್‌ಸಾನಿಕ್ ಕ್ರೂಸ್ ಕ್ಷಿಪಣಿಯಾದ ಬ್ರಹ್ಮೋಸ್ (BrahMos) ಮೇಲ್ಮೈನಿಂದ ಮೇಲ್ಮೈಗೆ ಚಿಮ್ಮುವ ಕ್ಷಿಪಣಿಗಳು ಮತ್ತು ಮಧ್ಯಮ ಶ್ರೇಣಿಯ ವಾಯು ರಕ್ಷಣಾ ಕ್ಷಿಪಣಿ ವ್ಯವಸ್ಥೆಯನ್ನು (MRSAM) ಹೊಂದಿದೆ.

**2. ಐಎನ್‌ಎಸ್ ಸಂಶೋಧಕ್ (INS Sanshodhak) - ದೊಡ್ಡ ಸರ್ವೇ ನೌಕೆ:**

ವಿಶೇಷತೆ: ಇದು ನೌಕಾಪಡೆಯ ನಾಲ್ಕನೇ ದೊಡ್ಡ ಜಲಮಾಪನ (Hydrographic Survey) ನೌಕೆಯಾಗಿದೆ.

ಕಾರ್ಯವೈಖರಿ: ಇದು ಕರಾವಳಿ ಮತ್ತು ಆಳ ಸಮುದ್ರದ ನಕ್ಷೆ ಸಿದ್ಧಪಡಿಸಲು, ರಕ್ಷಣಾ ಹಾಗೂ ನಾಗರಿಕ ಬಳಕೆಗೆ ಅಗತ್ಯವಾದ ಸಾಗರ ತಳದ ಭೂವೈಜ್ಞಾನಿಕ ಮಾಹಿತಿಯನ್ನು ಸಂಗ್ರಹಿಸಲು ನೆರವಾಗುತ್ತದೆ. ಇದರಲ್ಲಿ ಸ್ವಯಂಚಾಲಿತ ಅಂಡರ್‌ವಾಟರ್ ವಾಹನಗಳು (AUVs) ಮತ್ತು ರಿಮೋಟ್ ಆಪರೇಟೆಡ್ ವಾಹನಗಳು (ROVs) ಇವೆ.

**3. ಐಎನ್‌ಎಸ್ ಅಗ್ರಯ್ (INS Agray) - ಜಲಾಂತರ್ಗಾಮಿ ವಿರೋಧಿ ನೌಕೆ:**

ವಿಶೇಷತೆ: ಇದು ಅರ್ನಾಲಾ ಕ್ಲಾಸ್‌ನ (Arnala-class) ನಾಲ್ಕನೇ ಆಂಟಿ-ಸಬ್‌ಮರೀನ್ ತಂತ್ರಜ್ಞಾನ ಹೊಂದಿರುವ ಆಳವಿಲ್ಲದ ನೀರಿನ ಯುದ್ಧನೌಕೆಯಾಗಿದೆ (ASW SWC).

ಕಾರ್ಯವೈಖರಿ: ಕರಾವಳಿ ತೀರದ ಸಮೀಪ ಶತ್ರುಗಳ ಜಲಾಂತರ್ಗಾಮಿಗಳನ್ನು (Submarines) ಪತ್ತೆಹಚ್ಚಲು ಮತ್ತು

ಅವುಗಳನ್ನು ನಾಶಪಡಿಸಲು ಹಗುರವಾದ ಟಾರ್ಪಿಡೊಗಳು ಮತ್ತು ಸ್ವದೇಶಿ ರಾಕೆಟ್ ಲಾಂಚರ್‌ಗಳನ್ನು ಅಳವಡಿಸಲಾಗಿದೆ.

➤ "ಭಾರತ ಇನ್ನು ಕೇವಲ ಖರೀದಿದಾರನಾಗಿ ಉಳಿಯಲ್ಲ" – ಪಿಎಂ ಮೋದಿ ಪ್ರತಿಪಾದನೆ: ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ ಅವರು, "ಯಾವ ದೇಶದ ಕಡಲ ಶಕ್ತಿ ಬಲವಾಗಿದೆಯೋ, ಆ ದೇಶದ ಆರ್ಥಿಕ ಮತ್ತು ಕಾರ್ಯತಂತ್ರದ ಪ್ರಭಾವವೂ ಜಗತ್ತಿನಾದ್ಯಂತ ಪ್ರಬಲವಾಗಿರುತ್ತದೆ" ಎಂದರು. ಅಲ್ಲದೆ, ಭಾರತವು ಇನ್ನು ಮುಂದೆ ಜಾಗತಿಕ ರಕ್ಷಣಾ ಮಾರುಕಟ್ಟೆಗೆ ಕೇವಲ ಶಸ್ತ್ರಾಸ್ತ್ರ ಖರೀದಿಸುವ ದೇಶವಾಗಿ ಉಳಿಯುವುದಿಲ್ಲ, ಬದಲಿಗೆ ರಕ್ಷಣಾ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಲಿದೆ ಎಂದು ಹೆಮ್ಮೆಯಿಂದ ಘೋಷಿಸಿದರು. INS ವಿಕ್ರಾಂತ್‌ನಿಂದ ಆರಂಭವಾದ ಭಾರತದ ಸ್ವದೇಶಿ ನೌಕಾ ಸಾಮರ್ಥ್ಯದ ಪಯಣಕ್ಕೆ ಈ ಮೂರು ನೌಕೆಗಳು ಹೊಸ ವೇಗ ನೀಡಿವೆ ಎಂದು ಅವರು ಬಣ್ಣಿಸಿದರು.

➤ ಈ ಸಮಾರಂಭದಲ್ಲಿ ಪಶ್ಚಿಮ ಬಂಗಾಳದ ರಾಜ್ಯಪಾಲ ಆರ್.ಎನ್. ರವಿ, ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮತ್ತು ನೌಕಾಪಡೆಯ ಮುಖ್ಯಸ್ಥರಾದ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

## ವಿಶ್ವ ಪಿತೃ ದಿನಾಚರಣೆ 2026




➤ ಪ್ರತಿ ವರ್ಷ ಜೂನ್ ತಿಂಗಳ ಮೂರನೇ ಭಾನುವಾರದಂದು ವಿಶ್ವದ ಬಹುತೇಕ ದೇಶಗಳಲ್ಲಿ ಪಿತೃ ದಿನಾಚರಣೆಯನ್ನು ಆಚರಿಸಲಾಗುತ್ತದೆ. ಈ ಹಿನ್ನೆಲೆಯಲ್ಲಿ, ಈ ವರ್ಷ 2026 ರ ಜೂನ್ 21 ರ ಭಾನುವಾರದಂದು ಭಾರತ ಸೇರಿದಂತೆ ಅಮೆರಿಕ, ಬ್ರಿಟನ್, ಕೆನಡಾ ಮತ್ತು ಫಿಲಿಪ್ಪೈನ್ಸ್ ದೇಶಗಳಲ್ಲಿ ತಂದೆಯಂದಿರ ದಿನವನ್ನು ಆಚರಿಸಲಾಗುತ್ತಿದೆ.

➤ 20 ನೇ ಶತಮಾನದ ಆರಂಭದಲ್ಲಿ ಅಮೆರಿಕಾದಲ್ಲಿ ಈ ಆಚರಣೆಯ ಕಿಡಿ ಹೊತ್ತಿತು. ವಾಷಿಂಗ್ಟನ್‌ನ ಸೋನೋರಾ ಸ್ಮಾರ್ಟ್ ದೊಡ್ಡ್ (Sonora Smart Dodd) ಎಂಬ ಮಹಿಳೆ ಈ ದಿನಾಚರಣೆಯ ಮುಖ್ಯ ರೂವಾರಿಯಾಗಿದ್ದಾರೆ. ಸೋನೋರಾ ಅವರ ತಂದೆ ವಿಲಿಯಂ ಜಾಕ್ಸನ್ ಸ್ಮಾರ್ಟ್ ಅವರು ಅಮೆರಿಕದ ಅಂತರ್ಯುದ್ಧದ (Civil War) ವೀರ ಯೋಧರಾಗಿದ್ದರು. ಸೋನೋರಾ ಅವರ ತಾಯಿ ಹೆರಿಗೆಯ ಸಮಯದಲ್ಲಿ ತೀರಿಕೊಂಡಾಗ, ಅವರ ತಂದೆಯೇ ಒಂಟಿಯಾಗಿ ಆರು ಮಕ್ಕಳನ್ನು ಪ್ರೀತಿಯಿಂದ ಸಾಕಿ ಬೆಳೆಸಿದ್ದರು.

➤ ತಾಯಿಯ ದಿನಾಚರಣೆಯ (Mother's Day) ಮಾದರಿಯಲ್ಲೇ ತಂದೆಯಂದಿರಿಗೂ ಒಂದು ದಿನ ಮೀಸಲಿರಬೇಕು ಎಂದು ಬಯಸಿದ ಸೋನೋರಾ, ಸಾರ್ವಜನಿಕವಾಗಿ ಅಭಿಯಾನ ಆರಂಭಿಸಿದರು. ಇದರ ಫಲವಾಗಿ 1910 ಜೂನ್ 19 ರಂದು ವಾಷಿಂಗ್ಟನ್‌ನ ಸ್ಪೋಕೇನ್‌ನಲ್ಲಿ ಮೊದಲ ಬಾರಿಗೆ ಪಿತೃ ದಿನವನ್ನು ಆಚರಿಸಲಾಯಿತು.

➤ ಕಾಲಾನಂತರದಲ್ಲಿ ಈ ದಿನಕ್ಕೆ ವ್ಯಾಪಕ ಬೆಂಬಲ ವ್ಯಕ್ತವಾಯಿತು. ಅಂತಿಮವಾಗಿ 1972 ರಲ್ಲಿ ಅಮೆರಿಕದ ಅಧ್ಯಕ್ಷರಾಗಿದ್ದ ರಿಚರ್ಡ್ ನಿಕ್ಸನ್ (Richard Nixon) ಅವರು ಜೂನ್ ತಿಂಗಳ ಮೂರನೇ ಭಾನುವಾರವನ್ನು ರಾಷ್ಟ್ರೀಯ ರಜಾದಿನ ಹಾಗೂ ಅಧಿಕೃತ ಪಿತೃ ದಿನಾಚರಣೆಯನ್ನಾಗಿ ಘೋಷಿಸುವ ಕಾನೂನಿಗೆ ಸಹಿ ಹಾಕಿದರು.

➤ ಮಕ್ಕಳಿಗೆ ಉತ್ತಮ ಶಿಕ್ಷಣ, ಆರ್ಥಿಕ ಭದ್ರತೆ ಹಾಗೂ ನೈತಿಕ ಮೌಲ್ಯಗಳನ್ನು ನೀಡಲು ತಂದೆ ಪಡುವ ಕಷ್ಟಗಳನ್ನು ಗೌರವಿಸುವುದು ಇದರ ಆಶಯ.ಈ ದಿನ ಕೇವಲ ಜೈವಿಕ ತಂದೆಗೆ ಮಾತ್ರ ಸೀಮಿತವಾಗಿಲ್ಲ. ತಂದೆಯ ಸ್ಥಾನದಲ್ಲಿ ನಿಂತು ಮಾರ್ಗದರ್ಶನ ನೀಡುವ ತಾತಂದಿರು (Grandfathers), ಸಾಕು ತಂದೆ (Foster fathers), ಸೋದರಮಾವಂದಿರು, ಶಿಕ್ಷಕರು ಹಾಗೂ ಸಮಾಜದ ಸಕಾರಾತ್ಮಕ ಪುರುಷ ಮಾದರಿಗಳನ್ನು (Male Role Models) ಈ ದಿನ ಗೌರವಿಸಲಾಗುತ್ತದೆ.

➤ಗಮನಿಸಿ: ಆಸ್ಟ್ರೇಲಿಯಾದಲ್ಲಿ ಸೆಪ್ಟೆಂಬರ್ ಮೊದಲ ಭಾನುವಾರ ಹಾಗೂ ಬ್ರೆಜಿಲ್‌ನಲ್ಲಿ ಆಗಸ್ಟ್ ಎರಡನೇ ಭಾನುವಾರ ಈ ದಿನವನ್ನು ಆಚರಿಸಲಾಗುತ್ತದೆ. ಆದರೆ ಜಾಗತಿಕವಾಗಿ ಜೂನ್ ಮೂರನೇ ಭಾನುವಾರವೇ ಹೆಚ್ಚು ಪ್ರಸಿದ್ಧವಾಗಿದೆ.

## 12ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ 2026: ಕೋಲ್ಕತ್ತಾದಲ್ಲಿ ಪ್ರಧಾನಿ ಮೋದಿ ನೇತೃತ್ವ!




➤ ಜೂನ್ 21, 2026 ರಂದು ದೇಶಾದ್ಯಂತ ಅತ್ಯಂತ ಸಡಗರದಿಂದ 12ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು (12th International Day of Yoga) ಆಚರಿಸಲಾಯಿತು.ಪ್ರಧಾನಿ ನರೇಂದ್ರ ಮೋದಿ ಅವರು ಪಶ್ಚಿಮ ಬಂಗಾಳದ ಕೋಲ್ಕತ್ತಾದ ಪ್ರಸಿದ್ಧ 'ರೆಡ್ ರೋಡ್' (Red Road, Kolkata) ನಲ್ಲಿ ಸುಮಾರು 35,000 ಕ್ಕೂ ಹೆಚ್ಚು ಯೋಗಾಸಕ್ತರೊಂದಿಗೆ ಪಾಲ್ಗೊಂಡು 12ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ನೇತೃತ್ವ ವಹಿಸಿದ್ದರು.

**2026ರ ಯೋಗ ದಿನಾಚರಣೆಯ ಧ್ಯೇಯವಾಕ್ಯ (Theme): "ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ" (Yoga for Healthy Ageing)**

➤ ಕೋಲ್ಕತ್ತಾದಲ್ಲಿ ಪ್ರಧಾನಿ ಮೋದಿ ಭಾಷಣದ ಪ್ರಮುಖಾಂಶಗಳು: ಕೋಲ್ಕತ್ತಾದಲ್ಲಿ ಯೋಗ ಪ್ರದರ್ಶನದ ನಂತರ ದೇಶವನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ ಮೋದಿ ಅವರು ಕೆಳಗಿನ ಪ್ರಮುಖ ವಿಷಯಗಳನ್ನು ಪ್ರಸ್ತಾಪಿಸಿದರು:

ಜಾಗತಿಕ ಒಕ್ಕೂಟ: "ಜೂನ್ 21 ಭೂಮಿಯ ಮೇಲಿನ ಸುದೀರ್ಘ ದಿನವಾಗಿದೆ. ಯೋಗದ ಕಾರಣದಿಂದಾಗಿ ಇಂದು ಇದು ವಿಶ್ವದ ಅತಿ ದೊಡ್ಡ ಜಾಗತಿಕ ಸಮುದಾಯ ಹಬ್ಬವಾಗಿ ಮಾರ್ಪಟ್ಟಿದೆ" ಎಂದರು.

ಕೋಲ್ಕತ್ತಾದ ಮಹಾಪುರುಷರ ಸ್ಮರಣೆ: ಯೋಗ ಪರಂಪರೆಯನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ದ ಬಂಗಾಳದ ಪುಣ್ಯಪುರುಷರಾದ ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಮಹರ್ಷಿ ಅರವಿಂದರು ಮತ್ತು ಲಹರಿ ಮಹಾಶಯರನ್ನು ಮೋದಿ ನೆನೆದರು.

➤ ಸಶಸ್ತ್ರ ಪಡೆಗಳು ಮತ್ತು ರಾಜತಾಂತ್ರಿಕ ವಲಯದಲ್ಲಿ ಯೋಗ:

ರಕ್ಷಣಾ ಪಡೆಗಳ ಯೋಗ: ಸಿಯಾಚಿನ್ ಗ್ಲೇಸಿಯರ್‌ನ ಹಿಮಪಾತದ ಪ್ರದೇಶದಿಂದ ಹಿಡಿದು ಕಚ್‌ನ ರಣ್ ಮರುಭೂಮಿಯವರೆಗೆ ಮತ್ತು ಭಾರತೀಯ ನೌಕಾಪಡೆಯ ಯುದ್ಧನೌಕೆಗಳ ಮೇಲೂ ಭಾರತೀಯ ಸಶಸ್ತ್ರ ಪಡೆಗಳು ಯೋಗ ದಿನವನ್ನು ಆಚರಿಸಿದವು.

ವಿದೇಶಿ ರಾಯಭಾರಿಗಳು: ನವದೆಹಲಿಯಲ್ಲಿ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರ ನೇತೃತ್ವದಲ್ಲಿ ವಿವಿಧ ದೇಶಗಳ ರಾಯಭಾರಿಗಳು (Diplomatic Corps) ಯೋಗ ದಿನಾಚರಣೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು.

ರಾಷ್ಟ್ರಪತಿಗಳ ಭಾಗಿ: ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮಧ್ಯಪ್ರದೇಶದ ಜಬಲ್ಪುರದಲ್ಲಿ ನಡೆದ ರಾಜ್ಯ ಮಟ್ಟದ ಕಾರ್ಯಕ್ರಮದಲ್ಲಿ ಭಾಗವಹಿಸಿ ಯೋಗಾಸನ ಪ್ರದರ್ಶಿಸಿದರು.

ಕರ್ನಾಟಕದಲ್ಲಿ ಯೋಗ ಸಂಭ್ರಮ: ಕರ್ನಾಟಕದ ಸಾಂಸ್ಕೃತಿಕ ನಗರಿ ಮೈಸೂರು ಅರಮನೆ ಆವರಣದಲ್ಲಿ ಸಾವಿರಾರು ಯೋಗ ಪಟುಗಳು ಒಟ್ಟಿಗೆ ಸೇರಿ ಸಾಮೂಹಿಕ ಯೋಗ ಪ್ರದರ್ಶನ ನೀಡುವ ಮೂಲಕ ಗಮನ ಸೆಳೆದರು.

ಪಿಯುಸಿ (PUC) ಪಾಸ್ ಆದವರಿಗೆ ಪೊಲೀಸ್ ಆಗುವ ಸುವರ್ಣಾವಕಾಶ: 1600 ಸಶಸ್ತ್ರ ಪೊಲೀಸ್ ಕಾನ್ಸ್‌ಟೇಬಲ್ (APC) ಹುದ್ದೆಗಳಿಗೆ ಅರ್ಜಿ ಆಹ್ವಾನ;ಇಂದೇ ಅರ್ಜಿ ಸಲ್ಲಿಸಿ!




## ಜೈನೇಂದ್ರ ಕೆ ಜೈನ್ ಅವರಿಗೆ ಪ್ರತಿಷ್ಠಿತ 'ವೋಲ್ಫ್ ಪ್ರಶಸ್ತಿ' ಗೌರವ: ಈ ಸಾಧನೆ ಮಾಡಿದ ಭಾರತೀಯ ಮೂಲದ ಮೊದಲ ಭೌತವಿಜ್ಞಾನಿ!



➤ ಭಾರತೀಯ ಮೂಲದ ಪ್ರಖ್ಯಾತ ಸೈದ್ಧಾಂತಿಕ ಭೌತವಿಜ್ಞಾನಿ (Theoretical Physicist) ಪ್ರೊ. ಜೈನೇಂದ್ರ ಕೆ. ಜೈನ್ (Jainendra K. Jain) ಅವರು ಭೌತಶಾಸ್ತ್ರ ಕ್ಷೇತ್ರದ ಅತ್ಯುನ್ನತ ಮತ್ತು ಜಾಗತಿಕ ಗೌರವವಾದ 'ವೋಲ್ಫ್ ಪ್ರಶಸ್ತಿ-2026' (Wolf Prize in Physics) ಗೆ ಭಾಜನರಾಗಿದ್ದಾರೆ. ಈ ಮೂಲಕ ಭೌತಶಾಸ್ತ್ರ ವಿಭಾಗದಲ್ಲಿ ಈ ಪ್ರತಿಷ್ಠಿತ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡ ಮೊದಲ ಭಾರತೀಯ ಮೂಲದ ವಿಜ್ಞಾನಿ ಎಂಬ ಐತಿಹಾಸಿಕ ಹೆಗ್ಗಳಿಕೆಗೆ ಅವರು ಪಾತ್ರರಾಗಿದ್ದಾರೆ.

➤ ವಿಜ್ಞಾನ ಕ್ಷೇತ್ರದಲ್ಲಿ ವೋಲ್ಫ್ ಪ್ರಶಸ್ತಿಯನ್ನು ಅತ್ಯಂತ ಗೌರವಾನ್ವಿತವಾಗಿ ಕಾಣಲಾಗುತ್ತದೆ. ಇದನ್ನು ಪಡೆಯುವ ಬಹುತೇಕ ಸಾಧಕರು ಮುಂದಿನ ದಿನಗಳಲ್ಲಿ ನೋಬೆಲ್ ಪ್ರಶಸ್ತಿಯನ್ನು ಸಹ ಪಡೆದಿರುವ ಇತಿಹಾಸವಿದೆ. ಜೆರುಸಲೇಮ್ ನಲ್ಲಿ ನಡೆದ ಭವ್ಯ ಸಮಾರಂಭದಲ್ಲಿ ಇಸ್ರೇಲ್ ಅಧ್ಯಕ್ಷ ಐಸಾಕ್ ಹೆರ್ಜೋಗ್ ಅವರು ಜೈನೇಂದ್ರ ಜೈನ್ ಅವರಿಗೆ ಈ ಪ್ರಶಸ್ತಿಯನ್ನು ಪ್ರದಾನ ಮಾಡಿದರು.

➤ ಪ್ರಶಸ್ತಿಗೆ ಕಾರಣವಾದ ಮಹತ್ವದ ಸಂಶೋಧನೆ:ಪ್ರೊ. ಜೈನೇಂದ್ರ ಕೆ. ಜೈನ್ ಅವರು ಕ್ವಾಂಟಮ್ ಭೌತಶಾಸ್ತ್ರದಲ್ಲಿ 'ಕಂಪೋಸಿಟ್ ಫರ್ಮಿಯಾನ್ಸ್' (Composite Fermions - ಸಂಯೋಜಿತ ಫರ್ಮಿಯಾನ್‌ಗಳು) ಎಂಬ ಕ್ರಾಂತಿಕಾರಿ ಪರಿಕಲ್ಪನೆಯನ್ನು ಆವಿಷ್ಕರಿಸಿದ್ದಕ್ಕಾಗಿ ಈ ಪ್ರಶಸ್ತಿ ನೀಡಲಾಗಿದೆ.

ಸಮಸ್ಯೆ ಏನಿತ್ತು?: 1980ರ ದಶಕದಲ್ಲಿ ಎಲೆಕ್ಟ್ರಾನ್‌ಗಳನ್ನು ಅತ್ಯಂತ ತೆಳುವಾದ ಸೆಮಿಕಂಡಕ್ಟರ್ ಪದರಗಳಲ್ಲಿ ಇರಿಸಿ, ತೀವ್ರವಾದ ಕಾಂತಕ್ಷೇತ್ರಕ್ಕೆ (Magnetic field) ಒಳಪಡಿಸಿದಾಗ ವಿದ್ಯುತ್ ವಾಹಕತೆಯು ವಿಚಿತ್ರವಾದ ಭಿನ್ನರಾಶಿ (Fractional values) ರೂಪದಲ್ಲಿ ಪ್ರದರ್ಶನಗೊಳ್ಳುತ್ತಿತ್ತು. ಇದನ್ನು ವಿಜ್ಞಾನ ಲೋಕದಲ್ಲಿ 'ಫ್ರ್ಯಾಕ್ಷನಲ್ ಕ್ವಾಂಟಮ್ ಹಾಲ್ ಎಫೆಕ್ಟ್' ಎನ್ನಲಾಗುತ್ತದೆ. ಇದನ್ನು ವಿವರಿಸಲು ಆಗಿನ ಸಿದ್ಧಾಂತಗಳಿಗೆ ಸಾಧ್ಯವಾಗಿರಲಿಲ್ಲ.

ಜೈನ್ ಅವರ ಪರಿಹಾರ: 1989ರಲ್ಲಿ ಯೇಲ್ ವಿಶ್ವವಿದ್ಯಾಲಯದಲ್ಲಿ ಪೋಸ್ಟ್‌ಡಾಕ್ಟರಲ್ ಸಂಶೋಧಕರಾಗಿದ್ದಾಗ ಜೈನೇಂದ್ರ ಅವರು ಅದ್ಭುತ ಪರಿಹಾರವನ್ನು ಪ್ರಸ್ತಾಪಿಸಿದರು. ಎಲೆಕ್ಟ್ರಾನ್‌ಗಳು ಸಣ್ಣ ಕ್ವಾಂಟಮ್ ಸುಳಿಗಳೊಂದಿಗೆ (vortices) ಸಂಯೋಜನೆಗೊಂಡು ಸಂಪೂರ್ಣ ಹೊಸ ಕಣಗಳನ್ನು ರೂಪಿಸುತ್ತವೆ ಎಂದು ಅವರು ಸಾಧಿಸಿದರು. ಇವುಗಳನ್ನೇ ಅವರು 'ಕಂಪೋಸಿಟ್ ಫರ್ಮಿಯಾನ್ಸ್' ಎಂದು ಕರೆದರು.

ಜೈನ್ ಸೀಕ್ವೆನ್ಸ್ (Jain Sequences): ಇವರ ಈ ಭೌತಿಕ ಸಿದ್ಧಾಂತವು ಜಗತ್ತಿನ ಕಠಿಣ ಭೌತಶಾಸ್ತ್ರದ ಒಗಟೊಂದನ್ನು ಬಿಡಿಸಿತು. ಇವರು ಭವಿಷ್ಯ ನುಡಿದ ನಿರ್ದಿಷ್ಟ ಸ್ಥಿತಿಗಳನ್ನು ಇಂದು ವಿಜ್ಞಾನ ಲೋಕದಲ್ಲಿ 'ಜೈನ್ ಸೀಕ್ವೆನ್ಸ್' ಅಥವಾ 'ಜೈನ್ ಸ್ಟೇಟ್ಸ್' ಎಂದೇ ಕರೆಯಲಾಗುತ್ತದೆ.

➤ **ರಾಜಸ್ಥಾನದ ಹಳ್ಳಿಯಿಂದ ಜಾಗತಿಕ ವಿಜ್ಞಾನದ ಶಿಖರದವರೆಗೆ:** ರಾಜಸ್ಥಾನದ ಸಾಂಬಾರ್ ಎಂಬ ಪುಟ್ಟ ಹಳ್ಳಿಯಲ್ಲಿ ಜನಿಸಿ, ಬಾಲ್ಯದಲ್ಲೇ ಬೋಸ್-ಐನ್‌ಸ್ಟೈನ್ ಸಿದ್ಧಾಂತಗಳಿಂದ ಪ್ರೇರಿತರಾಗಿ, 12ನೇ ವಯಸ್ಸಿನಲ್ಲಿ ನಡೆದ ಭೀಕರ ರಸ್ತೆ ಅಪಘಾತದಲ್ಲಿ ತಾಯಿಯನ್ನು ಕಳೆದುಕೊಂಡು ತಾವೂ ಶಾಶ್ವತ ಅಂಗವೈಕಲ್ಯಕ್ಕೆ ಒಳಗಾದರೂ 'ಜೈಪುರ್ ಫುಟ್' ಕೃತಕ ಕಾಲಿನ ನೆರವಿನಿಂದ ಧೃತಿಗೆಡದೆ ಎದ್ದು ನಿಂತು, ಜೈಪುರದ ಮಹಾರಾಜ ಕಾಲೇಜು, ಐಐಟಿ ಕಾನ್ಪುರ ಹಾಗೂ ಅಮೆರಿಕದ ಸ್ಟೋನಿ ಬ್ರೂಕ್ ವಿಶ್ವವಿದ್ಯಾಲಯದಲ್ಲಿ ಉನ್ನತ ಶಿಕ್ಷಣ ಮುಗಿಸಿ, ಪ್ರಸ್ತುತ ಪೆನ್ಸಿಲ್ವೇನಿಯಾ ಸ್ಟೇಟ್ ಯೂನಿವರ್ಸಿಟಿಯ ಭೌತಶಾಸ್ತ್ರದ ಪ್ರೊಫೆಸರ್ ಮತ್ತು 'ಲೋಧಾ ಥಿಯರೆಟಿಕಲ್ ಫಿಸಿಕ್ಸ್ ಇನ್‌ಸ್ಟಿಟ್ಯೂಟ್'ನ ಸಂಸ್ಥಾಪಕ ನಿರ್ದೇಶಕರಾಗಿ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿರುವ ಪ್ರೊ. ಜೈನೇಂದ್ರ ಜೈನ್ ಅವರ ಜೀವನ ಪಯಣವು ಯುವ ಪೀಳಿಗೆಗೆ ಮತ್ತು ಸ್ಪರ್ಧಾತ್ಮಕ ಪರೀಕ್ಷಾರ್ಥಿಗಳಿಗೆ ಅತ್ಯಂತ ಸ್ಫೂರ್ತಿದಾಯಕವಾಗಿದೆ.

## ಶರವೇಗದ ಅರ್ಧಶತಕದ 'ವೈಭವ': ಲಿಸ್ಟ್ ಎ ಕ್ರಿಕೆಟ್‌ನಲ್ಲಿ ಹೊಸ ಇತಿಹಾಸ ಸೃಷ್ಟಿಸಿದ 15 ವರ್ಷದ ಭಾರತದ ಆಟಗಾರ!



➤ ಭಾರತೀಯ ಕ್ರಿಕೆಟ್‌ನ ಉದಯೋನ್ಮುಖ ತಾರೆ, ಕೇವಲ 15 ವರ್ಷದ ಯುವ ಬ್ಯಾಟರ್ ವೈಭವ್ ಸೂರ್ಯವಂಶಿ (Vaibhav Sooryavanshi) ಲಿಸ್ಟ್ ಎ ಕ್ರಿಕೆಟ್ ಇತಿಹಾಸದಲ್ಲೇ ಅತ್ಯಂತ ವೇಗದ ಅರ್ಧಶತಕ ಸಿಡಿಸಿ ಜಾಗತಿಕ ದಾಖಲೆ ಬರೆದಿದ್ದಾರೆ. ಶ್ರೀಲಂಕಾದ ದಂಬುಲ್ಲಾದಲ್ಲಿ ಭಾನುವಾರ ನಡೆದ ತ್ರಿಕೋನ ಏಕದಿನ ಕ್ರಿಕೆಟ್ ಸರಣಿಯ ಫೈನಲ್ ಪಂದ್ಯದಲ್ಲಿ ಶ್ರೀಲಂಕಾ 'ಎ' ತಂಡದ ವಿರುದ್ಧ ಈ ಐತಿಹಾಸಿಕ ಸಾಧನೆ ಮೂಡಿಬಂದಿದೆ.

➤ ಕೇವಲ 11 ಎಸೆತಗಳಲ್ಲಿ ಹಾಫ್ ಸೆಂಚುರಿ: ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತ 'ಎ' ತಂಡದ ಪರ ಆರಂಭಿಕನಾಗಿ ಕಣಕ್ಕಿಳಿದ ವೈಭವ್ ಸೂರ್ಯವಂಶಿ, ಲಂಕಾ ಬೌಲರ್‌ಗಳ ಮೇಲೆ ಅಕ್ಷರಶಃ ಸವಾರಿ ಮಾಡಿದರು. ಕೇವಲ 11 ಎಸೆತಗಳಲ್ಲಿ 5 ಬೌಂಡರಿ ಹಾಗೂ 5 ಭರ್ಜರಿ ಸಿಕ್ಸರ್‌ಗಳ ನೆರವಿನಿಂದ ತಮ್ಮ ಅರ್ಧಶತಕ ಪೂರೈಸಿದರು. ಆ ಮೂಲಕ ಲಿಸ್ಟ್ ಎ (List A - 50 ಓವರ್‌ಗಳ ದೇಶಿ ಕ್ರಿಕೆಟ್) ಇತಿಹಾಸದಲ್ಲಿ ಅತಿ

ವೇಗದ ಅರ್ಧಶತಕ ಬಾರಿಸಿದ ವಿಶ್ವದ ಮೊದಲ ಬ್ಯಾಟರ್ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

➤ ಇದಕ್ಕೂ ಮುನ್ನ 2005ರಲ್ಲಿ ಶ್ರೀಲಂಕಾದ ಕೌಶಲ್ಯ ವೀರರತ್ನೆ ಕೇವಲ 12 ಎಸೆತಗಳಲ್ಲಿ ಅರ್ಧಶತಕ ಗಳಿಸಿದ್ದು 21 ವರ್ಷಗಳ ಹಳೆಯ ದಾಖಲೆಯಾಗಿತ್ತು. ಈಗ ವೈಭವ್ ಅದನ್ನು ಧೂಳೀಪಟ ಮಾಡಿದ್ದಾರೆ.

➤ ಶತಕದ ಅಂಚಿನಲ್ಲಿ ಔಟ್: 29 ಎಸೆತಗಳಲ್ಲಿ 94 ರನ್: ಕೇವಲ ಅರ್ಧಶತಕಕ್ಕೆ ತೃಪ್ತಿಪಡದ ಈ ಎಡಗೈ ಬ್ಯಾಟಿಂಗ್ ದೈತ್ಯ, ಔಟಾಗುವ ಮುನ್ನ ಕೇವಲ 29 ಎಸೆತಗಳಲ್ಲಿ 94 ರನ್ (10 ಬೌಂಡರಿ, 8 ಸಿಕ್ಸರ್) ಚಚ್ಚಿದರು. ಕೇವಲ 6 ರನ್‌ಗಳಿಂದ ಐತಿಹಾಸಿಕ ಶತಕ ವಂಚಿತರಾದರೂ, ಇವರ 324.14ರ ಸ್ಟ್ರೈಕ್ ರೇಟ್‌ನ ಆಟ ಇಡೀ ಕ್ರಿಕೆಟ್ ಜಗತ್ತನ್ನು ಬೆರಗುಗೊಳಿಸಿದೆ. ಐಪಿಎಲ್ 2026ರಲ್ಲಿ ರಾಜಸ್ಥಾನ್ ರಾಯಲ್ಸ್ ಪರ ಅತಿ ಹೆಚ್ಚು ರನ್ (776 ರನ್) ಗಳಿಸಿ ಮಿಂಚಿದ್ದ ವೈಭವ್, ಅದೇ ಫಾರ್ಮ್ ಅನ್ನು ಇಲ್ಲೂ ಮುಂದುವರಿಸಿದ್ದಾರೆ.

➤ ಭಾರತ 'ಎ' ತಂಡಕ್ಕೆ 66 ರನ್‌ಗಳ ಭರ್ಜರಿ ಜಯ ಮತ್ತು ಪ್ರಶಸ್ತಿ ಭಾಜನ: ವೈಭವ್ ನೀಡಿದ ಸ್ಫೋಟಕ ಆರಂಭ ಹಾಗೂ ತಿಲಕ್ ವರ್ಮಾ (67) ಅವರ ಜವಾಬ್ದಾರಿಯುತ ಆಟದ ನೆರವಿನಿಂದ ಭಾರತ 'ಎ' ತಂಡ ನಿಗದಿತ 50 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 377 ರನ್‌ಗಳ ಬೃಹತ್ ಮೊತ್ತ ಪೇರಿಸಿತು. ಬೃಹತ್ ಗುರಿ ಬೆನ್ನಟ್ಟಿದ ಶ್ರೀಲಂಕಾ 'ಎ' ತಂಡ 47.1 ಓವರ್‌ಗಳಲ್ಲಿ 311 ರನ್‌ಗಳಿಗೆ ಆಲೌಟ್ ಆಯಿತು. ಭಾರತದ ಪರ ಯಶ್ ಠಾಕೂರ್ ಮತ್ತು ವಿಪ್ರಜ್ ನಿಗಮ್ ತಲಾ 3 ವಿಕೆಟ್ ಪಡೆದು ಮಿಂಚಿದರು. ಈ ಮೂಲಕ ಭಾರತ 'ಎ' ತಂಡ 66 ರನ್‌ಗಳ ಭರ್ಜರಿ ಜಯ ಸಾಧಿಸಿ, ತ್ರಿಕೋನ ಸರಣಿಯ ಚಾಂಪಿಯನ್ ಆಗಿ ಹೊರಹೊಮ್ಮಿತು.

**➤ ಫೈನಲ್ ಪಂದ್ಯದ ಸಂಕ್ಷಿಪ್ತ ಸ್ಕೋರ್:**

ಭಾರತ ಎ: 50 ಓವರ್‌ಗಳಲ್ಲಿ 377/9 (ವೈಭವ್ 94, ತಿಲಕ್ ವರ್ಮಾ 67; ಯಶ್ ಠಾಕೂರ್ 3/45)

ಶ್ರೀಲಂಕಾ ಎ: 47.1 ಓವರ್‌ಗಳಲ್ಲಿ 311/10 (ಸದೀರ ಸಮರವಿಕ್ರಮ 52; ವಿಪ್ರಜ್ ನಿಗಮ್ 3/60)

ಫಲಿತಾಂಶ: ಭಾರತ 'ಎ' ತಂಡಕ್ಕೆ 66 ರನ್‌ಗಳ ಜಯ ಹಾಗೂ ಸರಣಿ ಕೈವಶ.

## 200 ಟಿ20 ಅಂತರರಾಷ್ಟ್ರೀಯ ಪಂದ್ಯಗಳನ್ನಾಡಿದ ವಿಶ್ವದ ಮೊದಲ ಕ್ರಿಕೆಟರ್: ಇತಿಹಾಸ ನಿರ್ಮಿಸಿದ ಹರ್ಮನ್ ಪ್ರೀತ್ ಕೌರ್!




➤ ಭಾರತೀಯ ಮಹಿಳಾ ಕ್ರಿಕೆಟ್ ತಂಡದ ನಾಯಕಿ ಹರ್ಮನ್ ಪ್ರೀತ್ ಕೌರ್ (Harmanpreet Kaur) ಜಾಗತಿಕ ಕ್ರಿಕೆಟ್ ಇತಿಹಾಸದಲ್ಲೇ ಯಾರೂ ಮಾಡದ ಅಪರೂಪದ ಮಹತ್ತರ ಸಾಧನೆಯೊಂದನ್ನು ಮಾಡಿ ಜಗತ್ತಿನ ಗಮನ ಸೆಳೆದಿದ್ದಾರೆ. ಪುರುಷರ ಮತ್ತು ಮಹಿಳಾ ಕ್ರಿಕೆಟ್ ಎರಡನ್ನೂ ಒಳಗೊಂಡಂತೆ ವಿಶ್ವದಲ್ಲೇ ಅತ್ಯಧಿಕ 200 ಟಿ20 ಅಂತರರಾಷ್ಟ್ರೀಯ (T20I) ಪಂದ್ಯಗಳನ್ನು ಆಡಿದ ಮೊದಲ ಆಟಗಾರ್ತಿ/ಆಟಗಾರ ಎಂಬ ಐತಿಹಾಸಿಕ ದಾಖಲೆಯನ್ನು ಅವರು ತಮ್ಮ ಹೆಸರಿಗೆ ಬರೆದುಕೊಂಡಿದ್ದಾರೆ.

➤ ಮ್ಯಾಂಚೆಸ್ಟರ್‌ನಲ್ಲಿ ನಡೆದ ಐಸಿಸಿ ಮಹಿಳಾ ಟಿ20 ವಿಶ್ವಕಪ್ 2026ರ (ICC Women's T20 World Cup 2026) ದಕ್ಷಿಣ ಆಫ್ರಿಕಾ ವಿರುದ್ಧದ ಪಂದ್ಯದಲ್ಲಿ ಕಣಕ್ಕಿಳಿಯುವ ಮೂಲಕ ಹರ್ಮನ್‌ಪ್ರೀತ್ ಈ ಅಭೂತಪೂರ್ವ ಮೈಲಿಗಲ್ಲನ್ನು ತಲುಪಿದರು.

➤ ವಿಶೇಷ ಗೌರವ ಸಲ್ಲಿಕೆ: ಈ ಐತಿಹಾಸಿಕ 200ನೇ ಪಂದ್ಯದ ಆರಂಭಕ್ಕೂ ಮುನ್ನ, ಭಾರತ ತಂಡದ ಮುಖ್ಯ ಕೋಚ್ ಅಮೋಲ್ ಮುಜುಂದಾರ್ ಮತ್ತು ಉಪನಾಯಕಿ ಸ್ಮೃತಿ ಮಂಧಾನ ಅವರು ಹರ್ಮನ್‌ಪ್ರೀತ್ ಕೌರ್ ಅವರಿಗೆ '200' ಎಂದು ಬರೆಯಲಾದ ವಿಶೇಷ ಜರ್ಸಿ ಮತ್ತು ಕ್ಯಾಪ್ ನೀಡಿ ಗೌರವಿಸಿದರು.

➤ "ಇದು ನಿಜಕ್ಕೂ ಅದ್ಭುತವಾದ ಪ್ರಯಾಣ. ನಾನು ಇಷ್ಟು ದೂರ ಬರುತ್ತೇನೆ ಎಂದು ಎಂದಿಗೂ ಭಾವಿಸಿರಲಿಲ್ಲ. ನನ್ನ ಕುಟುಂಬ, ಸ್ನೇಹಿತರು, ಬಿಸಿಸಿಐ (BCCI) ಮತ್ತು ಸಹ ಆಟಗಾರ್ತಿಯರ ಬೆಂಬಲಕ್ಕೆ ನಾನು ಸದಾ ಕೃತಜ್ಞಳಾಗಿದ್ದೇನೆ," ಎಂದು ಟಾಸ್ ವೇಳೆ ಹರ್ಮನ್‌ಪ್ರೀತ್ ಭಾವುಕರಾಗಿ ನುಡಿದರು.

**➤ ಅತಿ ಹೆಚ್ಚು ಟಿ20ಐ ಪಂದ್ಯಗಳನ್ನಾಡಿದ ವಿಶ್ವದ ಪ್ರಮುಖ ಆಟಗಾರರು:**

ಹರ್ಮನ್‌ಪ್ರೀತ್ ಕೌರ್: ಭಾರತ (ಮಹಿಳೆ): 200 ಪಂದ್ಯಗಳು

ಸುಜಿ ಬೇಟ್ಸ್: ನ್ಯೂಜಿಲೆಂಡ್ (ಮಹಿಳೆ): 184 ಪಂದ್ಯಗಳು

ಡ್ಯಾನಿ ವ್ಯಾಟ್-ಹಾಡ್ಜ್: ಇಂಗ್ಲೆಂಡ್ (ಮಹಿಳೆ): 183 ಪಂದ್ಯಗಳು

ಎಲ್ಲಿಸ್ ಪೆರ್ರಿ: ಆಸ್ಟ್ರೇಲಿಯಾ (ಮಹಿಳೆ): 177 ಪಂದ್ಯಗಳು

ಸ್ಮೃತಿ ಮಂಧಾನ: ಭಾರತ (ಮಹಿಳೆ): 169 ಪಂದ್ಯಗಳು

**➤ ಪುರುಷರ ಕ್ರಿಕೆಟ್‌ನಲ್ಲಿ ಯಾರು ಮುಂದು?:** ಪುರುಷರ ಕ್ರಿಕೆಟ್ ವಿಭಾಗದಲ್ಲಿ ಐರ್ಲೆಂಡ್‌ನ ಪಾಲ್ ಸ್ಟಿರ್ಲಿಂಗ್ (163 ಪಂದ್ಯಗಳು) ಮೊದಲ ಸ್ಥಾನದಲ್ಲಿದ್ದರೆ, ಭಾರತದ ಮಾಜಿ ನಾಯಕ ರೋಹಿತ್ ಶರ್ಮಾ (159 ಪಂದ್ಯಗಳು) ದ್ವಿತೀಯ ಸ್ಥಾನದಲ್ಲಿದ್ದಾರೆ. ಅಂದರೆ, ಪುರುಷರ ಕ್ರಿಕೆಟ್‌ನ ಯಾವುದೇ ದಿಗ್ಗಜ ಆಟಗಾರನೂ ಸಹ ಹರ್ಮನ್‌ಪ್ರೀತ್ ಅವರ ಈ 200 ಪಂದ್ಯಗಳ ದಾಖಲೆಯ ಹತ್ತಿರಕ್ಕೂ ಬಂದಿಲ್ಲ!

➤ ಹರ್ಮನ್‌ಪ್ರೀತ್ ಕೌರ್ ಅವರ ಕ್ರಿಕೆಟ್ ಹಾದಿ ಮತ್ತು ಸಾಧನೆಗಳು: ಪಂಜಾಬ್‌ನ ಮೊಗಾ ಮೂಲದ ಹರ್ಮನ್‌ಪ್ರೀತ್ ಕೌರ್, 2009ರಲ್ಲಿ ಪಾಕಿಸ್ತಾನ ವಿರುದ್ಧದ ಏಕದಿನ (ODI) ಪಂದ್ಯದ ಮೂಲಕ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದರು. ತಮ್ಮ 17 ವರ್ಷಗಳ ಸುದೀರ್ಘ ವೃತ್ತಿಜೀವನದಲ್ಲಿ ಅವರು ಟಿ20 ಮಾದರಿಯಲ್ಲಿ 1 ಶತಕ ಮತ್ತು 17 ಅರ್ಧಶತಕಗಳ ನೆರವಿನಿಂದ 4,123 ಕ್ಕೂ ಹೆಚ್ಚು ರನ್ ಗಳಿಸಿದ್ದಾರೆ ಹಾಗೂ 32 ವಿಕೆಟ್‌ಗಳನ್ನು ಕಬಳಿಸಿದ್ದಾರೆ. ಭಾರತ ತಂಡವನ್ನು 145 ಕ್ಕೂ ಹೆಚ್ಚು ಟಿ20 ಪಂದ್ಯಗಳಲ್ಲಿ ಯಶಸ್ವಿಯಾಗಿ ಮುನ್ನಡೆಸಿದ್ದಾರೆ.

## ಜೂನ್-22: ವಿಶ್ವ ಮಳೆಕಾಡುಗಳ ದಿನ




➤ ಪ್ರತಿ ವರ್ಷ ಜೂನ್ 22 ರಂದು ಜಗತ್ತಿನಾದ್ಯಂತ ವಿಶ್ವ ಮಳೆಕಾಡುಗಳ ದಿನವನ್ನು ಆಚರಿಸಲಾಗುತ್ತದೆ. ಭೂಮಿಯ ಶ್ವಾಸಕೋಶದಂತಿರುವ ಮಳೆಕಾಡುಗಳನ್ನು ಸಂರಕ್ಷಿಸಲು, ಅವುಗಳ ಪರಿಸರ ಪ್ರಾಮುಖ್ಯತೆಯ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಕಾಡುಗಳ ನಾಶವನ್ನು ತಡೆಯಲು ಜಾಗತಿಕ ಮಟ್ಟದಲ್ಲಿ ಜನರನ್ನು ಒಟ್ಟುಗೂಡಿಸುವ ಉದ್ದೇಶದಿಂದ ಈ ದಿನವನ್ನು ಆಚರಿಸಲಾಗುತ್ತಿದೆ.

ಈ ವರ್ಷದ ಘೋಷವಾಕ್ಯ (Theme 2026): "The Forest Within You" (ನಿಮ್ಮೊಳಗಿನ ಅರಣ್ಯ)

➤ 2017ರಲ್ಲಿ ಮೊದಲ ಬಾರಿಗೆ ಈ ದಿನವನ್ನು ಅಮೆರಿಕಾದ ಟೆಕ್ಸಾಸ್ ಮೂಲದ 'ರೈನ್ ಫಾರೆಸ್ಟ್ ಪಾರ್ಟ್‌ನರ್‌ಶಿಪ್' (Rainforest Partnership) ಎಂಬ ಅಂತರರಾಷ್ಟ್ರೀಯ ಸರಕಾರೇತರ ಸಂಸ್ಥೆಯು ಆರಂಭಿಸಿತು. ಜಗತ್ತಿನಾದ್ಯಂತ ವಿನಾಶದ ಅಂಚಿಗೆ ತಲುಪುತ್ತಿರುವ ಕಾಡುಗಳ ಬಗ್ಗೆ ಕಳಕಳಿ ಮೂಡಿಸುವುದು ಮತ್ತು ವಿಜ್ಞಾನಿಗಳು, ಯುವಜನರು ಹಾಗೂ ಬುಡಕಟ್ಟು ಸಮುದಾಯಗಳನ್ನು ಒಳಗೊಂಡು ಅರಣ್ಯ ಸಂರಕ್ಷಣೆಗೆ ಸೂಕ್ತ ಯೋಜನೆಗಳನ್ನು ರೂಪಿಸುವುದು ಈ ದಿನಾಚರಣೆಯ ಮುಖ್ಯ ಉದ್ದೇಶವಾಗಿದೆ. 2026ರ ಈ ವರ್ಷ 10ನೇ ವಾರ್ಷಿಕೋತ್ಸವವನ್ನು ಆಚರಿಸಲಾಗುತ್ತಿದೆ.

➤ ಮಳೆಕಾಡುಗಳು ನಮಗೆ ಏಕೆ ಅತ್ಯಗತ್ಯ?
ಮಳೆಕಾಡುಗಳು ಕೇವಲ ಮರಗಳ ಗುಂಪಲ್ಲ, ಅವು ನಮ್ಮ ಭೂಮಿಯ ಉಳಿಯುವಿಕೆಗೆ ಅತ್ಯಗತ್ಯವಾಗಿರುವ ಜೀವನಾಡಿಗಳು.
ಜೀವವೈವಿಧ್ಯದ ಆಶ್ರಯ ತಾಣ: ಇವು ಜಗತ್ತಿನ ಅರ್ಧಕ್ಕಿಂತ ಹೆಚ್ಚು ಸಸ್ಯ ಮತ್ತು ಪ್ರಾಣಿ ಪ್ರಭೇದಗಳಿಗೆ ಆಶ್ರಯ ನೀಡಿವೆ.
ಸಿಹಿನೀರಿನ ಮೂಲ: ಇವು ನಾವು ಕುಡಿಯುವ ಸಿಹಿನೀರಿನ ಪ್ರಮುಖ ಮೂಲಗಳಾಗಿದ್ದು, ಜಾಗತಿಕ ಹವಾಮಾನವನ್ನು ಸಮತೋಲನದಲ್ಲಿಡಲು ಸಹಾಯ ಮಾಡುತ್ತವೆ.
ಕಾರ್ಬನ್ ಸಿಂಕ್ (Carbon Sink): ವಾತಾವರಣದಲ್ಲಿರುವ ಕೋಟ್ಯಂತರ ಟನ್ ಇಂಗಾಲದ ಡೈಆಕ್ಸೈಡ್ (Carbon Dioxide) ಅನ್ನು ಹೀರಿಕೊಳ್ಳುವ ಮೂಲಕ ಹವಾಮಾನ ಬದಲಾವಣೆಯ (Climate Change) ತೀವ್ರತೆಯನ್ನು ಇವು ಕಡಿಮೆ ಮಾಡುತ್ತವೆ.

**➤ ಭಾರತದಲ್ಲಿರುವ ಪ್ರಮುಖ ಮಳೆಕಾಡುಗಳು:**

**1. ಪಶ್ಚಿಮ ಘಟ್ಟಗಳು (Western Ghats):** ಪಶ್ಚಿಮ ಕರಾವಳಿಯುದ್ದಕ್ಕೂ ಹರಡಿರುವ ಈ ಪರ್ವತ ಶ್ರೇಣಿಯು ವಿಶ್ವದ ಅತ್ಯಂತ ಪ್ರಮುಖ 36 ಜೈವಿಕ ವೈವಿಧ್ಯತೆಯ ತಾಣಗಳಲ್ಲಿ (Biodiversity Hotspots) ಒಂದಾಗಿದೆ. ಕರ್ನಾಟಕದ ಆಗುಂಬೆ, ಕೊಡಗು ಮತ್ತು ಮಲೆನಾಡಿನ ಭಾಗಗಳು ಇಂತಹ ದಟ್ಟ ಹಸಿರು ಕಾಡುಗಳಿಗೆ ಪ್ರಸಿದ್ಧವಾಗಿವೆ.

**2. ಈಶಾನ್ಯ ಭಾರತ (North-East India):** ಅಸ್ಸಾಂ, ಮೇಘಾಲಯದಂತಹ ರಾಜ್ಯಗಳನ್ನೊಳಗೊಂಡ ಈ ಕಾಡುಗಳು 'ಇಂಡೋ-ಬರ್ಮಾ ಜೈವಿಕ ವೈವಿಧ್ಯತೆಯ' ಭಾಗವಾಗಿವೆ. ಇಲ್ಲಿ ವರ್ಷವಿಡೀ ಅತಿ ಹೆಚ್ಚು ಮಳೆಯಾಗುತ್ತದೆ.

**3. ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು:** ಬಂಗಾಳ ಕೊಲ್ಲಿಯಲ್ಲಿರುವ ಈ ದ್ವೀಪಗಳು ಅತ್ಯಂತ ವಿಶಿಷ್ಟವಾದ ಸಮಭಾಜಕ ವೃತ್ತದ ಉಷ್ಣವಲಯದ ಮಳೆಕಾಡುಗಳನ್ನು (Equatorial Tropical Rainforests) ಹೊಂದಿದ್ದು, ಭಾರತದ ಬೇರೆಲ್ಲೂ ಕಾಣಸಿಗದ ಅಪರೂಪದ ಸಸ್ಯ ಸಂಪತ್ತನ್ನು ಹೊಂದಿವೆ.

**➤ ಭಾರತೀಯ ಮಳೆಕಾಡಿನ ಅಪರೂಪದ ಪ್ರಾಣಿಗಳು:**
ಸಿಂಹದ ಬಾಲದ ಕೋತಿ (Lion-tailed Macaque): ಇದು ಪಶ್ಚಿಮ ಘಟ್ಟಗಳ ಮಳೆಕಾಡಿನ ಪ್ರಮುಖ ಆಕರ್ಷಣೆಯಾಗಿದ್ದು, ಅಳಿವಿನ ಅಂಚಿನಲ್ಲಿರುವ ಪ್ರಭೇದವಾಗಿದೆ.
ಹೂಲಾಕ್ ಗಿಬ್ಬನ್ (Hoolock Gibbon): ಇದು ಭಾರತದ ಏಕೈಕ ಕಪಿ (Ape) ಪ್ರಭೇದವಾಗಿದ್ದು, ಈಶಾನ್ಯ ಭಾರತದ ಕಾಡುಗಳಲ್ಲಿ ಕಂಡುಬರುತ್ತದೆ.
ಮಲಬಾರ್ ದೈತ್ಯ ಅಳಿಲು (Malabar Giant Squirrel): ಇದನ್ನು ಸ್ಥಳೀಯವಾಗಿ 'ಕೆಂದಳಿಲು' ಎಂದೂ ಕರೆಯುತ್ತಾರೆ.
ಕಾಳಿಂಗ ಸರ್ಪ (King Cobra): ವಿಶ್ವದ ಅತಿ ಉದ್ದದ ವಿಷಪೂರಿತ ಹಾವಾಗಿದ್ದು, ಕರ್ನಾಟಕದ ಆಗುಂಬೆಯಂತಹ ಮಳೆಕಾಡುಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ.
ಏಷ್ಯನ್ ಆನೆಗಳು (Asian Elephants): ದಕ್ಷಿಣ ಭಾರತದ ಮಳೆಕಾಡುಗಳ ಜೀವನಾಡಿಯಾಗಿವೆ.

## ಭಾರತ-ಯುರೋಪಿಯನ್ ಯೂನಿಯನ್ ಮುಕ್ತ ವ್ಯಾಪಾರ ಒಪ್ಪಂದ: ಡಿಸೆಂಬರ್‌ನಲ್ಲಿ ಐತಿಹಾಸಿಕ ಸಹಿ!



➤ ಭಾರತ ಮತ್ತು 27 ದೇಶಗಳ ಒಕ್ಕೂಟವಾದ ಯುರೋಪಿಯನ್ ಯೂನಿಯನ್ (EU) ನಡುವಿನ ಮುಕ್ತ ವ್ಯಾಪಾರ ಒಪ್ಪಂದವು (FTA) ಈ ವರ್ಷದ ಡಿಸೆಂಬರ್ ವೇಳೆಗೆ ಪೂರ್ಣಗೊಳ್ಳಲಿದ್ದು, ಮುಂದಿನ ವರ್ಷದ ಫೆಬ್ರವರಿ-ಮಾರ್ಚ್ ವೇಳೆಗೆ ಜಾರಿಗೆ ಬರಲಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಘೋಷಿಸಿದ್ದಾರೆ. ಮುಂಬೈನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು ಈ ಪ್ರಮುಖ ಮಾಹಿತಿ ಹಂಚಿಕೊಂಡಿದ್ದಾರೆ.
ಒಪ್ಪಂದದ ಸಮಯ: ಡಿಸೆಂಬರ್ 2026 ರ ವೇಳೆಗೆ ಸಹಿ; ಫೆಬ್ರವರಿ-ಮಾರ್ಚ್ 2027 ಕ್ಕೆ ಅನುಷ್ಠಾನ.
ಶೂನ್ಯ ಸುಂಕದ ಲಾಭ: ಭಾರತದ ಶೇ 93 ಕ್ಕೂ ಹೆಚ್ಚು ರಫ್ತು ಉತ್ಪನ್ನಗಳಿಗೆ ಯುರೋಪ್ ಮಾರುಕಟ್ಟೆಯಲ್ಲಿ ಶೂನ್ಯ ಸುಂಕದ (Duty-Free) ಮುಕ್ತ ಅವಕಾಶ ಸಿಗಲಿದೆ.
ಗ್ರಾಹಕರಿಗೆ ಲಾಭ: ಯುರೋಪ್‌ನಿಂದ ಆಮದಾಗುವ ಐಷಾರಾಮಿ ಕಾರುಗಳು ಮತ್ತು ವೈನ್ (Wine) ಬೆಲೆ ಭಾರತದಲ್ಲಿ ಗಣನೀಯವಾಗಿ ಕಡಿಮೆ ಆಗಲಿದೆ.
ಜಾಗತಿಕ ಪ್ರಭಾವ: ಭಾರತ ಮತ್ತು ಐರೋಪ್ಯ ಮಾರುಕಟ್ಟೆ ಒಟ್ಟಾಗಿ ಜಾಗತಿಕ ಜಿಡಿಪಿಯಲ್ಲಿ (Global GDP) ಶೇ 25 ರಷ್ಟು ಪಾಲು ಹೊಂದಿವೆ.

**➤ ಭಾರತದ ರಫ್ತು ವಲಯಕ್ಕೆ ಬೂಸ್ಟರ್ ಡೋಸ್:** ಈ ಒಪ್ಪಂದದ ನಂತರ ಶೂನ್ಯ ಸುಂಕದೊಂದಿಗೆ ಯುರೋಪಿನ ಬಹುತೇಕ ಮಾರುಕಟ್ಟೆಯು ನಮಗೆ ಮುಕ್ತವಾಗಲಿದೆ" ಎಂದು ಸಚಿವ ಪಿಯೂಷ್ ಗೋಯಲ್ ತಿಳಿಸಿದ್ದಾರೆ. ಇದರಿಂದಾಗಿ ಭಾರತದ ಜವಳಿ, ಚರ್ಮದ ಉತ್ಪನ್ನಗಳು, ಎಂಜಿನಿಯರಿಂಗ್ ಉಪಕರಣಗಳು ಮತ್ತು ಕೃಷಿ ಉತ್ಪನ್ನಗಳಿಗೆ ಯುರೋಪಿಯನ್ ಒಕ್ಕೂಟದ 27 ದೇಶಗಳಲ್ಲಿ ಬೃಹತ್ ಮಾರುಕಟ್ಟೆ ಸಿಗಲಿದೆ. ಇದು ಭಾರತೀಯ ರಫ್ತುದಾರರಿಗೆ ಜಾಗತಿಕ ಮಟ್ಟದಲ್ಲಿ ಹೊಸ ಶಕ್ತಿ ನೀಡಲಿದೆ.

➤ ಜಾಗತಿಕ ಆರ್ಥಿಕತೆಯಲ್ಲಿ ಭಾರತ-EU ಪಾಲು: ಭಾರತ ಮತ್ತು ಐರೋಪ್ಯ ಮಾರುಕಟ್ಟೆಯನ್ನು ಒಟ್ಟಾಗಿ ಪರಿಗಣಿಸಿದರೆ, ಅದು ಜಾಗತಿಕ ಆರ್ಥಿಕತೆಯಲ್ಲಿ ಅತ್ಯಂತ ಪ್ರಮುಖ ಸ್ಥಾನ ಪಡೆದಿದೆ.
ಒಟ್ಟು ಜಿಡಿಪಿ (GDP): ಶೇ 25 ರಷ್ಟು ಪಾಲು
ಅಂತರರಾಷ್ಟ್ರೀಯ ವ್ಯಾಪಾರ: ಮೂರನೆಯ ಒಂದರಷ್ಟು ಪಾಲು (ಅಂದಾಜು $11 ಟ್ರಿಲಿಯನ್)

➤ ಇತರ ದೇಶಗಳೊಂದಿಗೂ ಮುಕ್ತ ವ್ಯಾಪಾರ ಮಾತುಕತೆ ಉದ್ವೇಗ:
1. ಅಮೆರಿಕ (USA) ಜೊತೆ ಮಾತುಕತೆ: ಅಮೆರಿಕದ ವ್ಯಾಪಾರ ಪ್ರತಿನಿಧಿ (USTR) ಜೇಮಿಸನ್ ಗ್ರೀರ್ ಅವರು ಈ ವಾರ ಭಾರತಕ್ಕೆ ಭೇಟಿ ನೀಡುತ್ತಿದ್ದು, ಭಾರತ-ಅಮೆರಿಕ ನಡುವಿನ ವ್ಯಾಪಾರ ಒಪ್ಪಂದಗಳ ಕುರಿತು ಸಚಿವರೊಂದಿಗೆ ಪ್ರಮುಖ ಮಾತುಕತೆ ನಡೆಸಲಿದ್ದಾರೆ.
2. ಕೆನಡಾ (Canada) ಜೊತೆಗಿನ ಎಫ್‌ಟಿಎ: ಇತ್ತೀಚೆಗೆ ನಡೆದ ಜಿ7 (G7) ಶೃಂಗಸಭೆಯ ಸಂದರ್ಭದಲ್ಲಿ, ಕೆನಡಾ ಪ್ರಧಾನಿಯವರು ಪ್ರಸಕ್ತ ವರ್ಷದಲ್ಲೇ ಭಾರತದ ಜೊತೆಗಿನ ಮುಕ್ತ ವ್ಯಾಪಾರ ಒಪ್ಪಂದವನ್ನು (CEPA) ಪೂರ್ಣಗೊಳಿಸಬೇಕು ಎಂಬ ತೀವ್ರ ಬಯಕೆ ಹೊಂದಿರುವುದಾಗಿ ಗೋಯಲ್ ತಿಳಿಸಿದ್ದಾರೆ.

## ಭಾರತದ ಕಚ್ಚಾ ತೈಲ ಆಮದು: ರಷ್ಯಾ ನಂ.1, ಅಮೆರಿಕದಿಂದ ಭಾರಿ ಇಳಿಕೆ! ಹೊರ್ಮುಜ್ ಜಲಸಂಧಿಯ ಬಿಕ್ಕಟ್ಟಿನ ನಡುವೆ ಮಹತ್ವದ ಬದಲಾವಣೆ




➤ ಜಾಗತಿಕ ಇಂಧನ ಮಾರುಕಟ್ಟೆಯಲ್ಲಿ ಮತ್ತು ಭಾರತದ ಇಂಧನ ಭದ್ರತೆಯಲ್ಲಿ ದೊಡ್ಡ ಬದಲಾವಣೆಗಳು ಕಂಡುಬರುತ್ತಿವೆ. ಜೂನ್ ತಿಂಗಳಿನಲ್ಲಿ ಭಾರತಕ್ಕೆ ಕಚ್ಚಾ ತೈಲ (Crude Oil) ಪೂರೈಕೆ ಮಾಡುವ ರಾಷ್ಟ್ರಗಳ ಪೈಕಿ ರಷ್ಯಾ ಅಗ್ರಸ್ಥಾನವನ್ನು ಕಾಯ್ದುಕೊಂಡಿದೆ. ಆದರೆ, ಇದೇ ಅವಧಿಯಲ್ಲಿ ಅಮೆರಿಕದಿಂದ ಭಾರತಕ್ಕೆ ಆಗುತ್ತಿದ್ದ ತೈಲ ಆಮದು ಭಾರಿ ಪ್ರಮಾಣದಲ್ಲಿ

ಕುಸಿದಿದೆ ಎಂದು ಪ್ರಮುಖ ಮಾರುಕಟ್ಟೆ ಅಂಕಿ-ಅಂಶಗಳ ಸಂಸ್ಥೆ 'ಕೆಪ್ಲರ್' (Kpler) ವರದಿ ಮಾಡಿದೆ.

➤ ಪಶ್ಚಿಮ ಏಷ್ಯಾದಲ್ಲಿನ (Middle East) ಉದ್ವಿಗ್ನತೆ ಮತ್ತು ಹೊರ್ಮುಜ್ ಜಲಸಂಧಿಯ (Strait of Hormuz) ಅನಿಶ್ಚಿತತೆಯ ನಡುವೆ ಭಾರತದ ತೈಲ ಸಂಸ್ಕರಣಾಗಾರಗಳು ರಷ್ಯಾದ ರಿಯಾಯಿತಿ ದರದ ತೈಲಕ್ಕೆ ಹೆಚ್ಚಿನ ಆದ್ಯತೆ ನೀಡಿರುವುದು ಈ ಬದಲಾವಣೆಗೆ ಮುಖ್ಯ ಕಾರಣವಾಗಿದೆ.

**➤ ರಷ್ಯಾದಿಂದ ದಾಖಲೆಯ ಆಮದು: ಪ್ರಮುಖ ಅಂಕಿ-ಅಂಶಗಳು:**

ರಷ್ಯಾ (ಮೊದಲ ಸ್ಥಾನ): ಜೂನ್‌ನಲ್ಲಿ ಭಾರತವು ರಷ್ಯಾದಿಂದ ಪ್ರತಿದಿನ ಸರಾಸರಿ 26.6 ಲಕ್ಷ ಬ್ಯಾರಲ್ ಕಚ್ಚಾ ತೈಲವನ್ನು ಆಮದು ಮಾಡಿಕೊಂಡಿದೆ. ಇದು ಮೇ ತಿಂಗಳ ಆಮದಿಗೆ (19.1 ಲಕ್ಷ ಬ್ಯಾರಲ್) ಹೋಲಿಸಿದರೆ ಸುಮಾರು ಶೇ. 40 ರಷ್ಟು ಹೆಚ್ಚಾಗಿದೆ. ಸದ್ಯ ಭಾರತದ ಒಟ್ಟು ತೈಲ ಆಮದಿನಲ್ಲಿ ರಷ್ಯಾದ ಪಾಲು ಶೇ. 50 ರಷ್ಟಿದೆ.

ಯುಎಇ (ಎರಡನೇ ಸ್ಥಾನ): ಅರಬ್ ಸಂಯುಕ್ತ ಸಂಸ್ಥಾನದಿಂದ (UAE) ಪ್ರತಿನಿತ್ಯ 6.36 ಲಕ್ಷ ಬ್ಯಾರಲ್ ತೈಲ ಆಮದಾಗಿದೆ (ಮೇ ತಿಂಗಳಲ್ಲಿ ಇದು 6.44 ಲಕ್ಷ ಬ್ಯಾರಲ್ ಇತ್ತು). ಹೊರ್ಮುಜ್ ಜಲಸಂಧಿಯನ್ನು ಬೈಪಾಸ್ ಮಾಡುವ 'ಹಬ್ಶಾನ್-ಫುಜೈರಾ' ಪೈಪ್‌ಲೈನ್ ಮೂಲಕ ಯುಎಇ ಭಾರತಕ್ಕೆ ತೈಲ ಪೂರೈಸುತ್ತಿದೆ.

ಸೌದಿ ಅರೇಬಿಯಾ (ಮೂರನೇ ಸ್ಥಾನ): ಸೌದಿಯಿಂದ ಪ್ರತಿನಿತ್ಯ 3.84 ಲಕ್ಷ ಬ್ಯಾರಲ್ ತೈಲ ಭಾರತಕ್ಕೆ ಹರಿದುಬಂದಿದೆ.

ವೆನೆಜುವೆಲಾ: ವೆನೆಜುವೆಲಾದಿಂದ ನಿತ್ಯ 2.09 ಲಕ್ಷ ಬ್ಯಾರಲ್ ತೈಲ ಆಮದಾಗಿದೆ.

ಅಮೆರಿಕ (ಭಾರಿ ಕುಸಿತ): ಮೇ ತಿಂಗಳಿನಲ್ಲಿ ಅಮೆರಿಕದಿಂದ ಪ್ರತಿನಿತ್ಯ 2.52 ಲಕ್ಷ ಬ್ಯಾರಲ್ ಆಮದಾಗುತ್ತಿತ್ತು. ಆದರೆ ಜೂನ್ ನಲ್ಲಿ ಇದು ಕೇವಲ 91 ಸಾವಿರ ಬ್ಯಾರಲ್‌ಗೆ ಕುಸಿದಿದೆ.

➤ ಆಕರ್ಷಕ ಬೆಲೆಯ ರಿಯಾಯಿತಿಗಳು ಹಾಗೂ ಹೊರ್ಮುಜ್ ಜಲಸಂಧಿಯ ಬಿಕ್ಕಟ್ಟಿನಿಂದಾಗಿ ಉಂಟಾದ ಭದ್ರತಾ ಅನಿಶ್ಚಿತತೆಯೇ ಭಾರತವು ಪರ್ಯಾಯ ಮಾರ್ಗಗಳ ಮೂಲಕ ರಷ್ಯಾ ತೈಲದತ್ತ ಹೆಚ್ಚು ಒಲಿಯಲು ಪ್ರಮುಖ ಕಾರಣಗಳಾಗಿವೆ.

➤ ಭಾರತದ ಆರ್ಥಿಕತೆಯ ಮೇಲಾಗುವ ಪರಿಣಾಮ: ಜಗತ್ತಿನಲ್ಲೇ ಮೂರನೇ ಅತಿ ದೊಡ್ಡ ಇಂಧನ ಆಮದು ರಾಷ್ಟ್ರವಾಗಿರುವ ಭಾರತಕ್ಕೆ ಕಚ್ಚಾ ತೈಲದ ಬೆಲೆ ಅತ್ಯಂತ ನಿರ್ಣಾಯಕವಾಗಿದೆ. ಭಾರತವು ತನ್ನ ಇಂಧನ ಅಗತ್ಯದ ಶೇ. 80 ಕ್ಕಿಂತ ಹೆಚ್ಚು ಭಾಗವನ್ನು ಆಮದಿನ ಮೂಲಕವೇ ಪೂರೈಸಿಕೊಳ್ಳುತ್ತದೆ. ವರ್ಷಕ್ಕೆ ಸುಮಾರು 123 ಬಿಲಿಯನ್ ಡಾಲರ್ ಮೊತ್ತದ ತೈಲವನ್ನು ಭಾರತ ಖರೀದಿಸುತ್ತದೆ.

## ಏಷ್ಯನ್ ರಿಲೇ ಚಾಂಪಿಯನ್‌ಶಿಪ್ 2026: ಭಾರತದ ಮಹಿಳಾ ತಂಡಕ್ಕೆ ಐತಿಹಾಸಿಕ ಚಿನ್ನದ ಪದಕ!



➤ ಭಾರತೀಯ ಕ್ರೀಡಾ ಲೋಕದಲ್ಲಿ ಮತ್ತೊಂದು ಐತಿಹಾಸಿಕ ಸಾಧನೆ ದಾಖಲಾಗಿದೆ. ಚೀನಾದ ಶಾವೋಕ್ಸಿಂಗ್ (Shaoxing) ನಗರದಲ್ಲಿ ನಡೆದ ಪ್ರತಿಷ್ಠಿತ ಏಷ್ಯನ್ ರಿಲೇ ಚಾಂಪಿಯನ್‌ಶಿಪ್ಸ್ (Asian Relays Championships 2026) ನ ಎರಡನೇ ಆವೃತ್ತಿಯ ಅಂತಿಮ ದಿನದಂದು ಭಾರತದ ಮಹಿಳಾ ತಂಡವು 4x100 ಮೀಟರ್ ರಿಲೇ ರೇಸ್‌ನಲ್ಲಿ ಭರ್ಜರಿ ಪ್ರದರ್ಶನ ನೀಡಿ ಚಿನ್ನದ ಪದಕವನ್ನು ಮುಡಿಗೇರಿಸಿಕೊಂಡಿದೆ.

➤ ಋತುವಿನ ಅತ್ಯುತ್ತಮ ಪ್ರದರ್ಶನ (Season Best Time): ಭಾರತದ ಪ್ರಮುಖ ಓಟಗಾರ್ತಿಯರಾದ ಶ್ರಬಾನಿ ನಂದಾ, ಎಸ್ ಎಸ್ ಸ್ನೇಹ, ಸುದೇಷ್ಣಾ ಶಿವಂಕರ್ ಮತ್ತು ತಮನ್ನಾ ಅವರನ್ನೊಳಗೊಂಡ ಚತುಷ್ಟಯ (Quartet) ತಂಡವು ಕೇವಲ 43.85 ಸೆಕೆಂಡುಗಳಲ್ಲಿ ರೇಸ್ ಪೂರ್ಣಗೊಳಿಸುವ ಮೂಲಕ ಈ ಋತುವಿನ ತಮ್ಮ ಅತ್ಯುತ್ತಮ ಸಮಯವನ್ನು (Season Best) ದಾಖಲಿಸಿ ಪ್ರಥಮ ಸ್ಥಾನ ಪಡೆದರು.

➤ ಮಿಶ್ರ ರಿಲೇಯಲ್ಲೂ ಭಾರತಕ್ಕೆ ಪದಕಗಳ ಬೇಟೆ: ಮಹಿಳಾ ತಂಡದ ಚಿನ್ನದ ಬೇಟೆಯ ಜೊತೆಗೆ, ಭಾರತದ ಮಿಶ್ರ ರಿಲೇ ತಂಡಗಳೂ ಸಹ ಅದ್ಭುತ ಪ್ರದರ್ಶನ ನೀಡಿ ದೇಶದ ಪದಕಗಳ ಪಟ್ಟಿಯನ್ನು ಹೆಚ್ಚಿಸಿವೆ:

4x400 ಮೀಟರ್ ಮಿಶ್ರ ರಿಲೇ (ಬೆಳ್ಳಿ ಪದಕ): ತೀರ್ಥೇಶ್ ಶೆಟ್ಟಿ, ಪೂವಮ್ಮ ಎಂ.ಆರ್, ಭರತ್ ಶ್ರೀಧರ್ ಮತ್ತು ನೀರು ಪಾಠಕ್ ಅವರನ್ನೊಳಗೊಂಡ ಭಾರತೀಯ ಮಿಶ್ರ ತಂಡವು 3:17.06 ಸೆಕೆಂಡುಗಳಲ್ಲಿ ರೇಸ್ ಮುಗಿಸಿ ಬೆಳ್ಳಿ ಪದಕ ಗೆದ್ದುಕೊಂಡಿತು. ಕರ್ನಾಟಕದ ಅನುಭವಿ ಓಟಗಾರ್ತಿ ಎಂ.ಆರ್. ಪೂವಮ್ಮ ಅವರ ಉಪಸ್ಥಿತಿ ತಂಡಕ್ಕೆ ಆನೆಬಲ ತಂದಿತ್ತು.

4x100 ಮೀಟರ್ ಮಿಶ್ರ ರಿಲೇ (ಕಂಚು/ಕಂಚಿನ ಪದಕ): ಇದಕ್ಕೂ ಮೊದಲು ನಡೆದ ಸ್ಪರ್ಧೆಯಲ್ಲಿ ಪ್ರಣವ್ ಗೌರವ್, ತಮನ್ನಾ, ಅನಿಮೇಶ್ ಕುಜುರ್ ಮತ್ತು ಎಸ್‌ಎಸ್ ಸ್ನೇಹ ಅವರಿದ್ದ ತಂಡವು ಭಾರತಕ್ಕೆ ಕಂಚಿನ ಪದಕ ತಂದುಕೊಟ್ಟಿತ್ತು.

## 23 June 2026

## ಜೂನ್-23: ಅಂತರರಾಷ್ಟ್ರೀಯ ಒಲಿಂಪಿಕ್ ದಿನ




➤ ಪ್ರತಿ ವರ್ಷ ಜೂನ್ 23 ರಂದು ಜಗತ್ತಿನಾದ್ಯಂತ ಅಂತರರಾಷ್ಟ್ರೀಯ ಒಲಿಂಪಿಕ್ ದಿನ (International Olympic Day) ವನ್ನು ಆಚರಿಸಲಾಗುತ್ತದೆ. ಕೇವಲ ಕ್ರೀಡಾಪಟುಗಳನ್ನಷ್ಟೇ ಅಲ್ಲದೆ, ಪ್ರತಿಯೊಬ್ಬ ಸಾಮಾನ್ಯ ನಾಗರಿಕನೂ ಸಹ ಆರೋಗ್ಯಕರ ಜೀವನಶೈಲಿಯನ್ನು ಅಳವಡಿಸಿಕೊಳ್ಳಲು ಪ್ರೇರೇಪಿಸುವುದು ಈ ದಿನದ ಮುಖ್ಯ ಉದ್ದೇಶವಾಗಿದೆ.

➤ ಒಲಿಂಪಿಕ್ ದಿನ 2026 ರ ಧ್ಯೇಯವಾಕ್ಯ (Theme): "ಕ್ರೀಡೆ: ಸೇತುವೆಗಳ ನಿರ್ಮಾಣ, ಅಡೆತಡೆಗಳ ನಿವಾರಣೆ" (Sport: Building Bridges, Breaking Barriers)

**➤ ಒಲಿಂಪಿಕ್ ದಿನದ ಇತಿಹಾಸ:**

ಐಒಸಿ ಸ್ಥಾಪನೆ: 1894 ಜೂನ್ 23 ರಂದು ಫ್ರಾನ್ಸ್‌ನ ಶಿಕ್ಷಣ ತಜ್ಞ ಬ್ಯಾರನ್ ಪಿಯರೆ ಡಿ ಕೌಬರ್ಟಿನ್ (Baron Pierre de Coubertin) ಅವರ ನೇತೃತ್ವದಲ್ಲಿ ಪ್ಯಾರಿಸ್‌ನಲ್ಲಿ ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ (IOC) ಯನ್ನು ಸ್ಥಾಪಿಸಲಾಯಿತು. ಇವರನ್ನು 'ಆಧುನಿಕ ಒಲಿಂಪಿಕ್ ಕ್ರೀಡಾಕೂಟದ ಪಿತಾಮಹ' ಎಂದು ಕರೆಯಲಾಗುತ್ತದೆ.

ಮೊದಲ ಆಧುನಿಕ ಒಲಿಂಪಿಕ್ಸ್: ಐಒಸಿ ಸ್ಥಾಪನೆಯಾದ ನಂತರ, ಮೊದಲ ಆಧುನಿಕ ಒಲಿಂಪಿಕ್ ಕ್ರೀಡಾಕೂಟವು 1896 ರಲ್ಲಿ ಗ್ರೀಸ್ ನ ಅಥೆನ್ಸ್‌ನಲ್ಲಿ ಯಶಸ್ವಿಯಾಗಿ ನಡೆಯಿತು.

ಆಚರಣೆಯ ಆರಂಭ: ಐಒಸಿ ಸ್ಥಾಪನೆಯ ನೆನಪಿಗಾಗಿ ಒಲಿಂಪಿಕ್ ದಿನವನ್ನು ಆಚರಿಸುವ ನಿರ್ಣಯವನ್ನು 1947 ರಲ್ಲಿ ಕೈಗೊಳ್ಳಲಾಯಿತು. ಇದರಂತೆ, ಮೊದಲ ಬಾರಿಗೆ ಅಂತರರಾಷ್ಟ್ರೀಯ ಒಲಿಂಪಿಕ್ ದಿನವನ್ನು 1948 ಜೂನ್ 23 ರಂದು ಆಚರಿಸಲಾಯಿತು. ಆರಂಭದಲ್ಲಿ ಕೇವಲ 9 ದೇಶಗಳು ಭಾಗವಹಿಸಿದ್ದವು, ಆದರೆ ಇಂದು 200 ಕ್ಕೂ ಹೆಚ್ಚು ರಾಷ್ಟ್ರೀಯ ಒಲಿಂಪಿಕ್ ಸಮಿತಿಗಳು (NOCs) ಇದರಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿವೆ

**➤ ಒಲಿಂಪಿಕ್ ದಿನದ ಮೂರು ಪ್ರಮುಖ ಸ್ತಂಭಗಳು (Three Pillars):**

ಚಲಿಸು (Move): ವಯಸ್ಸಿನ ಮಿತಿಯಿಲ್ಲದೆ ಪ್ರತಿಯೊಬ್ಬರೂ ಓಟ, ನಡಿಗೆ, ಸೈಕ್ಲಿಂಗ್ ಅಥವಾ ಯೋಗದಂತಹ ದೈಹಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತೆ ಪ್ರೇರೇಪಿಸುವುದು.
ಕಲಿ (Learn): ಒಲಿಂಪಿಕ್ ಇತಿಹಾಸ, ಕ್ರೀಡಾ ಮನೋಭಾವ (Sportsmanship), ಶಿಸ್ತು ಮತ್ತು ನ್ಯಾಯಸಮ್ಮತ ಆಟದ (Fair play) ಮೌಲ್ಯಗಳ ಬಗ್ಗೆ ಸಮಾಜಕ್ಕೆ ಶಿಕ್ಷಣ ನೀಡುವುದು.
ಶೋಧಿಸು (Discover): ಸಾರ್ವಜನಿಕರು ತಮ್ಮ ಆಸಕ್ತಿ ಹಾಗೂ ಪ್ರತಿಭೆಯನ್ನು ಗುರುತಿಸಲು ಹೊಸ ಕ್ರೀಡೆಗಳು ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಅನ್ವೇಷಿಸುವಂತೆ ಮಾಡುವುದು.

➤ **ಒಲಿಂಪಿಕ್ ಚಳವಳಿಯ ಪ್ರಮುಖ ಮೌಲ್ಯಗಳು:**

ಉತ್ಕೃಷ್ಟತೆ (Excellence): ಕ್ರೀಡೆಯಲ್ಲಿ ಮತ್ತು ಜೀವನದಲ್ಲಿ ತನ್ನ ಅತ್ಯುತ್ತಮ ಪ್ರದರ್ಶನ ನೀಡುವುದು.
ಸ್ನೇಹತ್ವ (Friendship): ಕ್ರೀಡೆಯ ಮೂಲಕ ಜಗತ್ತಿನಾದ್ಯಂತ ಪರಸ್ಪರ ಸಾಮರಸ್ಯ ಮತ್ತು ಏಕತೆಯನ್ನು ಬೆಳೆಸುವುದು.
ಗೌರವ (Respect): ನಿಯಮಗಳು, ಎದುರಾಳಿಗಳು, ಸಹ ಆಟಗಾರರು ಮತ್ತು ತನ್ನನ್ನು ತಾನು ಗೌರವಿಸುವುದು.

## ಪಶ್ಚಿಮ ಬಂಗಾಳ ಬಜೆಟ್ 2026: 1 ಲಕ್ಷ ಸರ್ಕಾರಿ ಹುದ್ದೆಗಳು & 33% ಮಹಿಳಾ ಮೀಸಲಾತಿ ಘೋಷಣೆ!




➤ ಪಶ್ಚಿಮ ಬಂಗಾಳದ ನೂತನ ಸರ್ಕಾರವು ತನ್ನ 2026-27ನೇ ಹಣಕಾಸು ಸಾಲಿನ ಮಹತ್ವಾಕಾಂಕ್ಷೆಯ ಆಯವ್ಯಯವನ್ನು (Budget) ಮಂಡಿಸಿದೆ. ರಾಜ್ಯ ವಿಧಾನಸಭೆಯಲ್ಲಿ ಗೌರವಾನ್ವಿತ ಹಣಕಾಸು ಸಚಿವ ಸ್ವಪನ್ ದಾಸ್‌ಗುಪ್ತಾ ಅವರು ₹4.38 ಲಕ್ಷ ಕೋಟಿ ಗಾತ್ರದ ಬಜೆಟ್ ಅನ್ನು ಮಂಡಿಸಿದ್ದು, ಉದ್ಯೋಗ ಸೃಷ್ಟಿ, ಮೂಲಸೌಕರ್ಯ ಅಭಿವೃದ್ಧಿ ಮತ್ತು ಮಹಿಳಾ ಕಲ್ಯಾಣಕ್ಕೆ ಹೆಚ್ಚಿನ ಒತ್ತು ನೀಡಿದ್ದಾರೆ.

➤ **ಉದ್ಯೋಗ ಸೃಷ್ಟಿ ಮತ್ತು ನೌಕರರ ಕಲ್ಯಾಣ (Employment & Employee Welfare)**

1 ಲಕ್ಷ ಸರ್ಕಾರಿ ಉದ್ಯೋಗಗಳು: ಬಜೆಟ್‌ನ ಅತ್ಯಂತ ದೊಡ್ಡ ಘೋಷಣೆಯೆಂದರೆ ರಾಜ್ಯದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಒಟ್ಟು 1 ಲಕ್ಷ ಸರ್ಕಾರಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.
ಮಹಿಳಾ ಮೀಸಲಾತಿ: ರಾಜ್ಯ ಸರ್ಕಾರಿ ಹುದ್ದೆಗಳ ನೇಮಕಾತಿಯಲ್ಲಿ ಮಹಿಳೆಯರಿಗೆ ಶೇಕಡಾ 33 ರಷ್ಟು (33%) ಮೀಸಲಾತಿಯನ್ನು ಘೋಷಿಸಲಾಗಿದೆ.
ತುಟ್ಟಿಭತ್ಯೆ (DA) ಹೆಚ್ಚಳ: ಸರ್ಕಾರಿ ನೌಕರರಿಗೆ ಪ್ರಸ್ತುತ ಇರುವ 18% ರಷ್ಟು DA ಜೊತೆಗೆ ಹೆಚ್ಚುವರಿ 20% ತುಟ್ಟಿಭತ್ಯೆಯನ್ನು ಹೆಚ್ಚಿಸಲಾಗಿದೆ. ಇದರಿಂದ ಒಟ್ಟು DA 38% ಕ್ಕೆ ಏರಿಕೆಯಾಗಲಿದೆ (ಅಕ್ಟೋಬರ್ 1, 2026 ರಿಂದ ಅನ್ವಯ). ಪಿಂಚಣಿದಾರರಿಗೂ 20% ಹೆಚ್ಚುವರಿ ತುಟ್ಟಿ ಪರಿಹಾರ (DR) ಸಿಗಲಿದೆ.

➤ **ಬೃಹತ್ ಮೂಲಸೌಕರ್ಯ ಯೋಜನೆಗಳು (Infrastructure Development):**

ಕೋಲ್ಕತ್ತಾ ಬಳಿ ಹೊಸ ವಿಮಾನ ನಿಲ್ದಾಣ: ಕೋಲ್ಕತ್ತಾದ ನೇತಾಜಿ ಸುಭಾಷ್ ಚಂದ್ರ ಬೋಸ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ದಟ್ಟಣೆಯನ್ನು ಕಡಿಮೆ ಮಾಡಲು ಕಲ್ಯಾಣಿ (Kalyani) ಬಳಿ 1,000 ದಿಂದ 1,500 ಎಕರೆ ಜಾಗದಲ್ಲಿ ಎರಡನೇ ಗ್ರೀನ್‌ಫೀಲ್ಡ್ ವಿಮಾನ ನಿಲ್ದಾಣವನ್ನು ನಿರ್ಮಿಸಲಾಗುವುದು.
ಆಳ ಸಮುದ್ರ ಬಂದರು (Deep-Sea Port): ಪುರ್ಬಾ ಮೇದಿನಿಪುರದ ದಾದನ್‌ಪಾತ್ರಬಾರ್‌ನಲ್ಲಿ ಹೊಸ ಆಳ ಸಮುದ್ರ ಬಂದರು ಸ್ಥಾಪನೆಗೆ ಚಾಲನೆ ನೀಡಲಾಗಿದೆ.
ಮೆಟ್ರೋ ರೈಲು ಸೇವೆ ವಿಸ್ತರಣೆ: ದುರ್ಗಾಪುರ, ಅಸನ್ಸೋಲ್ ಮತ್ತು ಸಿಲಿಗುರಿ ನಗರಗಳಲ್ಲಿ ಮೆಟ್ರೋ ರೈಲು ಸೇವೆಗಳಿಗಾಗಿ ಸಮೀಕ್ಷೆ ನಡೆಸಲು ಪ್ರಸ್ತಾಪಿಸಲಾಗಿದೆ.
ಉತ್ತರ ಬಂಗಾಳದಲ್ಲಿ IIT ಮತ್ತು IIM: ಪ್ರಾದೇಶಿಕ ಶಿಕ್ಷಣ ಮತ್ತು ಸಂಶೋಧನೆಯನ್ನು ಉತ್ತೇಜಿಸಲು ಉತ್ತರ ಬಂಗಾಳದಲ್ಲಿ ಹೊಸದಾಗಿ ಐಐಟಿ (IIT) ಮತ್ತು ಐಐಎಂ (IIM) ಸಂಸ್ಥೆಗಳನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ.

➤ **ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ ಯೋಜನೆಗಳು (Welfare Schemes)**

ಅನ್ನಪೂರ್ಣ ಯೋಜನೆ (Annapurna Yojana): ಈ ಹಿಂದಿನ 'ಲಕ್ಷ್ಮೀರ್ ಭಂಡಾರ್' ಯೋಜನೆಯನ್ನು ಬದಲಾಯಿಸಿ, ಮಹಿಳೆಯರಿಗೆ ಹೆಚ್ಚಿನ ಆರ್ಥಿಕ ನೆರವು ನೀಡುವ 'ಅನ್ನಪೂರ್ಣ ಯೋಜನೆ' ಜಾರಿಗೆ ತರಲಾಗಿದ್ದು, ಇದಕ್ಕೆ ₹36,000 ಕೋಟಿ ಮೀಸಲಿಡಲಾಗಿದೆ.
ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ: ಮಹಿಳೆಯರಿಗಾಗಿ ಉಚಿತ ಬಸ್ ಸೇವೆ ಕಲ್ಪಿಸಲು ₹550 ಕೋಟಿ ಹಂಚಿಕೆ ಮಾಡಲಾಗಿದೆ.
ವಿದ್ಯಾರ್ಥಿಗಳಿಗೆ ಧನಸಹಾಯ: ಸರ್ಕಾರಿ ಕಾಲೇಜುಗಳಲ್ಲಿ ಓದುತ್ತಿರುವ ಅವಿವಾಹಿತ ವಿದ್ಯಾರ್ಥಿನಿಯರಿಗೆ ₹50,000 ಮತ್ತು ಸಾಮಾನ್ಯ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಉತ್ತೇಜಿಸಲು ₹30,000 ರಷ್ಟು ಏಕಕಾಲದ ಆರ್ಥಿಕ ನೆರವು ಘೋಷಿಸಲಾಗಿದೆ.
ಗಿಗಾ ಕಾರ್ಮಿಕರು ಮತ್ತು ವಲಸಿಗರು: ಗಿಗ್ ವರ್ಕರ್ಸ್ (Gig Workers) ಕಲ್ಯಾಣಕ್ಕಾಗಿ ಪ್ರತ್ಯೇಕ ಮಂಡಳಿ ಹಾಗೂ ವಲಸೆ ಕಾರ್ಮಿಕರಿಗೆ 'ಆಯುಷ್ಮಾನ್ ಭಾರತ್' ಆರೋಗ್ಯ ಕಾರ್ಡ್‌ಗಳನ್ನು ನೀಡಲಾಗುವುದು.

➤ **ಪ್ರಮುಖ ಇಲಾಖಾವಾರು ಬಜೆಟ್ ಹಂಚಿಕೆ:**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ಸಾಮಾಜಿಕ ಕಲ್ಯಾಣ: ₹52,308.50 ಕೋಟಿ
ಪಂಚಾಯತ್ ಮತ್ತು ಗ್ರಾಮೀಣಾಭಿವೃದ್ಧಿ: ₹51,836.55 ಕೋಟಿ
ಶಾಲಾ ಶಿಕ್ಷಣ ಇಲಾಖೆ: ₹44,948.21 ಕೋಟಿ

## ಎಫ್‌ಐಎಚ್(FIH) ನೇಷನ್ಸ್ ಕಪ್ 2026 ಪ್ರಶಸ್ತಿ ಗೆದ್ದ ಭಾರತೀಯ ಮಹಿಳಾ ಹಾಕಿ ತಂಡ!




➤ ಕ್ರೀಡಾ ಜಗತ್ತಿನಲ್ಲಿ ಭಾರತೀಯ ಮಹಿಳಾ ಹಾಕಿ ತಂಡವು ಮತ್ತೊಂದು ಐತಿಹಾಸಿಕ ಸಾಧನೆ ಮಾಡಿದೆ. ಭಾನುವಾರ(21-06-2026) ನಡೆದ ರೋಮಾಂಚನಕಾರಿ ಫೈನಲ್ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡವನ್ನು ಮಣಿಸಿದ ಭಾರತ ತಂಡ, ಎಫ್‌ಐಎಚ್ ನೇಷನ್ಸ್ ಕಪ್ 2026 (FIH Nations Cup 2026) ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿದೆ. ಈ ಮಹತ್ವದ ಗೆಲುವಿನೊಂದಿಗೆ ಭಾರತೀಯ ತಂಡವು ಪ್ರತಿಷ್ಠಿತ ಎಫ್‌ಐಎಚ್ ಪ್ರೊ ಲೀಗ್‌ಗೆ (FIH Pro League) ಪ್ರಮೋಷನ್ (ಬಡ್ತಿ) ಪಡೆದುಕೊಂಡಿದೆ.

➤ ಫೈನಲ್ ಪಂದ್ಯದ ಆರಂಭದಿಂದಲೇ ಭಾರತೀಯ ಆಟಗಾರ್ತಿಯರು ಅದ್ಭುತ ರಕ್ಷಣಾತ್ಮಕ ಮತ್ತು ಆಕ್ರಮಣಕಾರಿ ಆಟವನ್ನು ಪ್ರದರ್ಶಿಸಿದರು.
ಪ್ರಮುಖ ಗೋಲುಗಳು: ಪಂದ್ಯದ ಮೊದಲ ಕ್ವಾರ್ಟರ್‌ನಲ್ಲಿಯೇ ಭಾರತದ ಪರ ನವನೀತ್ ಕೌರ್ ಮತ್ತು ಸುನೇಲಿತಾ ಟೊಪ್ಪೊ ಅವರು ತಲಾ ಒಂದು ಗೋಲು ಗಳಿಸಿ ತಂಡಕ್ಕೆ 2-0 ಮುನ್ನಡೆ ತಂದುಕೊಟ್ಟರು.
ಅದ್ಭುತ ಡಿಫೆನ್ಸ್: ನ್ಯೂಜಿಲೆಂಡ್ ತಂಡವು ಪಂದ್ಯದುದ್ದಕ್ಕೂ ತಿರುಗಿಬೀಳಲು ಪ್ರಯತ್ನಿಸಿದರೂ, ಭಾರತದ ಬಲಿಷ್ಠ ರಕ್ಷಣಾ ಕೋಟೆ ಮತ್ತು ನಾಯಕಿ ಕಮ್ ಗೋಲ್‌ಕೀಪರ್ ಸವಿತಾ ಪುನಿಯಾ ಅವರ ಅದ್ಭುತ ಪ್ರದರ್ಶನದಿಂದಾಗಿ ಎದುರಾಳಿಗಳಿಗೆ ಯಾವುದೇ ಗೋಲು ಗಳಿಸಲು ಸಾಧ್ಯವಾಗಲಿಲ್ಲ. ಅಂತಿಮವಾಗಿ ಭಾರತ 2-0 ಅಂತರದಲ್ಲಿ ಜಯಭೇರಿ ಬಾರಿಸಿತು.

➤ ಟೂರ್ನಿಯಲ್ಲಿ ಭಾರತದ ಅಜೇಯ ಜಯಯಾತ್ರೆ: ಈ ಬಾರಿಯ ನೇಷನ್ಸ್ ಕಪ್‌ನಲ್ಲಿ ಭಾರತ ತಂಡವು ಒಂದೂ ಪಂದ್ಯವನ್ನು ಸೋಲದೆ ಅಜೇಯವಾಗಿ ಪ್ರಶಸ್ತಿ ಗೆದ್ದಿರುವುದು ವಿಶೇಷ.

ಪೂಲ್ ಹಂತ (Pool A Matches): ಯುಎಸ್‌ಎ (3-2), ಜಪಾನ್ (2-1), ಮತ್ತು ಉರುಗ್ವೆ (3-2) ತಂಡಗಳ ವಿರುದ್ಧ ಗೆಲುವು.
ಸೆಮಿಫೈನಲ್ (Semi-Final): ಚಿಲಿ ತಂಡದ ವಿರುದ್ಧ 6-0 ಅಂತರದ ಭರ್ಜರಿ ಜಯ.
ಫೈನಲ್ (Final): ನ್ಯೂಜಿಲೆಂಡ್ ವಿರುದ್ಧ 2-0 ಅಂತರದ ಐತಿಹಾಸಿಕ ಗೆಲುವು.
➤ ಎಫ್‌ಐಎಚ್ (FIH - International Hockey Federation) ಅಂತರರಾಷ್ಟ್ರೀಯ ಹಾಕಿ ಸಂಸ್ಥೆಯಾಗಿದ್ದು, ಇದರ ಪ್ರಧಾನ ಕಚೇರಿ ಸ್ವಿಟ್ಜರ್‌ಲ್ಯಾಂಡ್‌ನ ಲೌಸೇನ್ (Lausanne) ನಲ್ಲಿದೆ.




## ದೇಶದಲ್ಲಿ ಹೊಸ ಇತಿಹಾಸ ಸೃಷ್ಟಿಸಿದ ಅಂಗದಾನ ಅಭಿಯಾನ; 5 ಲಕ್ಷ ದಾಟಿದ ಪ್ರತಿಜ್ಞೆಗಳ ಸಂಖ್ಯೆ!




➤ ಭಾರತದ ಆರೋಗ್ಯ ಕ್ಷೇತ್ರದಲ್ಲಿ ಮತ್ತೊಂದು ಮಹತ್ವದ ಮೈಲಿಗಲ್ಲು ಸ್ಥಾಪಿತವಾಗಿದೆ. ದೇಶಾದ್ಯಂತ ಅಂಗದಾನ ಚಳವಳಿಗೆ ಅಭೂತಪೂರ್ವ ಬೆಂಬಲ ವ್ಯಕ್ತವಾಗುತ್ತಿದ್ದು, ಆನ್‌ಲೈನ್ ಪೋರ್ಟಲ್ ಮೂಲಕ ಅಂಗದಾನ ಮಾಡಲು ಪ್ರತಿಜ್ಞೆ (Organ Donation Pledges) ಮಾಡಿದ ನಾಗರಿಕರ ಸಂಖ್ಯೆ ಭರ್ಜರಿಯಾಗಿ 5 ಲಕ್ಷದ ಗಡಿಯನ್ನು ದಾಟಿದೆ.
➤ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಅಡಿಯಲ್ಲಿ ಬರುವ 'ರಾಷ್ಟ್ರೀಯ ಅಂಗ ಮತ್ತು ಅಂಗಾಂಶ ಕಸಿ ಸಂಸ್ಥೆ' (NOTTO) ಈ ಐತಿಹಾಸಿಕ ಸಾಧನೆಯನ್ನು ಅಧಿಕೃತವಾಗಿ ಪ್ರಕಟಿಸಿದೆ. ಸಾರ್ವಜನಿಕರಲ್ಲಿ ಮೂಡುತ್ತಿರುವ ಜಾಗೃತಿ, ಮಾನವೀಯತೆ ಮತ್ತು ಸಾಮಾಜಿಕ ಜವಾಬ್ದಾರಿಗೆ ಈ ಅಂಕಿ-ಅಂಶಗಳು ಸಾಕ್ಷಿಯಾಗಿವೆ.
ಪ್ರಮುಖ ಮೈಲಿಗಲ್ಲು: ಭಾರತದಲ್ಲಿ ಅಧಿಕೃತ ಅಂಗದಾನ ಪ್ರತಿಜ್ಞೆಗಳ ಸಂಖ್ಯೆ 5 ಲಕ್ಷ ದಾಟಿದೆ.
ನೋಂದಣಿ ಪೋರ್ಟಲ್: ಆಧಾರ್ ಆಧಾರಿತ notto.abdm.gov.in ಪೋರ್ಟಲ್ (Ayushman Bharat Digital Mission ಅಡಿಯಲ್ಲಿ ಕಾರ್ಯನಿರ್ವಹಿಸುತ್ತದೆ).
ಸಂಘಟನೆ: ರಾಷ್ಟ್ರೀಯ ಅಂಗ ಮತ್ತು ಅಂಗಾಂಶ ಕಸಿ ಸಂಸ್ಥೆ (NOTTO - National Organ and Tissue Transplant Organization).
ರಾಷ್ಟ್ರೀಯ ಅಭಿಯಾನ: 'ಆಯುಷ್ಮಾನ್ ಭವ' ಮತ್ತು 'ಅಂಗದಾನ ಜನ್ ಜಾಗೃತಿ ಅಭಿಯಾನ' (ಅಂಗದಾನ - ಜೀವನ್ ಸಂಜೀವಿನಿ ಅಭಿಯಾನ).
ಭಾರತೀಯ ಅಂಗದಾನ ದಿನ (Indian Organ Donation Day): ಪ್ರತಿ ವರ್ಷ ಆಗಸ್ಟ್ 3 ರಂದು ಆಚರಿಸಲಾಗುತ್ತದೆ.

➤ **ಈ ಮಹತ್ವದ ಸಾಧನೆಗೆ ಕಾರಣ:**

ಪ್ರಧಾನಿ ಮೋದಿಯವರ 'ಮನ್ ಕಿ ಬಾತ್' ಕರೆ: ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ತಮ್ಮ 'ಮನ್ ಕಿ ಬಾತ್' ರೇಡಿಯೋ ಕಾರ್ಯಕ್ರಮದ ಮೂಲಕ ದೇಶದ ಜನತೆಗೆ ಅಂಗದಾನ ಮಾಡುವಂತೆ ಸತತವಾಗಿ ಪ್ರೇರೇಪಿಸುತ್ತಾ ಬಂದಿದ್ದಾರೆ. ಬ್ರೇನ್ ಡೆಡ್ (ಮಿದುಳು ನಿಷ್ಕ್ರಿಯ) ಆದ ವ್ಯಕ್ತಿಗಳ ಅಂಗದಾನದಿಂದ ಹೇಗೆ 8 ರಿಂದ 9 ಜನರ ಜೀವ ಉಳಿಸಬಹುದು ಎಂಬುದನ್ನು ಅವರು ಜನರಿಗೆ ಮನವರಿಕೆ ಮಾಡಿಕೊಟ್ಟಿದ್ದರು.
ಆಧಾರ್ ಆಧಾರಿತ ಸರಳ ನೋಂದಣಿ: ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರ (NHA) ಅಭಿವೃದ್ಧಿಪಡಿಸಿರುವ ಆನ್‌ಲೈನ್ ಪೋರ್ಟಲ್ ಮೂಲಕ ಕೇವಲ ಆಧಾರ್ ಸಂಖ್ಯೆ ಮತ್ತು ಅಬಾ (ABHA ID) ಕಾರ್ಡ್ ಬಳಸಿ ಕೇವಲ 2 ನಿಮಿಷಗಳಲ್ಲಿ ಸಾರ್ವಜನಿಕರು ಡಿಜಿಟಲ್ ಪ್ರತಿಜ್ಞೆ ತೆಗೆದುಕೊಳ್ಳಲು ವ್ಯವಸ್ಥೆ ಕಲ್ಪಿಸಲಾಗಿದೆ. ಇದು ಇಡೀ ಪ್ರಕ್ರಿಯೆಯನ್ನು ಅತ್ಯಂತ ಪಾರದರ್ಶಕ ಹಾಗೂ ಸುಲಭವಾಗಿಸಿದೆ.
ಆಯುಷ್ಮಾನ್ ಭವ ಮತ್ತು ಸೇವಾ ಪಟಾಲಂ ಅಭಿಯಾನ: ಗ್ರಾಮೀಣ ಮಟ್ಟದಲ್ಲಿ ಆರೋಗ್ಯ ಮೇಳಗಳು ಹಾಗೂ ಗ್ರಾಮ ಪಂಚಾಯತ್ ಮಟ್ಟದಲ್ಲಿ 'ಆಯುಷ್ಮಾನ್ ಸಭೆ'ಗಳನ್ನು ನಡೆಸಿ ಸಾರ್ವಜನಿಕರಲ್ಲಿ ಮೂಡಿಸಲಾದ ಜಾಗೃತಿ ಈ ಯಶಸ್ಸಿಗೆ ಪ್ರಮುಖ ಕಾರಣವಾಗಿದೆ.
➤ ಭಾರತದಲ್ಲಿ 18 ವರ್ಷ ತುಂಬಿದ ಯಾವುದೇ ಆರೋಗ್ಯವಂತ ನಾಗರಿಕರು ಅಂಗದಾನದ ಪ್ರತಿಜ್ಞೆ ಮಾಡಬಹುದು; ವ್ಯಕ್ತಿ 'ಬ್ರೇನ್ ಡೆಡ್' ಆದಾಗ ಹೃದಯ, ಮೂತ್ರಪಿಂಡಗಳಂತಹ ಪ್ರಮುಖ ಅಂಗಗಳನ್ನು ಹಾಗೂ ಸ್ವಾಭಾವಿಕವಾಗಿ ಮರಣ ಹೊಂದಿದಾಗ ಕಣ್ಣು, ಚರ್ಮದಂತಹ ಅಂಗಾಂಶಗಳನ್ನು ದಾನ ಮಾಡಲು ಅವಕಾಶವಿರುತ್ತದೆ.
ಸಹಾಯವಾಣಿ ಸಂಖ್ಯೆ: ಅಂಗದಾನದ ಬಗ್ಗೆ ಮಾಹಿತಿ ಪಡೆಯಲು ಕೇಂದ್ರ ಸರ್ಕಾರವು 1800-11-4770 ಎಂಬ 24x7 ಉಚಿತ ಸಹಾಯವಾಣಿಯನ್ನು ಸಾರ್ವಜನಿಕರಿಗೆ ಮುಕ್ತವಾಗಿಸಿದೆ.
➤ ಭಾರತದಲ್ಲಿ ಅಂಗದಾನದ ಪ್ರಸ್ತುತ ಸ್ಥಿತಿ: NOTTO ನಿರ್ದೇಶಕರಾದ ಡಾ. ಅನಿಲ್ ಕುಮಾರ್ ಅವರ ಪ್ರಕಾರ, ದೇಶದಲ್ಲಿ ಅಂಗಾಂಗ ವೈಫಲ್ಯದಿಂದ ಬಳಲುತ್ತಿರುವ ರೋಗಿಗಳ ಸಂಖ್ಯೆ ಹೆಚ್ಚುತ್ತಿದೆ. ಆದರೆ ದಾನಿಗಳ ಲಭ್ಯತೆ ಕಡಿಮೆ ಇರುವುದರಿಂದ ಬೇಡಿಕೆ ಮತ್ತು ಪೂರೈಕೆಯ ನಡುವೆ ದೊಡ್ಡ ಕಂದಕವಿದೆ. ಈ 5 ಲಕ್ಷ ಪ್ರತಿಜ್ಞೆಗಳ ಮೈಲಿಗಲ್ಲು ಭವಿಷ್ಯದಲ್ಲಿ ಸಾವಿನೊಂದಿಗೆ ಹೋರಾಡುತ್ತಿರುವ ಸಾವಿರಾರು ಜನರಿಗೆ ಮರುಜೀವ ನೀಡುವ ಭರವಸೆ ಮೂಡಿಸಿದೆ. ಅಲ್ಲದೆ, ಕಳೆದ ವರ್ಷ (2024-25) ಭಾರತದಲ್ಲಿ ದಾಖಲೆಯ 18,900ಕ್ಕೂ ಹೆಚ್ಚು ಅಂಗಾಂಗ ಕಸಿ (Transplants) ಪ್ರಕ್ರಿಯೆಗಳನ್ನು ಯಶಸ್ವಿಯಾಗಿ ನಡೆಸಲಾಗಿದೆ.

## ಪರ್ಯಾಯ ಹೂಡಿಕೆ ನಿಧಿಗಳಿಗೆ (AIF) ಸೆಬಿಯ ಹೊಸ ಗರುಡಾ ನಿಯಮಗಳು




➤ ಭಾರತೀಯ ಬಂಡವಾಳ ಮಾರುಕಟ್ಟೆ ನಿಯಂತ್ರಕ ಸಂಸ್ಥೆಯಾದ ಸೆಬಿ (Securities and Exchange Board of India - SEBI) ಇತ್ತೀಚೆಗೆ ನಡೆದ ತನ್ನ ಆಡಳಿತ ಮಂಡಳಿ ಸಭೆಯಲ್ಲಿ ಭಾರತೀಯ ಹಣಕಾಸು ವಲಯದಲ್ಲಿ ಹೂಡಿಕೆಯನ್ನು ಉತ್ತೇಜಿಸಲು ಒಂದು ಕ್ರಾಂತಿಕಾರಿ ನಿರ್ಧಾರವನ್ನು ಕೈಗೊಂಡಿದೆ. ಪರ್ಯಾಯ ಹೂಡಿಕೆ ನಿಧಿಗಳ (Alternative Investment Funds - AIF) ಯೋಜನೆಗಳನ್ನು ಶೀಘ್ರವಾಗಿ ಮಾರುಕಟ್ಟೆಗೆ ಬಿಡುಗಡೆ ಮಾಡಲು 'ಗರುಡ' (GARUDA) ಎಂಬ ಹೊಸ 'ಗ್ರೀನ್ ಚಾನೆಲ್' (Green Channel) ವ್ಯವಸ್ಥೆಗೆ ಅನುಮೋದನೆ ನೀಡಿದೆ.

➤ **GARUDA ಎಂದರೆ "Green-Channel: AIF Rollout Upon Document Acknowledgement" ಎಂದರ್ಥ.** ಸರಳವಾಗಿ ಹೇಳುವುದಾದರೆ, ಅಗತ್ಯ ದಾಖಲೆಗಳನ್ನು ಸಲ್ಲಿಕೆ ಮಾಡಿದ ತಕ್ಷಣವೇ ಡಿಜಿಟಲ್ ಮಾನ್ಯತೆಯ ಆಧಾರದ ಮೇಲೆ ಹೂಡಿಕೆ ಯೋಜನೆಗಳನ್ನು ವೇಗವಾಗಿ ಪ್ರಾರಂಭಿಸಲು ಸೆಬಿ ರೂಪಿಸಿರುವ ಸ್ವಯಂಚಾಲಿತ ವ್ಯವಸ್ಥೆಯಾಗಿದೆ. ಈ ಹಿಂದೆ ಮಲೇಷ್ಯಾ ದೇಶದ ಸೆಕ್ಯುರಿಟೀಸ್ ಮಾರುಕಟ್ಟೆಯಲ್ಲಿ ಜಾರಿಯಲ್ಲಿದ್ದ 'ಲಾಡ್ಜ್ ಅಂಡ್ ಲಾಂಚ್' (Lodge-and-Launch) ಮಾದರಿಯನ್ನು ಆಧರಿಸಿ ಭಾರತದಲ್ಲಿ ಇದನ್ನು ತರಲಾಗಿದೆ.

➤ **ಗರುಡ ಫ್ರೇಮ್‌ವರ್ಕ್‌ನ ಪ್ರಮುಖ ಮುಖ್ಯಾಂಶಗಳು:**

ಸಮಯದ ಉಳಿತಾಯ (Launch Timeline Reduced): ಈ ಹಿಂದೆ ಸಾಮಾನ್ಯ AIF ಯೋಜನೆಗಳನ್ನು ಮಾರುಕಟ್ಟೆಗೆ ತರಲು ಕನಿಷ್ಠ 30 ದಿನಗಳ ಕಾಲ ಕಾಯಬೇಕಾಗುತ್ತಿತ್ತು. ಆದರೆ ಹೊಸ ಗರುಡ ನಿಯಮಾವಳಿಗಳ ಅನ್ವಯ, ರೆಗ್ಯುಲರ್ AIF ಯೋಜನೆಗಳನ್ನು ಕೇವಲ 10 ಕೆಲಸದ ದಿನಗಳೊಳಗೆ (10 Working Days) ಪ್ರಾರಂಭಿಸಬಹುದು.

ಏಂಜೆಲ್ ಫಂಡ್‌ಗಳಿಗೆ ತಕ್ಷಣದ ಅನುಮತಿ (Immediate Launch for Angel Funds): ಮಾನ್ಯತೆ ಪಡೆದ ಹೂಡಿಕೆದಾರರನ್ನು (Accredited Investors) ಮಾತ್ರ ಹೊಂದಿರುವ ಯೋಜನೆಗಳು ಮತ್ತು ಏಂಜೆಲ್ ಫಂಡ್‌ಗಳಿಗೆ (Angel Funds) ಸೆಬಿಯಿಂದ ನೋಂದಣಿ ಸಿಕ್ಕ ತಕ್ಷಣ ಅಥವಾ ಅಗತ್ಯ ದಾಖಲೆಗಳನ್ನು ಸಲ್ಲಿಸಿದ ತಕ್ಷಣವೇ ಯಾವುದೇ ಕಾಯುವಿಕೆ ಇಲ್ಲದೆ ತಕ್ಷಣವೇ ಯೋಜನೆ ಲಾಂಚ್ ಮಾಡಲು ಅವಕಾಶ ನೀಡಲಾಗಿದೆ.

ಮರ್ಚೆಂಟ್ ಬ್ಯಾಂಕರ್ ಕಡ್ಡಾಯದ ವಿನಾಯಿತಿ: ಮಾನ್ಯತೆ ಪಡೆದ ಹೂಡಿಕೆದಾರರ ಯೋಜನೆಗಳಿಗೆ ಇನ್ನು ಮುಂದೆ ಮರ್ಚೆಂಟ್ ಬ್ಯಾಂಕರ್ (Merchant Banker) ಮೂಲಕವೇ ಖಾಸಗಿ ಪ್ಲೇಸ್‌ಮೆಂಟ್ ಮೆಮೊರಾಂಡಮ್ (PPM) ಸಲ್ಲಿಸಬೇಕೆಂಬ ಕಡ್ಡಾಯ ನಿಯಮ ಇರುವುದಿಲ್ಲ. ಇದರಿಂದ ಹೂಡಿಕೆ ನಿಧಿಗಳ ನಿರ್ವಹಣಾ ವೆಚ್ಚ ಭಾರಿ ಪ್ರಮಾಣದಲ್ಲಿ ಕಡಿಮೆಯಾಗಲಿದೆ.

ಸ್ವಯಂ ದೃಢೀಕರಣ (Self-Certification): ಹೊಸ ನಿಯಮದಡಿ ಫಂಡ್ ಮ್ಯಾನೇಜರ್‌ಗಳು ಮತ್ತು ನಿಯೋಜಿತ ಅಧಿಕಾರಿಗಳು ನಿಯಮಾವಳಿಗಳ ಅನುಸರಣೆಯನ್ನು ತಾವೇ ಸ್ವಯಂ ದೃಢೀಕರಿಸಲು (Self-certify) ಅವಕಾಶ ಕಲ್ಪಿಸಲಾಗಿದೆ. ಇದರಿಂದ ಆಡಳಿತಾತ್ಮಕ ವಿಳಂಬ ತಪ್ಪುತ್ತದೆ.

➤ **AIF ಯೋಜನೆಗಳ ಹೊಸ ವರ್ಗೀಕರಣ:**

ಲಾರ್ಜ್ ವ್ಯಾಲ್ಯೂ ಫಂಡ್‌ಗಳು: ಇವುಗಳಲ್ಲಿ ಪ್ರತಿ ಹೂಡಿಕೆದಾರರು ಕನಿಷ್ಠ 25 ಕೋಟಿ ರೂ. ಹೂಡಿಕೆ ಮಾಡುವುದು ಕಡ್ಡಾಯವಾಗಿರುತ್ತದೆ.

ಅಕ್ರೆಡಿಟೆಡ್ ಇನ್ವೆಸ್ಟರ್-ಓನ್ಲಿ ಸ್ಕೀಮ್ಸ್: ಅತ್ಯಂತ ಅನುಭವಿ ಹಾಗೂ ಆರ್ಥಿಕವಾಗಿ ಬಲಿಷ್ಠ ಹೂಡಿಕೆದಾರರಿಗಾಗಿ ಇರುವ ಯೋಜನೆಗಳಿವು.

ಏಂಜೆಲ್ ಫಂಡ್‌ಗಳು (Angel Funds): ನವೋದ್ಯಮಗಳಿಗೆ (Startups) ಆರಂಭಿಕ ಹಂತದಲ್ಲಿ ಬಂಡವಾಳ ಒದಗಿಸುವ ನಿಧಿಗಳು.

ರೆಗ್ಯುಲರ್ ಸ್ಕೀಮ್ಸ್ (Regular Schemes): ಸಾಮಾನ್ಯ ಹೂಡಿಕೆದಾರರನ್ನು ಒಳಗೊಂಡ ಇತರ ಎಐಎಫ್ ಯೋಜನೆಗಳು.

## ಅಮೆರಿಕ-ಇರಾನ್ ಜಂಟಿ ಕಾರ್ಯಸೂಚಿಗೆ ಒಪ್ಪಿಗೆ: 60 ದಿನಗಳಲ್ಲಿ ಜಾಗತಿಕ ಯುದ್ಧ ಭೀತಿಗೆ ಪೂರ್ಣ ವಿರಾಮ




➤ ಮೂರನೇ ಮಹಾಯುದ್ಧದ ಭೀತಿಯತ್ತ ತಳ್ಳುತ್ತಿದ್ದ ಅಮೆರಿಕ ಮತ್ತು ಇರಾನ್ ನಡುವಿನ ದೀರ್ಘಕಾಲದ ಸಂಘರ್ಷಕ್ಕೆ ಕೊನೆಗೂ ರಾಜತಾಂತ್ರಿಕ ಮಟ್ಟದಲ್ಲಿ ಪೂರ್ಣ ವಿರಾಮ ಬೀಳುವ ಲಕ್ಷಣಗಳು ಗೋಚರಿಸುತ್ತಿವೆ. ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ನಡೆದ ಎರಡು ದಿನಗಳ ಉನ್ನತ ಮಟ್ಟದ ರಹಸ್ಯ ಹಾಗೂ ಮಹತ್ವದ ಮಾತುಕತೆಯ ಬಳಿಕ, ಮುಂದಿನ 60 ದಿನಗಳ ಒಳಗಾಗಿ ಅಂತಿಮ ಶಾಂತಿ ಒಪ್ಪಂದಕ್ಕೆ ಬರಲು ಉಭಯ ದೇಶಗಳು ಜಂಟಿ ಕಾರ್ಯಸೂಚಿಗೆ (Roadmap) ಒಪ್ಪಿಗೆ ಸೂಚಿಸಿವೆ.

➤ ಜಾಗತಿಕ ರಾಜತಾಂತ್ರಿಕತೆಯಲ್ಲಿ ಅತ್ಯಂತ ಮಹತ್ವದ ತಿರುವು ನೀಡಿರುವ ಈ ಮಾತುಕತೆಗೆ ಮಧ್ಯಸ್ಥಿಕೆ ವಹಿಸಿದ್ದ ಪಾಕಿಸ್ತಾನ ಮತ್ತು ಕತಾರ್ ದೇಶಗಳು ಜಂಟಿ ಪ್ರಕಟಣೆಯನ್ನು ಹೊರಡಿಸಿವೆ.

➤ **ಹರ್ಮುಜ್ ಜಲಸಂಧಿ ಮುಕ್ತ:** ಜಾಗತಿಕ ತೈಲ ಮಾರುಕಟ್ಟೆಗೆ ನಿರಾಳ: ಈ ಒಪ್ಪಂದದ ಅತ್ಯಂತ ಬಹುದೊಡ್ಡ ಯಶಸ್ಸೆಂದರೆ ವಿಶ್ವದ ಅತ್ಯಂತ ಪ್ರಮುಖ ಮತ್ತು ಆಯಕಟ್ಟಿನ ತೈಲ ಸಾರಿಗೆ ಮಾರ್ಗವಾದ 'ಹರ್ಮುಜ್ ಜಲಸಂಧಿ'ಯಲ್ಲಿ (Strait of Hormuz) ವಾಣಿಜ್ಯ ಹಡಗುಗಳ ಸುರಕ್ಷಿತ ಸಂಚಾರಕ್ಕೆ ಹಸಿರು ನಿಶಾನೆ ಸಿಕ್ಕಿರುವುದು.

➤ **ಇಸ್ರೇಲ್ - ಹೆಜ್ಬೊಲ್ಲಾ ಸವಾಲು ಹಾಗೇ ಇದೆ!**

ಒಪ್ಪಂದದ ಅನ್ವಯ ಲೆಬನಾನ್‌ನಲ್ಲಿ ಸದ್ಯಕ್ಕೆ ಸೈನಿಕ ಕಾರ್ಯಾಚರಣೆಗಳನ್ನು ಸ್ಥಗಿತಗೊಳಿಸಲಾಗಿದ್ದರೂ, ಇಸ್ರೇಲ್ ಮತ್ತು ಹೆಜ್ಬೊಲ್ಲಾ (Hezbollah) ಸಂಘಟನೆಗಳು ಈ ಒಪ್ಪಂದದ ನೇರ ಭಾಗವಾಗಿಲ್ಲ. ಇದು ಈ ಶಾಂತಿ ಪ್ರಕ್ರಿಯೆಗೆ ಇರುವ ಬಹುದೊಡ್ಡ ಸವಾಲಾಗಿದೆ.

ಇಸ್ರೇಲ್ ನಿಲುವು: "ನಮ್ಮ ದೇಶದ ಭದ್ರತೆಯ ಬೆದರಿಕೆಗಳು ಸಂಪೂರ್ಣವಾಗಿ ನಿವಾರಣೆಯಾಗುವವರೆಗೂ ದಕ್ಷಿಣ ಲೆಬನಾನ್‌ನಿಂದ ಸೈನ್ಯವನ್ನು ಹಿಂಪಡೆಯುವುದಿಲ್ಲ."

ಹೆಜ್ಬೊಲ್ಲಾ ಪಟ್ಟು: "ಇಸ್ರೇಲ್ ಸೇನೆ ಸಂಪೂರ್ಣವಾಗಿ ಹಿಂದೆ ಸರಿದರೆ ಮಾತ್ರ ನಾವು ದಾಳಿ ನಿಲ್ಲಿಸುತ್ತೇವೆ."

ಆದಾಗ್ಯೂ, ಅಂತಿಮ ಒಪ್ಪಂದವಾಗುವವರೆಗೂ ಈ ಪ್ರಾದೇಶಿಕ ಸಂಘರ್ಷವನ್ನು ಶಮನಗೊಳಿಸಲು ತಮ್ಮ ಮಧ್ಯಸ್ಥಿಕೆ ಮುಂದುವರಿಯಲಿದೆ ಎಂದು ಪಾಕಿಸ್ತಾನ ಮತ್ತು ಕತಾರ್ ತಿಳಿಸಿವೆ.

➤ ನಿಯೋಗದ ನೇತೃತ್ವ ವಹಿಸಿದವರು: ಈ ಐತಿಹಾಸಿಕ ಮಾತುಕತೆಯಲ್ಲಿ ಅಮೆರಿಕದ ಪರವಾಗಿ ಅಲ್ಲಿನ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ (J.D. Vance) ಮತ್ತು ಇರಾನ್ ಪರವಾಗಿ ಅಲ್ಲಿನ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಾಗರ್ ಗಲಿಬಾಫ್ ನಿಯೋಗದ ನೇತೃತ್ವ ವಹಿಸಿದ್ದರು. ಮುಂದಿನ 60 ದಿನಗಳ ಕಟ್ಟುನಿಟ್ಟಿನ ಗಡುವಿನೊಳಗೆ (Timeline) ಒಪ್ಪಂದವನ್ನು ಪೂರ್ಣ ಪ್ರಮಾಣದಲ್ಲಿ ಜಾರಿಗೆ ತರಲು ಉನ್ನತ ಮಟ್ಟದ ವಿಶೇಷ ಕಾರ್ಯಪಡೆಯೊಂದನ್ನು (Special Task Force) ರಚಿಸಲಾಗಿದೆ.

## ಭಾರತೀಯ ಸೇನೆಗೆ ಅಮೆರಿಕ ಬಲ: 4,000 ಕೋಟಿ ರೂ. ವೆಚ್ಚದ 'ಅಪಾಚೆ' ಮತ್ತು 'M777' ಫಿರಂಗಿ ಬಿಡಿಭಾಗ ಪೂರೈಕೆ ಒಪ್ಪಂದಕ್ಕೆ ಅಸ್ತು!




➤ ಭಾರತೀಯ ಸಶಸ್ತ್ರ ಪಡೆಗಳ (Indian Armed Forces) ಯುದ್ಧ ಸಾಮರ್ಥ್ಯ ಮತ್ತು ರಕ್ಷಣಾ ಸಜ್ಜುಗೊಳಿಕೆಯನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಒಂದು ಪ್ರಮುಖ ವಿದ್ಯಮಾನ ನಡೆದಿದೆ. ಭಾರತದ ಬತ್ತಳಿಕೆಯಲ್ಲಿರುವ ಅತ್ಯಾಧುನಿಕ 'ಅಪಾಚೆ' (AH-64E Apache) ಯುದ್ಧ ಹೆಲಿಕಾಪ್ಟರ್‌ಗಳು ಮತ್ತು ಗಡಿಭಾಗದಲ್ಲಿ ಅತಿ ಹೆಚ್ಚು ಬಳಕೆಯಾಗುವ 'M777A2' ಅಲ್ಟ್ರಾ-ಲೈಟ್ ಹವಿಟ್ಸರ್ ಫಿರಂಗಿಗಳ ದೀರ್ಘಕಾಲೀನ ನಿರ್ವಹಣೆ ಹಾಗೂ ಬಿಡಿಭಾಗಗಳ ಪೂರೈಕೆಗೆ ಅಮೆರಿಕ ಸರ್ಕಾರ ಅಧಿಕೃತವಾಗಿ ಒಪ್ಪಿಗೆ ಸೂಚಿಸಿದೆ.

➤ ಸುಮಾರು 482.2s ಮಿಲಿಯನ್ ಡಾಲರ್ (ಭಾರತೀಯ ಕರೆನ್ಸಿಯಲ್ಲಿ ಅಂದಾಜು 4,000 ಕೋಟಿ ರೂಪಾಯಿ) ಮೌಲ್ಯದ ಈ ಪ್ರಸ್ತಾಪಿತ ರಕ್ಷಣಾ ಒಪ್ಪಂದದ ಕುರಿತು ಅಮೆರಿಕದ ರಕ್ಷಣಾ ಭದ್ರತಾ ಸಹಕಾರ ಸಂಸ್ಥೆಯು (DSCA) ಜೂನ್ 2026 ರಲ್ಲಿ ಅಧಿಕೃತ ಅಧಿಸೂಚನೆ ಹೊರಡಿಸಿದೆ. ಇದು ಉಭಯ ದೇಶಗಳ ನಡುವಿನ ಕಾರ್ಯತಂತ್ರದ ಸಹಭಾಗಿತ್ವವನ್ನು ಮತ್ತೊಂದು ಹಂತಕ್ಕೆ ಕೊಂಡೊಯ್ದಿದೆ.

➤ **M777A2 ಹವಿಟ್ಸರ್ ಫಿರಂಗಿ ಒಪ್ಪಂದ:** ಭಾರತೀಯ ಸೇನೆಯಲ್ಲಿರುವ M777A2 ಹವಿಟ್ಸರ್ ಫಿರಂಗಿಗಳ ನಿರ್ವಹಣೆಗಾಗಿ ಒಟ್ಟು 230 ಮಿಲಿಯನ್ ಡಾಲರ್ ಮೊತ್ತವನ್ನು ಹಂಚಿಕೆ ಮಾಡಲಾಗಿದೆ. ಈ ಒಪ್ಪಂದದ ವ್ಯಾಪ್ತಿಯಲ್ಲಿ ಫಿರಂಗಿಗಳಿಗೆ ಅಗತ್ಯವಿರುವ ಬಿಡಿಭಾಗಗಳ ಪೂರೈಕೆ, ದುರಸ್ತಿ ಸೇವೆಗಳು, ಡಿಪೋ ಮಟ್ಟದ ನಿರ್ವಹಣೆ ಮತ್ತು ತಾಂತ್ರಿಕ ನೆರವನ್ನು ನೀಡಲಾಗುತ್ತದೆ. ಜಗತ್ತಿನ ಪ್ರಮುಖ ರಕ್ಷಣಾ ಉತ್ಪಾದನಾ ಸಂಸ್ಥೆಯಾದ ಬಿಎಇ ಸಿಸ್ಟಮ್ಸ್ (BAE Systems) ಇದರ ಪ್ರಮುಖ ಗುತ್ತಿಗೆದಾರರಾಗಿ ಕಾರ್ಯನಿರ್ವಹಿಸಲಿದೆ

➤ AH-64E ಅಪಾಚೆ ಹೆಲಿಕಾಪ್ಟರ್ ಒಪ್ಪಂದ: ಭಾರತೀಯ ವಾಯುಸೇನೆಯ ಅತ್ಯಾಧುನಿಕ AH-64E ಅಪಾಚೆ ಹೆಲಿಕಾಪ್ಟರ್‌ಗಳ ತಾಂತ್ರಿಕ ನೆರವಿಗಾಗಿ 198.2 ಮಿಲಿಯನ್ ಡಾಲರ್ ಮೊತ್ತವನ್ನು ನಿಗದಿಪಡಿಸಲಾಗಿದೆ. ಈ ಒಪ್ಪಂದದ ಅಡಿಯಲ್ಲಿ ಹೆಲಿಕಾಪ್ಟರ್‌ಗಳಿಗೆ ಅಗತ್ಯವಿರುವ ಎಂಜಿನಿಯರಿಂಗ್ ನೆರವು, ಲಾಜಿಸ್ಟಿಕ್ಸ್ (ಪೂರೈಕೆ ವ್ಯವಸ್ಥೆ), ತಾಂತ್ರಿಕ ಪ್ರಕಟಣೆಗಳು ಹಾಗೂ ಭಾರತೀಯ ಸಿಬ್ಬಂದಿಗೆ ತರಬೇತಿಯನ್ನು ನೀಡಲಾಗುವುದು. ಈ ರಕ್ಷಣಾ ವ್ಯವಸ್ಥೆಯ ನಿರ್ವಹಣೆಯ ಜವಾಬ್ದಾರಿಯನ್ನು ಜಾಗತಿಕ ಮುಂಚೂಣಿ ಕಂಪನಿಗಳಾದ ಬೋಯಿಂಗ್ (Boeing) ಮತ್ತು ಲಾಕ್‌ಹೀಡ್ ಮಾರ್ಟಿನ್ (Lockheed Martin) ವಹಿಸಿಕೊಂಡಿವೆ.

➤ ಭಾರತ-ಅಮೆರಿಕ ರಕ್ಷಣಾ ಸಂಬಂಧದ ಭವಿಷ್ಯ: ಭಾರತವು ಅಮೆರಿಕದ ಅತ್ಯಂತ ಪ್ರಮುಖ ರಕ್ಷಣಾ ಪಾಲುದಾರ ರಾಷ್ಟ್ರವಾಗಿದ್ದು (Major Defense Partner), ಭವಿಷ್ಯದ ಪ್ರಾದೇಶಿಕ ಬೆದರಿಕೆಗಳನ್ನು ಎದುರಿಸಲು ಈ ಬಿಡಿಭಾಗ ಒಪ್ಪಂದ ಸಹಕಾರಿಯಾಗಿದೆ. ಈ ಹಿಂದೆಯೂ ಭಾರತವು 2015 ರಲ್ಲಿ ಬೋಯಿಂಗ್ ಸಂಸ್ಥೆಯಿಂದ ಅಪಾಚೆ ಹೆಲಿಕಾಪ್ಟರ್‌ಗಳನ್ನು ಮತ್ತು 2016 ರಲ್ಲಿ ಸುಮಾರು 737 ಮಿಲಿಯನ್ ಡಾಲರ್ ವೆಚ್ಚದಲ್ಲಿ 145 M777 ಹವಿಟ್ಸರ್ ಫಿರಂಗಿಗಳನ್ನು ಖರೀದಿಸಲು ಒಪ್ಪಂದ ಮಾಡಿಕೊಂಡಿತ್ತು. ಪ್ರಸ್ತುತ ಒಪ್ಪಂದವು ಆ ಹಳೆಯ ವ್ಯವಸ್ಥೆಗಳ ಆಯಸ್ಸನ್ನು ಮತ್ತಷ್ಟು ಹೆಚ್ಚಿಸಲಿದೆ.

## ಭಾರತದ ಉದ್ಯೋಗ ಸೃಷ್ಟಿಗೆ ವಿಶ್ವಬ್ಯಾಂಕ್‌ನಿಂದ ₹14,188 ಕೋಟಿ ಆರ್ಥಿಕ ನೆರವು



➤ ಭಾರತದ ಆರ್ಥಿಕ ಬೆಳವಣಿಗೆಗೆ ಮತ್ತಷ್ಟು ವೇಗ ನೀಡಲು ಹಾಗೂ ದೇಶದಲ್ಲಿ ಉದ್ಯೋಗ ಸೃಷ್ಟಿಯನ್ನು ಉತ್ತೇಜಿಸಲು ವಿಶ್ವಬ್ಯಾಂಕ್ (World Bank) ಬರೋಬ್ಬರಿ 1.5 ಬಿಲಿಯನ್ ಡಾಲರ್ (ಸುಮಾರು ₹14,188 ಕೋಟಿ) ಸಾಲದ ನೆರವನ್ನು ಅನುಮೋದಿಸಿದೆ. ವಿಶ್ವಬ್ಯಾಂಕ್‌ನ ಕಾರ್ಯನಿರ್ವಾಹಕ ನಿರ್ದೇಶಕರ ಮಂಡಳಿಯು ಈ ಮಹತ್ವದ ನಿರ್ಧಾರವನ್ನು ಪ್ರಕಟಿಸಿದ್ದು, ಈ ಸಾಲವನ್ನು 'ಅಭಿವೃದ್ಧಿ ನೀತಿ ಹಣಕಾಸು' (Development Policy Financing - DPF) ಕಾರ್ಯಾಚರಣೆಯಡಿಯಲ್ಲಿ ಒದಗಿಸಲಾಗುತ್ತಿದೆ.

➤ **1.1 ಕೋಟಿ ಉದ್ಯೋಗ ಸೃಷ್ಟಿಯ ಗುರಿ:** ವಿಶ್ವಬ್ಯಾಂಕ್ ನೀಡಿರುವ ಮಾಹಿತಿ ಪ್ರಕಾರ, ಮುಂದಿನ ಎರಡು ದಶಕಗಳಲ್ಲಿ (20 ವರ್ಷ) ಭಾರತದ ಶ್ರಮ ಮಾರುಕಟ್ಟೆಗೆ ಪ್ರವೇಶಿಸುವ ಸುಮಾರು 1.1 ಕೋಟಿಗೂ ಹೆಚ್ಚು ಯುವಕರಿಗೆ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ಈ ಆರ್ಥಿಕ ನೆರವು ಪೂರಕವಾಗಲಿದೆ. ಈ ಕಾರ್ಯಕ್ರಮವು ವಿಶ್ವಬ್ಯಾಂಕ್ ಭಾರತದೊಂದಿಗೆ ಹೊಂದಿರುವ ದೇಶದ ಪಾಲುದಾರಿಕೆ ಚೌಕಟ್ಟು (Country Partnership Framework - CPF 2031) ಯೋಜನೆಯೊಂದಿಗೆ ಜೋಡಿಸಲ್ಪಟ್ಟಿದೆ.

➤ **ಉತ್ತೇಜನ ಸಿಗಲಿರುವ ಕ್ಷೇತ್ರಗಳು :**

ರಚನಾತ್ಮಕ ಸುಧಾರಣೆಗಳು: ಸರಕು ಮತ್ತು ಸೇವಾ ತೆರಿಗೆ (GST) ದರಗಳ ಸರಳೀಕರಣ.

ವ್ಯಾಪಾರ ಒಪ್ಪಂದಗಳು: ಮುಕ್ತ ಮತ್ತು ಸುಲಭ ವ್ಯಾಪಾರಕ್ಕೆ ಉತ್ತೇಜನ.

ಉದ್ಯೋಗ ಸೃಷ್ಟಿ: ಖಾಸಗಿ ವಲಯದಲ್ಲಿ ಬಂಡವಾಳ ಹೂಡಿಕೆ ಹೆಚ್ಚಿಸುವ ಮೂಲಕ ಉದ್ಯೋಗಾವಕಾಶಗಳ ವಿಸ್ತರಣೆ.

➤ ಕರ್ನಾಟಕ ಸರ್ಕಾರದ ಸುಗ್ರೀವಾಜ್ಞೆ ಮತ್ತು ಇತರ ರಾಜ್ಯಗಳ ಪಾಠ: ಕಿರು ಹಣಕಾಸು ಸಂಸ್ಥೆಗಳಿಂದ ಗ್ರಾಮೀಣ ಮತ್ತು ಬಡ ಸಾಲಗಾರರಿಗೆ ಆಗುತ್ತಿದ್ದ ಕಿರುಕುಳವನ್ನು ತಡೆಗಟ್ಟಲು ಕರ್ನಾಟಕ ಸರ್ಕಾರವು ಕಳೆದ ವರ್ಷದ ಫೆಬ್ರವರಿಯಲ್ಲಿ ವಿಶೇಷ ಸುಗ್ರೀವಾಜ್ಞೆಯನ್ನು (Ordinance) ಜಾರಿಗೆ ತಂದಿತ್ತು.

ಈ ಸುಗ್ರೀವಾಜ್ಞೆಯ ತಕ್ಷಣದ ಪರಿಣಾಮವಾಗಿ ಕರ್ನಾಟಕದಲ್ಲಿ ಕಿರು ಹಣಕಾಸು ಸಂಸ್ಥೆಗಳ ಸಾಲ ಸಂಗ್ರಹಣೆಯಲ್ಲಿ ಶೇ 5 ರಿಂದ ಶೇ 6 ರಷ್ಟು ಇಳಿಕೆಯಾಗಿತ್ತು.

ಆದರೆ, ಕರ್ನಾಟಕದ ಈ ಕಠಿಣ ಕಾನೂನಿನಿಂದ ಪಾಠ ಕಲಿತ ತಮಿಳುನಾಡು ಮತ್ತು ಬಿಹಾರದಂತಹ ರಾಜ್ಯಗಳು, ತಮ್ಮ ಸಾಲ ಕಾರ್ಯಾಚರಣೆಯ ವಿಧಾನಗಳನ್ನು ಮೊದಲೇ ಬದಲಾಯಿಸಿಕೊಂಡಿದ್ದರಿಂದ ಆ ರಾಜ್ಯಗಳ ಹಣಕಾಸು ಸಂಗ್ರಹಣೆಯ ಮೇಲೆ ಹೆಚ್ಚಿನ ಪರಿಣಾಮ ಬೀರಲಿಲ್ಲ ಎಂದು ಕ್ರಿಸಿಲ್ ವರದಿ ಉಲ್ಲೇಖಿಸಿದೆ.

## ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ರಾಜೀನಾಮೆ ಘೋಷಣೆ



➤ ಜಾಗತಿಕ ರಾಜಕೀಯದಲ್ಲಿ ಇದೀಗ ಭಾರಿ ಸಂಚಲನ ಮೂಡಿಸಿರುವ ಪ್ರಮುಖ ವಿದ್ಯಮಾನವೊಂದರಲ್ಲಿ, ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ (Keir Starmer) ಅವರು ತಮ್ಮ ಪ್ರಧಾನಿ ಹುದ್ದೆ ಹಾಗೂ ಆಡಳಿತಾರೂಢ ಲೇಬರ್ ಪಕ್ಷದ (Labour

Party) ನಾಯಕನ ಸ್ಥಾನಕ್ಕೆ ಜೂನ್ 22ರ ಸೋಮವಾರದಂದು ರಾಜೀನಾಮೆ ಘೋಷಿಸಿದ್ದಾರೆ.

➤ ಕಳೆದ 2024ರ ಸಾರ್ವತ್ರಿಕ ಚುನಾವಣೆಯಲ್ಲಿ ಭರ್ಜರಿ ಬಹುಮತದೊಂದಿಗೆ ಅಧಿಕಾರಕ್ಕೆ ಬಂದಿದ್ದ ಸ್ಟಾರ್ಮರ್, ಕೇವಲ ಎರಡು ವರ್ಷಗಳ ಅವಧಿಯಲ್ಲಿಯೇ ತಮ್ಮ ಸ್ಥಾನವನ್ನು ತ್ಯಜಿಸುವಂತಾಗಿದೆ. ಇತ್ತೀಚಿನ ದಿನಗಳಲ್ಲಿ ಪಕ್ಷದೊಳಗಿನ ತೀವ್ರ ಆಂತರಿಕ ಅಸಮಾಧಾನ ಹಾಗೂ ಉಪಚುನಾವಣೆಯ ಹಿನ್ನಡೆಗಳ ಹಿನ್ನಲೆಯಲ್ಲಿ ಅವರು ಈ ಮಹತ್ವದ ನಿರ್ಧಾರ ಕೈಗೊಂಡಿದ್ದಾರೆ.

**➤ ಸುಗಮ ಅಧಿಕಾರ ಹಸ್ತಾಂತರಕ್ಕೆ ಬದ್ಧ:**

ತಮ್ಮ ರಾಜೀನಾಮೆ ಕುರಿತು ಲಂಡನ್‌ನ 10 ಡೌನಿಂಗ್ ಸ್ಟ್ರೀಟ್ ಪ್ರಧಾನಿ ಅಧಿಕೃತ ನಿವಾಸದ ಹೊರಗೆ ಮಾತನಾಡಿದ ಕಿಯರ್ ಸ್ಟಾರ್ಮರ್, "ದೇಶದ ಹಿತದೃಷ್ಟಿಯಿಂದ ಹಾಗೂ ಲೇಬರ್ ಪಕ್ಷಕ್ಕೆ ನೂತನ ನಾಯಕನನ್ನು ಆಯ್ಕೆ ಮಾಡಲು ಈ ನಿರ್ಧಾರ ಕೈಗೊಂಡಿದ್ದೇನೆ. ಮುಂದಿನ ಸಾರ್ವತ್ರಿಕ ಚುನಾವಣೆಯನ್ನು ಮುನ್ನಡೆಸಲು ನಾನೇ ಸೂಕ್ತ ವ್ಯಕ್ತಿಯೇ ಎಂಬ ಪ್ರಶ್ನೆಗೆ ನನ್ನ ಸಂಸದೀಯ ಪಕ್ಷ ನೀಡಿದ ಉತ್ತರವನ್ನು ಗೌರವಿಸಿ ನಾನು ಈ ಸ್ಥಾನದಿಂದ ಕೆಳಗಿಳಿಯುತ್ತಿದ್ದೇನೆ," ಎಂದು ಭಾವುಕರಾಗಿ ನುಡಿದರು.

ಬ್ರಿಟನ್ ರಾಜ ಕಿಂಗ್ ಚಾರ್ಲ್ಸ್ III ಅವರಿಗೆ ತಮ್ಮ ನಿರ್ಧಾರವನ್ನು ತಿಳಿಸಿರುವುದಾಗಿ ಹೇಳಿದ ಅವರು, ನೂತನ ಪ್ರಧಾನಿ ಮತ್ತು ಪಕ್ಷದ ನಾಯಕರ ಆಯ್ಕೆ ಪ್ರಕ್ರಿಯೆ ಮುಗಿಯುವವರೆಗೆ ತಾವು ಉಸ್ತುವಾರಿ ಪ್ರಧಾನಿಯಾಗಿ ಮುಂದುವರಿಯುವುದಾಗಿ ಸ್ಪಷ್ಟಪಡಿಸಿದರು. ಅಲ್ಲದೆ, ಬ್ರಿಟನ್‌ನ ಆಡಳಿತ ಸುಗಮವಾಗಿ ಸಾಗಲು ನೂತನವಾಗಿ ಆಯ್ಕೆಯಾಗುವ ನಾಯಕನಿಗೆ ತಮ್ಮ ಸಂಪೂರ್ಣ ಬೆಂಬಲ ಇರಲಿದೆ ಎಂದು ಅವರು ಘೋಷಿಸಿದ್ದಾರೆ.

➤ ಮುಂದಿನ ವಾರದಿಂದ ನೂತನ ನಾಯಕನ ಆಯ್ಕೆ ಪ್ರಕ್ರಿಯೆ: ಲೇಬರ್ ಪಕ್ಷದ ನೂತನ ನಾಯಕನ ಆಯ್ಕೆಯ ಅಧಿಕೃತ ಪ್ರಕ್ರಿಯೆಯು ಮುಂದಿನ ವಾರದಿಂದ (ಜುಲೈ ಮೊದಲ ವಾರ) ಆರಂಭವಾಗಲಿದ್ದು, ಸೆಪ್ಟೆಂಬರ್ ಒಳಗಾಗಿ ಬ್ರಿಟನ್ ಹೊಸ ಪ್ರಧಾನಿಯನ್ನು ಪಡೆಯುವ ಸಾಧ್ಯತೆಯಿದೆ.

➤ ರೇಸ್‌ನಲ್ಲಿ ಮುಂಚೂಣಿಯಲ್ಲಿರುವ ಆ್ಯಂಡಿ ಬರ್ನ್‌ಹಮ್: ಕಿಯರ್ ಸ್ಟಾರ್ಮರ್ ಅವರ ರಾಜೀನಾಮೆಯ ಬೆನ್ನಲ್ಲೇ ಬ್ರಿಟನ್‌ನ ಮುಂದಿನ ಪ್ರಧಾನಿ ಯಾರು ಎಂಬ ಚರ್ಚೆ ಜೋರಾಗಿದೆ. ಪ್ರಸ್ತುತ ಪ್ರಧಾನಿ ರೇಸ್‌ನಲ್ಲಿ ಲೇಬರ್ ಪಕ್ಷದ ಪ್ರಭಾವಿ ನಾಯಕ ಆ್ಯಂಡಿ ಬರ್ನ್‌ಹಮ್ ಅವರ ಹೆಸರು ಮುಂಚೂಣಿಯಲ್ಲಿದೆ. ಇತ್ತೀಚೆಗೆ ನಡೆದ ಉಪಚುನಾವಣೆಯಲ್ಲಿ (ಮೇಕರ್‌ಫೀಲ್ಡ್ ಕ್ಷೇತ್ರ) ಬರ್ನ್ ಹಮ್ ಅವರು ಅಭೂತಪೂರ್ವ ಗೆಲುವು ಸಾಧಿಸಿ ಸಂಸತ್ ಪ್ರವೇಶಿಸಿದ್ದು, ಪಕ್ಷದೊಳಗೆ ಅವರಿಗೆ ಭಾರಿ ಬೆಂಬಲ ವ್ಯಕ್ತವಾಗುತ್ತಿದೆ. ಮಾಜಿ ಆರೋಗ್ಯ ಸಚಿವ ವೆಸ್ ಸ್ಟ್ರೀಟಿಂಗ್ ಸೇರಿದಂತೆ ಹಲವು ಹಿರಿಯ ನಾಯಕರು ಈಗಾಗಲೇ ಬರ್ನ್‌ಹಮ್ ಅವರಿಗೆ ತಮ್ಮ ಬಹಿರಂಗ ಬೆಂಬಲವನ್ನು ಘೋಷಿಸಿದ್ದಾರೆ.

**➤ ಕಳೆದ 10 ವರ್ಷಗಳಲ್ಲಿ 6ನೇ ಪ್ರಧಾನಿ:** ಬ್ರಿಟನ್ ರಾಜಕಾರಣದಲ್ಲಿ ಕಳೆದ ಒಂದು ದಶಕದಿಂದ ತೀವ್ರ ಅಸ್ಥಿರತೆ ಮುಂದುವರಿದಿದೆ. ಕಿಯರ್ ಸ್ಟಾರ್ಮರ್ ಅವರ ರಾಜೀನಾಮೆಯೊಂದಿಗೆ, ಕಳೆದ 10 ವರ್ಷಗಳ ಅವಧಿಯಲ್ಲಿ ಅವಧಿಗೆ ಮುನ್ನವೇ ಹುದ್ದೆ ತೊರೆದ ಬ್ರಿಟನ್‌ನ 6ನೇ ಪ್ರಧಾನಿ ಎಂಬ ಹೆಗ್ಗಳಿಕೆಗೆ ಇವರು ಪಾತ್ರರಾಗಿದ್ದಾರೆ. ಆರ್ಥಿಕ ಬಿಕ್ಕಟ್ಟು, ಜೀವನ ವೆಚ್ಚದ ಏರಿಕೆ ಹಾಗೂ ಇತ್ತೀಚಿನ ನೀತಿಗಳ ಮೇಲಿನ ಸಾರ್ವಜನಿಕ ಅಸಮಾಧಾನವೇ ಸ್ಟಾರ್ಮರ್ ಅವರ ರಾಜೀನಾಮೆಗೆ ಮುಖ್ಯ ಕಾರಣ ಎನ್ನಲಾಗಿದೆ.

## ಜೂನ್-23: ವಿಶ್ವಸಂಸ್ಥೆಯ ಸಾರ್ವಜನಿಕ ಸೇವಾ ದಿನ




➤ ಜೂನ್ 23 ರಂದು ವಿಶ್ವಾದ್ಯಂತ ವಿಶ್ವಸಂಸ್ಥೆಯ ಸಾರ್ವಜನಿಕ ಸೇವಾ ದಿನವನ್ನು (United Nations Public Service Day 2026) ಆಚರಿಸಲಾಗುತ್ತದೆ. ಸಾರ್ವಜನಿಕ ಸೇವೆಯಲ್ಲಿ ತೊಡಗಿರುವ ಅಧಿಕಾರಿಗಳು ಮತ್ತು ಸಿಬ್ಬಂದಿಯ ಕೊಡುಗೆಯನ್ನು ಗೌರವಿಸಲು ಹಾಗೂ ಯುವ ಪೀಳಿಗೆಯನ್ನು ನಾಗರಿಕ ಸೇವೆಗಳತ್ತ ಆಕರ್ಷಿಸಲು ಈ ದಿನ ಅತ್ಯಂತ ಪ್ರಮುಖವಾಗಿದೆ.

**➤ ಈ ವರ್ಷದ ಘೋಷವಾಕ್ಯ 2026ರ ಥೀಮ್: " ಸಾರ್ವಜನಿಕ ಸಂಸ್ಥೆಗಳ ರೂಪಾಂತರ: ನಾವೀನ್ಯತೆ, ಸಾರ್ವಜನಿಕ ಭಾಗವಹಿಸುವಿಕೆ ಮತ್ತು ಒಳಗೊಳ್ಳುವಿಕೆಯನ್ನು ಉತ್ತೇಜಿಸುವುದು." (Transforming Public Institutions: Advancing innovation, Participation, and Inclusion)**

➤ ಈ ವರ್ಷ ಜೂನ್ 23 ರಿಂದ 25 ರವರೆಗೆ ಜಾರ್ಜಿಯಾದ ಟಿಬಿಲಿಸಿ (Tbilisi, Georgia) ನಗರದಲ್ಲಿ ವಿಶ್ವಸಂಸ್ಥೆಯ ಸಾರ್ವಜನಿಕ ಸೇವಾ ವೇದಿಕೆ (UN Public Service Forum) ಜಂಟಿಯಾಗಿ ವಿಶೇಷ ಕಾರ್ಯಕ್ರಮವನ್ನು ಆಯೋಜಿಸಿದೆ.

➤ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು (UN General Assembly) ಡಿಸೆಂಬರ್ 20, 2002 ರಂದು 57/277 ರ ನಿರ್ಣಯವನ್ನು ಅಂಗೀಕರಿಸುವ ಮೂಲಕ ಪ್ರತಿ ವರ್ಷ ಜೂನ್ 23 ರನ್ನು ವಿಶ್ವ ಸಂಸ್ಥೆಯ ಸಾರ್ವಜನಿಕ ಸೇವಾ ದಿನವನ್ನಾಗಿ ಘೋಷಿಸಿತು.ಈ ನಿರ್ಣಯದ ಅನ್ವಯ 2003 ರ ಜೂನ್ 23 ರಂದು ಮೊದಲ ಬಾರಿಗೆ ಈ ದಿನವನ್ನು ಅಧಿಕೃತವಾಗಿ ಆಚರಿಸಲಾಯಿತು.

➤ ವಿಶ್ವಸಂಸ್ಥೆಯ ಸಾರ್ವಜನಿಕ ಸೇವಾ ಪ್ರಶಸ್ತಿಗಳು (UNPSA): ಸಾರ್ವಜನಿಕ ಆಡಳಿತ ಕ್ಷೇತ್ರದಲ್ಲಿ ಅತ್ಯುತ್ತಮ ಮತ್ತು ನಾವೀನ್ಯತಾ ಕಾರ್ಯಗಳನ್ನು ಪ್ರದರ್ಶಿಸುವ ಜಾಗತಿಕ ಸಂಸ್ಥೆಗಳಿಗೆ ವಿಶ್ವಸಂಸ್ಥೆಯು ಪ್ರತಿ ವರ್ಷ "United Nations Public Service Awards (UNPSA)" ಪ್ರಶಸ್ತಿಯನ್ನು ನೀಡಿ ಗೌರವಿಸುತ್ತದೆ. ಸುಸ್ಥಿರ ಅಭಿವೃದ್ಧಿ ಗುರಿಗಳನ್ನು (SDG 16) ತಲುಪಲು ಪಾರದರ್ಶಕ ಮತ್ತು ಜವಾಬ್ದಾರಿಯುತ ಆಡಳಿತವನ್ನು ಉತ್ತೇಜಿಸುವ ಸಂಸ್ಥೆಗಳಿಗೆ ಈ ಗೌರವ ಸಂದಾಯವಾಗುತ್ತದೆ.

➤ ಭಾರತದಲ್ಲಿ ರಾಷ್ಟ್ರೀಯ ನಾಗರಿಕ ಸೇವೆಗಳ ದಿನವನ್ನು (National Civil Services Day) ಪ್ರತಿ ವರ್ಷ ಏಪ್ರಿಲ್ 21 ರಂದು ಆಚರಿಸಲಾಗುತ್ತದೆ. ಆದರೆ ಜೂನ್ 23 ರಂದು ಆಚರಿಸಲಾಗುವುದು ಅಂತರರಾಷ್ಟ್ರೀಯ/ವಿಶ್ವಸಂಸ್ಥೆಯ ಸಾರ್ವಜನಿಕ ಸೇವಾ ದಿನವಾಗಿದೆ. ಪರೀಕ್ಷೆಯಲ್ಲಿ ಗೊಂದಲ ಮಾಡಿಕೊಳ್ಳಬೇಡಿ.

# 24 June 2026

## ಜೂನ್ 24 ರಾಜತಾಂತ್ರಿಕತೆಯಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನ




➤ ಸಮರ್ಥ ಮತ್ತು ಕ್ರಿಯಾಶೀಲ ಮಹಿಳಾ ನಾಯಕಿಯರ ಉದಯದೊಂದಿಗೆ ನಿಧಾನವಾಗಿ ರೂಪಾಂತರಗೊಳ್ಳುತ್ತಿರುವ ರಾಜತಾಂತ್ರಿಕ ಕ್ಷೇತ್ರದಲ್ಲಿ ಮಹಿಳೆಯರು ವಹಿಸುವ ಅಗತ್ಯ ಪಾತ್ರವನ್ನು ಗೌರವಿಸಲು ಮತ್ತು ಗುರುತಿಸಲು ಅಂತರರಾಷ್ಟ್ರೀಯ ರಾಜತಾಂತ್ರಿಕ ಮಹಿಳಾ ದಿನವನ್ನು (IDWD) ವಾರ್ಷಿಕವಾಗಿ ಜೂನ್ 24 ರಂದು ಆಚರಿಸಲಾಗುತ್ತದೆ.

➤ 2026 ರಾಜತಾಂತ್ರಿಕತೆಯಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನದ ಥೀಮ್ "ಜಾಗತಿಕ ವ್ಯವಹಾರಗಳಲ್ಲಿ ಸಮಾನ ನಾಯಕತ್ವವನ್ನು ಮುಂದುವರಿಸುವುದು"

➤ 2022 ರಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆ (UNGA) ತನ್ನ 76 ನೇ ಅಧಿವೇಶನದಲ್ಲಿ (ರೆಸಲ್ಯೂಶನ್ A/RES/76/269) ಈ ರಾಜತಾಂತ್ರಿಕತೆಯಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನವನ್ನು ಗೊತ್ತುಪಡಿಸಲಾಯಿತು.

➤ **ರಾಜತಾಂತ್ರಿಕತೆಯಲ್ಲಿ ಮಹಿಳೆಯರ ಪ್ರಮುಖ ಅಂಶಗಳು :**

- 25 ದೇಶಗಳಲ್ಲಿ ಮಹಿಳಾ ರಾಜ್ಯ/ಸರ್ಕಾರದ ಮುಖ್ಯಸ್ಥರು (2025)
- ಜಾಗತಿಕವಾಗಿ ಸಂಪುಟದಲ್ಲಿ ಮಹಿಳೆಯರ ಪಾಲು ಶೇ. 22.9 ರಷ್ಟು.
- ಮಹಿಳಾ ಶಾಂತಿ ಸಮಾಲೋಚಕರು (1992–2019) 13%
- ಮಹಿಳಾ ಮಧ್ಯವರ್ತಿಗಳು (1992–2019) 6%
- ಶಾಂತಿ ಒಪ್ಪಂದಕ್ಕೆ ಸಹಿ ಹಾಕಿದ ಮಹಿಳೆಯರು 6%

## ಭಾರತದಲ್ಲಿ 4 ಹೊಸ ಡಿಜಿಟಲ್ ಪೊಲೀಸಿಂಗ್ ಆಪ್‌ಗಳ ಬಿಡುಗಡೆ:



➤ ಭಾರತದ ಅಪರಾಧ ಮುಕ್ತ ಮತ್ತು ಸುರಕ್ಷಿತ ವ್ಯವಸ್ಥೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಮತ್ತೊಂದು ಮಹತ್ವದ ಹೆಜ್ಜೆ ಇಟ್ಟಿದೆ. ಜೂನ್ 22, 2026 ರಂದು ನವದೆಹಲಿಯಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ದೇಶದ ಕಾನೂನು ಸುವ್ಯವಸ್ಥೆ ಮತ್ತು ತನಿಖಾ ಪ್ರಕ್ರಿಯೆಯನ್ನು ಗಣನೀಯವಾಗಿ ವೇಗಗೊಳಿಸಲು ನಾಲ್ಕು ಹೊಸ ಡಿಜಿಟಲ್ ಪೊಲೀಸಿಂಗ್ ಅಪ್ಲಿಕೇಶನ್‌ಗಳನ್ನು ಲೋಕಾರ್ಪಣೆಗೊಳಿಸಿದ್ದಾರೆ. ಈ ಅತ್ಯಾಧುನಿಕ ಆಪ್‌ಗಳು ಭಾರತದ ಅಪರಾಧ ನ್ಯಾಯ ವ್ಯವಸ್ಥೆಯನ್ನು ಸಂಪೂರ್ಣವಾಗಿ ಡಿಜಿಟಲೀಕರಣಗೊಳಿಸುವ ಗುರಿಯನ್ನು ಹೊಂದಿವೆ.

➤ ಇಂಟಿಗ್ರೇಟೆಡ್ ಕ್ರಿಮಿನಲ್ ಜಸ್ಟಿಸ್ ಸಿಸ್ಟಮ್ (ICJS): ಈ ನಾಲ್ಕೂ ಹೊಸ ಅಪ್ಲಿಕೇಶನ್‌ಗಳನ್ನು ಇಂಟಿಗ್ರೇಟೆಡ್ ಕ್ರಿಮಿನಲ್ ಜಸ್ಟಿಸ್ ಸಿಸ್ಟಮ್ (ICJS) ನೊಂದಿಗೆ ಜೋಡಿಸಲಾಗಿದೆ. ಇದು ದೇಶದ ಪೊಲೀಸ್ ಇಲಾಖೆ, ನ್ಯಾಯಾಲಯಗಳು, ಕಾರಾಗೃಹಗಳು (ಜೈಲುಗಳು) ಮತ್ತು ಫೋರೆನ್ಸಿಕ್ ಲ್ಯಾಬ್‌ಗಳನ್ನು ಒಂದೇ ಡಿಜಿಟಲ್ ಪ್ಲಾಟ್‌ಫಾರ್ಮ್ ಅಡಿಯಲ್ಲಿ ತರುವ ಒಂದು ಇಂಟರ್-ಆಪರೇಟಬಲ್ ವ್ಯವಸ್ಥೆಯಾಗಿದೆ. ಇದರಿಂದಾಗಿ ತನಿಖೆಯ ದಾಖಲೆಗಳು ಅತ್ಯಂತ ವೇಗವಾಗಿ ಮತ್ತು ಸುರಕ್ಷಿತವಾಗಿ ಪರಸ್ಪರ ವಿನಿಮಯವಾಗುತ್ತವೆ.

➤ **ಬಿಡುಗಡೆಯಾದ 4 ಪ್ರಮುಖ ಡಿಜಿಟಲ್ ಆಪ್‌ಗಳು:**

**1. ಅಭಿಜ್ಞಾನ್ (Abhigyan)**

ಕಾರ್ಯವಿಧಾನ: ಇದು ಪ್ರಮುಖವಾಗಿ ಫೀಲ್ಡ್‌ನಲ್ಲಿ (ಸ್ಥಳದಲ್ಲಿ) ಕರ್ತವ್ಯ ನಿರ್ವಹಿಸುವ ಪೊಲೀಸ್ ಸಿಬ್ಬಂದಿಗಾಗಿ ವಿನ್ಯಾಸಗೊಳಿಸಲಾದ ಸ್ಮಾರ್ಟ್‌ಫೋನ್ ಆಧಾರಿತ ಆಪ್ ಆಗಿದೆ.

ವಿಶೇಷತೆ: ಈ ಆಪ್ NAFIS (National Automated Fingerprint Identification System) ನೊಂದಿಗೆ ಲಿಂಕ್ ಆಗಿದೆ. NAFIS ಡೇಟಾಬೇಸ್‌ನಲ್ಲಿ ಈಗಾಗಲೇ 1.29 ಕೋಟಿಗೂ ಹೆಚ್ಚು ಅಪರಾಧಿಗಳ ದಾಖಲೆಗಳು ಮತ್ತು ಸುಮಾರು 1.3 ಕೋಟಿ ಬೆರಳಚ್ಚುಗಳಿವೆ (Fingerprints).

**ಲಾಭ:** ಈ ಆಪ್‌ನಲ್ಲಿರುವ 'ಟೂ-ಸ್ಟೆಪ್ ಅಥೆಂಟಿಕೇಶನ್' ಭದ್ರತೆಯ ಮೂಲಕ ಕೇವಲ 35 ಸೆಕೆಂಡುಗಳಲ್ಲಿ ಶಂಕಿತ ವ್ಯಕ್ತಿಯ ಬೆರಳಚ್ಚನ್ನು ಪರಿಶೀಲಿಸಿ ಆತ ಅಪರಾಧಿಯೇ ಅಲ್ಲವೇ ಎಂಬುದನ್ನು ಪತ್ತೆಹಚ್ಚಬಹುದು.

**2. ಕ್ರಿಮಿನಲ್ ಪ್ರೊಸೀಜರ್ ಐಡೆಂಟಿಫಿಕೇಶನ್ (CrPI)ಕಾರ್ಯವಿಧಾನ:** ಅಪರಾಧ ಪ್ರಕ್ರಿಯೆ ಗುರುತಿಸುವಿಕೆ (CrPI) ಅಪ್ಲಿಕೇಶನ್ ಬಯೋಮೆಟ್ರಿಕ್ ತಂತ್ರಜ್ಞಾನದ ಸುಧಾರಿತ ಆವೃತ್ತಿಯಾಗಿದೆ.

ವಿಶೇಷತೆ: ಇದು ಕೇವಲ ಬೆರಳಚ್ಚಿಗೆ ಸೀಮಿತವಾಗಿರದೆ, ಮುಖದ ಗುರುತಿಸುವಿಕೆ (Facial Recognition), ಕಣ್ಣಿನ ಪಾಪೆ ಮ್ಯಾಚಿಂಗ್ (Iris Matching) ಮತ್ತು ಡಿಎನ್‌ಎ (DNA) ಪ್ರೊಫೈಲಿಂಗ್ ತಂತ್ರಜ್ಞಾನಗಳನ್ನು ಒಳಗೊಂಡಿದೆ.

ಲಾಭ: ಅಪರಾಧಿಗಳ ಅನನ್ಯ ಜೈವಿಕ ಗುರುತನ್ನು ಅತ್ಯಂತ ನಿಖರವಾಗಿ ದಾಖಲಿಸಲು ಮತ್ತು ಮರುಪರಿಶೀಲಿಸಲು ಇದು ನೆರವಾಗುತ್ತದೆ.

3. ಇ-ಫೋರೆನ್ಸಿಕ್ಸ್ 2.0 (e-forensics 2.0)

ಕಾರ್ಯವಿಧಾನ: ಅಪರಾಧ ನಡೆದ ಸ್ಥಳದಿಂದ ಸಂಗ್ರಹಿಸುವ ಫೋರೆನ್ಸಿಕ್ ಸಾಕ್ಷ್ಯಗಳನ್ನು ಡಿಜಿಟಲ್ ರೂಪದಲ್ಲಿ ನಿರ್ವಹಿಸಲು ಈ ಆಪ್ ಅನ್ನು ಅಭಿವೃದ್ಧಿಪಡಿಸಲಾಗಿದೆ.

ಲಾಭ: ಸಾಕ್ಷ್ಯಗಳು ದುರುಪಯೋಗವಾಗುವುದನ್ನು ತಡೆಯುವುದು, ಲ್ಯಾಬ್ ವರದಿಗಳನ್ನು ಶೀಘ್ರವಾಗಿ ಸಿದ್ಧಪಡಿಸುವುದು ಮತ್ತು ತನಿಖಾಧಿಕಾರಿಗಳಿಗೆ ಡಿಜಿಟಲ್ ಮಾಧ್ಯಮದ ಮೂಲಕ ನೇರವಾಗಿ ಸಾಕ್ಷ್ಯಗಳನ್ನು ತಲುಪಿಸಲು ಇದು ಸಹಕಾರಿಯಾಗಿದೆ.

4. ಇ-ಪ್ರಾಸಿಕ್ಯೂಷನ್ 2.0 (e-prosecution 2.0)

ಕಾರ್ಯವಿಧಾನ: ನ್ಯಾಯಾಲಯಗಳಲ್ಲಿ ಪ್ರಕರಣಗಳನ್ನು ನಡೆಸುವ ಸರ್ಕಾರಿ ಅಭಿಯೋಜಕರಿಗೆ (Prosecutors) ಕೇಸ್ ಮ್ಯಾನೇಜ್‌ಮೆಂಟ್‌ಗಾಗಿ ಈ ಆಪ್ ನೆರವಾಗುತ್ತದೆ.

ಲಾಭ: ಪೊಲೀಸರು ದಾಖಲಿಸಿದ ಚಾರ್ಜ್‌ಶೀಟ್ ಮತ್ತು ಸಾಕ್ಷ್ಯಗಳನ್ನು ನ್ಯಾಯಾಲಯದಲ್ಲಿ ಸಮರ್ಪಕವಾಗಿ ಮಂಡಿಸಲು, ಪ್ರಕರಣದ ಪ್ರಗತಿಯನ್ನು ಟ್ರ್ಯಾಕ್ ಮಾಡಲು ಮತ್ತು ಕಾನೂನು ಪ್ರಕ್ರಿಯೆಯನ್ನು ಪಾರದರ್ಶಕಗೊಳಿಸಲು ಇದು ಸಹಕಾರಿಯಾಗಿದೆ.

## ವೈದ್ಯಕೀಯ ಶಿಕ್ಷಣದಲ್ಲಿ ಪಿಜಿ ಡಿಪ್ಲೊಮಾ ಕೋರ್ಸ್‌ಗಳ ಯುಗಾಂತ್ಯ; MD ಮತ್ತು MS ಪದವಿಗಳಿಗೆ ರಾಷ್ಟ್ರೀಯ ವೈದ್ಯಕೀಯ ಆಯೋಗದ ಆದ್ಯತೆ



➤ ಭಾರತದ ವೈದ್ಯಕೀಯ ಶಿಕ್ಷಣ ಕ್ಷೇತ್ರದಲ್ಲಿ ಭಾರಿ ಐತಿಹಾಸಿಕ ಬದಲಾವಣೆಯೊಂದಕ್ಕೆ ವೇದಿಕೆ ಸಿದ್ಧವಾಗಿದೆ. ದೇಶಾದ್ಯಂತ ವೈದ್ಯಕೀಯ ಶಿಕ್ಷಣವನ್ನು ನಿಯಂತ್ರಿಸುವ ಅತ್ಯುನ್ನತ ಸಂಸ್ಥೆಯಾದ ರಾಷ್ಟ್ರೀಯ ವೈದ್ಯಕೀಯ ಆಯೋಗವು (National Medical Commission - NMC) ಸ್ನಾತಕೋತ್ತರ (Postgraduate - PG) ವೈದ್ಯಕೀಯ ಡಿಪ್ಲೊಮಾ ಕೋರ್ಸ್‌ಗಳನ್ನು ಸಂಪೂರ್ಣವಾಗಿ ರದ್ದುಗೊಳಿಸಲು ನಿರ್ಧರಿಸಿದೆ. ಇನ್ನುಂದೆ ದೇಶದ ವೈದ್ಯಕೀಯ ಶಿಕ್ಷಣ ವ್ಯವಸ್ಥೆಯು ಕೇವಲ ಉನ್ನತ ಮಟ್ಟದ MD (Doctor of Medicine) ಮತ್ತು MS (Master of Surgery) ಪದವಿಗಳ ಮೇಲೆ ಮಾತ್ರ ಕೇಂದ್ರೀಕರಿಸಲಿದೆ.

➤ **ಪ್ರಮುಖ ನಿರ್ಧಾರ ಮತ್ತು ಗಡುವು:**

ಕೊನೆಯ ಶೈಕ್ಷಣಿಕ ವರ್ಷ: 2026-27ನೇ ಶೈಕ್ಷಣಿಕ ವರ್ಷವು ಪಿಜಿ ಡಿಪ್ಲೊಮಾ ಕೋರ್ಸ್‌ಗಳಿಗೆ ಪ್ರವೇಶಾತಿ ಪಡೆಯಲು ಕೊನೆಯ ಅವಕಾಶವಾಗಿರುತ್ತದೆ.

ಸಂಪೂರ್ಣ ನಿಷೇಧ: 2027-28ನೇ ಶೈಕ್ಷಣಿಕ ವರ್ಷದಿಂದ ಯಾವುದೇ ವೈದ್ಯಕೀಯ ಕಾಲೇಜುಗಳಲ್ಲಿ ಪಿಜಿ ಡಿಪ್ಲೊಮಾ ಕೋರ್ಸ್‌ಗಳಿಗೆ ಹೊಸದಾಗಿ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲು ಅವಕಾಶವಿರುವುದಿಲ್ಲ.

ಹೊಸ ಪ್ರಸ್ತಾವನೆಗಳಿಲ್ಲ: ಇನ್ನುಂದೆ ಹೊಸದಾಗಿ ಡಿಪ್ಲೊಮಾ ಕೋರ್ಸ್‌ಗಳನ್ನು ಪ್ರಾರಂಭಿಸಲು ಅಥವಾ ಈಗಿರುವ ಡಿಪ್ಲೊಮಾ ಸೀಟುಗಳ ಸಂಖ್ಯೆಯನ್ನು ಹೆಚ್ಚಿಸಲು ವೈದ್ಯಕೀಯ ಸಂಸ್ಥೆಗಳಿಗೆ ಅನುಮತಿ ಸಿಗುವುದಿಲ್ಲ.

➤ **ಡಿಪ್ಲೊಮಾ ಸೀಟುಗಳು MD / MS ಆಗಿ ಪರಿವರ್ತನೆ:**

ಪ್ರಸ್ತುತ ಪಿಜಿ ಡಿಪ್ಲೊಮಾ ಕೋರ್ಸ್‌ಗಳನ್ನು ನಡೆಸುತ್ತಿರುವ ವೈದ್ಯಕೀಯ ಕಾಲೇಜುಗಳು ತಮ್ಮಲ್ಲಿರುವ ಡಿಪ್ಲೊಮಾ ಸೀಟುಗಳನ್ನು ಅದಕ್ಕೆ ಸಮನಾದ MD ಅಥವಾ MS ಸೀಟುಗಳಾಗಿ ಪರಿವರ್ತಿಸಲು (Convert) ಅರ್ಜಿ ಸಲ್ಲಿಸಬಹುದು.

ಈ ಪ್ರಕ್ರಿಯೆಯನ್ನು NMC ಅಡಿಯ ಪ್ರಮುಖ ನಿಯಂತ್ರಕ ಮಂಡಳಿಯಾದ ವೈದ್ಯಕೀಯ ಮೌಲ್ಯಮಾಪನ ಮತ್ತು ರೇಟಿಂಗ್ ಮಂಡಳಿ (Medical Assessment and Rating Board - MARB) ನಿರ್ವಹಿಸಲಿದೆ. ಇದಕ್ಕಾಗಿ ಪ್ರತ್ಯೇಕ ಆನ್‌ಲೈನ್ ಪೋರ್ಟಲ್ ಶೀಘ್ರದಲ್ಲೇ ಲಭ್ಯವಾಗಲಿದೆ.

➤ **ಈ ನಿರ್ಧಾರದ ಹಿಂದಿನ ಉದ್ದೇಶ:**

ಏಕರೂಪದ ಶಿಕ್ಷಣ ವ್ಯವಸ್ಥೆ (Uniform Educational Framework): ದೇಶಾದ್ಯಂತ ವೈದ್ಯಕೀಯ ತಜ್ಞರ (Specialists) ತರಬೇತಿಯಲ್ಲಿ ಏಕರೂಪತೆ ತರುವುದು ಮತ್ತು ಶೈಕ್ಷಣಿಕ ಗುಣಮಟ್ಟವನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಹೆಚ್ಚಿಸುವುದು ಇದರ ಪ್ರಮುಖ ಉದ್ದೇಶ.

ಸಂಪನ್ಮೂಲಗಳ ಸದ್ಬಳಕೆ: ಭಾರತದ ಬಹುತೇಕ ವೈದ್ಯಕೀಯ ಕಾಲೇಜುಗಳು ಈಗಾಗಲೇ ಅತ್ಯುತ್ತಮ ಮೂಲಸೌಕರ್ಯ, ರೋಗಿಗಳ ಸಂಖ್ಯೆ (Clinical Facilities) ಹಾಗೂ ನುರಿತ ಬೋಧಕ ಸಿಬ್ಬಂದಿಯನ್ನು ಹೊಂದಿವೆ. ಹೀಗಾಗಿ, ಕೇವಲ ಡಿಪ್ಲೊಮಾ ನೀಡುವ ಬದಲು ಅದೇ ಸಂಪನ್ಮೂಲ ಬಳಸಿ ಪೂರ್ಣ ಪ್ರಮಾಣದ 3 ವರ್ಷದ MD/MS ಪದವಿ ನೀಡುವುದು ಹೆಚ್ಚು ಸೂಕ್ತ ಎಂದು NMC ಭಾವಿಸಿದೆ.

ನಿಯಮಾವಳಿಗಳ ಅನುಷ್ಠಾನ: ಈ ಮಹತ್ವದ ಬದಲಾವಣೆಯು 'ಸ್ನಾತಕೋತ್ತರ ವೈದ್ಯಕೀಯ ಶಿಕ್ಷಣ ನಿಯಮಾವಳಿಗಳು (PGMER) 2023' ರ ನಿಬಂಧನೆಗಳ ಮುಂದುವರಿದ ಭಾಗವಾಗಿದೆ.

## 31 ಮಿಲಿಯನ್ ಡೌನ್‌ಲೋಡ್ ದಾಟಿದ 'mAadhaar' ಆಪ್




➤ ಭಾರತೀಯ ವಿಶಿಷ್ಟ ಗುರುತಿನ ಪ್ರಾಧಿಕಾರ (UIDAI) ಬಿಡುಗಡೆ ಮಾಡಿರುವ ಅಧಿಕೃತ ಮೊಬೈಲ್ ಅಪ್ಲಿಕೇಶನ್ ಆದ 'mAadhaar' ತನ್ನ ಜನಪ್ರಿಯತೆಯನ್ನು ಮತ್ತಷ್ಟು ಹೆಚ್ಚಿಸಿಕೊಂಡಿದ್ದು, ಬಿಡುಗಡೆಯಾದಾಗಿನಿಂದ ಇದುವರೆಗೆ ಭರ್ಜರಿ 3.1 ಕೋಟಿಗೂ (31 Million) ಹೆಚ್ಚು ಡೌನ್‌ಲೋಡ್‌ಗಳನ್ನು ಕಾಣುವ ಮೂಲಕ ಹೊಸ ಮೈಲಿಗಲ್ಲು ಸ್ಥಾಪಿಸಿದೆ. ಡಿಜಿಟಲ್ ಇಂಡಿಯಾ ಉಪಕ್ರಮದ ಅಡಿಯಲ್ಲಿ ನಾಗರಿಕರಿಗೆ ಕಾಗದ ರಹಿತ ಮತ್ತು ಸುಲಭ ಸೇವೆಗಳನ್ನು ಒದಗಿಸುವಲ್ಲಿ ಈ ಆಪ್ ಪ್ರಮುಖ ಪಾತ್ರ ವಹಿಸುತ್ತಿದೆ.

➤ **mAadhaar ಆಪ್‌ನ ಪ್ರಮುಖ ವೈಶಿಷ್ಟ್ಯಗಳು:**

ಡಿಜಿಟಲ್ ಗುರುತಿನ ಚೀಟಿ: ನಾಗರಿಕರು ತಮ್ಮ ಭೌತಿಕ ಕಾರ್ಡ್ ಅನ್ನು ಜೊತೆಯಲ್ಲಿ ಕೊಂಡೊಯ್ಯುವ ಅಗತ್ಯವಿಲ್ಲದೆ, ಈ ಆಪ್ ಮೂಲಕ ತಮ್ಮ ಡಿಜಿಟಲ್ ಗುರುತನ್ನು ಎಲ್ಲಿ ಬೇಕಾದರೂ ಪ್ರದರ್ಶಿಸಬಹುದು.

ಆಫ್‌ಲೈನ್ ಪರಿಶೀಲನೆ: ಇಂಟರ್ನೆಟ್ ಸಂಪರ್ಕವಿಲ್ಲದಿದ್ದರೂ QR ಕೋಡ್ ಬಳಸಿ ಆಧಾರ್ ವಿವರಗಳನ್ನು ಸುರಕ್ಷಿತವಾಗಿ ಹಂಚಿಕೊಳ್ಳಬಹುದು.

ಬಯೋಮೆಟ್ರಿಕ್ ಲಾಕಿಂಗ್: ಬಳಕೆದಾರರು ತಮ್ಮ ವೈಯಕ್ತಿಕ ಡೇಟಾದ ಸುರಕ್ಷತೆಗಾಗಿ ತಮ್ಮ ಬಯೋಮೆಟ್ರಿಕ್‌ಗಳನ್ನು (ಬೆರಳಚ್ಚು ಮತ್ತು ಕಣ್ಣಿನ ಪಾಪೆ ಸ್ಕ್ಯಾನ್) ತಾತ್ಕಾಲಿಕವಾಗಿ ಲಾಕ್ ಅಥವಾ ಅನ್‌ಲಾಕ್ ಮಾಡುವ ಸೌಲಭ್ಯವನ್ನು ಇದು ಹೊಂದಿದೆ.

ಹಲವಾರು ಪ್ರೊಫೈಲ್‌ಗಳ ನಿರ್ವಹಣೆ: ಒಂದೇ ಮೊಬೈಲ್‌ನಲ್ಲಿ ಕುಟುಂಬದ ಗರಿಷ್ಠ 5 ಸದಸ್ಯರ ಪ್ರೊಫೈಲ್‌ಗಳನ್ನು ಸೇರಿಸಲು ಈ ಆಪ್‌ನಲ್ಲಿ ಅವಕಾಶ ಕಲ್ಪಿಸಲಾಗಿದೆ.

➤ **ಪರೀಕ್ಷಾ ಉಪಯುಕ್ತ ಮಾಹಿತಿ (Exam-Oriented Static GK):**

UIDAI ಸ್ಥಾಪನೆ: ಭಾರತೀಯ ವಿಶಿಷ್ಟ ಗುರುತಿನ ಪ್ರಾಧಿಕಾರವನ್ನು (UIDAI) 2009 ರಲ್ಲಿ ಯೋಜನಾ ಆಯೋಗದ (ಈಗಿನ ನೀತಿ ಆಯೋಗ) ಅಡಿಯಲ್ಲಿ ಸ್ಥಾಪಿಸಲಾಯಿತು. ನಂತರ ಆಧಾರ್ ಕಾಯ್ದೆ 2016 ರ ಅಡಿಯಲ್ಲಿ ಇದನ್ನು ಶಾಸನಬದ್ಧ ಪ್ರಾಧಿಕಾರವನ್ನಾಗಿ ಮಾಡಲಾಯಿತು.

ಸಚಿವಾಲಯ: ಇದು ಭಾರತ ಸರ್ಕಾರದ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ (MeitY) ಅಡಿಯಲ್ಲಿ ಕಾರ್ಯನಿರ್ವಹಿಸುತ್ತದೆ.

ಆಧಾರ್ ಸಂಖ್ಯೆ: ಇದು ಭಾರತದ ನಿವಾಸಿಗಳಿಗೆ ನೀಡಲಾಗುವ 12 ಅಂಕಿಗಳ ವಿಶಿಷ್ಟ ಗುರುತಿನ ಸಂಖ್ಯೆಯಾಗಿದೆ.

## ಫಿಫಾ ವಿಶ್ವಕಪ್ ಇತಿಹಾಸದಲ್ಲಿ ಕ್ರಿಸ್ಟಿಯಾನೋ ರೊನಾಲ್ಡೋ ಅಭೂತಪೂರ್ವ ದಾಖಲೆ: ಆರು ವಿಶ್ವಕಪ್ ಗಳಲ್ಲಿ ಗೋಲು ಗಳಿಸಿದ ವಿಶ್ವದ ಮೊದಲ ಆಟಗಾರ!



➤ ಫುಟ್‌ಬಾಲ್ ಜಗತ್ತಿನ ಸಾರ್ವಕಾಲಿಕ ಶ್ರೇಷ್ಠ ಆಟಗಾರರಲ್ಲಿ ಒಬ್ಬರಾದ ಪೋರ್ಚುಗಲ್‌ನ ಸ್ಟಾರ್ ಸ್ಟ್ರೈಕರ್ ಕ್ರಿಸ್ಟಿಯಾನೋ ರೊನಾಲ್ಡೋ (Cristiano Ronaldo) ಮತ್ತೊಂದು ಐತಿಹಾಸಿಕ ಮೈಲಿಗಲ್ಲು ಸ್ಥಾಪಿಸಿದ್ದಾರೆ. ಚಾಲ್ತಿಯಲ್ಲಿರುವ 2026ರ ಫಿಫಾ ವಿಶ್ವಕಪ್‌ನ (FIFA World Cup 2026) ಗ್ರೂಪ್ 'ಕೆ' ಪಂದ್ಯದಲ್ಲಿ ಉಜ್ಬೇಕಿಸ್ತಾನ್ ವಿರುದ್ಧ ಭರ್ಜರಿ ಎರಡು ಗೋಲುಗಳನ್ನು ಗಳಿಸುವ ಮೂಲಕ, ರೊನಾಲ್ಡೋ ಆರು ಬೇರೆ ಬೇರೆ ಫಿಫಾ ವಿಶ್ವಕಪ್ ಟೂರ್ನಿಗಳಲ್ಲಿ ಗೋಲು ಗಳಿಸಿದ ಇತಿಹಾಸದ ಮೊದಲ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಅವರ ಈ ಐತಿಹಾಸಿಕ ಸಾಧನೆಯಿಂದಾಗಿ ಪೋರ್ಚುಗಲ್ ತಂಡವು ಉಜ್ಬೇಕಿಸ್ತಾನ್ ವಿರುದ್ಧ 5-0 ಅಂತರದ ಭರ್ಜರಿ ಜಯ ದಾಖಲಿಸಿದೆ.

➤ ಪಂದ್ಯದ ಮುಖ್ಯಾಂಶಗಳು ಮತ್ತು ರೊನಾಲ್ಡೋ ದಾಖಲೆ: ಹೂಸ್ಟನ್ ಸ್ಟೇಡಿಯಂನಲ್ಲಿ ನಡೆದ ಪಂದ್ಯದಲ್ಲಿ ಪೋರ್ಚುಗಲ್ ತಂಡವು ಸಂಪೂರ್ಣ ಪ್ರಾಬಲ್ಯ ಸಾಧಿಸಿತು. ಆರಂಭಿಕ ಪಂದ್ಯದಲ್ಲಿ ಡೆಮಾಕ್ರಟಿಕ್ ರಿಪಬ್ಲಿಕ್ ಆಫ್ ಕಾಂಗೋ ವಿರುದ್ಧ 1-1 ಡ್ರಾ ಮಾಡಿಕೊಂಡಿದ್ದ ಪೋರ್ಚುಗಲ್ ತೀವ್ರ ಟೀಕೆಗೆ ಒಳಗಾಗಿತ್ತು. ಆದರೆ ಉಜ್ಬೇಕಿಸ್ತಾನ್ ವಿರುದ್ಧದ ಪಂದ್ಯದಲ್ಲಿ ರೊನಾಲ್ಡೋ ತಮ್ಮ ವಿಮರ್ಶಕರಿಗೆ ತಕ್ಕ ಉತ್ತರ ನೀಡಿದ್ದಾರೆ.

ಆರಂಭಿಕ ಗೋಲು: ಪಂದ್ಯದ 6ನೇ ನಿಮಿಷದಲ್ಲೇ ಜೋವಾವೊ ಕ್ಯಾನ್ಸೆಲೊ ನೀಡಿದ ಪಾಸ್ ಮೂಲಕ ರೊನಾಲ್ಡೋ ಪಂದ್ಯದ ಮೊದಲ ಗೋಲು ಗಳಿಸಿ ದಾಖಲೆ ಬರೆದರು.

ದ್ವಿಶತಕ ಗೋಲು (Brace): ಪಂದ್ಯದ 39ನೇ ನಿಮಿಷದಲ್ಲಿ ಬ್ರೂನೋ ಫೆರ್ನಾಂಡಿಸ್ ನೀಡಿದ ಪಾಸ್ ಅನ್ನು ಅದ್ಭುತವಾಗಿ ಗೋಲಾಗಿ ಪರಿವರ್ತಿಸಿ ವೈಯಕ್ತಿಕ ಎರಡನೇ ಗೋಲು ದಾಖಲಿಸಿದರು.

ಇತರ ಗೋಲುಗಳು: ಪೋರ್ಚುಗಲ್ ಪರ ನುನೊ ಮೆಂಡಿಸ್ ಮತ್ತು ರಾಫೆಲ್ ಲಿಯಾವೊ ತಲಾ ಒಂದು ಗೋಲು ಗಳಿಸಿದರೆ, ಉಜ್ಬೇಕಿಸ್ತಾನ್ ಗೋಲ್‌ಕೀಪರ್ ಅಬ್ದುವೋಹಿದ್ ನೆಮತೋವ್ ಅವರಿಂದ ಸ್ವಯಂ ಗೋಲು (Own Goal) ಮೂಡಿಬಂತು.

➤ **ರೊನಾಲ್ಡೋ ಅವರ ಆರು ವಿಶ್ವಕಪ್‌ಗಳ ಸುವರ್ಣ ಪಯಣ:**

2006: ಜರ್ಮನಿ
2010: ದಕ್ಷಿಣ ಆಫ್ರಿಕಾ
2014: ಬ್ರೂನಿ / ಬ್ರೆಜಿಲ್
2018: ರಷ್ಯಾ
2022: ಕತಾರ್
2026: ಅಮೆರಿಕ, ಮೆಕ್ಸಿಕೊ ಮತ್ತು ಕೆನಡಾ

➤ **ಮುರಿದ ಇತರೆ ಪ್ರಮುಖ ದಾಖಲೆಗಳು:**

ಪೋರ್ಚುಗಲ್ ಪರ ಗರಿಷ್ಠ ವಿಶ್ವಕಪ್ ಗೋಲು: ಈ ಪಂದ್ಯದಲ್ಲಿ ಎರಡು ಗೋಲು ಗಳಿಸುವ ಮೂಲಕ ರೊನಾಲ್ಡೋ ತಮ್ಮ ಒಟ್ಟು ವಿಶ್ವಕಪ್ ಗೋಲುಗಳ ಸಂಖ್ಯೆಯನ್ನು 10ಕ್ಕೇರಿಸಿದ್ದಾರೆ. ಇದರೊಂದಿಗೆ ಪೋರ್ಚುಗಲ್‌ನ ಸಾರ್ವಕಾಲಿಕ ಶ್ರೇಷ್ಠ ಆಟಗಾರ ಯುಸೆಬಿಯೊ (Eusebio) ಅವರ ದಾಖಲೆಯನ್ನು ಮುರಿದು, ಪೋರ್ಚುಗಲ್ ಪರ ವಿಶ್ವಕಪ್‌ನಲ್ಲಿ ಗರಿಷ್ಠ ಗೋಲು ಗಳಿಸಿದ ಆಟಗಾರ ಎನಿಸಿಕೊಂಡರು.

ಅಂತರರಾಷ್ಟ್ರೀಯ ಫುಟ್‌ಬಾಲ್‌ನಲ್ಲಿ ಗರಿಷ್ಠ ಗೋಲು: ರೊನಾಲ್ಡೋ ತಮ್ಮ 230ನೇ ಅಂತರರಾಷ್ಟ್ರೀಯ ಪಂದ್ಯದಲ್ಲಿ 145ನೇ ಗೋಲು ಗಳಿಸುವ ಮೂಲಕ ತಮ್ಮದೇ ಹೆಸರಿನಲ್ಲಿದ್ದ ವಿಶ್ವ ದಾಖಲೆಯನ್ನು ಮತ್ತಷ್ಟು ವಿಸ್ತರಿಸಿದ್ದಾರೆ.

➤ ಫಿಫಾ ಅಧ್ಯಕ್ಷರ ಅಭಿನಂದನೆ: ರೊನಾಲ್ಡೋ ಅವರ ಈ ನಂಬಲಾಗದ ಸಾಧನೆಗಾಗಿ ಫಿಫಾ (FIFA) ಅಧ್ಯಕ್ಷ ಜಿಯಾನಿ ಇನ್ಫಾಂಟಿನೊ ಅವರು ಇನ್‌ಸ್ಟಾಗ್ರಾಮ್ ಪೋಸ್ಟ್ ಮೂಲಕ ವಿಶೇಷವಾಗಿ ಅಭಿನಂದಿಸಿದ್ದಾರೆ. "ಇದು ನಿಜಕ್ಕೂ ಅದ್ಭುತ ಸಾಧನೆ! ಆರು ವಿಶ್ವಕಪ್‌ಗಳಲ್ಲಿ ಗೋಲು ಗಳಿಸಿದ ಮೊದಲ ಆಟಗಾರನಾದ ಕ್ರಿಸ್ಟಿಯಾನೋ ಅವರಿಗೆ ಅಭಿನಂದನೆಗಳು" ಎಂದು ಶ್ಲಾಘಿಸಿದ್ದಾರೆ.

## IRCTC ಸಿಎಂಡಿ ಸಂಜಯ್ ಕುಮಾರ್ ಜೈನ್ ರಾಜೀನಾಮೆ: ಜುಲೈ 20 ರಿಂದ ಅನ್ವಯ



➤ ಭಾರತೀಯ ರೈಲ್ವೆ ಆಹಾರ ಸರಬರಾಜು ಮತ್ತು ಪ್ರವಾಸೋದ್ಯಮ ನಿಗಮದ (IRCTC) ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕರಾದ (CMD) ಸಂಜಯ್ ಕುಮಾರ್ ಜೈನ್ ಅವರು ತಮ್ಮ ಹುದ್ದೆಗೆ ಹಠಾತ್ ರಾಜೀನಾಮೆ ನೀಡಿದ್ದಾರೆ.

➤ ವೈಯಕ್ತಿಕ ಕಾರಣಗಳನ್ನು ನೀಡಿ ಅವರು ನೀಡಿರುವ ರಾಜೀನಾಮೆಯನ್ನು ರೈಲ್ವೆ ಸಚಿವಾಲಯವು ಅಂಗೀಕರಿಸಿದ್ದು, 2026ರ ಜುಲೈ 20 ರಿಂದ ಜಾರಿಗೆ ಬರಲಿದೆ ಎಂದು ಐಆರ್‌ಸಿಟಿಸಿ ಜೂನ್ 24 ರಂದು ಷೇರು ಮಾರುಕಟ್ಟೆ ನಿಯಂತ್ರಕ ಸಂಸ್ಥೆಗೆ (SEBI) ಸಲ್ಲಿಸಿದ ವರದಿಯಲ್ಲಿ ತಿಳಿಸಿದೆ. ಹೊಸ ಮುಖ್ಯಸ್ಥರ ನೇಮಕವಾಗುವವರೆಗೆ ಈ ಹುದ್ದೆಯ ಹೆಚ್ಚುವರಿ ಜವಾಬ್ದಾರಿಯನ್ನು ಯಾರಿಗೆ ವಹಿಸಬೇಕು ಎಂಬುದರ ಕುರಿತು ರೈಲ್ವೆ ಸಚಿವಾಲಯವು ಶೀಘ್ರದಲ್ಲೇ ಪ್ರತ್ಯೇಕ ಆದೇಶ ಹೊರಡಿಸಲಿದೆ.

**➤ ಸಂಜಯ್ ಕುಮಾರ್ ಜೈನ್ ಅವರ ಸಾಧನೆಗಳು ಮತ್ತು ಐಆರ್‌ಸಿಟಿಸಿ ಮೈಲಿಗಲ್ಲುಗಳು:**

ನವರತ್ನ ಮತ್ತು ಶೆಡ್ಯೂಲ್ 'A' ಸ್ಥಾನಮಾನ: ಭಾರತ ಸರ್ಕಾರವು ಐಆರ್‌ಸಿಟಿಸಿಯನ್ನು 'ಶೆಡ್ಯೂಲ್ ಬಿ' ನಿಂದ 'ಶೆಡ್ಯೂಲ್ ಎ' ಸ್ಥಾನಮಾನಕ್ಕೆ ಹಾಗೂ 'ಮಿನಿರತ್ನ-II' ನಿಂದ ಪ್ರತಿಷ್ಠಿತ 'ನವರತ್ನ' (Navratna Status) ಕಂಪನಿಯಾಗಿ ಮೇಲ್ದರ್ಜೆಗೆ ಏರಿಸಿತು.

ಸಾರ್ವಕಾಲಿಕ ದಾಖಲೆಯ ಆದಾಯ: ಹಣಕಾಸು ವರ್ಷ 2025-26 ರಲ್ಲಿ ಐಆರ್‌ಸಿಟಿಸಿ ಸಾರ್ವಕಾಲಿಕ ಗರಿಷ್ಠ ಪ್ರಗತಿ ಸಾಧಿಸಿದ್ದು, ಒಟ್ಟು ಆದಾಯ ಸುಮಾರು ₹5,215 ಕೋಟಿ ತಲುಪಿದೆ.

ಪ್ರವಾಸೋದ್ಯಮದಲ್ಲಿ ದಾಖಲೆ: ರೈಲ್ವೆ ಪ್ರವಾಸೋದ್ಯಮ ವಿಭಾಗದಿಂದಲೇ ಸಂಸ್ಥೆಯು ಬರೋಬ್ಬರಿ ₹890 ಕೋಟಿ ಆದಾಯ ಗಳಿಸುವ ಮೂಲಕ ಹೊಸ ದಾಖಲೆ ಬರೆದಿದೆ.

ಆಧುನಿಕ ತಂತ್ರಜ್ಞಾನದ ಬಳಕೆ (AI Technology): rffffರೈಲ್ವೆ ಪ್ರಯಾಣಿಕರಿಗೆ ಗುಣಮಟ್ಟದ ಆಹಾರ ಒದಗಿಸಲು ಐಆರ್ ಸಿಟಿಸಿಯ ಪ್ರಮುಖ ಅಡುಗೆಮನೆಗಳಲ್ಲಿ (Base Kitchens) ಕೃತಕ ಬುದ್ಧಿಮತ್ತೆ (AI) ಆಧಾರಿತ ಕ್ಯಾಮೆರಾಗಳನ್ನು ಅಳವಡಿಸಿ, ಆಹಾರದ ಗುಣಮಟ್ಟದ ಮೇಲೆ ಕೇಂದ್ರೀಕೃತ ನಿಗಾ ಇಡುವ ವ್ಯವಸ್ಥೆಯನ್ನು ತಂದರು.

ಇ-ಪ್ಯಾಂಟ್ರಿ ಮತ್ತು ಇ-ಟಿಕೆಟಿಂಗ್: ಮೇಲ್ ಮತ್ತು ಎಕ್ಸ್‌ಪ್ರೆಸ್ ರೈಲುಗಳಲ್ಲಿ ಪ್ರಯಾಣಿಕರು ಆನ್‌ಲೈನ್ ಮೂಲಕವೇ ಮುಂಚಿತವಾಗಿ ಊಟ ಬುಕ್ ಮಾಡುವ 'ಇ-ಪ್ಯಾಂಟ್ರಿ' (e-Pantry) ಸೇವೆಯನ್ನು ವಿಸ್ತರಿಸಲಾಯಿತು ಮತ್ತು ಟಿಕೆಟ್ ಬುಕಿಂಗ್ ಪ್ರಕ್ರಿಯೆಯನ್ನು ಮತ್ತಷ್ಟು ಸುಲಭಗೊಳಿಸಲಾಯಿತು.

**➤ ಸಂಜಯ್ ಕುಮಾರ್ ಜೈನ್ ಅವರ ಹಿನ್ನೆಲೆ:** ಭಾರತೀಯ ರೈಲ್ವೆ ಸಂಚಾರ ಸೇವೆಯ (IRTS) ಹಿರಿಯ ಅಧಿಕಾರಿಯಾದ ಇವರು ಐಆರ್‌ಸಿಟಿಸಿ ಸೇರುವ ಮುನ್ನ ಉತ್ತರ ರೈಲ್ವೆಯ ಪ್ರಿನ್ಸಿಪಲ್ ಚೀಫ್ ಕಮರ್ಷಿಯಲ್ ಮ್ಯಾನೇಜರ್ ಆಗಿ, ಸೆಂಟ್ರಲ್ ರೈಲ್ವೆಯ ಮುಂಬೈ ವಿಭಾಗದ ಡಿವಿಜನಲ್ ರೈಲ್ವೆ ಮ್ಯಾನೇಜರ್ (DRM) ಆಗಿ ಹಾಗೂ ಹಣಕಾಸು ಸಚಿವಾಲಯದ ಸಾರ್ವಜನಿಕ ಉದ್ಯಮಗಳ ಇಲಾಖೆಯಲ್ಲಿ ಜಂಟಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದರು.






## QS ಫ್ಯೂಚರ್ ಸ್ಕಿಲ್ಸ್ ಇಂಡೆಕ್ಸ್ 2027: ಭಾರತಕ್ಕೆ 13ನೇ ಸ್ಥಾನ




➤ ಇತ್ತೀಚೆಗೆ ಬಿಡುಗಡೆಯಾದ ಜಾಗತಿಕ ವರದಿಯ ಪ್ರಕಾರ, ಭಾರತವು ವಿಶ್ವದಲ್ಲೇ 13ನೇ ಸ್ಥಾನವನ್ನು ಪಡೆದುಕೊಂಡಿದೆ. ಕೃತಕ ಬುದ್ಧಿಮತ್ತೆ (Artificial Intelligence - AI), ಆಟೊಮೇಷನ್, ಮೆಷಿನ್ ಲರ್ನಿಂಗ್ ಮತ್ತು ಡಿಜಿಟಲ್ ತಂತ್ರಜ್ಞಾನದ ಯುಗಕ್ಕೆ ದೇಶದ ಯುವಶಕ್ತಿಯನ್ನು ಮತ್ತು ಉದ್ಯೋಗಿಗಳನ್ನು ಸಜ್ಜುಗೊಳಿಸುವಲ್ಲಿ ಭಾರತ ಸರ್ಕಾರ ಮತ್ತು ಶೈಕ್ಷಣಿಕ ವಲಯ ಕೈಗೊಂಡಿರುವ ಕ್ರಮಗಳಿಗೆ ಈ ಶ್ರೇಯಾಂಕವು ಸಾಕ್ಷಿಯಾಗಿದೆ.

ಜಾಗತಿಕ ಸ್ಥಾನ: ಒಟ್ಟಾರೆ ಜಾಗತಿಕ ಶ್ರೇಯಾಂಕದಲ್ಲಿ ಭಾರತಕ್ಕೆ 13ನೇ ಸ್ಥಾನ.

ಕಡಿಮೆ-ಮಧ್ಯಮ ಆದಾಯದ ದೇಶಗಳ ವಿಭಾಗ: ಲೋವರ್-ಮಿಡಲ್-ಇನ್ಕಮ್ (Lower-Middle-Income) ಆರ್ಥಿಕತೆಗಳ ಪಟ್ಟಿಯಲ್ಲಿ ಭಾರತವು ಮೊದಲ ಸ್ಥಾನವನ್ನು (Top Position) ಅಲಂಕರಿಸಿದೆ.

ವರದಿಯ ಉದ್ದೇಶ: ಈ ಸೂಚ್ಯಂಕವು ವಿವಿಧ ದೇಶಗಳು ಭವಿಷ್ಯದ ತಂತ್ರಜ್ಞಾನ ಮತ್ತು ಉದ್ಯೋಗ ಮಾರುಕಟ್ಟೆಯ ಬೇಡಿಕೆಗಳಿಗೆ ಅನುಗುಣವಾಗಿ ತಮ್ಮ ಶೈಕ್ಷಣಿಕ ವ್ಯವಸ್ಥೆ ಹಾಗೂ ಕೌಶಲ್ಯ ಅಭಿವೃದ್ಧಿಯನ್ನು ಹೇಗೆ ರೂಪಿಸುತ್ತಿವೆ ಎಂಬುದನ್ನು ಅಳೆಯುತ್ತದೆ.

**➤ ಜಾಗತಿಕ ಮಟ್ಟದಲ್ಲಿ ಅಗ್ರ 10 ದೇಶಗಳು ಮತ್ತು ಭಾರತ:**

1. ಯುನೈಟೆಡ್ ಸ್ಟೇಟ್ಸ್ (USA)
2. ಯುನೈಟೆಡ್ ಕಿಂಗ್‌ಡಮ್ (UK)
3. ಜರ್ಮನಿ
4. ಆಸ್ಟ್ರೇಲಿಯಾ
5. ಕೆನಡಾ
6. ಸಿಂಗಾಪುರ
7. ನೆದರ್ಲ್ಯಾಂಡ್ಸ್
8. ಸ್ವಿಟ್ಜರ್ಲ್ಯಾಂಡ್
9. ಜಪಾನ್
10. ದಕ್ಷಿಣ ಕೊರಿಯಾ
13. ಭಾರತ (India)

➤ QS ಫ್ಯೂಚರ್ ಸ್ಕಿಲ್ಸ್ ಇಂಡೆಕ್ಸ್ ಪ್ರಮುಖವಾಗಿ ಕೆಳಗಿನ ಅಂಶಗಳನ್ನು ಪರಿಗಣಿಸಿ ದೇಶಗಳಿಗೆ ರ್‍ಯಾಂಕಿಂಗ್ ನೀಡುತ್ತದೆ:

ಉನ್ನತ ಶಿಕ್ಷಣದ ಗುಣಮಟ್ಟ: ವಿಶ್ವವಿದ್ಯಾಲಯಗಳು ಭವಿಷ್ಯದ ತಂತ್ರಜ್ಞಾನಕ್ಕೆ ಪೂರಕವಾದ ಪಠ್ಯಕ್ರಮವನ್ನು ಹೊಂದಿವೆಯೇ ಎಂಬುದು.

ಡಿಜಿಟಲ್ ಕೌಶಲ್ಯಗಳ ಅಭಿವೃದ್ಧಿ: ಯುವಜನರಲ್ಲಿ ತಾಂತ್ರಿಕ ಜ್ಞಾನದ ಮಟ್ಟ.

ಸಂಶೋಧನೆ ಮತ್ತು ಆವಿಷ್ಕಾರ (R&D): ವೈಜ್ಞಾನಿಕ ಕ್ಷೇತ್ರಗಳಲ್ಲಿ ಆಗುತ್ತಿರುವ ಪ್ರಗತಿ.

ಉದ್ಯೋಗಾವಕಾಶ ಮತ್ತು ಉದ್ಯಮದ ಸಂಪರ್ಕ: ಶಿಕ್ಷಣ ಸಂಸ್ಥೆಗಳು ಮತ್ತು ಕಾರ್ಪೊರೇಟ್ ವಲಯದ ನಡುವಿನ ಹೊಂದಾಣಿಕೆ.

**➤ ಭಾರತದ ಬೆಳವಣಿಗೆಗೆ ಪ್ರಮುಖ ಕಾರಣಗಳು:**

ವಿಶಾಲವಾದ STEM ಪ್ರತಿಭೆ: ಭಾರತವು ಜಗತ್ತಿನಲ್ಲೇ ಅತಿ ಹೆಚ್ಚು ವಿಜ್ಞಾನ, ತಂತ್ರಜ್ಞಾನ, ಇಂಜಿನಿಯರಿಂಗ್ ಮತ್ತು ಗಣಿತ (STEM) ಪದವೀಧರರನ್ನು ಸೃಷ್ಟಿಸುವ ದೇಶಗಳಲ್ಲಿ ಒಂದಾಗಿದೆ.

ಡಿಜಿಟಲ್ ಆರ್ಥಿಕತೆಯ ವಿಸ್ತರಣೆ: ಫಿನ್‌ಟೆಕ್, ಸಾಫ್ಟ್‌ವೇರ್ ಮತ್ತು ನವೋದ್ಯಮಗಳ (Startups) ವೇಗದ ಬೆಳವಣಿಗೆ.

ಸರ್ಕಾರದ ಪ್ರೋತ್ಸಾಹಕ ಯೋಜನೆಗಳು: 'ಡಿಜಿಟಲ್ ಇಂಡಿಯಾ', 'ಸ್ಕಿಲ್ ಇಂಡಿಯಾ' ಮುಂತಾದ ಕಾರ್ಯಕ್ರಮಗಳು ಮತ್ತು AI ತಂತ್ರಜ್ಞಾನದ ಬಳಕೆಗೆ ಪೂರಕವಾದ ನಿಯಮಗಳು.

## ಭಾರತ - ಚೀನಾ ದ್ವಿಪಕ್ಷೀಯ ಸಂಬಂಧಗಳ ಕ್ರಮೇಣ ಸಹಜಸ್ಥಿತಿಗೆ ದೋವಲ್-ವಾಂಗ್ ಯಿ ಚರ್ಚೆ



➤ ಜೂನ್ 2026ರ ಪ್ರಮುಖ ಅಂತರರಾಷ್ಟ್ರೀಯ ವಿದ್ಯಮಾನವೊಂದರಲ್ಲಿ, ಭಾರತ ಮತ್ತು ಚೀನಾ ದೇಶಗಳು ತಮ್ಮ ನಡುವಿನ ದ್ವಿಪಕ್ಷೀಯ ಸಂಬಂಧಗಳನ್ನು ಕ್ರಮೇಣ ಸಹಜ ಸ್ಥಿತಿಗೆ (Gradual Normalisation) ತರುವ ಕುರಿತು ಮಹತ್ವದ ಮಾತುಕತೆ ನಡೆಸಿವೆ. ನವದೆಹಲಿಯಲ್ಲಿ ನಡೆದ ಬ್ರಿಕ್ಸ್ (BRICS) ರಾಷ್ಟ್ರೀಯ ಭದ್ರತಾ ಸಲಹೆಗಾರರ ಸಭೆಯ ನೇಪಥ್ಯದಲ್ಲಿ ಭಾರತದ ರಾಷ್ಟ್ರೀಯ ಭದ್ರತಾ ಸಲಹೆಗಾರ (NSA) ಅಜಿತ್ ದೋವಲ್ ಮತ್ತು ಚೀನಾದ ವಿದೇಶಾಂಗ ಸಚಿವ ವಾಂಗ್ ಯಿ ಅವರು ಈ ಉನ್ನತ ಮಟ್ಟದ ಪರಿಶೀಲನಾ ಸಭೆ ನಡೆಸಿದ್ದಾರೆ.

**➤ ಪ್ರಮುಖ ಮುಖ್ಯಾಂಶಗಳು:**

ಸಭೆಯ ಸಂದರ್ಭ: ನವದೆಹಲಿಯಲ್ಲಿ ಜೂನ್ 22-23, 2026 ರಂದು ಭಾರತದ ಅಧ್ಯಕ್ಷತೆಯಲ್ಲಿ ನಡೆದ 16ನೇ ಬ್ರಿಕ್ಸ್ (BRICS) ರಾಷ್ಟ್ರೀಯ ಭದ್ರತಾ ಸಲಹೆಗಾರರ ಸಭೆಯ ಅಂಗವಾಗಿ ಈ ದ್ವಿಪಕ್ಷೀಯ ಮಾತುಕತೆ ಜರುಗಿದೆ.

ಸಂಬಂಧಗಳ ಸಹಜಸ್ಥಿತಿ: ಉಭಯ ದೇಶಗಳ ನಡುವಿನ ಸಂಬಂಧಗಳು "ಕ್ರಮೇಣ ಸಹಜ ಸ್ಥಿತಿಯತ್ತ" ಸಾಗುತ್ತಿರುವುದನ್ನು ಉಭಯ ನಾಯಕರು ಸ್ವಾಗತಿಸಿದ್ದಾರೆ.

ಸ್ಥಿರತೆಯ ಪ್ರಾಮುಖ್ಯತೆ: ಸಭೆಯಲ್ಲಿ ಮಾತನಾಡಿದ ಅಜಿತ್ ದೋವಲ್ ಅವರು, "ಸ್ಥಿರ, ಊಹಿಸಬಹುದಾದ ಮತ್ತು ರಚನಾತ್ಮಕ ದ್ವಿಪಕ್ಷೀಯ ಸಂಬಂಧಗಳು ಎರಡು ರಾಷ್ಟ್ರಗಳ ನಡುವೆ ಪರಸ್ಪರ ನಂಬಿಕೆ ಹಾಗೂ ಉತ್ತಮ ತಿಳುವಳಿಕೆಯನ್ನು ವೃದ್ಧಿಸಲು ಸಹಾಯ ಮಾಡುತ್ತವೆ" ಎಂದು ಪ್ರತಿಪಾದಿಸಿದರು.

ಸಂವಾದ ಕಾರ್ಯವಿಧಾನಗಳ ಪುನರಾರಂಭ: ಚೀನಾದ ವಿದೇಶಾಂಗ ಸಚಿವ ವಾಂಗ್ ಯಿ ಅವರು ವ್ಯಾಪಾರ, ಹಣಕಾಸು, ಕಾನೂನು ಜಾರಿ ಮತ್ತು ಮಾಧ್ಯಮ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸ್ಥಗಿತಗೊಂಡಿದ್ದ ದ್ವಿಪಕ್ಷೀಯ ಮಾತುಕತೆಗಳನ್ನು ವೇಗಗೊಳಿಸಲು ಕರೆ ನೀಡಿದ್ದಾರೆ. ಚೀನಾ ಮತ್ತು ಭಾರತ ಪರಸ್ಪರ ಪ್ರತಿಸ್ಪರ್ಧಿಗಳಲ್ಲ, ಬದಲಿಗೆ ಪಾಲುದಾರರು ಎಂಬ ಆಯಕಟ್ಟಿನ ಒಮ್ಮತವನ್ನು ಅವರು ಪುನರುಚ್ಚರಿಸಿದ್ದಾರೆ.

➤ ಗಡಿ ವಿವಾದ: 2020ರಲ್ಲಿ ಪೂರ್ವ ಲಡಾಖ್‌ನ ಗಡಿ ನಿಯಂತ್ರಣ ರೇಖೆ (LAC) ಬಳಿ ಸಂಭವಿಸಿದ ಸೇನಾ ಸಂಘರ್ಷದ ನಂತರ ಉಭಯ ದೇಶಗಳ ನಡುವಿನ ಸಂಬಂಧಗಳು ತೀವ್ರವಾಗಿ ಹದಗೆಟ್ಟಿದ್ದವು. ಆದರೆ, ಅಕ್ಟೋಬರ್ 2024ರಲ್ಲಿ ಡೆಪ್ಸಾಂಗ್ ಮತ್ತು ಡೆಮ್‌ಚೋಕ್ ಪ್ರದೇಶಗಳಲ್ಲಿ ಗಸ್ತು ವ್ಯವಸ್ಥೆಗೆ ಸಂಬಂಧಿಸಿದಂತೆ ಐತಿಹಾಸಿಕ ಒಪ್ಪಂದ ಏರ್ಪಟ್ಟ ನಂತರ ಗಡಿಯಲ್ಲಿ ಉದ್ವಿಗ್ನತೆ ತಗ್ಗಿದೆ. ಇತ್ತೀಚೆಗೆ 2026ರ ಜೂನ್ ತಿಂಗಳಿನಲ್ಲಿ ಕೈಲಾಶ ಮಾನಸಸರೋವರ ಯಾತ್ರೆಯು ನಾಥೂ ಲಾ ಪಾಸ್ ಮೂಲಕ ಪುನರಾರಂಭಗೊಂಡಿರುವುದು ಉಭಯ ದೇಶಗಳ ನಾಗರಿಕರ ನಡುವಿನ ಸಂಬಂಧ ಸುಧಾರಣೆಗೆ ಮತ್ತೊಂದು ಸಾಕ್ಷಿಯಾಗಿದೆ.

## ಸಾರ್ವಜನಿಕ ನೀತಿಗಳ ಯಶಸ್ಸು ಜನರ ಮೇಲಾಗುವ ಪ್ರಭಾವದಲ್ಲಿದೆ – ಐಎಎಸ್ ಪ್ರಶಿಕ್ಷಣಾರ್ಥಿಗಳಿಗೆ ಪ್ರಧಾನಿ ಮೋದಿ ಕಿವಿಮಾತು



➤ ಆಡಳಿತದ ಪ್ರತಿಯೊಂದು ಫೈಲ್ ಕೇವಲ ಕಾಗದದ ತುಣುಕಲ್ಲ; ಅದರ ಹಿಂದೆ ದೇಶದ ಕೋಟ್ಯಂತರ ನಾಗರಿಕರ ಆಶೋತ್ತರಗಳು, ಆತಂಕಗಳು ಮತ್ತು ಜೀವನ ಅಡಗಿರುತ್ತದೆ. ಹೀಗಾಗಿ ಪ್ರತಿಯೊಂದು ನೀತಿಯನ್ನು ರೂಪಿಸುವಾಗ ಮತ್ತು ಜಾರಿಗೊಳಿಸುವಾಗ ಜನರ ಮೇಲಾಗುವ ಪ್ರಭಾವವನ್ನು ನಿರಂತರವಾಗಿ ಮೌಲ್ಯಮಾಪನ ಮಾಡಬೇಕು" ಎಂದು ಪ್ರಧಾನಿ ನರೇಂದ್ರ ಮೋದಿ ಅವರು ನೂತನ ಐಎಎಸ್ ಪ್ರಶಿಕ್ಷಣಾರ್ಥಿಗಳಿಗೆ (IAS Trainees) ಕರೆ ನೀಡಿದ್ದಾರೆ.

➤ ನವದೆಹಲಿಯಲ್ಲಿ ವಿವಿಧ ಸಚಿವಾಲಯಗಳು ಮತ್ತು ಇಲಾಖೆಗಳಲ್ಲಿ ಸಹಾಯಕ ಕಾರ್ಯದರ್ಶಿಗಳಾಗಿ (Assistant Secretaries) ಸೇವೆ ಸಲ್ಲಿಸುತ್ತಿರುವ 2024ರ ಬ್ಯಾಚ್‌ನ 183 ಐಎಎಸ್ ಅಧಿಕಾರಿಗಳೊಂದಿಗೆ ನಡೆಸಿದ ಸಂವಾದದಲ್ಲಿ ಪ್ರಧಾನಿ ಈ ಪ್ರಮುಖ ವಿಚಾರಗಳನ್ನು ಹಂಚಿಕೊಂಡಿದ್ದಾರೆ.

ಮಾನವೀಯ ಆಡಳಿತಕ್ಕೆ ಒತ್ತು: ಪ್ರತಿಯೊಂದು ಆಡಳಿತಾತ್ಮಕ ನಿರ್ಧಾರದ ಹಿಂದೆ ಇರುವ 'ಮಾನವೀಯ ಮುಖ'ವನ್ನು (Human

Impact) ಅಧಿಕಾರಿಗಳು ಎಂದಿಗೂ ಮರೆಯಬಾರದು ಎಂದು ಪ್ರಧಾನಿ ಸೂಚಿಸಿದರು.

ದತ್ತಾಂಶ ಆಧಾರಿತ ಆಡಳಿತ (Data-Driven Governance): ದತ್ತಾಂಶ ಅಥವಾ ಡೇಟಾವನ್ನು ಕೇವಲ ಅಂಕಿ-ಅಂಶಗಳಾಗಿ ನೋಡದೆ, ಅವುಗಳ ಹಿಂದೆ ಇರುವ ಲಕ್ಷಾಂತರ ಜನರ ಬದುಕು ಮತ್ತು ಸವಾಲುಗಳ ಪ್ರತಿಬಿಂಬ ಎಂದು ಪರಿಗಣಿಸಬೇಕು.

ಸಂಯೋಜಿತ ಆಡಳಿತ (Coordinated Governance): ಅಭಿವೃದ್ಧಿಯ ಸವಾಲುಗಳನ್ನು ಯಾವುದೇ ಒಂದು ಇಲಾಖೆ ಒಂಟಿಯಾಗಿ ಎದುರಿಸಲು ಸಾಧ್ಯವಿಲ್ಲ. ಇಲಾಖೆಗಳ ನಡುವಿನ ಸಮನ್ವಯತೆ ಅತ್ಯಗತ್ಯ.

ಮಹಿಳಾ ಪ್ರಾತಿನಿಧ್ಯ: ಪ್ರಸ್ತುತ ಬ್ಯಾಚ್‌ನಲ್ಲಿ ಶೇಕಡಾ 40 ಕ್ಕಿಂತ ಹೆಚ್ಚು ಮಹಿಳಾ ಅಧಿಕಾರಿಗಳಿರುವುದನ್ನು ಶ್ಲಾಘಿಸಿದ ಪ್ರಧಾನಿ, ರಾಷ್ಟ್ರ ನಿರ್ಮಾಣದಲ್ಲಿ ಮಹಿಳೆಯರ ಪಾತ್ರ ಹಿರಿದಾದುದು ಎಂದರು.

## ಬಡ್ಡಿ ದರ ಏರಿಕೆ ಬಗ್ಗೆ ಮಾತನಾಡುವುದು ತೀರಾ ಅವಸರ: ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ಸ್ಪಷ್ಟನೆ



➤ ಭಾರತೀಯ ರಿಸರ್ವ್ ಬ್ಯಾಂಕ್ (RBI) ಗವರ್ನರ್ ಸಂಜಯ್ ಮಲ್ಹೋತ್ರಾ ಅವರು ಪ್ರಸ್ತುತ ಆರ್ಥಿಕ ಪರಿಸ್ಥಿತಿಯಲ್ಲಿ ಬಡ್ಡಿದರ (Interest Rate / Repo Rate) ಏರಿಕೆಯ ಬಗ್ಗೆ ಚರ್ಚಿಸುವುದು "ತೀರಾ ಮುಂಚಿತ" (Premature) ಎಂದು ಸ್ಪಷ್ಟಪಡಿಸಿದ್ದಾರೆ. ಮಾರುಕಟ್ಟೆಯಲ್ಲಿ ವಿತ್ತೀಯ ನೀತಿಯನ್ನು ಬಿಗಿಗೊಳಿಸುವ (ಬಡ್ಡಿ ದರ ಹೆಚ್ಚಳ) ನಿರೀಕ್ಷೆಗಳಿದ್ದರೂ, ಆರ್‌ಬಿಐ ಪ್ರಸ್ತುತ 'ಕಾದು ನೋಡುವ' (Wait-and-watch mode) ತಂತ್ರವನ್ನು ಅನುಸರಿಸುತ್ತಿದೆ.

➤ ಹಣಕಾಸು ನೀತಿಯ ನಿಲುವು (Monetary Policy Stance): ಆರ್‌ಬಿಐ ತನ್ನ ಪ್ರಸ್ತುತ ವಿತ್ತೀಯ ನಿಲುವನ್ನು ತಟಸ್ಥವಾಗಿ (Neutral stance) ಇರಿಸಿದೆ. ಗವರ್ನರ್ ಮಲ್ಹೋತ್ರಾ ಅವರ ಪ್ರಕಾರ, "ಒಂದು ವೇಳೆ ಬಡ್ಡಿದರ ಏರಿಸುವ ಉದ್ದೇಶವಿದ್ದಿದ್ದರೆ, ಆರ್‌ಬಿಐ ತನ್ನ ನಿಲುವನ್ನು 'ನಿರ್ಬಂಧಿತ' (Restrictive) ಎಂದು ಬದಲಾಯಿಸುತ್ತಿತ್ತು." ಆದ್ದರಿಂದ ಸದ್ಯಕ್ಕೆ ರೆಪೊ ದರ (Repo Rate) ಹೆಚ್ಚಳದ ಯಾವುದೇ ಸೂಚನೆಗಳಿಲ್ಲ.

➤ ಹಣದುಬ್ಬರ ನಿಯಂತ್ರಣದಲ್ಲಿದೆ (Inflation Trends): ದೇಶದಲ್ಲಿ ಹಣದುಬ್ಬರ (Inflation) ಆರ್‌ಬಿಐನ ಶೇ. 4ರ ಗುರಿಗಿಂತ ಕೆಳಗಿದೆ. ಪ್ರಮುಖವಾಗಿ ಆಹಾರ ಪದಾರ್ಥಗಳ ಬೆಲೆಗಳ ಏರಿಕೆಯಿಂದಾಗಿ ಹಣದುಬ್ಬರ ಕಂಡುಬರುತ್ತಿದ್ದರೂ, ಪ್ರಮುಖ ಹಣದುಬ್ಬರ ಅಥವಾ ಕೋರ್ ಹಣದುಬ್ಬರ (Core Inflation) ಕೇವಲ ಶೇ. 2.4 ರಷ್ಟು ಮಾತ್ರ ಇದೆ. ಇದು ಆರ್ಥಿಕತೆಗೆ ಸಕಾರಾತ್ಮಕ ಅಂಶವಾಗಿದೆ.

➤ ಜಾಗತಿಕ ವಿದ್ಯಮಾನಗಳು (Global Factors): ಪಶ್ಚಿಮ ಏಷ್ಯಾದಲ್ಲಿ (West Asia) ಉದ್ವಿಗ್ನತೆ ಸ್ವಲ್ಪ ಮಟ್ಟಿಗೆ ಶಮನವಾಗಿರುವುದು ಮತ್ತು ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ (Crude Oil) ಬೆಲೆ ಇಳಿಕೆಯಾಗಿರುವುದು ಭಾರತದ ಆರ್ಥಿಕ ಪ್ರಗತಿಗೆ ವರದಾನವಾಗಿದೆ. ಇದು ದೇಶದೊಳಗೆ ಹಣದುಬ್ಬರವನ್ನು ಹತೋಟಿಯಲ್ಲಿಡಲು ಬಹುಮುಖ್ಯ ಕಾರಣವಾಗಿದೆ ಎಂದು ಅವರು ತಿಳಿಸಿದ್ದಾರೆ.

➤ ರೂಪಾಯಿ ಮೌಲ್ಯ ಮತ್ತು ಬಂಡವಾಳ ಹರಿವು (Rupee & Capital Flows): ಭಾರತೀಯ ರೂಪಾಯಿ ಮೌಲ್ಯವು ಸಂಪೂರ್ಣವಾಗಿ ಮಾರುಕಟ್ಟೆ ಆಧಾರಿತವಾಗಿದೆ (Market-determined). ಕೇವಲ ಅತಿಯಾದ ಏರಿಳಿತಗಳನ್ನು ನಿಯಂತ್ರಿಸಲು ಮಾತ್ರ ಆರ್‌ಬಿಐ ಮಧ್ಯಪ್ರವೇಶಿಸುತ್ತದೆ. ಎಫ್‌ಸಿಎನ್‌ಆರ್ (FCNR - Foreign Currency Non-Resident) ಠೇವಣಿಗಳು ಮತ್ತು ಇಸಿಬಿ (ECB - External Commercial Borrowings) ಮೂಲಕ ವಿದೇಶಿ ಬಂಡವಾಳ ಹರಿವು ಉತ್ತಮವಾಗಿದೆ.

➤ ಒಟ್ಟಾರೆಯಾಗಿ, ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ಅವರ ಹೇಳಿಕೆಯು ಭಾರತೀಯ ಆರ್ಥಿಕತೆಯು ಸದ್ಯದ ಮಟ್ಟಿಗೆ ಸ್ಥಿರವಾಗಿದೆ ಎಂಬುದನ್ನು ಸಾರುತ್ತದೆ. ಯಾವುದೇ ದಿಢೀರ್ ಬಡ್ಡಿದರ ಏರಿಕೆಯು ಮಾರುಕಟ್ಟೆಯ ಬೆಳವಣಿಗೆಯನ್ನು ಕುಂಠಿತಗೊಳಿಸುವ ಸಾಧ್ಯತೆ ಇರುವುದರಿಂದ, ಆರ್‌ಬಿಐ ದತ್ತಾಂಶ ಆಧಾರಿತ (Data-dependent) ನಿರ್ಧಾರಗಳನ್ನು ಮಾತ್ರ ತೆಗೆದುಕೊಳ್ಳಲಿದೆ.

## ಇರಾನ್ ಪರಮಾಣು ತಾಣಗಳ ಮೇಲೆ ಐಎಇಎ (IAEA) ನಿಗಾ: ಅಮೆರಿಕ-ಇರಾನ್ ನಡುವೆ ತೀವ್ರಗೊಂಡ ವಿವಾದ!




➤ ಜಾಗತಿಕ ರಾಜತಾಂತ್ರಿಕ ವಲಯದಲ್ಲಿ ಇರಾನ್‌ನ ಪರಮಾಣು ಕಾರ್ಯಕ್ರಮ ಮತ್ತೊಮ್ಮೆ ತೀವ್ರ ಚರ್ಚೆಗೆ ಗ್ರಾಸವಾಗಿದೆ. ಇರಾನ್‌ನ ಪ್ರಮುಖ ಯುರೇನಿಯಂ ಸಮೃದ್ಧಗೊಳಿಸುವ (Uranium Enrichment) ಪರಮಾಣು ತಾಣಗಳ ಮೇಲೆ ಅಂತರರಾಷ್ಟ್ರೀಯ ಪರಮಾಣು ಶಕ್ತಿ ಸಂಸ್ಥೆ (IAEA) ಶೀಘ್ರದಲ್ಲೇ ತಪಾಸಣೆ ನಡೆಸಲಿದೆ ಎಂದು ಸಂಸ್ಥೆಯ ಮುಖ್ಯಸ್ಥ ರಾಫೆಲ್ ಗ್ರೊಸ್ಸಿ ಸ್ಪಷ್ಟಪಡಿಸಿದ್ದಾರೆ. ಆದರೆ, ಇರಾನ್ ಈ ಹೇಳಿಕೆಯನ್ನು ತಳ್ಳಿಹಾಕಿದ್ದು, ಅಮೆರಿಕ ಮತ್ತು ಇರಾನ್ ನಡುವಿನ ಜಾಗತಿಕ ಸಂಘರ್ಷ ಹೊಸ ತಿರುವು ಪಡೆದುಕೊಂಡಿದೆ.

➤ ಹಿನ್ನೆಲೆ: ಕಳೆದ ವರ್ಷ (2025) ಇರಾನ್ ಮತ್ತು ಇಸ್ರೇಲ್ ನಡುವೆ ನಡೆದ 12 ದಿನಗಳ ಯುದ್ಧದ ಸಂದರ್ಭದಲ್ಲಿ, ಇರಾನ್‌ನ ಪ್ರಮುಖ ಪರಮಾಣು ಕೇಂದ್ರಗಳಾದ ಫೋರ್ಡೋ (Fordow), ನಟಾಂಜ್ (Natanz) ಮತ್ತು ಇಸ್ಫಹಾನ್ (Isfahan) ತಾಣಗಳ ಮೇಲೆ ಅಮೆರಿಕ ಮತ್ತು ಇಸ್ರೇಲ್ ಬಾಂಬ್ ದಾಳಿ ನಡೆಸಿದ್ದವು. ಈ ದಾಳಿಯ ನಂತರ, ಇರಾನ್ ಜಾಗತಿಕ ಪರಮಾಣು ಕಾವಲು ಸಂಸ್ಥೆಯಾದ IAEA ನೊಂದಿಗೆ ತನ್ನ ಸಹಕಾರವನ್ನು ಸ್ಥಗಿತಗೊಳಿಸಿತ್ತು ಮತ್ತು ತಪಾಸಣಾಧಿಕಾರಿಗಳಿಗೆ ನಿರ್ಬಂಧ ಹೇರಿತ್ತು.

**➤ ಪ್ರಸ್ತುತ ಬೆಳವಣಿಗೆಗಳು:**

ಒಪ್ಪಂದದ ಹಕ್ಕು ಮತ್ತು ಐಎಇಎ ನಿಲುವು: ಇತ್ತೀಚೆಗೆ ಅಮೆರಿಕ ಮತ್ತು ಇರಾನ್ ನಡುವೆ ಸ್ವಿಟ್ಜರ್ಲೆಂಡ್‌ನಲ್ಲಿ ತಾತ್ಕಾಲಿಕ ಒಪ್ಪಂದವೊಂದು (MoU) ಏರ್ಪಟ್ಟಿದೆ. ಜಪಾನ್‌ನ ಫುಕುಶಿಮಾ ಪರಮಾಣು ಸ್ಥಾವರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ IAEA ಮುಖ್ಯಸ್ಥ ರಾಫೆಲ್ ಗ್ರೊಸ್ಸಿ, "ಉಭಯ ದೇಶಗಳ ಅಧ್ಯಕ್ಷರು ಸಹಿ ಹಾಕಿರುವ ಒಪ್ಪಂದದ ಪ್ರಕಾರ, ಇರಾನ್‌ನ ಪರಮಾಣು ತಾಣಗಳ ಮೇಲ್ವಿಚಾರಣೆಯನ್ನು ಐಎಇಎ ಮಾಡಬೇಕೆಂಬುದು ಸ್ಪಷ್ಟವಾಗಿದೆ. ಇಂದಲ್ಲದಿದ್ದರೆ ನಾಳೆ ಅಥವಾ ಇನ್ನು ಹತ್ತು ದಿನಗಳಲ್ಲಿ ತಪಾಸಣೆ ನಡೆಯುವುದು ಖಚಿತ" ಎಂದಿದ್ದಾರೆ.

**ಇರಾನ್‌ನ ನಿರಾಕರಣೆ:** ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ಎಸ್ಮಾಯಿಲ್ ಬಘೈ ಮತ್ತು ಉಪ ವಿದೇಶಾಂಗ ಸಚಿವ ಕಾಜೆಮ್ ಘರೀಬಾಬಾದಿ ಈ ತಪಾಸಣೆಯನ್ನು ಸ್ಪಷ್ಟವಾಗಿ ನಿರಾಕರಿಸಿದ್ದಾರೆ. ದಾಳಿಗೆ ಒಳಗಾದ ಪರಮಾಣು ಕೇಂದ್ರಗಳ ತಪಾಸಣೆಗೆ ಯಾವುದೇ ಪ್ರತ್ಯೇಕ ಪ್ರೋಟೋಕಾಲ್ ಇಲ್ಲ ಮತ್ತು ಅಮೆರಿಕ ತನ್ನ ಮೇಲಿನ ಎಲ್ಲಾ ಆರ್ಥಿಕ ನಿರ್ಬಂಧಗಳನ್ನು ಸಂಪೂರ್ಣವಾಗಿ ತೆಗೆದುಹಾಕುವವರೆಗೂ ಯಾವುದೇ ತಪಾಸಣೆಗೆ ಅವಕಾಶ ನೀಡುವುದಿಲ್ಲ ಎಂದು ಇರಾನ್ ಪಟ್ಟು ಹಿಡಿದಿದೆ.

ಡೊನಾಲ್ಡ್ ಟ್ರಂಪ್ ಹೇಳಿಕೆ: ಇದೇ ವೇಳೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು, ಇರಾನ್ ಭವಿಷ್ಯದಲ್ಲಿ ಅತ್ಯುನ್ನತ ಮಟ್ಟದ ಪರಮಾಣು ತಪಾಸಣೆಗೆ ಸಂಪೂರ್ಣವಾಗಿ

ಒಪ್ಪಿಕೊಂಡಿದೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಹೇಳಿಕೆ ನೀಡಿದ್ದಾರೆ.

## 2028ರ ವೇಳೆಗೆ ಭಾರತದ ಮೊದಲ 'ಹಾರುವ ಟ್ಯಾಕ್ಸಿ' ವಾಣಿಜ್ಯ ಉತ್ಪಾದನೆ! ಇ ಪ್ಲೇನ್ ಕಂಪನಿಯ ಸಾಧನೆ




➤ ಭಾರತದ ಸಾರಿಗೆ ಮತ್ತು ವೈದ್ಯಕೀಯ ಕ್ಷೇತ್ರದಲ್ಲಿ ಕ್ರಾಂತಿ ಸೃಷ್ಟಿಸಬಲ್ಲ ವಿದ್ಯುತ್ ಚಾಲಿತ ಹಾರುವ ಟ್ಯಾಕ್ಸಿ (Electric Flying Taxi) ಉತ್ಪಾದನೆಗೆ ದಿನಗಣನೆ ಆರಂಭವಾಗಿದೆ. ಐಐಟಿ ಮದ್ರಾಸ್ (IIT Madras) ಇನ್‌ಕ್ಯುಬೇಟ್ ಮಾಡಿರುವ 'ದಿ ಇ ಪ್ಲೇನ್ ಕಂಪನಿ' (The ePlane Company) ತನ್ನ ಸಂಪೂರ್ಣ ಪ್ರಮಾಣದ ಎಲೆಕ್ಟ್ರಿಕ್ ವರ್ಟಿಕಲ್ ಟೇಕ್‌ಆಫ್ ಮತ್ತು ಲ್ಯಾಂಡಿಂಗ್ (eVTOL) ವಿಮಾನದ ಮೂಲಮಾದರಿಯಾದ 'e200X (PT-01)' ಜೋಡಣೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ.

➤ ಕಂಪನಿಯು 2028ರ ವೇಳೆಗೆ ಇದರ ವಾಣಿಜ್ಯ ಉತ್ಪಾದನೆಯನ್ನು (Commercial Production) ಪ್ರಾರಂಭಿಸುವ ಗುರಿಯನ್ನು ಹೊಂದಿದ್ದು, ಆರಂಭದಲ್ಲಿ ವರ್ಷಕ್ಕೆ 80 ವಿಮಾನಗಳನ್ನು ತಯಾರಿಸಲು ಯೋಜಿಸಿದೆ.

➤ **eVTOL ತಂತ್ರಜ್ಞಾನ:** eVTOL ಎಂದರೆ Electric Vertical Takeoff and Landing (ವಿದ್ಯುತ್ ಲಂಬ ಟೇಕ್‌ಆಫ್ ಮತ್ತು ಲ್ಯಾಂಡಿಂಗ್). ಅಂದರೆ, ಈ ವಿಮಾನಗಳು ಹೆಲಿಕಾಪ್ಟರ್‌ನಂತೆ ರನ್ ವೇ ಇಲ್ಲದೆಯೇ ನೇರವಾಗಿ ಮೇಲಕ್ಕೆ ಹಾರಬಲ್ಲವು ಮತ್ತು ನೇರವಾಗಿ ಕೆಳಗಿಳಿಯಬಲ್ಲವು. ಆದರೆ, ಇವು ಸಂಪೂರ್ಣವಾಗಿ ವಿದ್ಯುತ್ ಬ್ಯಾಟರಿ ಮತ್ತು ಕ್ಲೀನ್ ಎನರ್ಜಿ ಮೂಲಕ ಕಾರ್ಯನಿರ್ವಹಿಸುತ್ತವೆ. ಇ ಪ್ಲೇನ್ ಕಂಪನಿ ಸಿದ್ಧಪಡಿಸಿರುವ e200X ವಿಮಾನವನ್ನು ಕೇವಲ ಪ್ರಯಾಣಿಕರ ಸಾರಿಗೆಗಾಗಿ ಮಾತ್ರವಲ್ಲದೆ, ಬಹುಮುಖಿ ಉದ್ದೇಶಗಳಿಗಾಗಿ (Multi-role platform) ಬಳಸಬಹುದಾಗಿದೆ.

➤ **e200X ವಿಮಾನದ ಪ್ರಮುಖ ಅನ್ವಯಗಳು (Applications):**
ಏರ್ ಆಂಬ್ಯುಲೆನ್ಸ್ ಸೇವೆಗಳು (Air Ambulance): ತುರ್ತು ಸಂದರ್ಭಗಳಲ್ಲಿ ರೋಗಿಗಳನ್ನು ಟ್ರಾಫಿಕ್ ಕಿರಿಕಿರಿಯಿಲ್ಲದೆ ಆಸ್ಪತ್ರೆಗೆ ತಲುಪಿಸಲು.
ಏರ್ ಟ್ಯಾಕ್ಸಿ ಕಾರ್ಯಾಚರಣೆ (Air Taxi): ನಗರ ಪ್ರದೇಶಗಳಲ್ಲಿ ಗಂಟೆಗಟ್ಟಲೆ ಇರುವ ಟ್ರಾಫಿಕ್ ಜ್ಯಾಮ್ ತಪ್ಪಿಸಿ ವೇಗವಾಗಿ ಪ್ರಯಾಣಿಸಲು.
ನಗರ ಸರಕು ಸಾಗಣೆ (Urban Cargo Transport): ನಗರದೊಳಗೆ ವೇಗವಾಗಿ ಇ-ಕಾಮರ್ಸ್ ಮತ್ತು ಅಗತ್ಯ ವಸ್ತುಗಳ ವಿತರಣೆಗಾಗಿ.

➤ **ಪ್ರಮಾಣೀಕರಣ ಮತ್ತು ಉತ್ಪಾದನಾ ಯೋಜನೆ:** ಚೆನ್ನೈನಲ್ಲಿ ಪ್ರಸ್ತುತ ಈ ವಿಮಾನದ ಗ್ರೌಂಡ್ ಟೆಸ್ಟಿಂಗ್ (ಭೂ-ಪರೀಕ್ಷೆ) ಹಂತ ಆರಂಭವಾಗಿದೆ. ಭಾರತದ ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯ (DGCA - Directorate General of Civil Aviation) ದಿಂದ ಈ ಕೆಳಗಿನಂತೆ ಅನುಮೋದನೆ ಪಡೆಯಲು ಕಂಪನಿ ಯೋಜಿಸಿದೆ:
2027ರ ದ್ವಿತೀಯಾರ್ಧದ ಆರಂಭ: ಏರ್ ಆಂಬ್ಯುಲೆನ್ಸ್ ಆವೃತ್ತಿಗೆ DGCA ಪ್ರಮಾಣೀಕರಣ ಪಡೆಯುವುದು.
2027ರ ಅಂತ್ಯದ ವೇಳೆಗೆ: ಏರ್ ಟ್ಯಾಕ್ಸಿ ಮತ್ತು ಕಾರ್ಗೋ (ಸರಕು ಸಾಗಣೆ) ಆವೃತ್ತಿಗಳಿಗೆ ಪ್ರಮಾಣೀಕರಣ ಪಡೆದುಕೊಳ್ಳುವುದು.
ತದನಂತರ ಅಂತರರಾಷ್ಟ್ರೀಯ ಮಟ್ಟದಲ್ಲೂ ಇದರ ಮಾನ್ಯತೆಗಾಗಿ (International Validation) ಅರ್ಜಿ ಸಲ್ಲಿಸಲಾಗುತ್ತದೆ.

➤ **ಬಿಲಿಯನ್ ಡಾಲರ್ ಒಪ್ಪಂದ ಮತ್ತು ಧನಸಹಾಯ:**
ICATT ಒಪ್ಪಂದ: ಫೆಬ್ರವರಿ 2025 ರಲ್ಲಿ, ಇ ಪ್ಲೇನ್ ಕಂಪನಿಯು ಏರ್ ಆಂಬ್ಯುಲೆನ್ಸ್ ಸೇವೆ ಒದಗಿಸುವ ಪ್ರಮುಖ ಸಂಸ್ಥೆಯಾದ ICATT ಜೊತೆ 1 ಬಿಲಿಯನ್ ಯುಎಸ್ ಡಾಲರ್ (USD 1 Billion) ಗಿಂತ ಹೆಚ್ಚಿನ ಮೌಲ್ಯದ ಒಪ್ಪಂದಕ್ಕೆ ಸಹಿ ಹಾಕಿದೆ. ಇದರ ಅಡಿಯಲ್ಲಿ ಕಂಪನಿಯು 788 ಏರ್ ಆಂಬ್ಯುಲೆನ್ಸ್‌ಗಳನ್ನು ಪೂರೈಸಲಿದ್ದು, 2027-2028ರ ನಡುವೆ ವಿತರಣೆ ಆರಂಭವಾಗಲಿದೆ.
ಹೂಡಿಕೆ (Funding): ಕಂಪನಿಯು ತನ್ನ eVTOL ಕಾರ್ಯಕ್ರಮಕ್ಕಾಗಿ ಈಗಾಗಲೇ ಸುಮಾರು 21 ಮಿಲಿಯನ್ ಡಾಲರ್ ಸಂಗ್ರಹಿಸಿದ್ದು, ಮುಂದಿನ ಹಂತವಾಗಿ 40 ರಿಂದ 50 ಮಿಲಿಯನ್ ಡಾಲರ್ ಹೂಡಿಕೆ (Series C funding) ಪಡೆಯಲು ಸಜ್ಜಾಗಿದೆ.

## 25 June 2026

## ಭಾರತದ ಎಥೆನಾಲ್ ಮಿಶ್ರಣ ಯೋಜನೆ (EBP) ಮತ್ತು E20 ಇಂಧನ ವಿವಾದ: ಸರ್ಕಾರದ ಮಹತ್ವದ ಸ್ಪಷ್ಟನೆ



➤ ಭಾರತದಲ್ಲಿ ಇತ್ತೀಚಿನ ದಿನಗಳಲ್ಲಿ ಇಂಧನ ಮಿಶ್ರಣ ಕಾರ್ಯಕ್ರಮ (Ethanol Blending Programme - EBP) ಮತ್ತು ಅದರಲ್ಲಿ ಬಳಸಲಾಗುವ E20 ಇಂಧನದ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಸಾಕಷ್ಟು ಚರ್ಚೆಗಳು, ಅನುಮಾನಗಳು ಮತ್ತು ವಿಡಿಯೋಗಳು ವೈರಲ್ ಆಗುತ್ತಿವೆ. ಈ ಹಿನ್ನೆಲೆಯಲ್ಲಿ ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯವು ಜೂನ್ 2026 ರಲ್ಲಿ ಮಹತ್ವದ ಸ್ಪಷ್ಟನೆಯನ್ನು ನೀಡಿದೆ.

➤ E20 ಎಂದರೆ ಪೆಟ್ರೋಲ್‌ನಲ್ಲಿ 20% ಎಥೆನಾಲ್ ಅನ್ನು ಮಿಶ್ರಣ ಮಾಡುವುದು. ಭಾರತವು 2003 ರಿಂದಲೇ ಎಥೆನಾಲ್ ಮಿಶ್ರಣ ಕಾರ್ಯಕ್ರಮವನ್ನು ಜಾರಿಗೆ ತಂದಿದ್ದು, ಕಚ್ಚಾ ತೈಲ ಆಮದನ್ನು ಕಡಿಮೆ ಮಾಡುವುದು, ಇಂಧನ ಭದ್ರತೆಯನ್ನು ಹೆಚ್ಚಿಸುವುದು ಮತ್ತು ಕೃಷಿ ಕ್ಷೇತ್ರಕ್ಕೆ ಬೆಂಬಲ ನೀಡುವುದು ಇದರ ಮುಖ್ಯ ಉದ್ದೇಶವಾಗಿದೆ. ಈ ಯೋಜನೆಯಿಂದ ಭಾರತವು ಈಗಾಗಲೇ ₹1.4 ಲಕ್ಷ ಕೋಟಿಗಿಂತ ಹೆಚ್ಚು ವಿದೇಶಿ ವಿನಿಮಯವನ್ನು ಉಳಿಸಿದೆ.

➤ ಸರ್ಕಾರದ ಸ್ಪಷ್ಟನೆ: ಸರ್ಕಾರವು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ತಪ್ಪು ಮಾಹಿತಿಗಳ ವಿರುದ್ಧ ಕಠಿಣ ನಿಲುವು ತಳೆದಿದೆ:
ಸುರಕ್ಷತೆ: E20 ಇಂಧನವು ವೈಜ್ಞಾನಿಕವಾಗಿ ಪರೀಕ್ಷಿಸಲ್ಪಟ್ಟಿದೆ ಮತ್ತು ನಿರಂತರವಾಗಿ ಮೇಲ್ವಿಚಾರಣೆ ಮಾಡಲಾಗುತ್ತದೆ. E20 ಬಳಕೆಯಿಂದ ಎಂಜಿನ್ ವೈಫಲ್ಯ ಅಥವಾ ವಾಹನ ಹಾಳಾಗಿದೆ ಎಂಬುದಕ್ಕೆ ಯಾವುದೇ ಅಧಿಕೃತ ವರದಿಯಿಲ್ಲ.
ವಿಮೆ (Insurance): E20 ಇಂಧನ ಬಳಸುವುದರಿಂದ ವಾಹನದ ವಿಮೆ ಅಸಿಂಧುವಾಗುತ್ತದೆ ಎಂಬುದು ಸುಳ್ಳು. ಇದು ಆಧಾರರಹಿತ ವದಂತಿ ಎಂದು ಸರ್ಕಾರ ಸ್ಪಷ್ಟಪಡಿಸಿದೆ.
ಕೀಟಗಳ ಆಕರ್ಷಣೆ: ಎಥೆನಾಲ್ ಕೈಗಾರಿಕಾ ಪ್ರಕ್ರಿಯೆಗಳ ಮೂಲಕ ಸಿದ್ಧವಾಗುವುದರಿಂದ, ಅದರಲ್ಲಿ ಕೀಟಗಳನ್ನು ಅಥವಾ ಇರುವೆಗಳನ್ನು ಆಕರ್ಷಿಸುವಂತಹ ಸಕ್ಕರೆ ಅಂಶವಿರುವುದಿಲ್ಲ.

➤ **ಮೈಲೇಜ್ ಸಮಸ್ಯೆಯ ಸತ್ಯಾಸತ್ಯತೆ:** ಸರ್ಕಾರವು ಮೈಲೇಜ್ ಕಡಿಮೆಯಾಗುವ ವಿಚಾರವನ್ನು ಪರೋಕ್ಷವಾಗಿ ಒಪ್ಪಿಕೊಂಡಿದೆ. ಎಥೆನಾಲ್‌ನಲ್ಲಿ ಪೆಟ್ರೋಲ್‌ಗಿಂತ ಕಡಿಮೆ ಶಕ್ತಿಯ ಸಾಂದ್ರತೆ (Energy Density) ಇರುವುದರಿಂದ ಮೈಲೇಜ್‌ನಲ್ಲಿ ಸಣ್ಣ ವ್ಯತ್ಯಾಸ ಕಂಡುಬರುವುದು ಸಹಜ. ಸರ್ಕಾರದ ಪ್ರಕಾರ, ಹೊಸ ವಾಹನಗಳಲ್ಲಿ 1-2% ಮತ್ತು ಹಳೆಯ ವಾಹನಗಳಲ್ಲಿ 6% ವರೆಗೆ ಮೈಲೇಜ್ ಇಳಿಕೆ ಕಾಣಬಹುದು. ಇದು ವಾಹನದ ದೋಷವಲ್ಲ, ಬದಲಿಗೆ ಇಂಧನದ ಗುಣಲಕ್ಷಣವಾಗಿದೆ.

➤ ಇನ್ನೂ ಉತ್ತರಿಸಬೇಕಾದ ಪ್ರಶ್ನೆಗಳು ಯಾವುವು?

ಆರ್ಥಿಕ ಹೊರೆ: ಕಡಿಮೆ ಮೈಲೇಜ್‌ನಿಂದಾಗಿ ಪ್ರತಿ ಕಿಲೋಮೀಟರ್‌ಗೆ ತಗಲುವ ವೆಚ್ಚ ಹೆಚ್ಚಾಗುತ್ತಿದೆಯೇ? ಮಾರುಕಟ್ಟೆಯಲ್ಲಿನ ಇಂಧನ ಬೆಲೆ ಮತ್ತು ಮೈಲೇಜ್ ನಷ್ಟವನ್ನು ಲೆಕ್ಕಹಾಕಿದರೆ ಗ್ರಾಹಕರಿಗೆ ನಿಜವಾದ ಉಳಿತಾಯ ಸಿಗುತ್ತಿದೆಯೇ?
ದೀರ್ಘಾವಧಿಯ ನಿರ್ವಹಣೆ: ದೀರ್ಘಕಾಲದವರೆಗೆ E20 ಬಳಕೆಯಿಂದ ಎಂಜಿನ್ ಭಾಗಗಳ ಮೇಲೆ ಏನಾದರೂ ಪರಿಣಾಮ ಬೀರುತ್ತದೆಯೇ ಎಂಬ ಬಗ್ಗೆ ಹೆಚ್ಚಿನ ಸ್ಪಷ್ಟತೆಯ ಅವಶ್ಯಕತೆಯಿದೆ.
ಪ್ರಚಲಿತ ಘಟನೆಗಳ ಆಧಾರಿತ ಪ್ರತಿದಿನದ ಹಾಗೂ ವಾರಾಂತ್ಯದ ಕ್ವಿಜ್ ನಲ್ಲಿ ಭಾಗವಹಿಸಲು ಇಲ್ಲಿ ಕ್ಲಿಕ್ ಮಾಡಿ

## ಭಾರತದ ಮೊದಲ 'ಮೇಡ್ ಇನ್ ಇಂಡಿಯಾ' C295 ವಿಮಾನ ಸೆಪ್ಟೆಂಬರ್‌ನಲ್ಲಿ ವಾಯುಪಡೆಗೆ ಸೇರ್ಪಡೆ!



➤ ಭಾರತೀಯ ರಕ್ಷಣಾ ಉತ್ಪಾದನಾ ವಲಯದಲ್ಲಿ ಐತಿಹಾಸಿಕ ಮೈಲಿಗಲ್ಲೊಂದು ಸ್ಥಾಪನೆಯಾಗುತ್ತಿದ್ದು, ದೇಶೀಯವಾಗಿ ಖಾಸಗಿ ವಲಯದಲ್ಲಿ ತಯಾರಾದ ಮೊದಲ C295 ರಕ್ಷಣಾ ಸಾರಿಗೆ ವಿಮಾನವು ಸೆಪ್ಟೆಂಬರ್ 22-23ರ ಸುಮಾರಿಗೆ ಗುಜರಾತ್‌ನ ವಡೋದರಾದಲ್ಲಿ ಭಾರತೀಯ ವಾಯುಪಡೆಗೆ (IAF) ಅಧಿಕೃತವಾಗಿ ಹಸ್ತಾಂತರವಾಗಲಿದೆ. ಜೂನ್ 2026 ರಲ್ಲಿ ಈ ವಿಮಾನವು ತನ್ನ ಮೊದಲ ಯಶಸ್ವಿ ಪ್ರಾಯೋಗಿಕ ಹಾರಾಟವನ್ನು ಪೂರ್ಣಗೊಳಿಸಿದ್ದು, ಇದೀಗ ಅಂತಿಮ ಹಂತದ ಪರೀಕ್ಷೆಯಲ್ಲಿದೆ.
➤ **ಒಪ್ಪಂದದ ವಿವರ:** ಸೆಪ್ಟೆಂಬರ್ 2021 ರಲ್ಲಿ ಭಾರತ ರಕ್ಷಣಾ ಸಚಿವಾಲಯವು ಏರ್‌ಬಸ್ (Airbus Defence and Space) ಸಂಸ್ಥೆಯೊಂದಿಗೆ ₹21,935 ಕೋಟಿ ವೆಚ್ಚದಲ್ಲಿ ಒಟ್ಟು 56 ವಿಮಾನಗಳ ಖರೀದಿಗಾಗಿ ಐತಿಹಾಸಿಕ ಒಪ್ಪಂದ ಮಾಡಿಕೊಂಡಿತ್ತು.
ಭಾಗಿತ್ವ: ಈ ಯೋಜನೆಯನ್ನು ಟಾಟಾ ಅಡ್ವಾನ್ಸ್ಡ್ ಸಿಸ್ಟಮ್ಸ್ ಲಿಮಿಟೆಡ್ (TASL) ಮತ್ತು ಏರ್‌ಬಸ್ ಜಂಟಿಯಾಗಿ ಅನುಷ್ಠಾನಗೊಳಿಸುತ್ತಿವೆ. ಗುಜರಾತ್‌ನ ವಡೋದರಾದಲ್ಲಿರುವ 'ಟಾಟಾ ಏರ್‌ಕ್ರಾಫ್ಟ್ ಕಾಂಪ್ಲೆಕ್ಸ್' ದೇಶದ ಮೊದಲ ಖಾಸಗಿ ವಲಯದ ಮಿಲಿಟರಿ ವಿಮಾನ ಜೋಡಣಾ ಘಟಕವಾಗಿದೆ (Final Assembly Line - FAL).
➤ **ವಿಮಾನಗಳ ವಿತರಣಾ ಸೂತ್ರ (16 + 40):**
ಒಪ್ಪಂದದ ಪ್ರಕಾರ 16 ವಿಮಾನಗಳನ್ನು ಸ್ಪೇನ್‌ನ ಸೆವಿಲ್ಲೆ ನಗರದಿಂದ ನೇರವಾಗಿ ಹಾರಾಟದ ಸ್ಥಿತಿಯಲ್ಲಿ (Fly-away condition) ಭಾರತಕ್ಕೆ ತರಲಾಗುತ್ತದೆ.
ಇನ್ನುಳಿದ 40 ವಿಮಾನಗಳನ್ನು 'ಮೇಡ್ ಇನ್ ಇಂಡಿಯಾ' ಯೋಜನೆಯಡಿ ಸಂಪೂರ್ಣವಾಗಿ ಭಾರತದಲ್ಲೇ (ವಡೋದರಾ ಘಟಕದಲ್ಲಿ) ತಯಾರಿಸಿ ಜೋಡಿಸಲಾಗುತ್ತದೆ. ಇವುಗಳು 2026 ರಿಂದ 2031 ರ ಒಳಗೆ ಪೂರ್ಣ ಪ್ರಮಾಣದಲ್ಲಿ ವಿತರಣೆಯಾಗಲಿವೆ.
➤ **ಯಾವ ವಿಮಾನಗಳ ಬದಲಿಗೆ ಸೇರ್ಪಡೆ?:** ವಾಯುಪಡೆಯಲ್ಲಿ ದಶಕಗಳ ಕಾಲ ಸೇವೆ ಸಲ್ಲಿಸಿ ಸದ್ಯ ಹಳೆಯದಾಗಿರುವ ಆವ್ರೋ-೭೪೮ (Avro HS 748) ಸಾರಿಗೆ ವಿಮಾನಗಳ ಜಾಗವನ್ನು ಈ ಅತ್ಯಾಧುನಿಕ C295 ವಿಮಾನಗಳು ತುಂಬಲಿವೆ.
➤ **C295 ವಿಮಾನದ ತಾಂತ್ರಿಕ ವೈಶಿಷ್ಟ್ಯಗಳು:**
**ಎಂಜಿನ್ ಸಾಮರ್ಥ್ಯ:** ಇದು ಎರಡು ಪ್ರ್ಯಾಟ್ ಆಂಡ್ ವಿಟ್ನಿ (Pratt & Whitney PW127G) ಟರ್ಬೋಪ್ರೊಪ್ ಎಂಜಿನ್‌ಗಳನ್ನು ಹೊಂದಿದೆ.
**ಸಾಗಿಸುವ ಸಾಮರ್ಥ್ಯ:** ಒಟ್ಟು 9.5 ಟನ್ ತೂಕದ ಸರಕು ಅಥವಾ 71 ಸೈನಿಕರು ಅಥವಾ 45 ಪ್ಯಾರಾಟ್ರೂಪರ್‌ಗಳನ್ನು ಹೊತ್ತೊಯ್ಯಬಲ್ಲದು.
ಗರಿಷ್ಠ ವೇಗ: ಗಂಟೆಗೆ ಸುಮಾರು 480 ಕಿಲೋಮೀಟರ್ ವೇಗದಲ್ಲಿ ಚಲಿಸುತ್ತದೆ.
**ವಿಶೇಷತೆ:** ಅತ್ಯಂತ ಚಿಕ್ಕದಾದ ಹಾಗೂ ಕಚ್ಚಾ ರನ್‌ವೇಗಳಲ್ಲಿ (ಅಭಿವೃದ್ಧಿಪಡಿಸದ ಮರಳು, ಹುಲ್ಲುಗಾವಲು) ಸಹ ಸುಲಭವಾಗಿ ಇಳಿಯುವ ಮತ್ತು ಟೇಕ್-ಆಫ್ ಆಗುವ ಸಾಮರ್ಥ್ಯ ಹೊಂದಿದೆ. ಇದು ಚೀನಾ ಗಡಿ ಭಾಗಗಳಲ್ಲಿ ಕಾರ್ಯಾಚರಣೆಗೆ ಹೆಚ್ಚು ಸೂಕ್ತವಾಗಿದೆ.
➤ ಈ ಯೋಜನೆಯಡಿ ಬಳಸಲಾಗುವ ಎಲೆಕ್ಟ್ರಾನಿಕ್ ವಾರ್ಫೇರ್ ಸೂಟ್ (Electronic Warfare Suite) ಅನ್ನು ಭಾರತದ ಸಾರ್ವಜನಿಕ ವಲಯದ ಸಂಸ್ಥೆಗಳಾದ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (BEL) ಮತ್ತು ಭಾರತ್ ಡೈನಾಮಿಕ್ಸ್ ಲಿಮಿಟೆಡ್ (BDL) ದೇಶೀಯವಾಗಿಯೇ ತಯಾರಿಸಿಕೊಡುತ್ತಿವೆ. ಎಲ್ಲಾ 56 ವಿಮಾನಗಳ ವಿತರಣೆ ಮುಗಿದ ಬಳಿಕ ಭಾರತವು ಜಗತ್ತಿನಲ್ಲೇ C295 ವಿಮಾನಗಳ ಅತಿ ದೊಡ್ಡ ಬಳಕೆದಾರ ದೇಶ ಎನಿಸಿಕೊಳ್ಳಲಿದೆ.

## ಜೂನ್-25: ವಿಶ್ವ ತೊನ್ನು ದಿನ (World Vitiligo Day)




➤ ಪ್ರತಿ ವರ್ಷ ಜೂನ್ 25 ರಂದು ಜಾಗತಿಕವಾಗಿ ವಿಶ್ವ ತೊನ್ನು ದಿನ (World Vitiligo Day) ಎಂದು ಆಚರಿಸಲಾಗುತ್ತದೆ. ಸಮಾಜದಲ್ಲಿ ತೊನ್ನು (Vitiligo) ರೋಗದ ಬಗ್ಗೆ ಇರುವ ತಪ್ಪು ಕಲ್ಪನೆಗಳನ್ನು ನಿವಾರಿಸುವುದು, ಈ ಕಾಯಿಲೆಯಿಂದ ಬಳಲುತ್ತಿರುವವರಲ್ಲಿ ಆತ್ಮವಿಶ್ವಾಸ ತುಂಬುವುದು ಮತ್ತು ಜಾಗೃತಿ ಮೂಡಿಸುವುದು ಈ ದಿನದ ಮುಖ್ಯ ಉದ್ದೇಶವಾಗಿದೆ.
➤ **2026 ರ ಜಾಗತಿಕ ಘೋಷವಾಕ್ಯ (Theme & Slogan)**
**ಮುಖ್ಯ ಥೀಮ್ (Theme): "ಕಳಂಕದಿಂದ ಸಾಮರ್ಥ್ಯದತ್ತ" (From Stigma to Strength)**
**ಘೋಷವಾಕ್ಯ (Slogan): "ಹಲವು ಬಣ್ಣಗಳು, ಒಂದೇ ಧ್ವನಿ" (Many Shades, One Voice)**
➤ ತೊನ್ನು ಎಂಬುದು ಚರ್ಮದ ಬಣ್ಣಕ್ಕೆ ಕಾರಣವಾಗುವ ಮೆಲನಿನ್ (Melanin) ಎಂಬ ವರ್ಣದ್ರವ್ಯದ ಕೊರತೆಯಿಂದ ಉಂಟಾಗುವ ದೀರ್ಘಕಾಲದ ಚರ್ಮದ ಸ್ಥಿತಿಯಾಗಿದೆ. ಮೆಲನಿನ್ ಉತ್ಪಾದಿಸುವ ಜೀವಕೋಶಗಳು ಹಾನಿಗೊಳಗಾದಾಗ ಅಥವಾ ಕಾರ್ಯನಿರ್ವಹಿಸುವುದನ್ನು ನಿಲ್ಲಿಸಿದಾಗ, ಚರ್ಮದ ಮೇಲೆ ಬಿಳಿ ಅಥವಾ ತಿಳಿ ಬಣ್ಣದ ಕಲೆಗಳು ಕಾಣಿಸಿಕೊಳ್ಳುತ್ತವೆ.
➤ ತೊನ್ನು ಯಾವುದೇ ವಯಸ್ಸು, ಲಿಂಗ ಅಥವಾ ಜನಾಂಗದವರಿಗೂ ಬರಬಹುದು. ಮುಖ್ಯವಾಗಿ ಇದು ಸಾಂಕ್ರಾಮಿಕ ರೋಗವಲ್ಲ (Not Contagious). ಅಂದರೆ ಇದು ಸ್ಪರ್ಶದಿಂದ ಅಥವಾ ಜೊತೆಯಾಗಿ ಕೂತು ಉಣ್ಣುವುದರಿಂದ ಒಬ್ಬರಿಂದ ಇನ್ನೊಬ್ಬರಿಗೆ ಹರಡುವುದಿಲ್ಲ.
➤ **ಪ್ರಮುಖ ಕಾರಣಗಳು:**
ಆಟೋಇಮ್ಯೂನ್ ಪ್ರತಿಕ್ರಿಯೆ (Autoimmune Response): ದೇಹದ ರೋಗನಿರೋಧಕ ಶಕ್ತಿಯೇ ಸ್ವಂತ ಜೀವಕೋಶಗಳ ಮೇಲೆ ದಾಳಿ ಮಾಡುವುದು.
ಆನುವಂಶಿಕ ಅಂಶಗಳು (Genetic Factors): ಕುಟುಂಬದಲ್ಲಿ ಯಾರಿಗಾದರೂ ಇದ್ದರೆ ಬರುವ ಸಾಧ್ಯತೆ.
ಮಾನಸಿಕ ಒತ್ತಡ (Emotional Stress): ಅತಿಯಾದ ತಲ್ಲಣ ಮತ್ತು ಒತ್ತಡ ಕೂಡ ಇದಕ್ಕೆ ಕಾರಣವಾಗಬಹುದು.
➤ ಆಯುರ್ವೇದದಲ್ಲಿ ತೊನ್ನು ಮತ್ತು ಚಿಕಿತ್ಸಾ ವಿಧಾನ (Ayurveda Perspective): ಆಯುರ್ವೇದ ಶಾಸ್ತ್ರದಲ್ಲಿ ತೊನ್ನು ರೋಗವನ್ನು 'ಶ್ವಿತ್ರ' (Shwitra) ಎಂದು ಕರೆಯಲಾಗುತ್ತದೆ. ಆಯುರ್ವೇದದ ಪ್ರಕಾರ, ದೇಹದ ಶಕ್ತಿಯ ಮೂಲಗಳಾದ ಪಿತ್ತ ಮತ್ತು ವಾತ ದೋಷಗಳ ಏರುಪೇರಿನಿಂದಾಗಿ ಚರ್ಮದ ಆರೋಗ್ಯದಲ್ಲಿ ವ್ಯತ್ಯಾಸ ಉಂಟಾಗುತ್ತದೆ. ಆಯುರ್ವೇದವು ಕೇವಲ ಮೇಲ್ಮೈ ಚಿಕಿತ್ಸೆಗಿಂತ ದೇಹದ ಆಂತರಿಕ ಶುದ್ಧೀಕರಣ

(Detoxification) ಮತ್ತು ಜೀರ್ಣಕ್ರಿಯೆಯನ್ನು (ಅಗ್ನಿ) ಸುಧಾರಿಸುವುದರ ಮೇಲೆ ಗಮನ ಹರಿಸುತ್ತದೆ.

**➤ ಸಾಂಪ್ರದಾಯಿಕ ಆಯುರ್ವೇದ ಮೂಲಿಕೆಗಳು:**

ಬಾಕುಚಿ (Bakuchi): ಶ್ವಿತ್ರದ ಚಿಕಿತ್ಸೆಯಲ್ಲಿ ಅತ್ಯಂತ ಪ್ರಸಿದ್ಧ ಮೂಲಿಕೆ.

ಬೇವು (Neem): ಚರ್ಮದ ಕಾಯಿಲೆಗಳನ್ನು ನಿವಾರಿಸಲು ಉತ್ತಮ ರೋಗನಿರೋಧಕ.

ಅರಿಶಿನ (Turmeric): ಇದರಲ್ಲಿರುವ ಕರ್ಕ್ಯುಮಿನ್ ಅಂಶವು ಚರ್ಮದ ಕಾಂತಿಯನ್ನು ಮರುಕಳಿಸಲು ಸಹಕಾರಿ.

ಮಂಜಿಷ್ಠಾ (Manjistha) ಮತ್ತು ಅಲೋವೆರಾ (ಲೋಳೆಸರ)

## ಉತ್ತರ ಪ್ರದೇಶ ಮುಖ್ಯಮಂತ್ರಿ ಕನ್ಯಾ ಸುಮಂಗಲ ಯೋಜನೆ 2026




➤ ಇತ್ತೀಚೆಗೆ ಉತ್ತರ ಪ್ರದೇಶ ಸರ್ಕಾರವು ತನ್ನ ಮಹತ್ವಾಕಾಂಕ್ಷೆಯ 'ಮುಖ್ಯಮಂತ್ರಿ ಕನ್ಯಾ ಸುಮಂಗಲ ಯೋಜನೆ' (Mukhyamantri Kanya Sumangala Yojana) ಅಡಿಯಲ್ಲಿ ನೀಡಲಾಗುವ ಒಟ್ಟು ಆರ್ಥಿಕ ನೆರವನ್ನು ₹15,000 ರಿಂದ ₹25,000 ಕ್ಕೆ ಹೆಚ್ಚಿಸಿದೆ.

➤ ಹೆಣ್ಣು ಮಕ್ಕಳ ಭ್ರೂಣ ಹತ್ಯೆಯನ್ನು ತಡೆಯುವುದು, ಲಿಂಗ ಅನುಪಾತವನ್ನು ಸುಧಾರಿಸುವುದು, ಬಾಲ್ಯ ವಿವಾಹಕ್ಕೆ ಬ್ರೇಕ್ ಹಾಕುವುದು ಮತ್ತು ಹೆಣ್ಣು ಮಕ್ಕಳ ಶಿಕ್ಷಣ ಹಾಗೂ ಆರೋಗ್ಯಕ್ಕೆ ಉತ್ತೇಜನ ನೀಡುವ ಉದ್ದೇಶದಿಂದ ಉತ್ತರ ಪ್ರದೇಶ ಸರ್ಕಾರವು 2019 ರ ಅಕ್ಟೋಬರ್‌ನಲ್ಲಿ ಈ ಯೋಜನೆಯನ್ನು ಜಾರಿಗೆ ತಂದಿತು. ಈ ಯೋಜನೆಯಡಿ ಹೆಣ್ಣು ಮಗುವಿನ ಜನನದಿಂದ ಹಿಡಿದು ಆಕೆಯ ಉನ್ನತ ಶಿಕ್ಷಣದವರೆಗೆ ಒಟ್ಟು 6 ಹಂತಗಳಲ್ಲಿ ನೇರ ನಗದು ವರ್ಗಾವಣೆ (DBT - Direct Benefit Transfer) ಮೂಲಕ ಆರ್ಥಿಕ ನೆರವು ನೀಡಲಾಗುತ್ತದೆ.

**➤ ಯೋಜನೆಯ ಪ್ರಮುಖ ಮುಖ್ಯಾಂಶಗಳು:**

ಅನುಷ್ಠಾನಗೊಳಿಸಿದ ರಾಜ್ಯ: ಉತ್ತರ ಪ್ರದೇಶ ಸರ್ಕಾರ

ನೋಡಲ್ ಇಲಾಖೆ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಉತ್ತರ ಪ್ರದೇಶ

ಪರಿಷ್ಕೃತ ಒಟ್ಟು ಮೊತ್ತ: ₹25,000 (6 ಕಂತುಗಳಲ್ಲಿ)

ವರ್ಗಾವಣೆ ವಿಧಾನ: ಡಿಬಿಟಿ (DBT) ಮೂಲಕ ತಾಯಿ ಅಥವಾ ಹೆಣ್ಣು ಮಗುವಿನ ಬ್ಯಾಂಕ್ ಖಾತೆಗೆ ನೇರ ಜಮೆ.

**➤ ಆರ್ಥಿಕ ನೆರವು ನೀಡುವ 6 ಪ್ರಮುಖ ಹಂತಗಳು:**

1.ಮೊದಲ ಹಂತ: ಹೆಣ್ಣು ಮಗುವಿನ ಜನನ:ಮೊತ್ತ: ₹5,000. ಮಗು ಜನಿಸಿದ ತಕ್ಷಣ (ಸಂಸ್ಥಾಗತ ಹೆರಿಗೆ/ಸರ್ಕಾರಿ ಆಸ್ಪತ್ರೆಗಳಲ್ಲಿ) ಜನನ ಪ್ರಮಾಣಪತ್ರ ಸಲ್ಲಿಕೆಯಾದ ನಂತರ ಈ ಮೊತ್ತವನ್ನು ಜಮೆ ಮಾಡಲಾಗುತ್ತದೆ.

2.ಎರಡನೇ ಹಂತ: ಸಂಪೂರ್ಣ ಲಸಿಕೆ ಪ್ರಕ್ರಿಯೆ:ಮೊತ್ತ: ₹2,000. ಮಗುವಿಗೆ ಒಂದು ವರ್ಷ ತುಂಬುವಷ್ಟರಲ್ಲಿ ಅಗತ್ಯವಿರುವ ಎಲ್ಲಾ ಲಸಿಕೆಗಳನ್ನು (Immunization) ಪೂರ್ಣಗೊಳಿಸಿದ ನಂತರ ಈ ಮೊತ್ತ ಸಿಗುತ್ತದೆ.

3.ಮೂರನೇ ಹಂತ: 1 ನೇ ತರಗತಿಗೆ ಪ್ರವೇಶ:ಮೊತ್ತ: ₹3,000. ಹೆಣ್ಣು ಮಗು ಮೊದಲನೇ ತರಗತಿಗೆ ಅಧಿಕೃತವಾಗಿ ಶಾಲೆಗೆ ದಾಖಲಾದಾಗ ಆಕೆಯ ಶಿಕ್ಷಣದ ಆರಂಭಿಕ ವೆಚ್ಚಗಳಿಗಾಗಿ ಇದನ್ನು ನೀಡಲಾಗುತ್ತದೆ.

4.ನಾಲ್ಕನೇ ಹಂತ: 6 ನೇ ತರಗತಿಗೆ ಪ್ರವೇಶ:ಮೊತ್ತ: ₹3,000. ಮಗು ಪ್ರಾಥಮಿಕ ಶಿಕ್ಷಣ ಮುಗಿಸಿ 6 ನೇ ತರಗತಿಗೆ ಪ್ರವೇಶ ಪಡೆದಾಗ ಈ ಕಂತು ಬಿಡುಗಡೆಯಾಗುತ್ತದೆ.

5.ಐದನೇ ಹಂತ: 9 ನೇ ತರಗತಿಗೆ ಪ್ರವೇಶ:ಮೊತ್ತ: ₹5,000. ಪ್ರೌಢಶಾಲಾ ಶಿಕ್ಷಣಕ್ಕೆ ಪ್ರವೇಶ ಪಡೆಯುವ ಹೆಣ್ಣು ಮಕ್ಕಳ ಶಾಲಾ ಗೈರುಹಾಜರಿ ಮತ್ತು ಡ್ರಾಪ್‌ಔಟ್ (Dropout) ಪ್ರಮಾಣ ತಗ್ಗಿಸಲು ಈ ದೊಡ್ಡ ಮೊತ್ತವನ್ನು ನೀಡಲಾಗುತ್ತದೆ.

6.ಆರನೇ ಹಂತ: ಉನ್ನತ ಶಿಕ್ಷಣ / ಡಿಪ್ಲೊಮಾ ಪ್ರವೇಶ:ಮೊತ್ತ: ₹7,000. 10 ಅಥವಾ 12 ನೇ ತರಗತಿ ಉತ್ತೀರ್ಣರಾಗಿ ಕನಿಷ್ಠ 2 ವರ್ಷಗಳ ಪದವಿ (Graduation) ಅಥವಾ ಡಿಪ್ಲೊಮಾ ಕೋರ್ಸ್‌ಗಳಿಗೆ ದಾಖಲಾದಾಗ ಅಂತಿಮ ಕಂತು ಸಿಗುತ್ತದೆ.

➤ ಕೇಂದ್ರದ 'ಬೇಟಿ ಬಚಾವೋ ಬೇಟಿ ಪಢಾವೋ' ಆಂದೋಲನದ ಭಾಗವಾಗಿ ರಾಜ್ಯ ಸರ್ಕಾರಗಳು ಹಮ್ಮಿಕೊಳ್ಳುವ ಇಂತಹ ಪ್ರಾದೇಶಿಕ ಯೋಜನೆಗಳು ಮಹಿಳಾ ಸಬಲೀಕರಣ (Women Empowerment) ಮತ್ತು ಒಳಗೊಳ್ಳುವ ಬೆಳವಣಿಗೆಯ (Inclusive Growth) ವಿಷಯಗಳಲ್ಲಿ ಅತ್ಯಂತ ಪ್ರಮುಖ ಉದಾಹರಣೆಗಳಾಗಿವೆ. ಮುಖ್ಯ ಪರೀಕ್ಷೆಯ (Mains Exams) ಪ್ರಬಂಧಗಳಲ್ಲಿ ಅಥವಾ ಸಾಮಾಜಿಕ ನ್ಯಾಯದ ಪತ್ರಿಕೆಯಲ್ಲಿ ಹೆಣ್ಣು ಮಕ್ಕಳ ಕಲ್ಯಾಣಕ್ಕಾಗಿ ಕೈಗೊಂಡ ಕ್ರಮಗಳ ಕುರಿತು ಬರೆಯಲು ಈ ಯೋಜನೆಯ ಕೇಸ್ ಸ್ಟಡಿಯನ್ನು ಬಳಸಬಹುದು.

## ಜುಲೈ 2026 ರಿಂದ ಜಾರಿಗೆ ಬರಲಿದೆ ಭಾರತದ ಹೊಸ ಆರ್ಥಿಕ ಅಸ್ತ್ರ 'ISP' (ಸೇವಾ ಉತ್ಪಾದನಾ ಸೂಚ್ಯಂಕ)




➤ ಭಾರತ ಸರ್ಕಾರವು ದೇಶದ ಆರ್ಥಿಕತೆಯಲ್ಲಿ ಮಹತ್ವದ ಬದಲಾವಣೆಯೊಂದನ್ನು ತರಲು ಸಜ್ಜಾಗಿದೆ. ಕೈಗಾರಿಕಾ ವಲಯದ ಬೆಳವಣಿಗೆಯನ್ನು ಅಳೆಯಲು 'ಐಐಪಿ' (IIP - Index of Industrial Production) ಇರುವಂತೆಯೇ, ಸೇವಾ ವಲಯದ ಪ್ರಗತಿಯನ್ನು ಮಾಸಿಕವಾಗಿ ಪತ್ತೆಹಚ್ಚಲು 'ಐಎಸ್‌ಪಿ' (ISP - Index of Services Production) ಅಥವಾ ಸೇವಾ ಉತ್ಪಾದನಾ ಸೂಚ್ಯಂಕವನ್ನು ಜುಲೈ 2026 ರಲ್ಲಿ ಅಧಿಕೃತವಾಗಿ ಬಿಡುಗಡೆ ಮಾಡಲು ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯ (MoSPI) ಸಕಲ ಸಿದ್ಧತೆಗಳನ್ನು ಮಾಡಿಕೊಂಡಿದೆ.

➤ ಸೇವಾ ಉತ್ಪಾದನಾ ಸೂಚ್ಯಂಕ (ISP): ಸೇವಾ ಉತ್ಪಾದನಾ ಸೂಚ್ಯಂಕ (Index of Services Production) ಎನ್ನುವುದು ಒಂದು ನಿರ್ದಿಷ್ಟ ಆಧಾರ ವರ್ಷಕ್ಕೆ (Base Year) ಹೋಲಿಸಿದರೆ, ದೇಶದ ಸೇವಾ ವಲಯದ ಒಟ್ಟು ಉತ್ಪಾದನೆಯ ಪ್ರಮಾಣದಲ್ಲಿ ಆಗುವ ಅಲ್ಪಾವಧಿಯ (ಮಾಸಿಕ) ಬದಲಾವಣೆಗಳನ್ನು ಅಳೆಯುವ ಒಂದು ಮ್ಯಾಕ್ರೋ ಆರ್ಥಿಕ ಸೂಚಕವಾಗಿದೆ (Macroeconomic Indicator). ಸರಳವಾಗಿ ಹೇಳುವುದಾದರೆ, ಫ್ಯಾಕ್ಟರಿಗಳು ಮತ್ತು ಕೈಗಾರಿಕೆಗಳ ಬೆಳವಣಿಗೆಯನ್ನು 'IIP' ಅಳೆಯುವಂತೆ, ಬ್ಯಾಂಕಿಂಗ್, ಸಾರಿಗೆ, ಹೋಟೆಲ್‌ಗಳು ಮುಂತಾದ ಸೇವೆಗಳ ಬೆಳವಣಿಗೆಯನ್ನು 'ISP' ಅಳೆಯುತ್ತದೆ.

➤ ನೀತಿ ಆಯೋಗದ ಫೆಲೋ ಆಗಿರುವ ದೇವಜಾನಿ ಘೋಷ್ ಅವರ ಅಧ್ಯಕ್ಷತೆಯಲ್ಲಿ ಮೇ 2025 ರಲ್ಲಿ ರಚಿಸಲಾಗಿದ್ದ 24 ಸದಸ್ಯರ ತಾಂತ್ರಿಕ ಸಲಹಾ ಸಮಿತಿಯ (TAC-ISP) ಮಾರ್ಗದರ್ಶನದಲ್ಲಿ ಇದನ್ನು ಸಿದ್ಧಪಡಿಸಲಾಗಿದೆ.

➤ ಯಾವೆಲ್ಲಾ ಸೇವೆಗಳು ಇದರ ವ್ಯಾಪ್ತಿಗೆ ಬರುತ್ತವೆ?

ಸಗಟು ಮತ್ತು ಚಿಲ್ಲರೆ ವ್ಯಾಪಾರ (Wholesale & Retail Trade)

ಸಾರಿಗೆ ಮತ್ತು ದಾಸ್ತಾನು (Transport & Warehousing)

ಬ್ಯಾಂಕಿಂಗ್ ಮತ್ತು ವಿಮೆ (Banking & Insurance)

ಹೋಟೆಲ್‌ಗಳು ಮತ್ತು ರೆಸ್ಟೋರೆಂಟ್‌ಗಳು (Hotels & Restaurants)

ರಿಯಲ್ ಎಸ್ಟೇಟ್ (Real Estate)

ದೂರಸಂಪರ್ಕ ಮತ್ತು ಐಟಿ ಸೇವೆಗಳು (Telecommunications & IT)

ಕಲೆ, ಮನರಂಜನೆ ಮತ್ತು ಕ್ರೀಡೆ (Arts, Entertainment & Recreation)

**➤ ಯಾವ ಸೇವೆಗಳು ಹೊರಗುಳಿದಿವೆ?**

ಸಾರ್ವಜನಿಕ ಆಡಳಿತ, ರಕ್ಷಣೆ, ಸರ್ಕಾರಿ ಸ್ವಾಮ್ಯದ ಆರೋಗ್ಯ ಮತ್ತು ಶಿಕ್ಷಣ ಸೇವೆಗಳು, ಜೂಜು ಮತ್ತು ಬೆಟ್ಟಿಂಗ್ ಸೇರಿದಂತೆ ಒಟ್ಟು 9 ಪ್ರಮುಖ ವರ್ಗಗಳನ್ನು ಸದ್ಯಕ್ಕೆ ಇದರ ವ್ಯಾಪ್ತಿಯಿಂದ ಹೊರಗಿಡಲಾಗಿದೆ. ಇವು ಪ್ರಮುಖವಾಗಿ ಸರ್ಕಾರದ ಪ್ರಮುಖ ಕಾರ್ಯಗಳು ಅಥವಾ ಅನೌಪಚಾರಿಕ ವಲಯಕ್ಕೆ ಸೇರಿರುವುದರಿಂದ ದತ್ತಾಂಶದ ಕೊರತೆಯ ಕಾರಣದಿಂದ ಹೊರಗಿಡಲಾಗಿದೆ.

**➤ ದತ್ತಾಂಶದ ಮೂಲಗಳು:**

ಜಿಎಸ್‌ಟಿ (GST) ದತ್ತಾಂಶ: ವ್ಯಾಪಾರ, ಸಾರಿಗೆ, ಹೋಟೆಲ್ ಮುಂತಾದ ವಲಯಗಳ ಮಾಸಿಕ ಪ್ರಗತಿಯನ್ನು ಪತ್ತೆಹಚ್ಚಲು ಜಿಎಸ್‌ಟಿ ನೆಟ್‌ವರ್ಕ್ (GSTN) ದತ್ತಾಂಶವನ್ನು ಬಳಸಲಾಗುತ್ತದೆ.

ಆಡಳಿತಾತ್ಮಕ ದತ್ತಾಂಶ: ರೈಲ್ವೆ ಮತ್ತು ವಾಯುಯಾನ ವಲಯಗಳ ನಿಖರವಾದ ಪ್ರಮಾಣ ಆಧಾರಿತ ಸೂಚಕಗಳನ್ನು (Quantity Indicators) ಪಡೆಯಲು ಇಲಾಖೆಯ ನೇರ ದತ್ತಾಂಶ ಬಳಸಲಾಗುತ್ತದೆ.

ASISSE ಸಮೀಕ್ಷೆ: ಆರೋಗ್ಯ ಮತ್ತು ಶಿಕ್ಷಣ ವಲಯಗಳ ನಿಖರ ಮಾಹಿತಿ ಪಡೆಯಲು ವಾರ್ಷಿಕ ಸಂಯೋಜಿತ ಸೇವಾ ವಲಯದ ಉದ್ಯಮಗಳ ಸಮೀಕ್ಷೆಯ (Annual Survey of Incorporated Services Sector Enterprises) ನೆರವು ಪಡೆಯಲಾಗುತ್ತದೆ.






## 26 June 2026

### ಜೂನ್ 26 ಅಂತರರಾಷ್ಟ್ರೀಯ ಮಾದಕ ವಸ್ತು ವಿರೋಧಿ ದಿನ




➤ ಜಾಗತಿಕ ಮಟ್ಟದಲ್ಲಿ ಪ್ರತಿ ವರ್ಷ ಜೂನ್ 26 ರಂದು ಮಾದಕ ವಸ್ತುಗಳ ದುರ್ಬಳಕೆ ಮತ್ತು ಅದರ ಅಕ್ರಮ ಕಳ್ಳಸಾಗಣೆಯನ್ನು ತಡೆಯಲು ಅಂತಾರಾಷ್ಟ್ರೀಯ ಮಾದಕ ದ್ರವ್ಯ ಮತ್ತು ಕಳ್ಳಸಾಗಣೆ ವಿರೋಧಿ ದಿನವನ್ನು ಆಚರಿಸಲಾಗುತ್ತದೆ.

**➤ ಅಂತರರಾಷ್ಟ್ರೀಯ ಮಾದಕ ವಸ್ತು ವಿರೋಧಿ ದಿನದ 2026 ರ ಥೀಮ್ ""ವಿಶ್ವದ ಮಾದಕವಸ್ತು ಸಮಸ್ಯೆ: ಮುಂದುವರಿಯುತ್ತಿರುವ ಸವಾಲುಗಳು, ಹೊಸ ಅಡೆತಡೆಗಳು ಮತ್ತು ನವೀನ ಪ್ರತಿಕ್ರಿಯೆಗಳು" ("World drug problem: persisting issues, new challenges, innovative responses")" ಎಂದು ಥೀಮ್ ಆಗಿದೆ.**

➤ ಪ್ರತಿ ವರ್ಷ ಜೂನ್ 26 ರಂದು ಮಾದಕ ವ್ಯಸನ ಮುಕ್ತ ಜಗತ್ತನ್ನು ನಿರ್ಮಿಸಲು ಕ್ರಮ ಮತ್ತು ಸಹಕಾರವನ್ನು ಬಲಪಡಿಸಲು ಅಂತರರಾಷ್ಟ್ರೀಯ ಮಾದಕ ವಸ್ತು ವಿರೋಧಿ ದಿನವನ್ನು ಆಚರಿಸಲಾಗುತ್ತದೆ.

➤ ಅಂತಾರಾಷ್ಟ್ರೀಯ ಮಾದಕ ವಸ್ತುಗಳ ದುರುಪಯೋಗ ಮತ್ತು ಕಾನೂನು ಬಾಹಿರ ಸಾಗಾಟ ವಿರೋಧಿ ದಿನವನ್ನು 1987 ಡಿಸೆಂಬರ್ 7ರಂದು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಜೂನ್ 26 ಎಂದು ಘೋಷಿಸಲಾಯಿತು.

**➤ ತಡೆಗಟ್ಟುವಿಕೆ ಮತ್ತು ನಮ್ಮ ಜವಾಬ್ದಾರಿ**

- ಮಾದಕವಸ್ತುಗಳ ಜಾಲವನ್ನು ಸಂಪೂರ್ಣವಾಗಿ ಬೇರುಸಹಿತ ಕಿತ್ತೊಗೆಯಲು ಕಠಿಣ ಕಾನೂನುಗಳಷ್ಟೇ ಸಾಲದು, ಅದಕ್ಕೆ ಸಾಮೂಹಿಕ ಪ್ರಯತ್ನದ ಅಗತ್ಯವಿದೆ:
- ಜಾಗೃತಿ ಮತ್ತು ಶಿಕ್ಷಣ: ಶಾಲೆ, ಕಾಲೇಜು ಹಂತದಲ್ಲೇ ವಿದ್ಯಾರ್ಥಿಗಳಿಗೆ ಮಾದಕವಸ್ತುಗಳ ದುಷ್ಪರಿಣಾಮಗಳ ಬಗ್ಗೆ ನಿರಂತರ ಅರಿವು ಮೂಡಿಸಬೇಕು.
- ಕುಟುಂಬದ ಪಾತ್ರ: ಪೋಷಕರು ತಮ್ಮ ಮಕ್ಕಳ ನಡವಳಿಕೆಗಳ ಮೇಲೆ ಗಮನ ಹರಿಸಬೇಕು ಮತ್ತು ಅವರಿಗೆ ಆತ್ಮವಿಶ್ವಾಸದ ವಾತಾವರಣವನ್ನು ನಿರ್ಮಿಸಿಕೊಡಬೇಕು.
- ಸಹಾನುಭೂತಿ ಮತ್ತು ಪುನರ್ವಸತಿ: ಮಾದಕ ವ್ಯಸನಕ್ಕೆ ತುತ್ತಾದವರನ್ನು ಅಪರಾಧಿಗಳಂತೆ ನೋಡದೆ, ಅವರನ್ನು ಪ್ರೀತಿಯಿಂದ ನಡೆಸಿ ಸೂಕ್ತ ಕೌನ್ಸೆಲಿಂಗ್ ಹಾಗೂ ಪುನರ್ವಸತಿ ಕೇಂದ್ರಗಳ ಮೂಲಕ ಮುಖ್ಯವಾಹಿನಿಗೆ ತರಬೇಕು.

### ಪ್ಯಾಕ್ಸ್ ಸಿಲಿಕಾ ಶೃಂಗಸಭೆ: ಕೃತಕ ಬುದ್ಧಿಮತ್ತೆ (AI) ಅವಕಾಶ ಹೇಳಿಕೆಗೆ ಭಾರತ ಸೇರಿದಂತೆ 35 ದೇಶಗಳ ಸಹಿ!




➤ ವಿಶ್ವದಾದ್ಯಂತ ತಂತ್ರಜ್ಞಾನ ವಲಯದಲ್ಲಿ ಕೃತಕ ಬುದ್ಧಿಮತ್ತೆ (Artificial Intelligence - AI) ಅಲೆಯು ತೀವ್ರಗೊಳ್ಳುತ್ತಿರುವ ಬೆನ್ನಲ್ಲೇ, ಅಮೆರಿಕದ ವಾಷಿಂಗ್ಟನ್‌ನಲ್ಲಿ ನಡೆದ ಮಹತ್ವದ 2ನೇ ಪ್ಯಾಕ್ಸ್ ಸಿಲಿಕಾ ಶೃಂಗಸಭೆ (Pax Silica Summit) ಯಲ್ಲಿ ಭಾರತ ಸೇರಿದಂತೆ ವಿಶ್ವದ 35 ಪ್ರಮುಖ ದೇಶಗಳು ಜಂಟಿಯಾಗಿ 'ಎಐ ಅವಕಾಶ ಹೇಳಿಕೆ'ಗೆ (Joint Statement on AI Opportunity) ಸಹಿ ಹಾಕಿವೆ.

**➤ ಪ್ಯಾಕ್ಸ್ ಸಿಲಿಕಾ ಶೃಂಗಸಭೆ ಮತ್ತು ಎಐ ಒಪ್ಪಂದ:** ಅಮೆರಿಕದ ನೇತೃತ್ವದಲ್ಲಿ ಆರಂಭವಾಗಿರುವ ಈ ಒಕ್ಕೂಟವು ಕೃತಕ ಬುದ್ಧಿಮತ್ತೆ (AI) ತಂತ್ರಜ್ಞಾನಕ್ಕೆ ಪೂರಕವಾಗಿರುವ ಅತ್ಯಂತ ಸುರಕ್ಷಿತ, ನಂಬಿಕಸ್ಥ ಮತ್ತು ಸ್ಥಿತಿಸ್ಥಾಪಕತ್ವ ಹೊಂದಿರುವ ಜಾಗತಿಕ ಪೂರೈಕೆ ಜಾಲಗಳನ್ನು (Resilient Supply Chains) ನಿರ್ಮಿಸುವ ಗುರಿಯನ್ನು ಹೊಂದಿದೆ. ಸರಳವಾಗಿ ಹೇಳುವುದಾದರೆ, AI ತಂತ್ರಜ್ಞಾನಕ್ಕೆ ಅತ್ಯಗತ್ಯವಾಗಿ ಬೇಕಾಗುವ ಸೆಮಿಕಂಡಕ್ಟರ್‌ಗಳು (ಚಿಪ್ಸ್), ಅತ್ಯಾಧುನಿಕ ಡೇಟಾ ಸೆಂಟರ್‌ಗಳು ಮತ್ತು ತಾಂತ್ರಿಕ ಮೂಲಸೌಕರ್ಯಗಳನ್ನು ಪರಸ್ಪರ ಹಂಚಿಕೊಳ್ಳಲು ಈ ಒಪ್ಪಂದ ಸಹಕಾರಿಯಾಗಲಿದೆ.

➤ **ಪ್ರಮುಖ ಹೇಳಿಕೆ:** ಅಮೆರಿಕದ ಆರ್ಥಿಕ ವ್ಯವಹಾರಗಳ ರಾಜ್ಯ ಉಪ ಕಾರ್ಯದರ್ಶಿ ಜ್ಯಾಕೋಬ್ ಹೆಲ್ಬರ್ಗ್ ಅವರ ಪ್ರಕಾರ, "AI ನ ಭವಿಷ್ಯವನ್ನು ಯಾರು ಮೊದಲು ನಿಯಂತ್ರಿಸುತ್ತಾರೆ (Regulate) ಎನ್ನುವುದು ನಿರ್ಧರಿಸುವುದಿಲ್ಲ. ಬದಲಿಗೆ ಯಾರು ಮೊದಲು ಅಗತ್ಯ ಮೂಲಸೌಕರ್ಯಗಳನ್ನು ನಿರ್ಮಿಸುತ್ತಾರೆ ಮತ್ತು ಹೆಚ್ಚಿನ ಸಾಮರ್ಥ್ಯವನ್ನು (More Compute, More Chips, More Talent) ಹೊಂದುತ್ತಾರೋ ಅವರು ನಿರ್ಧರಿಸುತ್ತಾರೆ."

➤ ಭಾರತದ ಪ್ರಾತಿನಿಧ್ಯ: ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ (MeitY) ಕಾರ್ಯದರ್ಶಿ ಎಸ್. ಕೃಷ್ಣನ್ ಮತ್ತು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ನಾಗರಾಜ್ ನಾಯ್ದು ಅವರು ಭಾರತದ ಪರವಾಗಿ ಭಾಗವಹಿಸಿದ್ದರು.

## 'ಭವೈಯಾ' ಜಾನಪದ ಕಲೆ ಕುರಿತ ಪುಸ್ತಕ ಬಿಡುಗಡೆ ಮಾಡಿದ ಉಪರಾಷ್ಟ್ರಪತಿ ಸಿ. ಪಿ. ರಾಧಾಕೃಷ್ಣನ್



➤ ಭಾರತದ ಸಾಂಪ್ರದಾಯಿಕ ಕಲೆಗಳು ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಉಳಿಸುವ ನಿಟ್ಟಿನಲ್ಲಿ ಇತ್ತೀಚೆಗೆ ನವದೆಹಲಿಯಲ್ಲಿ ಒಂದು ಪ್ರಮುಖ ಬೆಳವಣಿಗೆ ನಡೆದಿದೆ. ಭಾರತದ ಉಪರಾಷ್ಟ್ರಪತಿಗಳಾದ ಶ್ರೀ ಸಿ. ಪಿ. ರಾಧಾಕೃಷ್ಣನ್ ಅವರು ನವದೆಹಲಿಯ ಉಪರಾಷ್ಟ್ರಪತಿ ಭವನದಲ್ಲಿ ಭವೈಯಾ ಜಾನಪದ ಪರಂಪರೆಗೆ ಸಂಬಂಧಿಸಿದ ವಿಶೇಷ ಪುಸ್ತಕವನ್ನು ಬಿಡುಗಡೆ ಮಾಡಿದ್ದಾರೆ.

➤ ಲೋಕಸಭಾ ಸಂಸದರಾದ ಡಾ. ಜಯಂತ ಕುಮಾರ್ ರಾಯ್ ಮತ್ತು ಶ್ರೀಮತಿ ಸಂಗೀತ ರಾಯ್ ಅವರು ಜಂಟಿಯಾಗಿ ಬರೆದಿರುವ "ಸಂಸ್ಕೃತಿರ್ ರತ್ನ ಭಂಡಾರ್: ಭವೈಯಾರ್ ಇತಿಬ್ರಿತ್ತೋ" (Sanskritir Ratna Bhandar: Bhaowaiyar Itibritto) ಎಂಬ ಪುಸ್ತಕವನ್ನು ಉಪರಾಷ್ಟ್ರಪತಿಗಳು ಲೋಕಾರ್ಪಣೆಗೊಳಿಸಿದರು. ಈ ಪುಸ್ತಕವು ಉತ್ತರ ಬಂಗಾಳದ ಪ್ರಮುಖ ಸಮುದಾಯವಾದ 'ಕೋಚ್ ರಾಜ್‌ಬಂಶಿ' (Koch Rajbanshi) ಮತ್ತು ಅವರ ಸಾಂಪ್ರದಾಯಿಕ 'ಭವೈಯಾ' ಜಾನಪದ ಸಂಗೀತದ ಇತಿಹಾಸವನ್ನು ವಿವರವಾಗಿ ಪರಿಚಯಿಸುತ್ತದೆ.

➤ ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ಉಪರಾಷ್ಟ್ರಪತಿಗಳು, "ಆಧುನೀಕರಣ ಮತ್ತು ನಗರೀಕರಣದ ನಡುವೆಯೂ ನಮ್ಮ ಗ್ರಾಮೀಣ ಸಂಸ್ಕೃತಿಯನ್ನು ಜೀವಂತವಾಗಿಟ್ಟಿರುವುದು ಶ್ಲಾಘನೀಯ. 'ವಿಕ್ಸಿತ್ ಭಾರತ್ 2047' ಕನಸನ್ನು ನನಸಾಗಿಸಲು ಆರ್ಥಿಕ ಪ್ರಗತಿಯಷ್ಟೇ ಸಾಂಸ್ಕೃತಿಕ ಆತ್ಮವಿಶ್ವಾಸವೂ ಮುಖ್ಯ" ಎಂದು ಪ್ರತಿಪಾದಿಸಿದರು.

## 11ನೇ ಬ್ರಿಕ್ಸ್ ಇಂಧನ ಸಚಿವರ ಸಭೆ 2026: ಭಾರತದ ಆತಿಥ್ಯದಲ್ಲಿ ಗುರುಗ್ರಾಮದಲ್ಲಿ ಯಶಸ್ವಿ ಸಮಾವೇಶ




➤ ಭಾರತದ ಆತಿಥ್ಯದಲ್ಲಿ ಜೂನ್ 25, 2026 ರಂದು ಹರಿಯಾಣದ ಗುರುಗ್ರಾಮದಲ್ಲಿ ನಡೆದ 11ನೇ ಬ್ರಿಕ್ಸ್ ಇಂಧನ ಸಚಿವರ ಸಭೆಯ ನೇತೃತ್ವವನ್ನು ಭಾರತದ ಪರವಾಗಿ ಕೇಂದ್ರ ವಿದ್ಯುತ್ ಮತ್ತು ನಗರಾಭಿವೃದ್ಧಿ ಸಚಿವ ಶ್ರೀ ಮನೋಹರ್ ಲಾಲ್ ಅವರು ವಹಿಸಿದ್ದರು, ಹಾಗೂ ಈ ಸಮಾವೇಶದಲ್ಲಿ ಬ್ರಿಕ್ಸ್ ದೇಶಗಳ ಇಂಧನ ಸಚಿವರಲ್ಲದೆ ಅಂತರರಾಷ್ಟ್ರೀಯ ಸೌರ ಒಕ್ಕೂಟ (ISA), ಜಾಗತಿಕ ಜೈವಿಕ ಇಂಧನ ಒಕ್ಕೂಟ (GBA) ಮತ್ತು ನ್ಯೂ ಡೆವಲಪ್‌ಮೆಂಟ್ ಬ್ಯಾಂಕ್ (NDB) ಸಂಸ್ಥೆಗಳ ಪ್ರಮುಖ ಪ್ರತಿನಿಧಿಗಳು ಪಾಲ್ಗೊಂಡಿದ್ದರು.

**ಮುಖ್ಯ ವಿಷಯ (Theme): "Building for Resilience, Innovation, Cooperation and Sustainability" (ಸ್ಥಿತಿಸ್ಥಾಪಕತ್ವ, ನಾವೀನ್ಯತೆ, ಸಹಕಾರ ಮತ್ತು ಸುಸ್ಥಿರತೆಗಾಗಿ ನಿರ್ಮಾಣ).**

**ಧ್ಯೇಯವಾಕ್ಯ (Energy Track Theme): "ಸರ್ವೇಷಾಂ ಊರ್ಜಮ್" (Energy for All - ಎಲ್ಲರಿಗೂ ಇಂಧನ).**

➤ ಚರ್ಚಿಸಲಾದ 3 ಪ್ರಮುಖ ಆದ್ಯತಾ ಕ್ಷೇತ್ರಗಳು:

ಇಂಧನ ಭದ್ರತೆ ಮತ್ತು ಸುಸ್ಥಿರತೆ: ಗಟ್ಟಿಯಾದ ಇಂಧನ ವ್ಯವಸ್ಥೆಗಳು, ಗ್ರಿಡ್ ಆಧುನೀಕರಣ, ಇಂಧನ ಸಂಗ್ರಹಣೆ ಮತ್ತು ಸುರಕ್ಷಿತ ಪೂರೈಕೆ.

ಇಂಧನ ಲಭ್ಯತೆ ಮತ್ತು ಸಮಾನತೆ: ಪ್ರತಿಯೊಬ್ಬರಿಗೂ ಕೈಗೆಟುಕುವ ದರದಲ್ಲಿ ಶುದ್ಧ ಇಂಧನ ಒದಗಿಸುವುದು ಹಾಗೂ ಕ್ಲೀನ್ ಕುಕಿಂಗ್ (ಸ್ವಚ್ಛ ಅಡುಗೆ ಅನಿಲ/ಇಂಧನ) ಪರಿಹಾರಗಳು.

ತಂತ್ರಜ್ಞಾನ ಮತ್ತು ನಾವೀನ್ಯತೆ: ಸ್ಮಾರ್ಟ್ ಗ್ರಿಡ್‌ಗಳು, ಹೈಡ್ರೋಜನ್ ಮೌಲ್ಯ ಸರಪಳಿಗಳು, ಇಂಧನ ವ್ಯವಸ್ಥೆಗಳಲ್ಲಿ ಕೃತಕ ಬುದ್ಧಿಮತ್ತೆ (AI) ಬಳಕೆ ಮತ್ತು ಜೈವಿಕ ಇಂಧನಗಳು.

➤ **ಭಾರತದ ಇಂಧನ ಕ್ಷೇತ್ರದ ಸಾಧನೆಗಳು:**

3ನೇ ಅತಿ ದೊಡ್ಡ ಉತ್ಪಾದಕ: ಭಾರತವು ಪ್ರಸ್ತುತ ವಿಶ್ವದಲ್ಲೇ ಮೂರನೇ ಅತಿ ದೊಡ್ಡ ವಿದ್ಯುತ್ ಉತ್ಪಾದಕ ಮತ್ತು ಬಳಕೆದಾರ ದೇಶವಾಗಿದೆ.

ಇನ್‌ಸ್ಟಾಲ್ಡ್ ಸಾಮರ್ಥ್ಯ: ಭಾರತದ ಒಟ್ಟು ವಿದ್ಯುತ್ ಇನ್‌ಸ್ಟಾಲ್ಡ್ ಸಾಮರ್ಥ್ಯವು ಸುಮಾರು 540 GW ತಲುಪಿದೆ. ಇದರಲ್ಲಿ ಅರ್ಧಕ್ಕಿಂತ ಹೆಚ್ಚು ಭಾಗ ಪಳೆಯುಳಿಕೆ ರಹಿತ (Non-fossil) ಮೂಲಗಳಿಂದ ಬರುತ್ತಿದೆ.

ಸೌರಶಕ್ತಿ ಕ್ರಾಂತಿ: 2014 ರಲ್ಲಿ ಕೇವಲ 3 GW ಇದ್ದ ಸೌರಶಕ್ತಿ ಸಾಮರ್ಥ್ಯವು ಇಂದು 154 GW ಗಿಂತಲೂ ಹೆಚ್ಚು ಹೆಚ್ಚಾಗಿದೆ.

ಪ್ರಮುಖ ಯೋಜನೆಗಳು: 'ಪಿಎಂ ಸೂರ್ಯ ಘರ್: ಮುಫ್ತ್ ಬಿಜ್ಲಿ ಯೋಜನೆ' ಮೂಲಕ ಮನೆಗಳ ಮೇಲ್ಛಾವಣಿ ಸೌರಶಕ್ತಿ (Rooftop Solar) ಬಳಕೆಯನ್ನು ಹೆಚ್ಚಿಸಲಾಗುತ್ತಿದೆ.

ಭವಿಷ್ಯದ ಗುರಿಗಳು: 2032 ರ ವೇಳೆಗೆ 400 GWh ಇಂಧನ ಸಂಗ್ರಹಣಾ ಸಾಮರ್ಥ್ಯ ಮತ್ತು 2047 ರ ವೇಳೆಗೆ 100 GW ಪರಮಾಣು ವಿದ್ಯುತ್ ಸಾಮರ್ಥ್ಯ ಹೊಂದುವ ಗುರಿ ಇಟ್ಟುಕೊಳ್ಳಲಾಗಿದೆ. ಜೊತೆಗೆ ಭಾರತವು ನಿಗದಿತ ಸಮಯಕ್ಕಿಂತ ಮೊದಲೇ ಶೇಕಡಾ 20 ರಷ್ಟು ಎಥನಾಲ್ ಮಿಶ್ರಣದ (Ethanol Blending) ಗುರಿಯನ್ನು ಸಾಧಿಸಿದೆ.

➤ **ಭಾರತದ ಅಧ್ಯಕ್ಷತೆಯಲ್ಲಿ ಹೊರಬಂದ ಪ್ರಮುಖ ನಿರ್ಧಾರಗಳು:**

BRICS ಡಿಜಿಟಲ್ ಸೆಂಟರ್ ಆಫ್ ಎಕ್ಸಲೆನ್ಸ್: ಸ್ಮಾರ್ಟ್ ಗ್ರಿಡ್‌ಗಳು ಮತ್ತು ಇಂಧನ ಸಂಗ್ರಹಣೆಗಾಗಿ ಪ್ರತ್ಯೇಕ ಡಿಜಿಟಲ್ ಕೇಂದ್ರವನ್ನು (BRICS Digital Centre of Excellence for Smart Grids and Energy Storage) ಪ್ರಾರಂಭಿಸಲಾಯಿತು. ಇದು ಜ್ಞಾನ ಹಂಚಿಕೆಗೆ ವೇದಿಕೆಯಾಗಲಿದೆ.

ಸ್ಮಾರ್ಟ್ ಗ್ರಿಡ್ ಮಾರ್ಗದರ್ಶಿ ಸೂತ್ರಗಳು: ನವೀಕರಿಸಬಹುದಾದ ಇಂಧನವನ್ನು ಸುಲಭವಾಗಿ ಸಂಯೋಜಿಸಲು ಬ್ರಿಕ್ಸ್ ದೇಶಗಳು ಹೊಸ ಮಾರ್ಗದರ್ಶಿ ಸೂತ್ರಗಳನ್ನು ಅಳವಡಿಸಿಕೊಂಡಿವೆ.

ಹೈಡ್ರೋಜನ್ ಮೌಲ್ಯ ಸರಪಳಿ ವರದಿ: ಭವಿಷ್ಯದ ಹಸಿರು ಹೈಡ್ರೋಜನ್ ತಂತ್ರಜ್ಞಾನಗಳ ಸಹಕಾರಕ್ಕಾಗಿ ಜಂಟಿ ವರದಿಯನ್ನು ಸಿದ್ಧಪಡಿಸಲಾಗುತ್ತಿದೆ.

ಮುಂದಿನ ಅಧ್ಯಕ್ಷತೆ: 2027 ರ ಸಾಲಿನ ಬ್ರಿಕ್ಸ್ ಇಂಧನ ಸಚಿವರ ಸಭೆಯ ಅಧ್ಯಕ್ಷತೆಯನ್ನು ಚೀನಾ ದೇಶ ವಹಿಸಿಕೊಳ್ಳಲಿದೆ.

## ಇಂಟೆಲಿಜೆನ್ಸ್ ಬ್ಯೂರೋ (IB) ನೂತನ ಮುಖ್ಯಸ್ಥರಾಗಿ ಹಿರಿಯ ಐಪಿಎಸ್ ಅಧಿಕಾರಿ ಮಹೇಶ್ ದೀಕ್ಷಿತ್ ನೇಮಕ




➤ ಭಾರತದ ಪ್ರಮುಖ ಆಂತರಿಕ ಗುಪ್ತಚರ ಸಂಸ್ಥೆಯಾದ 'ಇಂಟೆಲಿಜೆನ್ಸ್ ಬ್ಯೂರೋ' (Intelligence Bureau - IB) ನೂತನ ನಿರ್ದೇಶಕರಾಗಿ ಹಿರಿಯ ಐಪಿಎಸ್ ಅಧಿಕಾರಿ ಮಹೇಶ್ ದೀಕ್ಷಿತ್ (Mahesh Dixit) ಅವರನ್ನು ಕೇಂದ್ರ ಸರ್ಕಾರ ನೇಮಕ ಮಾಡಿದೆ. ದೇಶದ ಆಂತರಿಕ ಭದ್ರತೆ ಮತ್ತು ಗುಪ್ತಚರ ಇಲಾಖೆಯಲ್ಲಿ ದಶಕಗಳ ಕಾಲ ಸೇವೆ ಸಲ್ಲಿಸಿದ ಅನುಭವ ಹೊಂದಿರುವ ಅವರಿಗೆ ಈ ಮಹತ್ವದ ಜವಾಬ್ದಾರಿ ನೀಡಲಾಗಿದೆ.

➤ **ಮಹೇಶ್ ದೀಕ್ಷಿತ್:** ಅವರು 1993ರ ಬ್ಯಾಚ್‌ನ ಆಂಧ್ರಪ್ರದೇಶ ಕೆಡರ್‌ನ ಹಿರಿಯ ಐಪಿಎಸ್ ಅಧಿಕಾರಿಯಾಗಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಸಚಿವ ಸಂಪುಟದ ನೇಮಕಾತಿ ಸಮಿತಿಯು (Appointments Committee of the Cabinet - ACC) ಇವರ ಹೆಸರನ್ನು ಅನುಮೋದಿಸಿದೆ.

➤ **ಪ್ರಮುಖ ಸೇವಾ ಹಿನ್ನೆಲೆ ಮತ್ತು ಸಾಧನೆಗಳು:**

ಜಮ್ಮು ಮತ್ತು ಕಾಶ್ಮೀರದಲ್ಲಿ ಸೇವೆ: ಮಹೇಶ್ ದೀಕ್ಷಿತ್ ಅವರು ಶ್ರೀನಗರದಲ್ಲಿರುವ ಐಬಿಯ 'ಸಬ್ಸಿಡಿಯರಿ ಇಂಟೆಲಿಜೆನ್ಸ್ ಬ್ಯೂರೋ' (SIB) ಮುಖ್ಯಸ್ಥರಾಗಿ ಅತ್ಯಂತ ನಿರ್ಣಾಯಕ ಅವಧಿಯಲ್ಲಿ ಸೇವೆ ಸಲ್ಲಿಸಿದ್ದಾರೆ.

ಆರ್ಟಿಕಲ್ 370 ರದ್ದತಿ ವೇಳೆ ಪಾತ್ರ: ಜಮ್ಮು ಮತ್ತು ಕಾಶ್ಮೀರದಲ್ಲಿ 370ನೇ ವಿಧಿಯನ್ನು ರದ್ದುಗೊಳಿಸಿದ ನಂತರದ ಪರಿಸ್ಥಿತಿಯಲ್ಲಿ ಪ್ರಾದೇಶಿಕ ಭದ್ರತೆಯನ್ನು ಕಾಪಾಡುವಲ್ಲಿ ಮತ್ತು ಆಂತರಿಕ ಸ್ಥಿರತೆಯನ್ನು ಕಾಯ್ದುಕೊಳ್ಳುವಲ್ಲಿ ಇವರು ಪ್ರಮುಖ ಪಾತ್ರ ವಹಿಸಿದ್ದರು.

ಭಯೋತ್ಪಾದನಾ ನಿಗ್ರಹ ತಜ್ಞ: ಕ್ರಾಸ್-ಬಾರ್ಡರ್ ಇನ್‌ಫಿಲ್ಟ್ರೇಷನ್ (ಗಡಿ ದಾಟಿದ ನುಸುಳುವಿಕೆ), ಎಡಪಂಥೀಯ ಉಗ್ರಗಾಮಿತ್ವ (ನಕ್ಸಲಿಸಂ), ಮತ್ತು ನಾರ್ಕೋ-ಟೆರರಿಸಂ (ಮಾದಕ ದ್ರವ್ಯ ಭಯೋತ್ಪಾದನೆ) ನಿಗ್ರಹದಲ್ಲಿ ಇವರು ಅಪಾರ ಪರಿಣತಿ ಹೊಂದಿದ್ದಾರೆ.

➤ **ಇಂಟೆಲಿಜೆನ್ಸ್ ಬ್ಯೂರೋ (IB):** ನವದೆಹಲಿಯಲ್ಲಿ ಪ್ರಧಾನ ಕಚೇರಿ ಹೊಂದಿರುವ ಮತ್ತು ಕೇಂದ್ರ ಗೃಹ ಸಚಿವಾಲಯದ ಅಡಿ ಬರುವ ಭಾರತದ ಅತ್ಯಂತ ಹಳೆಯ ಗುಪ್ತಚರ ಸಂಸ್ಥೆಯಾದ ಇಂಟೆಲಿಜೆನ್ಸ್ ಬ್ಯೂರೋ (IB), 1887ರಲ್ಲಿ ಸ್ಥಾಪನೆಯಾಗಿದ್ದು, ದೇಶದ ಆಂತರಿಕ ಭದ್ರತೆ, ಭಯೋತ್ಪಾದನಾ ನಿಗ್ರಹ ಮತ್ತು ದೇಶವಿರೋಧಿ ಚಟುವಟಿಕೆಗಳ ಮೇಲೆ ಕಣ್ಣಿಟ್ಟು ಕೇಂದ್ರ ಸರ್ಕಾರಕ್ಕೆ ರಹಸ್ಯ ಮಾಹಿತಿ ಒದಗಿಸುವ ಮುಖ್ಯ ಕಾರ್ಯವನ್ನು ಮಾಡುತ್ತದೆ.

## ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ಹಿಂಸೆಗೊಳಗಾದ ಬಲಿಪಶುಗಳ ಬೆಂಬಲ ದಿನ 2026




➤ ಜಗತ್ತಿನಾದ್ಯಂತ ಮಾನವ ಹಕ್ಕುಗಳ ರಕ್ಷಣೆ, ಮಾನವೀಯ ಮೌಲ್ಯಗಳ ಪುನರುತ್ಥಾನ ಮತ್ತು ಯಾವುದೇ ರೀತಿಯ ಅಮಾನವೀಯ ದೈಹಿಕ ಅಥವಾ ಮಾನಸಿಕ ಹಿಂಸೆಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವ ಉದ್ದೇಶದಿಂದ ಪ್ರತಿ ವರ್ಷ ಜೂನ್ 26 ರಂದು ವಿಶ್ವಸಂಸ್ಥೆಯ ನೇತೃತ್ವದಲ್ಲಿ 'ಅಂತರರಾಷ್ಟ್ರೀಯ ಹಿಂಸೆಗೊಳಗಾದ ಬಲಿಪಶುಗಳ ಬೆಂಬಲ ದಿನ' (International Day in Support of Victims of Torture) ವನ್ನು ಆಚರಿಸಲಾಗುತ್ತದೆ.

➤ ಯಾವುದೇ ಒಬ್ಬ ವ್ಯಕ್ತಿಗೆ ಉದ್ದೇಶಪೂರ್ವಕವಾಗಿ ತೀವ್ರವಾದ ದೈಹಿಕ ಅಥವಾ ಮಾನಸಿಕ ವೇದನೆಯನ್ನು ಉಂಟುಮಾಡುವುದನ್ನು 'ಹಿಂಸೆ' (Torture) ಎಂದು ಕರೆಯಲಾಗುತ್ತದೆ. ಇದು ಮಾನವನ ಮೂಲಭೂತ ಹಕ್ಕುಗಳು ಮತ್ತು ಘನತೆಯ ಸಂಪೂರ್ಣ ಉಲ್ಲಂಘನೆಯಾಗಿದೆ. ಅಂತರರಾಷ್ಟ್ರೀಯ ಕಾನೂನಿನ ಪ್ರಕಾರ ಹಿಂಸೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದ್ದರೂ, ಜಗತ್ತಿನ ಹಲವು ಭಾಗಗಳಲ್ಲಿ ಇದು ಇಂದಿಗೂ ಮುಂದುವರಿದಿದೆ. ಹಿಂಸೆಗೆ ಒಳಗಾದವರ ಧ್ವನಿಯಾಗಲು ಮತ್ತು ಅವರ ಪುನರ್ವಸತಿಗೆ ಬೆಂಬಲ ನೀಡಲು ಈ ದಿನವನ್ನು ಮೀಸಲಿಡಲಾಗಿದೆ.

➤ ಡೆನ್ಮಾರ್ಕ್ ದೇಶದ ಪ್ರಸ್ತಾಪದ ಮೇರೆಗೆ, 1948 ರ ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯ (UDHR) ಹಿನ್ನೆಲೆಯಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ಡಿಸೆಂಬರ್ 12, 1997 ರಂದು ಕೈಗೊಂಡ ನಿರ್ಣಯದ (Resolution 52/149) ಪ್ರಕಾರ, ಮೊದಲ ಬಾರಿಗೆ 1998 ಜೂನ್ 26 ರಂದು 'ಅಂತರರಾಷ್ಟ್ರೀಯ ಹಿಂಸೆಗೊಳಗಾದ ಬಲಿಪಶುಗಳ ಬೆಂಬಲ ದಿನ'ವನ್ನು ಆಚರಿಸಲಾಯಿತು. ವಿಶ್ವಸಂಸ್ಥೆಯ ಚಾರ್ಟರ್‌ಗೆ ಸಹಿ ಹಾಕಿದ (1945) ಮತ್ತು ಹಿಂಸೆ ವಿರೋಧಿ ಒಪ್ಪಂದ (CAT) ಜಾರಿಗೆ ಬಂದ (1987) ಐತಿಹಾಸಿಕ ನೆನಪಿಗಾಗಿ ಜೂನ್ 26 ಅನ್ನು ಆಯ್ಕೆ ಮಾಡಲಾಗಿದೆ.

➤ ವಿಶ್ವಸಂಸ್ಥೆಯ ಹಿಂಸೆ ವಿರೋಧಿ ಒಪ್ಪಂದ: ಈ ಒಪ್ಪಂದಕ್ಕೆ ಪ್ರಸ್ತುತ 174 ಕ್ಕೂ ಹೆಚ್ಚು ದೇಶಗಳು ಸಹಿ ಹಾಕಿವೆ.ಈ ಒಪ್ಪಂದದ ಆರ್ಟಿಕಲ್ 1 ರ ಪ್ರಕಾರ, ಯಾವುದೇ ಮಾಹಿತಿ ಅಥವಾ ಒಪ್ಪಿಗೆಯನ್ನು ಪಡೆಯಲು, ಶಿಕ್ಷಿಸಲು ಅಥವಾ ತಾರತಮ್ಯದ ಆಧಾರದ ಮೇಲೆ ಒಬ್ಬ ವ್ಯಕ್ತಿಗೆ ಉದ್ದೇಶಪೂರ್ವಕವಾಗಿ ನೀಡಲಾಗುವ ತೀವ್ರ ದೈಹಿಕ ಅಥವಾ ಮಾನಸಿಕ ಯಾತನೆಯನ್ನು ಹಿಂಸೆ ಎಂದು ಪರಿಗಣಿಸಲಾಗುತ್ತದೆ.

➤ ಚೇತರಿಕೆ ಮತ್ತು ಪುನರ್ವಸತಿ: ಇವರ ಸಹಾಯಕ್ಕಾಗಿ ವಿಶ್ವಸಂಸ್ಥೆಯು 'ಹಿಂಸೆಗೊಳಗಾದ ಬಲಿಪಶುಗಳಿಗಾಗಿ ವಿಶ್ವಸಂಸ್ಥೆಯ ಸ್ವಯಂಪ್ರೇರಿತ ನಿಧಿ' (UN Voluntary Fund for Victims of Torture) ಯನ್ನು 1981 ರಲ್ಲಿ ಸ್ಥಾಪಿಸಿತು. ಈ ನಿಧಿಯ ಮೂಲಕ ಜಗತ್ತಿನಾದ್ಯಂತ ಪ್ರತಿ ವರ್ಷ ಸುಮಾರು 50,000 ಕ್ಕೂ ಹೆಚ್ಚು ಸಂತ್ರಸ್ತರಿಗೆ ವೈದ್ಯಕೀಯ, ಮಾನಸಿಕ, ಸಾಮಾಜಿಕ ಮತ್ತು ಕಾನೂನು ನೆರವನ್ನು ನೀಡಲಾಗುತ್ತಿದೆ.

## ಇಂಟರ್‌ನ್ಯಾಷನಲ್ ಬಿಗ್ ಕ್ಯಾಟ್ ಅಲಯನ್ಸ್ (IBCA) ಒಕ್ಕೂಟಕ್ಕೆ ಬಾಂಗ್ಲಾದೇಶ ಅಧಿಕೃತ ಸೇರ್ಪಡೆ!




➤ ಜಾಗತಿಕ ವನ್ಯಜೀವಿ ಸಂರಕ್ಷಣೆಯ ನಿಟ್ಟಿನಲ್ಲಿ ಭಾರತದ ಮಹತ್ವಾಕಾಂಕ್ಷೆಯ ಉಪಕ್ರಮವಾದ 'ಇಂಟರ್‌ನ್ಯಾಷನಲ್ ಬಿಗ್ ಕ್ಯಾಟ್ ಅಲಯನ್ಸ್' (International Big Cat Alliance - IBCA) ಒಕ್ಕೂಟಕ್ಕೆ ನೆರೆರಾಷ್ಟ್ರ ಬಾಂಗ್ಲಾದೇಶ ಅಧಿಕೃತವಾಗಿ ಸೇರ್ಪಡೆಗೊಂಡಿದೆ. 2026ರ ಜೂನ್ 24 ರಂದು ಬಾಂಗ್ಲಾದೇಶವು ಈ ಒಕ್ಕೂಟದ ಸದಸ್ಯತ್ವವನ್ನು ಪಡೆದುಕೊಂಡಿದ್ದು, ಇದರೊಂದಿಗೆ ಒಕ್ಕೂಟದ ಒಟ್ಟು ಸದಸ್ಯ ರಾಷ್ಟ್ರಗಳ ಸಂಖ್ಯೆ 27ಕ್ಕೆ ಏರಿಕೆಯಾಗಿದೆ.

➤ ಭಾರತ ಮತ್ತು ಬಾಂಗ್ಲಾದೇಶದ ನಡುವೆ ಹಂಚಿಕೆಯಾಗಿರುವ ವಿಶ್ವದ ಅತಿದೊಡ್ಡ ಮ್ಯಾಂಗ್ರೋವ್ ಕಾಡಾದ 'ಸುಂದರಬನ' (Sundarbans) ಪ್ರದೇಶದಲ್ಲಿರುವ ರಾಯಲ್ ಬೆಂಗಾಲ್ ಹುಲಿಗಳ (Bengal Tiger) ಸಂರಕ್ಷಣೆಗೆ ಈ ಜಂಟಿ ಆಡಳಿತಾತ್ಮಕ ಸಹಕಾರವು ಪ್ರಮುಖ ಮೈಲಿಗಲ್ಲಾಗಲಿದೆ.

➤ ಇಂಟರ್‌ನ್ಯಾಷನಲ್ ಬಿಗ್ ಕ್ಯಾಟ್ ಅಲಯನ್ಸ್ (IBCA): ಇದು ಬೆಕ್ಕಿನ ಜಾತಿಗೆ (Big Cats) ಸೇರಿದ ಜಗತ್ತಿನ ಪ್ರಮುಖ 7 ದೊಡ್ಡ ವನ್ಯಜೀವಿಗಳ ಸಂರಕ್ಷಣೆ, ಅವುಗಳ ಆವಾಸಸ್ಥಾನಗಳ ರಕ್ಷಣೆ ಹಾಗೂ ಜಾಗತಿಕ ಮಟ್ಟದಲ್ಲಿ ತಾಂತ್ರಿಕ ಮತ್ತು ಆಡಳಿತಾತ್ಮಕ ಸಹಕಾರವನ್ನು ಬಲಪಡಿಸುವ ಉದ್ದೇಶ ಹೊಂದಿರುವ ಒಂದು ಅಂತರರಾಷ್ಟ್ರೀಯ ಒಕ್ಕೂಟವಾಗಿದೆ.

**➤ ಒಕ್ಕೂಟದ ವ್ಯಾಪ್ತಿಗೆ ಬರುವ 7 ಪ್ರಮುಖ ವನ್ಯಜೀವಿಗಳು:**

ಹುಲಿ (Tiger)
ಸಿಂಹ (Lion)
ಚಿರತೆ (Leopard)
ಹಿಮಚಿರತೆ (Snow Leopard)
ಚೀತಾ (Cheetah)
ಜಾಗುವಾರ್ (Jaguar)
ಪ್ಯೂಮಾ (Puma)

ಈ 7 ಪ್ರಾಣಿಗಳಲ್ಲಿ ಜಾಗುವಾರ್ ಮತ್ತು ಪ್ಯೂಮಾ ಹೊರತುಪಡಿಸಿ, ಉಳಿದ 5 ದೊಡ್ಡ ಬೆಕ್ಕಿನ ಜಾತಿಗೆ ಸೇರಿದ ಪ್ರಾಣಿಗಳಿಗೆ ಭಾರತವು ನೈಸರ್ಗಿಕ ಆವಾಸಸ್ಥಾನವಾಗಿದೆ.

➤ ಭಾರತದಲ್ಲಿ 'ಪ್ರಾಜೆಕ್ಟ್ ಟೈಗರ್' (Project Tiger) ಯೋಜನೆಯ 50 ವರ್ಷಗಳ ಸಂಭ್ರಮಾಚರಣೆಯ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಈ ಒಕ್ಕೂಟದ ಪ್ರಸ್ತಾಪ ಮಾಡಿದ್ದರು. ನಂತರ 2024ರ ಫೆಬ್ರವರಿಯಲ್ಲಿ ಕೇಂದ್ರ ಸಚಿವ ಸಂಪುಟ ಇದಕ್ಕೆ ಒಪ್ಪಿಗೆ ನೀಡಿತು. ಜೂನ್ 2026 ರಲ್ಲಿ ಇದರ ಮೊದಲ ಜಾಗತಿಕ ಶೃಂಗಸಭೆಯು ನವದೆಹಲಿಯಲ್ಲಿ ಯಶಸ್ವಿಯಾಗಿ ಜರುಗಿದೆ.

➤ ವಿಶ್ವದಲ್ಲಿ ಈ 7 ಪ್ರಮುಖ ಪ್ರಾಣಿಗಳ ಸಂತತಿ ಕ್ಷೀಣಿಸದಂತೆ ತಡೆಯುವುದು, ಆವಾಸಸ್ಥಾನಗಳ ರಕ್ಷಣೆ, ಜ್ಞಾನ ವಿನಿಮಯ ಮತ್ತು ಸಂರಕ್ಷಣಾ ತಂತ್ರಜ್ಞಾನಗಳನ್ನು ಪರಸ್ಪರ ಹಂಚಿಕೊಳ್ಳುವುದು ಇದರ ಪ್ರಮುಖ ಗುರಿಯಾಗಿದೆ. ಜಗತ್ತಿನಾದ್ಯಂತ ಒಟ್ಟು 95 ದೇಶಗಳು ಈ ಬಿಗ್ ಕ್ಯಾಟ್‌ಗಳ ಆವಾಸಸ್ಥಾನಗಳನ್ನು ಹೊಂದಿದ್ದು (Range Countries), ಅವುಗಳನ್ನು ಒಟ್ಟುಗೂಡಿಸುವ ಕೆಲಸ ಪ್ರಗತಿಯಲ್ಲಿದೆ.

## ವೆನೆಜುವೆಲಾದಲ್ಲಿ ಭೀಕರ ಭೂಕಂಪ: ನೆರವಿಗೆ ಧಾವಿಸಿದ ಭಾರತದ 'ಆಪರೇಷನ್ ಅಮಿಸ್ಟಾಡ್'




➤ ದಕ್ಷಿಣ ಅಮೆರಿಕಾದ ಪ್ರಮುಖ ದೇಶವಾದ ವೆನೆಜುವೆಲಾದಲ್ಲಿ ಇತ್ತೀಚೆಗೆ ಸಂಭವಿಸಿದ ಬ್ಯಾಕ್-ಟು-ಬ್ಯಾಕ್ (ಸರಪಳಿ) ಭೀಕರ ಭೂಕಂಪಗಳು ಇಡೀ ದೇಶವನ್ನೇ ನಡುಗಿಸಿವೆ. ಈ ನೈಸರ್ಗಿಕ ವಿಕೋಪದಿಂದಾಗಿ ಇದುವರೆಗೆ 589 ಕ್ಕೂ ಹೆಚ್ಚು ಜನರು ಪ್ರಾಣ ಕಳೆದುಕೊಂಡಿದ್ದು, 3,000 ಕ್ಕೂ ಹೆಚ್ಚು ಜನರು ತೀವ್ರವಾಗಿ ಗಾಯಗೊಂಡಿದ್ದಾರೆ. ಈ ಸಂಕಷ್ಟದ ಸಮಯದಲ್ಲಿ ಭಾರತವು ಎಂದಿನಂತೆ ತನ್ನ ಜಾಗತಿಕ ಸ್ನೇಹಹಸ್ತವನ್ನು ಚಾಚಿ, ತುರ್ತು ರಕ್ಷಣಾ ಮತ್ತು ವೈದ್ಯಕೀಯ ಸಾಮಗ್ರಿಗಳನ್ನು ಹೊತ್ತ ಎರಡು ವಾಯುಸೇನೆ ವಿಮಾನಗಳನ್ನು ರವಾನಿಸಿದೆ.

ಭಾರತವು ಈ ಮಾನವೀಯ ನೆರವಿಗಾಗಿ ಕೈಗೊಂಡಿರುವ ಈ ವಿಶೇಷ ಕಾರ್ಯಾಚರಣೆಗೆ 'ಆಪರೇಷನ್ ಅಮಿಸ್ಟಾಡ್' (Operation Amistad) ಎಂದು ಹೆಸರಿಡಲಾಗಿದೆ.

➤ ಭೂಕಂಪದ ತೀವ್ರತೆ ಮತ್ತು ಹಾನಿಯ ಪ್ರಮಾಣ: ವೆನೆಜುವೆಲಾದ ಉತ್ತರ ಮತ್ತು ಮಧ್ಯ ಭಾಗಗಳಲ್ಲಿ ಕೇವಲ 39 ಸೆಕೆಂಡುಗಳ ಅಂತರದಲ್ಲಿ 7.2 ಮತ್ತು 7.5 ತೀವ್ರತೆಯ ಎರಡು ಪ್ರಬಲ ಭೂಕಂಪಗಳು ಸಂಭವಿಸಿವೆ. ಮುಖ್ಯವಾಗಿ ಕರಾವಳಿ ಪ್ರದೇಶವಾದ 'ಲಾ ಗ್ವೈರಾ' (La Guaira) ಮತ್ತು ರಾಜಧಾನಿ ಕರಾಕಸ್‌ನಲ್ಲಿ ನೂರಾರು ಬಹುಮಹಡಿ ಕಟ್ಟಡಗಳು ನೆಲಸಮಗೊಂಡಿವೆ. ಕಟ್ಟಡಗಳ ಅವಶೇಷಗಳ ಅಡಿಯಲ್ಲಿ ಸಿಲುಕಿರುವ ಸಾವಿರಾರು ಜನರನ್ನು ರಕ್ಷಿಸಲು ರಕ್ಷಣಾ ಸಿಬ್ಬಂದಿ ನಿರಂತರವಾಗಿ ಶ್ರಮಿಸುತ್ತಿದ್ದಾರೆ. ಪರಿಸ್ಥಿತಿ ಗಂಭೀರವಾಗಿರುವುದರಿಂದ ದೇಶದಲ್ಲಿ ತುರ್ತು ಪರಿಸ್ಥಿತಿಯನ್ನು ಘೋಷಿಸಲಾಗಿದೆ.

➤ ಆಪರೇಷನ್ ಅಮಿಸ್ಟಾಡ್: ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರ ಅಧಿಕೃತ ಪ್ರಕಟಣೆಯ ಪ್ರಕಾರ, ಭಾರತವು ತಕ್ಷಣವೇ ಸ್ಪಂದಿಸಿ ವೆನೆಜುವೆಲಾಗೆ ಅಗತ್ಯವಿರುವ ತುರ್ತು ವೈದ್ಯಕೀಯ ನೆರವನ್ನು ರವಾನಿಸಿದೆ.

60 ಪ್ಯಾರಾ ಫೀಲ್ಡ್ ಹಾಸ್ಪಿಟಲ್‌ನ 9 ವೈದ್ಯಕೀಯ ಅಧಿಕಾರಿಗಳು ಸೇರಿದಂತೆ ಒಟ್ಟು 41 ಸದಸ್ಯರ ಪರಿಣಿತ ಸೇನಾ ವೈದ್ಯಕೀಯ ತಂಡವನ್ನು ಕಳುಹಿಸಲಾಗಿದೆ.

ಈ ತಂಡವು ಸ್ಥಳದಲ್ಲೇ ತುರ್ತು ಶಸ್ತ್ರಚಿಕಿತ್ಸೆ, ಟ್ರಾಮಾ ಮ್ಯಾನೇಜ್‌ಮೆಂಟ್ ಹಾಗೂ ತೀವ್ರ ನಿಗಾ ಘಟಕದ (ICU) ಸೇವೆಗಳನ್ನು ಒದಗಿಸುವ ಸಾಮರ್ಥ್ಯ ಹೊಂದಿದೆ.

➤ **'ಭೀಷ್ಮ ಕ್ಯೂಬ್' (BHISHM Cube):** ಈ ಕಾರ್ಯಾಚರಣೆಯಲ್ಲಿ ಭಾರತವು ಕಳುಹಿಸಿರುವ ಅತ್ಯಂತ ಸುಧಾರಿತ ತಂತ್ರಜ್ಞಾನವೆಂದರೆ 'ಭೀಷ್ಮ ಕ್ಯೂಬ್' (BHISHM - Bharat Health Initiative for Sahyog, Hita and Maitri). ಇದು ಭಾರತದ 'ಆರೋಗ್ಯ ಮೈತ್ರಿ' ಯೋಜನೆಯಡಿ ಸ್ವದೇಶೀಯವಾಗಿ ಅಭಿವೃದ್ಧಿಪಡಿಸಲಾದ ಅತ್ಯಾಧುನಿಕ ಮೊಬೈಲ್ ಆಸ್ಪತ್ರೆಯಾಗಿದೆ.

**➤ ಭೀಷ್ಮ ಕ್ಯೂಬ್‌ನ ವೈಶಿಷ್ಟ್ಯಗಳು:**

ಇದು 72 ಸಣ್ಣ ಪೋರ್ಟಬಲ್ ಘಟಕಗಳನ್ನು ಒಳಗೊಂಡಿದ್ದು, ಕೇವಲ 12 ನಿಮಿಷಗಳಲ್ಲಿ ಸಂಪೂರ್ಣ ಕಾರ್ಯಾಚರಣಾ ಆಸ್ಪತ್ರೆಯಾಗಿ ಮಾರ್ಪಡಿಸಬಹುದು.

ಪ್ರಕೃತಿ ವಿಕೋಪದ ಸಂದರ್ಭದಲ್ಲಿ ರೋಗಿಗಳಿಗೆ ಜೀವ ರಕ್ಷಕ ಚಿಕಿತ್ಸೆ ನೀಡಲು ಇದರಲ್ಲಿ ಪೋರ್ಟಬಲ್ ವೆಂಟಿಲೇಟರ್‌ಗಳು, ಎಕ್ಸ್-ರೇ ಯಂತ್ರಗಳು, ಮಿನಿ-ICU ಮತ್ತು ಆಪರೇಷನ್ ಥಿಯೇಟರ್ ವ್ಯವಸ್ಥೆ ಇರುತ್ತದೆ.

ಒಂದು ಕ್ಯೂಬ್ ಮೂಲಕ ಸುಮಾರು 200 ಗಾಯಾಳುಗಳಿಗೆ ಏಕಕಾಲದಲ್ಲಿ ತುರ್ತು ಚಿಕಿತ್ಸೆ ನೀಡಬಹುದಾಗಿದೆ.

➤ ಭಾರತ ಮತ್ತು ವೆನೆಜುವೆಲಾ ನಡುವಿನ ವೈಮಾನಿಕ ದೂರವು ಸುಮಾರು 14,300 ಕಿಲೋಮೀಟರ್‌ಗಳಷ್ಟಿದ್ದು, ಭಾರತದ C-17 ವಿಮಾನಗಳು ಹಿತೈಷಿ ದೇಶಗಳಲ್ಲಿ ಇಂಧನ ಮರುಪೂರಣ (Refuelling) ಮಾಡಿಕೊಳ್ಳುತ್ತಾ ಈ ಸುದೀರ್ಘ ಮಾನವೀಯ ಕಾರ್ಯಾಚರಣೆಯನ್ನು ಯಶಸ್ವಿಯಾಗಿ ಕೈಗೊಂಡಿವೆ. ಜಾಗತಿಕ ಮಟ್ಟದಲ್ಲಿ ವಿಪತ್ತು ನಿರ್ವಹಣೆಯಲ್ಲಿ ಭಾರತವು ಮುಂಚೂಣಿಯಲ್ಲಿ ನಿಲ್ಲುವ ಮೂಲಕ ಮತ್ತೊಮ್ಮೆ ತನ್ನ 'ವಸುಧೈವ ಕುಟುಂಬಕಂ' ತತ್ವವನ್ನು ಜಗತ್ತಿಗೆ ಸಾಬೀತುಪಡಿಸಿದೆ.

## ಗಾಯಕಿ ಡಾ. ರಾಧಿಕಾ ಬಾಲಕೃಷ್ಣನ್‌ಗೆ ಯುಕೆ ಆರ್‌ಬಿಸಿ ಗೌರವ ಫೆಲೋಶಿಪ್: ಈ ಸಾಧನೆ ಮಾಡಿದ ಮೊದಲ ಕರ್ನಾಟಕ ಶೈಲಿಯ ಗಾಯಕಿ!



➤ ಕರ್ನಾಟಕ ಶಾಸ್ತ್ರೀಯ ಸಂಗೀತ ಲೋಕಕ್ಕೆ ಮತ್ತು ಹೆಮ್ಮೆಯ ಕರ್ನಾಟಕಕ್ಕೆ ಜಾಗತಿಕ ಮಟ್ಟದಲ್ಲಿ ಮತ್ತೊಂದು ಮಹತ್ವದ ಗೌರವ ಸಂದಿದೆ. ಖ್ಯಾತ ಕರ್ನಾಟಕ ಶಾಸ್ತ್ರೀಯ ಸಂಗೀತ ಕಲಾವಿದೆ ಹಾಗೂ ಶಿಕ್ಷಣ ತಜ್ಞೆ ಡಾ. ರಾಧಿಕಾ ಬಾಲಕೃಷ್ಣನ್ ಅವರಿಗೆ ಯುನೈಟೆಡ್ ಕಿಂಗ್‌ಡಮ್‌ನ (UK) ಪ್ರತಿಷ್ಠಿತ ಪ್ರದರ್ಶನ ಕಲೆಗಳ ಸಂಸ್ಥೆಯಾದ

'ರಾಯಲ್ ಬರ್ಮಿಂಗ್‌ಹ್ಯಾಮ್ ಕನ್ಸರ್ವಟೋರಿಯಂ' (RBC) ಗೌರವ ಫೆಲೋಶಿಪ್ (Honorary Fellowship) ನೀಡಿ ಗೌರವಿಸಿದೆ. ಈ ಅತ್ಯುನ್ನತ ಫೆಲೋಶಿಪ್ ಪಡೆದ ಮೊದಲ ಕರ್ನಾಟಕ ಶೈಲಿಯ ಗಾಯಕಿ ಎಂಬ ಐತಿಹಾಸಿಕ ಹೆಗ್ಗಳಿಕೆಗೆ ಡಾ. ರಾಧಿಕಾ ಪಾತ್ರರಾಗಿದ್ದಾರೆ.

➤ ರಾಯಲ್ ಬರ್ಮಿಂಗ್‌ಹ್ಯಾಮ್ ಕನ್ಸರ್ವಟೋರಿಯಂನಲ್ಲಿ ಆಯೋಜಿಸಲಾಗಿದ್ದ ಅದ್ದೂರಿ ಸಮಾರಂಭದಲ್ಲಿ ಈ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಡಾ. ರಾಧಿಕಾ ಬಾಲಕೃಷ್ಣನ್ ಅವರು ಕಲೆ, ಸಂಸ್ಕೃತಿ ಮತ್ತು ಶಿಕ್ಷಣ ಕ್ಷೇತ್ರಕ್ಕೆ ನೀಡಿರುವ ಅನುಪಮ ಕೊಡುಗೆ ಹಾಗೂ ಭಾರತೀಯ ಶಾಸ್ತ್ರೀಯ ಸಂಗೀತವನ್ನು ಜಾಗತಿಕ ಕಲಿಕಾ ಪರಿಸರಕ್ಕೆ ಕೊಂಡೊಯ್ಯುವಲ್ಲಿ ಅವರು ಮಾಡಿರುವ ಮಹತ್ವದ ಕಾರ್ಯವನ್ನು ಗುರುತಿಸಿ ಈ ಗೌರವ ಸಮರ್ಪಿಸಲಾಗಿದೆ.

➤ ಜಾಗತಿಕ ಮಟ್ಟದಲ್ಲಿ ಭಾರತೀಯ ಸಂಗೀತದ ಪ್ರಚಾರ: ಡಾ. ರಾಧಿಕಾ ಅವರು ಕಳೆದ 15 ಕ್ಕೂ ಹೆಚ್ಚು ವರ್ಷಗಳಿಂದ ಸಾಂಪ್ರದಾಯಿಕ ಕರ್ನಾಟಕ ಸಂಗೀತವನ್ನು ಸಮಕಾಲೀನ ಶೈಲಿಗಳೊಂದಿಗೆ ಜೋಡಿಸಿ ಭಾರತ, ಯುಕೆ ಸೇರಿದಂತೆ ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಪ್ರಸ್ತುತಪಡಿಸುತ್ತಿದ್ದಾರೆ.

➤ ಐಸಿಸಿಆರ್ ಚೇರ್ ಗೌರವ: 2023 ರಲ್ಲಿ ಬರ್ಮಿಂಗ್‌ಹ್ಯಾಮ್ ಸಿಟಿ ಯೂನಿವರ್ಸಿಟಿಯಲ್ಲಿ ಸ್ಥಾಪಿಸಲಾದ ಭಾರತೀಯ ಸಾಂಸ್ಕೃತಿಕ ಸಂಬಂಧಗಳ ಮಂಡಳಿಯ (ICCR) ಪ್ರಥಮ 'ಇಂಡಿಯನ್ ಸ್ಟಡೀಸ್ ಚೇರ್' (Chair in Indian Studies) ಗೌರವಕ್ಕೂ ಇವರು ಪಾತ್ರರಾಗಿದ್ದರು. ಅಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುವ ಮೂಲಕ ಯುಕೆಯ ವಿದ್ಯಾರ್ಥಿಗಳಿಗೆ ಭಾರತೀಯ ರಾಗ ಮತ್ತು ತಾಳ ಪದ್ಧತಿಯನ್ನು ಪರಿಚಯಿಸಿದ್ದರು.

## ಯುನೆಸ್ಕೋ ಪಟ್ಟಿಗೆ ಭಾರತ-ಚೀನಾ ಜಂಟಿ ನಾಮನಿರ್ದೇಶನ: ಹ್ಯುಯೆನ್ ತ್ಸಾಂಗ್ ಬರಹಗಳಿಗೆ ಜಾಗತಿಕ ಮಾನ್ಯತೆಯ ಗುರಿ!




➤ ಅಂತರರಾಷ್ಟ್ರೀಯ ಸಾಂಸ್ಕೃತಿಕ ರಾಜತಾಂತ್ರಿಕತೆಯಲ್ಲಿ ಭಾರತ ಮತ್ತು ಚೀನಾ ದೇಶಗಳು ಮಹತ್ವದ ಹೆಜ್ಜೆಯನ್ನಿಟ್ಟಿವೆ. 7ನೇ ಶತಮಾನದ ಪ್ರಸಿದ್ಧ ಚೀನೀ ಬೌದ್ಧ ಭಿಕ್ಷು ಮತ್ತು ಪ್ರವಾಸಿ ಹ್ಯುಯೆನ್ ತ್ಸಾಂಗ್ (Xuanzang) ಅವರ ಪ್ರಸಿದ್ಧ ಪ್ರವಾಸ ಕಥನವಾದ "ದಿ ಗ್ರೇಟ್ ಟಾಂಗ್ ರೆಕಾರ್ಡ್ಸ್ ಆನ್ ದಿ ವೆಸ್ಟರ್ನ್ ರೀಜನ್ಸ್" (Si-Yu-Ki) ಅನ್ನು ಯುನೆಸ್ಕೋದ (UNESCO) 'ಮೆಮೊರಿ ಆಫ್ ದಿ ವರ್ಲ್ಡ್' (Memory of the World) ಪಟ್ಟಿಗೆ ಸೇರಿಸಲು ಉಭಯ ದೇಶಗಳು ಜಂಟಿ ಪ್ರಸ್ತಾಪವನ್ನು ಮುಂದಿಟ್ಟಿವೆ.

➤ ವಾರಾಣಸಿಯಲ್ಲಿ ನಡೆದ ಪ್ರಮುಖ ಬ್ರಿಕ್ಸ್ (BRICS) ಸಾಂಸ್ಕೃತಿಕ ಕಾರ್ಯನಿರತ ಗುಂಪಿನ ಸಭೆಯಲ್ಲಿ ಈ ಮಹತ್ವದ ನಿರ್ಧಾರದ ಕುರಿತು ಚರ್ಚೆ ನಡೆದಿದ್ದು, ಸದ್ಯ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯವು (MEA) ಚೀನಾದ ಈ ಪ್ರಸ್ತಾಪವನ್ನು ಪರಿಶೀಲಿಸುತ್ತಿದೆ.

➤ ಹ್ಯುಯೆನ್ ತ್ಸಾಂಗ್ (Hiuen Tsang) ಮಹತ್ವ ಮತ್ತು ಭಾರತದ ಇತಿಹಾಸ:

19 ವರ್ಷಗಳ ಪ್ರವಾಸ: ಕ್ರಿ.ಶ. 629 ರಲ್ಲಿ ಭಾರತಕ್ಕೆ ಬಂದ ಹ್ಯುಯೆನ್ ತ್ಸಾಂಗ್, ಸುಮಾರು 19 ವರ್ಷಗಳ ಕಾಲ ಭಾರತದಾದ್ಯಂತ ಸಂಚರಿಸಿದರು.

ಹರ್ಷವರ್ಧನನ ಆಸ್ಥಾನ: ಉತ್ತರ ಭಾರತದ ಪ್ರಬಲ ರಾಜನಾಗಿದ್ದ ಹರ್ಷವರ್ಧನನ ಆಳ್ವಿಕೆಯ ಕಾಲದಲ್ಲಿ ಇವರು ಭಾರತಕ್ಕೆ ಭೇಟಿ ನೀಡಿದ್ದರು. ಅಂದಿನ ರಾಜಕೀಯ ಮತ್ತು ಸಾಮಾಜಿಕ ಸ್ಥಿತಿಗತಿಗಳನ್ನು ಇವರು ವಿವರವಾಗಿ ದಾಖಲಿಸಿದ್ದಾರೆ.

ನಳಂದಾ ವಿಶ್ವವಿದ್ಯಾಲಯ: ಬಿಹಾರದ ಐತಿಹಾಸಿಕ ನಳಂದಾ ವಿಶ್ವವಿದ್ಯಾಲಯದಲ್ಲಿ ಐದು ವರ್ಷಗಳ ಕಾಲ ಬೌದ್ಧ ತತ್ವಶಾಸ್ತ್ರವನ್ನು ಅಧ್ಯಯನ ಮಾಡಿದ್ದ ಹ್ಯುಯೆನ್ ತ್ಸಾಂಗ್, ನಂತರ ಚೀನಾಕ್ಕೆ ಹಿಂತಿರುಗುವಾಗ ನೂರಾರು ಬೌದ್ಧ ಗ್ರಂಥಗಳು ಮತ್ತು ಮೂರ್ತಿಗಳನ್ನು ಹೊತ್ತೊಯ್ದು ಅಲ್ಲಿ ಅನುವಾದ ಮಾಡಿದ್ದರು.

➤ **ಬ್ರಿಕ್ಸ್ ಒಕ್ಕೂಟದ ಜಂಟಿ ಹೆಜ್ಜೆ:** ಏನಿದು 'ಸ್ಕಿಪ್ ದಿ ಕ್ಯೂ' (Skip the Queue): ಯುನೆಸ್ಕೋ ನಿಯಮಗಳ ಪ್ರಕಾರ, ಯಾವುದೇ ಒಂದು ದೇಶವು ಪ್ರತಿ ಎರಡು ವರ್ಷಗಳ ಚಕ್ರದಲ್ಲಿ ಗರಿಷ್ಠ ಎರಡು ನಾಮನಿರ್ದೇಶನಗಳನ್ನು (Dossiers) ಮಾತ್ರ ಸ್ವತಂತ್ರವಾಗಿ ಸಲ್ಲಿಸಲು ಅವಕಾಶವಿರುತ್ತದೆ. ಆದರೆ, ಜಂಟಿ ನಾಮನಿರ್ದೇಶನಗಳಿಗೆ (Joint Nominations) ಇಂತಹ ಯಾವುದೇ ಮಿತಿ ಇರುವುದಿಲ್ಲ. ಬ್ರಿಕ್ಸ್ (BRICS) ಒಕ್ಕೂಟದ ದೇಶಗಳು ತಮ್ಮ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಜಾಗತಿಕ ಮಟ್ಟದಲ್ಲಿ ವೇಗವಾಗಿ ಬಿಂಬಿಸಲು ಈ ಜಂಟಿ ಪ್ರಸ್ತಾಪದ ಮಾರ್ಗವನ್ನು (Skip the queue) ಆಯ್ಕೆ ಮಾಡಿಕೊಂಡಿವೆ. ಏಕಪಕ್ಷೀಯವಾಗಿ ಅರ್ಜಿ ಸಲ್ಲಿಸುವ ಬದಲು ಒಟ್ಟಾಗಿ ಪ್ರಸ್ತಾವ ಸಲ್ಲಿಸಿದಾಗ ಯುನೆಸ್ಕೋ ಮಾನ್ಯತೆ ಸಿಗುವ ಸಾಧ್ಯತೆಗಳು ಹೆಚ್ಚಿರುತ್ತವೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

➤ **ಭಾರತದ ಇತರ ಜಂಟಿ ಸಾಂಸ್ಕೃತಿಕ ಪ್ರಸ್ತಾಪಗಳು:**

ಪಂಚತಂತ್ರ (ಇರಾನ್ ಜೊತೆ): ಕಳೆದ 1,500 ವರ್ಷಗಳಿಂದ ಪರ್ಷಿಯನ್ ಸಾಹಿತ್ಯ ಮತ್ತು ಜಾನಪದದ ಪ್ರಮುಖ ಭಾಗವಾಗಿರುವ ಪಂಡಿತ್ ವಿಷ್ಣುಶರ್ಮಾ ಅವರ 'ಪಂಚತಂತ್ರ' ಕಥೆಗಳನ್ನು ಇರಾನ್ ದೇಶದೊಂದಿಗೆ ಜಂಟಿಯಾಗಿ ಯುನೆಸ್ಕೋ ಪಟ್ಟಿಗೆ ಸೇರಿಸಲು ಭಾರತ ಯೋಜಿಸಿದೆ.

ಸತ್ಯಾಗ್ರಹ ತತ್ವ (ದಕ್ಷಿಣ ಆಫ್ರಿಕಾ ಜೊತೆ): ಮಹಾತ್ಮ ಗಾಂಧೀಜಿಯವರ ಜಾಗತಿಕ ಸತ್ಯಾಗ್ರಹ ಪರಿಕಲ್ಪನೆಯನ್ನು ದಕ್ಷಿಣ ಆಫ್ರಿಕಾದೊಂದಿಗೆ ಜಂಟಿಯಾಗಿ ನಾಮನಿರ್ದೇಶನ ಮಾಡಲು ಭಾರತ ಗುರಿ ಹೊಂದಿದೆ.

➤ 2017ರಲ್ಲಿ ಟಿಬೆಟಿಯನ್ ಸಾಂಪ್ರದಾಯಿಕ ವೈದ್ಯಕೀಯ ಪದ್ಧತಿಯಾದ 'ಸೋವಾ-ರಿಗ್ಪಾ' (Sowa-Rigpa) ಅನ್ನು ಯುನೆಸ್ಕೋ ಪಟ್ಟಿಗೆ ಸೇರಿಸಲು ಭಾರತ ಮತ್ತು ಚೀನಾ ಪ್ರತ್ಯೇಕವಾಗಿ ಪೈಪೋಟಿ ನಡೆಸಿದ್ದವು. ಆದರೆ ಈಗಿನ ಜಂಟಿ ನಾಮನಿರ್ದೇಶನಗಳ ಹೆಜ್ಜೆಯು ಉಭಯ ದೇಶಗಳ ನಡುವಿನ ಸಾಂಸ್ಕೃತಿಕ ರಾಜತಾಂತ್ರಿಕತೆಯನ್ನು ಮತ್ತಷ್ಟು ಗಟ್ಟಿಗೊಳಿಸಲಿದೆ. ಭಾರತದಲ್ಲಿ ಇಂದಿರಾ ಗಾಂಧಿ ರಾಷ್ಟ್ರೀಯ ಕಲಾ ಕೇಂದ್ರ (IGNCA) ಈ ಪ್ರಕ್ರಿಯೆಯ ನೋಡಲ್ ಏಜೆನ್ಸಿಯಾಗಿ ಕಾರ್ಯನಿರ್ವಹಿಸುತ್ತಿದೆ.

# 27 June 2026

## ಜೂನ್-27: ವಿಶ್ವ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮಗಳ ದಿನ (World MSME Day)




➤ ಜಾಗತಿಕ ಆರ್ಥಿಕತೆಯ ಬೆನ್ನೆಲುಬು ಎಂದು ಕರೆಯಲ್ಪಡುವ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ (MSME) ಅಪಾರ ಕೊಡುಗೆಯನ್ನು ಗುರುತಿಸಲು ಪ್ರತಿ ವರ್ಷ ಜೂನ್ 27 ರಂದು ಜಾಗತಿಕವಾಗಿ 'ವಿಶ್ವ ಎಂಎಸ್‌ಎಂಇ ದಿನ' (World MSME Day) ವನ್ನು ಆಚರಿಸಲಾಗುತ್ತದೆ. ಉದ್ಯೋಗ ಸೃಷ್ಟಿ, ನಾವೀನ್ಯತೆ ಹಾಗೂ ಸುಸ್ಥಿರ ಅಭಿವೃದ್ಧಿಯಲ್ಲಿ ಎಂಎಸ್‌ಎಂಇಗಳ ಪಾತ್ರದ ಕುರಿತು ಜಾಗೃತಿ ಮೂಡಿಸುವುದು ಈ ದಿನದ ಪ್ರಮುಖ ಉದ್ದೇಶವಾಗಿದೆ.

➤ **ವಿಶ್ವ ಎಂಎಸ್‌ಎಂಇ ದಿನ 2026 ರ ಥೀಮ್ (Theme): ನಾವೀನ್ಯತೆ ಮತ್ತು ಸುಸ್ಥಿರ ಕೈಗಾರಿಕಾ ಅಭಿವೃದ್ಧಿಯ**

**ಮೂಲಕ ಎಂಎಸ್ಎಂಇಗಳ ಸಬಲೀಕರಣ (Empowering MSMEs through Innovation and Sustainable Industrial Development )**

➤ ವಿಶ್ವಸಂಸ್ಥೆಯ ಮಹಾಸಭೆಯು (UNGA) 6 ಏಪ್ರಿಲ್ 2017 ರಂದು ತನ್ನ 71 ನೇ ಅಧಿವೇಶನದಲ್ಲಿ ನಿರ್ಣಯ (A/RES/71/279) ಅಂಗೀಕರಿಸುವ ಮೂಲಕ ಪ್ರತಿ ವರ್ಷ ಜೂನ್ 27 ಅನ್ನು 'ವಿಶ್ವ ಎಂಎಸ್ಎಂಇ ದಿನ' ಎಂದು ಘೋಷಿಸಿತು. ಸುಸ್ಥಿರ ಅಭಿವೃದ್ಧಿಗಾಗಿ ಉದ್ಯಮಶೀಲತೆಯನ್ನು ಉತ್ತೇಜಿಸುವುದು ಇದರ ಪ್ರಮುಖ ಗುರಿಯಾಗಿದೆ.

**➤ ಎಂಎಸ್ಎಂಇಗಳು ಏಕೆ ಮುಖ್ಯ?**

ಉದ್ಯಮಗಳ ಪ್ರಮಾಣ: ಜಗತ್ತಿನ ಒಟ್ಟು ಉದ್ಯಮಗಳಲ್ಲಿ ಶೇಕಡಾ 90 ಕ್ಕಿಂತ ಹೆಚ್ಚು ಭಾಗವನ್ನು ಎಂಎಸ್ಎಂಇಗಳೇ ಹೊಂದಿವೆ.

ಉದ್ಯೋಗ ಸೃಷ್ಟಿ: ಇವು ಜಾಗತಿಕವಾಗಿ ಅತಿ ಹೆಚ್ಚು ಉದ್ಯೋಗಾವಕಾಶಗಳನ್ನು (ವಿಶೇಷವಾಗಿ ಮಹಿಳೆಯರು, ಯುವಕರು ಮತ್ತು ದುರ್ಬಲ ವರ್ಗದವರಿಗೆ) ಸೃಷ್ಟಿಸುತ್ತವೆ.

ಜಿಡಿಪಿ ಕೊಡುಗೆ: ಅಭಿವೃದ್ಧಿಶೀಲ ರಾಷ್ಟ್ರಗಳ ಒಟ್ಟು ಆಂತರಿಕ ಉತ್ಪನ್ನಕ್ಕೆ (GDP) ಮತ್ತು ಆರ್ಥಿಕ ಬೆಳವಣಿಗೆಗೆ ಇವು ಸಿಂಹಪಾಲು ಕೊಡುಗೆ ನೀಡುತ್ತವೆ.

**➤ ಎಂಎಸ್ಎಂಇಗಳು ಎದುರಿಸುತ್ತಿರುವ ಪ್ರಮುಖ ಸವಾಲುಗಳು:**

ಹಣಕಾಸಿನ ಕೊರತೆ: ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳಿಂದ ಸುಲಭವಾಗಿ ಸಾಲ ಸೌಲಭ್ಯ ಸಿಗದಿರುವುದು.

ಡಿಜಿಟಲ್ ಕಂದಕ (Digital Divide): ಗ್ರಾಮೀಣ ಭಾಗದ ಉದ್ಯಮಗಳಿಗೆ ಆಧುನಿಕ ತಂತ್ರಜ್ಞಾನ ಮತ್ತು ಇ-ಕಾಮರ್ಸ್ ವೇದಿಕೆಗಳ ಅರಿವು ಕಡಿಮೆ ಇರುವುದು.

ಮೂಲಸೌಕರ್ಯ ಕೊರತೆ: ಸಾಗಣೆ, ವಿದ್ಯುತ್ ಮತ್ತು ದಾಸ್ತಾನು ಮಳಿಗೆಗಳ ಕೊರತೆ.

ಅಸಂಘಟಿತ ವಲಯ: ಹೆಚ್ಚಿನ ಸಣ್ಣ ಉದ್ಯಮಗಳು ಇಂದಿಗೂ ಅನೌಪಚಾರಿಕ (Informal) ವಲಯದಲ್ಲೇ ಕಾರ್ಯನಿರ್ವಹಿಸುತ್ತಿರುವುದು.

**➤ ಸುಸ್ಥಿರ ಅಭಿವೃದ್ಧಿ ಗುರಿಗಳು (SDGs) ಮತ್ತು MSME:**

ಎಂಎಸ್ಎಂಇ ವಲಯದ ಯಶಸ್ಸು ವಿಶ್ವಸಂಸ್ಥೆಯ ಕೆಳಗಿನ ಪ್ರಮುಖ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು (SDGs) ಸಾಧಿಸಲು ನೇರವಾಗಿ ಸಹಾಯ ಮಾಡುತ್ತದೆ:

SDG 1: ಬಡತನ ನಿರ್ಮೂಲನೆ (No Poverty)

SDG 5: ಲಿಂಗ ಸಮಾನತೆ (Gender Equality)

SDG 8: ಯೋಗ್ಯ ಕೆಲಸ ಮತ್ತು ಆರ್ಥಿಕ ಬೆಳವಣಿಗೆ (Decent Work and Economic Growth)

SDG 9: ಕೈಗಾರಿಕೆ, ನಾವೀನ್ಯತೆ ಮತ್ತು ಮೂಲಸೌಕರ್ಯ (Industry, Innovation and Infrastructure)

SDG 10: ಅಸಮಾನತೆಯ ಕಡಿತ (Reduced Inequalities)

## ಏಷ್ಯಾದಲ್ಲೇ ಅತಿ ವೇಗವಾಗಿ ಬೆಳೆಯುತ್ತಿದೆ ಭಾರತದ ಹಸಿರು ಆರ್ಥಿಕತೆ (Green Economy)




➤ ಪರಿಸರ ಸಂರಕ್ಷಣೆ ಮತ್ತು ಸುಸ್ಥಿರ ಅಭಿವೃದ್ಧಿಗೆ ಒತ್ತು ನೀಡುತ್ತಿರುವ ಭಾರತವು ಹಸಿರು ಆರ್ಥಿಕತೆ (Green Economy) ವಲಯದಲ್ಲಿ ಜಾಗತಿಕ ಮಟ್ಟದಲ್ಲಿ ಗಮನಾರ್ಹ ಸಾಧನೆ ಮಾಡುತ್ತಿದೆ. ಲಂಡನ್ ಸ್ಟಾಕ್ ಎಕ್ಸ್‌ಚೇಂಜ್ ಗ್ರೂಪ್ (LSEG) ಬಿಡುಗಡೆ ಮಾಡಿರುವ ನೂತನ 'ಇನ್ವೆಸ್ಟಿಂಗ್ ಇನ್ ದಿ ಗ್ರೀನ್ ಎಕಾನಮಿ 2026' (Investing in the Green Economy 2026) ವರದಿಯ ಪ್ರಕಾರ, ಭಾರತವು 2025 ರ ವೇಳೆಗೆ ಬರೋಬ್ಬರಿ 110 ಬಿಲಿಯನ್ ಡಾಲರ್ (ಸುಮಾರು ₹9.1 ಲಕ್ಷ ಕೋಟಿ) ಹಸಿರು ಆದಾಯವನ್ನು (Green Revenue) ಗಳಿಸುವ ಮೂಲಕ ಏಷ್ಯಾದಲ್ಲೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಹಸಿರು ಆರ್ಥಿಕತೆಯಾಗಿ ಹೊರಹೊಮ್ಮಿದೆ.

ವೇಗದ ಬೆಳವಣಿಗೆಯ ದರ (CAGR): ಕಳೆದ 5 ವರ್ಷಗಳಲ್ಲಿ ಭಾರತದ ಹಸಿರು ಆದಾಯವು ಶೇಕಡಾ 20 ರಷ್ಟು ಸಂಯುಕ್ತ ವಾರ್ಷಿಕ ಬೆಳವಣಿಗೆ ದರ (CAGR) ದಾಖಲಿಸಿದೆ. ಇದು ಏಷ್ಯಾದ ಸರಾಸರಿ ಬೆಳವಣಿಗೆ (ಶೇ. 12) ಮತ್ತು ಜಾಗತಿಕ ಸರಾಸರಿ ಬೆಳವಣಿಗೆಗಿಂತ (ಶೇ. 10) ಗಣನೀಯವಾಗಿ ಹೆಚ್ಚಾಗಿದೆ.

ಬಯೋಗ್ಯಾಸ್ ವಲಯದಲ್ಲಿ ನಾಯಕತ್ವ: ಏಷ್ಯಾದ ಒಟ್ಟಾರೆ ಬಯೋಗ್ಯಾಸ್ ಇಂಧನ ಉಪಕರಣಗಳ (Biogas Energy Equipment) ಮಾರುಕಟ್ಟೆಯಲ್ಲಿ ಭಾರತವು ಏಕಸ್ವಾಮ್ಯ ಹೊಂದಿದ್ದು, ಬರೋಬ್ಬರಿ ಶೇಕಡಾ 87 ರಷ್ಟು ಪಾಲು ಹೊಂದುವ ಮೂಲಕ ಅಗ್ರಸ್ಥಾನದಲ್ಲಿದೆ.

ಸುಧಾರಿತ ನೀರಾವರಿ ತಂತ್ರಜ್ಞಾನ: ಕೃಷಿ ವಲಯದಲ್ಲಿ ಸುಸ್ಥಿರತೆಗೆ ಒತ್ತು ನೀಡಿರುವ ಭಾರತವು, ಏಷ್ಯಾದ ಸುಧಾರಿತ ನೀರಾವರಿ ವ್ಯವಸ್ಥೆಗಳು ಮತ್ತು ತಂತ್ರಜ್ಞಾನಗಳ ಮಾರುಕಟ್ಟೆಯಲ್ಲಿ ಶೇಕಡಾ 75 ರಷ್ಟು ಪಾಲು ಹೊಂದಿದೆ.

ಸ್ವಚ್ಛ ಇಂಧನ ಹೂಡಿಕೆ (Clean Energy Investment): ಭಾರತವು ಸ್ವಚ್ಛ ಇಂಧನ ವಲಯದಲ್ಲಿ ಸುಮಾರು 100 ಬಿಲಿಯನ್ ಡಾಲರ್ ಹೂಡಿಕೆ ಮಾಡಿದ್ದು, ಚೀನಾ ನಂತರ ಏಷ್ಯಾದಲ್ಲೇ ಎರಡನೇ ಅತಿ ದೊಡ್ಡ ಹೂಡಿಕೆದಾರ ದೇಶವಾಗಿದೆ. ಭಾರತದ ಇಂಧನ ವಲಯದ ಒಟ್ಟು ಬಂಡವಾಳ ಹೂಡಿಕೆಯಲ್ಲಿ ಶೇಕಡಾ 83 ರಷ್ಟು ಹಣವನ್ನು ನವೀಕರಿಸಬಹುದಾದ ಇಂಧನ, ಶಕ್ತಿ ಶೇಖರಣೆ ಮತ್ತು ಪರಮಾಣು ಶಕ್ತಿಗೇ ಬಳಸಲಾಗುತ್ತಿದೆ.

**➤ ಹಸಿರು ಆರ್ಥಿಕತೆಯ ಆದಾಯದಲ್ಲಿ ಏಷ್ಯಾದ ಪ್ರಮುಖ ದೇಶಗಳ ಪಾಲು (2025):**

ಚೀನಾ: ಶೇಕಡಾ 41

ಜಪಾನ್: ಶೇಕಡಾ 28

ಹಾಂಗ್ ಕಾಂಗ್: ಶೇಕಡಾ 10

ದಕ್ಷಿಣ ಕೊರಿಯಾ: ಶೇಕಡಾ 6

ತೈವಾನ್: ಶೇಕಡಾ 5

ಭಾರತ: ಶೇಕಡಾ 4

(ಗಮನಿಸಿ: ಭಾರತದ ಒಟ್ಟು ಮಾರುಕಟ್ಟೆ ಪಾಲು ಶೇ. 4 ರಷ್ಟಿದ್ದರೂ, ಅದರ ಬೆಳವಣಿಗೆಯ ವೇಗ (20% CAGR) ಇತರ ದೇಶಗಳಿಗಿಂತ ಅತ್ಯಂತ ಹೆಚ್ಚಾಗಿದೆ).

➤ ವರದಿಯು ಭಾರತದ ಪ್ರಗತಿಯನ್ನು ಶ್ಲಾಘಿಸುವ ಜೊತೆಗೆ ಕೆಲವು ಸವಾಲುಗಳನ್ನೂ ಎತ್ತಿ ತೋರಿಸಿದೆ. ಭಾರತವು ಹಸಿರು ಇಂಧನಕ್ಕೆ ವೇಗವಾಗಿ ಬದಲಾಗುತ್ತಿದ್ದರೂ, ದೇಶದ ಇಂಧನ ಸುರಕ್ಷತೆಗಾಗಿ ಇಂದಿಗೂ ಪಳೆಯುಳಿಕೆ ಇಂಧನಗಳ (Fossil Fuels) ಮೇಲಿನ ಅವಲಂಬನೆ ಮುಂದುವರಿದಿದೆ. ಪ್ರಸ್ತುತ ಭಾರತದ ವಿದ್ಯುತ್ ಉತ್ಪಾದನೆಯಲ್ಲಿ ಕಲ್ಲಿದ್ದಲು (Coal) ಇನ್ನೂ ಪ್ರಮುಖ ಪಾತ್ರ ವಹಿಸುತ್ತಿದೆ.

## ಭಾರತದ 7 ಹೊಸ ಬುಲೆಟ್ ಟ್ರೈನ್ ಕಾರಿಡಾರ್‌ಗಳು




➤ ಭಾರತವು ತನ್ನ ಹೈ-ಸ್ಪೀಡ್ ರೈಲು ಸಂಪರ್ಕ ಜಾಲವನ್ನು (High-Speed Rail Network) ಗಣನೀಯವಾಗಿ ವಿಸ್ತರಿಸಲು ಭರದ ಸಿದ್ಧತೆ ನಡೆಸುತ್ತಿದೆ. ದೇಶದ ಪ್ರಮುಖ ಮಹಾನಗರಗಳನ್ನು ಜೋಡಿಸುವ ಸಲುವಾಗಿ ರಾಷ್ಟ್ರೀಯ ಹೈ-ಸ್ಪೀಡ್ ರೈಲ್ ಕಾರ್ಪೊರೇಷನ್ ಲಿಮಿಟೆಡ್ (NHSRCL) ಒಟ್ಟು 7 ಹೊಸ ಬುಲೆಟ್ ಟ್ರೈನ್ ಕಾರಿಡಾರ್‌ಗಳನ್ನು ಪ್ರಸ್ತಾಪಿಸಿದೆ.

KPSCVaani

➤ B35: ಭಾರತದ ಮುಂದಿನ ಪೀಳಿಗೆಯ ಬುಲೆಟ್ ಟ್ರೈನ್: ಭಾರತದ ಮುಂಬರುವ ಹೈ-ಸ್ಪೀಡ್ ಕಾರಿಡಾರ್‌ಗಳಿಗಾಗಿ ದೇಶೀಯವಾಗಿಯೇ ವಿನ್ಯಾಸಗೊಳಿಸಿ, ತಯಾರಿಸಲು ಯೋಜಿಸಲಾಗಿರುವ ಅತ್ಯಾಧುನಿಕ ಬುಲೆಟ್ ಟ್ರೈನ್‌ಗೆ 'B35' ಎಂದು ಹೆಸರಿಸಲಾಗಿದೆ.

➤ B35 ಬುಲೆಟ್ ಟ್ರೈನ್‌ನ ಪ್ರಮುಖ ವೈಶಿಷ್ಟ್ಯಗಳು:

ಗರಿಷ್ಠ ವಿನ್ಯಾಸದ ವೇಗ (Maximum Design Speed): ಗಂಟೆಗೆ 350 ಕಿ.ಮೀ.

ಕಾರ್ಯಾಚರಣೆಯ ವೇಗ (Operational Speed): ಗಂಟೆಗೆ 320 ಕಿ.ಮೀ.

ವಿಶೇಷತೆ: ಇದು ಸಂಪೂರ್ಣವಾಗಿ ಭಾರತದಲ್ಲೇ ಅಭಿವೃದ್ಧಿಪಡಿಸಲಾಗುವ (Make in India) ಹೈ-ಸ್ಪೀಡ್ ರೈಲು ಸೆಟ್ ಆಗಿದ್ದು, ಸುಧಾರಿತ ಸುರಕ್ಷತೆ ಹಾಗೂ ಸಿಗ್ನಲಿಂಗ್ ವ್ಯವಸ್ಥೆಯನ್ನು ಒಳಗೊಂಡಿರಲಿದೆ.

➤ **ಪ್ರಸ್ತಾಪಿತ 7 ಹೊಸ ಬುಲೆಟ್ ಟ್ರೈನ್ ಕಾರಿಡಾರ್‌ಗಳ ಪಟ್ಟಿ ಮತ್ತು ಪ್ರಯಾಣದ ಸಮಯ:**

1. ಮುಂಬೈ – ಪುಣೆ: 48 ನಿಮಿಷಗಳು
2. ಬೆಂಗಳೂರು – ಚೆನ್ನೈ: 73 ನಿಮಿಷಗಳು (1 ಗಂಟೆ 13 ನಿಮಿಷ)
3. ಹೈದರಾಬಾದ್ – ಬೆಂಗಳೂರು: 2 ಗಂಟೆ 10 ನಿಮಿಷಗಳು
4. ಪುಣೆ – ಹೈದರಾಬಾದ್: 2 ಗಂಟೆ 08 ನಿಮಿಷಗಳು
5. ದೆಹಲಿ – ವಾರಣಾಸಿ: 3 ಗಂಟೆ 15 ನಿಮಿಷಗಳು
6. ಹೈದರಾಬಾದ್ – ಚೆನ್ನೈ: ಪ್ರಸ್ತಾಪಿಸಲಾಗಿದೆ (Proposed)
7. ವಾರಣಾಸಿ – ಸಿಲಿಗುರಿ: ಪ್ರಸ್ತಾಪಿಸಲಾಗಿದೆ (Proposed)

➤ **ಪ್ರಚಲಿತದಲ್ಲಿರುವ ಮುಂಬೈ-ಅಹಮದಾಬಾದ್ ಬುಲೆಟ್ ಟ್ರೈನ್ ಯೋಜನೆ:** ಭಾರತದ ಮೊದಲ ಮುಂಬೈ-ಅಹಮದಾಬಾದ್ ಬುಲೆಟ್ ಟ್ರೈನ್ ಯೋಜನೆಯು 508 ಕಿ.ಮೀ ಉದ್ದದ ಕಾರಿಡಾರ್ ಆಗಿದ್ದು, ಇದರ ಮೊದಲ 97 ಕಿ.ಮೀ ವಿಭಾಗವನ್ನು (ಸೂರತ್‌ನಿಂದ ವಾಪಿ) NHSRCL ಸಂಸ್ಥೆಯು ಆಗಸ್ಟ್ 2027 ರ ವೇಳೆಗೆ ಕಾರ್ಯಾಚರಣೆಗೆ ತರಲು ಯೋಜಿಸಿದೆ.

## ಓಪನ್‌ಎಐ (OpenAI) ಭಾರತದ ವ್ಯವಸ್ಥಾಪಕ ನಿರ್ದೇಶಕರಾಗಿ (MD) ಪ್ರಭ್‌ಜೀತ್ ಸಿಂಗ್ ನೇಮಕ!




➤ ಕೃತಕ ಬುದ್ಧಿಮತ್ತೆ (AI) ಜಗತ್ತಿನ ದೈತ್ಯ ಸಂಸ್ಥೆಯಾದ 'ಓಪನ್ ಎಐ' (ChatGPT ಸೃಷ್ಟಿಕರ್ತರು) ಭಾರತದಲ್ಲಿ ತನ್ನ ಮಾರುಕಟ್ಟೆಯನ್ನು ವಿಸ್ತರಿಸಲು ಭಾರಿ ಹೆಜ್ಜೆ ಇಟ್ಟಿದೆ. ಉಬರ್ (Uber) ಇಂಡಿಯಾದ ಮಾಜಿ ಮುಖ್ಯಸ್ಥರಾಗಿದ್ದ ಪ್ರಭ್‌ಜೀತ್ ಸಿಂಗ್ (Prabhjeet Singh) ಅವರನ್ನು ಓಪನ್‌ಎಐ ಸಂಸ್ಥೆಯು ಭಾರತದ ನೂತನ ವ್ಯವಸ್ಥಾಪಕ ನಿರ್ದೇಶಕರಾಗಿ (Managing Director - MD) ನೇಮಕ ಮಾಡಿದೆ.

➤ ಪ್ರಭ್‌ಜೀತ್ ಸಿಂಗ್ ಅವರು ಭಾರತದಲ್ಲಿ ಓಪನ್‌ಎಐನ ಕಾರ್ಯತಂತ್ರದ ಕಾರ್ಯಾಚರಣೆಗಳು, ಸರ್ಕಾರಿ ಪಾಲುದಾರಿಕೆಗಳು ಮತ್ತು ಎಐ ತಂತ್ರಜ್ಞಾನದ ಪ್ರಚಾರದ ಉಸ್ತುವಾರಿ ವಹಿಸಲಿದ್ದಾರೆ. ಓಪನ್‌ಎಐ ಸೇರುವ ಮುನ್ನ ಸಿಂಗ್ ಅವರು ಉಬರ್ ಇಂಡಿಯಾ ಮತ್ತು ದಕ್ಷಿಣ ಏಷ್ಯಾದ ಅಧ್ಯಕ್ಷರಾಗಿ ಯಶಸ್ವಿಯಾಗಿ ಸೇವೆ ಸಲ್ಲಿಸಿದ್ದರು. ಅದಕ್ಕೂ ಮುನ್ನ ಅವರು ಪ್ರಸಿದ್ಧ ಕನ್ಸಲ್ಟಿಂಗ್ ಸಂಸ್ಥೆ 'ಮೆಕಿನ್ಸೆ ಆಂಡ್ ಕಂಪನಿ'ಯಲ್ಲಿ (McKinsey & Co) ಕೆಲಸ ಮಾಡಿದ್ದರು. ಇವರು ಪ್ರತಿಷ್ಠಿತ ಐಐಟಿ ಖರಗ್‌ಪುರ (IIT Kharagpur) ಮತ್ತು ಐಐಎಂ ಅಹಮದಾಬಾದ್ (IIM Ahmedabad) ಸಂಸ್ಥೆಗಳ ಹಳೆಯ ವಿದ್ಯಾರ್ಥಿಯಾಗಿದ್ದಾರೆ.

➤ **ಓಪನ್‌ಎಐ ಭಾರತದತ್ತ ಮುಖ ಮಾಡಲು ಕಾರಣ:** ಭಾರತವು ವಿಶ್ವದಲ್ಲೇ ಅತಿ ಹೆಚ್ಚು ಇಂಟರ್ನೆಟ್ ಬಳಕೆದಾರರನ್ನು ಹೊಂದಿರುವ ದೇಶಗಳಲ್ಲಿ ಒಂದಾಗಿದೆ. ChatGPT ಬಿಡುಗಡೆಯಾದಾಗಿನಿಂದ ಭಾರತೀಯ ಯುವಕರು, ಐಟಿ ವೃತ್ತಿಪರರು ಮತ್ತು ವಿದ್ಯಾರ್ಥಿಗಳಲ್ಲಿ ಎಐ ಬಳಕೆ ತೀವ್ರವಾಗಿ ಹೆಚ್ಚಾಗಿದೆ. ಭಾರತ ಸರ್ಕಾರದ 'ಡಿಜಿಟಲ್ ಇಂಡಿಯಾ' ಮತ್ತು ಎಐ ಮಿಷನ್‌ಗಳೊಂದಿಗೆ ಜಂಟಿಯಾಗಿ ಕೆಲಸ ಮಾಡಲು ಮತ್ತು ಸ್ಥಳೀಯ ಭಾಷೆಗಳಲ್ಲಿ ಎಐ ತಂತ್ರಜ್ಞಾನವನ್ನು ತರಲು ಓಪನ್ ಎಐ ಈ ನೇಮಕಾತಿ ಮಾಡಿಕೊಂಡಿದೆ.




## ಜಗತ್ತಿನ ಮೊದಲ ಅಣುಶಕ್ತಿ ಆಧಾರಿತ ಹೈಡ್ರೋಜನ್ ಉತ್ಪಾದನಾ ಘಟಕ ಭಾರತದಲ್ಲಿ ಆರಂಭ!



➤ ಭಾರತವು ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಜಾಗತಿಕ ಮಟ್ಟದಲ್ಲಿ ಮತ್ತೊಂದು ಐತಿಹಾಸಿಕ ಮೈಲಿಗಲ್ಲು ಸ್ಥಾಪಿಸಿದೆ. ತಮಿಳುನಾಡಿನ ಕಲ್ಪಾಕಂನಲ್ಲಿರುವ ಇಂದಿರಾ ಗಾಂಧಿ ಪರಮಾಣು ಸಂಶೋಧನಾ ಕೇಂದ್ರದಲ್ಲಿ (IGCAR) ವಿಶ್ವದ ಮೊದಲ ಅಣುಶಕ್ತಿ ಪ್ರಕ್ರಿಯೆಯ ಶಾಖ ಆಧಾರಿತ ಹೈಡ್ರೋಜನ್ ಉತ್ಪಾದನಾ ಘಟಕವನ್ನು (World's First Nuclear Process Heat-based Hydrogen Production Facility) ಯಶಸ್ವಿಯಾಗಿ ಉದ್ಘಾಟಿಸಲಾಗಿದೆ.

➤ ತಮಿಳುನಾಡಿನ ಕಲ್ಪಾಕಂನಲ್ಲಿರುವ ಇಂದಿರಾ ಗಾಂಧಿ ಪರಮಾಣು ಸಂಶೋಧನಾ ಕೇಂದ್ರದ (IGCAR) ಫಾಸ್ಟ್ ಬ್ರೀಡರ್ ಟೆಸ್ಟ್ ರಿಯಾಕ್ಟರ್‌ನ (FBTR) ಅಣುಶಕ್ತಿ ಶಾಖ ಹಾಗೂ ಕಾಪರ್-ಕ್ಲೋರಿನ್ (Cu-Cl) ಥರ್ಮೋಕೆಮಿಕಲ್ ತಂತ್ರಜ್ಞಾನವನ್ನು ಬಳಸಿ ಕಾರ್ಯನಿರ್ವಹಿಸುವ ಈ ಜಗತ್ತಿನ ಮೊದಲ ಘಟಕವನ್ನು ಪರಮಾಣು ಇಂಧನ ಇಲಾಖೆಯ (DAE) ಕಾರ್ಯದರ್ಶಿಗಳಾದ ಡಾ. ಅಜಿತ್ ಕುಮಾರ್ ಮೊಹಂತಿ ಅವರು ಉದ್ಘಾಟಿಸಿದರು.

➤ ಸಾಮಾನ್ಯವಾಗಿ ಹೈಡ್ರೋಜನ್ ಉತ್ಪಾದನೆಗೆ ಹೆಚ್ಚಿನ ಪ್ರಮಾಣದ ವಿದ್ಯುತ್ ಅಥವಾ ಪಳೆಯುಳಿಕೆ ಇಂಧನಗಳ (Fossil Fuels) ಅಗತ್ಯವಿರುತ್ತದೆ. ಆದರೆ ಈ ಹೊಸ ಯೋಜನೆಯಲ್ಲಿ, ಮುಂಬೈನ ಭಾಭಾ ಅಣು ಸಂಶೋಧನಾ ಕೇಂದ್ರ (BARC) ಸ್ವದೇಶಿಯಾಗಿ ಅಭಿವೃದ್ಧಿಪಡಿಸಿದ ಕಾಪರ್-ಕ್ಲೋರಿನ್ (Cu-Cl) ಥರ್ಮೋಕೆಮಿಕಲ್ ಪ್ರಕ್ರಿಯೆಯನ್ನು ಬಳಸಲಾಗಿದೆ.

➤ ಈ ಪ್ರಕ್ರಿಯೆಯಲ್ಲಿ ನೇರವಾಗಿ ವಿದ್ಯುತ್ ಬಳಸುವ ಬದಲಾಗಿ, ಪರಮಾಣು ರಿಯಾಕ್ಟರ್‌ನಿಂದ ಹೊರಹೊಮ್ಮುವ ತೀವ್ರವಾದ ಶಾಖವನ್ನು (Nuclear Process Heat) ಬಳಸಿಕೊಂಡು ನೀರನ್ನು ಹೈಡ್ರೋಜನ್ ಮತ್ತು ಆಕ್ಸಿಜನ್ ಆಗಿ ವಿಭಜಿಸಲಾಗುತ್ತದೆ.

**➤ ಭಾರತಕ್ಕೆ ಇದರ ಮಹತ್ವ:**

ಕಾರ್ಬನ್ ಮುಕ್ತ ಇಂಧನ (Decarbonisation): ಹೈಡ್ರೋಜನ್ ಭವಿಷ್ಯದ ಇಂಧನವಾಗಿದೆ. ಅಣುಶಕ್ತಿಯನ್ನು ಬಳಸಿ ಇದನ್ನು ತಯಾರಿಸುವುದರಿಂದ ಯಾವುದೇ ಹಸಿರುಮನೆ ಅನಿಲ (Greenhouse Gases) ಬಿಡುಗಡೆಯಾಗುವುದಿಲ್ಲ. ಇದು ಭಾರತದ 'ನೆಟ್-ಝೀರೋ ಕಾರ್ಬನ್' ಗುರಿಗೆ ಪೂರಕವಾಗಿದೆ.

ಇಂಧನ ಭದ್ರತೆ (Energy Security): ಭಾರತವು ತೈಲ ಆಮದಿನ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಲು ಇದು ಸಹಕಾರಿಯಾಗಿದೆ.

ಸ್ವದೇಶಿ ತಂತ್ರಜ್ಞಾನ (Make in India): BARC ಮತ್ತು IGCAR ಸಂಸ್ಥೆಗಳು ಜಂಟಿಯಾಗಿ ಈ ತಂತ್ರಜ್ಞಾನದ ವಿನ್ಯಾಸ, ಪರೀಕ್ಷೆ ಮತ್ತು ಸ್ಥಾಪನೆಯನ್ನು ಸಂಪೂರ್ಣವಾಗಿ ಭಾರತದಲ್ಲೇ ಮಾಡಿವೆ.

## ಕೇಂದ್ರ ಸರ್ಕಾರದಿಂದ ಮಾದಕ ದ್ರವ್ಯ ಮುಕ್ತಿ ರಸಪ್ರಶ್ನೆ ಸ್ಪರ್ಧೆ: 'ಮೈ ಭಾರತ್' ಪೋರ್ಟಲ್ ನಲ್ಲಿ ಭಾಗವಹಿಸಿ




➤ ದೇಶದ ಯುವಜನತೆಯಲ್ಲಿ ಜಾಗೃತಿ ಮೂಡಿಸಲು ಮತ್ತು ವಿಕಸಿತ ಭಾರತ ನಿರ್ಮಾಣಕ್ಕೆ ಕೈಜೋಡಿಸಲು ಕೇಂದ್ರ ಯುವಜನ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯವು 'ಮೈ ಭಾರತ್' (MY Bharat) ಜಾಲತಾಣದ ಮೂಲಕ ಬೃಹತ್ ಅಭಿಯಾನವೊಂದನ್ನು ಹಮ್ಮಿಕೊಂಡಿದೆ. ಅಂತಾರಾಷ್ಟ್ರೀಯ ಮಾದಕ ದ್ರವ್ಯ ಸೇವನೆ ಮತ್ತು ಅಕ್ರಮ ಸಾಗಣೆ ವಿರೋಧಿ ದಿನದ (ಜೂನ್ 26) ಅಂಗವಾಗಿ, ದೇಶಾದ್ಯಂತ 'ರಾಷ್ಟ್ರೀಯ ಮಾದಕ ದ್ರವ್ಯ ಮುಕ್ತಿ ರಸಪ್ರಶ್ನೆ' (National Nasha Mukti Quiz) ಸ್ಪರ್ಧೆಗೆ ಅಧಿಕೃತ ಚಾಲನೆ ನೀಡಲಾಗಿದೆ.

**➤ ಸ್ಪರ್ಧೆಯ ಪ್ರಮುಖ ಉದ್ದೇಶಗಳು:**

ಮಾದಕ ದ್ರವ್ಯ ಮುಕ್ತ ಭಾರತ: ದೇಶದ ಯುವ ಸಮುದಾಯವನ್ನು ಮಾದಕ ದ್ರವ್ಯಗಳ ವ್ಯಸನದಿಂದ ದೂರವಿಡುವುದು ಮತ್ತು ಜಾಗೃತಿ ಮೂಡಿಸುವುದು.

ವಿಕಸಿತ ಭಾರತ ಸಂಕಲ್ಪ: ಸದೃಢ ಮತ್ತು ಆರೋಗ್ಯವಂತ ಯುವಶಕ್ತಿಯ ಮೂಲಕ 2047ರ ವೇಳೆಗೆ ವಿಕಸಿತ ಭಾರತವನ್ನು ನಿರ್ಮಿಸುವುದು.

➤ ದೇಶದಾದ್ಯಂತ ಇರುವ ಆಸಕ್ತ ಯುವಜನರು ಮತ್ತು ಸಾರ್ವಜನಿಕರು ಈ ಆನ್‌ಲೈನ್ ಅಭಿಯಾನ ಹಾಗೂ ಸ್ಪರ್ಧೆಗಳಲ್ಲಿ ಭಾಗವಹಿಸಲು ಅವಕಾಶವಿದೆ.

**➤ ಸ್ಪರ್ಧೆಗಳು:**

ಆನ್‌ಲೈನ್ ರಸಪ್ರಶ್ನೆ (Quiz): ಜೂನ್ 26 ರಿಂದ ಜುಲೈ 15 ರವರೆಗೆ 'ಮೈ ಭಾರತ್' ಪೋರ್ಟಲ್‌ನಲ್ಲಿ ಆನ್‌ಲೈನ್ ಕ್ವಿಜ್ ನಡೆಯಲಿದೆ.

ರಾಷ್ಟ್ರೀಯ ಗೀತೆ ರಚನೆ ಸ್ಪರ್ಧೆ (Lyrics Writing): ಮಾದಕ ದ್ರವ್ಯ ಮುಕ್ತ ಭಾರತದ ಸಂದೇಶವನ್ನು ಸಾರುವ ಅಧಿಕೃತ 'ರಾಷ್ಟ್ರೀಯ ಗೀತೆ' (National Anthem/Song) ರಚನೆಗಾಗಿ ಸಾರ್ವಜನಿಕರಿಂದ ಸಾಹಿತ್ಯ/ಸಾಲುಗಳನ್ನು ಆಹ್ವಾನಿಸಲಾಗಿದೆ. ಆಯ್ಕೆಯಾಗುವ ಅತ್ಯುತ್ತಮ ಗೀತೆಯನ್ನು ಈ ಜಾಗೃತಿ ಅಭಿಯಾನದ ಅಧಿಕೃತ ಗೀತೆಯನ್ನಾಗಿ ಬಳಸಿಕೊಳ್ಳಲಾಗುತ್ತದೆ.

ಇತರ ಸ್ಪರ್ಧೆಗಳು: ಇದರ ಮುಂದುವರಿದ ಭಾಗವಾಗಿ ದೇಶಾದ್ಯಂತ ಚಿತ್ರಕಲೆ (Painting), ಕಿರುಚಿತ್ರ ನಿರ್ಮಾಣ (Short Films) ಹಾಗೂ ಬೀದಿ ನಾಟಕಗಳ (Street Plays) ಸ್ಪರ್ಧೆಗಳನ್ನು ಸಹ ಆಯೋಜಿಸಲಾಗಿದೆ.

**➤ ಪ್ರಮುಖ ದಿನಾಂಕಗಳು:**

ಸ್ಪರ್ಧೆ ಆರಂಭದ ದಿನಾಂಕ: ಜೂನ್ 26

ನೋಂದಣಿ ಮತ್ತು ಭಾಗವಹಿಸಲು ಕೊನೆಯ ದಿನಾಂಕ: ಜುಲೈ 15

ಮಹಾ ಸಮಾರೋಪ ಸಮಾರಂಭ: ಆಗಸ್ಟ 14 (ನವದೆಹಲಿಯಲ್ಲಿ ನಡೆಯಲಿರುವ 'ರಾಷ್ಟ್ರೀಯ ಯುವ ಸಮಾವೇಶ'ದಲ್ಲಿ ಈ ಬೃಹತ್ ಜಾಗೃತಿ ಅಭಿಯಾನ ಮುಕ್ತಾಯಗೊಳ್ಳಲಿದೆ).

➤ ಆಸಕ್ತರು ಕೇಂದ್ರ ಸರ್ಕಾರದ ಅಧಿಕೃತ 'ಮೈ ಭಾರತ್' (MY Bharat) ಜಾಲತಾಣಕ್ಕೆ ಭೇಟಿ ನೀಡಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳುವ ಮೂಲಕ ಈ ಸ್ಪರ್ಧೆಗಳಲ್ಲಿ ಭಾಗವಹಿಸಬಹುದು.

ಉದ್ಯೋಗದ ಹೊಸ ಅಧಿಸೂಚನೆಗಳು ಈಗ ನಿಮ್ಮ ಮೊಬೈಲ್ ನಲ್ಲಿ! ಇಂದೇ 'KPSCVaani' ಆಪ್ ಡೌನ್‌ಲೋಡ್ ಮಾಡಿ.

## ಭಾರತದ ಡಿಜಿಟಲ್ ಕ್ರಾಂತಿಗೆ ನೆದರ್ಲೆಂಡ್ಸ್ ರಾಣಿ ಮ್ಯಾಕ್ಸಿಮಾ ಶ್ಲಾಘನೆ: ಪ್ರಧಾನಿ ಮೋದಿ ಜೊತೆ ಮಹತ್ವದ ಭೇಟಿ!



➤ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ನೆದರ್ಲೆಂಡ್ಸ್‌ನ ರಾಣಿ ಮ್ಯಾಕ್ಸಿಮಾ (Queen Maxima) ಅವರನ್ನು ಭೇಟಿಯಾಗಿ ದೇಶದ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ (Digital Public Infrastructure - DPI) ಕ್ರಾಂತಿಯ ಕುರಿತು ಮಹತ್ವದ ಚರ್ಚೆ ನಡೆಸಿದರು. ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳ ಹಣಕಾಸು ಆರೋಗ್ಯದ ವಿಶೇಷ ಸಲಹೆಗಾರ್ತಿಯಾಗಿ (UNSGSA) ರಾಣಿ ಮ್ಯಾಕ್ಸಿಮಾ ಅವರು ಭಾರತಕ್ಕೆ ಭೇಟಿ ನೀಡಿದ್ದಾರೆ.

➤ ಭಾರತದ ಡಿಜಿಟಲ್ ಒಳಗೊಳ್ಳುವಿಕೆಗೆ ಜಾಗತಿಕ ಮನ್ನಣೆ: ಭಾರತವು ತಂತ್ರಜ್ಞಾನವನ್ನು ಬಳಸಿಕೊಂಡು ಸಾಮಾನ್ಯ ಜನರಿಗೂ ಬ್ಯಾಂಕಿಂಗ್ ಸೇವೆಗಳನ್ನು ಅತ್ಯಂತ ಸರಳವಾಗಿ ತಲುಪಿಸುತ್ತಿರುವುದನ್ನು ರಾಣಿ ಮ್ಯಾಕ್ಸಿಮಾ ಮುಕ್ತಕಂಠದಿಂದ ಶ್ಲಾಘಿಸಿದರು. ಭಾರತದ JAM ತ್ರಿವಳಿ (ಜನ್ ಧನ್, ಆಧಾರ್ ಮತ್ತು ಮೊಬೈಲ್) ವ್ಯವಸ್ಥೆಯು ಜಗತ್ತಿಗೆ ಮಾದರಿಯಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

**➤ ಮಾತುಕತೆಯ ಪ್ರಮುಖ ಅಂಶಗಳು ಇಲ್ಲಿವೆ:**

ಹಣಕಾಸು ಸೇವೆಗಳ ಲಭ್ಯತೆ: ಭಾರತದ DPI ಕ್ರಾಂತಿಯಿಂದಾಗಿ ಅತ್ಯಂತ ಕಡಿಮೆ ವೆಚ್ಚದಲ್ಲಿ ಸಾಮಾನ್ಯ ನಾಗರಿಕರಿಗೂ ಸುಲಭವಾಗಿ ಹಣಕಾಸು ಸೇವೆಗಳು ಸಿಗುತ್ತಿವೆ.

ಸುಲಭ ಜೀವನ ಶೈಲಿ (Ease of Living): ತಂತ್ರಜ್ಞಾನ ಆಧಾರಿತ ಆಡಳಿತದಿಂದಾಗಿ ಸಾರ್ವಜನಿಕರ ಜೀವನಮಟ್ಟ ಸುಧಾರಿಸುತ್ತಿರುವುದನ್ನು ಪ್ರಧಾನಿ ಮೋದಿ ಈ ವೇಳೆ ಪ್ರಸ್ತಾಪಿಸಿದರು.

ಅನುಭವ ಹಂಚಿಕೆ: ಡಿಜಿಟಲ್ ಮೂಲಸೌಕರ್ಯ ಕ್ಷೇತ್ರದಲ್ಲಿ ಭಾರತ ಹೊಂದಿರುವ ಜ್ಞಾನ ಮತ್ತು ಅನುಭವವನ್ನು ಜಗತ್ತಿನ ಇತರ ಪಾಲುದಾರ ದೇಶಗಳೊಂದಿಗೆ ಹಂಚಿಕೊಳ್ಳಲು ಭಾರತ ಸದಾ ಸಿದ್ಧವಿದೆ ಎಂದು ಪ್ರಧಾನಿ ತಿಳಿಸಿದರು.

**➤ ಫಲಾನುಭವಿಗಳೊಂದಿಗೆ ರಾಣಿ ಮ್ಯಾಕ್ಸಿಮಾ ನೇರ ಸಂವಾದ:**

ತಮ್ಮ ಭಾರತ ಪ್ರವಾಸದ ಭಾಗವಾಗಿ ರಾಣಿ ಮ್ಯಾಕ್ಸಿಮಾ ಅವರು ಸರ್ಕಾರದ ಮಹತ್ವಾಕಾಂಕ್ಷೆಯ ಪ್ರಧಾನಮಂತ್ರಿ ಜನ್ ಧನ್

ಯೋಜನೆ (PMJDY) ಯ ಫಲಾನುಭವಿಗಳೊಂದಿಗೆ ನೇರ ಸಂವಾದ ನಡೆಸಿದರು.

"ಡಿಜಿಟಲ್ ತಂತ್ರಜ್ಞಾನ ಮತ್ತು ಯುಪಿಐ (UPI) ವ್ಯವಸ್ಥೆಯು ಭಾರತದ ಸಾಮಾನ್ಯ ಜನರ, ವಿಶೇಷವಾಗಿ ಗ್ರಾಮೀಣ ಭಾಗದ ಮಹಿಳೆಯರ ಆರ್ಥಿಕ ಭದ್ರತೆಯನ್ನು ಹೇಗೆ ಹೆಚ್ಚಿಸಿದೆ ಎಂಬುದನ್ನು ಫಲಾನುಭವಿಗಳು ರಾಣಿಯವರ ಮುಂದೆ ಹಂಚಿಕೊಂಡರು."

ಮುಂಬೈ ಮತ್ತು ನವದೆಹಲಿಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಅವರು, ಭಾರತದ ಫಿನ್‌ಟೆಕ್ (FinTech) ಆವಿಷ್ಕಾರಗಳು, ಕೃತಕ ಬುದ್ಧಿಮತ್ತೆ (AI) ಮತ್ತು ಡಿಜಿಟಲ್ ವಂಚನೆ ತಡೆಗಟ್ಟುವ ಕ್ರಮಗಳ ಕುರಿತೂ ತಜ್ಞರೊಂದಿಗೆ ಚರ್ಚೆ ನಡೆಸಿದ್ದಾರೆ. ಭಾರತದ ಸುಮಾರು ಶೇ. 89 ರಷ್ಟು ನಾಗರಿಕರು ಪ್ರಸ್ತುತ ಬ್ಯಾಂಕ್ ಖಾತೆ ಹೊಂದಿದ್ದು, ಆರ್ಥಿಕ ಒಳಗೊಳ್ಳುವಿಕೆಯಲ್ಲಿ (Financial Inclusion) ಸಾಧಿಸಿರುವ ಪ್ರಗತಿ ಜಾಗತಿಕ ಮಟ್ಟದಲ್ಲಿ ಗಮನ ಸೆಳೆದಿದೆ.

ಯಾವುದೇ

## ಭಾರತ-ಚೀನಾ 'ಅರ್ಲಿ ಹಾರ್ವೆಸ್ಟ್ ಗಡಿ ಒಪ್ಪಂದ': ಮಹತ್ವ, ಹಿನ್ನೆಲೆ ಮತ್ತು ಭಾರತದ ನಿಲುವಿನಲ್ಲಾದ ಬದಲಾವಣೆ!




➤ ಭಾರತ ಮತ್ತು ಚೀನಾ ನಡುವಿನ ರಾಜತಾಂತ್ರಿಕ ವಲಯದಲ್ಲಿ ಇತ್ತೀಚೆಗೆ ಭಾರಿ ಸಂಚಲನ ಸೃಷ್ಟಿಯಾಗಿದೆ. 2020ರ ಪೂರ್ವ ಲಡಾಖ್ ಮಿಲಿಟರಿ ಸಂಘರ್ಷವು 2024ರ ಅಕ್ಟೋಬರ್ ವೇಳೆಗೆ ಸಂಪೂರ್ಣವಾಗಿ ಶಮನಗೊಂಡ ನಂತರ, ಉಭಯ ದೇಶಗಳ ನಡುವೆ ಗಡಿ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಮಹತ್ವದ ಚಟುವಟಿಕೆಗಳು ಆರಂಭವಾಗಿವೆ.

➤ ಮುಂದಿನ ಸೆಪ್ಟೆಂಬರ್ 12-13 ರಂದು ಹೊಸದಿಲ್ಲಿಯಲ್ಲಿ ನಡೆಯಲಿರುವ ಬ್ರಿಕ್ಸ್ (BRICS) ಶೃಂಗಸಭೆಯ ಹಿನ್ನೆಲೆಯಲ್ಲಿ, ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಭಾರತಕ್ಕೆ ಭೇಟಿ ನೀಡಲಿದ್ದು, ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಮಾತುಕತೆ ನಡೆಸಲಿದ್ದಾರೆ. ಈ ಸಂದರ್ಭದಲ್ಲಿ ಚೀನಾ 'ಅರ್ಲಿ ಹಾರ್ವೆಸ್ಟ್ ಗಡಿ ಒಪ್ಪಂದ' (Early Harvest Boundary Deal) ಮಾಡಿಕೊಳ್ಳಲು ತೀವ್ರ ಆಸಕ್ತಿ ತೋರಿಸುತ್ತಿರುವುದು ಜಾಗತಿಕ ಗಮನ ಸೆಳೆದಿದೆ.

➤ 'ಅರ್ಲಿ ಹಾರ್ವೆಸ್ಟ್ ಗಡಿ ಒಪ್ಪಂದ': ಭಾರತ ಮತ್ತು ಚೀನಾ ನಡುವೆ ಸಾವಿರಾರು ಕಿಲೋಮೀಟರ್ ಉದ್ದದ ಗಡಿ ವಿವಾದವಿದೆ (LAC - Line of Actual Control). ಇಡೀ ವಿವಾದವನ್ನು ಒಂದೇ ಬಾರಿಗೆ ಬಗೆಹರಿಸುವುದು ಅತ್ಯಂತ ಕಷ್ಟಸಾಧ್ಯವಾದ ಕೆಲಸ.

**ಹೀಗಾಗಿ, ಚೀನಾ ಹೊಸ ಸೂತ್ರವೊಂದನ್ನು ಮುಂದಿಟ್ಟಿದೆ:**

ವಿವಾದ ಮುಕ್ತ ಪ್ರದೇಶಗಳ ಗುರುತಿಸುವಿಕೆ: ಸಿಕ್ಕಿಂ ಸೆಕ್ಟರ್‌ನಂತಹ ಯಾವುದೇ ದೊಡ್ಡ ವಿವಾದವಿಲ್ಲದ ಅಥವಾ ಅತ್ಯಂತ ಕಡಿಮೆ ಭಿನ್ನಾಭಿಪ್ರಾಯ ಹೊಂದಿರುವ ಗಡಿ ಭಾಗಗಳನ್ನು ಮೊದಲು ಗುರುತಿಸುವುದು.

ಹಂತ-ಹಂತದ ಪರಿಹಾರ: ಮೊದಲ ಹಂತದಲ್ಲಿ ಈ ಶಾಂತಿಯುತ ಪ್ರದೇಶಗಳಲ್ಲಿ ಗಡಿ ನಿರ್ಣಯ (Boundary Delimitation) ಮತ್ತು ಶಾಂತಿ ಒಪ್ಪಂದವನ್ನು ಪೂರ್ಣಗೊಳಿಸುವುದು.

ಚೀನಾದ ವಾದ: ಈ ರೀತಿ ಕಡಿಮೆ ವಿವಾದವಿರುವ ಭಾಗಗಳನ್ನು ಮೊದಲು ಬಗೆಹರಿಸುವುದರಿಂದ ಗಡಿಭಾಗದಲ್ಲಿ ಹಂತ-ಹಂತವಾಗಿ ಶಾಂತಿ ನೆಲೆಸಲು ಸಾಧ್ಯವಾಗುತ್ತದೆ ಎಂಬುದು ಚೀನಾದ ನಿಲುವು.

➤ **ಭಾರತದ ಸಾಂಪ್ರದಾಯಿಕ ನಿಲುವು:** 2005ರಲ್ಲಿ ಉಭಯ ದೇಶಗಳ ವಿಶೇಷ ಪ್ರತಿನಿಧಿಗಳು ಮಾಡಿಕೊಂಡಿದ್ದ 'ನಿಯತಾಂಕಗಳು ಮತ್ತು ಮಾರ್ಗದರ್ಶಿ ತತ್ವಗಳ ಒಪ್ಪಂದ'ದ (Political Parameters and Guiding Principles 2005) ಪ್ರಕಾರ ಭಾರತ ಒಂದು ಗಟ್ಟಿ ನಿಲುವನ್ನು ಹೊಂದಿತ್ತು.

"ಗಡಿ ಸಮಸ್ಯೆಯ ಪರಿಹಾರವು ಅಂತಿಮವಾಗಿರಬೇಕು ಮತ್ತು ಅದು ಎಲ್ಲಾ ವಲಯಗಳನ್ನು (All Sectors) ಒಟ್ಟಿಗೆ ಒಳಗೊಂಡಿರಬೇಕು." ಅಂದರೆ, ಗಡಿಯನ್ನು ತುಂಡು-ತುಂಡಾಗಿ (Piecemeal manner) ಬಗೆಹರಿಸುವ ಚೀನಾದ ಪ್ರಸ್ತಾಪವನ್ನು ಭಾರತ ಈ ಹಿಂದೆ ಹಲವು ಬಾರಿ ತಿರಸ್ಕರಿಸಿತ್ತು. ಸಂಪೂರ್ಣ ಗಡಿ ವಿವಾದ ಒಟ್ಟಿಗೇ ಬಗೆಹರಿಯಬೇಕು ಎಂಬುದು ಭಾರತದ ಪಟ್ಟು ಆಗಿತ್ತು.

➤ **ಭಾರತದ ಇತ್ತೀಚಿನ ನಿಲುವಿನಲ್ಲಿ ಸಡಿಲಿಕೆ ಕಂಡುಬಂದಿದ್ದೇಕೆ?**

24ನೇ ಸುತ್ತಿನ ಮಾತುಕತೆ (ಆಗಸ್ಟ್ 2025): ಈ ಸಭೆಯಲ್ಲಿ ವಿವಾದ ಮುಕ್ತ ಪ್ರದೇಶಗಳಲ್ಲಿ ಗಡಿ ನಿರ್ಣಯದ ಸಾಧ್ಯತೆಗಳನ್ನು ಪರಿಶೀಲಿಸಲು ಉಭಯ ದೇಶಗಳು ಜಂಟಿ 'ತಜ್ಞರ ಸಮಿತಿ' (Expert Group) ರಚಿಸಲು ಒಪ್ಪಿಕೊಂಡಿದ್ದವು. ಇದು ಭಾರತದ ನಿಲುವಿನಲ್ಲಿ ಕಂಡುಬಂದ ಸಣ್ಣ ಸಡಿಲಿಕೆಯನ್ನು ಸೂಚಿಸುತ್ತದೆ.

ದೋವಲ್-ವಾಂಗ್ ಯಿ ಮಹತ್ವದ ಭೇಟಿ: ಇತ್ತೀಚೆಗೆ ದಿಲ್ಲಿಯಲ್ಲಿ ನಡೆದ ಬ್ರಿಕ್ಸ್ ಸಭೆಯ ಸಂದರ್ಭದಲ್ಲಿ ಭಾರತದ ರಾಷ್ಟ್ರೀಯ ಭದ್ರತಾ ಸಲಹೆಗಾರ (NSA) ಅಜಿತ್ ದೋವಲ್ ಮತ್ತು ಚೀನಾದ ವಿದೇಶಾಂಗ ಸಚಿವ ವಾಂಗ್ ಯಿ ಈ ವಿಷಯದ ಕುರಿತು ವಿಸ್ತೃತವಾಗಿ ಚರ್ಚಿಸಿದ್ದಾರೆ.

25ನೇ ಸುತ್ತಿನ ಮಾತುಕತೆ: ಇದೇ ವರ್ಷದ ಅಂತ್ಯದಲ್ಲಿ ಬೀಜಿಂಗ್ ನಲ್ಲಿ 25ನೇ ಸುತ್ತಿನ ಗಡಿ ಮಾತುಕತೆ ನಡೆಯಲಿದ್ದು, ಅದಕ್ಕೂ ಮುನ್ನ 'ಅರ್ಲಿ ಹಾರ್ವೆಸ್ಟ್' ಸೂತ್ರದ ಮೇಲೆ ಒಪ್ಪಂದ ಮಾಡಿಕೊಳ್ಳಲು ಚೀನಾ ಒತ್ತಾಯಿಸುತ್ತಿದೆ.

## ಭಾರತೀಯ ವಿಮಾನಯಾನದಲ್ಲಿ ಹೊಸ ಇತಿಹಾಸ: ಉದಯಪುರದಲ್ಲಿ ದೇಶದ ಮೊದಲ 'ಗಗನ್' (GAGAN) ಉಪಗ್ರಹ ಆಧಾರಿತ ಜೆಟ್ ಲ್ಯಾಂಡಿಂಗ್ ಯಶಸ್ವಿ!



➤ ಭಾರತೀಯ ನಾಗರಿಕ ವಿಮಾನಯಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಜೂನ್ 27, 2026 ರಂದು ಒಂದು ಅಭೂತಪೂರ್ವ ಮೈಲಿಗಲ್ಲು ಸ್ಥಾಪನೆಯಾಗಿದೆ. ಭಾರತದ ಹೆಮ್ಮೆಯ ಬಾಹ್ಯಾಕಾಶ ಸಂಸ್ಥೆ ಇಸ್ರೋ (ISRO) ಮತ್ತು ಏರ್‌ಪೋರ್ಟ್ಸ್ ಅಥಾರಿಟಿ ಆಫ್ ಇಂಡಿಯಾ (AAI) ಜಂಟಿಯಾಗಿ ಅಭಿವೃದ್ಧಿಪಡಿಸಿರುವ 'ಗಗನ್' (GAGAN) ಉಪಗ್ರಹ ಆಧಾರಿತ ನ್ಯಾವಿಗೇಷನ್ ವ್ಯವಸ್ಥೆಯನ್ನು ಬಳಸಿ, ದೇಶದಲ್ಲೇ ಮೊದಲ ಬಾರಿಗೆ ದೊಡ್ಡ ಜೆಟ್ ವಿಮಾನವೊಂದನ್ನು ಯಶಸ್ವಿಯಾಗಿ ಲ್ಯಾಂಡ್ ಮಾಡಲಾಗಿದೆ.

➤ ಖಾಸಗಿ ವಿಮಾನಯಾನ ಸಂಸ್ಥೆಯಾದ ಇಂಡಿಗೋ (IndiGo) ಗೆ ಸೇರಿದ ಏರ್‌ಬಸ್ ಎ320 (Airbus A320) ಜೆಟ್ ವಿಮಾನವು ರಾಜಸ್ಥಾನದ ಉದಯಪುರ ವಿಮಾನ ನಿಲ್ದಾಣದಲ್ಲಿ ಕೇವಲ ಸ್ಯಾಟಲೈಟ್ ಸಿಗ್ನಲ್‌ಗಳ ನೆರವಿನಿಂದ ಯಶಸ್ವಿಯಾಗಿ ಭೂಸ್ಪರ್ಶ ಮಾಡಿದೆ.

➤ 'ಗಗನ್' (GAGAN) ತಂತ್ರಜ್ಞಾನ: GAGAN ಎಂದರೆ GPS Aided GEO Augmented Navigation ಎಂದರ್ಥ. ಇದು ಭಾರತದ ಸ್ವದೇಶಿ ಸ್ಯಾಟಲೈಟ್ ಆಧಾರಿತ ಸಂವರ್ಧನಾ ವ್ಯವಸ್ಥೆಯಾಗಿದೆ (Satellite-Based Augmentation System - SBAS). ಇದು ಅಮೆರಿಕದ ಜಿಪಿಎಸ್ (GPS) ಸಿಗ್ನಲ್‌ಗಳನ್ನು ಭೂಮಿಯ ಮೇಲಿನ ರೆಫರೆನ್ಸ್ ಸ್ಟೇಷನ್‌ಗಳ ಸಹಾಯದಿಂದ ಇನ್ನಷ್ಟು ನಿಖರಗೊಳಿಸಿ (ಸುಮಾರು 3 ಮೀಟರ್ ವ್ಯಾಪ್ತಿಯ ನಿಖರತೆ) ವಿಮಾನಗಳ ಸಂಚಾರಕ್ಕೆ ನೆರವಾಗುತ್ತದೆ. ಇದು ನಾಗರಿಕ ವಿಮಾನಯಾನ ಕ್ಷೇತ್ರದಲ್ಲಿ ವಿಮಾನಗಳ ಸುರಕ್ಷಿತ ಲ್ಯಾಂಡಿಂಗ್ ಹಾಗೂ ಏರ್ ಟ್ರಾಫಿಕ್ ಮ್ಯಾನೇಜ್‌ಮೆಂಟ್‌ಗೆ ಅತ್ಯಂತ ಸಹಕಾರಿಯಾಗಿದೆ.

➤ **ಎಲ್‌ಪಿವಿ (LPV) ಅಪ್ರೋಚ್:** ಗಗನ್ ವ್ಯವಸ್ಥೆಯು LPV (Localiser Performance with Vertical Guidance)

ಪ್ರಕ್ರಿಯೆಯನ್ನು ಬೆಂಬಲಿಸುತ್ತದೆ. ಇದರರ್ಥ ವಿಮಾನವು ರನ್‌ವೇಗೆ ಇಳಿಯುವಾಗ ಪೈಲಟ್‌ಗಳಿಗೆ ಸಮಾನಾಂತರ (Horizontal) ಮತ್ತು ಲಂಬವಾದ (Vertical) ಎರಡೂ ಮಾರ್ಗದರ್ಶನಗಳನ್ನು ಉಪಗ್ರಹಗಳ ಮೂಲಕವೇ ನಿಖರವಾಗಿ ನೀಡಲಾಗುತ್ತದೆ. ಸಾಮಾನ್ಯವಾಗಿ ವಿಮಾನ ನಿಲ್ದಾಣಗಳಲ್ಲಿ ದುಬಾರಿ ವೆಚ್ಚದ ಇನ್ಸ್ಟ್ರುಮೆಂಟ್ ಲ್ಯಾಂಡಿಂಗ್ ಸಿಸ್ಟಮ್ (ILS) ಎಂಬ ಭೂ-ಆಧಾರಿತ ಯಂತ್ರಗಳಿರುತ್ತವೆ. ಆದರೆ ಸಣ್ಣ ನಿಲ್ದಾಣಗಳಲ್ಲಿ ಅಥವಾ ಪ್ರತಿಕೂಲ ಹವಾಮಾನವಿದ್ದಾಗ ಈ ತಂತ್ರಜ್ಞಾನ ಇಲ್ಲದಿದ್ದರೂ, ಕೇವಲ 'ಗಗನ್' ಬಳಸಿ ಎಲ್‌ಪಿವಿ ಮೂಲಕ ಸುರಕ್ಷಿತವಾಗಿ ವಿಮಾನ ಇಳಿಸಬಹುದು.

➤ ಭಾರತೀಯ ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯ (DGCA) ಜುಲೈ 1, 2021 ರ ನಂತರ ಭಾರತದಲ್ಲಿ ನೋಂದಾಯಿಸಲಾದ ಎಲ್ಲಾ ವಿಮಾನಗಳಲ್ಲಿ 'ಗಗನ್' ಉಪಗ್ರಹ ಉಪಕರಣವನ್ನು ಹೊಂದುವುದನ್ನು ಕಡ್ಡಾಯಗೊಳಿಸಿದೆ.

## ವಿಶ್ವದ ಅತ್ಯುತ್ತಮ ಶಾಲೆಗಳ ಪ್ರಶಸ್ತಿ 2026: ಭಾರತದ 7 ಶಾಲೆಗಳು ಶಾರ್ಟ್‌ಲಿಸ್ಟ್; ಐತಿಹಾಸಿಕ ದಾಖಲೆ!




➤ ಜಾಗತಿಕ ಶಿಕ್ಷಣ ರಂಗದಲ್ಲಿ ಭಾರತದ ಹೆಮ್ಮೆಯ ಗರಿ ಮತ್ತಷ್ಟು ಎತ್ತರಕ್ಕೆ ಜಿಗಿದಿದೆ. ಪ್ರತಿಷ್ಠಿತ 'ವಿಶ್ವದ ಅತ್ಯುತ್ತಮ ಶಾಲೆಗಳ ಪ್ರಶಸ್ತಿ 2026' (World's Best School Prizes 2026) ರ ಮುನ್ನಡೆ ಪಟ್ಟಿಯಲ್ಲಿ (Shortlist) ಭಾರತದ ಬರೋಬ್ಬರಿ 7 ಶಾಲೆಗಳು ಸ್ಥಾನ ಪಡೆಯುವ ಮೂಲಕ ಜಾಗತಿಕ ಮಟ್ಟದಲ್ಲಿ ಹೊಸ ಇತಿಹಾಸ ಸೃಷ್ಟಿಸಿವೆ. ಈ ಪ್ರಶಸ್ತಿ ಇತಿಹಾಸದಲ್ಲೇ ಒಂದೇ ವರ್ಷದಲ್ಲಿ ಯಾವುದೇ ಒಂದು ದೇಶದಿಂದ ಇಷ್ಟೊಂದು ಶಾಲೆಗಳು ಆಯ್ಕೆಯಾಗಿರುವುದು ಇದೇ ಮೊದಲು.

ಜಾಗತಿಕ ದಾಖಲೆ: ಪ್ರಸಕ್ತ ವರ್ಷದ ವಿಶ್ವದ ಅತ್ಯುತ್ತಮ ಶಾಲೆಗಳ ಪ್ರಶಸ್ತಿಯಲ್ಲಿ ಭಾರತದ 7 ಶಾಲೆಗಳು ಟಾಪ್-10 ರೌಂಡ್‌ನಲ್ಲಿ ಸ್ಥಾನ ಪಡೆದಿವೆ. ಇದು ಜಾಗತಿಕವಾಗಿ ಅತ್ಯಧಿಕ ಪ್ರಾತಿನಿಧ್ಯವಾಗಿದೆ.

ಪ್ರಶಸ್ತಿ ಆಯೋಜಕರು: ಈ ಪ್ರತಿಷ್ಠಿತ ಪ್ರಶಸ್ತಿಗಳನ್ನು ಯುನೈಟೆಡ್ ಕಿಂಗ್‌ಡಮ್ (UK) ಮೂಲದ 'T4 ಎಜುಕೇಶನ್' (T4 Education) ಸಂಸ್ಥೆಯು ಆಯೋಜಿಸುತ್ತದೆ.

ಪ್ರಶಸ್ತಿಯ ವಿಭಾಗಗಳು: ನಾವೀನ್ಯತೆ (Innovation), ಸಮುದಾಯದ ಸಹಭಾಗಿತ್ವ (Community Collaboration), ಪರಿಸರ ಜಾಗೃತಿ ಕ್ರಿಯೆ ಸೇರಿದಂತೆ ಒಟ್ಟು 5 ವಿಭಾಗಗಳಲ್ಲಿ ಈ ಪ್ರಶಸ್ತಿಯನ್ನು ನೀಡಲಾಗುತ್ತದೆ.

ಅಂತಿಮ ಫಲಿತಾಂಶ: ಅಂತಿಮ ವಿಜೇತರ ಹೆಸರನ್ನು ಮುಂಬರುವ 2026 ರ ನವೆಂಬರ್ ತಿಂಗಳಲ್ಲಿ ಅಧಿಕೃತವಾಗಿ ಪ್ರಕಟಿಸಲಾಗುವುದು.

**➤ ಶಾರ್ಟ್‌ಲಿಸ್ಟ್ ಆಗಿರುವ ಪ್ರಮುಖ ಭಾರತೀಯ ಶಾಲೆಗಳು:**
ವಿವಿಧ ವಿಭಾಗಗಳಲ್ಲಿ ದೇಶದ ಬೇರೆ ಬೇರೆ ಭಾಗಗಳ ಶಾಲೆಗಳು ಈ ಪಟ್ಟಿಯಲ್ಲಿ ಸ್ಥಾನ ಗಿಟ್ಟಿಸಿಕೊಂಡಿವೆ. ಪ್ರಮುಖವಾಗಿ ನಾವೀನ್ಯತೆ (Innovation Category) ವಿಭಾಗದಲ್ಲಿ ಈ ಕೆಳಗಿನ ಶಾಲೆಗಳು ಆಯ್ಕೆಯಾಗಿವೆ:

ಪಿಸಿಎಂಸಿ ಛತ್ರಪತಿ ಶಾಹುಜಿ ಮಹಾರಾಜ್ ಇಂಗ್ಲಿಷ್ ಮೀಡಿಯಂ ಸ್ಕೂಲ್ (ಕಾಸರವಾಡಿ, ಪುಣೆ, ಮಹಾರಾಷ್ಟ್ರ)

ಆರ್ಮಿ ಗುಡ್‌ವಿಲ್ ಸ್ಕೂಲ್ (ವುಜುರ್, ಅನಂತನಾಗ್, ಜಮ್ಮು ಮತ್ತು ಕಾಶ್ಮೀರ)

# 29 June 2026

## ಬಾನ್ ಚಾಲೆಂಜ್‌ನಲ್ಲಿ ಭಾರತದ ಐತಿಹಾಸಿಕ ಯಶಸ್ಸು: 21.76 ಮಿಲಿಯನ್ ಹೆಕ್ಟೇರ್ ಭೂಮಿ ಪುನಶ್ಚೇತನ!




➤ ಜಾಗತಿಕ ಪರಿಸರ ಸಂರಕ್ಷಣೆ ಮತ್ತು ಭೂಕುಸಿತ ತಡೆಗಟ್ಟುವಲ್ಲಿ ಭಾರತವು ಮತ್ತೊಂದು ಮಹತ್ವದ ಮೈಲಿಗಲ್ಲನ್ನು ಸಾಧಿಸಿದೆ. 2011 ಮತ್ತು 2020 ರ ನಡುವೆ ದೇಶದಲ್ಲಿ ಬಲಬರೋಬ್ಬರಿ 21.76 ಮಿಲಿಯನ್ ಹೆಕ್ಟೇರ್ ಪಾಳು ಬಿದ್ದ ಮತ್ತು ಅರಣ್ಯ ನಾಶವಾಗಿದ್ದ ಭೂಮಿಯನ್ನು ಯಶಸ್ವಿಯಾಗಿ ಪುನಶ್ಚೇತನಗೊಳಿಸುವ ಮೂಲಕ ಭಾರತವು ಜಾಗತಿಕ ವೇದಿಕೆಯಲ್ಲಿ ಪ್ರಶಂಸೆಗೆ ಪಾತ್ರವಾಗಿದೆ. ಅಂತರರಾಷ್ಟ್ರೀಯ ಪ್ರಕೃತಿ ಸಂರಕ್ಷಣಾ ಸಂಸ್ಥೆ (IUCN) ಬಿಡುಗಡೆ ಮಾಡಿರುವ ಭಾರತದ ದ್ವಿತೀಯ ಪ್ರಗತಿ ವರದಿಯಲ್ಲಿ ಈ ಮಹೋನ್ನತ ಸಾಧನೆಯನ್ನು ಅಧಿಕೃತವಾಗಿ ಪ್ರಕಟಿಸಲಾಗಿದೆ. ಭಾರತವು 2030ರ ವೇಳೆಗೆ ಹಮ್ಮಿಕೊಂಡಿದ್ದ ಒಟ್ಟು ಗುರಿಯಲ್ಲಿ ಈಗಾಗಲೇ ಶೇಕಡಾ 84 ರಷ್ಟನ್ನು ಸಾಧಿಸಿದೆ.

➤ ಬಾನ್ ಚಾಲೆಂಜ್ (Bonn Challenge): ವಿನಾಶದಂಚಿಗೆ ತಲುಪುತ್ತಿರುವ ಜಾಗತಿಕ ಪರಿಸರ ಅಥವಾ ಭೂಮಿಗೆ ಮರುಜೀವ ನೀಡಲು ಜಗತ್ತಿನಾದ್ಯಂತ ದೇಶಗಳು ಒಂದಾಗಿ ಕೈಜೋಡಿಸಿರುವ ಒಂದು ಸ್ವಯಂಪ್ರೇರಿತ ಜಾಗತಿಕ ಶಪಥ ಅಥವಾ ಸವಾಲೇ 'ಬಾನ್ ಚಾಲೆಂಜ್' ಇದನ್ನು 2011ರಲ್ಲಿ ಜರ್ಮನಿ ಸರ್ಕಾರ ಮತ್ತು ಇಂಟರ್‌ನ್ಯಾಷನಲ್ ಯೂನಿಯನ್ ಫಾರ್ ಕನ್ಸರ್ವೇಶನ್ ಆಫ್ ನೇಚರ್ (IUCN) ಜಂಟಿಯಾಗಿ ಜರ್ಮನಿಯ 'ಬಾನ್' ನಗರದಲ್ಲಿ ಜಾರಿಗೆ ತಂದವು. ಇಡೀ ಪ್ರಪಂಚದಲ್ಲಿ ಹಾಳಾಗಿರುವ 150 ಮಿಲಿಯನ್ ಹೆಕ್ಟೇರ್ ಭೂಮಿಯನ್ನು 2020ರ ವೇಳೆಗೆ ಹಾಗೂ 350 ಮಿಲಿಯನ್ ಹೆಕ್ಟೇರ್ ಭೂಮಿಯನ್ನು 2030ರ ವೇಳೆಗೆ ಮತ್ತೆ ಹಸಿರಾಗಿಸುವುದು, ಅಲ್ಲಿ ಕಾಡು ಮತ್ತು ಕೃಷಿಯನ್ನು ಮರುಸ್ಥಾಪಿಸುವುದು ಇದರ ಮುಖ್ಯ ಆಶಯವಾಗಿದೆ.

**➤ ಭಾರತದ ಜಾಗತಿಕ ಸಂಕಲ್ಪ:** 2019 ರಲ್ಲಿ ನವದೆಹಲಿಯಲ್ಲಿ ನಡೆದ ವಿಶ್ವ ಮರುಭೂಮೀಕರಣ ವಿರೋಧಿ ಸಮಾವೇಶದ (UNCCD COP-14) ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು 2030ರ ವೇಳೆಗೆ 26 ಮಿಲಿಯನ್ ಹೆಕ್ಟೇರ್ ಪಾಳು ಭೂಮಿಯನ್ನು ಪುನಶ್ಚೇತನಗೊಳಿಸುವ ಭಾರತದ ಜಾಗತಿಕ ಸಂಕಲ್ಪವನ್ನು ಪ್ರಕಟಿಸಿದ್ದರು. ಇದು ವಿಶ್ವದಲ್ಲೇ ಅತಿ ದೊಡ್ಡ ಪರಿಸರ ಸಂರಕ್ಷಣಾ ಗುರಿಗಳಲ್ಲಿ ಒಂದಾಗಿದೆ.

**➤ ರಾಜ್ಯವಾರು ಪ್ರಗತಿ:** ತೆಲಂಗಾಣಕ್ಕೆ ಅಗ್ರಸ್ಥಾನ: IUCN ಇತ್ತೀಚೆಗೆ ಬಿಡುಗಡೆ ಮಾಡಿರುವ ವರದಿಯ ಪ್ರಕಾರ, ದೇಶದಲ್ಲೇ ಅತ್ಯಂತ ಹೆಚ್ಚು ಭೂಮಿಯನ್ನು ಪರಿಸರ ಸ್ನೇಹಿಯಾಗಿ ಪರಿವರ್ತಿಸಿ, ಪುನಶ್ಚೇತನಗೊಳಿಸಿದ ರಾಜ್ಯಗಳ ಪಟ್ಟಿಯಲ್ಲಿ ತೆಲಂಗಾಣ ಪ್ರಥಮ ಸ್ಥಾನದಲ್ಲಿದೆ (ಸುಮಾರು 4.18 ಮಿಲಿಯನ್ ಹೆಕ್ಟೇರ್). ತೆಲಂಗಾಣವು ಕೃಷಿ ಅರಣ್ಯೀಕರಣ (Agroforestry) ಮೂಲಕ ಈ ಯಶಸ್ಸು ಕಂಡಿದೆ. **ಇದರ ನಂತರದ ಸ್ಥಾನಗಳಲ್ಲಿ ಈ ಕೆಳಗಿನ ರಾಜ್ಯಗಳಿವೆ:**

ತೆಲಂಗಾಣ (ಪ್ರಥಮ ಸ್ಥಾನ)
ಆಂಧ್ರಪ್ರದೇಶ
ಗುಜರಾತ್
ಮಧ್ಯಪ್ರದೇಶ
ಒಡಿಶಾ

➤ ಕೇಂದ್ರ ಪರಿಸರ ಸಚಿವ ಭೂಪೇಂದ್ರ ಯಾದವ್ ಅವರ ಪ್ರಕಾರ, ಸರ್ಕಾರದ ಬದ್ಧತೆ ಹಾಗೂ ಸಾರ್ವಜನಿಕರ ಸಹಭಾಗಿತ್ವದ ಭೂಮಿ ಪುನಶ್ಚೇತನ ಪ್ರಕ್ರಿಯೆಯಿಂದಾಗಿ ದೇಶದ ಗ್ರಾಮೀಣ ಭಾಗದಲ್ಲಿ

ಸುಮಾರು 122 ಕೋಟಿ (1.22 ಬಿಲಿಯನ್) ಮಾನವ ದಿನಗಳ ಉದ್ಯೋಗ ಸೃಷ್ಟಿಯಾಗಿದೆ.

**➤ ಯಶಸ್ಸಿಗೆ ಕಾರಣವಾದ ಪ್ರಮುಖ ಯೋಜನೆಗಳು:**

ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ (PMKSY): ಇದರ ಜಲಾನಯನ ಅಭಿವೃದ್ಧಿ ಘಟಕದ ಅಡಿಯಲ್ಲಿ 27 ಮಿಲಿಯನ್ ಹೆಕ್ಟೇರ್‌ಗೂ ಹೆಚ್ಚು ಭೂಮಿಯನ್ನು ಅಭಿವೃದ್ಧಿಪಡಿಸಲಾಗಿದೆ.

ಜಿಯೋ-ಟ್ಯಾಗ್ ನೈಸರ್ಗಿಕ ಆಸ್ತಿಗಳು: ಪರಿಸರ ಸಂರಕ್ಷಣೆಗೆ ಪೂರಕವಾದ 61.3 ಮಿಲಿಯನ್‌ಗೂ ಹೆಚ್ಚು ಜಿಯೋ-ಟ್ಯಾಗ್ ಹೊಂದಿದ ನೈಸರ್ಗಿಕ ಆಸ್ತಿಗಳನ್ನು ಸೃಷ್ಟಿಸಲಾಗಿದೆ.

ಗ್ರೀನ್ ಇಂಡಿಯಾ ಮಿಷನ್ ಮತ್ತು ಕ್ಯಾಂಪಾ (CAMPA): ಕಳೆದ ಐದು ವರ್ಷಗಳಲ್ಲಿ ಕ್ಯಾಂಪಾ ನಿಧಿಯಡಿ ಸುಮಾರು 3.20 lakh ಹೆಕ್ಟೇರ್ ಪ್ರದೇಶದಲ್ಲಿ ಅರಣ್ಯೀಕರಣ ಮಾಡಲಾಗಿದೆ.

ಅರಾವಳಿ ಗ್ರೀನ್ ವಾಲ್ ಉಪಕ್ರಮ: ಮರುಭೂಮಿ ಹರಡುವಿಕೆಯನ್ನು ತಡೆಯಲು ಜಾರಿಗೆ ತರಲಾದ ಈ ಯೋಜನೆಯು ತನ್ನ ವಾರ್ಷಿಕ ಗುರಿಯನ್ನು ಮೀರಿದ ಸಾಧನೆ ಮಾಡಿದೆ.

ಮಿಸ್ಟಿ ಯೋಜನೆ (MISHTI): 2028ರ ವೇಳೆಗೆ 54,000 ಹೆಕ್ಟೇರ್ ಮ್ಯಾಂಗ್ರೋವ್ ಪ್ರದೇಶವನ್ನು ಪುನಶ್ಚೇತನಗೊಳಿಸುವ ಗುರಿ ಹೊಂದಲಾಗಿದೆ.

## ಭಾರತದ ಮೊದಲ ಹೈಡ್ರೋಜನ್ ಚಾಲಿತ ರೈಲು: ದೆಹಲಿ-ಜಿಂದ್ ನಡುವೆ ಯಶಸ್ವಿ ಪ್ರಾಯೋಗಿಕ ಸಂಚಾರ!




➤ ದೇಶದ ಸಾರಿಗೆ ಇತಿಹಾಸದಲ್ಲಿ ಪರಿಸರಸ್ನೇಹಿ ತಂತ್ರಜ್ಞಾನದ ಹೊಸ ಯುಗ ಆರಂಭವಾಗಿದೆ. ಭಾರತೀಯ ರೈಲ್ವೆಯು ಪರಿಸರ ಸ್ನೇಹಿ ಮತ್ತು ಹಸಿರು ಇಂಧನ ತಂತ್ರಜ್ಞಾನಕ್ಕೆ ಒತ್ತು ನೀಡುವ ನಿಟ್ಟಿನಲ್ಲಿ ದೇಶದ ಮೊಟ್ಟಮೊದಲ ಹೈಡ್ರೋಜನ್ ಇಂಧನ ಕೋಶ ಚಾಲಿತ (Hydrogen Fuel Cell-powered) ರೈಲಿನ ಅಂತಿಮ ಹೈ-ಸ್ಪೀಡ್ ಪ್ರಾಯೋಗಿಕ ಸಂಚಾರವನ್ನು (Trial Run) 2026ರ ಜೂನ್ 26 ಶುಕ್ರವಾರದಂದು ಯಶಸ್ವಿಯಾಗಿ ಪೂರ್ಣಗೊಳಿಸಿದೆ.

➤ ಹರಿಯಾಣದ ಜಿಂದ್ (Jind) ಮತ್ತು ಸೋನಿಪತ್ (Sonipat) ಜಂಕ್ಷನ್‌ಗಳ ನಡುವಿನ ಮಾರ್ಗದಲ್ಲಿ ಈ ರೈಲನ್ನು ಗರಿಷ್ಠ ಗಂಟೆಗೆ 120 ಕಿಲೋಮೀಟರ್ ವೇಗದಲ್ಲಿ ಓಡಿಸಿ ಯಶಸ್ವಿ ಅಂತಿಮ ಹಂತದ ಪರೀಕ್ಷೆ ನಡೆಸಲಾಯಿತು. ಈ ಐತಿಹಾಸಿಕ ಸಾಧನೆಯು ಭಾರತವನ್ನು ಹೈಡ್ರೋಜನ್ ತಂತ್ರಜ್ಞಾನ ಬಳಸುವ ವಿಶ್ವದ ಆಯ್ದ ದೇಶಗಳ ಸಾಲಿಗೆ ಸೇರಿಸಿದೆ.

➤ ಹೈಡ್ರೋಜನ್ ರೈಲಿನ ತಾಂತ್ರಿಕ ವಿಶೇಷತೆಗಳು:

ಇಂಧನ ಮತ್ತು ಎಂಜಿನ್ ಸಾಮರ್ಥ್ಯ: ಇದು ಸಾಂಪ್ರದಾಯಿಕ ಡೀಸೆಲ್ ಅಥವಾ ವಿದ್ಯುತ್ ಎಂಜಿನ್ ಹೊಂದಿಲ್ಲ. ಬದಲಾಗಿ 1200 ಕಿಲೋವ್ಯಾಟ್ (kW) ಸಾಮರ್ಥ್ಯದ ಹೈಡ್ರೋಜನ್ ಫ್ಯುಯೆಲ್ ಸೆಲ್ ಪ್ರೊಪಲ್ಷನ್ ವ್ಯವಸ್ಥೆಯನ್ನು ಹೊಂದಿದೆ.

ವಿಶ್ವದ ಅತಿ ಉದ್ದದ ಬ್ರಾಡ್-ಗೇಜ್ ಹೈಡ್ರೋಜನ್ ರೈಲು: ಇದು ಒಟ್ಟು 10 ಬೋಗಿಗಳನ್ನು (Coaches) ಒಳಗೊಂಡಿದ್ದು, ಇದರಲ್ಲಿ ಎರಡು ಡ್ರೈವಿಂಗ್ ಪವರ್ ಕಾರ್ಸ್ (DPCs) ಇವೆ. ಒಟ್ಟು 2400 kW ಸಾಮರ್ಥ್ಯದೊಂದಿಗೆ ಬ್ರಾಡ್ ಗೇಜ್ ಹಳಿಯ ಮೇಲಿನ ವಿಶ್ವದ ಅತ್ಯಂತ ಶಕ್ತಿಶಾಲಿ ಹೈಡ್ರೋಜನ್ ರೈಲು ಇದಾಗಿದೆ.

ಸ್ವದೇಶಿ ತಂತ್ರಜ್ಞಾನ (Atmanirbhar Bharat): ಈ ರೈಲನ್ನು ಭಾರತದಲ್ಲೇ ದೇಶೀಯವಾಗಿ ವಿನ್ಯಾಸಗೊಳಿಸಲಾಗಿದೆ. ಹೈದರಾಬಾದ್ ಮೂಲದ ಮೇಧಾ ಸರ್ವೋ ಡ್ರೈವ್ಸ್ (Medha Servo Drives) ಕಂಪನಿಯು ಈ ತಂತ್ರಜ್ಞಾನದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಿದೆ.

**➤ ಬಹುಸ್ತರದ ಸುರಕ್ಷತಾ ಗ್ರಿಡ್: ಹೈಡ್ರೋಜನ್ ಅತ್ಯಂತ ಸುಲಭವಾಗಿ ದಹಿಸುವ ಅನಿಲವಾಗಿರುವುದರಿಂದ, ರೈಲ್ವೆಯು ಅತ್ಯುನ್ನತ ಸುರಕ್ಷತಾ ಮಾನದಂಡಗಳನ್ನು ಅಳವಡಿಸಿದೆ:**

ಹೈಡ್ರೋಜನ್ ಸೋರಿಕೆ ಪತ್ತೆ ಸಾಧನ (Hydrogen Leak Detectors): ರೈಲಿನಲ್ಲಿ ಸಣ್ಣ ಪ್ರಮಾಣದ ಸೋರಿಕೆಯಾದರೂ ತಕ್ಷಣವೇ ಅಲರ್ಟ್ ಮಾಡುವ ಸೆನ್ಸಾರ್‌ಗಳಿವೆ.

ಜ್ವಾಲೆ ಪತ್ತೆ ಸಾಧನ (Flame Detection System): ಯಾವುದೇ ರೀತಿಯ ಬೆಂಕಿ ಅಥವಾ ಜ್ವಾಲೆಯನ್ನು ತಕ್ಷಣವೇ ಗುರುತಿಸುವ ತಂತ್ರಜ್ಞಾನ ಅಳವಡಿಸಲಾಗಿದೆ.

**ನಿರಂತರ ಮೇಲ್ವಿಚಾರಣೆ (Continuous Monitoring Technology): ಕಾರ್ಯಾಚರಣೆಯ ಸಮಯದಲ್ಲಿ ಎದುರಾಗಬಹುದಾದ ಸಂಭಾವ್ಯ ತಾಂತ್ರಿಕ ದೋಷಗಳನ್ನು ಮುಂಚಿತವಾಗಿಯೇ ಪತ್ತೆಹಚ್ಚಿ ಸ್ವಯಂಚಾಲಿತವಾಗಿ ಪ್ರತಿಕ್ರಿಯಿಸುವ ಸುರಕ್ಷತಾ ವ್ಯವಸ್ಥೆ ಇಲ್ಲಿದೆ.**

➤ ಪರಿಸರದ ಮೇಲಾಗುವ ಪ್ರಭಾವ: ಶೂನ್ಯ ಇಂಗಾಲದ ಹೊರಸೂಸುವಿಕೆ (Zero Emission): ಹೈಡ್ರೋಜನ್ ಇಂಧನ ಕೋಶಗಳು ಆಮ್ಲಜನಕ ಮತ್ತು ಹೈಡ್ರೋಜನ್ ನಡುವೆ ರಾಸಾಯನಿಕ ಪ್ರಕ್ರಿಯೆ ನಡೆಸಿ ವಿದ್ಯುತ್ ಉತ್ಪಾದಿಸುತ್ತವೆ. ಈ ಪ್ರಕ್ರಿಯೆಯಲ್ಲಿ ಯಾವುದೇ ಹಾನಿಕಾರಕ ಇಂಗಾಲದ ಡೈಆಕ್ಸೈಡ್ ಬಿಡುಗಡೆಯಾಗುವುದಿಲ್ಲ. ಬದಲಾಗಿ ಕೇವಲ ನೀರಿನ ಆವಿ (Water Vapour) ಮತ್ತು ಶಾಖ ಮಾತ್ರ ಉಪ ಉತ್ಪನ್ನವಾಗಿ ಹೊರಬರುತ್ತದೆ.

➤ ಇದು ಭಾರತ ಸರ್ಕಾರದ ರಾಷ್ಟ್ರೀಯ ಹಸಿರು ಹೈಡ್ರೋಜನ್ ಮಿಷನ್ (National Green Hydrogen Mission) ಮತ್ತು 2030 ರ ವೇಳೆಗೆ ಭಾರತೀಯ ರೈಲ್ವೆಯನ್ನು 'ನೆಟ್-ಝೀರೋ ಕಾರ್ಬನ್ ಎಮಿಟರ್' (ಶೂನ್ಯ ಇಂಗಾಲ ಹೊರಸೂಸುವಿಕೆ) ಮಾಡುವ ಗುರಿಗೆ ಪೂರಕವಾಗಿದೆ.

## 'ಭಾರತಾಂಬೆ' ಹೆಸರಿನಲ್ಲಿ ಪ್ರಮಾಣವಚನ ಸ್ವೀಕಾರ ಅಮಾನ್ಯ: ಕೇರಳ ಹೈಕೋರ್ಟ್ ಮಹತ್ವದ ತೀರ್ಪು




➤ ತಿರುವನಂತಪುರಂ: ಸ್ಥಳೀಯ ಸಂಸ್ಥೆಗಳಿಗೆ ಚುನಾಯಿತರಾದ ಜನಪ್ರತಿನಿಧಿಗಳು ಕಾನೂನಿನ ಅಡಿಯಲ್ಲಿ ಸೂಚಿಸಿದ ನಿಯಮಾವಳಿಗಳಂತೆಯೇ ಪ್ರಮಾಣವಚನ ಸ್ವೀಕರಿಸಬೇಕು ಎಂದು ಕೇರಳ ಹೈಕೋರ್ಟ್ ಮಹತ್ವದ ತೀರ್ಪು ನೀಡಿದೆ. ಇದೇ ವೇಳೆ, ತಿರುವನಂತಪುರಂ ಕಾರ್ಪೊರೇಷನ್‌ನಲ್ಲಿ 'ಭಾರತಾಂಬೆ' ಅಥವಾ 'ಭಾರತ ಮಾತಾ' ಹಾಗೂ ವಿವಿಧ ಸ್ಥಳೀಯ ದೇವತೆಗಳ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದ್ದ ಬಿಜೆಪಿಯ 20 ಕೌನ್ಸಿಲರ್‌ಗಳ ಪ್ರಮಾಣವಚನವನ್ನು ನ್ಯಾಯಾಲಯವು ಅಮಾನ್ಯಗೊಳಿಸಿ ಆದೇಶ ಹೊರಡಿಸಿದೆ.

➤ ಕಾನೂನಿನ ಚೌಕಟ್ಟಿನಲ್ಲೇ ಇರಬೇಕು ಪ್ರಮಾಣವಚನ: ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಪಿ.ವಿ. ಕುನ್ನಿಕೃಷ್ಣನ್ ಅವರಿದ್ದ ಏಕಸದಸ್ಯ ಪೀಠವು, "ಕೇರಳ ಪುರಸಭೆ ಕಾಯಿದೆ, 1994 ಮತ್ತು ಕೇರಳ ಪಂಚಾಯತ್ ರಾಜ್ ಕಾಯಿದೆಯಡಿ ಚುನಾಯಿತರಾದ ಸದಸ್ಯರು ಕಡ್ಡಾಯವಾಗಿ 'ದೇವರ ಹೆಸರಿನಲ್ಲಿ' (In the name of God) ಅಥವಾ 'ದೃಢೀಕರಣದ' (Solemn affirmation) ಮೂಲಕ ಮಾತ್ರ ಪ್ರಮಾಣವಚನ ಸ್ವೀಕರಿಸಬೇಕು" ಎಂದು ಸ್ಪಷ್ಟಪಡಿಸಿದೆ.

**➤ ನ್ಯಾಯಾಲಯದ ಪ್ರಮುಖ ಅವಲೋಕನ:** "ಪ್ರಜಾಪ್ರಭುತ್ವದಲ್ಲಿ ಜನಪ್ರತಿನಿಧಿಯೊಬ್ಬರು ಪ್ರಮಾಣವಚನ ಸ್ವೀಕರಿಸುವುದೆಂದರೆ, ತಾವು ಸಂವಿಧಾನಕ್ಕೆ ಬದ್ಧರಾಗಿ, ಕಾನೂನಿನ ಚೌಕಟ್ಟಿನಲ್ಲಿ ಪ್ರಾಮಾಣಿಕವಾಗಿ ಜನಸೇವೆ ಮಾಡುವುದಾಗಿ ಮತದಾರರಿಗೆ ನೀಡುವ ಗಂಭೀರ ಭರವಸೆಯಾಗಿದೆ. ಭಾರತದಲ್ಲಿ ಪ್ರತಿಯೊಬ್ಬ ನಾಗರಿಕನಿಗೂ ತಮಗಿಷ್ಟ ಬಂದ ದೇವರನ್ನು

ಪೂಜಿಸುವ ಅಥವಾ ಧರ್ಮವನ್ನು ಅನುಸರಿಸುವ ಸ್ವಾತಂತ್ರ್ಯವಿದೆ. ಆದರೆ, ಸಾರ್ವಜನಿಕ ಪದಗ್ರಹಣದ ಪ್ರಕ್ರಿಯೆಯು ಸಂಪೂರ್ಣವಾಗಿ ಶಾಸನಬದ್ಧವಾಗಿಯೇ ನಡೆಯಬೇಕು. ಇಲ್ಲಿ ದೇವರ ಹೆಸರನ್ನು ಸ್ವಂತ ಇಚ್ಛೆಯಂತೆ ವಿಸ್ತರಿಸಲು (Expansion of God) ಕಾನೂನಿನಲ್ಲಿ ಅವಕಾಶವಿಲ್ಲ."

➤ ಮರು ಪ್ರಮಾಣವಚನಕ್ಕೆ ಆದೇಶ — ಚುನಾವಣೆ ರದ್ದತಿ ಇಲ್ಲ: ಪ್ರಮಾಣವಚನ ಪ್ರಕ್ರಿಯೆಯಲ್ಲಿ ಲೋಪವಾಗಿರುವುದರಿಂದ ಕೌನ್ಸಿಲರ್‌ಗಳ ಆಯ್ಕೆಯನ್ನೇ ರದ್ದುಗೊಳಿಸಬೇಕು ಎಂದು ಅರ್ಜಿದಾರರು ಕೋರಿದ್ದರು. ಆದರೆ ಇದನ್ನು ನಿರಾಕರಿಸಿದ ನ್ಯಾಯಾಲಯ, "ಪ್ರಜಾಪ್ರಭುತ್ವದಲ್ಲಿ ಜನರ ಆದೇಶ (ಮತ) ಸರ್ವೋಚ್ಚವಾದುದು. ಕೇವಲ ಪ್ರಮಾಣವಚನದ ತಾಂತ್ರಿಕ ತಪ್ಪಿಗಾಗಿ ಚುನಾವಣೆಯನ್ನು ರದ್ದುಗೊಳಿಸಲು ಸಾಧ್ಯವಿಲ್ಲ" ಎಂದು ಹೇಳಿ, ಮುಂದಿನ 4 ವಾರಗಳ ಒಳಗಾಗಿ ಕಾನೂನುಬದ್ಧ ನಮೂನೆಯಲ್ಲಿ ಮರು ಪ್ರಮಾಣವಚನ ಸ್ವೀಕರಿಸುವಂತೆ ಸೂಚಿಸಿದೆ. ನ್ಯಾಯಾಲಯದ ಆದೇಶದ ಬೆನ್ನಲ್ಲೇ ಈಗಾಗಲೇ 19 ಕೌನ್ಸಿಲರ್‌ಗಳು ನಿಯಮಾನುಸಾರ ಮರು ಪ್ರಮಾಣವಚನ ಸ್ವೀಕರಿಸಿದ್ದಾರೆ.

## ಜಾಗತಿಕ ರಕ್ಷಣಾ ಮಾರುಕಟ್ಟೆಯಲ್ಲಿ ಬ್ರಹ್ಮೋಸ್ ಅಬ್ಬರ: ಭಾರತದ ರಕ್ಷಣಾ ರಫ್ತಿನಲ್ಲಿ ಹೊಸ ದಾಖಲೆ!



➤ ಭಾರತ ಮತ್ತು ರಷ್ಯಾ ಜಂಟಿಯಾಗಿ ಅಭಿವೃದ್ಧಿಪಡಿಸಿರುವ, ವಿಶ್ವದ ಅತ್ಯಂತ ವೇಗದ ಸೂಪರ್‌ಸಾನಿಕ್ ಕ್ರೂಸ್ ಕ್ಷಿಪಣಿಯಾದ 'ಬ್ರಹ್ಮೋಸ್' (BrahMos) ಇತ್ತೀಚಿನ ದಿನಗಳಲ್ಲಿ ಜಾಗತಿಕ ರಕ್ಷಣಾ ಮಾರುಕಟ್ಟೆಯಲ್ಲಿ ಹೊಸ ಇತಿಹಾಸ ಬರೆಯುತ್ತಿದೆ. ಭಾರತ ಸರ್ಕಾರದ 'ಆತ್ಮನಿರ್ಭರ ಭಾರತ' ಮತ್ತು ರಕ್ಷಣಾ ರಫ್ತು ಉತ್ತೇಜನ ನೀತಿಯ (Defence Export Promotion Policy) ಯಶಸ್ಸಿನಿಂದಾಗಿ, ಆಗ್ನೇಯ ಏಷ್ಯಾ ಮತ್ತು ಮಧ್ಯಪ್ರಾಚ್ಯ ರಾಷ್ಟ್ರಗಳಿಂದ ಈ ಕ್ಷಿಪಣಿ ವ್ಯವಸ್ಥೆಗೆ ಭಾರೀ ಬೇಡಿಕೆ ಹರಿದುಬರುತ್ತಿದೆ.

➤ ವಿಯೆಟ್ನಾಂ ಜೊತೆ ಐತಿಹಾಸಿಕ ರಕ್ಷಣಾ ಒಪ್ಪಂದ: ಸಿಂಗಾಪುರದಲ್ಲಿ ಇತ್ತೀಚೆಗೆ ನಡೆದ ಪ್ರತಿಷ್ಠಿತ ಜಾಗತಿಕ ಸುರಕ್ಷತಾ ಶೃಂಗಸಭೆಯಾದ ಶಾಂಗ್ರಿ-ಲಾ ಡೈಲಾಗ್‌ನಲ್ಲಿ (Shangri-La Dialogue) ಭಾರತದ ರಕ್ಷಣಾ ಕಾರ್ಯದರ್ಶಿ ರಾಜೇಶ್ ಕುಮಾರ್ ಸಿಂಗ್ ಅವರು ಮಹತ್ವದ ಪ್ರಕಟಣೆಯೊಂದನ್ನು ಹೊರಡಿಸಿದ್ದಾರೆ. ಭಾರತವು ವಿಯೆಟ್ನಾಂ ದೇಶದೊಂದಿಗೆ ಸುಮಾರು 629 ಮಿಲಿಯನ್ ಡಾಲರ್ (ಅಂದಾಜು 5,200 ಕೋಟಿ ರೂಪಾಯಿಗೂ ಅಧಿಕ) ಮೌಲ್ಯದ ಬೃಹತ್ ಬ್ರಹ್ಮೋಸ್ ಕ್ಷಿಪಣಿ ಒಪ್ಪಂದಕ್ಕೆ ಸಹಿ ಹಾಕಿದೆ.

➤ ಮಧ್ಯಪ್ರಾಚ್ಯ (Middle East) ಮಾರುಕಟ್ಟೆಗೂ ವಿಸ್ತರಣೆ: ಅಮೆರಿಕಾದಿಂದ ಅತಿ ಹೆಚ್ಚು ಶಸ್ತ್ರಾಸ್ತ್ರ ಖರೀದಿಸುವ ಮತ್ತು ಕೊಲ್ಲಿ ಪ್ರದೇಶದ ಪ್ರಮುಖ ರಾಷ್ಟ್ರವಾದ ಅರಬ್ ಸಂಯುಕ್ತ ಸಂಸ್ಥಾನ (UAE) ಭಾರತದ ಅತ್ಯಾಧುನಿಕ ರಕ್ಷಣಾ ವ್ಯವಸ್ಥೆಗಳಾದ 'ಬ್ರಹ್ಮೋಸ್' ಸೂಪರ್‌ಸಾನಿಕ್ ಕ್ರೂಸ್ ಕ್ಷಿಪಣಿ ಹಾಗೂ 'ಆಕಾಶತೀರ' (Akashteer) ವಾಯು ರಕ್ಷಣಾ ವ್ಯವಸ್ಥೆಯನ್ನು ಖರೀದಿಸಲು ಮುಂದೆ ಬಂದಿದೆ. ಈ ಕುರಿತು ಉಭಯ ದೇಶಗಳ ನಡುವೆ ಮಾತುಕತೆಗಳು ಅಂತಿಮ ಹಂತದಲ್ಲಿದ್ದು, ಈ ಒಪ್ಪಂದ ಪೂರ್ಣಗೊಂಡರೆ ಕೊಲ್ಲಿ ದೇಶವೊಂದಕ್ಕೆ ಭಾರತದ ಮೊದಲ 'ಬ್ರಹ್ಮೋಸ್' ರಫ್ತು ಇದಾಗಲಿದೆ.

➤ ಜಾಗತಿಕ ರೇಸ್‌ನಲ್ಲಿರುವ ಇತರ ದೇಶಗಳು: ಫಿಲಿಪ್ಪೀನ್ಸ್ (ಈಗಾಗಲೇ ಒಪ್ಪಂದ ಮಾಡಿಕೊಂಡಿದೆ), ವಿಯೆಟ್ನಾಂ ಮತ್ತು ಇಂಡೋನೇಷ್ಯಾ ದೇಶಗಳ ಯಶಸ್ವಿ ಒಪ್ಪಂದಗಳನ್ನು ಗಮನಿಸುತ್ತಿರುವ ಆಗ್ನೇಯ ಏಷ್ಯಾದ ಇತರ ರಾಷ್ಟ್ರಗಳಾದ ಮಲೇಷ್ಯಾ ಮತ್ತು ಥಾಯ್ಲೆಂಡ್ ಕೂಡ ಬ್ರಹ್ಮೋಸ್ ಖರೀದಿಸಲು ಭಾರತದೊಂದಿಗೆ ಪ್ರಾಥಮಿಕ ಮಾತುಕತೆಗಳನ್ನು ಆರಂಭಿಸಿವೆ. ಇದರ ಜೊತೆಗೆ ಶ್ರೀಮಂತ ಮಧ್ಯಪ್ರಾಚ್ಯ ರಾಷ್ಟ್ರವಾದ ಸೌದಿ ಅರೇಬಿಯಾ ಕೂಡ ತನ್ನ ರಕ್ಷಣಾ ಪಡೆಗೆ ಈ ಕ್ಷಿಪಣಿ ವ್ಯವಸ್ಥೆಯನ್ನು ಸೇರಿಸಿಕೊಳ್ಳಲು ಹೆಚ್ಚಿನ ಆಸಕ್ತಿ ವಹಿಸಿದೆ.

➤ ನೆಕ್ಸ್ಟ್ ಜನರೇಷನ್ ಬ್ರಹ್ಮೋಸ್ (BrahMos-NG) ಅಭಿವೃದ್ಧಿತಾಂತ್ರಿಕ ಪ್ರಗತಿಯ ಭಾಗವಾಗಿ, ಬ್ರಹ್ಮೋಸ್‌ನ ಮುಂದಿನ ಪೀಳಿಗೆಯ ಆವೃತ್ತಿಯಾದ 'ಬ್ರಹ್ಮೋಸ್-ಎನ್‌ಜಿ' (BrahMos-NG) ಅಭಿವೃದ್ಧಿ ಕಾರ್ಯವು ಅಂತಿಮ ಹಂತದಲ್ಲಿದೆ.

ವೈಶಿಷ್ಟ್ಯಗಳು: ಈ ಹೊಸ ಆವೃತ್ತಿಯು ಪ್ರಸ್ತುತ ಇರುವ ಕ್ಷಿಪಣಿಗಿಂತ ಶೇಕಡಾ 50ರಷ್ಟು ಹಗುರ ಮತ್ತು ಗಾತ್ರದಲ್ಲಿ ಚಿಕ್ಕದಾಗಿರಲಿದೆ.

ಬಳಕೆ: ತೂಕ ಕಡಿಮೆಯಿರುವುದರಿಂದ ಇದನ್ನು ಭಾರತದ ಹೆಮ್ಮೆಯ ಲಘು ಯುದ್ಧ ವಿಮಾನವಾದ ತೇಜಸ್ (LCA Tejas) ಮತ್ತು ಸುಖೋಯ್-30 MKI ಯುದ್ಧ ವಿಮಾನಗಳಲ್ಲಿ ಸುಲಭವಾಗಿ ಅಳವಡಿಸಬಹುದಾಗಿದೆ. ಇದು ಅತ್ಯಂತ ವೇಗವಾಗಿ, ಶತ್ರುಗಳ ರಾಡಾರ್ ಕಣ್ಣಿಗೆ ಬೀಳದೆ ದಾಳಿ ಮಾಡುವ 'ಸ್ಟೆಲ್ತ್' ಸಾಮರ್ಥ್ಯವನ್ನು ವಾಯುಪಡೆಗೆ ನೀಡುತ್ತದೆ.

## ಪ್ರಧಾನಿ ಮೋದಿಗೆ ಸೀಶೆಲ್ಸ್ ದೇಶದ ಅತ್ಯುನ್ನತ 'ಗಾರ್ಡಿಯನ್ ಆಫ್ ದಿ ಬ್ಲೂ ಹೊರೈಜನ್' ಪ್ರಶಸ್ತಿ ಗೌರವ!




➤ ಪ್ರಧಾನಿ ನರೇಂದ್ರ ಮೋದಿ ಅವರು 2026ರ ಜೂನ್ 27 ರಿಂದ ಜೂನ್ 29 ರವರೆಗೆ ಸೀಶೆಲ್ಸ್ ದೇಶಕ್ಕೆ 3 ದಿನಗಳ ಐತಿಹಾಸಿಕ ಪ್ರವಾಸ ಹಮ್ಮಿಕೊಂಡಿದ್ದಾರೆ. ಪರಿಸರ ಸಂರಕ್ಷಣೆ, ಸುಸ್ಥಿರ ಅಭಿವೃದ್ಧಿ (Sustainable Development) ಮತ್ತು ಹಸಿರು ಬೆಳವಣಿಗೆಗೆ ಪ್ರಧಾನಿ ನರೇಂದ್ರ ಮೋದಿ ಅವರು ನೀಡಿದ ಗಮನಾರ್ಹ ಕೊಡುಗೆಯನ್ನು ಶ್ಲಾಘಿಸಿ, 2026ರ ಜೂನ್ 28ರ ಭಾನುವಾರದಂದು ಸೀಶೆಲ್ಸ್ ದೇಶವು ತನ್ನ ಅತ್ಯುನ್ನತ ಪ್ರಶಸ್ತಿಯಾದ 'ಗಾರ್ಡಿಯನ್ ಆಫ್ ದಿ ಬ್ಲೂ ಹೊರೈಜನ್' ನೀಡಿ ಗೌರವಿಸಿದೆ. ಇದು ಪ್ರಧಾನಿ ಮೋದಿಯವರು ವಿದೇಶಗಳಿಂದ ಪಡೆದ 34ನೇ ಅಂತರರಾಷ್ಟ್ರೀಯ ಗೌರವವಾಗಿದೆ.

➤ ಸೀಶೆಲ್ಸ್ ರಾಷ್ಟ್ರೀಯ ದಿನದ ಸುವರ್ಣ ಮಹೋತ್ಸವ: ಸೀಶೆಲ್ಸ್ ದೇಶವು ಬ್ರಿಟನ್‌ನಿಂದ ಸ್ವಾತಂತ್ರ್ಯ ಪಡೆದ (1976) ನೆನಪಿಗಾಗಿ ಆಚರಿಸಲಾಗುತ್ತಿರುವ ರಾಷ್ಟ್ರೀಯ ದಿನದ ಸುವರ್ಣ ಮಹೋತ್ಸವ (50ನೇ ವರ್ಷದ ಆಚರಣೆ) ಕಾರ್ಯಕ್ರಮದಲ್ಲಿ ಜೂನ್ 29ರ ಸೋಮವಾರದಂದು ಪ್ರಧಾನಿ ಮೋದಿ ಅವರು ಮುಖ್ಯ ಅತಿಥಿಯಾಗಿ (Guest of Honour) ಪಾಲ್ಗೊಂಡಿದ್ದಾರೆ. ಇದು ಭಾರತ ಮತ್ತು ಸೀಶೆಲ್ಸ್ ನಡುವಿನ ರಾಜತಾಂತ್ರಿಕ ಬಾಂಧವ್ಯದ 50ನೇ ವರ್ಷದ ಸಂಭ್ರಮವೂ ಆಗಿದೆ.

➤ ತಮ್ಮ ಪ್ರವಾಸದ ಎರಡನೇ ದಿನವಾದ ಜೂನ್ 28 ರಂದು ಪ್ರಧಾನಿ ಮೋದಿ ಅವರು ಸೀಶೆಲ್ಸ್ ದೇಶದ ರಾಷ್ಟ್ರೀಯ ಅಸೆಂಬ್ಲಿಯನ್ನು (National Assembly) ಉದ್ದೇಶಿಸಿ ಮಾತನಾಡಿದರು. ಈ ಮೂಲಕ ಸೀಶೆಲ್ಸ್ ಸಂಸತ್ತನ್ನು ಉದ್ದೇಶಿಸಿ ಮಾತನಾಡಿದ ಮೊದಲ ಭಾರತೀಯ ಪ್ರಧಾನಿ ಎಂಬ ಐತಿಹಾಸಿಕ ಹೆಗ್ಗಳಿಕೆಗೆ ನರೇಂದ್ರ ಮೋದಿ ಪಾತ್ರರಾಗಿದ್ದಾರೆ.

**➤ ರಕ್ಷಣಾ ಮತ್ತು ಕಡಲ ಪಾಲುದಾರಿಕೆ ಬಲವರ್ಧನೆ (ಜೂನ್ 27, 2026):** ಹಿಂದೂ ಮಹಾಸಾಗರ ಪ್ರದೇಶದಲ್ಲಿ (Indian Ocean Region) ಸುರಕ್ಷತೆ, ಶಾಂತಿ ಮತ್ತು ಸಮೃದ್ಧಿಯನ್ನು ವೃದ್ಧಿಸುವ ಭಾರತದ 'SAGAR/MAHASAGAR' ದೃಷ್ಟಿಕೋನಕ್ಕೆ ಈ ಭೇಟಿ ಮತ್ತಷ್ಟು ವೇಗ ನೀಡಿದೆ. ಪ್ರವಾಸದ ಮೊದಲ ದಿನವಾದ ಜೂನ್ 27 ರಂದು ಭಾರತವು ಸೀಶೆಲ್ಸ್‌ಗೆ ಈ ಕೆಳಗಿನ ರಕ್ಷಣಾ ಹಾಗೂ ವೈದ್ಯಕೀಯ ನೆರವನ್ನು ಹಸ್ತಾಂತರಿಸಿದೆ:

ಪಿಎಸ್ ಲೆಸ್‌ಗ್ವಾರ್ (PS Lespwar): ಗೋವಾ ಶಿಪ್‌ಯಾರ್ಡ್ ಲಿಮಿಟೆಡ್ ನಿರ್ಮಿಸಿದ ಭಾರತದಲ್ಲೇ ತಯಾರಿಸಿದ ಅತ್ಯಾಧುನಿಕ ಗಸ್ತು ನೌಕೆಯನ್ನು ಸೀಶೆಲ್ಸ್‌ಗೆ ಹಸ್ತಾಂತರಿಸಲಾಗಿದೆ.
ಉಡುಗೊರೆಗಳು: ಇದರೊಂದಿಗೆ 6 ಆಂಬ್ಯುಲೆನ್ಸ್‌ಗಳು, 10 ಯುಟಿಲಿಟಿ ವಾಹನಗಳು ಮತ್ತು 5 ಲೇಸರ್ ಬೋಟ್‌ಗಳನ್ನು ಉಡುಗೊರೆಯಾಗಿ ನೀಡಲಾಗಿದೆ.

## ಜಾಗತಿಕ ವಿಶ್ವಾಸ ಶ್ರೇಯಾಂಕ 2026: ಅಮೆರಿಕ, ಚೀನಾವನ್ನು ಹಿಂದಿಕ್ಕಿ ಅಗ್ರಸ್ಥಾನಕ್ಕೇರಿದ ಭಾರತ!




➤ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಭಾರತದ ಜಾಗತಿಕ ರಾಜತಾಂತ್ರಿಕತೆಗೆ ಮತ್ತೊಂದು ದೊಡ್ಡ ಯಶಸ್ಸು ಸಿಕ್ಕಿದೆ. ಆಸ್ಟ್ರೇಲಿಯಾದ ಪ್ರಸಿದ್ಧ ಚಿಂತಕರ ಚಾವಡಿ (Think-Tank) ಆಗಿರುವ 'ಲೋವಿ ಇನ್‌ಸ್ಟಿಟ್ಯೂಟ್' (Lowy Institute) ಇತ್ತೀಚೆಗೆ ನಡೆಸಿದ ಜಾಗತಿಕ ಸಮೀಕ್ಷೆಯಲ್ಲಿ, ವಿಶ್ವದ ಅತ್ಯಂತ ನಂಬಲರ್ಹ ದೇಶಗಳ ಪಟ್ಟಿಯಲ್ಲಿ ಭಾರತವು ಅಮೆರಿಕ, ಚೀನಾ ಮತ್ತು ರಷ್ಯಾದಂತಹ ಜಗತ್ತಿನ ಪ್ರಬಲ ರಾಷ್ಟ್ರಗಳನ್ನು ಹಿಂದಿಕ್ಕಿ ಪ್ರಥಮ ಸ್ಥಾನ ಪಡೆದುಕೊಂಡಿದೆ.
➤ ವಿಶ್ವದಲ್ಲೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯಾಗಿ ಹೊರಹೊಮ್ಮುತ್ತಿರುವ ಭಾರತದ ಮೇಲಿನ ಜಾಗತಿಕ ವಿಶ್ವಾಸಾರ್ಹತೆ ಈಗ ದುಪ್ಪಟ್ಟಾಗಿದೆ ಎಂಬುದನ್ನು ಈ ಸಮೀಕ್ಷೆ ಸಾಬೀತುಪಡಿಸಿದೆ.
➤ ಲೋವಿ ಇನ್‌ಸ್ಟಿಟ್ಯೂಟ್ ಸಮೀಕ್ಷೆಯ ಪ್ರಮುಖ ಮುಖ್ಯಾಂಶಗಳು: ಜೂನ್ 23, 2026 ರಂದು ಬಿಡುಗಡೆಯಾದ ಅಧಿಕೃತ ಅಂಕಿ-ಅಂಶಗಳ ಪ್ರಕಾರ, ಜಾಗತಿಕವಾಗಿ ಜವಾಬ್ದಾರಿಯುತವಾಗಿ ವರ್ತಿಸುವ ದೇಶಗಳ ಪಟ್ಟಿಯಲ್ಲಿ ಆಸ್ಟ್ರೇಲಿಯಾದ ಜನತೆ ಭಾರತದ ಮೇಲೆ ಅಪಾರ ನಂಬಿಕೆ ವ್ಯಕ್ತಪಡಿಸಿದ್ದಾರೆ.
ಭಾರತಕ್ಕೆ ಪ್ರಥಮ ಸ್ಥಾನ: ಸಮೀಕ್ಷೆಯಲ್ಲಿ ಭಾಗವಹಿಸಿದ್ದ ಶೇ. 50 ರಷ್ಟು ಆಸ್ಟ್ರೇಲಿಯನ್ನರು ಭಾರತವನ್ನು ಅತ್ಯಂತ ನಂಬಿಕಸ್ಥ ದೇಶ ಎಂದು ಒಪ್ಪಿಕೊಂಡಿದ್ದಾರೆ.
ಅಮೆರಿಕಕ್ಕೆ ಭಾರಿ ಹಿನ್ನಡೆ: ಕೇವಲ ಶೇ. 31 ರಷ್ಟು ಜನ ಮಾತ್ರ ಅಮೆರಿಕದ ಮೇಲೆ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಲೋವಿ ಇನ್‌ಸ್ಟಿಟ್ಯೂಟ್ ಇತಿಹಾಸದಲ್ಲೇ ಅಮೆರಿಕದ ಮೇಲಿನ ಜಾಗತಿಕ ವಿಶ್ವಾಸ ಇಷ್ಟೊಂದು ಕುಸಿದಿರುವುದು ಇದೇ ಮೊದಲು.
ಚೀನಾ ಮತ್ತು ರಷ್ಯಾ: ಶೇ. 28 ರಷ್ಟು ಜನ ಚೀನಾ ದೇಶವನ್ನು ಹಾಗೂ ಕೇವಲ ಶೇ. 11 ರಷ್ಟು ಜನ ರಷ್ಯಾವನ್ನು ನಂಬಬಹುದು ಎಂದು ತಿಳಿಸಿದ್ದಾರೆ.
ಜವಾಬ್ದಾರಿಯುತ ದೇಶ: ಜಾಗತಿಕ ವಿದ್ಯಮಾನಗಳಲ್ಲಿ ಭಾರತವು ಅತ್ಯಂತ ಜವಾಬ್ದಾರಿಯುತವಾಗಿ ವರ್ತಿಸುತ್ತದೆ ಎಂದು ಶೇ. 46 ರಷ್ಟು ಜನರು ಮುಕ್ತವಾಗಿ ಶ್ಲಾಘಿಸಿದ್ದಾರೆ.
➤ ಪ್ರಧಾನಿ ನರೇಂದ್ರ ಮೋದಿ ಅವರ ಜಾಗತಿಕ ನಾಯಕತ್ವಕ್ಕೆ ಮನ್ನಣೆ: ಕಳೆದ 12 ವರ್ಷಗಳಿಂದ ಸತತವಾಗಿ ಭಾರತದ ಪ್ರಧಾನಿಯಾಗಿ ಆಡಳಿತ ನಡೆಸುತ್ತಿರುವ ನರೇಂದ್ರ ಮೋದಿ ಅವರ ಜನಪ್ರಿಯತೆ ಜಾಗತಿಕ ಮಟ್ಟದಲ್ಲಿ ಮತ್ತಷ್ಟು ಉತ್ತುಂಗಕ್ಕೇರಿದೆ. ಅಮೆರಿಕದ ಡೊನಾಲ್ಡ್ ಟ್ರಂಪ್, ಚೀನಾದ ಷಿ ಜಿನ್‌ಪಿಂಗ್ ಹಾಗೂ ರಷ್ಯಾದ ವ್ಲಾಡಿಮಿರ್ ಪುಟಿನ್ ಅವರಂತಹ ಪ್ರಭಾವಿ ಜಾಗತಿಕ ನಾಯಕರಿಗಿಂತಲೂ ಪ್ರಧಾನಿ ಮೋದಿ ನೇತೃತ್ವದ ಭಾರತ ಸರ್ಕಾರದ ನೀತಿಗಳಿಗೆ ಜಾಗತಿಕ ಮನ್ನಣೆ ಸಿಕ್ಕಿದೆ.
➤ ಮಾರ್ನಿಂಗ್ ಕನ್ಸಲ್ಟ್ (Morning Consult) ಸಂಸ್ಥೆಯ ಜಾಗತಿಕ ನಾಯಕರ ಅನುಮೋದನೆ ರೇಟಿಂಗ್‌ನಲ್ಲೂ ಪ್ರಧಾನಿ ಮೋದಿ ಶೇ. 75 ರಷ್ಟು ರೇಟಿಂಗ್‌ನೊಂದಿಗೆ ಸತತವಾಗಿ ಅಗ್ರಸ್ಥಾನ ಕಾಯ್ದುಕೊಂಡಿರುವುದನ್ನು ಇಲ್ಲಿ ಸ್ಮರಿಸಬಹುದು.






## ಭಾರತದ ಮೊದಲ ಖಾಸಗಿ ಚಿನ್ನದ ಗಣಿ 'ಜೊನ್ನಗಿರಿ' ಆರಂಭ



➤ ಭಾರತದ ಗಣಿಗಾರಿಕೆ ಇತಿಹಾಸದಲ್ಲೇ ಅತ್ಯಂತ ಪ್ರಮುಖ ಮೈಲಿಗಲ್ಲೊಂದು ದಾಖಲಾಗಿದೆ. ಸ್ವಾತಂತ್ರ್ಯದ ನಂತರ ದೇಶದಲ್ಲೇ ಮೊದಲ ಬಾರಿಗೆ ವಾಣಿಜ್ಯ ಮಟ್ಟದ ಬೃಹತ್ ಖಾಸಗಿ ಚಿನ್ನದ ಗಣಿ ಮತ್ತು ಸಂಸ್ಕರಣಾ ಘಟಕ ಅಧಿಕೃತವಾಗಿ ತನ್ನ ಕಾರ್ಯಾಚರಣೆಯನ್ನು ಆರಂಭಿಸಿದೆ. ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆಯ ತುಗ್ಗಲಿ ಮಂಡಲಕ್ಕೆ ಒಳಪಡುವ ಜೊನ್ನಗಿರಿ (Jonnagiri) ಎಂಬಲ್ಲಿ ಈ ಐತಿಹಾಸಿಕ ಯೋಜನೆಗೆ ಚಾಲನೆ ನೀಡಲಾಗಿದೆ.
➤ ಜಿಯೋ ಮೈಸೂರು ಸರ್ವೀಸಸ್ ಮತ್ತು ಡೆಕ್ಕನ್ ಗೋಲ್ಡ್ ಮೈನ್ಸ್ ಲಿಮಿಟೆಡ್ ಜಂಟಿಯಾಗಿ ₹405 ಕೋಟಿಗೂ ಅಧಿಕ ವೆಚ್ಚದಲ್ಲಿ ಅಭಿವೃದ್ಧಿಪಡಿಸಿರುವ, 13.1 ಟನ್ ಚಿನ್ನದ ಅದಿರಿನ ನಿಕ್ಷೇಪ ಹೊಂದಿರುವ 598 ಹೆಕ್ಟೇರ್ ವಿಸ್ತೀರ್ಣದ ಈ ಗಣಿಯು ಮುಂದಿನ 15 ವರ್ಷಗಳ ಕಾಲ ಸಕ್ರಿಯವಾಗಿರಲಿದ್ದು, ಮೊದಲ ವರ್ಷ 400 ಕೆ.ಜಿ ಚಿನ್ನ ಉತ್ಪಾದಿಸಿ ಹಂತಹಂತವಾಗಿ ವಾರ್ಷಿಕ 1 ರಿಂದ 2 ಟನ್‌ಗೆ ಹೆಚ್ಚಿಸುವ ಗುರಿ ಹೊಂದಿದೆ.
➤ **'ಜೊನ್ನಗಿರಿ' ಇನ್ನುಂದೆ 'ಸ್ವರ್ಣಗಿರಿ':** ಈ ಯೋಜನೆಯ ಉದ್ಘಾಟನೆ ನೆರವೇರಿಸಿದ ಆಂಧ್ರಪ್ರದೇಶದ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಅವರು ಜೊನ್ನಗಿರಿ ಗ್ರಾಮವನ್ನು ಇನ್ನುಂದೆ 'ಸ್ವರ್ಣಗಿರಿ' ಎಂದು ಮರುನಾಮಕರಣ ಮಾಡುವುದಾಗಿ ಘೋಷಿಸಿದ್ದಾರೆ.
➤ ಮೌರ್ಯ ಸಾಮ್ರಾಜ್ಯದ ಪ್ರಸಿದ್ಧ ದೊರೆ ಸಾಮ್ರಾಟ್ ಅಶೋಕನ ಕಾಲದಲ್ಲೂ (ಕ್ರಿ.ಪೂ. 3ನೇ ಶತಮಾನ) ಈ ಪ್ರದೇಶವು ಚಿನ್ನದ ಪ್ರಮುಖ ಉತ್ಪಾದನಾ ಕೇಂದ್ರವಾಗಿತ್ತು. ಅಶೋಕನ ಶಾಸನಗಳು ದೊರೆತಿರುವ ಇಲ್ಲಿನ 'ಎರ್ರಗುಡಿ' ಸಮೀಪದ ಪ್ರದೇಶವನ್ನು ಆ ಕಾಲದಲ್ಲಿ 'ಸುವರ್ಣಗಿರಿ' ಎಂದೇ ಕರೆಯಲಾಗುತ್ತಿತ್ತು.

ವಿಜಯನಗರ ಸಾಮ್ರಾಜ್ಯದ ಶ್ರೀಕೃಷ್ಣದೇವರಾಯನ ಕಾಲದಲ್ಲೂ ಈ ಭಾಗವು ರತ್ನ ಹಾಗೂ ಖನಿಜಗಳ ವ್ಯಾಪಾರಕ್ಕೆ ಪ್ರಸಿದ್ಧವಾಗಿತ್ತು.

## ಅಮೆರಿಕ-ಇರಾನ್ ಸಂಘರ್ಷ: ಹರ್ಮುಜ್ ಜಲಸಂಧಿಯಲ್ಲಿ ಉದ್ವಿಗ್ನತೆ, ಕಚ್ಚಾತೈಲ ಬೆಲೆ ಏರಿಕೆ ಭೀತಿ!



➤ ಜಾಗತಿಕ ಇಂಧನ ಪೂರೈಕೆಯ ಪ್ರಮುಖ ಕೇಂದ್ರವಾಗಿರುವ ಮಧ್ಯಪ್ರಾಚ್ಯದ ಹರ್ಮುಜ್ ಜಲಸಂಧಿ (Strait of Hormuz) ಯಲ್ಲಿ ಅಮೆರಿಕ ಮತ್ತು ಇರಾನ್ ನಡುವಿನ ಸೇನಾ ಸಂಘರ್ಷ ಜೂನ್ ಮೂರನೇ ವಾರದಿಂದ ತಾರಕಕ್ಕೇರಿದೆ. ಜೂನ್ 17ರ ಕದನ ವಿರಾಮ ಒಪ್ಪಂದದ ಬೆನ್ನಲ್ಲೇ ವಾಣಿಜ್ಯ ಹಡಗಿನ ಮೇಲೆ ಇರಾನ್ ಪಡೆಗಳು ನಡೆಸಿದ ಡ್ರೋನ್ ದಾಳಿಗೆ ಪ್ರತಿಯಾಗಿ, ಅಮೆರಿಕವು ಇರಾನ್ ಕರಾವಳಿಯ ಸೇನಾ ನೆಲೆಗಳ ಮೇಲೆ ಭೀಕರ ವೈಮಾನಿಕ ದಾಳಿ ನಡೆಸಿದೆ. ಈ ಹಠಾತ್ ಬೆಳವಣಿಗೆಯಿಂದಾಗಿ ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆ ಭಾರಿ ಪ್ರಮಾಣದಲ್ಲಿ ಏರಿಕೆಯಾಗುವ ಆತಂಕ ಮೂಡಿದೆ.

➤ ಸಿಂಗಾಪುರ ಧ್ವಜದ 'ಎವರ್‌ಲವಿ' (Everlavi) ಎಂಬ ವಾಣಿಜ್ಯ ಸರಕು ಹಡಗು ಜಾಗತಿಕ ನೌಕಾಯಾನದ ನಿಗದಿತ ಮಾರ್ಗದಲ್ಲೇ ಚಲಿಸುತ್ತಿದ್ದಾಗ ಇರಾನ್ ಪಡೆಗಳು ಅದರ ಮೇಲೆ ಡ್ರೋನ್ ದಾಳಿ ನಡೆಸಿದ್ದವು. ಆದರೆ, ಈ ಹಡಗು ಅನಧಿಕೃತ ಮಾರ್ಗದಲ್ಲಿ ಚಲಿಸುತ್ತಿದ್ದ ಹಿನ್ನೆಲೆಯಲ್ಲಿ ಕ್ರಮ ಕೈಗೊಳ್ಳಲಾಗಿದೆ ಎಂದು ಇರಾನ್ ವಾದಿಸಿದೆ. ಈ ದಾಳಿಯನ್ನು ಅಂತಾರಾಷ್ಟ್ರೀಯ ನೌಕಾಯಾನ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಯತ್ನ ಎಂದು ಅಮೆರಿಕದ ಸೆಂಟ್ರಲ್ ಕಮಾಂಡ್ ತೀವ್ರವಾಗಿ ಖಂಡಿಸಿದೆ.

➤ **ಅಮೆರಿಕದ ಪ್ರತಿಹತ್ಯೆ ಮತ್ತು ಟ್ರಂಪ್ ಆಕ್ರೋಶ:** ಹಡಗಿನ ಮೇಲಿನ ದಾಳಿಗೆ ತಕ್ಕ ಪ್ರತ್ಯುತ್ತರ ನೀಡಿರುವ ಅಮೆರಿಕ ಸೇನೆ, ಇರಾನ್ ಕರಾವಳಿಯಲ್ಲಿದ್ದ ಪ್ರಮುಖ ಕ್ಷಿಪಣಿ ಮತ್ತು ಡ್ರೋನ್ ಶೇಖರಣಾ ಕೇಂದ್ರಗಳ ಮೇಲೆ ವೈಮಾನಿಕ ದಾಳಿ ನಡೆಸಿ ಧ್ವಂಸಗೊಳಿಸಿದೆ. ಈ ಕುರಿತು ಪ್ರತಿಕ್ರಿಯಿಸಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಜೂನ್ 17ರಂದು ಮಾಡಿಕೊಂಡಿದ್ದ ಕದನ ವಿರಾಮ ಒಪ್ಪಂದವನ್ನು ಇರಾನ್ 'ಮೂರ್ಖತನದಿಂದ ಉಲ್ಲಂಘಿಸಿದೆ' ಎಂದು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

➤ ಇರಾನ್ ಎಚ್ಚರಿಕೆ: ಅಮೆರಿಕದ ಈ ದಾಳಿಗೆ ಪ್ರತಿಯಾಗಿ ತಾವು ಕೂಡ ಈ ಪ್ರಾಂತ್ಯದಲ್ಲಿರುವ ಅಮೆರಿಕದ ಮಿಲಿಟರಿ ನೆಲೆಗಳ ಮೇಲೆ ಕ್ಷಿಪಣಿ ದಾಳಿ ನಡೆಸುವುದಾಗಿ ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ (IRGC) ಎಚ್ಚರಿಕೆ ನೀಡಿದೆ.

➤ **ಕಚ್ಚಾತೈಲ ಬೆಲೆಯ ಮೇಲೆ ಆಗುವ ಪರಿಣಾಮ:** ಜಾಗತಿಕ ತೈಲ ಮಾರುಕಟ್ಟೆಯ ತಜ್ಞರ ಪ್ರಕಾರ, ಈ ಉದ್ವಿಗ್ನತೆಯಿಂದಾಗಿ ಜಾಗತಿಕವಾಗಿ ಕಚ್ಚಾತೈಲದ ಬೆಲೆಗಳು ಭಾರಿ ಪ್ರಮಾಣದಲ್ಲಿ ಏರಿಕೆಯಾಗುವ ಸಾಧ್ಯತೆ ಇದೆ. ಜಾಗತಿಕ ತೈಲ ಸಾಗಣೆಯ ಸುಮಾರು ಶೇ. 20 ಕ್ಕಿಂತ ಹೆಚ್ಚು ಭಾಗ ಹರ್ಮುಜ್ ಜಲಸಂಧಿಯ ಮೂಲಕವೇ ಹಾದುಹೋಗುವುದರಿಂದ, ಇಲ್ಲಿನ ಅಸ್ಥಿರತೆಯು ನೇರವಾಗಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳ ಹೆಚ್ಚಳಕ್ಕೆ ಕಾರಣವಾಗುತ್ತದೆ.

## ಅಮೆರಿಕದಲ್ಲಿ ಐಐಟಿ ಬಾಂಬೆ ಹೊಸ ಸಬ್‌ಕ್ಯಾಂಪಸ್




➤ ಭಾರತದ ಪ್ರತಿಷ್ಠಿತ ತಂತ್ರಜ್ಞಾನ ಸಂಸ್ಥೆಯಾದ ಐಐಟಿ ಬಾಂಬೆ (IIT Bombay), ಜಾಗತಿಕ ಮಟ್ಟದಲ್ಲಿ ಹೊಸ ಮೈಲಿಗಲ್ಲು ಸ್ಥಾಪಿಸಲು ಸಜ್ಜಾಗಿದೆ. ಅಮೆರಿಕದಲ್ಲಿ ತನ್ನ ಮೊದಲ ಅಂತರರಾಷ್ಟ್ರೀಯ ಸಬ್‌ಕ್ಯಾಂಪಸ್ ಅನ್ನು ತೆರೆಯಲು ಸಂಸ್ಥೆಯು ಅಧಿಕೃತವಾಗಿ ಒಪ್ಪಂದ ಮಾಡಿಕೊಂಡಿದೆ. ನ್ಯೂಯಾರ್ಕ್‌ನ ಲಾಂಗ್ ಐಲ್ಯಾಂಡ್‌ನಲ್ಲಿರುವ 'ಸ್ಟೇಟ್ ಯೂನಿವರ್ಸಿಟಿ ಆಫ್ ನ್ಯೂಯಾರ್ಕ್' (SUNY - Old Westbury) ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಈ ಶೈಕ್ಷಣಿಕ ಕೇಂದ್ರ ಕಾರ್ಯನಿರ್ವಹಿಸಲಿದೆ.

➤ **ಮುಖ್ಯಾಂಶಗಳು ಮತ್ತು ಶೈಕ್ಷಣಿಕ ಯೋಜನೆ:**

ಆರಂಭದ ವರ್ಷ: ಈ ಜಾಗತಿಕ ಕ್ಯಾಂಪಸ್‌ನಲ್ಲಿ 2027ರಿಂದ ಮೊದಲ ಹಂತವಾಗಿ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಆರಂಭಿಸಲು ಯೋಜಿಸಲಾಗಿದೆ. ಮುಂದಿನ ದಿನಗಳಲ್ಲಿ ಪೂರ್ಣ ಪ್ರಮಾಣದ ಪದವಿ ಮತ್ತು ಸಂಶೋಧನಾ ಕಾರ್ಯಕ್ರಮಗಳನ್ನು ಜಾರಿಗೆ ತರಲಾಗುವುದು.

ಕೋರ್ಸ್‌ಗಳ ಆದ್ಯತೆ: ಇಂದಿನ ಜಾಗತಿಕ ಬೇಡಿಕೆಗೆ ತಕ್ಕ ಉದಯೋನ್ಮುಖ ವಿಜ್ಞಾನ ಕ್ಷೇತ್ರಗಳಾದ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ (AI), ಸಸ್ಟೈನಬಿಲಿಟಿ (ಸುಸ್ಥಿರತೆ) ಮತ್ತು ಕ್ಲೀನ್ ಟೆಕ್ನಾಲಜಿ (ಸ್ವಚ್ಛ ತಂತ್ರಜ್ಞಾನ) ವಿಷಯಗಳ ಬೋಧನೆಗೆ ಇಲ್ಲಿ ಆದ್ಯತೆ ನೀಡಲಾಗುತ್ತದೆ.

ಒಪ್ಪಂದದ ಪ್ರಮುಖರು: ಐಐಟಿ ಬಾಂಬೆ ನಿರ್ದೇಶಕರಾದ ಪ್ರೊ. ಶಿರೀಷ್ ಕೇದಾರೆ ಮತ್ತು SUNY ಓಲ್ಡ್ ವೆಸ್ಟ್‌ಬರಿಯ ಅಧ್ಯಕ್ಷರಾದ ಡಾ. ತಿಮೋತಿ ಇ. ಸ್ಯಾಮ್ಸ್ ಅವರ ನಡುವೆ ಈ ಒಪ್ಪಂದದ ಪತ್ರ (Letter of Intent - LoI) ಸಹಿ ಆಗಿದೆ.

➤ **ಪ್ರವೇಶಾತಿಗೆ ಜೆಇಇ ಅಡ್ವಾನ್ಸ್ಡ್ (JEE Advanced) ಅಗತ್ಯವಿಲ್ಲ:** ಈ ಕ್ಯಾಂಪಸ್‌ನ ಅತ್ಯಂತ ದೊಡ್ಡ ವಿಶೇಷತೆಯೆಂದರೆ, ಇಲ್ಲಿ ಕಲಿಯಲು ಇಚ್ಛಿಸುವ ಜಾಗತಿಕ ಮತ್ತು ಭಾರತೀಯ ವಿದ್ಯಾರ್ಥಿಗಳಿಗೆ ಭಾರತದ ಅತ್ಯಂತ ಕಠಿಣ ಪರೀಕ್ಷೆಯಾದ JEE Advanced ಅಗತ್ಯವಿರುವುದಿಲ್ಲ. ವಿಶ್ವದಾದ್ಯಂತ ಇರುವ ವಿದ್ಯಾರ್ಥಿಗಳಿಗೆ ಸುಲಭವಾಗಿ ತಂತ್ರಜ್ಞಾನ ಶಿಕ್ಷಣ ತಲುಪಿಸುವ ನಿಟ್ಟಿನಲ್ಲಿ ಪ್ರವೇಶ ಪ್ರಕ್ರಿಯೆಯನ್ನು ಸರಳಗೊಳಿಸಲಾಗುವುದು ಎಂದು ಸಂಸ್ಥೆ ಸ್ಪಷ್ಟಪಡಿಸಿದೆ.

➤ **ಈ ಜಂಟಿ ಒಪ್ಪಂದಕ್ಕೆ ಪ್ರಮುಖ ಕಾರಣಗಳು:**

ಕಾನೂನಾತ್ಮಕ ಸುಲಭತೆ: ಅಮೆರಿಕದಲ್ಲಿ ಹೊಸದಾಗಿ ಭೂಮಿ ಖರೀದಿ ಮತ್ತು ಸರ್ಕಾರದ ಅನುಮತಿಗಳನ್ನು ಪಡೆಯುವ ದೀರ್ಘ ಪ್ರಕ್ರಿಯೆಯನ್ನು ತಪ್ಪಿಸಲು ಇದು ನೆರವಾಗುತ್ತದೆ.

ಪೂರಕ ಅಗತ್ಯತೆ: ನ್ಯೂಯಾರ್ಕ್ ಸ್ಟೇಟ್ ಯೂನಿವರ್ಸಿಟಿಯಲ್ಲಿ (SUNY) ಪ್ರಸ್ತುತ ಆರ್ಟ್ಸ್, ಸೈನ್ಸ್ ಮತ್ತು ಬ್ಯುಸಿನೆಸ್ ಕೋರ್ಸ್‌ಗಳಿದ್ದರೂ ಅಲ್ಲಿ ಪ್ರತ್ಯೇಕ ಇಂಜಿನಿಯರಿಂಗ್ ವಿಭಾಗವಿಲ್ಲ. ಹೀಗಾಗಿ ಐಐಟಿ ಬಾಂಬೆಯ ತಾಂತ್ರಿಕ ಪರಿಣತಿ ಉಭಯ ಸಂಸ್ಥೆಗಳಿಗೆ ಪರಸ್ಪರ ಅನುಕೂಲಕರವಾಗಿದೆ (Win-Win Situation).

## ಭಾರತದಲ್ಲಿ ಚಿಪ್ ಕ್ರಾಂತಿ: 1.64 ಲಕ್ಷ ಕೋಟಿ ರೂ. ವೆಚ್ಚದ 12 ಸೆಮಿಕಂಡಕ್ಟರ್ ಯೋಜನೆಗಳಿಗೆ ಕೇಂದ್ರ ಅಸ್ತು!




➤ ಭಾರತವನ್ನು ಜಾಗತಿಕ ಎಲೆಕ್ಟ್ರಾನಿಕ್ಸ್ ಮತ್ತು ತಂತ್ರಜ್ಞಾನದ ಪ್ರಮುಖ ಕೇಂದ್ರವನ್ನಾಗಿ ಮಾಡುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಬೃಹತ್ ಹೆಜ್ಜೆಯಿಟ್ಟಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಸೆಮಿಕಂಡಕ್ಟರ್ ಮಿಷನ್ (Semiconductor Mission) ಯೋಜನೆಯಡಿಯಲ್ಲಿ ಬರೋಬ್ಬರಿ 1.64 ಲಕ್ಷ ಕೋಟಿ ರೂಪಾಯಿ ಹೂಡಿಕೆಯ 12 ಪ್ರಮುಖ ಸೆಮಿಕಂಡಕ್ಟರ್ ಯೋಜನೆಗಳಿಗೆ ಅನುಮೋದನೆ ನೀಡಿದೆ.

➢ 'ಮಿಷನ್ 2.0' ಮತ್ತು ದೇಶಿ ಚಿಪ್ ವಿನ್ಯಾಸ: ಬಜೆಟ್‌ನಲ್ಲಿ ಪ್ರಕಟಿಸಲಾದ 'ಮಿಷನ್ 2.0' ಕಾರ್ಯಕ್ರಮವು ಭಾರತದಲ್ಲೇ ಸ್ವದೇಶಿ ಚಿಪ್ ವಿನ್ಯಾಸ (Indigenous Chip Design) ಮತ್ತು ಬಲಿಷ್ಠ ಪೂರೈಕೆ ಜಾಲವನ್ನು (Supply Chain Network) ನಿರ್ಮಿಸುವ ಗುರಿ ಹೊಂದಿದೆ. ಈ 12 ಯೋಜನೆಗಳಲ್ಲಿ ಪ್ರಮುಖವಾಗಿ:

ಒಂದು ಸೆಮಿಕಂಡಕ್ಟರ್ ಫ್ಯಾಬ್ರಿಕೇಶನ್ ಯುನಿಟ್ (Semiconductor Fabrication Unit)

ಒಂಬತ್ತು ಅತ್ಯಾಧುನಿಕ ಪ್ಯಾಕೇಜಿಂಗ್ ಘಟಕಗಳು (Packaging Units) ಸೇರಿವೆ.

➢ **ಇಂಡಿಯಾ ಎಐ ಮಿಷನ್ (India AI Mission) ಮತ್ತು ತಂತ್ರಜ್ಞಾನದ ಪ್ರಗತಿ:** ದೇಶದಲ್ಲಿ ಕೃತಕ ಬುದ್ಧಿಮತ್ತೆ (Artificial Intelligence) ಮತ್ತು ತಂತ್ರಜ್ಞಾನಕ್ಕೆ ಹೆಚ್ಚಿನ ಉತ್ತೇಜನ ನೀಡಲು 10,372 ಕೋಟಿ ರೂಪಾಯಿಗೂ ಅಧಿಕ ವೆಚ್ಚದ 'ಇಂಡಿಯಾ ಎಐ ಮಿಷನ್' ವೇಗವಾಗಿ ಕಾರ್ಯನಿರ್ವಹಿಸುತ್ತಿದೆ.

ಇದರ ಭಾಗವಾಗಿ ದೇಶದಲ್ಲಿ 45 ಸಾವಿರಕ್ಕೂ ಹೆಚ್ಚು GPU (Graphics Processing Unit) ಸಾಮರ್ಥ್ಯದ ಕಂಪ್ಯೂಟಿಂಗ್ ವ್ಯವಸ್ಥೆಯನ್ನು ಸೃಷ್ಟಿಸಲಾಗುತ್ತಿದೆ.

ಎರಡನೇ ಮತ್ತು ಮೂರನೇ ಹಂತದ (Tier-2 & Tier-3) ನಗರಗಳಲ್ಲಿ ಸಂಶೋಧನೆಗಾಗಿ 27 ಪ್ರಮುಖ ಡೇಟಾ ಮತ್ತು ಎಐ ಪ್ರಯೋಗಾಲಯಗಳನ್ನು (Data & AI Labs) ಸ್ಥಾಪಿಸಲಾಗಿದೆ.

➢ **ಎಲೆಕ್ಟ್ರಾನಿಕ್ಸ್ ವಲಯದ ಸಾಧನೆಗಳು:**

ಬೃಹತ್ ಆರ್ಥಿಕ ಬೆಳವಣಿಗೆ: ಭಾರತದ ಎಲೆಕ್ಟ್ರಾನಿಕ್ಸ್ ಉತ್ಪಾದನಾ ವಲಯವು 13 ಲಕ್ಷ ಕೋಟಿ ರೂಪಾಯಿ ಮೌಲ್ಯದ ಬೃಹತ್ ಉದ್ಯಮವಾಗಿ ಬೆಳೆದಿದ್ದು, ದೇಶದ 3ನೇ ಅತಿ ದೊಡ್ಡ ರಫ್ತು ವಿಭಾಗವಾಗಿ ಹೊರಹೊಮ್ಮಿದೆ.

ಜಾಗತಿಕ ಮನ್ನಣೆ ಮತ್ತು ಉದ್ಯೋಗ: ಮೊಬೈಲ್ ಉತ್ಪಾದನೆಯಲ್ಲಿ ಭಾರತವು ಜಾಗತಿಕವಾಗಿ 2ನೇ ಸ್ಥಾನಕ್ಕೇರಿದ್ದು, ದೇಶಾದ್ಯಂತ ಲಕ್ಷಾಂತರ ಭಾರಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತಿದೆ.

ತಂತ್ರಜ್ಞಾನ ಮತ್ತು ಹೂಡಿಕೆ: ದೇಶದಲ್ಲಿ 1.64 ಲಕ್ಷ ಕೋಟಿ ರೂ. ವೆಚ್ಚದ 12 ಸೆಮಿಕಂಡಕ್ಟರ್ ಯೋಜನೆಗಳಿಗೆ ಚಾಲನೆ ನೀಡಲಾಗಿದ್ದು, ತಾಂತ್ರಿಕ ಪ್ರಗತಿಗಾಗಿ 27 ಡೇಟಾ ಮತ್ತು ಎಐ ಪ್ರಯೋಗಾಲಯಗಳನ್ನು ಸ್ಥಾಪಿಸಲಾಗಿದೆ.

# 30 June 2026

## ಜೂನ್-30: ಅಂತರರಾಷ್ಟ್ರೀಯ ಕ್ಷುದ್ರಗ್ರಹ ದಿನ




➢ ಪ್ರತಿ ವರ್ಷ ಜೂನ್ 30 ರಂದು ಜಾಗತಿಕವಾಗಿ ಅಂತರರಾಷ್ಟ್ರೀಯ ಕ್ಷುದ್ರಗ್ರಹ ದಿನ (International Asteroid Day) ವನ್ನು ಆಚರಿಸಲಾಗುತ್ತದೆ. ಭೂಮಿಗೆ ಕ್ಷುದ್ರಗ್ರಹಗಳಿಂದ ಎದುರಾಗಬಹುದಾದ ಅಪಾಯಗಳು, ಅವುಗಳ ಪತ್ತೆ ಹಚ್ಚುವಿಕೆ ಮತ್ತು ಗ್ರಹಗಳ ರಕ್ಷಣಾ ವ್ಯವಸ್ಥೆ (Planetary Defence) ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು ಈ ದಿನದ ಮುಖ್ಯ ಉದ್ದೇಶವಾಗಿದೆ.

➢ **2026ರ ಧ್ಯೇಯವಾಕ್ಯ (Theme): ಗ್ರಹಗಳ ರಕ್ಷಣೆ ಮತ್ತು ಕ್ಷುದ್ರಗ್ರಹದ ಪ್ರಭಾವದ ಅಪಾಯಗಳು ( Planetary Defence and Asteroid Impact Hazards)**

➢ ಜೂನ್ 30, 1908 ರಂದು ರಷ್ಯಾದ ಸೈಬೀರಿಯಾದ ಟುಂಗುಸ್ಕಾ ನದಿಯ ಬಳಿ ಇತಿಹಾಸದಲ್ಲೇ ಅತಿ ದೊಡ್ಡ ಕ್ಷುದ್ರಗ್ರಹದ ದಾಳಿಯಾಗಿತ್ತು. ಈ ಸ್ಫೋಟದಿಂದಾಗಿ ಸುಮಾರು 2,000 ಚದರ ಕಿಲೋಮೀಟರ್ ವ್ಯಾಪ್ತಿಯಲ್ಲಿದ್ದ ಲಕ್ಷಾಂತರ ಮರಗಳು ನಾಶವಾಗಿದ್ದವು. ಈ ಘಟನೆಯ ನೆನಪಿಗಾಗಿ ಜೂನ್ 30 ಅನ್ನು ಕ್ಷುದ್ರಗ್ರಹ ದಿನವನ್ನಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಪ್ರಸಿದ್ಧ ವಿಜ್ಞಾನಿ ಸ್ಟೀಫನ್ ಹಾಕಿಂಗ್, ಬಿ612 ಫೌಂಡೇಶನ್ ಅಧ್ಯಕ್ಷ ಡ್ಯಾನಿಕಾ ರೆಮಿ, ಗಗನಯಾತ್ರಿ ರಸ್ಟಿ ಶ್ವೀಕಾರ್ಟ್ ಮತ್ತು 'ಕ್ವೀನ್' ಬ್ಯಾಂಡ್‌ನ ಗಿಟಾರ್ ವಾದಕ ಹಾಗೂ ಖಗೋಳ ಭೌತವಿಜ್ಞಾನಿ ಬ್ರಯಾನ್ ಮೇ ಸೇರಿದಂತೆ ಪ್ರಮುಖರು 2014 ರಲ್ಲಿ ಈ ದಿನದ ಆಚರಣೆಗೆ ನಾಂದಿ ಹಾಡಿದರು.

➢ **ವಿಶ್ವಸಂಸ್ಥೆಯ ಘೋಷಣೆ:** ಡಿಸೆಂಬರ್ 2016 ರಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು (UNGA) ಪ್ರತಿ ವರ್ಷ ಜೂನ್ 30 ರಂದು ಅಂತರರಾಷ್ಟ್ರೀಯ ಕ್ಷುದ್ರಗ್ರಹ ದಿನವನ್ನು ಆಚರಿಸಲು ಅಧಿಕೃತವಾಗಿ ನಿರ್ಣಯ ಅಂಗೀಕರಿಸಿತು.

➢ ಕ್ಷುದ್ರಗ್ರಹ: ಸೌರಮಂಡಲದ ರಚನೆಯ ಸಂದರ್ಭದಲ್ಲಿ ಉಳಿದುಕೊಂಡ ಸಣ್ಣ, ಕಲ್ಲಿನ ಮತ್ತು ಲೋಹೀಯ ಕಾಯಗಳೇ ಕ್ಷುದ್ರಗ್ರಹಗಳು (Asteroids). ಇವುಗಳಿಗೂ ಗ್ರಹಗಳಂತೆ ಸೂರ್ಯನಿಗೆ ಪ್ರದಕ್ಷಿಣೆ ಹಾಕುವ ಕಕ್ಷೆ ಇರುತ್ತದೆ. ಸೌರಮಂಡಲದಲ್ಲಿ ಬಹುಪಾಲು ಕ್ಷುದ್ರಗ್ರಹಗಳು ಮಂಗಳ (Mars) ಮತ್ತು ಗುರು (Jupiter) ಗ್ರಹಗಳ ಕಕ್ಷೆಯ ನಡುವೆ ಕಂಡುಬರುತ್ತವೆ. ಇದನ್ನು 'ಕ್ಷುದ್ರಗ್ರಹ ಪಟ್ಟಿ' ಎನ್ನಲಾಗುತ್ತದೆ.

➢ ಗ್ರಹಗಳ ರಕ್ಷಣೆಗಾಗಿ ಜಾಗತಿಕ ಪ್ರಯತ್ನಗಳು: ಭೂಮಿಯ ಸಮೀಪವಿರುವ ಅಪಾಯಕಾರಿ ವಸ್ತುಗಳನ್ನು (Near-Earth Objects - NEOs) ಪತ್ತೆಹಚ್ಚಲು ಮತ್ತು ಅವುಗಳ ಪಥವನ್ನು ಬದಲಾಯಿಸಲು ಪ್ರಮುಖ ಬಾಹ್ಯಾಕಾಶ ಸಂಸ್ಥೆಗಳು ನಿರಂತರ ಸಂಶೋಧನೆ ನಡೆಸುತ್ತಿವೆ:

Kinetic Impactor Method: ಬಾಹ್ಯಾಕಾಶ ನೌಕೆಯನ್ನು ಕ್ಷುದ್ರಗ್ರಹಕ್ಕೆ ಡಿಕ್ಕಿ ಹೊಡೆಸುವ ಮೂಲಕ ಅದರ ದಿಕ್ಕನ್ನು ಬದಲಾಯಿಸುವುದು (ಉದಾಹರಣೆಗೆ ನಾಸಾದ DART ಮಿಷನ್).

Gravity Tractor: ಬಾಹ್ಯಾಕಾಶ ನೌಕೆಯ ಗುರುತ್ವಾಕರ್ಷಣಾ ಶಕ್ತಿಯನ್ನು ಬಳಸಿ ಕ್ಷುದ್ರಗ್ರಹವನ್ನು ನಿಧಾನವಾಗಿ ಬೇರೆಡೆಗೆ ಎಳೆಯುವುದು.

➢ ಪ್ರಸ್ತುತ ಇಸ್ರೋ (ISRO) ಕೂಡ ಗ್ರಹಗಳ ರಕ್ಷಣೆ ಮತ್ತು ಬಾಹ್ಯಾಕಾಶ ಭಿನ್ನರಾಶಿಗಳ (Space Debris) ಮೇಲ್ವಿಚಾರಣೆಗಾಗಿ ಜಾಗತಿಕ ನೆಟ್‌ವರ್ಕ್‌ಗಳೊಂದಿಗೆ ಕೈಜೋಡಿಸುತ್ತಿದೆ.

## ಕೋಟಕ್ ಮಹೀಂದ್ರಾ ಬ್ಯಾಂಕ್ ಸಿಇಒ ಅಶೋಕ್ ವಾಸ್ವಾನಿ ರಾಜೀನಾಮೆ: ಉತ್ತರಾಧಿಕಾರಿ ಹುಡುಕಾಟ ಆರಂಭ



➢ ಭಾರತದ ಪ್ರಮುಖ ಖಾಸಗಿ ವಲಯದ ಬ್ಯಾಂಕ್‌ಗಳಲ್ಲಿ ಒಂದಾದ ಕೋಟಕ್ ಮಹೀಂದ್ರಾ ಬ್ಯಾಂಕ್‌ನ ಎಂಡಿ ಮತ್ತು ಸಿಇಒ ಅಶೋಕ್ ವಾಸ್ವಾನಿ ಅವರು ತಮ್ಮ ಮೊದಲ ಅವಧಿ ಮುಗಿದ ನಂತರ ಅಂದರೆ, 2026ರ ಡಿಸೆಂಬರ್ ಅಂತ್ಯಕ್ಕೆ ಹುದ್ದೆಯಿಂದ ನಿರ್ಗಮಿಸುವುದಾಗಿ ಬ್ಯಾಂಕಿನ ಆಡಳಿತ ಮಂಡಳಿಗೆ ತಿಳಿಸಿದ್ದಾರೆ.ವೈಯಕ್ತಿಕ ಕಾರಣಗಳಿಂದಾಗಿ ತಾವು ಮತ್ತೊಮ್ಮೆ ಆ ಹುದ್ದೆಗೆ ಮರುನೇಮಕಗೊಳ್ಳಲು ಬಯಸುತ್ತಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ. ಬ್ಯಾಂಕಿನ ಆಡಳಿತ ಮಂಡಳಿಯು ಅವರ ನಿರ್ಧಾರವನ್ನು ಗೌರವಿಸಿದ್ದು, ಭಾರತೀಯ ರಿಸರ್ವ್ ಬ್ಯಾಂಕ್ (RBI) ನಿಯಮಾವಳಿಗಳ ಅನ್ವಯ ಹೊಸ ಸಿಇಒ ನೇಮಕಾತಿ ಪ್ರಕ್ರಿಯೆಯನ್ನು ಈಗಾಗಲೇ ಆರಂಭಿಸಿದೆ.

➢ ಅಶೋಕ್ ವಾಸ್ವಾನಿ: ಬ್ಯಾಂಕ್‌ನ ಸಂಸ್ಥಾಪಕರಾದ ಉದಯ್ ಕೋಟಕ್ ಅವರ ನಿರ್ಗಮನದ ನಂತರ, ಅಶೋಕ್ ವಾಸ್ವಾನಿ ಅವರು ಜನವರಿ 1, 2024 ರಂದು ಕೋಟಕ್ ಮಹೀಂದ್ರಾ ಬ್ಯಾಂಕ್‌ನ ಎಂಡಿ ಮತ್ತು ಸಿಇಒ ಆಗಿ ಅಧಿಕಾರ ವಹಿಸಿಕೊಂಡಿದ್ದರು. ಇವರು ಈ ಹಿಂದೆ ಅಂತರರಾಷ್ಟ್ರೀಯ ಮಟ್ಟದ ಪ್ರಸಿದ್ಧ ಬ್ಯಾಂಕ್‌ಗಳಾದ ಬಾರ್ಕ್ಲೇಸ್ (Barclays) ಮತ್ತು ಸಿಟಿಗ್ರೂಪ್ (Citigroup)

ಗಳಲ್ಲಿ ಉನ್ನತ ಹುದ್ದೆಗಳನ್ನು ನಿಭಾಯಿಸಿದ ಸುದೀರ್ಘ ಅನುಭವ ಹೊಂದಿದ್ದಾರೆ.

➤ ಅವರ ನೇತೃತ್ವದಲ್ಲಿ ಕೋಟಕ್ ಬ್ಯಾಂಕ್ ತಾಂತ್ರಿಕ ನಾವೀನ್ಯತೆ (Digital Transformation) ಮತ್ತು ಚಿಲ್ಲರೆ ಬ್ಯಾಂಕಿಂಗ್ (Retail Franchise) ವಲಯದಲ್ಲಿ ಗಣನೀಯ ಪ್ರಗತಿ ಸಾಧಿಸಿದೆ. ಇತ್ತೀಚಿನ 2025-26ರ ನಾಲ್ಕನೇ ತ್ರೈಮಾಸಿಕದಲ್ಲಿ ಬ್ಯಾಂಕ್ ಶೇಕಡಾ 13 ರಷ್ಟು ನಿವ್ವಳ ಲಾಭ ಗಳಿಸಿ ಒಟ್ಟು ₹4,027 ಕೋಟಿ ತಲುಪಿದೆ.

➤ ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ 1949 ರ (Banking Regulation Act, 1949) ಅಡಿಯಲ್ಲಿ ಯಾವುದೇ ಬ್ಯಾಂಕಿನ ಸಿಇಒ ನೇಮಕಾತಿ ಅಥವಾ ಮರುನೇಮಕಾತಿಗೆ ಭಾರತೀಯ ರಿಸರ್ವ್ ಬ್ಯಾಂಕ್‌ನ ಪೂರ್ವ ಅನುಮತಿ ಕಡ್ಡಾಯವಾಗಿದೆ.

➤ ಅಶೋಕ್ ವಾಸ್ವಾನಿ ಅವರ ನಿರ್ಗಮನದ ಸುದ್ದಿಯು ಶೇರು ಮಾರುಕಟ್ಟೆಯ ಮೇಲೂ ಪರಿಣಾಮ ಬೀರಿದ್ದು, ಕೋಟಕ್ ಬ್ಯಾಂಕ್‌ನ ಷೇರುಗಳಲ್ಲಿ ಅಲ್ಪ ಕುಸಿತ ಕಂಡುಬಂದಿದೆ. ಬ್ಯಾಂಕ್ ಅನ್ನು ಭಾರತದ ಮೂರನೇ ಅತಿ ದೊಡ್ಡ ಖಾಸಗಿ ಬ್ಯಾಂಕ್ ಆಗಿ ಪರಿವರ್ತಿಸುವ ಗುರಿಯನ್ನು ವಾಸ್ವಾನಿ ಹೊಂದಿದ್ದರು. ಈಗ ಹೊಸ ಉತ್ತರಾಧಿಕಾರಿಯ ಹೆಗಲಿಗೆ ಈ ಜವಾಬ್ದಾರಿ ಬೀಳಲಿದ್ದು, ಆಡಳಿತ ಮಂಡಳಿಯು ಆಂತರಿಕ ಮತ್ತು ಬಾಹ್ಯ ಅಭ್ಯರ್ಥಿಗಳನ್ನು ಪರಿಶೀಲಿಸುತ್ತಿದೆ.

## ಕರ್ನಾಟಕದಲ್ಲಿ ಇಂದಿನಿಂದ (ಜೂನ್-30) 'ವಿಶೇಷ ತೀವ್ರ ಪರಿಷ್ಕರಣೆ' (SIR) ಅಭಿಯಾನ ಆರಂಭ




➤ ಕರ್ನಾಟಕ ರಾಜ್ಯದ ಇತಿಹಾಸದಲ್ಲೇ ಅತ್ಯಂತ ದೊಡ್ಡ ಮಟ್ಟದ ಮತದಾರರ ಪಟ್ಟಿ ದೋಷಮುಕ್ತಗೊಳಿಸುವ ಪ್ರಕ್ರಿಯೆಗೆ ಚಾಲನೆ ಸಿಕ್ಕಿದೆ. ರಾಜ್ಯದಲ್ಲಿ ಮತದಾರರ ಪಟ್ಟಿಯನ್ನು ಸಂಪೂರ್ಣವಾಗಿ ನವೀಕರಿಸುವ ಮತ್ತು ಪ್ರತಿಯೊಬ್ಬ ಅರ್ಹ ನಾಗರಿಕನನ್ನೂ ಒಳಗೊಳ್ಳುವ ಉದ್ದೇಶದಿಂದ ಹಮ್ಮಿಕೊಳ್ಳಲಾಗಿರುವ 'ವಿಶೇಷ ತೀವ್ರ ಪರಿಷ್ಕರಣೆ' (Special Intensive Revision - SIR) ಅಭಿಯಾನದ ಪ್ರಮುಖ ಹಂತವು ಇಂದು (ಜೂನ್ 30, 2026) ರಿಂದ ಅಧಿಕೃತವಾಗಿ ಆರಂಭವಾಗಲಿದೆ.

➤ ರಾಜ್ಯ ಮುಖ್ಯ ಚುನಾವಣಾ ಅಧಿಕಾರಿಗಳ (CEO) ಕಚೇರಿಯ ನೇತೃತ್ವದಲ್ಲಿ ಚುನಾವಣಾ ಸಿಬ್ಬಂದಿಗಳು ಹಾಗೂ ಬೂತ್ ಮಟ್ಟದ ಅಧಿಕಾರಿಗಳು (BLO) ಮಂಗಳವಾರದಿಂದಲೇ ಸಾರ್ವಜನಿಕರ ಮನೆ ಮನೆಗೆ ಭೇಟಿ ನೀಡಿ ಮಾಹಿತಿ ಸಂಗ್ರಹಣೆ ಪ್ರಕ್ರಿಯೆಯನ್ನು ಆರಂಭಿಸಲಿದ್ದಾರೆ.

**➤ ಬೃಹತ್ ಅಭಿಯಾನದ ಸಂಕ್ಷಿಪ್ತ ಚಿತ್ರಣ:**

ಅಭಿಯಾನದ ಹೆಸರು: ವಿಶೇಷ ತೀವ್ರ ಪರಿಷ್ಕರಣೆ (Special Intensive Revision - SIR)

ಆರಂಭದ ದಿನಾಂಕ: ಜೂನ್ 30, 2026

ಒಟ್ಟು ನಿಯೋಜಿತ ಬಿಎಲ್‌ಒಗಳು (BLO): 59,050

ಒಟ್ಟು ಮೇಲ್ವಿಚಾರಕರು: 6,000

ಕರ್ನಾಟಕದ ಪ್ರಸ್ತುತ ಒಟ್ಟು ಮತದಾರರು: 5,55,74,064 (5.55 ಕೋಟಿಗೂ ಹೆಚ್ಚು)

ಮುದ್ರಿಸಲಾದ ಒಟ್ಟು ಫಾರ್ಮ್‌ಗಳು: 11 ಕೋಟಿಗೂ ಅಧಿಕ

➤ 24 ವರ್ಷಗಳ ಸುದೀರ್ಘ ಅವಧಿಯ ಬಳಿಕ ಎಸ್‌ಐಆರ್ (SIR): ಕರ್ನಾಟಕ ರಾಜ್ಯದಲ್ಲಿ ಇಂತಹ ವಿಶೇಷ ತೀವ್ರ ಪರಿಷ್ಕರಣೆ (SIR) ನಡೆಯುತ್ತಿರುವುದು ಇದು 9ನೇ ಬಾರಿಯಾಗಿದೆ. ಕೊನೆಯದಾಗಿ 2002 ರಲ್ಲಿ ಈ ರೀತಿಯ ಬೃಹತ್ ಪ್ರಕ್ರಿಯೆ ನಡೆದಿತ್ತು. ಅಂದರೆ ಬರೋಬ್ಬರಿ 24 ವರ್ಷಗಳ ಬಳಿಕ ಈ ಪ್ರಕ್ರಿಯೆ ಮರುಕಳಿಸಿದೆ. 2002ರಲ್ಲಿ ಈ ಪ್ರಕ್ರಿಯೆ ನಡೆದಾಗ ಕರ್ನಾಟಕದಲ್ಲಿ ಕೇವಲ 3 ಕೋಟಿ ಮತದಾರರಿದ್ದರು. ಆದರೆ ಪ್ರಸ್ತುತ 2002ರ ದತ್ತಾಂಶ ಹಾಗೂ 2023ರ ಮತದಾರರ ಪಟ್ಟಿಯ ದತ್ತಾಂಶಗಳನ್ನು ಒಟ್ಟುಗೂಡಿಸಿ ಅತ್ಯಾಧುನಿಕ ತಂತ್ರಜ್ಞಾನದೊಂದಿಗೆ ಈ ಬಾರಿಯ ಅಭಿಯಾನವನ್ನು ನಡೆಸಲಾಗುತ್ತಿದೆ.

➤ ಮನೆ ಮನೆ ಸಮೀಕ್ಷೆ: ಪ್ರಕ್ರಿಯೆ ಹೇಗೆ ನಡೆಯುತ್ತದೆ?

ಕ್ಯುಆರ್ ಕೋಡ್ ಫಾರ್ಮ್‌ಗಳು: ಪ್ರತಿ ಮತದಾರನಿಗೂ ಅವರ ವಿವರಗಳನ್ನು ಒಳಗೊಂಡ, ಕ್ಯುಆರ್‌ಕೋಡ್ (QR Code) ಹೊಂದಿರುವ ಎರಡು ಸೆಟ್ ವಿಶೇಷ ಮುದ್ರಿತ ಫಾರ್ಮ್‌ಗಳನ್ನು ಬಿಎಲ್‌ಒಗಳು ನೀಡಲಿದ್ದಾರೆ.

ಪರಿಶೀಲನೆ ಮತ್ತು ಸಹಿ: ಮತದಾರರು ತಮ್ಮ ವಿವರಗಳನ್ನು ಪರಿಶೀಲಿಸಿ, ಭರ್ತಿ ಮಾಡಿ ಸಹಿ ಮಾಡಬೇಕು.

ರಶೀದಿ ಸಲ್ಲಿಕೆ: ಇದರಲ್ಲಿ ಒಂದು ಪ್ರತಿಯನ್ನು ಅಧಿಕಾರಿಗಳು ಸಹಿ ಮಾಡಿ ಮತದಾರರಿಗೆ ರಶೀದಿಯಂತೆ ಮರಳಿ ನೀಡಲಿದ್ದಾರೆ ಮತ್ತು ಎರಡನೇ ಪ್ರತಿಯನ್ನು ಮುಂದಿನ ದಾಖಲಾತಿ ಪ್ರಕ್ರಿಯೆಗಾಗಿ ಅಧಿಕಾರಿಗಳು ಪಡೆದುಕೊಳ್ಳಲಿದ್ದಾರೆ.

ಅವಧಿ: ಜೂನ್ 30ರಿಂದ ಆರಂಭವಾಗುವ ಈ ಪ್ರಕ್ರಿಯೆಯಲ್ಲಿ ಸಾರ್ವಜನಿಕರಿಗೆ ಫಾರಂ ಭರ್ತಿ ಮಾಡಿ ಸಲ್ಲಿಸಲು 30 ದಿನಗಳ ಕಾಲಾವಕಾಶ ಇರಲಿದೆ.

➤ ಈ ಫಾರ್ಮ್ ಸಲ್ಲಿಸುವಾಗ ಕೇಂದ್ರ ಅಥವಾ ರಾಜ್ಯ ಸರಕಾರ ಅನುಮೋದಿಸಿದ 11 ಅಧಿಕೃತ ಗುರುತಿನ ಚೀಟಿಗಳಲ್ಲಿ (Voter ID, Aadhaar Card, Driving License, ಇತ್ಯಾದಿ) ಯಾವುದಾದರೂ ಒಂದರ ನಕಲನ್ನು ಒದಗಿಸಬೇಕಾಗುತ್ತದೆ. ಯಾವುದೇ ಗೊಂದಲವಿಲ್ಲದೆ ಯಶಸ್ವಿಯಾಗಿ ಮುಗಿಸಲು ಜಿಲ್ಲಾಧಿಕಾರಿಗಳು ಹಾಗೂ ಪಂಚಾಯತ್ ಮುಖ್ಯಸ್ಥರಿಗೆ ಜವಾಬ್ದಾರಿ ವಹಿಸಲಾಗಿದೆ.

## ಭಾರತೀಯ ಸೇನೆಗೆ ಹೊಸ ಬಲ: ಜುಲೈ 1 ರಿಂದ ಅಧಿಕೃತವಾಗಿ ಜಾರಿಗೆ ಬರಲಿವೆ 'ಇಂಟಿಗ್ರೇಟೆಡ್ ಬ್ಯಾಟಲ್ ಗ್ರೂಪ್ಸ್' (IBG)!




➤ ಭಾರತೀಯ ಸೇನೆಯು ತನ್ನ ರಕ್ಷಣಾ ಕಾರ್ಯತಂತ್ರದಲ್ಲಿ ಐತಿಹಾಸಿಕ ಬದಲಾವಣೆಯೊಂದನ್ನು ತರಲು ಸಂಪೂರ್ಣವಾಗಿ ಸಜ್ಜಾಗಿದೆ. ಶತ್ರು ದೇಶಗಳ ಆಕ್ರಮಣಕ್ಕೆ ತಕ್ಷಣವೇ ಮತ್ತು ಅತ್ಯಂತ ತೀಕ್ಷ್ಣವಾಗಿ ತಿರುಗೇಟು ನೀಡುವ ಸಲುವಾಗಿ, ಭಾರತೀಯ ಸೇನೆಯು ಮಹತ್ವಾಕಾಂಕ್ಷೆಯ 'ಇಂಟಿಗ್ರೇಟೆಡ್ ಬ್ಯಾಟಲ್ ಗ್ರೂಪ್ಸ್' (Integrated Battle Groups - IBG) ಎಂಬ ವಿಶೇಷ ಯುದ್ಧ ಘಟಕಗಳನ್ನು ಜುಲೈ 1 ರಿಂದ ಅಧಿಕೃತವಾಗಿ ಜಾರಿಗೆ ತರಲಿದೆ.

**➤ ಇಂಟಿಗ್ರೇಟೆಡ್ ಬ್ಯಾಟಲ್ ಗ್ರೂಪ್ (IBG):** ಸಾಮಾನ್ಯವಾಗಿ ಯುದ್ಧದ ಸಮಯದಲ್ಲಿ ಭಾರತೀಯ ಸೇನೆಯ ಇಡೀ ಬ್ರಿಗೇಡ್ ಅಥವಾ ತುಕಡಿಯು ಶತ್ರುಗಳ ಗಡಿಗೆ ಧಾವಿಸಲು ಮತ್ತು ನಿಯೋಜನೆಗೊಳ್ಳಲು ಹೆಚ್ಚಿನ ಸಮಯ ತೆಗೆದುಕೊಳ್ಳುತ್ತದೆ. ಆದರೆ, ಈ ಐಬಿಜಿ (IBG) ಘಟಕಗಳು ಅತ್ಯಂತ ಚುರುಕಾದ, ವೇಗವಾಗಿ ಕಾರ್ಯಪ್ರವೃತ್ತವಾಗುವ ಸ್ವತಂತ್ರ ಘಟಕಗಳಾಗಿವೆ.

ಸೈನಿಕರ ಬಲ: ಪ್ರತಿ IBG ಘಟಕವು ಸುಮಾರು 5,000 ಯೋಧರನ್ನು ಒಳಗೊಂಡಿರುತ್ತದೆ.

ಸ್ವತಂತ್ರ ಕಾರ್ಯಾಚರಣೆ: ಇದರಲ್ಲಿ ಕೇವಲ ಪದಾತಿ ದಳ (Infantry) ಮಾತ್ರವಲ್ಲದೆ, ಫಿರಂಗಿ ರೆಜಿಮೆಂಟ್ (Artillery), ಮಿಲಿಟರಿ ಇಂಜಿನಿಯರ್‌ಗಳು, ಸಿಗ್ನಲ್ಸ್ ಮತ್ತು ಫೀಲ್ಡ್ ಆಸ್ಪತ್ರೆಗಳೂ (Medical Cover) ಇರಲಿವೆ. ಅಂದರೆ, ಇವು ಬೇರೆ ಯಾವುದೇ ವಿಭಾಗದ ನೆರವಿಗಾಗಿ ಕಾಯದೆ ಸ್ವತಂತ್ರವಾಗಿ ಶತ್ರುಗಳ ವಿರುದ್ಧ ದಾಳಿ ನಡೆಸುವ ಸಾಮರ್ಥ್ಯ ಹೊಂದಿರುತ್ತವೆ.

ಥಿಯೇಟರ್ ಕಮಾಂಡ್: ಇವುಗಳನ್ನು ನಿರ್ದಿಷ್ಟ ಥಿಯೇಟರ್ ಕಮಾಂಡ್‌ಗಳ ಅಡಿಯಲ್ಲೂ ನಿಯೋಜಿಸಬಹುದಾಗಿದ್ದು, ಭೂಸೇನೆ, ವಾಯುಸೇನೆಗಳ ನಡುವೆ ಜಂಟಿ ಕಾರ್ಯಾಚರಣೆಯಲ್ಲಿ ಅತ್ಯುತ್ತಮ ಹೊಂದಾಣಿಕೆ ಮೂಡಿಸಲು ಸಹಕಾರಿಯಾಗಲಿವೆ.

➤ **ಮೊದಲ ಐಬಿಜಿ ನಿಯೋಜನೆ:** ಚೀನಾ ಗಡಿಯ ಸವಾಲುಗಳನ್ನು ಎದುರಿಸಲು ಭಾರತೀಯ ಸೇನೆಯು ತನ್ನ ಮೊದಲ IBG ಘಟಕಗಳನ್ನು ಚೀನಾ ಗಡಿಗೆ ಮುಖಮಾಡಿ ನಿಂತಿರುವ ಪಶ್ಚಿಮ ಬಂಗಾಳದ ಪನಾಗಡ್ ಮೂಲದ 'XVII ಮೌಂಟೇನ್ ಸ್ಟ್ರೈಕ್ ಕಾರ್ಪ್ಸ್' (XVII Mountain Strike Corps) ಅಡಿಯಲ್ಲಿ ರಚಿಸುತ್ತಿದೆ. ಇವು ಬೆಟ್ಟ-ಗುಡ್ಡಗಳ ಅತ್ಯಂತ ದುರ್ಗಮ ಪ್ರದೇಶಗಳಲ್ಲಿ ಕನಿಷ್ಠ ಸಮಯದಲ್ಲಿ ನಿಯೋಜನೆಗೊಂಡು ಕಾರ್ಯಾಚರಣೆ ಆರಂಭಿಸಲಿವೆ.

➤ ಈ ಐಬಿಜಿ ಪರಿಕಲ್ಪನೆಯು ಕಳೆದ ಏಳು ವರ್ಷಗಳಿಂದ ರಕ್ಷಣಾ ವಲಯದಲ್ಲಿ ಚರ್ಚೆಯಲ್ಲಿತ್ತು. ಚೀನಾ ಈಗಾಗಲೇ ತನ್ನ ಸೈನ್ಯವನ್ನು ಇಂತಹದೇ ಸಣ್ಣ, ಅತ್ಯಾಧುನಿಕ ಮತ್ತು ತಾಂತ್ರಿಕವಾಗಿ ಬಲಿಷ್ಠವಾಗಿರುವ ಬ್ರಿಗೇಡ್‌ಗಳಾಗಿ ಮಾರ್ಪಡಿಸಿದೆ. ಇದಕ್ಕೆ ಪ್ರತಿಯಾಗಿ ಮತ್ತು ಚೀನಾದ ಗಡಿ ತಂಟೆಗೆ ತಕ್ಕ ಉತ್ತರ ನೀಡಲು ಭಾರತೀಯ ಸೇನೆಯು ಈ ಬೃಹತ್ ಪುನರಚನೆಗೆ (Restructuring) ಮುಂದಾಗಿದೆ. ಇದು ಗಡಿಯಲ್ಲಿ ಭಾರತದ ರಕ್ಷಣಾ ಸಾಮರ್ಥ್ಯವನ್ನು ದುಪ್ಪಟ್ಟುಗೊಳಿಸಲಿದೆ.

## ಸಮಗ್ರ ಶಿಶು ಬಾಲ ಸ್ವಾಸ್ಥ್ಯ ಕಾರ್ಯಕ್ರಮ (SSBSK) 2026: ನವಜಾತ ಶಿಶುಗಳ ಆರೋಗ್ಯಕ್ಕಾಗಿ ಕೇಂದ್ರದ ಹೊಸ ಯೋಜನೆ




➤ ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ದೇಶದ ಮಕ್ಕಳ ಆರೋಗ್ಯ ರಕ್ಷಣೆ ಮತ್ತು ಆರಂಭಿಕ ಬೆಳವಣಿಗೆಗೆ ಮಹತ್ವದ ಹೆಜ್ಜೆಯನ್ನಿಟ್ಟಿದೆ. ಕೇಂದ್ರ ಆರೋಗ್ಯ ಸಚಿವ ಜೆ.ಪಿ. ನಡ್ಡಾ ಅವರು ನವದೆಹಲಿಯ ವಿಜ್ಞಾನ ಭವನದಲ್ಲಿ ನಡೆದ 16ನೇ CCHFW ಸಮ್ಮೇಳನದಲ್ಲಿ 'ಸಮಗ್ರ ಶಿಶು ಬಾಲ ಸ್ವಾಸ್ಥ್ಯ ಕಾರ್ಯಕ್ರಮ'ಕ್ಕೆ (Samagra Shishu Bal Swasthya Karyakram - SSBSK) ಅಧಿಕೃತವಾಗಿ ಚಾಲನೆ ನೀಡಿದ್ದಾರೆ.

➤ ಸಮಗ್ರ ಶಿಶು ಬಾಲ ಸ್ವಾಸ್ಥ್ಯ ಕಾರ್ಯಕ್ರಮ (SSBSK): ಈ ಯೋಜನೆಯು ಈ ಹಿಂದೆ ಜಾರಿಯಲ್ಲಿದ್ದ ಸರ್ಕಾರದ ಎರಡು ಪ್ರಮುಖ ಕಾರ್ಯಕ್ರಮಗಳಾದ ಮನೆ ಆಧಾರಿತ ನವಜಾತ ಶಿಶು ಆರೈಕೆ (HBNC) ಮತ್ತು ಯುವ ಮಕ್ಕಳ ಮನೆ ಆಧಾರಿತ ಆರೈಕೆ (HBYC) ಯೋಜನೆಗಳನ್ನು ಒಟ್ಟುಗೂಡಿಸಿ ಸಿದ್ಧಪಡಿಸಲಾದ ಒಂದು ಏಕೀಕೃತ ರಾಷ್ಟ್ರೀಯ ಕಾರ್ಯಕ್ರಮವಾಗಿದೆ. ಮಗುವಿನ ಜನನದಿಂದ ಮೊದಲ 3 ವರ್ಷಗಳ ಅವಧಿಯು ಮೆದುಳಿನ ಬೆಳವಣಿಗೆ ಮತ್ತು ಪೋಷಣೆಗೆ ಅತ್ಯಂತ ನಿರ್ಣಾಯಕವಾಗಿದ್ದು, ಈ ಅವಧಿಯಲ್ಲಿ ನಿರಂತರ ನಿಗಾ ವಹಿಸುವುದು ಯೋಜನೆಯ ಮೂಲ ಉದ್ದೇಶವಾಗಿದೆ.

➤ **ಅಪಾಯದ ಮುನ್ಸೂಚನೆ ಇರುವ ಮಕ್ಕಳಿಗೆ (At-Risk Children) ವಿಶೇಷ ಆದ್ಯತೆ:** ಕಡಿಮೆ ತೂಕದೊಂದಿಗೆ ಜನಿಸಿದ ಶಿಶುಗಳು, ಅವಧಿಗೆ ಮುನ್ನ ಜನಿಸಿದ ಮಕ್ಕಳು (Premature), ಅಪೌಷ್ಟಿಕತೆ ಎದುರಿಸುತ್ತಿರುವ ಮತ್ತು ಬೆಳವಣಿಗೆಯಲ್ಲಿ ವಿಳಂಬ ಕಾಣಿಸುವ ಮಕ್ಕಳಿಗೆ ಈ ಯೋಜನೆಯಡಿ ವಿಶೇಷ ನಿಗಾ ವಹಿಸಲಾಗುತ್ತದೆ.

➤ ಸಮಗ್ರ ಶಿಶು ಬಾಲ ಸ್ವಾಸ್ಥ್ಯ ಕಾರ್ಯಕ್ರಮವು ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರ ಮೂಲಕ ನವಜಾತ ಶಿಶುಗಳ ಮೊದಲ 36 ತಿಂಗಳ ದೈಹಿಕ-ಮಾನಸಿಕ ಬೆಳವಣಿಗೆಯನ್ನು ನಿರಂತರ ಮನೆ ಭೇಟಿ, ಶಿಶು ಶಿಬಿರಗಳು ಮತ್ತು ತಾಯಿಯ ಮಾನಸಿಕ ಆರೋಗ್ಯ ತಪಾಸಣೆಯ ಮೂಲಕ ಸಮಗ್ರವಾಗಿ ಮೇಲ್ವಿಚಾರಣೆ ಮಾಡುವ ಯೋಜನೆಯಾಗಿದೆ.

➤ SSBSK ಯೋಜನೆಯಡಿ ಮಕ್ಕಳನ್ನು ಡಿಜಿಟಲ್ ರೂಪದಲ್ಲಿ ಟ್ರ್ಯಾಕ್ ಮಾಡಲು ನಿರ್ಧಾರ-ಬೆಂಬಲ ವ್ಯವಸ್ಥೆ (Decision-Support Systems) ಮತ್ತು ಅಲರ್ಟ್ ಮೆಕ್ಯಾನಿಸಂಗಳನ್ನು ಬಳಸಲಾಗುತ್ತದೆ. ಇದನ್ನು ಸರ್ಕಾರದ ಪ್ರಮುಖ ಪೋರ್ಟಲ್‌ಗಳಾದ ಜನನಿ ಪೋರ್ಟಲ್, U-WIN ಪೋರ್ಟಲ್, ಪೋಷಣ್ ಟ್ರ್ಯಾಕರ್ (POSHAN Tracker) ಮತ್ತು Baal-ABHA ID ಗಳೊಂದಿಗೆ ಲಿಂಕ್ ಮಾಡಲಾಗುತ್ತದೆ.

➤ ಆಧುನಿಕ ಯುಗದಲ್ಲಿ ಮಕ್ಕಳು ಅತಿಯಾಗಿ ಮೊಬೈಲ್/ಟಿವಿ ಸ್ಕ್ರೀನ್ ನೋಡುವುದರಿಂದ (Screen Time) ಅವರ ಮೆದುಳಿನ ಬೆಳವಣಿಗೆಯ ಮೇಲಾಗುವ ದುಷ್ಪರಿಣಾಮಗಳ ಬಗ್ಗೆ ಪೋಷಕರಲ್ಲಿ ಜಾಗೃತಿ ಮೂಡಿಸುವುದು ಕೂಡ ಈ ಯೋಜನೆಯ ಮಾರ್ಗಸೂಚಿಯಲ್ಲಿದೆ.

## ಭಾರತೀಯ ಸೇನೆಯ ನೂತನ ಉಪಮುಖ್ಯಸ್ಥರಾಗಿ ಲೆಫ್ಟಿನೆಂಟ್ ಜನರಲ್ ಸಂದೀಪ್ ಜೈನ್ ನೇಮಕ



➤ ದೇಶದ ರಕ್ಷಣಾ ಪಡೆಯಲ್ಲಿ ಪ್ರಮುಖ ನಾಯಕತ್ವ ಬದಲಾವಣೆಯಾಗಿದ್ದು, ಲೆಫ್ಟಿನೆಂಟ್ ಜನರಲ್ ಸಂದೀಪ್ ಜೈನ್ (Lt Gen Sandeep Jain) ಅವರು ಜುಲೈ 1, 2026 ರಿಂದ ಭಾರತೀಯ ಸೇನೆಯ (Indian Army) ನೂತನ ಉಪಮುಖ್ಯಸ್ಥರಾಗಿ (Vice Chief of the Army Staff - VCOAS) ಅಧಿಕಾರ ವಹಿಸಿಕೊಳ್ಳಲಿದ್ದಾರೆ.ಪ್ರಸ್ತುತ ರಕ್ಷಣಾ ಪಡೆಯಲ್ಲಿ ನಡೆದಿರುವ ಮಹತ್ತರ ಪುನರ್ರಚನೆಯ ಭಾಗವಾಗಿ ಈ ನೇಮಕಾತಿ ನಡೆದಿದೆ. ಇವರೊಂದಿಗೆ ಭಾರತೀಯ ವಾಯುಪಡೆಯ ನೂತನ ಉಪಮುಖ್ಯಸ್ಥರಾಗಿ (VCAS) ಏರ್ ಮಾರ್ಷಲ್ ಅಶುತೋಷ್ ದೀಕ್ಷಿತ್ ಅವರು ಸಹ ಜುಲೈ 1 ರಿಂದ ಅಧಿಕಾರ ಸ್ವೀಕರಿಸುತ್ತಿದ್ದಾರೆ.

➤ **ಲೆಫ್ಟಿನೆಂಟ್ ಜನರಲ್ ಸಂದೀಪ್ ಜೈನ್:** ಇವರು ಭಾರತೀಯ ಸೇನೆಯಲ್ಲಿ 38 ವರ್ಷಗಳಿಗೂ ಹೆಚ್ಚು ಕಾಲ ಸುದೀರ್ಘ ಹಾಗೂ ಯಶಸ್ವಿ ಸೇವೆ ಸಲ್ಲಿಸಿದ್ದಾರೆಇವರು ಜೂನ್ 11, 1988 ರಂದು ಭಾರತೀಯ ಸೇನೆಯ ಪ್ರತಿಷ್ಠಿತ '13 ಮಹಾರ್ ರೆಜಿಮೆಂಟ್' (13 Mahar Regiment) ಗೆ ಅಧಿಕಾರಿಯಾಗಿ ನಿಯೋಜನೆಗೊಂಡಿದ್ದರು. ಪ್ರಸ್ತುತ ಅವರು 'ಮಹಾರ್ ರೆಜಿಮೆಂಟ್'ನ ಕರ್ನಲ್ ಆಗಿಯೂ ಮುಂದುವರಿದಿದ್ದಾರೆ. ಜಮ್ಮು ಮತ್ತು ಕಾಶ್ಮೀರದ ಅತ್ಯಂತ ಸೂಕ್ಷ್ಮ ಹಾಗೂ ಆಯಕಟ್ಟಿನ ಪ್ರದೇಶವಾದ XVI ಕಾರ್ಪ್ಸ್ (White Knight Corps) ನ ಕಮಾಂಡರ್ ಆಗಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಇದರೊಂದಿಗೆ ಡೆಹ್ರಾಡೂನ್‌ನ ಭಾರತೀಯ ಮಿಲಿಟರಿ ಅಕಾಡೆಮಿ (IMA) ಮುಖ್ಯಸ್ಥರಾಗಿಯೂ ಸೇವೆ ಸಲ್ಲಿಸಿದ್ದಾರೆ.

➤ ಅಂತರರಾಷ್ಟ್ರೀಯ ಅನುಭವ: ವಿಶ್ವಸಂಸ್ಥೆಯ (UN) ಶಾಂತಿಪಾಲನಾ ಪಡೆಯ ಭಾಗವಾಗಿ ಸುಡಾನ್ ದೇಶದಲ್ಲಿ ಸೆಕ್ಟರ್ ಕಮಾಂಡರ್ ಆಗಿ ಮತ್ತು ಇಥಿಯೋಪಿಯಾದಲ್ಲಿ ಮಿಲಿಟರಿ ವೀಕ್ಷಕರಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತವನ್ನು ಪ್ರತಿನಿಧಿಸಿದ್ದಾರೆ.

➤ ಗೌರವ ಮತ್ತು ಪದಕಗಳು: ಇವರ ಅತ್ಯುತ್ತಮ ದೇಶಸೇವೆಯನ್ನು ಪರಿಗಣಿಸಿ ಕೇಂದ್ರ ಸರ್ಕಾರವು ಇವರಿಗೆ ಅತಿ ವಿಶಿಷ್ಟ ಸೇವಾ ಪದಕ (AVSM) ಮತ್ತು ಸೇನಾ ಪದಕ (SM) ನೀಡಿ ಗೌರವಿಸಿದೆ.

## ಭಾರತದ ಮೊದಲ ಆಫ್‌ಶೋರ್ (Offshore) ವಿಮಾನ ನಿಲ್ದಾಣಕ್ಕೆ ಮಹಾರಾಷ್ಟ್ರದಲ್ಲಿ ಗ್ರೀನ್ ಸಿಗ್ನಲ್!




➤ ಭಾರತದ ಮೊಟ್ಟಮೊದಲ ಆಫ್‌ಶೋರ್ ವಿಮಾನ ನಿಲ್ದಾಣ (Offshore Airport) ಯೋಜನೆಗೆ ಮಹಾರಾಷ್ಟ್ರ ಸರ್ಕಾರವು ಚಾಲನೆ ನೀಡಿದ್ದು, ವಿಸ್ತೃತ ಯೋಜನಾ ವರದಿ (DPR) ಸಿದ್ಧಪಡಿಸಲು ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್ ಆದೇಶಿಸಿದ್ದಾರೆ. ಮುಂಬೈನ ಜನದಟ್ಟಣೆ ಮತ್ತು ಭೂಮಿಯ ಕೊರತೆಗೆ ಪರ್ಯಾಯವಾಗಿ ಜಪಾನ್ ಹಾಗೂ ಹಾಂಗ್ ಕಾಂಗ್ ಮಾದರಿಯಲ್ಲಿ ಸಮುದ್ರದ ಮೇಲೆಯೇ ಈ ಬೃಹತ್ ವಿಮಾನ ನಿಲ್ದಾಣವನ್ನು ನಿರ್ಮಿಸಲು ಯೋಜನೆ ರೂಪಿಸಲಾಗಿದೆ.

**➤ ಪ್ರಮುಖ ಮುಖ್ಯಾಂಶಗಳು:**

ಯೋಜನೆಯ ಹೆಸರು: ಭಾರತದ ಮೊದಲ ಆಫ್‌ಶೋರ್ ವಿಮಾನ ನಿಲ್ದಾಣ (India's First Offshore Airport)

ಪ್ರಸ್ತಾವಿತ ಸ್ಥಳ: ಮಹಾರಾಷ್ಟ್ರದ ಪಾಲ್ಘರ್ (Palghar) ಜಿಲ್ಲೆಯ ಕೋರೆ ಬೀಚ್ (Kore Beach) ಹತ್ತಿರ.

ಉಸ್ತುವಾರಿ ಸಂಸ್ಥೆ: ಮಹಾರಾಷ್ಟ್ರ ವಿಮಾನ ನಿಲ್ದಾಣ ಅಭಿವೃದ್ಧಿ ಕಂಪನಿ (MADC)

ಅಂದಾಜು ವೆಚ್ಚ: ಸುಮಾರು ₹45,000 ಕೋಟಿಯಿಂದ ₹76,220 ಕೋಟಿ ರೂ.

ಸಾಮರ್ಥ್ಯ: ವಾರ್ಷಿಕವಾಗಿ 90 ಮಿಲಿಯನ್ (9 ಕೋಟಿ) ಪ್ರಯಾಣಿಕರು ಮತ್ತು 3 ಮಿಲಿಯನ್ ಮೆಟ್ರಿಕ್ ಟನ್ ಸರಕು ಸಾಗಣೆ ಸಾಮರ್ಥ್ಯ.

**➤ ಆಫ್‌ಶೋರ್ ವಿಮಾನ ನಿಲ್ದಾಣ:** ಸಾಮಾನ್ಯವಾಗಿ ವಿಮಾನ ನಿಲ್ದಾಣಗಳನ್ನು ಭೂಮಿಯ ಮೇಲೆ ನಿರ್ಮಿಸಲಾಗುತ್ತದೆ. ಆದರೆ ಆಫ್‌ಶೋರ್ ವಿಮಾನ ನಿಲ್ದಾಣವನ್ನು ಸಮುದ್ರದ ದಂಡೆಯ ಹತ್ತಿರ ಕೃತಕ ದ್ವೀಪಗಳನ್ನು (Artificial Islands) ನಿರ್ಮಿಸುವ ಮೂಲಕ ಅಥವಾ ತೇಲುವ ಬೃಹತ್ ಮೂಲಸೌಕರ್ಯಗಳ (Floating Structures) ಮೇಲೆ ಸಂಪೂರ್ಣವಾಗಿ ಸಮುದ್ರದ ಮೇಲೆಯೇ ನಿರ್ಮಿಸಲಾಗುತ್ತದೆ. ಜಪಾನ್‌ನ ಕನ್ಸಾಯ್ (Kansai) ಮತ್ತು ಹಾಂಗ್‌ಕಾಂಗ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳು ಈ ತಂತ್ರಜ್ಞಾನಕ್ಕೆ ಜಾಗತಿಕ ಉದಾಹರಣೆಗಳಾಗಿವೆ.

**➤ ಮಲ್ಟಿ-ಮೋಡಲ್ ಕನೆಕ್ಟಿವಿಟಿ ನೆಟ್‌ವರ್ಕ್:**

ಉತ್ತನ್-ವಿರಾರ್ ಸೀ ಲಿಂಕ್ (Sea Link): ಪ್ರಸ್ತಾವಿತ ನಿಲ್ದಾಣವು ಈ ಸೀ ಲಿಂಕ್‌ನಿಂದ ಕೇವಲ 4.75 ಕಿಮೀ ದೂರದಲ್ಲಿದ್ದು, ಇದನ್ನು ವಿಸ್ತರಿಸುವುದರಿಂದ ಮುಂಬೈ ನಗರಕ್ಕೆ ನೇರ ಸಂಪರ್ಕ ಸಿಗುತ್ತದೆ.

ಬುಲೆಟ್ ಟ್ರೈನ್: ಮುಂಬೈ-ಅಹಮದಾಬಾದ್ ಬುಲೆಟ್ ಟ್ರೈನ್ ನಿಲ್ದಾಣವು ಇದಕ್ಕೆ ಅತ್ಯಂತ ಸಮೀಪದಲ್ಲಿ ಬರಲಿದೆ.

ಸರಕು ಸಾಗಣೆ ಕಾರಿಡಾರ್ (DFC): ಡೆಡಿಕೇಟೆಡ್ ಫ್ರೈಟ್ ಕಾರಿಡಾರ್ ಮತ್ತು ಮುಂಬೈ-ಬರೋಡಾ ಎಕ್ಸ್‌ಪ್ರೆಸ್‌ವೇಗೆ ಇದನ್ನು ಲಿಂಕ್ ಮಾಡಲಾಗುತ್ತದೆ.

ವಾಧ್ವನ್ ಬಂದರು (Vadhvan Port): ಪ್ರಸ್ತುತ ದೇಶದಲ್ಲೇ ಅತಿ ದೊಡ್ಡದಾಗಿ ನಿರ್ಮಾಣವಾಗುತ್ತಿರುವ ವಾಧ್ವನ್ ಆಳ ಸಮುದ್ರದ ಬಂದರಿನ (Deep Sea Port) ಭಾಗವಾಗಿಯೇ ಈ ವಿಮಾನ ನಿಲ್ದಾಣವನ್ನು ಅಭಿವೃದ್ಧಿಪಡಿಸಲಾಗುತ್ತಿದೆ.

## ಜುಲೈ 2026 ರಿಂದ ಜಾರಿಗೆ ಬಂದಿರುವ ಪ್ರಮುಖ ಆರ್ಥಿಕ ನಿಯಮಗಳ ಬದಲಾವಣೆಗಳು




➤ ಪ್ರತಿ ತಿಂಗಳ ಆರಂಭದಲ್ಲಿ ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಹಲವು ಪ್ರಮುಖ ಬದಲಾವಣೆಗಳಾಗುತ್ತವೆ. ಅದೇ ರೀತಿ, ಜುಲೈ 1, 2026 ರಿಂದ ಭಾರತೀಯ ಬ್ಯಾಂಕಿಂಗ್, ತೆರಿಗೆ ಮತ್ತು ನಾಗರಿಕ ಸೇವೆಗಳಲ್ಲಿ 6 ಅತ್ಯಂತ ಪ್ರಮುಖ ಬದಲಾವಣೆಗಳು ಜಾರಿಗೆ ಬಂದಿವೆ.

➤ ಐಟಿಆರ್ (ITR-1, ITR-2) ಸಲ್ಲಿಕೆಗೆ ಕೊನೆಯ ದಿನಾಂಕ ಉಲ್ಲಂಘಿಸಿದರೆ ದಂಡ: ಆದಾಯ ತೆರಿಗೆ ಪಾವತಿದಾರರಿಗೆ ಜುಲೈ ತಿಂಗಳು ಅತ್ಯಂತ ನಿರ್ಣಾಯಕವಾಗಿದೆ. ಆರ್ಥಿಕ ವರ್ಷ 2025-26ರ (ಮೌಲ್ಯಮಾಪನ ವರ್ಷ 2026-27) ಐಟಿಆರ್-1 ಮತ್ತು ಐಟಿಆರ್-2 ಫಾರ್ಮ್‌ಗಳನ್ನು ಸಲ್ಲಿಸಲು ಜುಲೈ 31, 2026 ಕಡೆಯ ದಿನಾಂಕವಾಗಿದೆ.

ಪರಿಣಾಮ: ಈ ಗಡುವನ್ನು ತಪ್ಪಿಸಿಕೊಂಡರೆ ತೆರಿಗೆದಾರರು ಭಾರಿ ದಂಡ ತೆರಬೇಕಾಗುತ್ತದೆ. ಅಷ್ಟೇ ಅಲ್ಲದೆ, ಹೊಸ ತೆರಿಗೆ ಪದ್ಧತಿಯನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶ ಕೈತಪ್ಪಬಹುದು ಮತ್ತು ಮುಂದಿನ ವರ್ಷಗಳಿಗೆ ನಷ್ಟವನ್ನು ಕ್ಯಾರಿ ಫಾರ್ವರ್ಡ್ (Carry Forward) ಮಾಡಲು ಮಿತಿಗಳು ಎದುರಾಗುತ್ತವೆ.

➤ ಆಧಾರ್ ಕಾರ್ಡ್ ಇ-ಮೇಲ್ ಉಚಿತ ಅಪ್‌ಡೇಟ್: ಭಾರತೀಯ ವಿಶಿಷ್ಟ ಗುರುತಿನ ಪ್ರಾಧಿಕಾರ (UIDAI) ಆಧಾರ್ ಬಳಕೆದಾರರಿಗೆ ಭರ್ಜರಿ ಕೊಡುಗೆ ನೀಡಿದೆ. ಜುಲೈ 1 ರಿಂದ ಜಾರಿಗೆ ಬರುವಂತೆ ಆಧಾರ್ ಕಾರ್ಡ್‌ನಲ್ಲಿ ನೋಂದಾಯಿತ ಇ-ಮೇಲ್ ವಿಳಾಸವನ್ನು ನವೀಕರಿಸಲು ಇದ್ದ 75 ರೂ.ಗಳ ಶುಲ್ಕವನ್ನು ತಾತ್ಕಾಲಿಕವಾಗಿ ಮನ್ನಾ ಮಾಡಲಾಗಿದೆ.

ಅವಧಿ: ಈ ಉಚಿತ ಸೇವೆಯು ಮುಂದಿನ 6 ತಿಂಗಳವರೆಗೆ (ಅಂದರೆ ಡಿಸೆಂಬರ್ 31, 2026 ರವರೆಗೆ) ಲಭ್ಯವಿರಲಿದೆ. ಆಧಾರ್ ಮೊಬೈಲ್ ಆಪ್ ಮೂಲಕ ಸಾರ್ವಜನಿಕರು ಇದರ ಪ್ರಯೋಜನ ಪಡೆಯಬಹುದು.

➤ ಪಾಸ್‌ಪೋರ್ಟ್ ಶುಲ್ಕದಲ್ಲಿ ಭಾರಿ ಏರಿಕೆ: ವಿದೇಶ ಪ್ರವಾಸ ಕೈಗೊಳ್ಳುವವರಿಗೆ ಅಥವಾ ಹೊಸದಾಗಿ ಪಾಸ್‌ಪೋರ್ಟ್ ಪಡೆಯಲು ಇಚ್ಛಿಸುವವರಿಗೆ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಶಾಕ್ ನೀಡಿದೆ.

ಜುಲೈ 1, 2026 ರಿಂದ ಅನ್ವಯವಾಗುವಂತೆ ಸಾಮಾನ್ಯ (Normal) ಮತ್ತು ತತ್ಕಾಲ್ (Tatkal) ಪಾಸ್‌ಪೋರ್ಟ್ ಸೇವೆಗಳ ಶುಲ್ಕವನ್ನು ಹೆಚ್ಚಿಸಲಾಗಿದೆ. ಭಾರತ ಮತ್ತು ವಿದೇಶಗಳೆರಡರಲ್ಲೂ ಈ ಹೊಸ ದರಗಳು ಅನ್ವಯವಾಗಲಿವೆ.

➤ ಮಿಸ್-ಸೆಲ್ಲಿಂಗ್ (Mis-selling) ವಿರುದ್ಧ ಆರ್‌ಬಿಐ ಕಠಿಣ ನಿಯಮ: ಬ್ಯಾಂಕಿಂಗ್ ಗ್ರಾಹಕರ ಹಿತರಕ್ಷಣೆಗಾಗಿ ಭಾರತೀಯ ರಿಸರ್ವ್ ಬ್ಯಾಂಕ್ (RBI) ಐತಿಹಾಸಿಕ ಹೆಜ್ಜೆ ಇಟ್ಟಿದೆ. ಬ್ಯಾಂಕುಗಳು ಗ್ರಾಹಕರನ್ನು ದಿಕ್ಕು ತಪ್ಪಿಸಿ ಹಣಕಾಸು ಉತ್ಪನ್ನಗಳನ್ನು ಮಾರಾಟ ಮಾಡುವುದನ್ನು (Mis-selling) ತಡೆಯಲು ಹೊಸ ನಿಯಮ ಜಾರಿಗೆ ತಂದಿದೆ.

ಗ್ರಾಹಕರಿಗೆ ಲಾಭ: ಜುಲೈ 1 ರಿಂದ ಯಾವುದೇ ಬ್ಯಾಂಕ್ ಗ್ರಾಹಕರಿಗೆ ತಪ್ಪು ಮಾಹಿತಿ ನೀಡಿ ಪಾಲಿಸಿ ಅಥವಾ ಇತರ ಉತ್ಪನ್ನಗಳನ್ನು ಮಾರಾಟ ಮಾಡಿದರೆ, ಗ್ರಾಹಕರು ಸಂಪೂರ್ಣ ಹಣದ ಮರುಪಾವತಿ (Full Refund) ಪಡೆಯಲು ಅರ್ಹರಾಗಿರುತ್ತಾರೆ. ಜೊತೆಗೆ ಉಂಟಾದ ನಷ್ಟಕ್ಕೆ ಬ್ಯಾಂಕಿನಿಂದ ಸೂಕ್ತ ಪರಿಹಾರವನ್ನೂ ಪಡೆಯಬಹುದು.

➤ ಎಚ್‌ಡಿಎಫ್‌ಸಿ ಕ್ರೆಡಿಟ್ ಕಾರ್ಡ್ ಲೌಂಜ್ ಪ್ರವೇಶದ ನಿಯಮ ಬದಲಾವಣೆ: ಎಚ್‌ಡಿಎಫ್‌ಸಿ ಬ್ಯಾಂಕ್ ತನ್ನ ಕ್ರೆಡಿಟ್ ಕಾರ್ಡ್

ಬಳಕೆದಾರರಿಗೆ ವಿಮಾನ ನಿಲ್ದಾಣದ ಲೌಂಜ್ ಪ್ರವೇಶಕ್ಕೆ (Airport Lounge Access) ವೆಚ್ಚ ಆಧಾರಿತ ಮಿತಿಯನ್ನು ಹೇರಿದೆ.
ಹೊಸ ನಿಯಮ: ಗ್ರಾಹಕರು ಪ್ರತಿ ತ್ರೈಮಾಸಿಕದಲ್ಲಿ (Quarter) 3 ಉಚಿತ ದೇಶೀಯ ಲೌಂಜ್ ಭೇಟಿಗಳನ್ನು ಪಡೆಯಬೇಕಾದರೆ, ಅದರ ಹಿಂದಿನ ತ್ರೈಮಾಸಿಕದಲ್ಲಿ ಕನಿಷ್ಠ 60,000 ರೂ.ಗಳನ್ನು ಕ್ರೆಡಿಟ್ ಕಾರ್ಡ್ ಮೂಲಕ ಖರ್ಚು ಮಾಡಿರಬೇಕಾಗುತ್ತದೆ. (ಉದಾಹರಣೆಗೆ: ಜುಲೈ-ಸೆಪ್ಟೆಂಬರ್ 2026 ರ ಅವಧಿಯಲ್ಲಿ ಲೌಂಜ್ ಬಳಸಲು, ಏಪ್ರಿಲ್-ಜೂನ್ ಅವಧಿಯಲ್ಲಿ 60,000 ರೂ. ವೆಚ್ಚ ಮಾಡಿರಬೇಕು).
➤ ಎಸ್‌ಬಿಐ ಕ್ರೆಡಿಟ್ ಕಾರ್ಡ್ ರಿವಾರ್ಡ್ ಪಾಯಿಂಟ್ಸ್ ಪರಿಷ್ಕರಣೆ: ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ 'SBI Card' ಸಂಸ್ಥೆಯು ಆಯ್ದ ಫೋನ್‌ಪೇ ಎಸ್‌ಬಿಐ ಕ್ರೆಡಿಟ್ ಕಾರ್ಡ್‌ಗಳ (PhonePe SBI Credit Card PURPLE ಮತ್ತು SELECT BLACK) ರಿವಾರ್ಡ್ ಪಾಯಿಂಟ್ ನಿಯಮಗಳನ್ನು ಬದಲಾಯಿಸಿದೆ.
ಜುಲೈ 1 ರಿಂದ ಜಾರಿಗೆ ಬರುವಂತೆ ರಿವಾರ್ಡ್ ಪಾಯಿಂಟ್ಸ್ ಗಳಿಸುವಿಕೆಯ ಮೇಲೆ ಗರಿಷ್ಠ ಮಿತಿಯನ್ನು ವಿಧಿಸಲಾಗಿದೆ. ಅಲ್ಲದೆ ಕೆಲವು ನಿರ್ದಿಷ್ಟ ವಹಿವಾಟುಗಳಿಗೆ ರಿವಾರ್ಡ್ ಪಾಯಿಂಟ್ಸ್ ನೀಡುವುದನ್ನು ಸ್ಥಗಿತಗೊಳಿಸಲಾಗಿದೆ.

## ಎಚ್‌ಡಿಎಫ್‌ಸಿ ಬ್ಯಾಂಕ್ ಅಧ್ಯಕ್ಷರಾಗಿ ರಾಜೀವ್ ಕುಮಾರ್ ನೇಮಕ



➤ ಎಚ್‌ಡಿಎಫ್‌ಸಿ ಬ್ಯಾಂಕ್‌ನ ಆಡಳಿತ ಮಂಡಳಿಯು ಜೂನ್ 29, 2026 ರಂದು ನಡೆದ ಸಭೆಯಲ್ಲಿ ರಾಜೀವ್ ಕುಮಾರ್ ಅವರನ್ನು ಬ್ಯಾಂಕಿನ ಹೆಚ್ಚುವರಿ ನಿರ್ದೇಶಕರನ್ನಾಗಿ (ಸ್ವತಂತ್ರ ನಿರ್ದೇಶಕ) 4 ವರ್ಷಗಳ ಅವಧಿಗೆ (ಜೂನ್ 30, 2026 ರಿಂದ ಜಾರಿಗೆ ಬರುವಂತೆ) ನೇಮಕ ಮಾಡಿದೆ.ಇದರೊಂದಿಗೆ, ಭಾರತೀಯ ರಿಸರ್ವ್ ಬ್ಯಾಂಕ್ (RBI) ಅನುಮೋದನೆಗೆ ಒಳಪಟ್ಟು, ಅವರನ್ನು 3 ವರ್ಷಗಳ ಅವಧಿಗೆ ಬ್ಯಾಂಕಿನ ಪಾರ್ಟ್-ಟೈಮ್ ಅಧ್ಯಕ್ಷರನ್ನಾಗಿ (Part-time Chairman) ನೇಮಿಸಲು ಒಪ್ಪಿಗೆ ನೀಡಲಾಗಿದೆ. ಇವರು ಈ ಹಿಂದೆ ನೈತಿಕ ಕಾರಣಗಳನ್ನು ನೀಡಿ ಹಠಾತ್ ರಾಜೀನಾಮೆ ನೀಡಿದ್ದ ಅತನು ಚಕ್ರವರ್ತಿ ಅವರ ಸ್ಥಾನಕ್ಕೆ ಬರಲಿದ್ದಾರೆ (ಮಧ್ಯಂತರ ಅವಧಿಗೆ ಕೇಕಿ ಮಿಸ್ತ್ರಿ ಈ ಜವಾಬ್ದಾರಿ ನಿಭಾಯಿಸಿದ್ದರು).
**➤ ರಾಜೀವ್ ಕುಮಾರ್:**
ಐಎಎಸ್ ಅಧಿಕಾರಿ: ರಾಜೀವ್ ಕುಮಾರ್ ಅವರು 1984ರ ಬ್ಯಾಚ್‌ನ ಜಾರ್ಖಂಡ್ ಕೆಡರ್‌ನ ನಿವೃತ್ತ ಐಎಎಸ್ (IAS) ಅಧಿಕಾರಿಯಾಗಿದ್ದಾರೆ.
ಕೇಂದ್ರ ಹಣಕಾಸು ಕಾರ್ಯದರ್ಶಿ: ಇವರು ಫೆಬ್ರವರಿ 2020 ರಲ್ಲಿ ಭಾರತ ಸರ್ಕಾರದ ಹಣಕಾಸು ಕಾರ್ಯದರ್ಶಿಯಾಗಿ (Finance Secretary) ನಿವೃತ್ತರಾದರು.
ಮುಖ್ಯ ಚುನಾವಣಾ ಆಯುಕ್ತರು (CEC): ಇವರು ಭಾರತದ 25ನೇ ಮುಖ್ಯ ಚುನಾವಣಾ ಆಯುಕ್ತರಾಗಿ ಸೇವೆ ಸಲ್ಲಿಸಿದ್ದಾರೆ. ಇವರ ನಾಯಕತ್ವದಲ್ಲೇ ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ ಚುನಾವಣೆಯಾದ 2024ರ ಲೋಕಸಭಾ ಚುನಾವಣೆ ಯಶಸ್ವಿಯಾಗಿ ನಡೆದಿತ್ತು.
ಇತರ ಪ್ರಮುಖ ಹುದ್ದೆಗಳು: ಸಾರ್ವಜನಿಕ ಉದ್ಯಮಗಳ ಆಯ್ಕೆ ಮಂಡಳಿ (PESB) ಅಧ್ಯಕ್ಷರಾಗಿ, ಆರ್‌ಬಿಐ (RBI) ಕೇಂದ್ರೀಯ ಮಂಡಳಿ, ಎಸ್‌ಬಿಐ (SBI) ಮತ್ತು ನಬಾರ್ಡ್ (NABARD) ಮಂಡಳಿಗಳ ಸದಸ್ಯರಾಗಿಯೂ ಇವರು ಕಾರ್ಯನಿರ್ವಹಿಸಿದ್ದಾರೆ.
➤ ಬ್ಯಾಂಕಿಂಗ್ ಸುಧಾರಣೆಯಲ್ಲಿ ಇವರ ಕೊಡುಗೆ:
ಬ್ಯಾಂಕುಗಳ ವಿಲೀನ: ದೇಶದ 27 ಸಾರ್ವಜನಿಕ ವಲಯದ ಬ್ಯಾಂಕುಗಳನ್ನು (PSBs) 10 ದೊಡ್ಡ ಬ್ಯಾಂಕುಗಳಾಗಿ ಕ್ರೋಢೀಕರಿಸುವಲ್ಲಿ ಇವರು ಪ್ರಮುಖ ಪಾತ್ರ ವಹಿಸಿದ್ದರು.
4R ತಂತ್ರ (4R Strategy): ಸಾರ್ವಜನಿಕ ವಲಯದ ಬ್ಯಾಂಕುಗಳ ವಸೂಲಾಗದ ಸಾಲಗಳನ್ನು (NPAs) ನಿಯಂತ್ರಿಸಲು Recognition (ಗುರುತಿಸುವಿಕೆ), Resolution (ಪರಿಹಾರ), Recapitalisation (ಮರು ಬಂಡವಾಳೀಕರಣ) ಮತ್ತು Reforms (ಸುಧಾರಣೆಗಳು) ಎಂಬ 4R ತಂತ್ರವನ್ನು ಜಾರಿಗೆ ತಂದಿದ್ದರು.
ಕಪ್ಪು ಹಣದ ವಿರುದ್ಧ ಕ್ರಮ: ಇವರು ಅಧಿಕಾರ ವಹಿಸಿಕೊಂಡ ಕೆಲವೇ ದಿನಗಳಲ್ಲಿ ಸುಮಾರು 3.38 ಲಕ್ಷ ಶೆಲ್ ಕಂಪನಿಗಳ (Shell Companies) ಬ್ಯಾಂಕ್ ಖಾತೆಗಳನ್ನು ಫ್ರೀಜ್ ಮಾಡಲಾಗಿತ್ತು.

## ISRO ಸಾಧನೆ: 175-ಟನ್ ಸೆಮಿ-ಕ್ರಯೋಜೆನಿಕ್ ಇಂಜಿನ್ ಹಾಟ್ ಟೆಸ್ಟ್ ಯಶಸ್ವಿ! ಭಾರತದ ಭವಿಷ್ಯದ ಬಾಹ್ಯಾಕಾಶ ಮಿಷನ್‌ಗಳಿಗೆ ಬಲ




➤ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ISRO) ಜೂನ್ 24, 2026 ರಂದು ತನ್ನ ಅತ್ಯಂತ ಶಕ್ತಿಶಾಲಿ ಮತ್ತು ತಾಂತ್ರಿಕವಾಗಿ ಮುಂದುವರಿದ ಸೆಮಿ-ಕ್ರಯೋಜೆನಿಕ್ ಇಂಜಿನ್ ಪವರ್ ಹೆಡ್ ಟೆಸ್ಟ್ ಆರ್ಟಿಕಲ್ (PHTA) ಅನ್ನು ತಮಿಳುನಾಡಿನ ಮಹೇಂದ್ರಗಿರಿಯಲ್ಲಿರುವ ಇಸ್ರೋ ಪ್ರೊಪಲ್ಶನ್ ಕಾಂಪ್ಲೆಕ್ಸ್‌ನಲ್ಲಿ (IPRC) ಯಶಸ್ವಿಯಾಗಿ 'ಹಾಟ್ ಟೆಸ್ಟ್' (ಯಶಸ್ವಿ ಪರೀಕ್ಷಾರ್ಥ ಉಡಾವಣೆ/ಫೈರಿಂಗ್) ನಡೆಸುವ ಮೂಲಕ ಐತಿಹಾಸಿಕ ಮೈಲಿಗಲ್ಲು ಸ್ಥಾಪಿಸಿದೆ.
➤ **ಸೆಮಿ-ಕ್ರಯೋಜೆನಿಕ್ ತಂತ್ರಜ್ಞಾನ:** ಸಾಂಪ್ರದಾಯಿಕ ಕ್ರಯೋಜೆನಿಕ್ ಇಂಜಿನ್‌ಗಳಲ್ಲಿ ಲಿಕ್ವಿಡ್ ಹೈಡ್ರೋಜನ್ (ದ್ರವ ಜಲಜನಕ) ಮತ್ತು ಲಿಕ್ವಿಡ್ ಆಕ್ಸಿಜನ್ (ದ್ರವ ಆಮ್ಲಜನಕ) ಎರಡನ್ನೂ ಅತ್ಯಂತ ಕಡಿಮೆ ಮೈನಸ್ ತಾಪಮಾನದಲ್ಲಿ ಸಂಗ್ರಹಿಸಿ ಇಂಧನವಾಗಿ ಬಳಸಲಾಗುತ್ತದೆ. **ಆದರೆ ಸೆಮಿ-ಕ್ರಯೋಜೆನಿಕ್ (Semi-Cryogenic) ವ್ಯವಸ್ಥೆಯಲ್ಲಿ:**
**ಆಕ್ಸಿಡೈಸರ್:** ಲಿಕ್ವಿಡ್ ಆಕ್ಸಿಜನ್ (LOX - ದ್ರವ ಆಮ್ಲಜನಕ) ಅನ್ನು ತೀವ್ರ ಶೀತಲ ತಾಪಮಾನದಲ್ಲಿ ಬಳಸಲಾಗುತ್ತದೆ.
**ಇಂಧನ (Fuel):** ಅತ್ಯಂತ ಶುದ್ಧೀಕರಿಸಿದ ಸೀಮೆಎಣ್ಣೆಯನ್ನು (Isrosene - ಇಸ್ರೋಸೀನ್) ಸಾಮಾನ್ಯ ತಾಪಮಾನದಲ್ಲೇ ದ್ರವರೂಪದಲ್ಲಿ ಇಂಧನವಾಗಿ ಬಳಸಲಾಗುತ್ತದೆ.
**ಅನುಕೂಲಗಳು:** ಇದು ಪರಿಸರ ಸ್ನೇಹಿ, ವಿಷಕಾರಿಯಲ್ಲದ (Non-toxic) ಮತ್ತು ಅತ್ಯಂತ ಅಗ್ಗದ ಹಾಗೂ ಹೆಚ್ಚು ಶಕ್ತಿಶಾಲಿ ಇಂಧನ ತಂತ್ರಜ್ಞಾನವಾಗಿದೆ.
**➤ ಭಾರತದ ಬಾಹ್ಯಾಕಾಶ ಮಿಷನ್‌ಗಳಿಗೆ ಇದರ ಮಹತ್ವ:**
**LVM3 ರಾಕೆಟ್ ಮೇಲ್ದರ್ಜೆಗೆ:** ಇಸ್ರೋದ ಅತ್ಯಂತ ಭಾರೀ ರಾಕೆಟ್ ಆದ LVM3 (Launch Vehicle Mark-3) ನಲ್ಲಿರುವ ಪ್ರಸ್ತುತ L110 ಲಿಕ್ವಿಡ್ ಕೋರ್ ಹಂತವನ್ನು ಬದಲಾಯಿಸಿ, ಈ ಹೊಸ SC120 ಸೆಮಿ-ಕ್ರಯೋಜೆನಿಕ್ ಹಂತವನ್ನು (SE2000 ಇಂಜಿನ್ ಚಾಲಿತ) ಅಳವಡಿಸಲಾಗುತ್ತದೆ.
ಪೇಲೋಡ್ ಸಾಮರ್ಥ್ಯ ಹೆಚ್ಚಳ:ಈ ಬದಲಾವಣೆಯಿಂದಾಗಿ ರಾಕೆಟ್‌ನ ಉಪಗ್ರಹ ಹೊತ್ತೊಯ್ಯುವ ಒಟ್ಟು ತೂಕದ ಸಾಮರ್ಥ್ಯ (Payload Capacity) ಗಣನೀಯವಾಗಿ ಹೆಚ್ಚಾಗಲಿದೆ.
ಗಗನಯಾನ ಮತ್ತು ಮುಂದಿನ ಮಿಷನ್‌ಗಳು: ಭಾರತದ ಮಹತ್ವಾಕಾಂಕ್ಷೆಯ ಮಾನವಸಹಿತ ಬಾಹ್ಯಾಕಾಶ ಯೋಜನೆ ಗಗನಯಾನ (Gaganyaan) ಮತ್ತು ಭವಿಷ್ಯದ ಹೆವಿ-ಲಿಫ್ಟ್ ರಾಕೆಟ್ ಆದ NGLV (Next Generation Launch Vehicle) ಯೋಜನೆಗಳಿಗೆ ಈ ತಂತ್ರಜ್ಞಾನವು ಬೆನ್ನೆಲುಬಾಗಲಿದೆ.


Practice Karnataka Police Constable Question Papers For Free
ಶೀಘ್ರದಲ್ಲೇ ನಡೆಯಲಿರುವ ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗಳ ತಯಾರಿಗಾಗಿ ಹಳೆಯ ಪ್ರಶ್ನೆ ಪತ್ರಿಕೆಗಳನ್ನು ಉಚಿತವಾಗಿ ಪ್ರಾಕ್ಟೀಸ್ ಮಾಡಿ
KPSC FDA SDA PSI PC PDO ಸೇರಿದಂತೆ ಇನ್ನು ಅನೇಕ ಹುದ್ದೆಗಳ ನೇಮಕಕ್ಕೆ ಉಚಿತವಾಗಿ ಪ್ರಾಕ್ಟೀಸ್ ಮಾಡಿ
www.kpscvaani.com
Click Here
KPSC Vaani


ಭೂಗೋಳ ಚೇತನ: ಸಮಗ್ರ ಭೂಗೋಳಶಾಸ್ತ್ರದ ಕೈಪಿಡಿ
22% Off
ಭೂಗೋಳ ಚೇತನ
• ಕರ್ನಾಟಕದಲ್ಲಿ ನಡೆಯುವ ಎಲ್ಲ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಮಗ್ರ ಮತ್ತು ನಿಖರವಾದ ಭೂಗೋಳದ ಮಾಹಿತಿ ಒದಗಿಸುವ ಅತ್ಯುತ್ತಮ ಪುಸ್ತಕ.
• IAS, KAS, PDO, FDA, SDA, PSI, PC, B.ED, KPSC GROUP-C, PU LECTURER, TET, GPSTR, HSTR ಮುಂತಾದ ಎಲ್ಲ ಪ್ರಮುಖ ಪರೀಕ್ಷೆಗಳಿಗೆ ಇದು ಒಂದು-ನಿಲುಗಡೆ ಪರಿಹಾರ (One-Stop Solution) ಆಗಿದೆ. ಈ ಪುಸ್ತಕವು ಪರೀಕ್ಷೆಯಲ್ಲಿ ಹೆಚ್ಚು ಅಂಕಗಳನ್ನು ಗಳಿಸಲು ಮತ್ತು ನಿಮ್ಮ ಸರಕಾರಿ ಹುದ್ದೆಯ ಕನಸನ್ನು ನನಸು ಮಾಡಲು ಉತ್ತಮ ಆಯ್ಕೆಯಾಗಿದೆ.
• ನಿಮ್ಮ ಯಶಸ್ಸಿಗೆ ಭರವಸೆ: ಕಠಿಣವಾದ ಭೂಗೋಳಶಾಸ್ತ್ರದ ವಿಷಯಗಳನ್ನು ಸುಲಭವಾಗಿ ಅರ್ಥಮಾಡಿಕೊಳ್ಳಲು ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಗರಿಷ್ಠ ಅಂಕ ಗಳಿಸಲು ಈ ಪುಸ್ತಕವು ಅತ್ಯುತ್ತಮ ಸಾಧನವಾಗಿದೆ.
ಭೇಟಿ ನೀಡಿ:
www.kpscvaani.com/books


KPSC Vaani
ಕೇವಲ ₹499
Hi-Tech Library
ಸೌಲಭ್ಯಗಳು:
* Free Wi-Fi
* 24X7 ಸೌಲಭ್ಯ
* ಮಾಸ ಪತ್ರಿಕೆಗಳು
* ದಿನಪತ್ರಿಕೆಗಳು
* ಶುದ್ಧ ಕುಡಿಯುವ ನೀರು
* ಪ್ರತಿ ವಾರ ಉಚಿತ Online Quiz ಕಾರ್ಯಕ್ರಮ
* KPSCVaani App ಉಚಿತ ಚಂದಾದಾರಿಕೆ
* CCTV ಕ್ಯಾಮೆರಾ
CALL NOW
+91 9019773121
2nd floor, Revanasiddeshwar Complex, 17th cross, BEC Hostel Rd, Vidyagiri, BGK
www.kpscvaani.com


KPSC Vaani
Practice 60 KSP PC Question Papers For Free
ಶೀಘ್ರದಲ್ಲೇ ನಡೆಯಲಿರುವ ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗಳ ತಯಾರಿಗಾಗಿ 60 ಹೆಚ್ಚಿಯ ಪ್ರಶ್ನೆಗಳನ್ನು ಉಚಿತವಾಗಿ ಪ್ರಾಕ್ಟೀಸ್ ಮಾಡಿ
KARNATAKA POLICE
ಪರೀಕ್ಷೆಗೆ ಅನುಗುಣವಾಗಿ ಮಾದರಿ ಪ್ರಶ್ನೆಗಳು
ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಪಯುಕ್ತ
ಉಚಿತ ಮತ್ತು ಅತ್ಯುತ್ತಮ ಅಧ್ಯಯನ ಸಾಮಗ್ರಿ
KPSC FDA SDA PSI PC PDO ಸೇರಿದಂತೆ ಇನ್ನು ಅನೇಕ ಹುದ್ದೆಗಳ ನೇಮಕಕ್ಕೆ ಉಚಿತವಾಗಿ ಪ್ರಾಕ್ಟೀಸ್ ಮಾಡಿ
www.kpscvaani.com
ಪ್ರಾಕ್ಟೀಸ್ ಮಾಡಿ.. ತಯಾರಿ ಮಾಡಿ.. ಸರ್ಕಾರಿ ಹುದ್ದೆ ಪಡೆಯಿರಿ..!
www.kpscvaani.com
KPSC Vaani - Your Success, Our Mission